TIGHT BINDING BOOK

UNIVERSAL LIBRARY
OU_200373
UNIVERSAL LIBRARY

OUP—23—4-4-69—5,000.

**OSMANIA UNIVERSITY LIBRARY**

Call No. K83 Accession No. K5551

Author

Title

This book should be returned on or before the date last marked below.

10 DEC 1972

30 JUL 1976

18 OCT 1976

# ಅನಾದಿ-ಅನಂತ

ಬರೆದವರು

ಶ್ರೀರಂಗ

ಶ್ರೀರಂಗ ಸಾರಸ್ವತ ಪ್ರಕಾಶನ
ಬೆಂಗಳೂರು

ಬೆಲೆ ರೂ. 3—0—0

ಮೊದಲ ಮುದ್ರಣ—ಜೂನ್ 1959

Checked 1965

ಈ ಕಾದಂಬರಿಯ ಎಲ್ಲ ಹಕ್ಕುಗಳು
ಶ್ರೀಮತಿ ಶಾರದಾ ಆದ್ಯ ಇವರಿಗೆ ಸೇರಿವೆ

ಪ್ರಕಾಶನ :
**ಶ್ರೀರಂಗ ಸಾರಸ್ವತ**
381, 6ನೇ ಮೆಯಿನ್ ರೋಡ್, ಮಲ್ಲೇಶ್ವರಂ,
ಬೆಂಗಳೂರು

ಬೆಂಗಳೂರು
ದಿ ಮೋದಿ ಪವರ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿಸಲ್ಪಟ್ಟಿತು
1959

## ಮೊದಲ ಭಾಗ

# ಅನಾದಿ

## ೧

" ಸಿನಿಮಾಕ್ಕೆ ಹೋಗೋಣವೆ ? "

" ಉಂ– ? "

" ಸಿನಿಮಾಕ್ಕೆ–ಅಲ್ಲ–ಅಂದರೆ ಎಲ್ಲಿಯಾದರೂ ಹೊರಗೆ ಹೋಗೋ-ಣವೆ ? "

ಉತ್ತರವಿಲ್ಲ.

" ಅಂದರೆ–ಬಯಲಿಗೆ ಅಡ್ಡಾಡಿ ಬಂದರೆ ಅಷ್ಟೆ ಒಂದಿಷ್ಟು–ಅಂದರೆ, ಮನೆಯೊಳಗೆ ಕುಳಿತು ನಿನಗೂ ಬೇಸರ ಬಂದಿದ್ದರೆ–ಅಂತ–"

ಒಳ ಅಂಗೈಯಿಂದ ಮುಚ್ಚಿದ ಆಕಳಿಕೆಯ ಉತ್ತರ ಬಂದಿತು.

" ಅಂದರೆ ಎಲ್ಲಿ ಹೋಗೋದು ಬೇಡ ' ಅಂತೀಯಾ ? ನಿನ್ನ ಸಲುವಾಗಿಯೆ ಕೇಳಿದೆ. ಯಾಕೆಂದರೆ, ನನಗೂ ಹಾಗೆ ನೋಡಿದರೆ ಬರೆಯೋ ಕೆಲಸ ಇದೆ....ಹೋಗೋದಿದ್ದರೆ ಹೇಳು. ನಾನು ರಾತ್ರಿ ಬರೀತೀನಿ....ಹಂ.... ಬ್ಯಾಡ ಅಂತೀಯಾ ?....ಆಯ್ತು, ಸುಮ್ಮನೆ ಕುಳಿತಾದರೂ ಮಾಡೋದೇನು ? ಅಂದರೆ ನಾ ಬರೀತಾ ಕೂಡತೀನಿ....ಏನಾದರೂ ಕೆಲಸಿದ್ದರೆ ಮಾತ್ರ ಬಂದ ಹೇಳು."

ಹೀಗೆನ್ನುತ್ತ ಕೈಯೊಳಗಿನ ದಿನಪತ್ರಿಕೆಯನ್ನು ಬಿಸಾಡಿ, ಬೇಸರದ ಉಸಿರೆಳೆದು ರಾಮಣ್ಣ ಕುರ್ಚಿಯಿಂದ ಎದ್ದ. ಹನ್ನೆರಡು ತಾಸುಗಳ ಹಗಲಿನಲ್ಲಿ ಇದು ನೂರನೆಯದೊ, ಸಾವಿರನೆಯದೊ–ಅಂತೂ ಕೊನೆಯ ಪ್ರಯತ್ನ ರಾಮಣ್ಣನದು, ಕುಮುದಳನ್ನು ಮಾತಾಡಿಸಬೇಕೆಂದು. ಇದೂ ಮೊದಲನೆಯ ದಿನವಲ್ಲ, ಇಂದಿಗೆ ನಾಲ್ಕು ತಿಂಗಳಗಳಾಗಿದ್ದುವು ಈ ಅಸಹಕಾರದ ವಾತಾವರಣಕ್ಕೆ. ಹಾಗೆ ನೋಡಿದರೆ ರಾಮಣ್ಣನಿಗೆ ಇಂತಹ ಅಸಹ್ಯ ವಾತಾವರಣವನ್ನು ತಡೆದುಕೊಳ್ಳುವುದು ಅಗತ್ಯವಿದ್ದಿರಲಿಲ್ಲ. ಕುಮುದಳು

ಸಾಹಿತ್ಯ

ಯಾರು ? ತನಗೂ ಆಕೆಗೂ ಯಾವ ಸಂಬಂಧ ? ತಾನು ಯಾಕೆ ಆಕೆಗಾಗಿ ಮನೆಯಲ್ಲಿ ಮಸಣದ ಭಯಾನಕ ಶಾಂತತೆಯನ್ನು ಸಹಿಸಿಕೊಳ್ಳಬೇಕು ? ಕುಮುದಳದು ಎಂಥದಾದರೂ ಸಂಬಂಧವಿದ್ದರೆ ಅದು ತನ್ನ ಹೆಂಡತಿಯಾದ ಸರಲೆಯೊಡನೆ. ಪಾಪ ! ಸರಲೆಯ ಸ್ವಭಾವ ನಂಬುಗೆಯ ಸ್ವಭಾವ, ಜನರನ್ನು ಹಚ್ಚಿಕೊಳ್ಳುವ ಸ್ವಭಾವ. ಕುಮುದಳು ತನ್ನ ಅಬಚಿಯ ಮಗಳು ಎಂದು ಸರಲೆ ಹೇಳುವುದು , ಯಾವ ದೇಶದಲ್ಲಿದ್ದಳೊ ಆ ಅಬಚಿ ? ಯಾಕೆಂ-ದರೆ, ಅಂದಿನವರೆಗೆ ಸರಲೆಯು ತನಗೊಂದು ಅಬಚಿ–ಎಂಬ ವಸ್ತುವಿದೆ ಎಂಬ ಮಾತನ್ನೆ ಎತ್ತಿರಲಿಲ್ಲ. ಒಮ್ಮೆಲೆ ಒಂದು ದಿನ ಅಣ್ಣನ ಮನೆಯಿಂದ ಬರುವಾಗ ಕುಮುದಳನ್ನು ತಂದಳು, ಅಬಚಿಯ ಮಗಳು ಎಂದು ಆಕೆಯನ್ನು ಮನೆಯಲ್ಲಿಟ್ಟುಕೊಂಡಳು. ಅಬಚಿ ಇದ್ದಾಳೆಯೆ–ಎಂದು ಕೇಳಲು ಕೂಡ ಅವಕಾಶವಿದ್ದಿರಲಿಲ್ಲ. ಯಾಕೆಂದರೆ, ಅಬಚಿ ಸತ್ತಳು ಎಂಬ ನಾಂದಿಯಿಂದಲೆ ಕುಮುದಳ ಪಾತ್ರ' ಪ್ರವೇಶವಾಯಿತು. ಇದೆಲ್ಲ ನಡೆದದ್ದು ಆರು ವರ್ಷಗಳ ಹಿಂದಿನ ಮಾತು. ಆದರೆ ಈಗ ಕುಮುದಳಿಗೆ ಆ ಸಂಬಂಧವೂ ಉಳಿದಿರಲಿಲ್ಲ. ಯಾಕೆಂದರೆ, ಈಗ ಸರಲೆಯೆ ತೀರಿಕೊಂಡು ನಾಲ್ಕು ತಿಂಗಳು ಕಳೆದಿದ್ದುವು. ಆರು ವರ್ಷಗಳ ಸಲುಗೆ–ಸಹವಾಸಗಳೇನೊ ಇವೆ. ಆದರೆ ಈ ಪರಿ ನಡತೆ-ಯನ್ನು ತಡೆದುಕೊಳ್ಳುವುದು ಇನ್ನೆಷ್ಟು ದಿನ ಸಾಧ್ಯ ? ಇನ್ನು ತನಗೆ ಸಾಧ್ಯವಿಲ್ಲ ಎಂಬ ವಿಚಾರವನ್ನು ಬಾಯಿಯಿಂದ ಆಡದ್ದಕ್ಕಾಗಿ ಕೈಯೊಳಗಿನ ದಿನ ಪತ್ರಿಕೆಯನ್ನು ಕುರ್ಚಿಗೆ ಅಪ್ಪಳಿಸಿ ರಾಮಣ್ಣ ಎದ್ದ. " ಏನಾದ್ರೂ ಬೇಕಿದ್ದರೆ ಮಾತ್ರ ಬಂದು ಹೇಳಲಿಕ್ಕೆ ಮರೆಯಬ್ಯಾಡ ಮತ್ತೆ ! " ಎಂದು ಎಚ್ಚರಿಸಿ ರಾಮಣ್ಣ ತನ್ನ ಕೋಣೆಗೆ ನಡೆದ.

## ೨

ರಾಮಣ್ಣನ ಕೋಣೆಯ ಬಾಗಿಲು ಮುಚ್ಚಿದ ಸದ್ದನ್ನು ಕೇಳಿದಾಕ್ಷಣ ಕುಮುದಳಿಗೆ ಬಿಕ್ಕು ತಡೆಯುದಾಯಿತು. ಅವನ ಮನಸ್ಸಿಗೆ ನೋವಾಯಿತಲ್ಲ ? ನೋವನ್ನುಂಟುಮಾಡಬೇಕೆಂದು ತಾನು ಬಯಸಿರಲಿಲ್ಲ. ಉಹುಂ ರಾಮಣ್ಣನಿಗೆ ನೋವನ್ನು ಕೊಡಬೇಕೆಂದು ತಾನು ಬಯಸುವುದು ಈ

ಜನ್ಮದಲ್ಲಿ ಸಾಧ್ಯವಿಲ್ಲ. ಬೇಕಾದರೆ ಅವನಿಗಾಗಿ ತಾನು ಸಾವನ್ನು ಕೂಡ ಅಪ್ಪಿಕೊಳ್ಳಲು ಸಿದ್ಧಳಾಗಿದ್ದಳು. ಆದರೆ ಮಾಡುವುದೇನು ? ಹೃದಯ ಒಂದೆಣಿಸಿದರೆ, ಮನಸ್ಸು ಮತ್ತೊಂದನ್ನೆ ಎಣಿಸುವುದು. ಹೃದಯವು ರಾಮಣ್ಣನ ಸಾಹಚರ್ಯವನ್ನು ಬಯಸಿದರೆ, ಮನಸ್ಸಿಗೆ ಅವನ ನಗೆಮಾತು ಕೂಡ ಅಸಹ್ಯವೆನಿಸುವುದು. ಯಾಕೆ ಹೀಗಾಗಿದೆ ಎಂಬುದು ಕುಮುದಳಿಗೆ ತಿಳಿದಿರಲಿಲ್ಲ. ಹಾಗಾದುದು ಮಾತ್ರ ನಿಜ ಎಂಬುದಕ್ಕೆ ಪ್ರತಿನಿತ್ಯದ ಅವಳ ಅಂತರಂಗದ ಕಳವಳವೆ ಹೇಳುತ್ತಿದ್ದಿತು. ಸರಲಕ್ಕನ ಮರಣದಿಂದ ಒಂದು ತರದ ಆಘಾತವಾಗಿರಬಹುದೆ ? ಹನ್ನೆರಡು ವರ್ಷದ ಅನಾಥೆಯಾದ ತನ್ನನ್ನು ತಂದು ಸಾಕಿ, ಸಲುಹಿ, ಸುಖದಿಂದ ಬೆಳೆಸಿದ, ತಾಯಿಗೆ ಸಮಾನವಾದ ಸರಲಕ್ಕನ ಮರಣದಿಂದ ಹೀಗಾಗಿರಬಹುದು ಎಂದು ಆಕೆಗೆ ಎಷ್ಟೋ ಸಲ ತೋರುತ್ತಿತ್ತು. ಆದರೆ ರಾಮಣ್ಣನ ಸ್ಥಿತಿ ತನ್ನ ಹಾಗೆ ಆಗಿರಲಿಲ್ಲವಲ್ಲ ? ಪ್ರೀತಿಯ ಹೆಂಡತಿಯನ್ನು ಕಳೆದುಕೊಂಡ ಗಂಡನಿಗೆ ಆಗದ ಆಘಾತ ತನಗೆ ಆಗಬಹುದೆ ? ಇದು ಸಹಜವೆ ? ಎಂದೂ ಕೆಲವು ಸಲ ಸಂಶಯಪಡುತ್ತಿದ್ದಳು. ರಾಮಣ್ಣನು ಎದುರು ಕುಳಿತು ಮಾತನಾಡುತ್ತಿರುವಾಗ ಏನೊ ಒಂದು ತರದಿಂದ ಅಸಹ್ಯವೆನ್ನಿಸಿದರೆ, ರಾಮಣ್ಣನು ಮರೆಯಾದೊಡನೆ ಹುಚ್ಚು ಹಿಡಿದಂತಾಗುತ್ತಿತ್ತು. ಅದಕಾಗಿಯೆ, ಕೋಣೆಯ ಬಾಗಿಲಿನ ಸದ್ದು ಕೇಳಿ-ದಾಕ್ಷಣ ಬಿಕ್ಕು ಸಿಡಿಲಿನಂತೆ ಅಬ್ಬರಿಸಿ ಬಂದರೂ, ಮರು ಗಳಿಗೆಗೆ ಮುಖದಲ್ಲಿ ನಗೆಯ ಮಿಂಚು ಮೂಡಿಬಂದಿತು. ಅಂತರಂಗದ ಗೂಢವದು. ಅಂತರಂಗದ ಮುಗಿಲಿನಲ್ಲಿ ಮುಂಚೆ ಸಿಡಿಲು ಕೇಳಿಸಿ ತರುವಾಯ ಮಿಂಚು ಕಾಣಿಸುವು-ದೇನೊ ? ಮುಚ್ಚಿದ ಬಾಗಿಲನ್ನು ಮುಗುಳ್ನಗೆಯಿಂದ ನೋಡತೊಡಗಿದಳು, ನೋಡನೋಡುತ್ತ ಆ ಸುಖದ ಅನುಭವವನ್ನು ಅರಗಿಸಿಕೊಳ್ಳುವುದಕ್ಕಾಗಿ ಕಣ್ಣುಗಳನ್ನು ಮುಚ್ಚಿದಳು. ಬಿಸಿಲಿನೊಳಗಿನ ಮಳೆಹನಿಗಳಂತೆ ಮುಗುಳ್ನಗೆಯ ಮುಖದಲ್ಲಿ ಮುಚ್ಚಿದ ಕಣ್ಣುಗಳಿಂದ ನೀರು ಧಾರೆಯಾಗಿ ಸುರಿಯುತ್ತಿತ್ತು. ಇದು ಸುಖವೊ ? ದುಃಖವೊ ? ಎಂಬುದನ್ನರಿಯದ, ಅಥವಾ ಆ ವಿಚಾರವನ್ನೆ ಮೀರಿ ಒಂದು ಪರಸುಖವನ್ನು ಕಾಣುತ್ತಿರುವವಳಂತೆ ಅವಳ ಮುಖವು ಆಕರ್ಷಣೀಯವಾಗಿತ್ತು....ಕಣ್ಣು ಮುಚ್ಚಿದಾಗ ಕುಮುದಳಿಗೆ ಪರಸುಖವೆ ಇದ್ದಿತೆಂದು ಹೇಳಬಹುದು. ಇಂದಿನದಕ್ಕೆ ಕಣ್ಣು ಮುಚ್ಚಿದ ಕುಮುದಳಿಗೆ

ಹಿಂದಿನದರ ನೆನಪು ಅನಿವಾರ್ಯವಾಗುತ್ತಿತ್ತು....ಆಗಲೂ ಹೀಗೇ ರಾಮಣ್ಣನ ಕೋಣೆಯ ಬಾಗಿಲು ಮುಚ್ಚಿತ್ತು. ತಾನು ಹನ್ನೆರಡು ವರ್ಷದ ಹುಡುಗಿ. ಸರಲಕ್ಕನ ಕೂಡ ಬಂದಿದ್ದಾಳೆ. ಗಾಡಿಯ ಪ್ರವಾಸ ಕೂಡ ತನಗೆ ಹೊಸತಾಗಿತ್ತು. ಕಿಟಕಿಗೆ ಕುಳಿತು ವೇಗದಿಂದ ಹಿಂದೆ ಓಡಿ ಹೋಗುವ ಹೊರ ಜಗತ್ತು "ರಾಜಾದೇಖೋ ರಾಣೀದೇಖೊ" ಚಿತ್ರಪಟದಂತಿತ್ತು. ಆ ಪಟಗಳನ್ನು ನೋಡಬೇಕೆಂಬ ಹಂಬಲ ತನಗೆ. ಆದರೆ ಸರಲಕ್ಕನು ಮಾತ್ರ ಒಂದೇ ಸವನೆ ಏನನ್ನೊ ಹೇಳುತ್ತಿದ್ದಾಳೆ. ನಡ-ನಡುವೆ "ತಿಳೀತೇನು, ಕುಮುದಾ" ಎನ್ನುತ್ತಿದ್ದಾಳೆ. ಅದಕಾಗಿ ಆಕೆಯ ಮಾತನ್ನು ಕೇಳಲೇ-ಬೇಕಾಯಿತು. ಅದಾದರೂ ಯಾವ ಮಾತು? ದಾರಿಯುದ್ದಕ್ಕೂ ರಾಮಣ್ಣನ ಪ್ರಶಂಸೆ. ಮಾತುಮಾತಿಗೆ "ಅವರು ಹೀಂಗ ಅಂತಾರ" ಎಂದು ಪಲ್ಲವಿ. "ಅವರು ಬರೆಯೋ ಚಟದವರು, ಅವರ ಸ್ವಭಾವ ವಿಚಿತ್ರ, ನಿನಗೆ ನಗೆಚಾಟಿಕೆ ಮಾಡಿದರೆ ಅಳಬ್ಯಾಡ ಮತ್ತೆ!" ಎಂದು ಸರಲಕ್ಕ ಎಷ್ಟು ಗಂಭೀರವಾಗಿ, ಎಂತಹ ಕಳಕಳಿಯಿಂದ ಹೇಳಿದ್ದಳು! ಈಗಲೂ ಆಕೆಯ ಮುಖ ನೆನಪಿಗೆ ಬಂದರೆ ನಗೆ ಬರುವುದು. "ಮತ್ತ ಅವರು ಚಾಷ್ಟಿ ಮಾಡ್ತಾರಂತ ನೀನು ಮಾಡ್ಲಿಕ್ಕೆ ಹೋದೀ? ಥಟ್ಟನೆ ಬೈದುಬಿಟ್ಟಾರು! ಯಾಕೆಂದರೆ, ಯಾವ ವ್ಯಾಳ್ಯಾಕ್ಕ ಅವರ ಮನಸ್ಸು ಹ್ಯಾಂಗಿರ್ತದ ನೇಮುದ್ದಲ್ಲ" ಎಂದು ಎಚ್ಚರಿಸಿದ್ದಳು. ಅದನ್ನೆಲ್ಲ ಕೇಳಿ ರಾಮಣ್ಣನನ್ನು ನೋಡಲು ಕುಮುದಳಿಗೆ ಅತ್ಯಂತ ಕುತೂಹಲವಾಗಿತ್ತು. ತಾನೂ ಸರಲಕ್ಕ ಮನೆಗೆ ಬಂದರು, ಸ್ಟೇಶನ್‌ದಿಂದ. ಬಾಗಿಲು ತೆರೆದಿತ್ತು. ಒಳಗೆ ಯಾರೂ ಇದ್ದಂತಿರಲಿಲ್ಲ. ಆದರೂ ಸರಲಕ್ಕ ಒಳದನಿಯಿಂದಲೆ ಮಾತಾಡತೊಡಗಿದಳು. "ಏ–ಕೈಕಾಲು ತೊಳೆದುಕೊ. ನಾನು ಚಹ ಮಾಡ್ತೀನಿ. ಕೋಣೆಯ ಬಾಗಿಲು ಮುಚ್ಚೇದ ಅಂದ ಮ್ಯಾಲೆ ಅವರು ಒಳಗ ಬರೀತಾ ಕೂತಿರಬೇಕು. ಸದ್ದು ಮಾಡಬ್ಯಾಡ. ಚಹಾ ತಯಾರಾದ ಮ್ಯಾಲೆ ನೋಡೋಣಂತ" ಎಂದಿದ್ದಳು. ಕುಮುದಳಿಗೆ ಇನ್ನಿಷ್ಟು ತಡೆಯದಾಗಿ ಕೋಣೆಯ ಬಾಗಿಲನ್ನೆ ದಿಟ್ಟಿಸುತ್ತ ನಿಂತಳು. ಎಷ್ಟೊತ್ತು ಹಾಗೆಯೆ ನಿಂತಿದ್ದಳೊ! ಒಮ್ಮೆಲೆ ಕೋಣೆಯಿಂದ "ಸರಲಾ" ಎಂದು ಕೂಗು, ಅದೇ ವೇಳೆಗೆ ಧಡಾರೆಂದು ಬಾಗಿಲು ತೆರೆದ ಸದ್ದು, ಎದುರು ರಾಮಣ್ಣನ ಮೂರ್ತಿ! ಕುಮುದಳಿಗೆ ಏನು ಮಾಡಬೇಕೊ ತಿಳಿಯದಾಗಿ

ಕಲ್ಲಿನ ಗೊಂಬೆಯಂತೆ ಕಾಲೂರಿ ನಿಂತಳು. "Sorry, ಸರಲಾ. ಸ್ವಲ್ಪೇ ಉಳಿದಿತ್ತು, ಮುಗಿಸಲೇಬೇಕಾಗಿತ್ತು" ಎಂದವನೆ ತನ್ನ ಹತ್ತಿರ ಬಂದು ಎರಡೂ ಕೈಗಳನ್ನು ಹೆಗಲ ಮೇಲೆ ಚಲ್ಲಿ "ಸರಲಾ, ಈ ಪುಸ್ತಕದಿಂದ ನನ್ನ ಜೀವನಾನೇ ಬದಲಾಗೋದು ನೋಡು; ನೀನು ಓದಿ ನೋಡಿದಿಯೆಂದರೆ ನಿನಗೂ ಹೊಳೆದೀತು. Shake Hands, ಸರಲಾ. ನಿನ್ನ ಗಂಡ ಇಂದಿನಿಂದ ಹೆಸರಾದ ಸಾಹಿತಿ" ಎಂದು ತನ್ನ ಭುಜಗಳನ್ನು ಬಲವಾಗಿ ಮುಷ್ಟಿಯಿಂದ ಬಿಗಿಯತೊಡಗಿದ. ಆಗ ಸರಲಕ್ಕ ಒಳಗಿನಿಂದ ಬಂದು "ಮುಗೀತೇನು ಬರೆಯೋದು" ಎಂದಾಗ, ಪಾಪ! ರಾಮಣ್ಣ ಬೆಚ್ಚಿ ದೂರ ಸರಿದು ತನ್ನನ್ನು ನೋಡಿ "ಎಲ! ಈ ಹುಡುಗೆ ಯಾರು? ಹಹ! ನನಗೂ ಅನ್ನಿಸಿತು, ಸರಲಾ ಇಷ್ಟು ಸಣ್ಣಾಕೆ ಹ್ಯಾಂಗ ಅಂತ? ಯಾರಿಗ್ಗೊತ್ತು? ಅಣ್ಣನ ಮನೇವಳಗ ಊಟ ಕಡಿಮೆಯಾಗಿ ಸೊರಗಿ ಸೊರಗಿ ಸಣ್ಣಾಕೆ ಕಾಣಿಸ್ತಾಳೇನೊ–ಅಂದುಕೊಂಡೆ... ಹಹ....?" ಎಂದು ತನ್ನ ಫಜೀತಿಗಾಗಿ ತಾನೇ ನಗತೊಡಗಿದ ರಾಮಣ್ಣ. ಆದರೆ ನಡೆದ ಸಂಗತಿಗಿಂತಲೂ ಪಡೆದ ಅನುಭವವೊಂದು ಕುಮುದಳಿಗೆ ಮರೆಯದಾಗಿತ್ತು. ಅದೆಂದರೆ–ರಾಮಣ್ಣನ ಕೈಗಳು ತನ್ನ ಭುಜವನ್ನು ಮುಟ್ಟಿದ ಅನುಭವ. ಅದೇಕೊ–ಮೈ ನಡುಗಿ–ದರೂ ಮನಸ್ಸು ಮಾತ್ರ–ಹೊಟ್ಟೆತುಂಬಿ ಉಂಡವನ ನಿದ್ರೆಯಂತೆ–ಸುಖದಲ್ಲಿ ತಟಸ್ಥವಾದಂತಿತ್ತು. ಈ ಆರು ವರ್ಷಗಳಲ್ಲಿ ಎಷ್ಟು ಸಲ ಆ ಬಾಗಿಲನ್ನು–ಮುಚ್ಚಿದ ಬಾಗಿಲನ್ನು–ನೋಡಿರುವಳೊ ಅಷ್ಟು ಸಲ ಕುಮುದಳು ಅಂದಿನ ತಟಸ್ಥ ಸುಖವನ್ನು ನೆನೆದು ಕಣ್ಣು ಮುಚ್ಚುತ್ತಿದ್ದಳು. ಈಗ ಕೂಡ ಕಣ್ಣು ಮುಚ್ಚಿದಾಗ ಮೊದಲೊಂದು ನಿಮಿಷ ಅದೇ ಸುಯೋದಯದ ಕಿರಣಗಳಂತೆ ಅವಳ ಮುಖದಲ್ಲಿ ಹೊಂಬೆಳಗಿನ ಕಾಂತಿ–ಮಿಂಚುವುದು. ಕಣ್ಣೀರು ಸುರಿಯುವುದು. ಆದರೆ ಈಗ ಮಾತ್ರ ಕಣ್ಣೀರಿಗೆ ಕಾರಣ ಸುಖವೊ ದುಃಖವೊ ಎಂಬುದು ಆಕೆಗೆ ತಿಳಿಯದಾಗಿದೆ. ಈಗ ಅಂತರಂಗದಲ್ಲಿ ತಾಟಸ್ಥ್ಯವಿಲ್ಲ. ಆದುದರಿಂದ ತಟ್ಟನೆ ಮುಖವನ್ನೊರಸಿಕೊಂಡು ಕಣ್ತೆರೆದು, ಗಾಬರಿಯಿಂದ ಅತ್ತಿತ್ತ ನೋಡಿ, ಬಾಗಿಲು ಇನ್ನು ಮುಚ್ಚಿದೆ ಎಂಬುದಕ್ಕೆ ಸಮಾಧಾನವಾದಂತೆ ಉಸುರ್ಗರೆದು ಕೈಯೊಳಗೆ ಹಿಡಿದುಕೊಂಡಿದ್ದ ಪುಸ್ತಕವನ್ನು ಓದಲು ಪ್ರಯತ್ನ ಮಾಡತೊಡಗಿದಳು.

## ೨

ಊಟ ಬೇಗ ಮುಗಿಯಿತು, ಸಿನೆಮಾ ಸುಳ್ಳಾಯಿತು, ಬರೆಯುವುದೆಂದು ಹೇಳಿ ಬಾಗಿಲು ಮುಚ್ಚಿಕೊಂಡುದಕ್ಕೆ ಹೊರಗೂ ಹೋಗುವಂತಿಲ್ಲ, ಬೇಟೆಯ ನಾಯಿಗಳನ್ನು ತಪ್ಪಿಸಲು ಹೋರಿನಲ್ಲಿ ಹುದುಗುವ ಮೊಲದಂತೆ ಕುರ್ಚಿ-ಮೇಜುಗಳ ನಡುವೆ ಸಿಕ್ಕುಬಿದ್ದೆನಲ್ಲ ಎಂದು ರಾಮಣ್ಣನು ತನ್ನ ಕೋಣೆಯಲ್ಲಿ ಚಡಪಡಿಸುತ್ತಿದ್ದನು. ಕೊನೆಗೆ ಮೇಜಿನ ಮೇಲೆ ಮೊಳಕೈಗಳನ್ನೂರಿ, ತಲೆಯನ್ನು ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡು, ಆಕಾಶವನ್ನು ನೋಡಲು ಹವಣಿಸುವವನಂತೆ ಎದುರಿನ ಗೋಡೆಯನ್ನು ನೋಡಿದನು. ಅವನಿಗೆ ಕಂಡದ್ದು ಗೋಡೆಗೆ ತೂಗುಹಾಕಿದ ಸರಲೆಯ ಭಾವಪಟ. ಎಚ್ಚೆತ್ತವನಂತೆ ಮತ್ತೊಮ್ಮೆ ಹೆಂಡತಿಯ ಚಿತ್ರವನ್ನು ನೆಟ್ಟನೋಟದಿಂದ ದಿಟ್ಟಿಸಿದನು. ಇದೇನು? ಸರಲೆಯ ತುಟಿಗಳು ಬಿರಿದುವೆ? ತಾನು ಬರೆಯದೆ ಗೋಳಾಡುವುದನ್ನು ನೋಡಿ ಆಕೆ ಮುಗುಳ್ನಗೆ ಬೀರುತ್ತಿರುವಳೆ? "ನಾನು ಹೇಗೆ ಬರೆಯಲಿ? ಸರಲಾ, ನಿನಗೆ ಗೊತ್ತಿದ್ದೂ ನಗುವೆಯಲ್ಲ?" ಎಂದು ಹಟಮಾರಿ ಹುಡುಗನ ದನಿಯಲ್ಲಿ ಉಸುರ್ಗರೆದನು.

ರಾಮಣ್ಣನು ಹೆಂಡತಿಯ ಚಿತ್ರವನ್ನು ನೋಡಿ ಹಾಗೆ ಉಸಿರಿದ್ದಕ್ಕೆ ಕಾರಣವಿಲ್ಲದಿರಲಿಲ್ಲ. ತನ್ನ ಲೇಖನದ ತಂತ್ರವೆಲ್ಲ ಸರಲೆಗೆ ಗೊತ್ತಿತ್ತು. ಇಷ್ಟೇಕೆ? ಸರಲೆ ಸ್ವತಃ ಆ ತಂತ್ರದ ಒಂದು ಭಾಗದಂತಿದ್ದಳು.

"ಸರಲಾ, ನನಗ ಬರೀಬೇಕಾಗೇದ" ಎನ್ನುತ್ತಿದ್ದ ರಾಮಣ್ಣ.

ಏನು ಕತೆಯೊ, ನಾಟಕಾನೊ, ಕಾದಂಬರೀನೋ-ಏನ್ಬರೀತೀರಿ ಎಂದು ಯಾವಾಗಲೂ ಆ ಮಾತಿಗೆ ಸರಲೆಯ ಪ್ರಶ್ನೆ.

"ಹಹ! ಅಂದ್ರೆ? ಬರೀತೀನಿ ಅಂದ್ರ, ನಿನಗೇನು ಕಾರಕೂನನ ಹಾಂಗ ಲೆಕ್ಕ ಇಲ್ಲ' ರಿಪೋರ್ಟ ಬರೀತೀನಿ ಅನ್ನಿಸಿತೇನು?" ಎಂದು ರಾಮಣ್ಣ ಗುಡುಗುವ.

"ಅಲ್ಲ-ನಿನ್ನೆ ಏನೇನೊ ಹೇಳಿದ್ದಿರಿ-ಅದರದೇ ಕತೆ ಮಾಡ್ತೀರೊ, ನಾಟಕಾ ಮಾಡ್ತೀರೊ ಅಂತ ಕೇಳಿದೆ." ಸರಲಾನ ಉತ್ತರ.

ಆಗ ರಾಮಣ್ಣನ ನೆನಪಿಗೆ ಬರುವುದು ತಾನು ಬರೆಯಬೇಕಿದ್ದ ವಿಷಯ ಯಾವುದು ಎಂದು. ಆದರೆ ಹೆಂಡತಿಯ ಮುಂದೆ ಅದನ್ನು ಒಪ್ಪುವುದು ಹೇಗೆ? ಅದಕಾಗಿ ತುಸು ಸಿಟ್ಟಿನಿಂದಲೆ ಹೇಳುತ್ತಿದ್ದ, "ಹುಚ್ಚಿ! ನಾಟಕಾನೇ ಬರೀತೀನಿ ಅಂತ ಹೇಳಲಿಲ್ಲೇನು?" ಎನ್ನುವ.

"ಮತ್ತೆ ನಾಟಕ ಮಾಡಿದರೆ ಎಷ್ಟೋ ತೋರಿಸಲಿಕ್ಕೆ, ತಿಳಿಸಲಿಕ್ಕೆ ಬರೋದಿಲ್ಲ ಅಂದಿದ್ರಿ. ಅದಕ್ಕ ಕಾದಂಬರಿ ಬರೀತೀರೇನು ಅಂತ ಕೇಳಿದೆ" ಎನ್ನುವಳು ಸರಲಾ.

ಎಂತಹ ಮೋಜು! ತಾನು ನಾಟಕರೂಪದಲ್ಲಿ ಬರೆಯುವುದು ಎಂದು ಹೇಳಿರಲಿಲ್ಲ, ಅದು ತನ್ನ ಸುಳ್ಳು; ನಾಟಕದಲ್ಲಿ ಶಕ್ಯವಿಲ್ಲ ಎಂದು ತಾನು ಹೇಳಿದ ಎಂಬ ಸರಲೆಯ ಮಾತು ಸುಳ್ಳು. ಆದರೂ ಇಂತಹ ಸುಳ್ಳುಗಳನ್ನು ಲಕ್ಷ್ಯಕ್ಕೆ ತಾರದೆ, "ಅದಕೇ ನಿನ್ನ ಸುರು ಮಾಡಲಿಲ್ಲ. ಕಾದಂಬರಿ ಬರೆಯ- ಬೇಕೆಂದು ನಿನ್ನೆಯೆ ಗೊತ್ತು ಮಾಡಿದೆ. ಅದನ್ನೆ ಈ-ಹೊತ್ತಿನಿಂದ ಬರೀತೀನಿ ಅಂದೆ" ಎಂದು ಸಾಧಿಸುವ.

"ಅಯ್ಯ! ಕಾದಂಬರೀನೇ ಬರೀತೀರಾ!" ಎಂದು ಸರಲೆ ಮುಖವನ್ನು ಕಣ್ಣುಗಳನ್ನೂ ಅರಳಿಸುವಳು. ಅವಳಿಗಾದ ಆ ಆನಂದ-ಅಭಿಮಾನಗಳನ್ನು ಕಂಡು ಅದಕ್ಕಾಗಿಯಾದರೂ ತಾನು ಕಾದಂಬರಿಯನ್ನೆ ಬರೆಯಬೇಕೆಂದು ನಿಶ್ಚಯಿಸುತ್ತಿದ್ದ.

"ಸರಲಾ, ನೀನು ನನ್ನ ಸ್ಫೂರ್ತಿಯಾಗಿದ್ದಿ" ಎಂದು ಈಗ ರಾಮಣ್ಣನು ಭಾವಪಟದ ಸರಲೆಯ ಮುಂದೆ ಒಪ್ಪಿಕೊಂಡನು.

ಒಂದೇ-ಎರಡೇ-ಎಷ್ಟುವಿಧವಾಗಿ ಸರಲೆಯಿಂದ ಸಹಾಯ ಸಿಗುತ್ತಿತ್ತು? ಬರೆಯದ ಭಾಗವನ್ನು ಬರೆದಂತೆ ಆಕೆಯ ಮುಂದೆ ಹೇಳಿದಾಗ ಒಂದೊಂದು ಸಲ ಆಕೆಗೆ ಉತ್ಸಾಹವಾಗುತ್ತಿರಲಿಲ್ಲ. ಕ್ರಮೇಣ ಆಕೆಯ ವಿಚಾರದಂತೆ ಕತೆಯ ದಿಶೆಯನ್ನು ಬದಲಾಯಿಸುತ್ತಿದ್ದ. ಪುಸ್ತಕವನ್ನು ಮುಗಿಸುವಾಗಂತೂ ಆಕೆಯದೆ ಕೊನೆಯ ನಿರ್ಣಯ. ಮುಕ್ತಾಯದವರೆಗೆ ತಾನು ಕತೆಯನ್ನು ಹೇಳುವ, ಆಗ ಆಕೆ ಒಮ್ಮೆಲೆ "ನಾಕು, ಮುಂದ್ಹೇಳಬ್ಯಾಡರಿ. ಹೀಂಗ ಆಯಿತಹುದಲ್ಲೊ ಕಡೆಗೆ!" ಎಂದು ಚಿಕ್ಕ ಹುಡುಗರಂತೆ ಚಪ್ಪಾಳೆ ತಟ್ಟುವಳು. "ಭಲೆ! ನನ್ನ ಸಹವಾಸದಿಂದ ನೀನೂ ಸಾಹಿತಿಯಾದಿ?"

ಎಂದು ಆಕೆಯ ಬೆನ್ನು ತಟ್ಟಿ ಕೋಣೆಗೆ ಹೋಗಿ ಆಕೆಯ ಸೂಚನೆಯಂತೆಯೆ— ಅದನ್ನು ಒಪ್ಪುತ್ತಿರಲಿಲ್ಲ ಮಾತ್ರ—ಕತೆಯನ್ನು ಮುಕ್ತಾಯಗೊಳಿಸುತ್ತಿದ್ದ. ಚಹದ ಹೊತ್ತಿಗೊ, ರಾತ್ರಿ ಊಟವಾದ ಮೇಲೊ ಅದನ್ನು ತಂದು, "ಆಗ ನೀ ಹೇಳಿದ್ದಿಯಲ್ಲ? ಇಲ್ಲಿ ನೋಡು, ನಾನೂ ಹಾಂಗೇ ಮುಗಿಸಿದ್ದೆ ಕತೆಯನ್ನ!" ಎಂದು ಜಂಬದಿಂದ ಓದಿ ತೋರಿಸುವ.

"ಸರಲಾ, ಅದು ಮೋಸವಲ್ಲ, ಹುಡುಗ ಬುದ್ಧಿ. ಈಗ ಆ ಹುಡುಗಾಟಕ್ಕೆ ಪುಟುವನ್ನು ಕೊಡಲು ಯಾರೂ ಇಲ್ಲ. ನಾನು ಹೇಗೆ ಬರೆಯಲಿ?" ಎಂದು ಚಿತ್ರದ ಎದುರು ಮತ್ತೆ ದೂರಿಕೊಂಡ.

ಕುಳಿತು ಕುಳಿತು ಬೇಸರವಾಯಿತು ರಾಮಣ್ಣನಿಗೆ. ತಾನೊಬ್ಬನೆ ಸಿನೆಮಾಕ್ಕೆ ಹೋದರೆ ಹೇಗೆ? ಅಬ್ಬ! ಅದಂತೂ ಪ್ರಮಾದವೆನ್ನಿಸುವುದು. ಏನಿಲ್ಲ, ಈ ಹುಡುಗೆಯ ಗಂಟು ಹಾಕಿಕೊಂಡುದು ತಪ್ಪು. ಆದರೇನು? ಹೊರಗೆ ಹಾಕಬೇಕೆ? ಆಕೆ ಎಲ್ಲಿಗೆ ಹೋಗಬೇಕು? ಇದಲ್ಲದೆ ಜನರಾದರೂ ಆಡಿಕೊಳ್ಳದೆ ಬಿಟ್ಟಾರೆಯೆ? 'ಹೆಂಡತಿ ತೀರಿದಾಕ್ಷಣ ಪಾಪ! ಅನಾಥ ಹುಡುಗೆಯನ್ನು ಅಡವಿಗೆ ಅಟ್ಟಿದ ರಾಮಣ್ಣ' ಎಂದು. ಎಲ್ಲಕ್ಕೂ ಹೆಚ್ಚಿನ ತೊಡಕೆಂದರೆ, ಸಾಯುವವರೆಗೂ ಕುಮುದಳ ಸಹವಾಸ ತಪ್ಪಿಲ್ಲ ಎಂಬುದು. ಯಾಕೆಂದರೆ, ಕುಮುದಳ ಮದುವೆಯಾಗುವುದು ಶಕ್ಯವಿಲ್ಲ ಎಂಬುದನ್ನು ರಾಮಣ್ಣನು ಚೆನ್ನಾಗಿ ಅರಿತಿದ್ದನು. ಸರಲೆ ಹಾಸಿಗೆ ಹಿಡಿದಂದಿನಿಂದ ಜನರು ಆಡಿಕೊಳ್ಳುತ್ತಿದ್ದರು, ಕೊನೆಕೊನೆಗೆ ಅದು ರಾಮಣ್ಣನವರೆಗೂ ಬಂದಿತು, ಕುಮುದಳ ಮತ್ತು ತನ್ನ ಸಂಬಂಧದ ಬಗ್ಗೆ ಬೆಳೆಯುತ್ತಿದ್ದ ಸಂಶಯ. ಯಾವುದು ಜನರಿಗೆ ಸಂಶಯವಿದ್ದಿತೊ ಅದು ರಾಮಣ್ಣನಿಗೆ ಅನುಭವದ ಮಾತಾಗಿತ್ತು." "ಸರಲಾ, ಅದೂ ನಿನ್ದೆ ತಪ್ಪು" ಎಂದು ರಾಮಣ್ಣ ಭಾವಪಟಕ್ಕೆ ಆಹ್ವಾನ ಕೊಡುವವನಂತೆ ಹೇಳಿದ. ತಟ್ಟನೆ ಅವನ ಮೈ ನಡುಗಿತು. "ಕುಮುದಳನ್ನು ನೀವು ಮದುವೆ ಯಾಕೆ ಆಗೋದಿಲ್ಲ" ಎಂದು ಆ ಭಾವಪಟದಲ್ಲಿಯ ತುಟಿಗಳು ನುಡಿದಂತೆ ಭಾಸವಾಯಿತು. ಛೆ! ಈ ವಿಚಾರ ಯಾಕೆ ಬಂದಿತು ಇಂದು? ಕುಮುದಳ ಕೂಡ ಮದುವೆ? ಅಶಕ್ಯ. "ಸರಲಾ, ನಿನಗೇ ಗೊತ್ತಿದೆ. ನಿನ್ನ ನನ್ನ ಸಹವಾಸದಿಂದ ನಾವಿಬ್ಬರೂ ಒಂದಾದಂತೆ ಆಗಿದ್ದಿವಿ. ಈ ಹೊತ್ತು ನೀನು ದೇಹದಿಂದ

ಬೇರೆಯಾಗಿ ಇಲ್ಲ ; ಆದರೇನು ? ನನ್ನೊಳಗೆ ವೈಗೂಡಿಸಿಕೊಂಡು ಬಿಟ್ಟಿರುವೆ. ನಾನು ಇರುವವರೆಗೆ ನೀನು ನನ್ನಲ್ಲಿ ಇರುವಾಕೆ, ನೀನು ಹಾಗೆ ಇರುವಾಗ ಇನ್ನೊಬ್ಬರಿಗೆ ಅಲ್ಲಿ ಜಾಗೆ ಎಲ್ಲಿಂದ ಬರಬೇಕು ? ಶಕ್ಯವಿಲ್ಲ, ಸರಲಾ, ಕುಮುದಳ ಕೂಡ ಮದುವೆ ಶಕ್ಯ ಇಲ್ಲ. ಇಷ್ಟೇಕೆ ? ಇನ್ನೊಂದು ಮದುವೀನೇ ಶಕ್ಯವಿಲ್ಲ" ಎಂಬ ವಿಚಾರದ ಉದ್ವೇಗದಿಂದ ರಾಮಣ್ಣನ ಕಣ್ಣಳಲ್ಲಿ ನೀರಿನ ಮಂಜೊಡೆಯಿತು. "ಆದರೆ ಇದೆಲ್ಲ ತಪ್ಪು ನಿನ್ದೆ" ಎಂದು ಉದ್ವೇಗವನ್ನು ತಡೆದುಕೊಳ್ಳಲು ನೆವವಾಗಿ ದೂರಿಕೊಂಡ.

ಶಾಂತಮನಃಸ್ಥಿತಿಯಲ್ಲಿದ್ದಾಗ ತಾನು ಈ ಮಾತನ್ನು ಆಡುತ್ತಿರಲಿಲ್ಲ ಎಂದು ರಾಮಣ್ಣನು ಬಲ್ಲ. ಯಾಕೆಂದರೆ, ಇನ್ನೊಬ್ಬರ ಮೇಲೆ ತಪ್ಪು ಹೊರಿಸುವುದು ದುರ್ಬಲತೆಯ ಲಕ್ಷಣವಲ್ಲವೆ ? ಹಾಗೆ ನೋಡಿದರೆ ಈ ವಿಷಯದಲ್ಲಿ ಯಾರದು ತಪ್ಪು ? ಯಾರದೂ ಅಲ್ಲ, ತನ್ನಷ್ಟಕ್ಕೆ ತಾನೇ ನಡೆಯುವುದು, ಅನುಕೂಲವಿದ್ದರೆ ಒಪ್ಪು, ಇಲ್ಲದಿದ್ದರೆ ತಪ್ಪು ! ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ — ಎಂದು ಗೀತೆಯಲ್ಲಿ ಹೇಳಿಲ್ಲವೆ ? ಅಲ್ಲಿ ಒಳಗೆ ದೇವನಿದ್ದಾನೆ, ಅವನು ಪ್ರಾಣಿಗಳನ್ನು ಕುಣಿಸುತ್ತಾನೆ ಎಂದಿದೆ ; ಇಲ್ಲಿ ದೇವನ ಮಾತಿಲ್ಲ, ಆದರೆ ಇದೂ ಒಳಗಿನದೊಂದು ಶಕ್ತಿಯೆ. ಪ್ರವಾಲಶೋಭಾ ಇವ ಪಾದಪಾನಾಂ ಶೃಂಗಾರ ಚೇಷ್ಟಾ ವಿವಿಧಾ ಬಭೂವುಃ ಎಂದು ಕಾಲಿದಾಸನು ಹೇಳಿದ್ದು ಇನ್ನಿಷ್ಟು ಸಮಂಜಸವಿದೆ. ಗಿಡಕ್ಕೆ ಚಿಗುರು ಮೂಡುವುದು ಎಷ್ಟು ಪ್ರಕೃತಿ–ಸಹಜವೊ ಅಷ್ಟೆ ಪ್ರಾಣಿಗೆ ಶೃಂಗಾರಚೇಷ್ಟೆ ಸಹಜ... ಛೆ ! ಇದೆಲ್ಲ ಆತ್ಮಸಮರ್ಥನೆಯ ಸಮಾಧಾನವಾಗಿದೆ, ಅದೂ ದುರ್ಬಲತೆಯ ಲಕ್ಷಣ ಎಂದು ರಾಮಣ್ಣನು ಆ ಸರಣಿಯನ್ನು ಬಿಟ್ಟು ಕೊಟ್ಟನು. ಆದರೂ ಒಂದು ದೃಷ್ಟಿಯಿಂದ ತಪ್ಪು ಸರಲೆಯ ಪಾಲಿಗೆ ಬಿಟ್ಟದ್ದಲ್ಲ ಎಂದು ಮತ್ತೆ ಭಾವಪಟವನ್ನು ನೋಡುತ್ತ ವಿಚಾರ ಮಾಡಿದನು. ಆ ದಿನ ನಡೆದ ಸಂಗತಿ ಮಹತ್ವದ್ದಲ್ಲ, ಅದು ನಡೆಯಬೇಕಿರಲಿಲ್ಲ, ನಡೆದುದೂ ಅಕಸ್ಮಾತ್ತಾಗಿ. ಸುಮಾರು ೨–೨॥ ವರ್ಷಗಳ ಮುಂಚಿನ ಸಂಗತಿ. ಸರಲೆ ಆಗಲೇ ಹಾಸಿಗೆ ಹಿಡಿದಿದ್ದಳು. ಪಾಪ! ಮೂರು ವರ್ಷ ಹಾಸಿಗೆ ಹಿಡಿದು ಕ್ಷೀಣವಾಗುತ್ತ ಸತ್ತುಹೋದ ಹೆಂಡತಿಯ ಮೇಲೆ ತಪ್ಪನ್ನು ಹೊರಿಸಬಹುದೆ ? ತಪ್ಪನ್ನು ಹೊರಿಸುವುದಲ್ಲ, ಘಟನೆಯನ್ನು ತಿಳಿದುಕೊಳ್ಳುವುದು ಎಂದು

ಸಮಾಧಾನವನ್ನು ತಂದುಕೊಂಡ. ಅಂದು ಹಾಸಿಗೆಯಲ್ಲಿ ಸರಲೆ ಒರಗಿದ್ದಳು, ಬದಿಗೆ ಕುಮುದಳು ಕುಳಿತಿದ್ದಳು. ರಾಮಣ್ಣ ಹೊರಗಿನಿಂದ ಬಂದ, ಬಂದವನೆ ಸರಲೆಯ ಕಡೆಗೆ ಧಾವಿಸಿ, ಹಾಸಿಗೆಯ ಇನ್ನೊಂದು ಬದಿಗೆ ಬಂದು ಕುಳಿತುಕೊಳ್ಳುತ್ತ "ಈ ದಿನ ಜ್ವರ ಬಂದಿತ್ತೇನು ?" ಎಂದ. ಸರಲೆ ಮುಗುಳ್ನಗೆಯಿಂದ ತಲೆ ಅಲ್ಲಾಡಿಸಿದಳು. ಆದರೂ ರಾಮಣ್ಣನಿಗೆ ಸಮಾಧಾನವಿಲ್ಲ. "ಈಗ ಜ್ವರ ಇಲ್ಲವಲ್ಲ" ಎನ್ನುತ್ತ ಹೊದಿಕೆಯ ಕೆಳಕ್ಕೆ ಕೈಹಾಕಿ-ಸರಲೆಯ ಮೈಮುಟ್ಟಿ ನೋಡಲು ಕೈಚಾಚಿದ. ಅದೇ ಕಾಲಕ್ಕೆ ಕುಮುದಳೂ ಆ ಕೆಲಸದಲ್ಲಿಯೇ ತೊಡಗಿದ್ದಳೇನೋ ? ಒಮ್ಮೆಲೆ ಇಬ್ಬರ ಕೈಗೆ ಕೈ ತಾಕಿತು. ಒಂದು ಕ್ಷಣ ರಾಮಣ್ಣ ಅವಾಕ್ಕಾದ. ತನಗೆ ಮುಟ್ಟಿದ ಕೈಗೆ ಕೂಡಲೆ ಬೆವರೊಡೆದದ್ದು ಕಂಡು ಬಂದಿತು. ಮುಖ ಮೇಲೆ ಮಾಡಿ ಕುಮುದಳನ್ನು ನೋಡಿದ, ಅವಳೂ ಪೆಚ್ಚು ಕಳೆಯಿಂದ ಇವನನ್ನೆ ನೋಡು- ತ್ತಿದ್ದಳು. "ಅಲ್ಲ-ಬೆವರು-" ಎಂದವನೆ ತಡೆದು ಸುಧಾರಿಸಿಕೊಂಡು, "ಅಂದ್ರೇನು ಬೆವರು ಬಿಟ್ಟು ಇಳೀತೋ, ಏನು ಜ್ವರ ಬಂದಿರಲೇ ಇಲ್ಲವೊ ?" ಎಂದು ಸರಲೆಯನ್ನು ಕೇಳಿದ. ಅವಳ ಮುಖ ಮುಗುಳ್ನಗೆಯಿಂದ ಅರಳಿತ್ತು. ಅಶಕ್ತತೆಗಾಗಿ ಹೆಚ್ಚು ಸ್ಪೃಹಣೀಯವಾಗಿ ಕಂಡಿತು. ಆಕೆ ನಗುತ್ತಲೆ "ಇಲ್ಲ ಎಂದು ಮೊದಲೇ ಹೇಳಲಿಲ್ಲವೆ ?" ಎಂದಳು. ಆ ಮಾತಿನ ರೀತಿ, ಆ ಮುಗುಳ್ನಗೆ-ಇವುಗಳಿಂದ ರಾಮಣ್ಣನಿಗೆ ಸಂಶಯ ಬಂದಿತು. ಸರಲೆಗೆ ತಿಳಿದಿರಬಹುದೆ? ಒಂದು ಕಣ್ಣೆವೆ-ಗಳಿಗೆಯಲ್ಲಿ ಇಬ್ಬರನ್ನು ಪೆಚ್ಚು ಮಾಡಿದ, ತೀರ ಅಕಲ್ಪಿತವಾಗಿ ಮಿಂಚಿದ ಆ ಘಟನೆ—ಅದರ ಪರಿಣಾಮ—ಸರಲೆಗೆ ಹೊಳೆದಿತ್ತೆ ? ಹೊಳೆದಿತ್ತು, ಅದಕಾಗಿಯೆ ಆಕೆ ಮುಂದೆ ಎಚ್ಚರದಿಂದಿರ- ಬೇಕಿತ್ತು, ನನ್ನನ್ನು ಎಚ್ಚರಿಸಬೇಕಿತ್ತು, ಹಾಗೆ ಮಾಡಲಿಲ್ಲ, ಅದ್ದರಿಂದ ಇಂದಿನ ಪರಿಸ್ಥಿತಿಗೆ ಆಕೆಯ ಆ ತಪ್ಪೇ ಕಾರಣ – "ತಿಳೀತೇನು ? ನೀ ಒಂದ್ಮಾತಾಡಿದ್ದರ ಉಳೀತಿತ್ತು" ಎಂದು ಭಾವಪಟಕ್ಕೆ ಬುದ್ಧಿಪಾಠವನ್ನು ಹೇಳಿದನು.

ಹೊರಗೆ ಹೋಗುವ ಹಾಗಿಲ್ಲ, ಬರೆಯುವುದೂ ಇಲ್ಲ, ಕಣ್ಮುಂದೆ ಭಾವಪಟವಿದ್ದರೆ ಸರಲೆಯ ಸ್ಮರಣೆ ಬಿಟ್ಟದ್ದಲ್ಲ, ಮಾಡುವುದಾದರೂ ಏನು— ಎಂದು ತುಸು ಸಿಡುಕಿನಿಂದ ರಾಮಣ್ಣ ಕುರ್ಚಿಯಿಂದ ಎದ್ದ. ಗಡಿಯಾರವನ್ನು

ನೋಡಿಕೊಂಡ. ಇನ್ನೂ ೮|| ಗಂಟೆ ! ಮಲಗುವ ಸಮಯವೂ ಅಲ್ಲ. ಮಲಗುವ ವಿಚಾರ ಬಂದೊಡನೆ ಮತ್ತೆ ತಿರುಗಿ ನಿಂತು "ಎಲ್ಲ ನಿನ್ನ ತಪ್ಪು, ಅಂದೆ" ಎಂದು ಭಾವಪಟದೆದುರು ಒಳದನಿಯಲ್ಲಿಯೆ ಅಬ್ಬರಿಸಿ ಮತ್ತೆ ಕುರ್ಚಿಯಲ್ಲಿ ಬಿದ್ದುಕೊಂಡ.

## ೪

ಕುಮುದ ಉಸುರ್ಗರೆದಳು. ಪುಸ್ತಕ ಎಲ್ಲಿದೆಯೊ ? ಮನಸ್ಸು ಎಲ್ಲಿದೆಯೊ ? ಏನು ಮಾಡುವುದು ? ಹೋಗುವುದೆಲ್ಲಿ ? ಇತ್ತಿತ್ತಲಾಗಿ ಯಾರ ಕಡೆ ಹೋಗಲೂ ಮನಸ್ಸಾಗುತ್ತಿರಲಿಲ್ಲ. ತಾನು ಹೋದೊಡನೆ ಕೂಡಿದ ಹೆಂಗಸರು ತಟ್ಟನೆ ಮಾತನ್ನು ತಡೆದು ಹುಸಿನಗೆಯಿಂದ ತನ್ನನ್ನು ಬರಮಾಡಿಕೊಳ್ಳುತ್ತಿದ್ದರು ಅದುವರೆಗೆ ಅವರು ತನ್ನ ಸಲುವಾಗಿಯೆ ಮಾತನಾಡುತ್ತಿದ್ದರೆಂಬುದು ಕುಮುದಳಿಗೆ ತಿಳಿಯದಿರಲಿಕ್ಕಿರಲಿಲ್ಲ. ಅನಿರ್ವಾಹ. ಮಾಡುವುದು ಬೇಕು, ಆಡಿಸಿಕೊಳ್ಳುವುದು ಬೇಡ ಎಂದರೆ ವ್ಯವಹಾರವು ಮನೆಯ ಸೊತ್ತೆ ? ಏನೆ ಇರಲಿ, ಹೋಗಲು ಅಷ್ಟೊಂದು ಮನಸ್ಸು ಹಾತೊರೆಯುತ್ತಿರಲಿಲ್ಲ. ಇಷ್ಟಾಗಿ ಈಗ ರಾತ್ರಿಯ ೮|| ಗಂಟೆ. ಹೋಗ-ಬೇಕೆಂದರೂ ಶಕ್ಯವಿಲ್ಲ. ಊಟ ಮುಗಿದಿದೆ, ಮಲಗುವುದೊಂದೇ ತನ್ನ ಪಾಲಿಗೆ ಉಳಿದಿದೆ. "ಮಲಗುವುದೆಂ"ದಾಕ್ಷಣ ಕುಮುದಳ ಮೈ ನಡುಗಿತು, ಮುಖ ಬೆವರಿಟ್ಟಿತು. ಇಂದಿಗೆ ಎರಡು ವರ್ಷಗಳಾದುವು-ಕುಮುದ ಮತ್ತು ರಾಮಣ್ಣ ಒಂದೆಡೆ ಮಲಗುತ್ತಿದ್ದು. ಎಂತಹ ಮೋಸ ! ಪಾಪ ! ಸರಲಕ್ಕ ಹಾಸಿಗೆ ಹಿಡಿದ ಪ್ರಾಣಿ. ಅವಳಿಗೆ ತಿಳಿಯುವುದೆ ಶಕ್ಯವಿದ್ದಿರಲಿಲ್ಲ. ಹಾಗೂ ಹೀಗೂ – ಒಂದು ದಿನ ರಾಮಣ್ಣನ ಕೈಗೆ ತನ್ನ ಕೈ ತಾಕಿದಂದಿನಿಂದ – ಇಬ್ಬರಿಗೂ ತಿಳಿಯದಂತೆ ಈ ಘಟನೆ ನಡೆದುಹೋಗಿತ್ತು. ಮೊದಮೊದಲು ಕುಮುದಳಿಗೆ ಇದೇನು, ಹೇಗೆ ನಡೆಯಿತು – ಎಂಬುದರ ಎಚ್ಚರ ಕೂಡ ಇದ್ದಿರಲಿಲ್ಲ. ಅಷ್ಟೊಂದು ಸುಖದ ಸವಿಗನಸುಗಳಲ್ಲಿ ತನ್ಮಯಳಾಗಿದ್ದಳು. ಕೈಗೆ ಕೈ ಸೋಂಕಿದಾಗ ತಪ್ಪಿದ ಎಚ್ಚರವು ಮೊನ್ನೆ-ಮೊನ್ನಿನವರೆಗೂ ಮರಳಿರ-ಲಿಲ್ಲ. ಮತ್ತೆ ಮೈ ನಡುಗಿತು. ಆಗ ರಾಮಣ್ಣನ ಬರವನ್ನು ನಿರೀಕ್ಷಿಸುತ್ತ

ನಿದ್ದೆಯ ಸೋಗಿನಲ್ಲಿ ಮಲಗುತ್ತಿದ್ದ ಸುಖ ಎಲ್ಲಿ? ಈಗ ರಾಮಣ್ಣನು ಮಗ್ಗುಲಲ್ಲಿ ಬಂದನೆಂದರೆ ಯಾವಾಗ ಬೆಳಗಾದೀತೆಂದು, ಅಲ್ಲಿಯವರೆಗೆ ಬಾರದಂತೆ ನಿದ್ದೆಯನ್ನು ತಡೆಯುವ ದುಃಖ ಎಲ್ಲಿ? ಆದರೆ ಇಂದಿನ ದುಃಖದಲ್ಲಿ ಅಂದಿನ ಸುಖದ ಸವಿನೆನಹುಗಳು ಕುಮುದಳನ್ನು ಬಿಟ್ಟಿರಲಿಲ್ಲ. ಹಗಲೂ ಆ ಅನುಭವವನ್ನು ನೆನೆದರೆ ಅವಳ ಮೈ ಪುಲಕಿತವಾಗುತ್ತಿತ್ತು. ಕೈಗೆ ಕೈ ಸೋಂಕಿದ ಮೊದಲ ಅನುಭವವಂತೂ-! ಅದೊಂದು ಅನುಭವವನ್ನು ಪಡೆದಾಕ್ಷಣ ತಾನು ಸತ್ತಿದ್ದರೂ ತನ್ನ ಜನ್ಮ ಸಾರ್ಥಕವಾದಂತೆ ಎಂದು ಕುಮುದಳಿಗೆ ಎನ್ನಿಸುತ್ತಿತ್ತು. ಸಾವು-ಜೀವ! ಅದೊಂದು ಕ್ಷಣ ತಾನು ಜೀವದಿಂದಿರುವಳೆ ಇಲ್ಲವೆ ಎಂಬುದರ ಎಚ್ಚರ ಕೂಡ ಇದ್ದಿರಲಿಲ್ಲ. ಮೈ ಪುಲ-ಕಿತವಾಗಿತ್ತು, ತೊಡೆಗಳು ನಡುಗುತ್ತಿದ್ದುವು, ಎದೆ ಹಿಗ್ಗಿ ಹುಚ್ಚೆದ್ದು ಕುಣಿ-ದಾಡುವುದೇನೊ ಎನ್ನುವಂತೆ ಹಾರುತ್ತಿತ್ತು, ತುಟಿ ಕಂಪಿಸುತ್ತಿದ್ದುವು, ನಾಲಗೆ ಒಣಗಿದಂತಿದ್ದರೂ ಬಾಯಿಗೆ ನೀರೂರಿದಂತೆನ್ನಿಸಿತ್ತು; ಎಲ್ಲಕ್ಕೂ ಹೊಸತಾದ ಅನುಭವವೆಂದರೆ ಯಾವುದಕ್ಕಾಗಿ ತನಗೆ ವಿಶೇಷವಾಗಿ ಲಜ್ಜೆ ಎನ್ನಿಸುತ್ತಿತ್ತೊ-ಆ ಅಂಗಾಂಗವಿಶೇಷವಾದ ಎರಡೂ "ಎದೆ"ಗಳಲ್ಲಿ ಮಿಂಚಿದ ಒಂದು ಸುಖಕರವಾದ ವೇದನೆ. ಅಂದಿನಿಂದ ತಾನು ರಾಮಣ್ಣನ ಸೊತ್ತಾದಳು, ದೇಹದಿಂದಲ್ಲ, ಹೃದಯದಿಂದ. ಕೈಬೆರಳಿನ ಸೋಂಕಿನಿಂದಲೆ ಇಡಿಯ ದೇಹಕ್ಕೆ ಹೊಸ ಜೀವವನ್ನು ಕೊಟ್ಟವನಿಗೆ ಇಡಿಯ ದೇಹವನ್ನೆ ಅರ್ಪಿಸುವುದು ಕಠಿಣವಾಗಿರಲಿಲ್ಲ.

ಒಮ್ಮೊಮ್ಮೆ ಕುಮುದಳಿಗೆ ಆಶ್ಚರ್ಯವೆನ್ನಿಸುತ್ತಿತ್ತು. ಇದೆಲ್ಲ ನಡೆದು ಹೋದುದು ಹೇಗೆ? ಸರಲಕ್ಕನು ಹಾಸಿಗೆ ಹಿಡಿದು ನಿಷ್ಕ್ರಿಯಳಾಗಿದ್ದಳೆಂದೆ? ಇಲ್ಲವೆ ತಾನು ಈ ಮನೆಯಲ್ಲಿ ಇರಲು ಬಂದುದಕ್ಕಾಗಿಯೆ? ಇಲ್ಲವೆ ಕೇವಲ ಕೈ-ಕೈಗಳ ಸ್ಪರ್ಶದಿಂದ ಚಿಗುರಿತೆ? ಆದರೆ ಯಾವುದೋ ಅಕಲ್ಪಿತ ರೀತಿಯಿಂದ ತಾನು ಸರಲಕ್ಕನ ಮನೆಗೆ ಇರಲು ಬಂದುದು, ಅಷ್ಟೇ ಅಕಲ್ಪಿತವಾಗಿ ಸರಲಕ್ಕನು ಹಾಸಿಗೆ ಬಿಡದ ರೋಗಿಯಾಗುವುದು, ಕೈಗೆ ಕೈ ತಾಕುವ ಆಕಸ್ಮಿಕ ಘಟನೆ ನಡೆಯುವುದು—ಇಷ್ಟೆಲ್ಲ "ಆಕಸ್ಮಿಕ" ಸಂಗತಿಗಳು ಒಂದು ನಿಯತ ಗತಿಯಲ್ಲಿ ನಡೆದುವಲ್ಲ? ರಾಮಣ್ಣನು ಹೇಳಿದ ದುಷ್ಯಂತ ಶಕುಂತಲೆಯರ ಕತೆಯಂತೆ ತನ್ನದೂ ಕತೆ ಎಂದು ಕುಮುದಳು ನಂಬಿಕೊಂಡಿದ್ದಳು.

ರಾಜಧಾನಿಯ ಅರಸನೆಲ್ಲಿ ? ಅಡವಿಯ ಹುಡುಗೆಯಲ್ಲಿ ? ಕಣ್ವಋಷಿ ಆಶ್ರಮ-ದಲ್ಲಿ ಇಲ್ಲದ ದಿನವೆ ಆ ಅರಸನು ಅಲ್ಲಿ ಬರುವುದೇನು ? ಇದೆಲ್ಲ ನೋಡಿದರೆ ದುಷ್ಯಂತ-ಶಕುಂತಲೆಯರು ಕೂಡಿ ಬರುವುದು ದೈವದ ಎಣಿಕೆಯಾಗಿತ್ತೆಂದೇ ಹೇಳಬಹುದು. ಯಾರೂ ದಿಕ್ಕಿಲ್ಲದ ಅನಾಥೆಯಾದ ತನ್ನದೂ ದೈವದ ಎಣಿಕೆ ಯಾಕಾಗಿರಬಾರದು ? ತನ್ನ ಮತ್ತು ರಾಮಣ್ಣನಲ್ಲಿ ಪರಸ್ಪರ ಮತ್ತು ಸಹಜ ಪ್ರೇಮ ಅಂಕುರಿಸಬಾರದೇಕೆ ? ೧೫-೧೬ ವರ್ಷದ ಕುಮುದಳಿಗೆ ಇದು ಬಗೆಹರಿಯದ ವಿಚಾರವಾಗಿತ್ತು, ಆದರೂ ಆಕೆಯ ಮನಸ್ಸನ್ನು ಕಲಕುವ ವಿಚಾರವಾಗಿತ್ತು. ಕ್ರಮೇಣ ಅಂತಹ ಪ್ರೇಮ ತಮ್ಮಿಬ್ಬರಲ್ಲಿ ಊರಿದೆ ಎಂದು ಆಶೆ ನಂಬುಗೆಯಾಯಿತು, ನಂಬುಗೆಯಿಂದ ಆಶೆ ಪ್ರಜ್ವಲಿಸಿತು. ಕುಮುದಳ ಮೈ ಕ್ರಮೇಣ ಸೊರಗತೊಡಗಿತು, ಅವಳ ಮುಖದಲ್ಲಿ ಸದಾಕಾಲವೂ ಒಂದು ಅಲಕ್ಷ್ಯದ ಉದ್ವಿಗ್ನತೆಯ ಕಳೆ ಕಾಣುತ್ತಿತ್ತು. "ಪಾಪ ! ಹುಡುಗೆಗೆ ನನ್ನ ಜೋಡಿ ಮನೆ ಹಿಡಿದ್ಹಿಡಿದು ಸಾಕಾಗಿಹೋಗಿರಬೇಕು, ಮಾರಿಯ ಮ್ಯಾಲಿನ ಕಳೇನೇ ಹೋಗೇದ. ಎಂದಾದರೂ ಒಮ್ಮೆಯಾದರೂ ಹೊರಗೆ ಕರೆದು-ಕೊಂಡು ಹೋಗಿರಲ್ಲ" ಎಂದು ಸರಲಕ್ಕ ರಾಮಣ್ಣನಿಗೆ ಹೇಳಿದಾಗ ಕುಮುದಳು ಲಜ್ಜೆಯಿಂದ ನೆಲಕ್ಕೆ ಕುಸಿದಳು ; ರಾಮಣ್ಣನು ಉತ್ತರವನ್ನು ಕೊಡಲು ಯಾವ ಆತುರವನ್ನು ತೋರಿಸಲಿಲ್ಲ ಎಂಬುದನ್ನು ಕಂಡು ಕುಸಿದವಳು ಹಾಗೇ ನೆಲದಲ್ಲಿ ಕೆಳಗಿಳಿದಂತಾಯ್ತು ; ಕೊನೆಗೆ "ನೋಡೋಣ" ಎಂದಿಷ್ಟೆ ಎಂದಿದ್ದ ರಾಮಣ್ಣ.

ಮೊದಲ ಸಲ ರಾಮಣ್ಣನ ಜೊತೆಗೆ ತಿರುಗಾಡಿ ಬಂದದ್ದೂ ಮರೆಯದ ಮಾತೇ. ಅದಕಾಗಿ ತಾನೆಷ್ಟು ಉತ್ಸುಕಳಾಗಿದ್ದಳು ! ಆದರೇನು ? ಮನೆ-ಯಿಂದ ಹೊರಬಿದ್ದು ತಿರುಗಿ ಮನೆಯಲ್ಲಿ ಕಾಲಿಡುವವರಿಗೆ ಒಂದು ತುಟಿ ಎರಡಾಗಿರಲಿಲ್ಲ ತನ್ನದು ! "ಸರಲಾ, ನಿನ್ನ ಹುಡುಗೆ ಮೂಕ ಅದನೊ ಕಿವುಡ ಅದನೊ ? ನಿನಗ ಗೊತ್ತಿರಬೇಕಿಲ್ಲ ?" ಎಂದು ರಾಮಣ್ಣನು ನುಡಿದಾಗ ಮಾತ್ರ ತಾನು ಅಲ್ಲಿಂದ ಜಾರಿ ಹೋಗಿ ತನ್ನ ಕೋಣೆಯಲ್ಲಿ ಕುಳಿತದ್ದೂ, ಕುಳಿತೊಡನೆ ತಡೆಯದಂತಾಗಿ ಬಿಕ್ಕಿ ಬಿಕ್ಕಿ ಅತ್ತದ್ದೂ ಒಂದು ದೊಡ್ಡ ಕತೆಯೆ ಆಯಿತು. "ಆಕೆಯ ಬ್ಯಾಸರ ಕಳೀಲಿಕ್ಕೆ ಜೋಡಿ ಕರೆದುಕೊಂಡು ಹೋಗಿರಿ ಎಂದರೆ ಅಳಿಸಿಬಿಡೋದು ಹುಡುಗೇನ್ನ. ನಿಮ್ದು ಒಳ್ಳೇ ನಡತೆ !" ಎಂದು

ಸರಲಕ್ಕ ನುಡಿದದ್ದಕ್ಕೆ ನೊಂದ ರಾಮಣ್ಣ ತನ್ನ ಕೋಣೆಗೆ ಬಂದಿದ್ದ "ಎಲ! ಖರೇನೇ ಅಳತೀ ಏನು?" ಎಂದಿದ್ದ ತನ್ನ ಮುಖವನ್ನು ನೋಡಿ. ಬೆನ್ನು ಮೇಲೆ ಕಯ್ಯಾಡಿಸಿದ್ದ ಸಂತೈಸಲು. ಎಂತಹ ದುಃಖದ ಭಾರವನ್ನಾದರೂ ಹೊತ್ತೇನು ಎಂದು ಪುಲಕಿತವಾಗಿತ್ತು ತನ್ನ ಬೆನ್ನು. ಕಣ್ಣೀರು ಮಾತ್ರ ಮತ್ತೆ ತಟಕಿಕ್ಕಿತ್ತು. ಆಗ ರಾಮಣ್ಣ "ಕೆಳಗ ನಡೀ, ಕಣ್ಣೀರು ಒರಸಿಕೊ" ಎಂದು ಕಣ್ಣೀರನ್ನು ಒರೆಸಲು ತನ್ನ–ಕುಮುದಳ–ಸೆರಗನ್ನು ಮುಟ್ಟುವಾಗ ತಾನು ನಾಚಿಕೆಯಿಂದ ದೂರ ಸರಿಯಲು ಹೋದಳು–ಆಗ ಅವನ ಕೈ ಮತ್ತೆ ತಾಕಿತು–ಈ ಸಲ ತನ್ನ "ಎದೆ" ಗೆ! ಆಗ ಮಾತ್ರ ಕುಮುದಳ ಕಾಲ್ಗಳಲ್ಲಿಯ ತ್ರಾಣವೇ ಹೋದಂತಾಯಿತು. ಕೊನೆಗೆ-ಏನಾಯಿತೊ? ಮೂರ್ಛೆ ಬಂದಿತೊ, ಬರುವುದರಲ್ಲಿದ್ದಿತೊ–ಅದೂ ತಿಳಿಯಲಿಲ್ಲ. ಎಚ್ಚರ ಬಂದಂತಾದಾಗ ರಾಮಣ್ಣನು ತನ್ನನ್ನು ಮಂಚದ ಮೇಲೆ ಕುಳ್ಳಿರಿಸಿ, ತಾನೂ ಬದಿಯಲ್ಲಿ ಕುಳಿತು ಕೈಯಲ್ಲಿ ನೀರಿನ ಪಾತ್ರೆಯನ್ನು ಹಿಡಿದಿದ್ದ.

ಪಾಪ! ಸರಲಕ್ಕನದಾದರೂ ತಪ್ಪೇನು? ಕುಮುದಳ ಪ್ರಕೃತಿ ಸ್ವಸ್ಥವಿಲ್ಲ ಎಂಬುದೊಂದೇ ಕಾರಣಕ್ಕಾಗಿ ಆಕೆ ಕುಮುದಳನ್ನು ರಾಮಣ್ಣನ ಜೊತೆಗೆ ಹೊರಗೆ ಹೋಗಲು, ತಿರುಗಾಡಿ ಬರಲು, ಸಿನೀಮಾ ನೋಡಲು, ಪುಸ್ತಕವನ್ನು ಓದಲು ಪ್ರೋತ್ಸಾಹಿಸುತ್ತಿದ್ದಳು. "ನಾನೊಬ್ಬಾಕೆ ಹಾಸಿಗೆ ಹಿಡಿದೀನಿ ಅಂತ ನೀ ಯಾಕ ಮನೆಯ ಮೂಲೆ ಹಿಡಿದು ಬೆಳ್ಳಗಾಗ್ತೀ? ಒಂದು ತಾಸು ಹೀಂಗ ಅಡ್ಡಾಡಿ ಬಂದರಾಯಿತು. ನಾಯೇನು ಇಷ್ಟರಾಗೇ ಸಾಯ್ಲಿಕ್ಕೆ ಕೂತಿಲ್ಲ" ಎಂದು ಸರಲಕ್ಕ ಮೇಲಿಂದ ಮೇಲೆ ಹೇಳುತ್ತಿದ್ದಳು. ಅಂತೂ ಕುಮುದಳಿಗೆ ರಾಮಣ್ಣನ ಸಹವಾಸ ದೊರೆಯಿತು. ಅದರ ಲಾಭ ಮಾತ್ರ ದೊರೆಯಲಿಲ್ಲ. ಎಳೆಹರೆಯದ ಕುಮುದಳಿಗೆ ಯಾವುದೊ ಒಂದು ವ್ಯಥೆ ಎನ್ನಿಸುತ್ತಿತ್ತು. ಮೊದಮೊದಲು ರಾಮಣ್ಣನ ಸಾಮೀಪ್ಯವಿಲ್ಲದಿದ್ದರೆ ಕಳವಳಗೊಳ್ಳುವ ಕುಮುದಳಿಗೆ ಈಗ ರಾಮಣ್ಣನ ಸಹವಾಸದಿಂದಲೆ ಹೆಚ್ಚು ಕಳವಳವಾಗ-ತೊಡಗಿತು. ಒಮ್ಮೊಮ್ಮೆ ತಟ್ಟನೆ ಎದ್ದುಹೋಗಿ ಅವನ ಎರಡೂ ಗಲ್ಲಗಳನ್ನು ಗಟ್ಟಿಯಾಗಿ ಹಿಡಿಯಬೇಕು ಎಂದೆನ್ನಿಸುವುದು; ಒಮ್ಮೊಮ್ಮೆ ಆವನ–ಅಸ್ತವ್ಯಸ್ತವಾಗಿ ಹರಡಿ ಬೆಳೆದ – ತಲೆಗೂದಲನ್ನು ಸಾವರಿಸಬೇಕು ಎನ್ನಿಸು-ವುದು; ಎಷ್ಟೋ ಸಲ ಬರೆಯುವ ಅವನ ಕೈಯನ್ನು ಹಿಡಿದೆತ್ತಿ, ಆ ಕೈಯಿಂದ

ತನ್ನ ಕೆನ್ನೆಗೆ ಬಲವಾಗಿ ಏಟನ್ನು ಕೊಟ್ಟುಕೊಳ್ಳಬೇಕು ಎನ್ನಿಸುವುದು; ಹಾಗೆನ್ನಿಸಿದಾಗೆಲ್ಲ ಅತ್ಯಂತ ಸಂಕಟದಿಂದ ತನ್ನನ್ನು ತಡೆದುಕೊಳ್ಳುತ್ತಿದ್ದಳು. ಆಗಾಗ, ತಡೆದುಕೊಳ್ಳುವ ಯತ್ನಗಳಿಂದ ನಿರ್ವಿಣ್ಣಳಾಗುತ್ತಿದ್ದಳು.

ಒಂದು ದಿನ. ತಾನೂ ರಾಮಣ್ಣನೂ ಸರಲಕ್ಕನ ಬದಿಗೆ ಕುಳಿತಿದ್ದರು. ಕೆಲಹೊತ್ತಿನಮೇಲೆ ಸರಲಕ್ಕನು ನಿದ್ದೆ ಹೋದಳು. ಆಗ ರಾಮಣ್ಣನು ಕಳ್ಳದನಿಯಲ್ಲಿ "ಸದ್ದು ಮಾಡದೆ ನಮ್ಮ ಕೋಣೆಗೆ ಹೋಗೋಣ ನಡೀ" ಎಂದಿದ್ದ. ಸರಲಕ್ಕನ ನಿದ್ದೆಗೆ ಭಂಗ ಬರಬಾರದೆಂದು ರಾಮಣ್ಣನು ಹಾಗೆ ಮಾತಾಡಿದ್ದರೂ ಅಂದು ಆ ಕಳ್ಳದನಿಯನ್ನು ಕೇಳಿ ತನ್ನ ಮೈ ಜುಂ ಎಂದಿತ್ತು. ಎದ್ದಳು, ಹಾಗೇ ನಡೆದಳು, ರಾಮಣ್ಣನ ಹಿಂದಿನಿಂದ. ನೋಡಿದರೆ ಮೈಮರೆತು ತಾನೂ ರಾಮಣ್ಣನ ಕೋಣೆಗೇ ಬಂದಿದ್ದಾಳೆ! ರಾಮಣ್ಣನಿಗೂ ಆಶ್ಚರ್ಯ-ವಾಗಿರಬೇಕು.

"ಓದಲಿಕ್ಕೆ ಯಾವುದಾದರೂ ಪುಸ್ತಕ ಬೇಕಾಗಿತ್ತೇನು?" ಎಂದು ಕೇಳಿದ್ದ.

"ಹುಂ" ಎಂದು ತಾನು ಹೇಳಿದಳು.

"ಯಾವುದು ಬೇಕು, ನೋಡಿ ತೆಗೆದುಕೊ" ಎಂದ.

ಪುಸ್ತಕಗಳ ಕಪಾಟಿನ ಬಾಗಿಲನ್ನು ತೆಗೆದು ಕುಮುದಳು ನೋಡತೊಡಗಿದಳು. ನೋಡುವುದು ಇಡುವುದು, ಎತ್ತುವುದು ಇಡುವುದು-ಕುಮುದಳ ನಿರ್ಣಯ-ಬುದ್ಧಿಯೆ ಹೋಯಿತೇನೊ?

"ಯಾಕ? ಯಾವುದು ಸಿಗವಲ್ಲದೇನು?" ಎಂದ ರಾಮಣ್ಣ.

"ಯಾವುದು? ಏನು?" ಎಂದು ಹುಚ್ಚಳಂತೆ ಕುಮುದಳು ನುಡಿದಳು.

ರಾಮಣ್ಣ ನಕ್ಕ. "ನಾನೇ ನೋಡಿಕೊಡ್ತೇನಿ ಹಾಗಿದ್ದರ" ಎಂದು ರಾಮಣ್ಣ ಕಪಾಟಿನ ಹತ್ತಿರ ಬಂದ. ಕಪಾಟಿನ ಎರಡು ಬಾಗಿಲುಗಳ ನಡುವೆ ನಿಂತ ತಾನು ರಾಮಣ್ಣನಿಗಾಗಿ ಜಾಗೆ ಮಾಡಲು ದೂರ ಸರಿಯ-ಬೇಕಲ್ಲ? ಆದರೆ ಇಷ್ಟರಲ್ಲಿಯೇ ಅವನು ಹತ್ತಿರ ಬಂದುದರಿಂದ ಅವಳ ಕಾಲ್ಗಳ ಶಕ್ತಿ ಕುಗ್ಗಿದಂತಾಯಿತು. ಬದಿಗೆ ಸರಿಯದಾದಳು. ಹಿಂದೆ ನೋಡದಾದಳು. ಆದರೂ ರಾಮಣ್ಣನ ಬಿಸಿಯುಸಿರು ತನ್ನ ಭುಜಗಳನ್ನು ತಟ್ಟುತ್ತಿದೆ, ತನ್ನ ಹಿಂದೆಯೆ ನಿಂತಿದ್ದಾನೆ ರಾಮಣ್ಣ. ತೀರ ಹತ್ತಿರದಲ್ಲಿರು-

ವನೆ ? ತುಸು ಮುಗ್ಗುಲಿಗೆ ನಿಂತಿರುವನೆ ? ಎದುರು ತೆರೆದ ಕಣ್ಣಳಿಗೆ ಏನೂ ಕಾಣದಂತಾಗಿದೆ. ಹಿಂದೆ ಬಿಸಿಯುಸಿರು ಭುಜವನ್ನು-ಅಲ್ಲ, ಹೃದಯ ವನ್ನು-ಸುಡುತ್ತಿದೆ. ತಡೆಯುದಂತಾಯಿತು, ಉಸಿರುಗಟ್ಟಿದಂತಾಯಿತು. ಒಮ್ಮೆಲೆ ಮುಳುಗಿದವನು ಮೇಲಕ್ಕೆದ್ದು ಉಸಿರಿಡಲು ಹಾತೊರೆವಂತೆ ಚಡಪಡಿಕೆಯಿಂದ ಮುಖವನ್ನು ಪುಸ್ತಕಗಳಿಂದ ತಿರುಗಿಸಿದಳು.

"ಇದು ಬೇಕೇನು ?" ಎಂದ ರಾಮಣ್ಣ.

ತೆರೆದ ತನ್ನ ಬಾಯಿಯಿಂದ ಶಬ್ದಗಳೇ ಬರಲೊಲ್ಲವು. ಒಂದೇ ಸವನೆ ರಾಮಣ್ಣನನ್ನು ದಿಟ್ಟಿಸುತ್ತ ನಿಂತಳು. ರಾಮಣ್ಣ ಚಕಿತನಾದನೊ, ಗಾಬರಿ-ಯಾದನೊ ! ಅವನ ಮುಖಚರ್ಯೆಯೂ ಬದಲಾಯಿತು. ಅದು ಆಶ್ಚರ್ಯವೂ ಅಲ್ಲ, ಗಾಬರಿಯೂ ಅಲ್ಲ ಎಂದು ಕುಮುದಳಿಗೆ ತಿಳಿಯಲು ತಡವಾಗಲಿಲ್ಲ. ಯಾಕೆಂದರೆ ಇಷ್ಟರಲ್ಲಿಯೆ ರಾಮಣ್ಣನ ಕೈಗಳು ತನ್ನನ್ನು ಬಿಗಿದಿದ್ದುವು, ಮುಖವು ತನ್ನ ಮುಖವನ್ನು ಮುತ್ತಿತ್ತು. ಇದುವರೆಗೆ ಉಸಿರುಗಟ್ಟಿದಂತೆನ್ನಿಸಿದ ತನಗೆ ಈಗ ಉಸಿರುಗಟ್ಟಲು ಕಾರಣವಿದ್ದರೂ ಕುಮುದಳಿಗೆ ಜೀವ ಚೇತರಿಸಿಕೊಂಡಂತಾಗಿತ್ತು.

## ೩

ಬರೆಯುವಂತಿಲ್ಲ, ಮಲಗುವಂತಿಲ್ಲ ; ಇಷ್ಟೇಕೆ ? — ಅವೆರಡನ್ನೂ ನೆನೆದುಕೊಳ್ಳುವಂತಿಲ್ಲ. ಎಂದೊ—ಎಂದೊ—ಅದೆಲ್ಲ ಹಳೆಯ ಕತೆಯಾ-ದಂತಾಗಿದೆ. ನಿಜವಾಗಿ ನೋಡಿದರೆ, ಕೇವಲ ಮೂರೇ ವರ್ಷಗಳ ಮುಂಚಿನ ಅನುಭವ. ಆಗ ಬರೆಯುವುದೆಂದರೆ ಕೇವಲ ಒಳಗಿನ ಸ್ಫೂರ್ತಿಯದೊಂದೇ ವಿಷಯವಾಗಿರಲಿಲ್ಲ. ಒಂದು ಹೊಸ ಅಭ್ಯಾಸವೆ ಆದಂತಾಗಿತ್ತು. ಎಷ್ಟೋ ಸಲ, ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವಾಗ (ಯಾಕೆಂದರೆ ಅದಕ್ಕೂ ಒಳಗಿನ ಸ್ಫೂರ್ತಿಗೂ ಸಂಬಂಧವೆ ಇದ್ದಿರಲಿಲ್ಲ) — ಅಂತಹದನ್ನು ಬರೆಯಲು ಕೂಡ ಅವನಿಗೆ ಉತ್ಸಾಹವಿರುತ್ತಿದ್ದಿತು. ಯಾಕೆಂದು ಹೇಳಬೇಕೆ ? ಬರೆದು ಬರೆದು ಮೈ-ಮಿದುಳುಗಳು ಬರಿದಾಗಿ ದಣಿದು ಹಣ್ಣಾದಾಗ ಸರಲೆಯ ಮುಗ್ಗುಲಲ್ಲಿ ಮಲಗುವ ಸುಖದ ಆಸೆ ಇರುತ್ತಿದ್ದಿತು. ತಿನಿಸಿನ

ಆಸೆಗಾಗಿ ಹುಡುಗರಿಂದ ಕೆಲಸವನ್ನು ಮಾಡಿಸಿಕೊಳ್ಳುವಂತೆ ಈ ಆಸೆಗಾಗಿ ಅವನು ಬೇಕಾದ್ದನ್ನು ಬರೆಯಬಹುದಾಗಿತ್ತು. ಬರೆಯುವುದನ್ನು ಮುಗಿಸಿ, ಕುರ್ಚಿಯಿಂದೆದ್ದು, ರಾತ್ರಿ ಮತ್ತು ದಣಿವು ಎರಡೂ ಏರಿದ್ದಕ್ಕಾಗಿ ತುಸು ತತ್ತರಿಸುತ್ತ, ಒಂದೇ ನವನೆ ಲೇಖನದ ವಿಚಾರಗಳಲ್ಲಿ ತೊಡಗಿದ್ದಕ್ಕೆ ಶೂನ್ಯ ಮನಸ್ಕನಂತೆ ಪೆಚ್ಚಾಗಿ, ಒಂದು ಕೈಯನ್ನು ಮೆಲ್ಲಗೆ ಹಾಸಿಗೆಯ ಮೇಲೆ ಆಡಿಸಬೇಕೆಂದಾಗ (ಪಾಪ ! ನರಲೆ ಯಾವಾಗಲೋ ನಿದ್ರೆ ಹೋಗಿರಬೇಕಲ್ಲವೆ ?)

"ಬರೆಯೋದು ಮುಗೀತೇನು ? " — ಎಂದು ಅರೆನಿದ್ದೆಯ ಮಧುರ ಸ್ವರದಲ್ಲಿ ನರಲೆ ಕೇಳುವಳು. ಆಗ ಅವನ ಎಲ್ಲ ದಣಿವು ಹೋದಂತಾಗುವುದು. ಆವರಿಸಿದ ನಿದ್ದೆ ಜಾರಿಹೋಗುವಷ್ಟು ಸುಖವೆನ್ನಿಸುವುದು.

" ಬರೆಯೋದು ಮುಗೀತೇನು ? " ತನಗೆ ಜಾಗೆ ಮಾಡಲು ಮಲಗಿದಲ್ಲಿಯೆ ತುಸು ಸರಿಯುತ್ತ ನರಲೆ ಮತ್ತೊಮ್ಮೆ ಕೇಳುವಳು.

" ಹುಂ " ಎಂದು ತಾನು ದನಿಯನ್ನೆಳೆಯುವನು.

" ಗುಂಗು ಬಹಳ ಏರೇದೇನು ? "

" ಆಂ ? "

" ನನ್ನ ಮಾತು ಕೇಳಿಸಲೊಲ್ಲದು ? ಏನು ಇನ್ನೂ ಈ ಜಗತ್ತಿಗೇ ಇಳಿದಿಲ್ಲೊ ? "

" ಕೇಳಿಸಿತು. ಮುಗೀತು ಅನ್ನೋದಕ್ಕೇ ಹುಂ ಅಂದೆನಲ್ಲ ? " ಎಂದು ತಾನೂ ಕಾಲು ಚಾಚುತ್ತ ಹೇಳುವನು.

" ಕತೆ ರಂಗಿಗೆ ಬಂದಿದೆ ಏನು ? "

" ಕತೆ ಅಲ್ಲ, ಪತ್ರಿಕೆಗಾಗಿ ಲೇಖ. "

" ಅಯ್ಯ ! ಅದನ್ನ ಬರೀಲಿಕ್ಕೊ ಅಪರಾತ್ರಿ ತನಕ ಅಮಲು ಏರಿತೆ ನಿಮಗ ? "

" ಅಂಪರೆ ? ಅದೇ ನಿಜವಾದ ಬರೆಹ. ತಟ್ಟನೆ ದುಡ್ಡು ಸಿಗೋದು."

" ಹಂ—ದುಡ್ಡು ಯಾರಿಗೆ ಬೇಕಾಗೇದ "

" ಯಾರಿಗಂದ್ರ ? ನನಗ."

" ಅವ್ವಯ್ಯ – ಈ ಬುದ್ಧಿ ಎಂದಿನಿಂದ ಬಂದಿತು ? "

“ ನನಗ ಅಂದ್ರ – ನನ್ನ ಹೆಂಡಿರು ಮಕ್ಕಳಿಗೆ. ತಿಳೀತೇನು ?

“ ಅವರಿಗೆ ಬೇಕು ಅಂತ ನಿಮಗ ಯಾರು ಹೇಳಿದರು ? ”

“ ಯಾರು ಹೇಳಲಿಕ್ಕೆ ಬೇಕೇನು ? ಹೆಂಡಿರು ಮಕ್ಕಳಿಗೆ ಸುಖ ಸಿಗದಿದ್ದರ ಗಂಡ ಬರೆಯಬೇಕ್ಯಾಕ ? ಹೌದಂತೀಯೊ ಇಲ್ಲೊ ? ”

“ ಅಯ್ಯ ! ಹಾಂಗ ಬರೆಯೋದು ನಂನಿಂ ಕೈಯಾಗಿನ ಮಾತ ? ಅದನ್ನು ದೇವರೇ ಬರೆದು ಕಳಿಸಿರತಾನ – ಹುಟ್ಟಿನ ಜೋಡಿ, ಹಣೀ ಮ್ಯಾಲೆ.”

“ ಅಂದ್ರ. ಈಗ ನೀ ಸುಖದಿಂದಿದ್ದೀ ಅನ್ನು. ಹಂ ? ”

“ ಯಾಕಿರಬಾರದು ? ಬರೆಯೋದರಿಂದ ನಿಮಗ ಸುಖ ಅನ್ನಿಸ್ತದ, ನಿಂ ಸುಖ ಅಂದ್ರ ನಂ ಸುಖ.”

“ ಭಲೆ ! ಅಲ್ಲ – ಕೃಷ್ಣ ಅರ್ಜುನನಿಗೆ ಗೀತಾ ಹೇಳುವಾಗ ರಥದ ಕೆಳಗೆ ಅಡಗಿ ಕೂತಿದ್ದೇನು ? ಆಂ ? ಹಹ ! ”

ಈ ಮಾತಿಗೆ ಸರಲಾ ಆಕಳಿಸುವಳು.

“ ಸಾಕು, ನಿದ್ದೆ ಬಂದಿವೆ ಮಲಗಿರಿನ್ನು.” ಎನ್ನುತ್ತ ಆಕೆ ಸಾವರಿಸುತ್ತಿರುವಾಗಲೆ ರಾಮಣ್ಣನ ಗೊರಕೆಗೆ ಪ್ರಾರಂಭವಾಗಿರುವುದು. “ ಅಯ್ಯ ! ರಾತ್ರಿ ನಾ ಹಂಗೇ ಮಾತಾಡ್ತೀನಿ – ಇವರಿಗೆ ನಿದ್ದೇನೆ ಹತ್ತಿಬಿಟ್ಟದ ! ಯಾವಾಗೊ ಏನೊ ! ಮಲಗಿದವರ ನಿದ್ದೆ ಕೆಡಿಸೋದು, ತಾವು ಮಾತ್ರ ಗಡದ್ದ ಮಲಗೋದು.” ಎಂದು ಮರುದಿವಸ ಸರಲೆ ಮೂದಲಿಸಿ ಮಾತಾಡಿದಾಗಲಿ ರಾಮಣ್ಣನಿಗೆ ತನ್ನ ಸುಖದ ಕಲ್ಪನೆ ಬರುವುದು. ಎಷ್ಟೋ ಸಲ ಸರಲೆ ಹಂಗಿಸಿ ಮಾತನಾಡಿದಾಗ ತಾನೂ ಅವಳನ್ನು ಕೆಣಕುವನು, “ ನಿನಗ ರೂಢಿ ಮಾಡಿಕೊಡ್ತೀನಿ ” ಎನ್ನುವನು. ಆಗ ಸರಲೆ “ ಯಾತರ ರೂಢಿ ” ಎಂದು ಕೇಳಿದೊಡನೆ, “ ನಾಳೆ ಮಕ್ಕಳಾದರೆ ? ಈಗಿನಿಂದಲೆ ನಿದ್ದೆ ಕೆಡಿಸಿಕೊಳ್ಳೋ—” ಇಂತಹ ಮಾತು ಸಾಮಾನ್ಯವಾಗಿ ಮುಗಿಯುತ್ತಿರಲಿಲ್ಲ. ಸರಲೆ ಸರ್ರನೆ ಬಂದು ಹುಸಿ ಸಿಟ್ಟಿನಿಂದ ತನ್ನ ಬಾಯಿಯನ್ನು ಕೈಯಿಂದ ಗಟ್ಟಿಯಾಗಿ ಮುಚ್ಚುವಳು. ಬಾಯಿಯನ್ನು ಮುಚ್ಚಿದರೇನಾಯಿತು ? ಮಾತಿಗಿಂತ ಕೃತಿ ಮುಖ್ಯ ಎನ್ನುವವನಂತೆ ರಾಮಣ್ಣನು ಎರಡೂ ಕೈಗಳಿಂದ ಆಕೆಯನ್ನು ಬಿಗಿದೆಳೆದುಕೊಳ್ಳುತ್ತಿದ್ದ.

ಒಂದು ಸಲವಂತೂ ಸರಲೆಯೆ ತನ್ನ ಸಾಹಿತ್ಯಿಕ ತೊಡಕನ್ನು ಬಿಡಿಸಿದ್ದಳು. ಆಗ ತಾನೊಂದು ನಾಟಕವನ್ನು ಬರೆಯುತ್ತಿದ್ದ – ಉಹುಂ – ನಾಟಕವಲ್ಲ – ಆ ಸಲ – ಯಾವುದು ? — ಹಾಂ – " ಆದಿಮಾಯೆ " ಎಂಬ ಕಾದಂಬರಿಯನ್ನು ಬರೆಯುತ್ತಿದ್ದ ; ಮೂವ್ವರು ಅಣ್ಣ—ತಮ್ಮಂದಿರು, ನೆರೆಮನೆಯ ಹುಡುಗೆ ; ಎಲ್ಲರೂ ಕೂಡಿಯೆ ಬೆಳೆಯುವರು ; ಮುಂದೆ ತನ್ನ ಕತೆ ಆಧುನಿಕ ದ್ರೌಪದಿಯ ಕತೆಯಾಗುವುದು, ಸಮಾಜದಲ್ಲಿ ಅಲ್ಲೋಲ-ಕಲ್ಲೋಲಸನ್ನಿಬ್ಬಿಸುವುದು, ಎಂದು ತುಸು ಆಶ್ಚರ್ಯ ಮತ್ತು ತುಸು ಅಭಿಮಾನಗಳಿಂದಲಿ ಸರಲೆಯ ಮುಂದೆ ಕತೆಯನ್ನು ಹೇಳಿದ್ದ

" ಅಂಥಾಂಗ, ಬರೀಲಿಕ್ಕಾದ್ರೂ ಸುರೂ ಮಾಡ್ರಿ, ನೋಡೋಣ " ಎಂದಿದ್ದಳು.

" ಅಲ್ಲ, ನೋಡೋದೇನು ? ನನ್ನ life insure ಮಾಡಿಯೆ ಕಾದಂಬರಿಯನ್ನು ಪ್ರಕಟ ಮಾಡಬೇಕಾಗುವುದು " ಎಂದು ತಾನು ನಗೆಯಾಡಿದ್ದ.

" ಅಂಥಾದ್ದೇನದ ಅದರೊಳಗ ? "

" ಅಂಥಾದ್ದೇನಂದರ ? ಹುಟ್ಟಿದ ಮಕ್ಕಳು ಯಾರಿಗೆ ವಾರಸದಾರರು ?"

" ಆಂ ? . . ಅಯ್ಯ ! ತಗೀರಿ ! ನೀವೇನು ಕತ ಬರೀತೀರ್ಯೋ ಕ್ಲಬ್ಬಿನಾಗಿನ ಹರಟೆ ಹೊಡೀತೀರ್ಯೋ ? " ಎಂದಿದ್ದಳು.

ಅಲ್ಲಿಗೆ ಆ ಮಾತು ಮುಗಿದು ಕಾದಂಬರಿಯ ಲೇಖನ ಪ್ರಾರಂಭ ವಾಯಿತು. ರಾಮಣ್ಣ ತನ್ನ ಮನಸ್ಸಿನೊಳಗಿನ ಮೊದಲಿನ ವಿಚಾರದಂತೆಯೆ ಕತೆಯನ್ನು ಬೆಳೆಸಿದ. ಆದರೆ ಕೊನೆಕೊನೆಗೆ ಅವನಿಗೆ ಸಮಾಧಾನವಾಗಲಿಲ್ಲ. ಮೂವ್ವರ ಮೇಲೂ ಪ್ರೇಮವಿದ್ದ ಹುಡುಗೆಯ ಗತಿ ನಮ್ಮ – ಸಮಾಜದಲ್ಲಿ ಏನಾಗುವುದು ? ಒಂದು ವೇಳೆ ಕೊನೆಗೆ ಆಕೆ ಆತ್ಮಹತ್ಯೆಯನ್ನು ಮಾಡಿ-ಕೊಂಡರೆ, ದ್ರೌಪದಿಯ ಸಂಕೇತ ನಿರರ್ಥಕವಾಗುವುದು. ಆತ್ಮಹತ್ಯೆ ಮಾಡದೆ ಜೀವಂತ ಉಳಿದರೆ ಆಕೆಗೆ ಸಮಾಜದಲ್ಲಿ ಗೌರವದ ಸ್ಥಾನ ದೊರೆಯದು. ಹೀಗಾಗಿ ಕತೆಯನ್ನು ಹೇಗೆ ಮುಗಿಸಬೇಕೆಂಬುದೆ ರಾಮಣ್ಣನಿಗೆ ತಿಳಿಯದಾಯಿತು. ಕೊನೆಯ ಪುಟಗಳನ್ನು ಬರೆಯಲು ಯತ್ನಿಸಿದ, ಯಾವ ವಿಚಾರವೂ ಹೊಳೆಯಲೊಲ್ಲದು. ಮೂರು ನಾಲ್ಕು ತಾಸುಗಳವರೆಗೆ ತಲೆ

ತುರಿಸಿಕೊಂಡು ರಾತ್ರಿ ಎರಡು ಗಂಟೆಯ ಸುಮಾರಿಗೆ ನಿರುಪಾಯನಾಗಿ, ನಿರ್ವಿಣ್ಣನಾಗಿ ಮಲಗಲು ಸಜ್ಜಾದ.

"ಮುಗೀತೇನು ಬರೆಯೋದು ? "

ಯಾವಾಗಲೂ ಸಮಾಧಾನವನ್ನುಂಟುಮಾಡುವ ಸರಲೆಯ ಈ ವಾಕ್ಯದಿಂದ ಅಂದು ರಾಮಣ್ಣನಿಗೆ ಕೋಪ ಬಂದಿತು.

"ಹಂ – ಮುಗೀತದ ! ಅದೇನು ಅಡಿಗೆ ಅಂತ ತಿಳಿದೀಯೇನು, ಇಷ್ಟು ವ್ಯಾಳ್ಯಾ ಕುದಿಸಿದ ಮ್ಯಾಲೆ ಆಯಿತು ಅನ್ನಲಿಕ್ಕೆ ? "

"ಅಯ್ಯ ! ನನಗೇನು ಗೊತ್ತು ? ಕಡೀದಷ್ಟೆ ಉಳಿದದ, ಮುಗಿಸ್ತೀನಿ ಅದನ್ನ ಅಂದಿದ್ದಿರಿ, ಅದಕ್ಕ ಕೇಳಿದೆ " ಎಂದಳು ಸರಲೆ.

"ಕಡೀದಷ್ಟೆ ಅಂದ್ರೇನು ? ಎಲ್ಲಾ ಚಮತ್ಕೃತಿ ಇರೋದು ಕಡೆಯ ಪುಟಗಳೊಳಗೆ. ಅದಕ್ಕ ಬಹಳ ವಿಚಾರಮಾಡಿ ಬರೆಯಬೇಕಾಗುವುದು .... ಹುಂ ... ರಾತ್ರಿ ಬಹಳಾಗೇದ, ಮಲಗೋಣಿನ್ನು."

ಸರಲೆ ಆಕಳಿಸಿ ಮಾತನಾಡಿದಳು, "ನನಗೂ ನಿದ್ದೆ ಅದ ಕಣ್ಣೊಳಗ. ಆದರೂ ಕಡೆಗೆ ನಿಮ್ಮ ಕತೆಯೊಳಗಿನ ಹುಡುಗೆ ಏನ್ಮಾಡ್ತಾಳ ಅಂತ ಆತುರ ಇತ್ತು, ನೀವೂ ಮುಗಿಸಿ ಬಂದಿರಿ ಅಂತ ತಿಳಿದೆ, ಕೇಳಿದೆ."

ರಾಮಣ್ಣನಿಗೆ ತಡೆಯದಂತಾಯಿತು. " ಅದನ್ನಷ್ಟು ಕೇಳಿದರೇನೆ ನಿನಗ ನಿದ್ದೆ ಬರೋದೇನು ? ಕೇಳು ಹಾಂಗಾದರ. ಕಡೆಗೆ ವಿಷ ತಗೊಂಡು ಸಾಯ್ತಾಳ ಆಕೆ " ಎಂದ.

"ಆಂ ? ಅಯ್ಯ ! ಸುಮ್ಮನುಮ್ಮನೆ ಹೋಯಿತಲ್ಲ ಒಂದು ಒಳ್ಳೇ ಜೀವನ ! "

ರಾಮಣ್ಣನಿಗೆ ಆಶ್ಚರ್ಯವಾಯಿತು. ಸರಲೆಯ ದನಿಯಿಂದ ಆಕೆಯ ಕಣ್ಣಿಗೆ ನೀರು ದೂರ ಇಲ್ಲ ಎಂದೆನ್ನಿಸುವಂತಿತ್ತು.

"ಕತೆಯೊಳಗಿನ ಹುಡುಗೆ. ಇದ್ದರೇನು ? ಸತ್ತರೇನು ? " ಎಂದು ಮಾತು ಮುಗಿಸುವ ನಗೆಯಿಂದ ನುಡಿದ.

"ಕತೆಯೊಳಗಿನ ಹುಡುಗೆ ಆದರೇನಾಯಿತು ? ಸುಮ್ಮ ಸುಮ್ಮನೆ ಯಾಕ ಸಾಯಬೇಕು ? ಒಂದು ಜಡ್ಡಿಲ್ಲ, ಒಂದು ಜಾವತ್ರಿಲ್ಲ — "

ರಾಮಣ್ಣ ಆಕಳಿಸಿದ, ತುಸು ಬೇಸರದ ದನಿಯಲ್ಲಿಯೆ ಹೇಳಿದ, "ಪಾಪ ಮಾಡಿದ್ದಳು, ಅದಕ್ಕ ಸತ್ತಳು."

"ಪಾಪ ಮಾಡಿದ್ದಳು? ನನಗೇನು ಗೊತ್ತು? ನೀವು ನನಗ ಕತಿ ಹೇಳುವಾಗ ಆಕೆ ಪಾಪ ಮಾಡಿದ್ದು ಹೇಳಿದ್ದಿಲ್ಲ."

ರಾಮಣ್ಣನ ನಿದ್ರೆ ಹೋದಂತಾಯಿತು, ಎದ್ದು ಕುಳಿತ, ತುಸು ಸಿಡುಕಿನ ದನಿಯಿಂದಲೆ ಹೇಳಿದ " ಮೂವರ ಜೋಡಿ ಪ್ರೇಮ ಮಾಡಿದರ ಪಾಪ ಅಲ್ಲ?"

"ಏನಂದಿರಿ? ಪ್ರೇಮಕ್ಕಾಗಿ ಹುಟ್ಟಿದ ಹೆಣ್ಣು ಪ್ರೇಮ ಮಾಡಿದರ ಪಾಪ?"

"ಅಂದ್ರೇನು? ಒಬ್ಬನ ಕೂಡ ಇದ್ದರೆ ಮದುವೆ, ಒಬ್ಬನಿಗಿಂತ ಹೆಚ್ಚಾದರೆ ವ್ಯಭಿಚಾರ ಅಲ್ಲ? ವ್ಯಭಿಚಾರ ಪಾಪ ಅಲ್ಲ?" ಹೆಂಡತಿಯ ದಡ್ಡತನಕ್ಕಾಗಿ ರಾಮಣ್ಣ ತಿರಸ್ಕಾರದ ಉಸಿರೆಳೆದ.

"ಅಂದ್ರೇನು? ವ್ಯಭಿಚಾರ ಮಾಡದೆ ಪ್ರೇಮ ಮಾಡ್ಲಿಕ್ಕೆ ಬರೋದಿಲ್ಲ ಅಂತೀರೇನು?"

"ನಿನಗೇನು ತಿಳೀತದ ಬಿಡು ಅದೆಲ್ಲ!"

"ಗಂಡಸಿಗೆ ಪ್ರೇಮನೂ ಒಂದೇ, ವ್ಯಭಿಚಾರನೂ ಒಂದೇ ಅಂತ ಅನ್ನಿಸುತ್ತಿದ್ದರ ನನ್ನಂಥಾ ಹೆಂಗಸಿಗೆ ಅದು ಹ್ಯಾಂಗ ತಿಳೀಬೇಕು?" ಎಂದಿದ್ದಳು.

ರಾಮಣ್ಣನಿಗೆ ಸಿಟ್ಟು ಬಂದಿತ್ತು, ನಿದ್ರೆಯೂ ಬಂದಿತ್ತು. ದೊಡ್ಡ-ದೊಂದು ಆಕಳಿಕೆಯಿಂದ ತನ್ನ ಅಸಹಕಾರವನ್ನು ಸ್ಪಷ್ಟಮಾಡಿ ಮಾತನಾಡದೆ ಮಲಗಿಬಿಟ್ಟ.

ಆದರೆ ಆ ರಾತ್ರಿ ನಿದ್ದೆ ಬರಲಿಲ್ಲ; ಪ್ರೇಮ ಬೇರೆ, ವ್ಯಭಿಚಾರ ಬೇರೆ ಎಂಬ ಮಾತಿನಲ್ಲಿ ಯಾವುದೋ ದೊಡ್ಡ ತತ್ತ್ವ ಅಡಕವಾಗಿದ್ದಂತೆ ತೋರ ಹತ್ತಿತು ಅವನಿಗೆ. ತನ್ನ ಕತೆಗೆ ಆ ತತ್ತ್ವವನ್ನು ಅನ್ವಯಿಸಿ ನೋಡಬೇಕೆಂಬ ವಿಚಾರ ಹೊಳೆಯಿತು. ಬೆಳಗಾಗುವ ವರೆಗೆ ವಿಚಾರಮಗ್ನನಾಗಿದ್ದ. ಎದ್ದೊಡನೆ ಚಹ ಕುಡಿದು, ಸರಲೆಯ ಕೂಡ ಮಾತನಾಡದೆ ಕೋಣೆಯನ್ನು ಹೊಕ್ಕು, ಬರೆಯಲು ಪ್ರಾರಂಭಿಸಿದ; ಕ್ರಮೇಣ ಇಡಿಯ ಕತೆಯನ್ನೆ

ಬದಲಾಯಿಸಿದ. ಆದರೆ ಎಂಟು ದಿನಗಳ ವರೆಗೆ ಸರಲೆಯು ಕೂಡ ಹೆಚ್ಚಾದ ಮಾತು ಆಡಿರಲಿಲ್ಲ. ಆಕೆಯ ಮನಸ್ಸೂ ತುಸು ನೊಂದುಕೊಂಡಂತಿತ್ತು. ಕೊನೆಗೊಮ್ಮೆ ಬದಲಾದ ಕಾದಂಬರಿ ಮುಗಿಯಿತು. ಮುಗಿದೊಡನೆ ಸರಲೆಯು ಕಡೆ ಬಂದ.

"ಆ ಕಾದಂಬರಿ ಮುಗೀತು ನೋಡು, ಸರಲಾ" ಎಂದ.

ಆಕೆ ಮಾತನಾಡಲಿಲ್ಲ.

"ಹ್ಯಾಂಗ ಮುಗೀತದ ಅನ್ನೋದನ್ನ ನೋಡೋ ಆತುರ ಅದ ಅಂದಿದ್ದಿ ಅಂತ ಅದನ್ನ ಮುಗಿಸಿದ ಕೂಡಲೆ ಹೇಳಲಿಕ್ಕೆ ಬಂದರೆ – " ಎಂದು ತಪ್ಪಿಲ್ಲದೆ ದಂಡಿಸಲ್ಪಟ್ಟ ಹುಡುಗನಂತೆ ದನಿಯನ್ನೆಳೆದ.

"ನನಗೇನ್ಮಾಡೋದು ? ಕಾಲೇಜದ ಕಟ್ಟೆ ಹತ್ತಲಾರದ ಹೆಂಗಸು ನಾನು. ಅಂಥಂಥಾ ದೊಡ್ಡ ಪುಸ್ತಕದ ಪರೀಕ್ಷಾ ನನಗೇನಾದೀತು ? "

"ಅಂದ್ರ? ನಾಯೇನು ಕಾದಂಬರೀನೇ ನಿನಗ ಓದಿ ತೋರಿಸಲಿಕ್ಕೆ ಬಂದೀನಿ ಅಂತ ತಿಳಿದಿ ಏನು ? "

"ಇಲ್ಲದಿದ್ದರ ನನಗ ಯಾಕ ಹೇಳಲಿಕ್ಕೆ ಬಂದಿರಿ ? "

"ಕಾದಂಬರಿ ಮುಗಿದಿದೆ. ಅದು ನಿನಗ ತಿಳಿಯೋದೇ ಇಲ್ಲ –" ಕೊಂಕು ನಗೆಯಿಂದ, "ನಾನೂ ಅದನ್ನ ನಿನಗ ಓದಿ ತೋರಿಸೋದೇ ಇಲ್ಲ. ಮುನ್ನುಡಿ ಬರೆದೀನಿ, ಅದನ್ನು ಕೇಳು ಅಂದೆ."

"ಮುನ್ನುಡಿ ? ನನ್ದೇನು ಸಂಬಂಧ ?"

"ಅದನ್ನೆ ಕೇಳು ಅಂದೆ." ಎಂದು ಓದಲು ಪ್ರಾರಂಭಿಸಿದ. ಪ್ರಾಸ್ತಾವಿಕವಾದ ಆಭಾರಮನ್ನಣೆಯ ತರುವಾಯ ಮುನ್ನುಡಿಯ ಕೊನೆಗೆ ಹೀಗೆ ಬರೆದಿದ್ದ. "ಈ ಕತೆ ಈಗ ಪ್ರಕಟವಾಗುತ್ತಿರುವ ರೂಪದ ಎಲ್ಲ ಶ್ರೇಯಸ್ಸು ಇನ್ನೊಬ್ಬರದಿದೆ. ಮೊದಲೊಮ್ಮೆ ನಾನು ಬೇರೊಂದು ರೀತಿಯಲ್ಲಿ ಬರೆದು ಮುಗಿಸಲು ಅಸಮರ್ಥನಾದಾಗ ಆ ಇನ್ನೊಬ್ಬರು ನನಗೆ ಈ ರೀತಿ ಬದಲಾಯಿಸಿ ಬರೆಯಲು ಹೇಳಿದರು. ಹಾಗೆ ಬರೆದಿದ್ದೇನೆ. ನನಗಂತೂ ಸಮಾಧಾನವಾಗಿದೆ. ಆದುದರಿಂದ ಕೊನೆಯದಾಗಿ ಅವರಿಗೆ – ಎಂದರೆ ನನ್ನ ಸುಖದುಃಖದ ಪಾಲುಗಾರ್ತಿಯಾದ, ನನ್ನ ಕುಂದುಕೊರತೆಗಳನ್ನು

ಸಹನೆಯಿಂದ ಸರಿಪಡಿಸಿ ನನ್ನನ್ನು ಹಾದಿಗೆ ಹಚ್ಚಲು ಕೈಹಿಡಿದಳೇನೋ ಎನ್ನುವಂಥವಳಾದ ನನ್ನ ಸಹಧರ್ಮಚಾರಿಣಿಯಾದ—"

ಆಭಾರ ಮನ್ನಿಸಿದ್ದನ್ನು ಓದಲು ಸರಲೆ ಅವಕಾಶವನ್ನೆ ಕೊಡಲಿಲ್ಲ. "ಎಲ್ಲಿ ಅದ ತರ್ರಿ ಅದನ್ನ. ಇದೇನು ಹುಚ್ಚುಚ್ಚಾರ!" ಎಂದು ಕಾಗದವನ್ನು ಸೆಳೆಯಲು ಯತ್ನಿಸಿದಾಗ ಅದೇ ಕೈಯನ್ನು ಹಿಡಿದ ರಾಮಣ್ಣನು ಅವಳನ್ನು ಸೆಳೆದಪ್ಪಿಕೊಂಡ.

ಹಿಂದಿನ ಇಂತಹ ನೆನಹುಗಳೆಲ್ಲ ಒಂದನ್ನೊಂದು ನೂಕುತ್ತ ಕಾಣಿಸಿಕೊಳ್ಳುತ್ತಲಿವೆ. ಯಾಕೊ? ರಾಮಣ್ಣನು ಸರಲೆಯ ಭಾವಪಟವನ್ನು ದಿಟ್ಟಿಸುತ್ತಾನೆ, ಆಕೆಯಿಂದ ಉತ್ತರ ಬರಬಹುದೇನೊ ಎಂಬಂತೆ. ದಿಟ್ಟಿಸುತ್ತಿದ್ದಂತೆಯೆ ಏನೊ ಹೊಳೆದು ಮುಗುಳ್ನಗೆಯಿಂದ ಅವನ ಮುಖವು ಮೆಲ್ಲನೆ ಅರಳುತ್ತಲಿದೆ. ಭಾವಪಟವನ್ನು ನೋಡಿದಂತೆ ಅದರ ಮೂಲವಾದ ಫೋಟೋದ ನೆನವಾಗುವುದು. ಫೋಟೊ ತೆಗೆಸುವುದೆಂದರೆ ಸರಲೆಗೆ ಪ್ರಾಣಸಂಕಟ. ಯಾವಾಗಲೂ ನಗೆಮೊಗದಿಂದ ಇರುತ್ತಿದ್ದರೂ ಎದುರು ಕ್ಯಾಮರಾ ನಿಂತರೆ ಹೆದರಿದಂತೆ ಪೆಚ್ಚಾಗುತ್ತಿದ್ದಳು. ಆ ಹೆದರಿಕೆ ತೋರಗೊಡಬಾರದೆಂಬ ಹಟದಿಂದ ಮುಖದಲ್ಲಿ ಗಂಭೀರ ಕಳೆಯನ್ನು ತರಲು ಯತ್ನಿಸುತ್ತಿದ್ದಳು. ಸಹಜವಾಗಿ ಆವರಿಸಿದ ಪೆಚ್ಚು ಕಳೆ, ಪ್ರಯತ್ನದಿಂದಲೂ ಸಾಧ್ಯವಾಗದ ಕೃತ್ರಿಮ ಧೈರ್ಯದ ಕಳೆ — ಇವೆರಡರ ಬೆರಕೆಯಿಂದ ಬೇರೊಂದು ಕಳೆಯೆ ಮೂಡುತ್ತಿತ್ತು. ಅದನ್ನೆ ಭಾವಪಟದಲ್ಲಿ ನೋಡುವಾಗ ಈಗಲೂ ರಾಮಣ್ಣನಿಗೆ ನಗೆ ಬಾರದಿರಲಿಲ್ಲ ಆ ಕಳೆಯಿಂದ ಸರಲೆಯು ಒಂದು ಕೂಸಿನಂತೆ ಮುಗ್ಧಳಾಗಿ ತೋರುತ್ತಿದ್ದಳು. ಆದರೂ ಸರಲೆಯ ಮುಖದ ನಿಜವಾದ ಕಾಂತಿ ರಾಮಣ್ಣನ ಸ್ಮೃತಿಯು ಮುಂದೆ ನಿಲ್ಲದೆ ಹೋಗಲಿಲ್ಲ. ಆ ಕಾಂತಿಯಿಂದ ಆಕೆ – ಸರ್ವಾಂಗ ಸುಂದರಳಲ್ಲದಿದ್ದರೂ – ನೋಡಲು ಮುದ್ದಾಗಿ ಕಾಣುತ್ತಿದ್ದಳು. ಮಾತನಾಡುವಾಗ ತುಟಿಗಳನ್ನು ತುಸು ಮುಂದೆ ಚಾಚುವ ರೂಢಿ ಇದ್ದಿತು. "ಯಾವಾಗಲೂ ಒಲೆಯ ಮುಂದೆ ಕೂತು ಊದಿ ಊದಿ ನಿನ್ನ ತುಟಿಗಳಿಗೆ ಅದೇ ಆಕಾರ ಶಾಶ್ವತವಾಗಿ ಬಂದುಬಿಟ್ಟಿತೇನೋ!" ಎಂದು ಅನೇಕ ಸಲ ರಾಮಣ್ಣ ನಗೆಯಾಡಿದ್ದ. ಮಾತು ನಗೆಗಾಗಿ ಇದ್ದರೂ ಆಕೆಯ ಮುದ್ದು ಮಾಟ ಮಾತ್ರ – ಮಾತಾಡು-

ವಾಗಲಂತೂ – ಹೆಚ್ಚು ಸ್ಪೃಹಣೀಯವೆನಿಸುತ್ತಿತ್ತು. ರಾತ್ರಿ ಮಲಗಿದಲ್ಲಿ ಮಾತಾಡುವಾಗ – ಬೆಳಕಿಲ್ಲದಿದ್ದರೂ – ಅದೇ ಚಿತ್ರ ರಾಮಣ್ಣನ ಎದುರು ನಿಲ್ಲುತ್ತಿತ್ತು. ಅದಕ್ಕಾಗಿಯೂ ಅವಳ ಮಾತುಗಳಿಂದ ತನಗೆ ಸಮಾಧಾನ-ವಾಗುತ್ತಿತ್ತೇನೊ ;

ರಾಮಣ್ಣ ಉಸಿರೆಳೆದ. ಎಷ್ಟೊಂದು ನೆನಪುಗಳನ್ನು ತಂದುಕೊಳ್ಳು-ವುದು ? ಅಲ್ಲ – ತಾನು ತಂದುಕೊಂಡಿಲ್ಲ ತಾವಾಗಿಯೆ ಏಳುತ್ತಿವೆ. ಯಾವ ಮಾತಿಗಾದರೂ ಆಕೆಯ ನೆನಪು ತಪ್ಪದಾಗಿದೆ. ಆಕೆಯ ಮಾತು, ಮುನಿಸು, ಮುಖಚರ್ಯೆ, ನಗೆ – ಇವೆಲ್ಲ —. ರಾಮಣ್ಣನು ತಡೆದನು. ಅವನ ಅಂತರಂಗ ಹಗುರಾದಂತಾಯಿತು. ಏನೊ ಒಂದು ವಿಚಾರ ಹೊಳೆದಿದೆ, ಅಲ್ಲ – ಹೊಳೆಯುತ್ತಲಿದೆ. ತಟ್ಟನೆ ಹೊಳೆವರೆ ಬರೆಯುವ ಮನಸ್ಸಾದರೂ ಆಗಬಹುದು, ಬೇಸರ ಕಳೆಯಬಹದು, ಎಂದು ಆ ಒಳಗಿನ ವಿಚಾರವನ್ನು ಹುಡುಕಿ–ಹೊರಗೆಳೆಯುವುದಕ್ಕಾಗಿ ಎಂಬಂತೆ ಕಣ್ಣುಗಳನ್ನು ಒಂದು ನಿಮಿಷ ಮುಚ್ಚಿಕೊಂಡನು, ಕೂಡಲೆ ತೆರೆದನು. ವಿಚಾರ ಹೊಳೆಯಿತು. ಆಶ್ಚರ್ಯ-ವನ್ನುಂಟುಮಾಡುವಂತಹ ವಿಚಾರ. ಸರಲೆಯ ನೆನಪುಗಳೆಂದರೆ ಯಾವಾ-ಗಲೂ ಆಕೆಯ ಮಾತು, ಆಕೆಯ ಮುನಿಸು, ಆಕೆಯ ಮುಖಚರ್ಯೆ, ಆಕೆಯ ನಗೆ–ಇವುಗಳ ನೆನಪೇ. ಆರು ವರ್ಷಗಳ ಸರಸ ದಾಂಪತ್ಯ ಜೀವನವನ್ನು ಆಕೆಯ ಒಡನೆ ಕಳೆದಿದ್ದರೂ ಒಮ್ಮೆ ಕೂಡ ಆ ರೀತಿಯಲ್ಲಿ ಸರಲೆಯ ನೆನಪು ಬಂದಿರಲಿಲ್ಲವಲ್ಲ ? ಹಾಗಿದ್ದರೂ ಬಂದ ನೆನಪಿನಿಂದ ತನಗೆ ಸಮಾಧಾನವೆ ಆಗುತ್ತಿದೆ. ಆದರೆ – ಅದೇ ತನಗೆ ಕುಮುದಳ ಬಗ್ಗೆ ವಿಚಾರ ಬಂದರೆ ಬೇರೆ ಸಂದರ್ಭದ ವಿಚಾರವೆ ಇಲ್ಲ. ಸರಲೆ ತನಗೆ ಸ್ಫೂರ್ತಿಯ ಹೆಣ್ಣಾಗಿ-ಗಿದ್ದರೆ, ಕುಮುದಳು ತನ್ನ ಸಂಭೋಗದ ಹೆಣ್ಣಾಗಿರುವಳೆ ? ಛೆ ! ಇದೆಂತಹ ವಿಚಾರ ! ನಿಜವಿಲ್ಲದಿದ್ದರೆ – "ನಿಜವಿಲ್ಲದಿದ್ದರೆ" ಎಂಬುದು ಬರಿಯ ಮಾತಿನ ರೀತಿ ಎಂಬುದು ರಾಮಣ್ಣನಿಗೆ ತಟ್ಟನೆ ಹೊಳೆಯಿತು. ಮೂರು ವರ್ಷಗ ಳಿಂದಲೂ ವಸ್ತುಸ್ಥಿತಿಯಾದ ಮಾತು ನಿಜವಲ್ಲ ಎನ್ನುವುದು ಹುಚ್ಚುತನ ವಾಗುವುದು. ಆ ಮಾತು ನಿಜ. ಹಾಗಿದ್ದರೆ ಸರಲೆಗೆ ತಾನು ದ್ರೋಹಿಯೆ ? ಸರಲೆಗಾಗಿ ತನ್ನಲ್ಲಿ ಪ್ರೇಮವಿದ್ದಿಲ್ಲವೆ ? ಭಾವ ಪಟವನ್ನು ದಿಟ್ಟಿಸಿದ. "ಪ್ರೇಮ ಬೇರೆ, ವ್ಯಭಿಚಾರ ಬೇರೆ" ಎಂದಂತಾಯಿತು ಸರಲೆ. ಅಹುದು, ಆಕೆಯ

ತುಟಿಗಳು ಕೂಡ ದುಂಡಾಗಿ ಮುಂದೆ ಬಂದಂತೆ ಕಂಡಿತು. "ಸರಲೇ, ನನ್ನ ಕತೆಗಳ ತೊಡಕನ್ನು ಬಿಡಿಸಬೇಕೆಂದು ನನಗೆ ಈ ಸಮಾಧಾನದ ಮಾತನ್ನು ಹೇಳುತ್ತಿರುವೆಯಾ?" ಎಂದು ಭಾವಪಟಕ್ಕೆ ಕೇಳಿ ಉತ್ತರವನ್ನು ಅಪೇಕ್ಷಿಸುವವನಂತೆ ದಿಟ್ಟಿಸುತ್ತ ಕುಳಿತನು.

## ೬

ನಿಜವಿದ್ದ ಮಾತೆಂದರೆ ಈ ರಾತ್ರಿ ಸಿನಿಮಾಕ್ಕೆ ಹೋಗಬೇಕೆಂದು ಕುಮುದಳ ಮನಸ್ಸಿನಲ್ಲಿದ್ದಿತು. ಎರಡು ದಿನಗಳಿಂದಲೂ ಈ ಸಂಧಿಯನ್ನು ನಿರೀಕ್ಷಿಸುತ್ತ ಕುಳಿತಿದ್ದಳು. ಎರಡು ದಿನಗಳ ಹಿಂದೆಯೆ ಹೋಗುವ ಆಸೆ-ಯಾಗಿದ್ದಿತು, ಬಾಯಿಬಿಟ್ಟು ರಾಮಣ್ಣನ ಮುಂದೆ ಆಡಿಯೂ ಇದ್ದಳು, ಆದರೆ ಅವನು "ನಡೆ" ಎನ್ನುವುದರ ಬದಲು "ನೋಡೋಣ" ಎಂದಿದ್ದ. ಮನಸ್ಸು ತುಸು ನೊಂದಿತ್ತು. ಆದರೂ ಸರಲಕ್ಕನು ತೀರಿ ಇನ್ನೂ ಮೂರು ತಿಂಗಳಾಗಿದೆ, ರಾಮಣ್ಣನಿಗಾದರೂ ಸಂಕೋಚವಿರಬಹುದು ಎಂದುಕೊಂಡು ಒತ್ತಾಯ ಪಡಿಸಿರಲಿಲ್ಲ. ಈ ಸಂಜೆ ಬೇಗ ಅಡಿಗೆ ಊಟಗಳನ್ನು ಮುಗಿಸಿದ್ದೂ ಅದೇ ಆಸೆಯಿಂದ. ಆದರೆ ರಾಮಣ್ಣನ ಬಾಯಿಯಿಂದ ಮಾತ್ರ ಆ ಸೂಚನೆಯೆ ಬರಲೊಲ್ಲದು. ಮತ್ತೆ ತಾನೇ ಕೇಳಬೇಕೆ? ದಿನಾಲು ಹೀಗೆ ಬಾಯ್ಬಿಡುವುದು ಒಳಿತೆ? ಆದರೆ ಮನಸ್ಸು ತಡೆಯ-ಲೊಲ್ಲದು. ಸುತ್ತುಸುತ್ತಾಗಿ ಏನನ್ನೊ ಅಂದಳು. ರಾಮಣ್ಣನು ಲಕ್ಷ್ಯ ವಿಲ್ಲದವನಂತೆ ನಟಿಸಿದ. ಕೊನೆಗೆ ಬೇಸರದ ಉಸಿರೆಳೆದಳು. ಆಗ ಮಾತ್ರ ರಾಮಣ್ಣ "ಸಿನಿಮಾಕ್ಕೆ ಹೋಗೋಣವೆ?" ಎಂದ. ಆದರೆ ಅವನು ಕೇಳಿದ ರೀತಿ, ಅವನ ಮಾತಿನ ದನಿ, ಬಿಗಿದ ಮುಖಚರ್ಯೆ, ಬೇಸರದ ನಿಟ್ಟುಸಿರು — ಇದನ್ನೆಲ್ಲ ನೋಡಿ ತನಗೆ ಅಸಹ್ಯವೆನಿಸಿತು. ತಾನೂ ಉತ್ಸಾಹವನ್ನು ತೋರಗೊಡದೆ, ನಿರಾಶೆಗೆ ಅವಕಾಶ ದೊರೆಯದಂತೆ "ಹುಂ" ಎಂದು ಉಸಿರೆಳೆದಳು. ಆಗ "ಹಾಗಾದರೆ ನಡೆ" ಎಂದಿಷ್ಟೆ ರಾಮಣ್ಣನು ನುಡಿದಿದ್ದರೆ ತಾನು ಎಲ್ಲವನ್ನೂ ನುಂಗಿಕೊಂಡು ಪುಟಿದೇಳುತ್ತಿದ್ದಳು. ಆದರೇನು? "ಸಿನಿಮಾಕ್ಕೆ — ಅಲ್ಲ — ಅಂದ್ರೆ ಎಲ್ಲಿಯಾದರೂ ಹೊರಗೆ ಹೋಗೋಣವೆ?" ಎಂದ! ಕೇವಲ ತನ್ನ ಕಾಟವನ್ನು ತಪ್ಪಿಸಿಕೊಳ್ಳಲು ರಾಮಣ್ಣನು ಮನೆಬಿಟ್ಟು

ಹೊರಡಲು ಸಿದ್ಧನಾಗಿದ್ದಾನೆ ಎಂಬುದು ಆಗ ತನಗೆ ಸ್ಪಷ್ಟವಾಯಿತು. ಆಮೇಲೆ ತನಗೂ ಸಿಟ್ಟು – ನಿರಾಸೆ – ಅವಮಾನ ಎಲ್ಲವೂ ಎನ್ನಿಸಿತು. ತುಸು ತಿರಸ್ಕಾರವೂ ಎನ್ನಿಸಿತು. ದನಿಯಿಂದ ಇದೆಲ್ಲ ಹೊರಬಿದ್ದೀತೆಂದು ಹೆದರಿ ಈ ಸಲ ತಾನು ಉತ್ತರವನ್ನೆ ಕೊಡಲಿಲ್ಲ. ಮುಂದೆ ಏನೇನೊ ಮಾತಾಡಿದ ರಾಮಣ್ಣ. ಆದರೆ ಆ ಮಾತಿನ ಕಡೆ ತನ್ನ ಲಕ್ಷ್ಯಕೂಡ ಇದ್ದಿರಲಿಲ್ಲ. ಕೊನೆಗೆ ತಡೆಯದಾಗಿ ಆಕಳಿಕೆಯಿಂದ ತನ್ನ ಅಭಿಪ್ರಾಯವನ್ನು ಸೂಚಿಸಿಯೆ ಬಿಟ್ಟಳು! ಅವನಿಗಾದರೂ ತಿಳಿಯಲಿ, ಯಾವ ಆಟವನ್ನಾದರೂ ಇಬ್ಬರೂ ಆಡಬಹುದೆಂದು – ಎಂದುಕೊಂಡಳು. ಕೊನೆಗೆ ರಾಮಣ್ಣನೂ ಬರೆಯುವ ನೆವದಿಂದ ಜಾರಿಕೊಂಡ. ಕುಮುದಳು ಒಂದು ನಿಮಿಷ, ಮನಸ್ಸನ್ನು ಗಟ್ಟಿಮಾಡಲು ಏನೊ ಎಂಬಂತೆ, ಕಣ್ಣಳನ್ನು ಮುಚ್ಚಿದಳು. ಇದುವರೆಗೆ ರಾಮಣ್ಣನ ಸಾನ್ನಿಧ್ಯ – ಸಹವಾಸಗಳಿಂದಲೆ ಪ್ರಬುದ್ಧಳಾದ ಕುಮುದಳಿಗೆ – ಮನಸ್ಸಿನಲ್ಲಿ ಯಾವ ವಿಚಾರವಿದ್ದರೂ – ಪ್ರತ್ಯಕ್ಷನಾಗಿ ರಾಮಣ್ಣನು ಸುತ್ತುಮುತ್ತು ಕಾಣದಿದ್ದರೆ, ಬಿಸಿಲು ಕಾಣದ ಬಳ್ಳಿಯಂತೆ ಬಾಡುತ್ತಿತ್ತು ಅವಳ ಹೃದಯ. ಆ ಅನುಭವಕ್ಕಾಗಿಯೆ ಕುಮುದ ಹಣ್ಣಾಗಿದ್ದಳು. ರಾಮಣ್ಣ ಕೋಣೆಗೆ ಹೊರಟ ಕ್ಷಣ, ಅವನ ಸಾಕ್ಷಾತ್ತಾದ ಸಾನ್ನಿಧ್ಯದ ಕಣ್ಮರೆಯಾಗುವುದೆಂದೆನ್ನಿಸಿದಾಕ್ಷಣ, ಗಾಬರಿಗೊಂಡ ಅವಳ ಹೃದಯವು ಅವನ ಹಿಂದಿನಿಂದಲೆ ಓಡಿತ್ತು, ಓಡಿ ಅವನ ಕಾಲನ್ನು ಹಿಡಿದು ಅವನು ಅಲ್ಲಿಂದ ಹೋಗದಂತೆ ಮಾಡಬೇಕು, ಅವಶ್ಯವೆನಿಸಿದರೆ ತನ್ನ ತಪ್ಪನ್ನು (ತಾನು ಯಾವ ತಪ್ಪನ್ನು ಮಾಡಿದ್ದಾಳೆ? – ಆದರೂ) ಒಪ್ಪಿಕೊಳ್ಳಬೇಕು, ಅವನನ್ನು ಒಲಿಸಿ ರಮಿಸಿ ಸಿನಿಮಾಕ್ಕೆ ಹೋಗಬೇಕು, ಅಲ್ಲಿ ಕತ್ತಲಲ್ಲೂ ಕಣ್ಣನ್ನು ಮುಚ್ಚಿ ಅವನ ಸ್ಪರ್ಶಸುಖವನ್ನನುಭವಿಸುತ್ತ ನಿದ್ರೆ ಹೋಗಬೇಕು ಎಂದೆನಿಸಿತ್ತು. ಆದರೆ ಒಂದು ಕ್ಷಣ ಮಾತ್ರ. ಮರುಗಳಿಗೆಯಲ್ಲಿ ಆ ಹೃದಯವನ್ನು ಹಿಂದೆಳೆದಳು, ಬುದ್ಧಿಯು ಬಂಡನ್ನೆಬ್ಬಿಸಿತು. ಹೀಗೆ ಮಾಡಿದರೆ ಆತ್ಮದ್ರೋಹವಾಗುವುದು ಎಂದು ಬುದ್ಧಿಯು ವಾದಿಸಿತು. ಪಾಪ! – ಸುಖದುಃಖಗಳ ನೆಳವಿನಲ್ಲಿ ಸಿಕ್ಕು ಹಣ್ಣಾದ ಹೃದಯವು ಬುದ್ಧಿಯ ಎದುರು ನಿರ್ವಿಣ್ಣವಾಗಿತ್ತು. "ಈ ವರಿಯಿಂದ ಯಾರಿಗೆ ಬೇಕಾಗಿದೆ ಸಿನಿಮಾ?" ಎಂದುಕೊಂಡಳು ಕುಮುದ.

ಇದೆಲ್ಲ ಗಂಟೆ – ಅರ್ಧಗಂಟೆಯ ಮುಂಚಿನ ತಾಕಲಾಟ. ಈಗ ಮಾತ್ರ ಕುಮುದಳ ಹೃದಯ – ಬುದ್ಧಿಗಳು ಮತ್ತೆ ಸಮರಸವಾಗಿವೆ. ಅದಕಾಗಿಯೆ ಶಾಂತಚಿತ್ತಳಾಗಿ ಈಗ ಅವಳು ವಿಚಾರ ಮಾಡಬಲ್ಲಳು. ಮನುಷ್ಯಪ್ರಾಣಿಯ ಒಳಜಗತ್ತು ಎಂತಹದಿದೆ ಎಂಬುದರ ಅರಿವು ಆಕೆಗೆ ಇದ್ದಿರಲಿಲ್ಲ, ಆದರೆ ಆ ಜಗತ್ತಿನಲ್ಲಿಯ ಒಂದೊಂದು ಅನುಭವವನ್ನು ಮಾತ್ರ ಆ ಮಟ್ಟಿಗೆ ಆಕೆ ತಿಳಿದುಕೊಳ್ಳಲು ಶಕ್ತಳಾಗಿದ್ದಳು. ಒಮ್ಮೊಮ್ಮೆ ಎರಡು ಪರಸ್ಪರ ವಿರುದ್ಧ ಅನುಭವಗಳನ್ನು ಕಂಡು ಆಶ್ಚರ್ಯಪಡುವಳು. ಇಂದು ತನಗೆ ಎನಿಸಿದ್ದು, ತಾನು ನಡೆದುಕೊಂಡಿದ್ದು ಈಗ ವಿಚಾರಮಾಡಿದಲ್ಲಿ ಕುಮುದಳಿಗೆ ಅತ್ಯಂತ ಆಶ್ಚರ್ಯಕಾರಕವೆನ್ನಿಸಿತು. "ಸಿನಿಮಾಕ್ಕೆ ಹೋಗೋಣವೆ" ಎಂಬಂತಹ ರಾಮಣ್ಣನ ಮಾತಿಗೆ ಒಂದಾನೊಂದು ಕಾಲದಲ್ಲಿ ಯಾವ ಅರ್ಥವಿದ್ದಿತು? ಅರ್ಥವೆ ಇದ್ದಿರಲಿಲ್ಲ ಎನ್ನಬಹುದು. ಯಾವ ಶಬ್ದಗಳೆ ಇರಲಿ, ರಾಮಣ್ಣನ ಬಾಯಿಯಿಂದ ಬಂದುವು ಎಂದ ಮಾತ್ರಕ್ಕೆ ತಾನು ಮೈಮರೆಯುತ್ತಿದ್ದಳು. ಶಬ್ದಗಳು ಯಾವುವು, ಅವುಗಳ ಹಿಂದಿನ ಆಶಯವೇನು, ಅವುಗಳನ್ನು ನುಡಿಸಿದ ದನಿ ಎಂತಹುದು, ಆ ದನಿಯ ಜೊತೆಗಿದ್ದ ಮುಖಚರ್ಯೆ ಎಂತಹುದು—ಇಂತಹ ವಿಚಾರಗಳಂತೂ ದೂರದಲ್ಲಿಯೆ ಉಳಿದುವು, ತಾನು ಪೂರ್ತಿಯಾಗಿ ಕೇಳುತ್ತಿರಲಿಲ್ಲ ಕೂಡ. ಆ ಕಾಲದಲ್ಲಿ ಸಿನಿಮಾಕ್ಕೆ ನಡೆ ಎಂದರೆ ಯಾವ ಉತ್ಸಾಹದಿಂದ ನಡೆಯುತ್ತಿದ್ದಳೊ ಅದೇ ಉತ್ಸಾಹದಿಂದ "ಜೀವನನ್ನು ಕೊಡು" ಎಂದರೆ ಸಾಯಲು ಸಿದ್ಧಳಿದ್ದಳು. ಕಾಲದ ಅವಧಿಯಿಂದ ನೋಡಿದರೆ ಎರಡೋ ಮೂರೋ ವರ್ಷಗಳಾಗಿವೆ, ಆದರೆ ಮನಃಸ್ಥಿತಿಯ ದೃಷ್ಟಿಯಿಂದ ನೋಡಿದರೆ ಅದೇನೊ ಸಾವಿರಾರು ವರ್ಷಗಳ ಮುಂಚಿನ ಮಾತು ಎನ್ನಿಸುವುದು.

ಸಾವಿರಾರು ವರ್ಷಗಳಿರಲಿ, ಸಾವಿರಾರು ದಿನಗಳ ಮುಂಚಿನ ಮಾತು ಕೂಡ ಅಲ್ಲ. ಇನ್ನೂ ಮೂರು ವರ್ಷ ಕೂಡ ಪೂರ್ತಿಯಾಗಿಲ್ಲ, ಎಂದರೆ ದಿನಗಳು ಕೂಡ ಇನ್ನೂ ಸಾವಿರದ ಸಂಖ್ಯೆಯನ್ನು ಮುಟ್ಟಿಲ್ಲ – ತನಗೆ ಚನ್ನಾಗಿ ನೆನಪಿನಲ್ಲಿದೆ. ಒಂದು ಸಂಜೆ ಮಲಗುವ ಮುಂಚೆ ತಾನು ರಾಮಣ್ಣನ ಕೋಣೆಗೆ ಹೋದುದು, ಕವಾಟಿನ ಎದುರು ನಿಂತು ಪುಸ್ತಕಗಳನ್ನು ಹುಡುಕುತ್ತಿರುವುದು, ಅಗ – ಹೇಗೋ ಏನೊ – ರಾಮಣ್ಣನು ತನ್ನನ್ನು ಬಲವಾಗಿ

ಬಿಗಿದಪ್ಪಿ ಮುದ್ದಿಟ್ಟ ಮೇಲೆ ಎಚ್ಚರ ಬಂದಂತಾಗಿ, ಮೈಯೆಲ್ಲ ಬೆವರಾಗಿ, ನಾಚಿಕೆಯಿಂದ ನಿರ್ವಿಣ್ಣಳಾಗಿ ಆ ಕೋಣೆಯಿಂದ ಓಡಿಹೋದಳು. ಅಹುದು – ಅದೇ ರಾತ್ರಿ. ಕೋಣೆಗೆ ಬಂದೊಡನೆ ಭಯ ಮತ್ತು ಸುಖ – ಎರಡೂ ಭಾವನೆಗಳ ಎಳೆದಾಟದಲ್ಲಿ ಸಿಕ್ಕಿದಳು. ಆಕೆಗೆ ಆ ಮಾತು ತಿಳಿದಿತ್ತೊ ಇಲ್ಲವೊ–ಆದರೆ ಅಪ್ಪಿ ಮುದ್ದಿಟ್ಟುದನ್ನು ನೆನೆದಾಗ ಒಂದು ತರದ ಹೆದರಿಕೆಯಿಂದ ಆಕೆಯ ಮೈ ನಡುಗುತ್ತಿತ್ತು, ನೆನಹನ್ನು ಮೆಲುಕಾಡಿಸುವಾಗ ಮುಖವು ಸುಖೋಲ್ಲಾಸದಿಂದ ಅರಳುತ್ತಿತ್ತು. ಓಡಿ ಬಂದು ಹಾಸಿಗೆಯ ಮೇಲೆ ಕುಳಿತವಳು ಹಾಗೆಯೆ ಅಡ್ಡಾಗಿದ್ದಳು, ದೀಪವನ್ನೂ ಆರಿಸಿರಲಿಲ್ಲ; ಹೆದರಿಕೆ, ರಾಮಣ್ಣನು ಬಂದರೆ ಹೇಗೆ – ಎಂದು. ಜೊತೆಗೆ ಇನ್ನೂ ಒಂದು ಹೆದರಿಕೆ, ದೀಪವಿಲ್ಲದ್ದನ್ನು ಕಂಡು ತಾನು ಮಲಗಿರಬಹುದೆಂದು ತಿಳಿದು ರಾಮಣ್ಣನು ಬರದಿದ್ದರೆ – ಎಂದು. ಬಂದರೆ ಏನು – ಎಂದು ಹೆದರಿಕೆ; ಕೆಲ ಹೊತ್ತಿನ ತರುವಾಯ ಅವನು ಬರುವ ಸುಳಿವೇ ಇಲ್ಲವೆಂದು ನಿರಾಸೆ. ಮೆಲ್ಲನೆ ಹೆಜ್ಜೆಗಳನ್ನಿಡುತ್ತ ಬಾಗಿಲವರೆಗೆ ನಡೆದಿದ್ದಳು, ಅದನ್ನು ತೆರೆದು ಹೊರಗೆ ಹಣಿಕಿಕ್ಕುವ ಧೈರ್ಯ ಮಾತ್ರ ಆಗಿರಲಿಲ್ಲ. ತಿರುಗಿ ಹಾಸಿಗೆಯ ವರೆಗೆ ನಡೆದಳು, ನಡೆವಾಗ ಒಮ್ಮೆಲೆ ಹಿಂತಿರುಗಿ ನೋಡುವಳು, ಬಾಗಿಲು ತೆರೆದ ಸದ್ದಾಗಲಿಲ್ಲವೆ ? ಎನ್ನಿಸಿ. ಮನಸ್ಸು, ದೇಹ ಎರಡೂ ಜೋಕಾಲಿ ಯಂತೆ ಹೊಯ್ದಾಡಿ ದಣಿದು ತಾನು ಮಲಗಿದ್ದೇ ತನಗೆ ಗೊತ್ತಿರಲಿಲ್ಲ. ಬೆಳಿಗ್ಗೆ ಎಚ್ಚರಾದಾಗ ಮಾತ್ರ ಒಮ್ಮೆಲೆ ಹೆದರಿಸುತ್ತಲೂ ನೋಡಿದ್ದಳು. ಎಲ್ಲವೂ ಇದ್ದಂತಿದ್ದಿತು. ರಾಮಣ್ಣನ ಭೆಟ್ಟಿಯ ಚಿಹ್ನೆಗಳೆ ಇದ್ದಿರಲಿಲ್ಲ.

ರಾಮಣ್ಣನ ಭೆಟ್ಟಿ, ಆ ಬಗ್ಗೆ ವಿಚಾರ, ಅದಕ್ಕೆ ತಕ್ಕ ಅನುಭವ – ಇದೊಂದರದೂ ನಿಶ್ಚಿತ ಕಲ್ಪನೆ ಇಲ್ಲದ್ದರಿಂದ ಕುಮುದಳಿಗೆ ಮರುದಿನ ಬಹಳೊತ್ತು ರಾತ್ರಿ ಅನುಭವದ ಸ್ಮೃತಿ ಪೀಡಿಸಲಿಲ್ಲ. ಆದರೆ ಒಂದು ಸಂಗತಿ ಮಾತ್ರ ಈಗಲೂ ಅವಳ ಕಣ್ಣು ಕಟ್ಟಿದಂತಿದೆ. ಅಂದು ಬೆಳಗಿನಿಂದ ಸಂಜೆಯ ವರೆಗೆ ಮನೆಗೆಲಸಕ್ಕಾಗಿ ತಾನು ತೋರಿಸಿದ ಉತ್ಸಾಹವನ್ನಾಗಲಿ, ಪಟ್ಟ ಪರಿಶ್ರಮವನ್ನಾಗಲಿ ಮುಂಚೆ ಎಂದೂ ಕಂಡಿರಲಿಲ್ಲ. ಜೊತೆಗೆ, ದುಡಿದಷ್ಟು ಉಲ್ಲಾಸವೆ ಹೆಚ್ಚುತ್ತಿತ್ತು ಹೊರತು ದಣಿವಾಗುತ್ತಿರಲಿಲ್ಲ. ಸರಲಕ್ಕ ಹಾಸಿಗೆ ಹಿಡಿದಂದಿನಿಂದ ಅಡುಗೆ ಮನೆಯ ಪೂರ್ತಿ ಜವಾಬ್ದಾರಿ

ಕುಮುದಳದೆ ಆಗಿತ್ತು. ಮಿಕ್ಕ ಕೆಲಸಕ್ಕಾಗಿ ಮನೆಯಾಳು, ಕಸ–ಮುಸುರೆ ಯಾಕೆ ಇಬ್ಬರೂ ಇದ್ದರು. ಆದರೆ ಅಂದು ಅಡುಗೆ – ಊಟದ ಕೆಲಸವನ್ನು ಮಾಡುವುದಲ್ಲದೆ ಕುಮುದ ಇನ್ನೂ ಎಷ್ಟೊ ಮಾಡಬೇಕಿದ್ದ ಕೆಲಸಗಳನ್ನು ಶೋಧಿಸಿ ತೆಗೆದಳು.

"ಯಾಕ ಕುಮುದಾ ? ಸುಮ್ನೆ ಇಲ್ಲಿ ನನ್ನ ಮಗ್ಗಲಿಗೆ ಕೂತು ವಿಶ್ರಾಂತಿ ತಗೋಬಾರದ ?" ಎಂದಿದ್ದಳು ಸರಲಕ್ಕ.

"ಯಾರಾರೆ ನೋಡಿದರ ಏನೆಂದಾರು ?" ಎಂದಳು ತಾನು.

"ನೋಡುವವರು ಯಾರು ? ಅಂತಾರ ಯಾಕ ?" ಎಂದು ಸರಲಕ್ಕ ಕುಮುದಳ ಸಂದರ್ಭ ತಿಳಿಯದೆ ಕೇಳಿದ್ದಳು.

"ನೋಡುವವರು ಯಾರು ಅಂದ್ರ? ಹೆಂಡತಿ ಹಾಸಿಗೆ ಹಿಡಿದಂದಿನಿಂದ, ಒಂದು ಕೋಣೆ ವ್ಯವಸ್ಥಿತ ಇಲ್ಲ, ಒಂದು ಅರಿವೆ ಸ್ವಚ್ಛ ಇಲ್ಲ – ಅಂದ್ರಂದ್ರ ಹ್ಯಾಂಗ, ತಾಯೀ ? " ಎಂದು ನಗೆಯಾಟದ ದನಿಯಲ್ಲಿಯೆ ಹೇಳಿದಳು.

"ನಾಕ ಬಿಡ ? ನಿನ್ನೇನು ದುಡಿಯಲಿಕ್ಕ ತಂದಾರೇನು ಈ ಮನೆಗೆ ? "

"ಅಯ್ಯ, ಇದೇನ, ಅಕ್ಕಾ ? ದುಡೀಲಿಕ್ಕೆ ತಂದಾರಂತ ಹೇಳೋದಿಲ್ಲ. ನೀ ಓಡಾಡುವಾಗ ಮನೆ ಹ್ಯಾಂಗ ಇರ್‍ತಿತ್ತು ನಾನೇ ನೋಡೀನಲ್ಲ ? ನನ್ನ ಇಲ್ಲಿ ತಂದ ಉಣಿಸಿ, ಕೂಡಿಸಿದರ ತಂಗಿಗೆ ಏನು ಕೆಲಸೇ ಕಲಿಸಿಲ್ಲ ಈಕೆ ಅನ್ನಬಹುದು ಮಂದಿ ನಿನಗ ? ಮನೆ ಹೀಂಗ ಅವ್ಯವಸ್ಥಿತ ಕಂಡರ ಅನ್ನದೇ ಬಿಟ್ಟಾರ ?" ಎಂದು – ಈ ವರೆಗೆ ವಿಚಾರ ಮಾಡಿರದಿದ್ದರೂ – ಮಾತು ಕುಮುದಳ ಬಾಯಿಯಿಂದ ಬಂದಿತು.

ಸರಲಕ್ಕನಿಗೆ ಎಷ್ಟು ಆನಂದವಾಗಿತ್ತು ಆಗ! ತಡೆಯುವ ಶಕ್ತಿ ಇಲ್ಲದ್ದಕ್ಕೆ ಕಣ್ತುಂಬ ನೀರು ನಿಂತು ಮಾತು ಬಾರದಂತೆ ಆಕೆಯ ಗಂಟಲು ಬಿಗಿದಿತ್ತು. ಕೈಸನ್ನೆಯಿಂದಲೆ ಹಾಸಿಗೆಯ ಹತ್ತಿರ ಬಾ ಎಂದು ಸೂಚಿಸಿದ್ದಳು ಆಗ ತಾನು ಅಲ್ಲಿ ಹೋಗಿ ಕುಳಿತಿದ್ದರೆ ತನಗೂ ಅಳು ತಡೆಯುತ್ತಿರಲಿಲ್ಲ. ಅದಕಾಗಿ, "ಬಂದೆ, ಇನ್ನೊಂದು ಸ್ವಲ್ಪ ಉಳಿದಿದೆ. ಆಮ್ಯಾಲೆ ಸಂಜೀತನಕ ನಿನ್ನ ಮಗ್ಗಲಾಗೇ ಕೂಡ್ತೀನಿ ಮಾತಾಡ್ತಾ" ಎನ್ನುತ್ತ ಮತ್ತೆ ಕೆಲಸದಲ್ಲಿ ತೊಡಗಿದ್ದಳು.

ಅಂದು ಎಲ್ಲ ಕೋಣೆಗಳೊಳಗಿನ ಸಾಮಾನುಗಳನ್ನು ತೆಗೆದು, ದೂಳ ಜಾಡಿಸಿ ಓರಣದಿಂದಿಟ್ಟಿದ್ದಳು. ಮುಖ್ಯವಾಗಿ ರಾಮಣ್ಣನ ಕೋಣೆಯೊಳಗಿನ ಪುಸ್ತಕಗಳನ್ನೂ ಬಟ್ಟೆಗಳನ್ನೂ ಶಿಸ್ತಾಗಿ ಸಾವರಿಸಿದ್ದಳು. ಅಡುಗೆ ಮನೆ-ಯಲ್ಲಿಯ ಪಾತ್ರೆಗಳನ್ನೂ ಒಂದು ವ್ಯವಸ್ಥಿತ ರೀತಿಯಲ್ಲಿರಿಸಿದ್ದಳು. ದೀಪ-ಗಳ ಹೊದಿಕೆಗಳನ್ನು ತಿಕ್ಕಿದ್ದಳು. ಮಂಚಗಳ ಮೇಲಿನ ಹಾಸಿಗೆಗಳನ್ನೆಲ್ಲ ತೆಗೆದಿಟ್ಟು, ಮಂಚಗಳನ್ನೊರಸಿ, ಮೇಲೆ ಹಾಸಿಗೆಗಳನ್ನು ಮಡಿಕೆ ಇಲ್ಲದಂತ ಹಾಸಿಟ್ಟಿದ್ದಳು. ಒಂದು ಕೆಲಸ ಮುಗಿದೊಡನೆ ಇನ್ನೊಂದಕ್ಕೆ ತೊಡಗುವುದು, ಕೆಲಸವಿಲ್ಲದೆ ಕುಳಿತರ ಏನಾದೀತೋ ಎಂದು ಹೆದರಿದವಳಂತೆ ಒಮ್ಮೊಮ್ಮೆ ಮಾಡಿದ್ದು ಸರಿಬಾರದೆ, ಸರಿ ಅಲ್ಲ ಎಂದು ಸಂಶಯ ಬಂದರ ಮತ್ತ ಮೊದಲಿ-ನಿಂದ ಮಾಡುವುದು. ಅಂತೂ ಸಂಜೆಯವರೆಗೆ ದುಡಿದೂ ದುಡಿದೂ ಹಣ್ಣಾಗದೆ ಸಂತಸದಿಂದ ಉಬ್ಬಿ ಶಕ್ತಿ ಹೆಚ್ಚಿದಂತೆ ಅನುಭವ ಬಂದಿತ್ತು. ಕೊನೆಗೆ ಎಲ್ಲವನ್ನೂ ಮುಗಿಸಿ ಸರಲಕ್ಕನ ಹತ್ತಿರ ಬಂದಾಗ, ಆಕೆ ತನ್ನ ಮೈ-ಕೈಗಳನ್ನು ಮುಟ್ಟಿಮುಟ್ಟಿ ನೋಡಿದ್ದಳು.

“ಯಾಕ, ಅಕ್ಕಾ ? ಜನ್ಮದಾಗ ಒಂದಿವಸ ದುಡಿದದ್ದಕ್ಕ ನನ್ನ ಕೈ ಮುರಿದುವು ಅಂತ ಹೆದರಿದ್ದಿ ಏನು ?” ಎಂದು ನಗೆಯಿಂದ ಕೇಳಿದ್ದಳು.

ಸರಲಕ್ಕನು ಒಮ್ಮೆಲೆ ಉತ್ತರವನ್ನು ಕೊಡಲಿಲ್ಲ. ಕೈಯಿಂದ ತನ್ನನ್ನು ಮುಟ್ಟುತ್ತಿದ್ದರೂ ಮನಸ್ಸು ಮತ್ತೆಲ್ಲಿಯೊ ಇದ್ದಂತಿತ್ತು. ಕೊನೆಗೊಮ್ಮೆ ಉಸುರ್ಗರೆದಳು. ಕುಮುದಳಿಗೆ ಹೆದರಿಕೆಯಾಯಿತು. ಅಕ್ಕನ ಮನಸ್ಸಿನಲ್ಲಿ ಯಾವ ವಿಚಾರವಿದ್ದಿರಬಹುದು ? ತನ್ನ ಮನದೊಳಗಿನ ವಿಚಾರಕ್ಕೆಯೆ ಉತ್ತರವನ್ನು ಕೊಡುವಂತೆ ಸರಲಕ್ಕ ನುಡಿದಳು “ ನನಕಿಂತ ಛಲೋ ನೋಡಿಕೋತಿ ನೋಡು, ಕುಮುದಾ, ಮನೇನ್ನ” ಎಂದು.

“ಹೋಗೇ ! ಏನಾದ್ರೊಂದು ಮಾತಾಡಬ್ಯಾಡ !”

“ಏನಾದ್ರೊಂದು ಯಾಕ ? ಒಂದಿವಸನಾದ್ರೂ ಇಷ್ಟು ನಾ ಓಡಾಡಿದ್ದು ನನಗೇನು ನೆನಪಿಲ್ಲಪ್ಪ !”

“ದಿನಾ ಶಿಸ್ತ ಇಡವ್ರಿಗೆ ಓಡಾಡೋದು ಬೇಕೆ ಇಲ್ಲ. ನಮ್ಮಂಥಾವೇ ನೋಡು, ಹಬ್ಬಕ್ಕೊಮ್ಮೆ, ಹುಣ್ಣಿವೆಗೊಮ್ಮೆ ರಂದೀ ಎಲ್ಲ ಸ್ವಚ್ಛ ಮಾಡ್ಲಿಕ್ಕೆ ಓಡಾಡೋದು” ಎಂದಿದ್ದಳು ಕುಮುದ.

"ಆಯ್ತು, ನಿನಗಾದ್ರೂ ಈ ಮನೆಯ ಕೆಲಸದ ರೂಢಿ ಆಗ್ತದ, ಆಗ್ಲಿ."

"ಒಂದಿವಸ ಒನ್ನಾಲ್ಕು ಸಾಮಾನು ಅತ್ತಿಂದಿತ್ತ ಎತ್ತಿಟ್ಟದ್ದಕ್ಕ ಎಷ್ಟು ದೊಡ್ಡ ಗುಣ ಮಾಡತೀಯೋ ಅಕ್ಕಾ?"

"ಅದಕ್ಕೇ ಹೇಳಿದೆನಲ್ಲ, ಛಲೋನೇ ಆಯ್ತಂತ? ಇನ್ನೇನು ನಾ ನೆಟ್ಟಗಾಗಿ ಏಳೋದು ಅಷ್ಟರಾಗೇ ಅದ, ಮನೇ ನೋಡೋದು—"

ಕುಮುದ ಒಮ್ಮೆಲೆ ಸರಲಕ್ಕನ ಬಾಯಿಯನ್ನು ಮುಚ್ಚಿ "ಇರ್ಲಿ ಬಿಡೆ! ಏನಾದ್ರೊಂದು ಕೆಟ್ಟ ಕೆಟ್ಟ ಮಾತು ಆಡಬೇಡ, ಅಕ್ಕಾ."

"ಬಾಯಿಯಿಂದಾಡದಿದ್ರೂ ಮುಚ್ಚಿಡತದೇನು, ಕುಮುದಾ? ನನ್ನೇನು ನೆಟ್ಟಗಾಗೋ ಜಡ್ಡಲ್ಲ."

"ನೀ ಹೀಂಗ ಮಾತಾಡಿದರ ನಾ ಎದ್ದು ಹೋಗ್ತೀನಿ ನೋಡು, ಅಕ್ಕಾ" ಎಂದು ತಾನು ಸಿಟ್ಟಿನಿಂದ ನುಡಿದಿದ್ದಳು.

"ಸಿಟ್ಟಿಗೇಳಬ್ಯಾಡ, ತಾಯೀ, ಸಿಟ್ಟಿಗೇಳಬ್ಯಾಡ. ನೀ ಬಿಟ್ಟು ಹೋದರ ಈ ಮನೆ ನಡೆಸಿಕೊಂಡು ಹೋಗವರು ಯಾರು—ನಾ ಹೋದ-ಮ್ಯಾಲೆ" ಎನ್ನುತ್ತ ಸರಲಕ್ಕ ಒಮ್ಮೆಲೆ ಮಗ್ಗುಲಾಗಿ ಮುಖವನ್ನು ಮುಚ್ಚಿ-ಕೊಂಡಿದ್ದಳು.

ಈ ಮಾತುಗಳಿಂದ ಕುಮುದಳಿಗೆ ತುಸು ಕಸಿವಿಸಿಯಾಗಿತ್ತು. ಮಗ್ಗುಲಾಗಿ ಮುಖ ಮುಚ್ಚಿದ ಸರಲಕ್ಕ ಎಷ್ಟೊತ್ತಿನವರೆಗೂ ತನ್ನೊಡನೆ ಮಾತನಾಡಲಿಲ್ಲ ಎಂಬುದರಿಂದ ಕುಮುದಳಿಗೆ ತುಸು ಹೆದರಿಕೆಯೂ ಆಯಿತು. ಇದುವರೆಗೆ ಮನೆಯನ್ನು ಓರಣದಿಂದ ಸಜ್ಜುಗೊಳಿಸಿದ್ದಕ್ಕಾಗಿ ಅನುಭವಿಸುತ್ತಿದ್ದ ಉತ್ಸಾಹವು ಕುಗ್ಗಿದಂತಾಯಿತು. ಸರಲಕ್ಕ ಹೀಗೇಕೆ ಮಾತಾಡಿರಬಹುದು? ತಾನು ಮಾಡಿದ್ದು ಆಕೆಗೆ ಸರಿಬಂದಿರಲಿಕ್ಕಿಲ್ಲವೆ? ಅಥವಾ-? ಕುಮುದಳು ಗಾಬರಿಯಾದಳು. ಇದುವರೆಗೆ ತಾನು ಕೂಡ ವಿಚಾರಮಾಡಿರಲಿಲ್ಲ. ಈಗ, ಸಂಜೆ ಸರಿಯುತ್ತ ನಡೆದಂತೆ, ರಾಮಣ್ಣನು ಹೊರಗಿನಿಂದ ಬರುವ ವೇಳೆ ಸಮೀಪಿಸಿದಂತೆ, ಬೇಡವೆಂದು ಹಿಡಿದೆಳೆದಾಗೂ ಕತ್ತನ್ನು ಚಾಚಿ, ಚಾಚಿ - ಕದ್ದು ಹಣಿಕಿಕ್ಕಲು ಯತ್ನಿಸುವದೇನೊ ಎನ್ನು ವಂತೆ ತನ್ನ ಎದೆ ಹಾರುತ್ತಿರುವಾಗ, ಯಾವುದೋ ಒಂದು ಆಕಾಂಕ್ಷೆ ಹಸಿವೆ-

ಯಂತೆ ಒಳಗೆ ಪೀಡಿಸುತ್ತಿರುವಾಗ – ಆಗ ಕುಮುದಳಿಗೆ ಸಂಶಯ ಬಂದಿತು, ಹೆದರಿಕೆಯಾಯಿತು, ಮುಂಚಿನ ರಾತ್ರಿಯ ನೆನಪು ಒತ್ತಿಹಿಡಿದ ರಬರ್ ಚೆಂಡು ಹಿಡಿತನ್ನು ಸಡಿಲಿಸಿದಾಗ ಸಿಡಿವಂತೆ ಪುಟಿದೆದ್ದಿತು. ಇದೇನು? ಇಡಿಯ ದಿನ ತಾನು ದುಡಿದದ್ದು ನಿನ್ನೆ ರಾತ್ರಿಯ ಅನುಭವದಿಂದ ಪ್ರೇರಿತ-ಳಾಗಿಯೆ? ತಾನು ದುಡಿಯಬೇಕು, ಅದನ್ನು ನೋಡಿ ರಾಮಣ್ಣನು ಮೆಚ್ಚ-ಬೇಕು, ಎಂಬುದಕ್ಕಾಗಿಯೆ? ಇಲ್ಲವಾದರೆ ಅವನ ಬರವಿನ ನಿರೀಕ್ಷೆ ತನಗೇಕೆ? ಕ್ರಮೇಣ ಹತ್ತಿರ ಬರುವವನ ಹೆಜ್ಜೆಗಳಂತೆ ತನ್ನ ಎದೆಯ ಹಾರಾಟದ ಸದ್ದು ಹೆಚ್ಚೆಚ್ಚು ಸ್ಪಷ್ಟವಾಗಿ ಕೇಳುತ್ತಿತ್ತು. ತನ್ನ ಮಾತು ಹಾಗಿರಲಿ, ಅದರಂತೆ ಸರಲಕ್ಕನಿಗೆ ಸಂಶಯ ಬಂದಿರಬಹುದೆ? ಇಲ್ಲವಾದರೆ ಸಾಯುವ ಮಾತನ್ನೂ, ತನ್ನ ತರುವಾಯ ಮನೆ ನಡೆಸಿಕೊಂಡು ಹೋಗುವ ವಿಷಯವನ್ನೂ ಆಕೆ ಎತ್ತಿದ್ದೇಕೆ? ಅಹುದು, ತನ್ನ ನಡತೆಗೆ ಏನೆ ಕಾರಣ-ವಿರಲಿ, ಸರಲಕ್ಕನಿಗೆ ಮಾತ್ರ ಹಾಗೆ ಸಂಶಯ ಬಂದಿರಲೇಬೇಕು. ಮುಖ ಮುಚ್ಚಿಕೊಂಡು ಮಲಗಿದವಳು ಇನ್ನೂ ಮುಸುಕನ್ನು ತೆಗೆದಿಲ್ಲ, ತನ್ನನ್ನು ನೋಡಿಲ್ಲ. ಕುಮುದಳು ನಿಜವಾಗಿಯೆ ಗಾಬರಿಯಾದಳು. ತನ್ನ ವಿಚಾರ, ರಾಮಣ್ಣನಿಗಾಗಿ ತನ್ನ ಹೃದಯದೊಳಗೆ ನಡೆದ ಹೊಯ್ದಾಟ—ಇದೆಲ್ಲ ಸರಿಯೊ ತಪ್ಪೊ ಎಂಬ ಪ್ರಶ್ನೆ ಆಕೆಗಿದ್ದಿರಲಿಲ್ಲ. ಆ ದೃಷ್ಟಿಯಿಂದ, ಇಲ್ಲವೆ ಸಮಾಜದ ನೈತಿಕ ಜೀವನದ ದೃಷ್ಟಿಯಿಂದ ವಿಚಾರಮಾಡುವ ಯೋಗ್ಯತೆಯೆ ಅವಳಿಗಿದ್ದಿರಲಿಲ್ಲ. ಇದಲ್ಲದೆ ಕೆಳಗಿನಿಂದ ಮನೆಯು ಬೆಂಕಿಯಿಂದ ಧಗಧಗಿಸು ತ್ತಿರುವಾಗ, ಜಿಗಿದರೆ ಸಾಯುವೆನೊ ಉಳಿಯುವೆನೊ ಎಂಬ ತರ್ಕವನ್ನು ಮೇಲಿಸಂತಸ್ತಿನವನು ಮಾಡುವುದಿಲ್ಲ. ಕೆಳಗೆ ಮನೆ ಸುಡುತ್ತಿದೆ, ಹತ್ತಿರ ಕಿಟಕಿ ಇದೆ ಇವೆರಡನ್ನೂ ಕಂಡಾಕ್ಷಣ ಪ್ರಾಣಿಸಹಜವಾದ ಗುಣಕ್ಕಾಗಿ ಅವನು ಕೆಳಗೆ ಜಿಗಿದೇಬಿಡುವನು. ಎಲ್ಲವನ್ನೂ ಮೀರಿ ನಿಂತ ಪ್ರಾಣತತ್ತ್ವಶಕ್ತಿ ಅದು. ಕುಮುದಳಿಗೆ ತಿಳಿಯುವುದೆ ಶಕ್ಯವಿದ್ದಿರಲಿಲ್ಲ; ತಿಳಿದಿದ್ದರೂ ಅವಳು ಏನು ಮಾಡಲೂ ಶಕ್ಯವಿದ್ದಿರಲಿಲ್ಲ. ಕುಮುದಳನ್ನು ಪೀಡಿಸುತ್ತಿದ್ದುದು ಈ ತತ್ತ್ವ ವಿಚಾರವಲ್ಲ; ಅನಾಥೆಯಾದ ತನ್ನನ್ನು ತಂದಿಟ್ಟುಕೊಂಡು ಬದುಕಿಸಿ ಬೆಳಯಿಸುವ ಸರಲಕ್ಕ ತನ್ನ ಮೇಲೆ ಸಿಟ್ಟಾದರೆ ಹೇಗೆ – ಎಂಬುದೊಂದೇ ಹೆದರಿಕೆ. ಆ ಹೆದರಿಕೆಗಾಗಿ ಆಕೆ ರಾಮಣ್ಣನ ಬರವಿಗಾಗಿ ಈಗ ಕಕ್ಕಾವಿಕ್ಕಿ-

ಯಾದಳು. ರಾಮಣ್ಣನು ಬಂದ ಮೇಲೆ ಸರಲಕ್ಕ ಒಟ್ಟಿಗೆ ಎಲ್ಲವನ್ನೂ ಹೇಳಿಬಿಟ್ಟರೆ? ತನ್ನ ಮೇಲಿನ ಸಿಟ್ಟನ್ನು ಆಡಿಕೊಂಡರೆ? ಕೊನೆಗೆ – ಆ ಪ್ರಸಂಗವನ್ನು ತಪ್ಪಿಸಲು ತನ್ನ ಕಯ್ಯಲ್ಲಿಲ್ಲದಿದ್ದರೂ ಅದನ್ನು – ಎದುರಿಸುವುದಾದರೂ ಬೇಡ ಎಂದು ಮೆಲ್ಲನೆ ಅಲ್ಲಿಂದೆದ್ದು ತನ್ನ ಕೋಣೆಗೆ ಹೋಗಿದ್ದಳು. ಆದರೂ ರಾಮಣ್ಣನು ಬಂದ ಸದ್ದಾದೊಡನೆ ತಡೆದಿರಲಿಲ್ಲ. ಒಂದೆರಡು ನಿಮಿಷ ಹೇಗೊ ತಡೆದಿದ್ದಳು, ಅಷ್ಟರಲ್ಲಿ ಅಬ್ಬರ ಕೇಳಿಬರಬಹುದೆಂದು. ಆದರೆ ಅದಕ್ಕೆ ಬದಲಾಗಿ ರಾಮಣ್ಣನು ಗಟ್ಟಿಯಾಗಿ ನಗುವುದು ಕೇಳಬಂದಿತು. ಕುಮುದಳಿಗೆ ಆಶ್ಚರ್ಯ. ಮಾತನ್ನು ಕೇಳುವ ಆತುರ, ಹೊರಬರಲು ಹೆದರಿಕೆ, ಮೇಲೆ ರಾಮಣ್ಣನು ಯಾಕೆ ಗಹಗಹಿಸಿ ನಗುವನೆಂಬುದರ ಕಲ್ಪನೆಯೂ ಇಲ್ಲ. ಕೊನೆಗೆ ಸರಲಕ್ಕನ ಹೆಸರಿನಿಂದ ರಾಮಣ್ಣ ತನ್ನನ್ನು ಕರೆದಾಗಲೆ ಆಕೆಗೆ ಹೋಗಬೇಕಾಯಿತು, ಹೋಗಿ ಸರಲಕ್ಕನ ಎದುರು ನಿಲ್ಲುವವರೆಗೆ ಕಾಲ್ಗಳು ನೆಲದೊಳಗೆ ಸಿಕ್ಕಿಬಿದ್ದಂತೆ ಜಡವೆನಿಸಿ ಎತ್ತದಂತಾಗಿದ್ದುವು. ನಡೆದಂತೆ ನಡೆದಂತೆ ತಾನು ನೆಲದೊಳಗೆ ಇಳಿಯುತ್ತಿರುವಂತೆಯೆ ಭಾಸವಾಯಿತು ....

ಕುಮುದ "ಹಂ" ಎಂದು ದನಿ ತೆಗೆದು, ಕಣ್ಣರಳಿಸಿ ನೋಡಿದಳು. ಕೈಯಲ್ಲಿ ಪುಸ್ತಕ, ಕುರ್ಚಿಯಲ್ಲಿ ಕುಳಿತದ್ದು. ದೀರ್ಘವಾಗಿ ಉಸಿರೆಳೆದಳು. ಹಿಂದಿನ ನೆನಪು, ಅದನ್ನು ಅನುಭವಿಸುತ್ತ ಕಣ್ಣಿಗೆ ಮಬ್ಬು ಬಂದಿದೆ! ಗಡಿಯಾರವನ್ನು ನೋಡಿದಳು, ರಾತ್ರಿ ಒಂಭತ್ತೂವರೆ ಗಂಟೆ ಆಯಿತು, ಹಾಗೂ ಹೀಗೂ ಮಲಗುವ ವೇಳೆಯೆ ಸಮೀಪ ಬಂದಿತಲ್ಲ ಎಂದು ಸಿಟ್ಟುಸಿರಿಟ್ಟು ಎದ್ದಳು. ಸಿನಿಮಾಕ್ಕೆ ಹೋಗಬೇಕೆಂದಿದ್ದಳಲ್ಲವೆ ತಾನು? ಸರಿಯಾಯಿತು. ಹಿಂದಿನ ನೆನಪುಗಳ ಸಿನಿಮಾ ಚಿತ್ರಗಳನ್ನು ನೋಡಿದಂತಾಯಿತಲ್ಲ ಎಂದು ವಿಷಾದದಿಂದ ತುಟಿಗಳನ್ನು ಬಿರಿದು ತನ್ನ ಕೋಣೆಗೆ ನಡೆದಳು

## ೭

ಕೆಸರಿನಲ್ಲಿ ಕಾಲು ಸಿಕ್ಕವನಂತಾಯಿತು ರಾಮಣ್ಣನ ಸ್ಥಿತಿ. ಹೆಂಡತಿಯ ಭಾವಪಟವೆದುರು ಕುಳಿತು ಹಿಂದಿನ ನೆನಪುಗಳನ್ನು ತಡೆಯಲು ಅಸಮರ್ಥ

ನಾದನು. ಒಂದು ನೆನಹು ಮತ್ತೊಂದಕ್ಕೆ ಎಳೆಯುತ್ತಿತ್ತು. ಸರಲೆ ತೀರಿದಂದಿನಿಂದ ತನ್ನ ಜೀವನದಲ್ಲಿ ಏನೊ ಒಂದು ತೊಡಕು ಉಂಟಾಗಿದೆ ಎಂಬ ಭಾವನೆ ಮಾತ್ರ ಅವನಿಗಿದ್ದಿತು. ಆದರೆ ಇದೇ ತನ್ನ ತೊಡಕು ಎಂಬುದು ಅವನಿಗೆ ಇದುವರೆಗೆ ಸ್ಪಷ್ಟವಾಗಿ ಹೊಳೆದಿದ್ದಿಲ್ಲ, ಇದುವರೆಗೆ ಅವನು ಬಾಯಿಯಿಂದ ಅದನ್ನು ಆಡಿಯೂ ಇರಲಿಲ್ಲ. ಆದರೆ ವಿಚಾರದ ಭರದಲ್ಲಿ "ನನ್ನ ಜೀವನದ ತೊಡಕನ್ನೂ ಬಿಡಿಸಬೇಕೆಂದು ಈ ಸಮಾಧಾನದ ಮಾತನ್ನು ಹೇಳುತ್ತಿರುವೆಯಾ ?" ಎಂದು ಸರಲೆಯು ಭಾವಪಟವನ್ನುದ್ದೇಶಿಸಿ ನುಡಿದ ಮೇಲೆ, ಆ ಶಬ್ದಗಳು ಸಾವಕಾಶವಾಗಿ ಅವನ ಮಿದುಳಿಗೆ ಮುಟ್ಟಿದಾಗ ಅವನಿಗೆ ಮೊದಲ ಸಲ ಹೊಳೆಯಿತು, ಕ್ಲೊರೊಫಾರ್ಮಿನ ಮಬ್ಬಿನಿಂದ ಎಚ್ಚೆತ್ತವನಂತಾಯಿತು. ಕುಮುದಳು ತನಗೆ ತೊಡಕಾಗಿದ್ದಾಳೆ ಎಂದು ಇದುವರೆಗೂ ಅವನಿಗೆ ಎನ್ನಿಸಿರಲಿಲ್ಲ; ಅನೇಕ ವರ್ಷಗಳಿಂದ ಮನೆಯೊಳಗೆ ಇದ್ದುಕೊಂಡ ಆ ಹುಡುಗೆ ಅವನಿಗೊಂದು ರೂಢಿ ಎನ್ನಿಸಿತ್ತು. ಮೊದಲು ಆಕೆ ತನ್ನ ಮನೆಗೆ ಬಂದಾಗ ಹುಡುಗೆಯಾಗಿ ಕಂಡಿದ್ದಳಲ್ಲವೆ ? ಅದೇ ಚಿತ್ರವೆ ಅವನ ಮನಸ್ಸಿನಲ್ಲಿ ಉಳಿದಿತ್ತು. ಬೆಳೆಯುವ ವಯಸ್ಸಿಗೆ ಬಂದ ಕುಮುದಳು ಸ್ವಲ್ಪಾವಧಿಯಲ್ಲಿಯೆ ಹೆಣ್ಣಿನ ಶಕ್ತಿಗಳಿಂದ ಕೂಡಿಕೊಂಡು ಬೆಳೆದಳಾದರೂ, ಸರಲೆಯು ಸಹವಾಸದ ಅಭ್ಯಾಸವಿದ್ದ ತನಗೆ ಆ ಬೆಳವಣಿಗೆ ಕಂಡಿರಲಿಲ್ಲ- ವೇನೊ ? ಆಗಾಗ ಆಕೆ ತನ್ನ ಮುಂದೆ ಇನ್ನೂ ಹುಡುಗೆ ಎನ್ನುವಂತೆಯೆ ಅವಳೊಡನೆ ನಗೆಯಾಡುತ್ತಿದ್ದನು. ಇದಲ್ಲದೆ ಹೆಚ್ಚಾಗಿ ಆಕೆಯನ್ನು ತಾನು ನೋಡುತ್ತಿರುವುದೂ ಸರಲೆಯು ಮಗ್ಗುಲಿಗೆ ತಾವಿಬ್ಬರೂ ಕುಳಿತಾಗಲೆ. ಇವೆಲ್ಲ ಕಾರಣಗಳಿಗಾಗಿ ಕುಮುದಳ ಬಗ್ಗೆ ಅವನ ದೃಷ್ಟಿಗೆ ಯಾವ ಕುತೂ ಹಲವೂ ಇದ್ದಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಅಂತಹ ಘಟನೆ ಅಕಸ್ಮಾತ್ತಾಗಿ ನಡೆದುದಕ್ಕೆ ಅವನು ಚಕಿತನಾದ, ಒಪ್ಪಲು ಮನಸ್ಸಿಲ್ಲದಿದ್ದರೂ ಕುಸು ಭಯ ಭೀತನಾದ. ಆ ದಿನವನ್ನೂ ಆ ಘಟನೆಯನ್ನೂ ಅವನು ಎಂದಿಗೂ ಮರೆ ಯುವುದು ಶಕ್ಯವಿರಲಿಲ್ಲ. ನಿಜವಾಗಿ ನೋಡಿದರೆ, ಆ ದಿನಕ್ಕೂ ಉಳಿದ ದಿನಗಳಿಗೂ ವ್ಯತ್ಯಾಸವೂ ಇರಲಿಲ್ಲ. ಕುಮುದಳು ಅನೇಕ ಸಲ ತನ್ನ ಕೋಣೆಗೆ ಬರುತ್ತಿದ್ದಳು, ಎಷ್ಟೋ ಸಲ ತಾನು ಬರೆಯುತ್ತಿದ್ದಾಗ ತನ್ನ ಹತ್ತಿರ ಬಂದು ನಿಂತು ಮಾತನಾಡುತ್ತಿದ್ದಳು, ಪುಸ್ತಕವನ್ನು ಕೇಳಿ ಒಯ್ಯು

ತ್ತಿದ್ದಳು, ಪುಸ್ತಕ ತುಸು ಗಡುಚಾಗಿದ್ದರೆ ಮುಂಚಿತ ಕತೆಯನ್ನು ಕೇಳಿ ಕೊಂಡು ಹೋಗುತ್ತಿದ್ದಳು, ಇನ್ನೆಷ್ಟೋ ಸಲ ತಾನಾಗಿಯೆ ಅವಳಿಗೆ ರಾಮಾಯಣ – ಮಹಾಭಾರತಗಳಲ್ಲಿಯ ಕತೆಗಳನ್ನು ಹೇಳಿದ್ದನು. ಇದೆಲ್ಲ ನಿಜ. ಆದರೆ – 'ನಿಜ' ಎಂದು ಹೇಳುವುದಾದರೂ ಹೇಗೆ ? ಒಂದೇ ಒಂದು ಸಲ ಅಕಸ್ಮಾತ್ತಾಗಿ ಕೈಗೆ ಕೈ ತಗುಲಿ, ತತ್ ಕ್ಷಣ ದೃಷ್ಟಿಗೆ ದೃಷ್ಟಿ ಕೂಡಿದಾಗ ಅದೆಲ್ಲ ಕನಸಿನ ಕತೆಯಂತೆ ಮರೆತುಹೋಯಿತು. ಆ ಕ್ಷಣದಿಂದ ಕುಮುದಳು ತನಗೆ ಬೇರೆಯಾಗಿಯೆ ಕಂಡಳು. ವಯಸ್ಸಿನಿಂದ, ಜ್ಞಾನದಿಂದ, ಅನುಭವದಿಂದ ಹಿರಿಯನಾದ ತನ್ನ ಮುಂದೆ ಕುಮುದಳು ಹೇಗೆ ಕಂಡರೂ ಹುಡುಗಿಯೆ – ಎಂದು ಸಮಾಧಾನವನ್ನು ತಂದುಕೊಂಡಿದ್ದನು. ಆದರೇನು ? ಆ ರಾತ್ರಿ ಎಂದಿನಂತೆ ಪುಸ್ತಕವನ್ನು ಒಯ್ಯಲು ಬಂದಾಗ, ಕಪಾಟಿನ ಎದುರು ತಾನು ಪಶುವಿನಂತೆಯೆ ವರ್ತಿಸಿದನಲ್ಲ ? ಎರಡು – ಮೂರು ವರ್ಷಗಳ ತರುವಾಯ, ಇಂದು ಮನಃಸ್ಥಿತಿ – ಬೇರೆಯಾಗಿ, ಆ ಅನುಭವದ ವಿಚಾರ ಮಾಡಿದರೂ ರಾಮಣ್ಣನಿಗೆ ಅದು ಸ್ಪಷ್ಟವಾಗಲಿಲ್ಲ. ಆ ದಿನ ತಾನು ಆಕೆಯನ್ನು ಒಮ್ಮೆಲೆ ಅಪ್ಪಿಕೊಂಡು ಮುದ್ದಿಟ್ಟುದೇಕೆ ? ಬುದ್ಧಿ ಪಕ್ವವಾಗಿದೆ, ಮನಸ್ಸು ಸುಸಂಸ್ಕೃತವಾಗಿದೆ, ಆದರೆ ದೇಹದ ಮೇಲೆ ಮಾತ್ರ ಮನುಷ್ಯನ ನಿಯಂತ್ರಣವು ಎಂದಿಗೂ ಶಕ್ಯವಿಲ್ಲ ಎಂದೆನ್ನಿಸಿತು ರಾಮಣ್ಣನಿಗೆ. ಮನವೆಂಬ ಮರ್ಕಟನ ತಡೆಯಲಾರೆನು ದೇವ ಎಂದ ದಾಸಯ್ಯಗಳಿಗೆ ಈ ಗೂಢವೆ ತಿಳಿದಿರಲಿಲ್ಲವೇನೊ ? — ಮನಸ್ಸನ್ನು ತಡೆಯುವುದು ಶಕ್ಯವಿದೆ, ಬುದ್ಧಿ ಇದ್ದವನಿಗೆ ತಿಳುಹಿಸಿಕೊಡುವುದು ಶಕ್ಯವಿದ್ದಂತೆ; ಆದರೆ ದೇಹವನ್ನು ತಡೆಯುವುದು ಹೇಗೆ ? ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನ ರಂಜಯತಿ – ಎಂಬ ಮಾತು ಸುಳ್ಳಲ್ಲ. ದೇಹವು ದಡ್ಡನಂತೆ, ಹೇಳಿದರೆ ತಿಳಿಯುವುದಿಲ್ಲ ; ದೇಹವು ಪಶುವಿನಂತೆ, ನಿಸರ್ಗವನ್ನೆ ಹಿಂಬಾಲಿಸಿ ನಡೆಯು ವುದು ; ದೇಹವು ಗಿಡ–ಬಳ್ಳಿಗಳಂತೆ, ಹುಟ್ಟಿದಂದಿನಿಂದ ಬೆಳೆಯುವುದೊಂದೇ ಹಟ. ಇಂತಹ ದೇಹಶಕ್ತಿ ಅಂದು ತನ್ನ ಬುದ್ಧಿ-ಮನಸ್ಸುಗಳನ್ನು ಜಯಿಸಿರ ಬೇಕು. ಹುಟ್ಟಿದ ಜೀವ ಮತ್ತೊಂದು ಜೀವವನ್ನು ಹುಟ್ಟಿಸಲೇಬೇಕು, ಅದಕ್ಕಾಗಿಯೆ ತನ್ನ ಬೀಜಗಳನ್ನು ಉದುರಿಸಿ ಗಿಡ ಸಾಯುವುದು , ಹುಟ್ಟಿದ ದೇಹ ಮತ್ತೊಂದು ದೇಹವನ್ನು ಹುಟ್ಟಿಸಲೇಬೇಕು. ದೇಹದ ಹುಟ್ಟು-

ಗುಣವದು. ತನ್ನ ದೇಹವೂ ಹಾಗೇ ನಡೆದುಕೊಂಡಿತು ಆ ರಾತ್ರಿ. ಸರಳೆ ಹಾಸಿಗೆ ಹಿಡಿದಂದಿನಿಂದ ತನ್ನ ದೇಹದ ಹಸಿವು ಹೆಚ್ಚಿರಬೇಕೇನೊ ! ಸರಳೆಯ ಹತ್ತಿರ ಕೂಡುವುದು, ಆಕೆಯ ಕೈ ಮುಟ್ಟುವುದು, ಆಕೆಯೊಡನೆ ಮಾತ-ನಾಡುವುದು ಇಂತಹ ಸಾನ್ನಿಧ್ಯ-ಸಹವಾಸಗಳಿಂದ ಆ ಹಸಿವು ಮರೆತಿರಬೇಕೆ ಹೊರತು ಹಿಂಗಿರಲಿಕ್ಕಿಲ್ಲ. ಇಲ್ಲವಾದರೆ ಮೊದಲನಲ ಅನ್ನ ದೃಷ್ಟಿಗೆ ಬಿದ್ದೊಡನೆ ಹಸಿ ಹದ್ದಿನಂತೆ ಹಾರಿ ಅದನ್ನು ಹೊಡೆಯುತ್ತಿರಲಿಲ್ಲ. ಅಂದು ಕುಮುದಳನ್ನು ಮೊದಲ ಸಲ ಬಿಗಿದಪ್ಪಿದಾಗ ತನ್ನ ಸಡತಗಾಗಿ ತನಗೆಯೆ ಆಶ್ಚರ್ಯವಾಗಿತ್ತು. ಗಟ್ಟಿಗಟ್ಟಿಯಾಗಿ ಅವಳನ್ನು ಹಿಡಿದು, ಅವಳ ಹಣೆ-ತುಟಿ-ಕಣ್ಣಿವೆ-ಗಲ್ಲ-ಗದ್ದ-ಭುಜ-ಎದೆ ಇವುಗಳನ್ನು ಒಂದೇ ಸವನೆ ಚುಂಬಿಸುವಾಗ ತಾನು ಆಕೆಗೆ ರಾಕ್ಷಸನಂತೆ ಕಂಡಿರಬಹುದಲ್ಲವೆ ? ಅದಕ್ಕಾಗಿಯೆ ಆ ಹುಡುಗೆ ಹೆದರಿ ಓಡಿದಳೇನೊ ಎಂದೆನ್ನಿಸಿತ್ತು.

ಕುಮುದಳು ತನ್ನ ತೋಳ-ಸೆರೆಯಿಂದ ಓಡಿ ಹೋದ ಮೇಲೆ ರಾಮಣ್ಣನಿಗೆ ಎಚ್ಚರ ಬಂದಂತಾಗಿತ್ತು. ಮೊದಲ ಕ್ಷಣ ತಾನು ಏನು ಮಾಡಿದನೆಂಬುದರ ಅರಿವೇ ಅವನಿಗಿದ್ದಿರಲಿಲ್ಲ. ಮೈ ಬೆಮರಿದಾಗ ಜ್ವರ ಇಳಿದಂತಾಗಿ ಎಚ್ಚರಾಯಿತು. ತಾನು ಮಾಡಿದ್ದು ತಪ್ಪು ಎನ್ನಿಸಿತು. ಒಂದೆಡೆ ಹಾಸಿಗೆ ಬಿಟ್ಟು ಸರಿದಾಡಲು ಅಸಮರ್ಥಳಾದ ಸರಳೆಗೆ ದ್ರೋಹ, ಇನ್ನೊಂದೆಡೆ ಆಶ್ರಯಕೊಟ್ಟುದಕ್ಕೆ ಬೆಲೆ ಬೇಡಿದಂತಾಗಿ ಕುಮುದಳಿಗೆ ಅನ್ಯಾಯ ! ಈ ವಿಚಾರ ಬಂದೊಡನೆ ತಿರಸ್ಕಾರದ ನಗೆ ಮೂಡಿತ್ತು ರಾಮಣ್ಣನ ಮುಖದ ಮೇಲೆ ಮನುಷ್ಯನ ಸಂಸ್ಕೃತಿ ಎಂದರೆ ಎಂತಹ ಆತ್ಮವಂಚನೆ ! ಸತ್ಯವನ್ನು ಮುಚ್ಚಿಡುವುದೆ ಬುದ್ಧಿವಂತಿಕೆ ಎಂಬುದಕ್ಕೆ ಎಂತಹ ದೃಷ್ಟಾಂತ ! "ದ್ರೋಹ - ಅನ್ಯಾಯ" ಎಂಬ ಶಬ್ದಗಳನ್ನೇನೊ ತಾನು ಉಪಯೋಗಿಸಿದ. ಅವು ಬರೀ ಶಬ್ದ ಮಾತ್ರ; ಕಲ್ಪನೆಗಳನ್ನು ಹುಟ್ಟಿಸುವ ಸಾಧನ ಮಾತ್ರ ! ಆ ಶಬ್ದಗಳಿಂದ ತನ್ನ ಸುಸಂಸ್ಕೃತ ಬುದ್ಧಿಗೆ ಸಮಾಧಾನವಾಯಿತೇನೊ ನಿಜ ಆದರೆ ವಾಸ್ತವಿಕ ಸತ್ಯವು ಆ ಕಲ್ಪನೆಗಳಲ್ಲಿಲ್ಲ. ವಾಸ್ತವಿಕ ಸತ್ಯವು ತನ್ನ ದೇಹದ ಮೇಲೆದ್ದ ರೋಮಾಂಚದಲ್ಲಿದೆ, ತನ್ನ ಸಮಾಧಾನದ ಸಂಕೇತಗಳಾದ ಬೆವರು ಹನಿಗಳಲ್ಲಿವೆ, ನೆನಪಿನಿಂದ ಕಚ್ಚುತ್ತಿರುವ ತನ್ನ ತುಟಿಗಳಲ್ಲಿವೆ, ಆ ತುಂಬಿದ ಸ್ತನಗಳ ಸ್ಪರ್ಶದಿಂದ

ಚೇತರಿಸಿಕೊಂಡ ತನ್ನ ವಕ್ಷಃಸ್ಥಲದಲ್ಲಿದೆ, ಆ ಮೆತ್ತನ್ನ ತೋಳುಗಳನ್ನು ಬಿಗಿದಪ್ಪಿ ದಣಿದು ಕೃತಾರ್ಥವಾದೆವೆಂದು ಜೋತುಬಿದ್ದ ತನ್ನ ಕೈಗಳಲ್ಲಿದೆ ವಾಸ್ತವಿಕ ಸತ್ಯ! ಈಗ ಮಾತ್ರ ರಾಮಣ್ಣನು ನಿಜವಾಗಿಯೂ ಬೆದರಿದನು. ಮಾಡಿದ ಕೆಲಸ ಕೆಟ್ಟದೆಂದಾಗಲೂ ಮನಸ್ಸಿಗೆ ಸಮಾಧಾನವಾಗುವುದೆಂದರೆ– ಅದು ಯಾವುದರ ಲಕ್ಷಣ? ತಾಮಸ ಸಮಾಧಾನವದು – ಛಿ! ಮತ್ತೆ ಬರೀ ಪೊಳ್ಳು ಶಬ್ದಗಳು....ಹೋಗಲಿ – ಎಂದುಕೊಂಡಿದ್ದ. ಯಾಕೆ? ಒಮ್ಮೆ ಏನೊ ನಡೆದುಹೋಯಿತು, ಇನ್ನೊಮ್ಮೆ ಹಾಗೆ ನಡೆಯದಂತ ನೋಡಿದರಾಯಿತು, ಇದೇನು ದಿವಸನಿತ್ಯದ ಅನುಭವವಲ್ಲ, ಬುದ್ಧಿಪೂರ್ವಕವಾಗಿ ಮಾಡಿದ್ದಲ್ಲ, ಯಾಕೆ ಈ ಹಾಳು ವಿಚಾರ ಎಂದು ಎಲ್ಲವನ್ನೂ ಮರೆಯಲು ನಿರ್ಧರಿಸಿ ತನ್ನ ಕೆಲಸಕ್ಕೆ ತೊಡಗಿದ್ದ.

ಆದರೆ ಮರೆಯುವುದು ಶಕ್ಯವಾಗಲಿಲ್ಲ, ಮನಸ್ಸು ಮತ್ತೊಂದು ಕೆಲಸದಲ್ಲಿ ತೊಡಗಲು ಸಿದ್ಧವಿರಲಿಲ್ಲ. ಎಷ್ಟು ಯತ್ನವನ್ನು ಮಾಡಿದರೂ ಕುಮುದಳನ್ನು ಆಲಿಂಗಿಸಿದ ಅನುಭವವನ್ನು ಮೆಲುಕಾಡಿಸುವುದರಿಂದ ಮನಸ್ಸನ್ನು ಬಿಗಿಹಿಡಿಯುವುದಾಗಲಿಲ್ಲ. ಕೊನೆಗೆ ಸಿಟ್ಟಿಗೆದ್ದಿದ್ದನು. ತನ್ನನ್ನು ತಾನು ಬೈದುಕೊಂಡಿದ್ದನು, ಯಾವ ಪ್ರಯೋಜನವೂ ಸಾಧಿಸಿರಲಿಲ್ಲ. ತನ್ನ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಂಡರೆ ಮನಸ್ಸು ಹಾದಿಗೆ ಬರಬಹುದೆಂಬ ವಿಚಾರದಿಂದ ಕುಮುದಳ ಕ್ಷಮೆಯನ್ನು ಬೇಡಲು ನಿರ್ಧರಿಸಿದ, ಅವಳ ಕೋಣೆಗೆ ಹೊರಟ. ಮತ್ತೆ ತಡೆದ. ಕ್ಷಮೆ ಬೇಡುವುದಕ್ಕಾಗಿಯೊ? ದೇಹದ ಹಸಿವನ್ನು ಹಿಂಗಿಸುವುದಕ್ಕಾಗಿಯೊ? ಯಾವ ವಿಚಾರದಿಂದ ತಾನು ಅವಳ ಕಡೆ ಹೊರಟಿರುವನೆಂಬುದರ ಬಗ್ಗೆ ಅವನಿಗೇ ಸಂಶಯ ಬಂದಿತು, ತಡೆದ. ಪಾಪ! ಎಷ್ಟಾದರೂ ಆಶ್ರಿತಳು, ವಯಸ್ಸಿನಿಂದ ಚಿಕ್ಕವಳು. ತನ್ನಲ್ಲಿ ಆದರ – ವಿಶ್ವಾಸಗಳನ್ನಿಟ್ಟವಳು, ಎಷ್ಟು ಹೆದರಿದಳೊ! ಏನು ತಿಳಿದುಕೊಂಡಿರಬಹುದೊ! ಆಕೆಯನ್ನು ಸಂತೈಸುವುದು ತನ್ನ ಕರ್ತವ್ಯ ಎಂದು ಮತ್ತೆ ಹೆಜ್ಜೆಯನ್ನು ಮುಂದಿಟ್ಟ. ಆದರೆ "ಸಂತೈಸುವುದು" ಎಂಬ ವಿಚಾರಕ್ಕೆ ಪ್ರತಿಯಾಗಿ ತನ್ನ ಕೈ ಅವಳ ಮೈಯನ್ನು ಮುಟ್ಟಲು ಈಗಲೇ ಸಿದ್ಧವಾಗಿದೆ ಎಂಬುದು ಲಕ್ಷ್ಯಕ್ಕೆ ಬಂದೊಡನೆ ಮತ್ತೆ ಹೆಜ್ಜೆಯನ್ನು ಹಿಂದಿರುಗಿಸಿದ; ಹತಾಶನಾದ, ರೇಗಿದ, ಇದೊಂದು ತನಗೆ ಅವಮಾನ ಎಂದು

ಒಳಗಿಂದೊಳಗೆಯೆ ತಬ್ಬರಿಸಿದ. ತಾನು, ತನ್ನ ಶಿಕ್ಷಣ, ತನ್ನ ಸಂಸ್ಕೃತಿ, ತನ್ನ ವ್ಯವಸಾಯ – ಇವೆಲ್ಲ ಯಾವ ಕಡೆ, ಮನಸ್ಸಿನೊಳಗೆ ತಾಂಡವವಾಡು-ತ್ತಿದ್ದ ವಿಚಾರ ಯಾವ ಕಡೆ? ಒಮ್ಮೆ, ಹಾಸಿಗೆ ಹಿಡಿದ ಸರಲೆಯು ಮೇಲೆಯೆ ಇದರ ನೈತಿಕ (ಏನು ಅನೈತಿಕವೊ?) ಜವಾಬ್ದಾರಿ, ಎಂದುಕೊಂಡ; ಆದರೆ ಇಂದಿನ ವರೆಗೂ ಇಂತಹ ವಿಚಾರಕ್ಕೆ ಆಸ್ಪದವಿದ್ದಿರಲಿಲ್ಲ, ಈ ಕುಮುದಳ ಸಾನ್ನಿಧ್ಯದಿಂದಲೆ ನಡೆಯಿತು, ಆದುದರಿಂದ ಇದರ ಹೊಣೆ ಕುಮುದಳದು, ಎಂದು ವಾದಿಸಿಕೊಂಡ; ಕಾಮಜೀವನವು ತನ್ನನ್ನು ಅವಹಾಸ್ಯಕ್ಕೀಡುಮಾಡಿತಲ್ಲ, ಎಂದು ಚಡಪಡಿಸಿದ. ಅಂತೂ ಹೇಗೊ ಆ ರೀತಿ ಅಲ್ಲಿಗೆಯೆ ಆ ಕತೆ ಮುಗಿದಂತಾಗಿತ್ತು. ಮುಗಿದಂತಾಗಿತ್ತು, ಆದರೆ ಮುಗಿದಿರಲಿಲ್ಲ ಎಂಬುದನ್ನು ಎರಡು–ಮೂರು ವರ್ಷ ಗತಿಸಿದ ತರುವಾಯ, ಇಂದು ಕೂಡ ಅವನು ಒಪ್ಪಿಕೊಳ್ಳಬೇಕಾಯಿತು. ಹೇಗೋ ಚಡಪಡಿಸುತ್ತ ಹಾಸಿಗೆಯ ಮೇಲೆ ಒರಗಿದಾಗ ಬೇರೊಂದು ವಿಚಾರ ಬಂದಿತು. ಚಟ್ಟನೆ ಎದ್ದು ಕುಳಿತು, ಇದೆಂತಹ ತೊಡಕು? ಇದುವರೆಗೆ ಹೊಳೆದಿರಲೇ ಇಲ್ಲ! ಕುಮುದಳು ಇಲ್ಲಿಂದ ಓಡಿಹೋದದ್ದು ಎಲ್ಲಿ? ತನ್ನ ಕೋಣೆಗೊ? ಸರಲೆಯು ಕಡೆಗೊ? ಕುಮುದ ಗಾಬರಿಗೊಂಡಿದ್ದಳೆಂಬುದರ ಬಗ್ಗೆ ಅವನಿಗೆ ಸಂಶಯವಿದ್ದಿರಲಿಲ್ಲ. ಹೆದರಿದ ಹುಡುಗಿ ಸರಲೆಯು ಕಡೆ ಧಾವಿಸಿದ್ದರೆ? ನಡೆದುದೆಲ್ಲವನ್ನೂ ಆಕೆಯ ಮುಂದೆ ಹೇಳಿದ್ದರೆ?....ರಾಮಣ್ಣ ಈಗ ಕುಳಿತಲ್ಲಿಯೆ ಚಳಿಜ್ವರ ಬಂದಂತೆ ಗಡಗಡ ನಡುಗಿದ. ಹೋಗಿ ನೋಡಿ ಬರೋಣವೆ? – ಎಂದ... ಎದ್ದು ಮೆಲ್ಲನೆ ಹೊರಬಿದ್ದ ಕೋಣೆಯಿಂದ. ಒಂದು ನಿಮಿಷ ತಡೆದ. ಕುಮುದಳು ಕೋಣೆಯಲ್ಲಿರುವಳೆ ಇಲ್ಲವೆ ನೋಡಿ ಬಿಟ್ಟರಾಯಿತು ಎಂಬ ವಿಚಾರ ಬಂದಿತು. ಕೂಡಲೆ ದೆವ್ವಿಗೆ ಹೆದರಿದವನಂತೆ ಸರಲೆಯ ಕೋಣೆಯ ಕಡೆ ಧಾವಿಸಿದ. ಕುಮುದಳ ಕೋಣೆಗೆ ಹೋಗಿದ್ದರೆ ತಾನು ಹೇಗೆ ನಡೆದುಕೊಳ್ಳಬೇಕೆಂಬುದರ ವಿಶ್ವಾಸ ತನಗೇ ಇದ್ದಿಲ್ಲವಾದ್ದರಿಂದ ಅವನು ಅಷ್ಟೊಂದು ಹೆದರಿ ಸರಲೆಯ ಕೋಣೆಗೆ ಧಾವಿಸಲು ಧೈರ್ಯಮಾಡಿದ್ದ. ಮನೆಯಲ್ಲಿ ದೆವ್ವ ಕಂಡಂತಾಗಲು ಪುಕ್ಕನು ಕೂಡ ಹೊರಗೆ ಕತ್ತಲಲ್ಲಿ ಓಡುವ ಧೈರ್ಯ ಮಾಡುವುದಿಲ್ಲವೆ? ಅಂತೂ ಸರಲೆಯ ಕೋಣೆಯಲ್ಲಿ ಯಾವ ಸದ್ದೂ ಇರಲಿಲ್ಲ. ಯಾರಿಗೆ ಗೊತ್ತು? ತನಗೆ ಹೆದರಿ ಕುಮುದಳು ಇಂದು ಇಲ್ಲಿಯೆ ಮಲಗಿದ್ದರೆ?

ನೋಡಿಯೆ ಬಿಡೋಣ – ಎಂದು ಮೆಲ್ಲನೆ ಬಾಗಿಲನ್ನು ತೆರೆದಿದ್ದ.

"ಯಾರು ?"

ಸರಲೆಯ ದನಿಯನ್ನು ಕೇಳಿ ಬೆಚ್ಚಿಬಿದ್ದ. ಈಗ ಯಾರು ಮಾತ-ನಾಡಿದರೂ ತನಗೆ ಛೀ ಹಾಕುವವರೆ ಎಂಬ ವಿಚಾರ ಅಂತರಂಗದ ಹಿನ್ನೆಲೆಯಲ್ಲಿ ಸುಳಿಯುತ್ತಿತ್ತೇನೊ? ಅದಕಾಗಿಯೆ ಕಳವು ಮಾಡುವಾಗಲೆ ಸಿಕ್ಕ ಕಳ್ಳನಂತೆ ಬೆದರಿದ್ದ.

"ಯಾರು ? ಆಂ ? ಅಲ್ಲ – ಯಾರಿಲ್ಲ – ನಾನೇ' ಎನ್ನಬೇಕಾಯಿತು ಅವನಿಗೆ.

"ಯಾಕ ? ಈವತ್ತು ಬರೀಲಿಕ್ಕೆ ಮನಸ್ಸೇ ಆಗವಲ್ಲದೇನು ?"

ಗಾಯದ ಮೇಲೆ ಉಪ್ಪನ್ನು ಸುರುವಿದಂತಾಯಿತು ರಾಮಣ್ಣನಿಗೆ.

"ಇಲ್ಲ, ಬರೀತಾನೇ ಕೂತಿದ್ದೆ, ನಿನ್ನ ದನಿ ಕೇಳಿಸಿಧಾಂಗ ಆಯ್ತು, ಏನು ಬೇಕಾಗೇದೇನು ಅಂತ ನೋಡ್ಲಿಕ್ಕೆ ಬಂದಿದ್ದೆ."

"ಅಯ್ಯ! ನನಗೂ ಏನೊ ಸದ್ದು ಕೇಳಿಸಿಧಾಂಗ ಆಯ್ತು........ ಕುಮುದನೂ ಇನ್ನೂ ಮಲಗಿಲ್ಲೊ ಏನೊ ?"

"ನಾ ನೋಡಿಲ್ಲ, ಬರೀತಾ ಕೂತಿದ್ದೆ. ಕರೀಲೇನು ಆಕೀನ್ನ ?"

ಆ ಕೊನೆಯ ವಾಕ್ಯ ಹೊರಬಿದ್ದೊಡನೆ ನಾಲಗೆಯನ್ನು ಕತ್ತರಿಸಿ-ಕೊಂಡು ಬಿಡಬೇಕು ಎಂದೆನಿಸಿತ್ತು ಅವನಿಗೆ.

"ಅಯ್ಯ ! ಅವನ್ನೇನ ಕರೀತೀರಿ, ಪಾಪ ! ಸಣ್ಣ ಹುಡುಗಿ – ಮಲಗಿ ಕೊಳ್ಳಲಿ ಬಿಡಿರಿ."

"ಅಲ್ಲ, ನಿನಗೇನಾದ್ರೂ ಬೇಕಾಗಿದ್ದರ, ಅಂತ."

ಸರಲೆ ಆ ಮಾತಿಗೆ ಮುಗುಳ್ನಗೆಯನ್ನು ಬೀರಿದಳು.

"ನನಗೇನು ಬೇಕಾಗೋದು ? ನೀವಿದ್ದೀರಿ, ಕುಮುದ ಇದ್ದಾಳ. ನೀವಿಬ್ಬರೂ ಕೂಡಿ ಮನೀ ನಡೆಸಿಕೊಂಡು ಹೋಗ್ತೀರಿ. ಇನ್ನೇನೊ ನನಗ ಚಿಂತೆಯಿಲ್ಲ. ಈಗ ನನ್ನ ಕಣ್ಣು ಮುಚ್ಚಿದರೆ ನಾಕು" ಎಂದಳು.

ಗುಡುಗು – ಅಲ್ಲ, ಅದು ತನ್ನ ಎದೆ ಹೊಡೆದುಕೊಳ್ಳುವ ಸದ್ದು ! ಸರಲೆಯ ಆ ಮಾತಿನಿಂದ ರಾಮಣ್ಣನ ಹೃದಯ ಸಿಡಿದು ಚೂರುಚೂರಾ-ದಂತಾಯಿತು. ಯಾಕೆ ಈ ಮಾತು ? ಇದರ ಅರ್ಥವೇನು ? ಸರಲೆಗೆ

ಗೊತ್ತಾಗಿರಬಹುದೆ ? ತನ್ನ ಮೇಲೆ ಸಂಶಯ ಬಂದಿರಬಹುದೆ ? ರಾಮಣ್ಣ ಹೆಂಡತಿಯ ನಿರ್ವಿಣ್ಣ, ಮುಗ್ಧ ಮುಖವನ್ನು ನೋಡಿದ. ಏನೊ ಒಂದು ಕಸಿವಿಸಿಯಾದಂತಾಗಿತ್ತು. ಸರಲೆಯು ಹತ್ತಿರ ಬಂದು ಅವಳ ಹಣೆಯ ಮೇಲೆ ಕೈಯಿಟ್ಟ.

"ಹುಚ್ಚಿ, ಹುಚ್ಚಿ ನೀನು ಅಂದೆ ಬಿಸಿಲು ಇದ್ದರ ಗಿಡ-ಬಳ್ಳಿ ಬದುಕ್ತಾವ – ಹಾಂಗ ನಿನ್ನ ತರದ ಕಣ್ಣಿನ ಬಿಸಿಲು ಇರೋತನಕಾನ ನಾವು ಉಸಿರಾಡಿಸೋದು, ಹಾರಾಡೋದು" ಎಂದಿದ್ದ.

ಸರಲೆಯು ಆಗ ತನ್ನ ಕೈಯಿಂದ ಗಂಡನ ಕೈಯನ್ನು ತಟ್ಟುತ್ತ,

"ಇಷ್ಟೊಂದು ಹೆಸರಾದ ಲೇಖಕರಿಗೆ ಇಷ್ಟು ಸವಿ ಮಾತಾಡೋದು ಕಲಿತಿ ಏನು ?" ಎಂದು ನಗೆಮೊಗದಿಂದ ಕೇಳಿದ್ದಳು.

"ಸವಿ ಮಾತು ? ಸವಿ ನನ್ನ ಮಾತಿನೊಳಗೆ ಇಲ್ಲ" ಎಂದಿದ್ದ.

"ಮತ್ತೆಲ್ಲಿರತದ ?" ಎಂದು ಕೇಳಿದಳು

ತಟ್ಟನೆ ಬಾಗಿ ಅವಳ ಹಣೆಗೆ ಮುದ್ದಿಟ್ಟು

"ಸವಿ ಎಲ್ಲಿ ಇರ್ತದ ಅನ್ನೋದು ಅಲ್ಲಿ ಕೂತು ಅನುಭವಿಸೋ ಭೃಂಗಕ್ಕ ಗೊತ್ತು, ಕಮಲಗ ಏನು ತಿಳಿಯೋದು ?" ಎಂದು ಅವಳ ಹೊದಿಕೆಯನ್ನು ಸರಿಪಡಿಸಿ ಹೊರಟ.

"ಈಗ ಬರ್ಪ್ಪದ್ದ ನಾವು ಎಂಥಾ ಮರೀಲಾರದಂಥಾ ಹಣೆಬರಹ ಸಿಕ್ಕದ ?"

"ಏನಂದಿ ? ಹಣೆಬರಹ ?"

ನಗುತ್ತ ತಾನು ಮುತ್ತಿಟ್ಟ ಹಣೆಯ ಭಾಗವನ್ನು ಸರಲೆಯು ಸೂಚಿಸಿದ್ದಳು. ಆಗ ರಾಮಣ್ಣನಿಗೆ ಕೋಣೆಗೆ ಹೋಗಿ ಒರಗಿದೊಡನೆ ಗಾಢವಾದ ನಿದ್ರೆ ಆವರಿಸಿತ್ತು.

ಇದೆಲ್ಲ ನೆನಪನ್ನು ಅನುಭವಿಸುತ್ತ ರಾಮಣ್ಣ ಮತ್ತೆ ಭಾವಪಟವನ್ನು ನೋಡಿದ. "ಸರಲಾ, ನಿನ್ನ ಹಣೆಬರಹ ಅಷ್ಟು ಒಳ್ಳೆಯದೆಂದು ಅಂದು ಹೇಳಿದಿ, ಮುಂದೆ ಕಣ್ಮರೆಯಾದಿ ! ಆದರೆ ಇಂದಿಗೂ ಜೀವಂತನಾಗಿದ್ದು ಅದನ್ನು ನೆನೆಯುವ ನನ್ನ ಹಣೆಬರಹದ ಕಲ್ಪನೆ ನಿನಗಿದೆಯೆ ?" ಎಂದು ಮನಸ್ಸಿನಲ್ಲಿಯೆ ಸತ್ತ ಹೆಂಡತಿಯ ಚಿತ್ರಕ್ಕೆ ಸವಾಲನ್ನು ಹಾಕಿದ್ದ. ಶುದ್ಧಾಂತಃಕರಣದ

ಸರಲೆಯ ಮಾತುಗಳಿಂದ ತನ್ನ ಕ್ಷುಬ್ಧ ಹೃದಯ ಶಾಂತವಾಗಿ, ಹಗುರಾಗಿ ತಾನು ಆ ರಾತ್ರಿ ಗಾಢವಾಗಿ ಮಲಗಿದ್ದರೂ ಮರುದಿನ ಎಚ್ಚತ್ತ ಮೇಲೆ ರಾಮಣ್ಣನ ಹೃದಯ ಮತ್ತೆ ಅಳುಕಿತ್ತು. ಈಗ ಆ ಮಾತನ್ನೆಲ್ಲಿ ಒಪ್ಪಿಕೊಳ್ಳಲು ಆತಂಕವೇನು? ಒಪ್ಪಿಕೊಳ್ಳುವುದೂ ತನ್ನ ಹೃದಯದ ಸಾಕ್ಷಿಯಾಗಿದೆ. ಸರಲೆಯ ಬಗ್ಗೆ ಆಗಿನ ಸಂಶಯ ತೊರೆದು ನಿರ್ಭೀತನಾಗಿದ್ದರೂ ಮರುದಿನ ಅವನನ್ನು ಬೇರೊಂದು ಭಯವು ಸುತ್ತಿತು. ಕುಮುದಳನ್ನು ಎದುರಿಸುವುದು ಹೇಗೆ? ರಾತ್ರಿ ಆ ರೀತಿ ರಾಕ್ಷಸನಂತೆ ನಡೆದುಕೊಂಡು ಈಗ ಮುಖವನ್ನು ತೋರಿಸುವುದು ಹೇಗೆ? ಅವಳಿಂದ ಮುಖವನ್ನು ತಪ್ಪಿಸುವುದಾದರೂ ಹೇಗೆ? ಬೆಳಗಿನ ಚಹದಿಂದ ರಾತ್ರಿಯ ಊಟದವರೆಗೆ ಎಲ್ಲವನ್ನೂ ಆಕೆಯೇ ನೋಡಿಕೊಳ್ಳುವಳು. ಕೊನೆಗೆ ರಾಮಣ್ಣ ಸರಲೆಯ ಮೊರೆಯನ್ನೆ ಹೊಕ್ಕಿದ್ದ. ಎದ್ದು ಕೋಣೆಯಿಂದ ಹೊರಬಿದ್ದವನೆ ಸರಲೆಯ ಹತ್ತಿರ ಬಂದು ಕುಳಿತಿದ್ದ, ಅಲ್ಲಿಯೇ ಚಹ ಕುಡಿದಿದ್ದ. ಆದರ ಕ್ರಮೇಣ ರಾಮಣ್ಣ ಜಿಪ್ಪಾಗಬೇಕಾಗಿ ಬಂದಿತ್ತು. ತಾನು ಕುಮುದೆಳಿಗೆ ಹೆದರಿದ್ದನಲ್ಲವೆ? ಆದರ ಆಕೆಯ ನಡವಳಿಕೆಯನ್ನು ನೋಡಿದರ ತನ್ನ ಹೆದರಿಕೆಗೆ ಕಾರಣವೆ ಇದ್ದಿರಲಿಲ್ಲ ಎನಿಸಿತ್ತು ಅವನಿಗೆ. ಕುಮುದಳ ಮುಖದ ಮೇಲೆ ಸದಾ ಹಿಡಿದ ಸಂತಸದ ಕಳೆ! ರಾಮಣ್ಣನಿಗೆ ಸಂಶಯ ಬಂದಿತ್ತು. ತನಗೆಯೆ ಈಗ ಕುಮುದಳು ಬೇರೆಯಾಗಿ ಕಾಣುತ್ತಾಳೆಯೆ? ಇಲ್ಲವೆ ಸಹಜವಾಗಿಯೆ ಆ ಕಳೆ ಇದೆಯೆ? ತಾನು ಧೈರ್ಯ ತಂದುಕೊಂಡು ದಿಟ್ಟಿಸಿ ನೋಡಿದ ಅವಳನ್ನು. ಆಗ ಅವಳು ನಾಚಿದರೂ ಮುಗುಳ್ನಗೆಯನ್ನು ಬೀರಿ ಮುಖವನ್ನು ತಿರುಗಿಸಿದ್ದಳು!

ರಾಮಣ್ಣ ತಲೆಯನ್ನು ಜಾಡಿಸಿದ. ನೆನಪುಗಳ ಒತ್ತಡ ತಡೆಯದಂತಾಯಿತೇನೊ! ಕುರ್ಚಿಯಿಂದೆದ್ದು ಅತ್ತಿತ್ತ ಹೆಜ್ಜೆಯನ್ನಿಡತೊಡಗಿದ. "ಮುಗುಳ್ನಗೆಯನ್ನು ಬೀರಿ ಮುಖವನ್ನು ತಿರುಗಿಸಿದ್ದಳು ಅಂದೆ" ಎಂದ ಗಟ್ಟಿಯಾಗಿ. ಅಷ್ಟು ದಿನಗಳ ತರುವಾಯವೂ ಅವನಿಗೆ ಆ ಚಿತ್ರ ಮರೆತಿರಲಿಲ್ಲ. ಅದೇ ಕುಮುದಳನ್ನು ಇಂದು ತಾನು ಸಿನಿಮಾಕ್ಕೆ ಕರದೊಯ್ಯಲು ಸಿದ್ಧನಿರಲಿಲ್ಲ! ಕಾಲಚಕ್ರ ಯಾವ ರೀತಿ ತಿರುಗಿದೆ? ಅಂದು ಸರಲೆ ಸಾಕ್ಷಾತ್ತಾಗಿ ಹೃದಯದ ಆತಂಕದಂತೆ ಕಣ್ಣೆದುರಿದ್ದಳು. ಆದರೂ ಕುಮುದಳ ಬೇಟಿಯಾಡಿದ ತಾನು.

ಈಗ "ಇದೇನು ?" ಎಂದು ಕೇಳಬಹುದಾದ ಸರಲೆ ಜೀವದಿಂದಿಲ್ಲ; ಆದರೆ ಬೆನ್ನಟ್ಟಿದವರನ್ನು ತಪ್ಪಿಸಲು ಓಡುವ ಬೇಟೆಯ ಮೃಗ ತಾನಾಗಿದ್ದಾನೆ! ಕಾಲಚಕ್ರವೆ? ಅಂದು ಮಾತ್ರ ಕುಮುದಳ ನಾಚಿಕೆಯ ಮತ್ತು ಮುಗುಳ್ನಗೆಯ ಮುದ್ರೆಯನ್ನು ನೋಡಿದಾಗ "ಪ್ರಕೃತಿಯ ಜಾಲ" ಎಂದುಕೊಂಡಿದ್ದ, ಇಂದಿನಂತೆ ಕಾಲಚಕ್ರದ ವಿಚಾರ ಇಲ್ಲವೆ ಸಂದರ್ಭ ಬಂದಿರಲಿಲ್ಲ. ಇದೊಂದು ಪ್ರಕೃತಿಯ ಜಾಲ ಎಂದುಕೊಂಡಿದ್ದ. ಬಿಸಿಲಿನ ದಾಹ ಬಳ್ಳಿಗೆ ಪ್ರಾಣದಾಯಕ, ಗಂಡಸಿನ ಆಕ್ರಮಣ ಹೆಣ್ಣಿಗೆ ಪ್ರಾಣದಾಯಕ; ಇದೊಂದು ಪ್ರಕೃತಿಯ ಜಾಲ ಎಂದುಕೊಂಡಿದ್ದ. ಅದೇನೆ ಇರಲಿ, ಕುಮುದಳಿಂದ ಯಾವ ಭಯವೂ ಇಲ್ಲ ಎಂದು ಮನಸ್ಸು ಹಗುರಾಗಿ ಇಡಿಯ ದಿನವನ್ನು ಉಲ್ಲಾಸದಲ್ಲಿ ಕಳೆದಿದ್ದ. ಸಂಜೆಗೆ ಮನೆಗೆ ಮರಳಿದಾಗ ಇನ್ನೂ ಒಂದು ಮೋಜು ಕಾದಿತ್ತು. "ಮೋಜು" ಎಂದು ಆಗ ಎನ್ನಿಸಿತ್ತು. ಈಗ ಅದೂ ಒಂದು ತೊಡಕೇ ಆಗಿತ್ತು ಎಂದು ಹೊಳೆಯಿತು ಅವನಿಗೆ. ಆ ಸಂಜೆ ಮನೆಗೆ ಬಂದರೆ ಮನೆಯ ಸ್ವರೂಪವೆ ಬದಲಾಗಿದೆ! ನೋಡಿದಲ್ಲೆಲ್ಲ ಸ್ವಚ್ಛತೆ, ಶಿಸ್ತು, ಓರಣ! "ಎಲ ಇದೇನು? ಈವೊತ್ತು ಇಡೀ ಮನೀನೇ ಅಗಸನಿಗೆ ಕೊಟ್ಟಿದ್ದಿರ್‍ಯೊ ಏನು" ಎಂದು ಸರಲೆಗೆ ಕೇಳಿದ್ದ.

"ಯಾಕ? ಅಗಸನ್ನ ನೆನಪಾಯ್ತು? ನೀವೂ ರಾಮನ್ಹಾಂಗ ಅಗಸನಿಗಾಗಿ ಹೆಂಡ್ತೀನ್ನ ಬಿಡುವವರೋ ಏನು?" ಎಂದು ಸರಲೆಯೂ ನಗೆಯಾಡಿದ್ದಳು.

ಒಂದು ನಿಮಿಷ ರಾಮಣ್ಣ ಗಾಬರಿಯಾಗಿದ್ದ. ಆದರೆ ಅಷ್ಟರಲ್ಲಿ ಸರಲೆಯೆ ಮಾತನ್ನು ಮುಂದರಿಸಿದ್ದಳು.

"ಇಷ್ಟು ಯಾಕೆ ನೋಡ್ತೀರಿ? ಮನೀನ್ನ ಸ್ವಚ್ಛ ಮಾಡಿದವರು ಮತ್ತೊಬ್ಬರಿದ್ದಾರ. ಆ ಶಕ್ತಿ ನಿಂ ಮಾಡಿಕೊಂಡ ಹೆಂಡತೀಗೆ ಉಳಿದಿಲ್ಲ. ಅದಕ್ಕಂಿದೆ – ಕೈಲಾಗದ ಹೆಂಡ್ತೀನ ಬಿಟ್ಟು — "

ಸರಲೆಯ ಮಾತು ಮುಗಿದಿಲ್ಲ. ಯಾಕೆಂದರೆ, ಅಷ್ಟಕ್ಕೆ ಎಲ್ಲವೂ ಹೊಳೆದು ತಾನು ಗಹಗಹಿಸಿ ನಕ್ಕಿದ್ದ. ಕುಮುದಳು ಇದನ್ನೆಲ್ಲ ಮಾಡಿದವಳು ಎಂದು ಹೊಳೆದಿತ್ತು ಅವನಿಗೆ. ಆದರೆ ಅಂದು ತಾನು ನಕ್ಕದ್ದು ಸರಲೆಯ

ಮೋಜಿನ ಮಾತಿಗಾಗಿಯೆ ? ಇಲ್ಲವೆ ಕುಮುದಳ ಬಗ್ಗೆ ಹುಟ್ಟಿದ ಭರವಸೆಗಾಗಿಯೆ ? ಇಂದು ಕೂಡ ರಾಮಣ್ಣನಿಗೆ ನಿರ್ದಿಷ್ಟವಾಗಿ ತಿಳಿಯಲು ಶಕ್ಯವಾಗಲಿಲ್ಲ. ಕೋಣೆಯಲ್ಲಿ ಅಡ್ಡಾಡುವುದನ್ನು ತಡೆದ. ಗಡಿಯಾರವನ್ನು ನೋಡಿದ, ೯॥ ಗಂಟೆ. ಉಸುರ್ಗರೆದ. ಇನ್ನು ಸಿನೆಮಾದ ಹೆದರಿಕೆಯೆ ಇಲ್ಲ, ಈ ಹಾಳು ಹಿಂದಿನ ಕತೆ ಸಾಕು, ಏನಾದರೂ ಓದೋಣ ಎಂದು ಪುಸ್ತಕವನ್ನೆತ್ತಿಕೊಂಡು ಮತ್ತೆ ಕುರ್ಚಿಯ ಮೇಲೆ ಕುಳಿತುಕೊಂಡ; ಸಮಾಧಾನವಾಗಿರಲಿಲ್ಲವೇನೊ ; ಎರಡೂ ಕಾಲ್ಗಳನ್ನೆತ್ತಿ ಮೇಜಿನ ಮೇಲಿಟ್ಟು ಕುರ್ಚಿಯ ಬೆನ್ನಿಗೆ ಒರಗಿ ಓದಲು ತೊಡಗಿದ.

೮

ಮನಸ್ಸಿನಲ್ಲಿ ಚಿಮ್ಮುತ್ತಿದ್ದ ಜೀವನದ ನೆನಪುಗಳೆ ಇಂದು ತನ್ನ ಪಾಲಿಗೆ ಸಿನೆಮಾ ಎಂದು ಹೇಳಿಕೊಂಡ ಕುಮುದಳಿಗೆ ಆ ಮಾತನ್ನೂ ಅಂದು-ಕೊಂಡಿದ್ದು ತಪ್ಪಾಯಿತೇನೊ ಎನ್ನಿಸಿತು. ಯಾಕೆಂದರೆ, ಆ ನೆನಪುಗಳನ್ನು ಮರೆಯಬೇಕೆಂದು ಈಗ ತನ್ನ ಕೋಣೆಗೆ ಬಂದು ಹಾಸಿಗೆಯ ಮೇಲೆ ಕುಳಿತೊಡನೆ ಸಿನೆಮಾದ ಮಾತು ನೆನಪಿಗೆ ಬಂದಿತ್ತು. ಸರಲಕ್ಕನ ಮುಂದೆ ತಾನೊಮ್ಮೆ ಅಂದಿದ್ದಳು, "ಸಿನಿಮಾದೊಳಗೆ ಪಾರ್ಟ ಮಾಡೋದು ಛಲೋ ಕಾಣ್ತದ" ಅಂತ. ಆ ದಿನ — ಯಾವ ದಿನ ಅದು ?—ಹಾಂ— ತಾನು ಒಂದು ದಿವಸ, ಹಿಂದಿನ ರಾತ್ರಿ "ಏನೊ" ಆದುದಕ್ಕೆ ಉಬ್ಬಿ ಮೈಮುರಿ ಮುಡಿದಿದ್ದಳಲ್ಲ ? ಆಗ ಸರಲಕ್ಕ ಏನೇನೊ ಮಾತಾಡಿದ್ದಕ್ಕೆ ತಾನು ಕೋಣೆಗೆ ಓಡಿದ್ದಳು ? ಆಮೇಲೆ ರಾಮಣ್ಣ ಬಂದಿದ್ದ ? ಯಾರು ಏನನ್ನುವರೂ ಎಂದು ಹೆದರಿ ಕುಳಿತಿದ್ದಳು ತಾನು ? ಆಗ ರಾಮಣ್ಣ ನಕ್ಕ? ಹಾಂ—ಅದೇ ದಿನ, ಸಂಜೆಯ ಊಟದ ವೇಳೆಗೆ ಏನೇನೊ ಮಾತು ನಡೆದಿತ್ತು? ಊಟದ ವೇಳೆಗೆ ಅಲ್ಲ, ಈಗ ನೆನಪಿಗೆ ಬಂದಿತು. ರಾಮಣ್ಣನು ಊಟ ಮುಗಿಸಿಕೊಂಡು ಸರಲಕ್ಕನ ಹತ್ತಿರ ಕುಳಿತಿದ್ದ. ಅಡುಗೆಯ ಮನೆಯೊಳಗೆ ತಾನೊಬ್ಬಳೆ ಊಟ ಮಾಡುತ್ತಿದ್ದಳು. ಆಗ ಹೊರಗೆ ಗಂಡ-ಹೆಂಡಿರು ಮಾತಾಡುತ್ತಿರುವುದು ತನಗೆ ಕೇಳಿಸಿತು. ಅಂತಹ ಮಾತು

ನಡೆದಾಗ ತಾನು ಯಾವಾಗಲೂ ಬುದ್ಧಿಪೂರ್ವಕ ಕೆಲಸದಲ್ಲಿ ತೊಡಗಿ ಅಲಕ್ಷ್ಯವನ್ನು ತಂದುಕೊಂಡಿದ್ದಳು, ಗಂಡ–ಹೆಂಡಿರ ಮಾತನ್ನು ಕೇಳ-ಬಾರದೆಂಬ ಸೌಜನ್ಯದಿಂದ. ಆ ದಿನ ಮಾತ್ರ ಯಾಕೊ ತುಸು ಕುತೂಹಲ ವೆನ್ನಿಸಿತ್ತು. ಇದಲ್ಲದೆ ಊಟಕ್ಕೆ ಕುಳಿತದ್ದರಿಂದ ಬೇರೆ ಕೆಲಸದಲ್ಲಿಯೂ ತೊಡಗಲು ಬರುವಂತಿಲ್ಲ. ಅಥವಾ ತನ್ನ ವಿಷಯವಾಗಿಯೆ ಮಾತನಾಡು-ತ್ತಿದ್ದರೆ? ಅಂತೂ ಆ ದಿನ ಅನ್ನುವ ತುತ್ತಿನ ಸದ್ದನ್ನು ಕೂಡ ತಡೆದು ಅವರಿಬ್ಬರ ಮಾತನ್ನು ಲಕ್ಷ್ಯಗೊಟ್ಟು ಕೇಳುತ್ತಿದ್ದಳು.

"ಮನೇ ಹ್ಯಾಂಗ ನ್ನಚ್ಚ ಗಾಡ್ಯಾಳ ಈವೊತ್ತು ಕುಮುದ, ನೋಡಿದಿರಿಲ್ಲೊ?" ಸರಲಕ್ಕನ ದನಿ.

"ಯಾಕ? ನೀ ಹೇಳಿದ್ದಿ ಏನು?" ರಾಮಣ್ಣನ ಪ್ರಶ್ನೆ.

"ನಾಕು ತಗೀರಿ! ಸಿಕ್ಕಾಪಟ್ಟೆ ಕೆಲಸ ಹೇಳಲಿಕ್ಕೆ ನನಗೇನು ಹುಚ್ಚು ಹಿಡಿದಿದೆ ಏನು?"

"ಅಂದ್ರ? ಈವೊತ್ತೇ ಯಾಕೆ ಬಂದೀತು ಈ ಹುರುಪು?"

"ಹುರುಪು ಯಾತರದು? ನಮ್ಮ ಮನೀವಳಗ ಹೊತ್ತೇ ಹೋಗೋದಿಲ್ಲ ಆಕೆಗೆ. ನೋಡ್ಲಿ, ನಾ ಒಂದು ಹಾಸಿಗೆ ಹಿಡಿದು ಬಿದ್ದೀನಿ, ನನ್ನ ಸುತ್ತಲೂ ಓಡಾಡೋದು! ಹೊರಗ ಹೋಗ್ಲಿಕ್ಕೆ ಸಹಿತ ಆಕೆಗೆ ವ್ಯಾಳಾ ಸಿಗೋದಿಲ್ಲ. ಆಯ್ತು ಇನ್ನು ನೀವಂತೂ ನೀವೇ ನೀವು!"

"ಅಂದ್ರೆ ನನಗೇನ್ಮಾಡಂತೀ? ಆಕೆಯ ಜೋಡಿ ಆಡಂತೀ ಏನು?" ರಾಮಣ್ಣನು ನಗುತ್ತ ಕೇಳಿದ್ದನ್ನು ಕೇಳಿ ಕುಳಿತಲ್ಲಿಯೆ ಕುಮುದಳ ಮೈ ಜುಮ್ಮೆಂದಿತ್ತು.

"ಏನಾರ ಒಂದು ಮಾತಾಡಬ್ಯಾಡಿರಿ. ನಿಮಗಂತೂ ಮುಂದೀನ್ನ ಹಚ್ಚಿಕೊಳ್ಳೋದೇ ಬ್ಯಾಡ. ನಿಮ್ಮ ತಮ್ಮ–ತಂಗಿ ಬಂದಿದ್ದರ ಹೀಗೇ ಅವರ್ನ ಅವರಷ್ಟಕ್ಕೇ ಬಿಟ್ಟು ಪಿರಿಪಿರಿ ತಿರುಗುತ್ತಿದ್ದಿರೇನು?"

"ಅಲ್ಲ–ಅಂದ್ರ–ನಾಯೇನು ಮಾಡ್ಬೇಕಂತೀ ಹೇಳಲ್ಲ?"

"ಏನಂದ್ರೇನು? ಇಷ್ಟು ವರುಷ ಆಯಿತು ಹುಡುಗೆ ಮನೆ ಯೊಳಗಿದ್ದು. ಏನು ಹೊರಗಿನಾಕೆಯೆ? ಏನು ಮತ್ತ ಯಾರಾದ್ರೂ ಇದ್ದಾರೆಯೆ ಆಕೆಗೆ? ನಾವೇ ಹಚ್ಚಿಕೊಳ್ಳಲಿಲ್ಲ ಅಂದ್ರ—"

ರಾಮಣ್ಣ ನಡುವೆಯೆ ಬಾಯಿ ಹಾಕಿ ಮಾತನಾಡಿದ. "ಹಚ್ಚಿಕೊಳ್ಳೋದು ಹಚ್ಚಿಕೊಳ್ಳೋದು ಅಂದ್ರೇನು ? ಹೋದಲ್ಲಿ ಬಂದಲ್ಲಿ ಕಿಸೇಕ್ಕ ಅಂಟಿಸಿಕೊಂಡು ಹೋಗೋದ ? "

"ನಾಯೇನು ಪುಸ್ತಕ ಬರೆಯುವಾಕೆ ಅಲ್ಲ, ನನಗ ನಿಮ್ಮ ಒಳ್ಳೊಳ್ಳೆ ಶಬ್ದನೂ ಗೊತ್ತಿಲ್ಲ. ಹಚ್ಚಿಕೊಳ್ಳೋದೂ ಅಂತ ನಾಲ್ಕು ಮಂದಿ ಹೇಳೋ ಹಾಂಗೇ ನಾನೂ ಹೇಳ್ತೇನಿ....ಕಿಸೇಕ್ಕ ಯಾಕ ಅಂಟಿಸಿಕೋತೀರಿ ?. .... ನನಗ್ಗೊತ್ತು! ಯಾವಾಗಲೂ ನಿಮ್ಮ ಲಕ್ಷ್ಯ ನಿಮ್ಮ ಕಿಸೇದ ಮ್ಯಾಲ! "

"ಅಲ್ಲ—ಎಲ್ಲಿಂದೆಲ್ಲಿಗೆ ಹೊರಟೆ ? ನಿನ್ನ ತಂಗಿಯ ನಲುವಾಗಿ ಮಾತು ಸುರುವು ಮಾಡಿ ಈಗ ನನ್ನ ಕಿಸೇಕ್ಕ ಗಂಟುಬಿದ್ದೆಯಲ್ಲ ! ಆಂ ? ಹಹ ! "

ಆ ಮಾತಿಗೆ ತನಗೂ ನಗೆ ಬಂದಿತ್ತೆಂಬುದನ್ನು ನೆನೆದ ಕುಮುದಳ ಮುಖದ ಮೇಲೆ ಈಗ—ಅದರ ನೆನಪಿನಿಂದ—ಮುಗುಳ್ನಗೆ ಮೂಡಿತು. ಸರಲಕ್ಕನಾದರೂ ಮಾತಿನಲ್ಲಿ ಎಷ್ಟು ಚತುರಳಾಗಿದ್ದಳು.

"ಹೌದು. ನಿಮಗ ಯಾರ ನಲುವಾಗಿ ಒಂದುಡ್ಡು ಖರ್ಚು ಮಾಡ್ಲಿಕ್ಕೆ ಬ್ಯಾಡ" ಎಂದಿದ್ದಳು.

"ಈಗ ಯಾತಕ್ಕ ಬೇಕಾಗೇದ ? "

"ನನಗ ಯಾತಕ್ಕ ಬೇಕಾದೀತು ? ಹಾಸಿಗೆ ಹಿಡಿದು ನಾಕುನಾಕಾಗಿ ಕಡೆಗೆ ಒಂದಿವಸ ವಿಷ ತಗೊಳ್ಳಲಿಕ್ಕೆ ಬೇಕಾದ್ರ ಬೇಕಾಗಬಹುದು."

ಕುಮುದಳಿಗೆ ತುತ್ತು ಗಂಟಲಲ್ಲಿ ಇಳಿಯದಂತಾಗಿ ಉಸಿರು ಸಿಕ್ಕಂತಾಗಿತ್ತು ಆ ಮಾತನ್ನು ಕೇಳಿ.

"ಇಲ್ಲಿ ನೋಡು, ಸರಲಾ, ಸುತ್ತಿಸುತ್ತಿ ಮಾತಾಡೋದಂದ್ರ ನಿನಗೂ ಆಯಾಸ ಹೆಚ್ಚು. ಸ್ಪಷ್ಟ ಹೇಳಲ್ಲ ? ನಿನ್ನ ನಲುವಾಗಿ ಖರ್ಚು ಮಾಡ್ಲಿಕ್ಕೆ ನಾ ಎಂದಾದರೂ ಹಿಂದ್ಮುಂದೆ ನೋಡಿರುವೆನೆ ? "

"ನನಗೇನ್ಮಾಡೋದು–ಅಂತೀನಿ–ಮತ್ತ ನನ್ನ ನಲುವಾಗಿ ಅಂತೀರಲ್ಲ? ಕುಮುದನ ಮಾತು ಹೇಳಿದೆ. ಇಡೀ ದಿನ ದುಡೀಬೇಕು ! ಹೊತ್ತು ಹೋಗದಿದ್ದರ ಇನ್ನಷ್ಟು ದುಡೀಬೇಕು ! ಏನು ಒಂದು ಹೊರಗೆ

ಹೋಗೋದ ? ಒಂದು ಸಿನಿಮಾನ ? ಮನೆಯೊಳಗ ಹುಡುಗರಾದ್ರ
ಇದ್ದರ ಆಕೆಗೆ ಜೋಡಿ ಇರ್ತಿತ್ತು –"

"ಛಿ ! ಹುಚ್ಚಿ ! ಮಾತಾಡಿದರ ಆಯಾಸ ಆಗ್ತದ ಅಂದ್ರ ಅಳತೀ ಏನು ? ಆಕೆ ಸಿನಿಮಾಕ್ಕ ಹೋಗಬೇಕಂತಾಳೇನು ? ಬೇಕಾದಾಗ ಹೋಗಲಿ, ಆದರೇನು ? ಛಿ! ನಾ ಏನು ದೊಡ್ಡ ವಿಷಯ ಆದೇನೊ ಅಂತ ಹೆದರಿದ್ದೆ, ಇಂಥಾದ್ದಕ್ಕ ಅಳತೀಯಾ ?"

ಮುಂದೆ ಸರಲಾ "ಇಶ್ಶ ! ಅದೇನು ಬಿಡಿರಿ!" ಎಂಬುದಷ್ಟೆ ಕೇಳಿಸಿತ್ತು. ಆ ಮೇಲೆ ಕೆಲಹೊತ್ತು ಅವರಿಬ್ಬರೂ ಏನೊ ಪಿಸುಗುಟ್ಟಿದಂತೆ ಕೇಳಬಂದಿತು. ಕೊನೆಗೆ ತಾನು ಊಟವನ್ನು ಮುಗಿಸಿ ಬರುವಷ್ಟರಲ್ಲಿ ರಾಮಣ್ಣ ತನ್ನ ಕೋಣೆಗೆ ಹೋಗಿದ್ದ. ಮರುದಿನ ತಾನು ರಾಮಣ್ಣನ ಜೊತೆಗೆ ಸಿನಿಮಾ ನೋಡಲು ಹೋಗುವುದು ಗೊತ್ತಾಗಿದೆ ಎಂದು ಸರಲಕ್ಕ ಹೇಳಿದ್ದಳು.

"ಅವರಿಗೂ ಒಬ್ಬರೇ ಕೂತು ನೋಡ್ಲಿಕ್ಕೆ ಬ್ಯಾಸರ ಬರ್ತದ. ನನ್ನ ಕೇಳಿದರು. ನಾ ಹೇಳಿದೆ ನಿನ್ನ ಕರೆದುಕೊಂಡು ಹೋಗ್ಲಿಕ್ಕೆ ಅಡ್ಡಿ ಇಲ್ಲ ಅಂತ" ಎಂದು ಸರಲಕ್ಕ ನುಡಿದಾಗ ಕುಮುದಳಿಗೆ ಅಕ್ಕನ ಸೌಜನ್ಯದ ನಡತೆಗಾಗಿ ಮುಗುಳ್ನಗೆ ತಡೆದಿದ್ದಿಲ್ಲ. ಮರುದಿನ ಸಂಜೆ ಸಿನಿಮಾ ನೋಡಿ ಬಂದ ತರುವಾಯ ಕುಮುದ ಸರಲಕ್ಕನ ಕಡೆ ಧಾವಿಸಿದ್ದಳು.

"ನೋಡಿ ಬಂದೆಯೇನೆ ?"

"ನೋಡಿ ಬಂದೆ, ಅಕ್ಕಾ. ಇಂಗ್ರೆಜಿ ಫಿಲ್ಮ್ ಇತ್ತು. ಬಹಾಳ ಛಲೋದಿತ್ತು" ಎಂದು ಉತ್ಸಾಹ – ತುಳುಕುತ್ತ ತಾನು ಉತ್ತರಿಸಿದ್ದಳು.

"ಇಂಗ್ರೆಜಿ ಫಿಲ್ಮ್ ಅಂದ್ರ – ಕತೆ ಎಲ್ಲಾ ತಿಳೀತೇನು ?"

"ಎಲ್ಲಾ ತಿಳಿಸಿಕೊಟ್ಟರು ನನಗ ?"

"ಹೂಂ...ಏನಿತ್ತು ಕತೆ ?"

ದಾಂಪತ್ಯಜೀವನದ ಒಂದು ನೋಟ ಚಿತ್ರಪಟದ ಕತೆಯಾಗಿತ್ತು. ಗಂಡ, ಹೆಂಡತಿ; ಪರಸ್ಪರ ಗಾಢವಾದ ಪ್ರೇಮ, ಒಮ್ಮೆ ಗಂಡನು ಒಬ್ಬ ಮಾಟಗಾರ್ತಿಯ ಮೋಹಕ್ಕೆ ಬಲಿಬೀಳುತ್ತಾನೆ, ಅಂದಿನಿಂದ ಹೆಂಡತಿಯನ್ನು ಕಂಡರೆ ಅಸಹ್ಯ ಪಡುತ್ತಾನೆ; ಆ ವರ್ಷದ ಮಗನೊಬ್ಬನು, ಹೆಂಡತಿಯನ್ನೂ ಮಗನನ್ನೂ ಮನೆಯಿಂದ ಹೊರದೂಡುತ್ತಾನೆ. ಅನೇಕರು

ಆ ಹೆಂಡತಿಗೆ ಇಂತಹ ಗಂಡನನ್ನು ಬಿಟ್ಟುಕೊಡಲು ಉಪದೇಶ ಮಾಡು-ತ್ತಾರೆ; ಆದರೆ ಹೆಂಡತಿ ಒಪ್ಪುವುದಿಲ್ಲ; ಗಂಡನ ನಿಜವಾದ ಪ್ರೇಮ ಇನ್ನೂ ತನ್ನಲ್ಲಿಯೆ ಇದೆ ಎಂದು ಅವಳು ಬಲವಾಗಿ ನಂಬಿರುತ್ತಾಳೆ; ಇಂದಿಲ್ಲ ನಾಳೆ ಆ ಮಾಟಗಾರ್ತಿ ತನ್ನ ಗಂಡನನ್ನು ಕಷ್ಟದಲ್ಲಿ ಕೆಡವಿ ಹೋಗುವಳೆಂಬ ವಿಚಾರದಿಂದ ಯಾವಾಗಲೂ ಗಂಡನನ್ನು ರಕ್ಷಿಸುವ ಸಿದ್ಧತೆಯಲ್ಲಿಯೆ ಇರು-ತ್ತಾಳೆ; ಆದರೆ ಗಂಡನಿಗೆ ಮಾತ್ರ ಹೆಂಡತಿಗಾಗಿ ಎಳ್ಳಷ್ಟೂ ಕನಿಕರವಿಲ್ಲ; ಮಗನಿಗೂ ಹೆಂಡತಿಗೂ ಸಾಕಷ್ಟಾಗಿ ತಿನ್ನಲು ಅನ್ನ, ತೊಡಲು ಬಟ್ಟೆ ದೊರೆಯದೆ ಹೋದರೂ ಅವನಿಗೆ ಬುದ್ಧಿ ಬರುವುದಿಲ್ಲ; ಅಂತೂ ಕೊನೆಗೆ ಒಂದು ದಿನ ಆ ಮಾಟಗಾರ್ತಿ ಇವನ ದುಡ್ಡನೆಲ್ಲ ಹಾಳುಮಾಡಿ, ಉಳಿ-ದಷ್ಟನ್ನೇ ಎತ್ತಿ ಹಾಕಿ ಓಡಿ ಹೋಗುವಳು; ಇವನು ಹತಾಶನಾಗುವನು; ಇನ್ನು ಹೋಗುವುದೆಲ್ಲಿ? ಉಪಜೀವನ ನಡೆಯುವುದು ಹೇಗೆ? ಹೆಂಡತಿಯ ಮುಖವನ್ನು ನೋಡಲು ಕೂಡ ಅವನಿಗೆ ನಾಚಿಕೆ; ಕೊನೆಗೆ ನಿರ್ವಿಣ್ಣನಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂದಾಗ ಹೆಂಡತಿ ಕಾಣಿಸಿಕೊಳ್ಳುವಳು; ಮುಂದೆ ಎಲ್ಲರೂ ಸುಖದಿಂದಿರುವರು.

"ಕಡೆಕಡೆಗಂತೂ ಕಣ್ಣೀರು ತಡೀತಿದ್ದಿಲ್ಲ ನೋಡು, ಅಕ್ಕಾ! ಹೆಂಡತಿ ಆದಾಕೆ ಎಷ್ಟು ಛಲೋ ಪಾರ್ಟ ಮಾಡಿದಳಂತೀ! ನನಗನ್ನಿಸ್ತದ ಆಕೆ ಖರೇನೇ ಅಂಥಾ ಹೆಂಗಸಿದ್ದಿರಬೇಕು!"

"ಹೋಗೆ ಹುಚ್ಚಿ!" ಎಂದು ಸರಲಕ್ಕ ನಕ್ಕಿದ್ದಳು.

"ಇಲ್ಲಾ ಅಂದ್ರ ಅಷ್ಟು ಛಲೋ ಪಾರ್ಟಮಾಡ್ಲಿಕ್ಕೆ ಹ್ಯಾಂಗ ಬರ್ತದ?" ಎಂದು ಬೆಪ್ಪು ಬೆರಗಾಗಿ ತಾನು ಕೇಳಿದ್ದಳು.

"ಹ್ಯಾಂಗೇನು? ಆ ಹೆಂಗ್ಸರು ಅಂಥಾವ್ರೆ ಇರ್ತಾರ. ಅವರಿಗೆ ಸಿನಿಮಾದೊಳಗಿನ ಪಾರ್ಟ ಒಂದ್ಬಿಟ್ಟು ಮತ್ತೆ ಎಲ್ಲಿಯೂ ಛಲೋ ಇರೋದೇ ಗೊತ್ತಿರೋದಿಲ್ಲ?"

"ಅಂದ್ರೇನ, ಅಕ್ಕಾ? ಹೀಂಗ ಹೆಂಡತಿ ಪಾರ್ಟ ಮಾಡುವಾಕೆಗೆ–"

"ಎಷ್ಟು ಮದುವೆ ಆಗಿ ಹೋಗೇವೊ ಏನೋ!" ಎಂದು ಸರಲಕ್ಕ ಮಾತು ಕೂಡಿಸಿದಾಗ ತಾನು ಹುಚ್ಚಳಂತಾಗಿರಬೇಕು. ಯಾಕೆಂದರೆ, ಆಗ ತನ್ನ ಮುಖವನ್ನು ನೋಡಿ ಸರಲಕ್ಕ ನಗತೊಡಗಿದ್ದಳು.

" ಇಷ್ಟು ಯಾಕ ಗಾಬರಿ ಆದೆಯೊ ? ನುಳ್ಳಲ್ಲ. ಇವರಿಗೆ ಕೇಳು ಬೇಕಾದರ. ಆ ಮುಂದಿ ಎಲ್ಲಾ ಎಷ್ಟು ಸಾರೆ ಮದುವೆ ಮಾಡಿಕೋತಾರ, ಮಾಡಿಕೊಂಡ ಮದುವೆ ಎಷ್ಟು ಸಾರೆ ಮುರೀತಾರ, ಅಂತ."

" ಅಯ್ಯ ! ಹೀಂಗೇನು ?" ತಾನು ಅತ್ಯಂತ ನಿರಾಶೆಯಿಂದಲೇ ಕೇಳಿರಬೇಕು. ಯಾಕೆಂದರೆ, ಆ ಮಾತಿಗೆ "ನಿನಗ್ಯಾಕಷ್ಟು ಕೆಟ್ಟು ಅನ್ನಿಸ್ತದ ? " ಎಂದು ಸರಲಕ್ಕ ಕೇಳಿದಳು.

ಆಗ ಕುಮುದಳು ತನ್ನ ಮುಗ್ಧತನವನ್ನು ಆಡಿ ತೋರಿಸಿದ್ದಳು. ಸಿನಿಮಾದೊಳಗಿನ ಕತೆಯು ಪರಿಣಾಮದಿಂದ ಸಿನಿಮಾದೊಳಗೆ ಪಾರ್ಟು ಮಾಡುವುದು ಅತ್ಯಂತ ಒಳ್ಳೆಯ ಕೆಲಸ ಎನ್ನಿಸಿತ್ತು ಕುಮುದಳಿಗೆ.

" ಹಾಂಗಿದ್ದರ ಅದರವ ಕತ ಮಾಡುತಿದ್ದರು, ಮದುವೆ ಮಾಡಿಕೊಂಡು ಪ್ರೇಮದಿಂದ ಇದ್ದವರು ಛಲೋ ಅನ್ನೋಕತ ಯಾಕ ಮಾಡಬೇಕಾಗಿತ್ತು?" ಎಂದು ಸರಲಕ್ಕ ನುಡಿದುದು ತನ್ನ ಭ್ರಮನಿರಸನವಾದಂತಾಗಿತ್ತು.

ಸರಲಕ್ಕ ಅಷ್ಟಕ್ಕೆ ಬಿಟ್ಟಿರಲಿಲ್ಲ. ತಾನು ನೋಡಿ ಬಂದ ಕತೆ - ಯಿಂದಲೆ ಒಳ್ಳೆಯ ಪಾಠವನ್ನೇ ಹುಡುಕಿ ಕಂಡವನಂತ ಎಷ್ಟೋ ಮಾತು ಗಳನ್ನು ಹೇಳಿದ್ದಳು.

" ನೋಡು, ಕುಮುದಾ, ನೀ ನೋಡಿ ಬಂದ ಕತೇವಳಗ ಹೇಳಿ - ಧಾಂಗ ಹೆಂಗಸಿಗ ಗಂಡ, ಮಕ್ಕಳ ಹೊರತು ಬ್ಯಾರೆ ಸುಖಾ ಇಲ್ಲ, ನೋಡು. ಹೆಂಗಸಿನ ಕರುಳು ಅಂದ್ರ ಯಾವಾಗಲೂ ತಾಯಿಯ ಕರುಳೇ ಅದು. ನೋಡಿದೆಯಲ್ಲ, ಅಂಥಾ ಪರಿ ತನ್ನನ್ನು ಪೀಡಿಸಿದ್ದರೂ ಕಡೆಗೆ ಆ ಹೆಂಡತಿ ತನ್ನ ಗಂಡನ್ನ ಉಳಿಸಿಕೊಂಡು ಬಂದಳು ? ಗಂಡ ಅಂತ ಎಷ್ಟು ಅಧಿಕಾರ- ದಿಂದ ನಡೆದರೂ ಕಷ್ಟ ಬಂದಾಗ ಕೈಹಿಡಿದು ನಂತ್ರನುವವಳು ಹೆಂಡತೀನೇ. ಇವರು ಎಷ್ಟು ಕತ ಬರೀತಾರಲ್ಲ ? ಇವರ ಕತೆಗಳೊಳಗ ಒಂದು ಹೆಂಗಸಿ ಗಾದರೂ ಸುಖ ಆದದ್ದು ಓದೀ ಏನು ? ನಾನು ಒಮ್ಮೆ ಅಂದಿದ್ದೆ ಅವರ್ಕ್ಕಂದೆ ಇಷ್ಟು ಯಾಕ ಹೆಂಗಸರನ್ನ ಗೋಳಿಗಿಡಿಸ್ತೀರಿ ಅಂತ, 'ಯಾಕಂದ್ರೇನು ? ಅವರು ಮಾಡಿದ್ದಕ್ಕ ಅವರು ಅನುಭೋಗಿಸ್ತಾರ' ಅಂದರು. ಮಾಡೋದೇನು ? ಮುಟ್ಟೋದೇನು ? ಎಲ್ಲಾ ಕಟ್ಟುಕತೆ ! ಹೆಂಗಸಿಗೆ ಯಾವುದು ಬೇಕು ಅನ್ನೋದೇ ಗೊತ್ತಿಲ್ಲದೆ ಬರೆದರೆ ಅಡ್ಡದಾರೀ ಹಿಡಿಧಾಂಗೇ.

ಬರೆಯುವವರೆ ಅಡ್ಡ ದಾರೀ ಹಿಡಿದ ಮ್ಯಾಲೆ ಅವರ ಕತೆಯೊಳಗಿನ ಪಾತ್ರಗಳೂ ಅಡ್ಡ ದಾರೀನೇ ಹಿಡಿಯೋವು ! ಅಲ್ಲೇನು, ಹೇಳು. 'ನಿನಗೇನು ತಿಳೀತದ ? ಇಂದಿನ ಕಾಲದಾಗ ನೀನು ಹಳೇ ಪದ್ಧತಿ ಹೆಂಗಸು !' ಅಂತ ನಸುನಕ್ಕರು. ನಾನು ಅಂದ್ಬಿಟ್ಟೆ, ' ಹಳೇದೇನು ? ಹೊಸಾದೇನು ? ಹೆಣ್ಣು ಅಂದ್ರ ಹೆಣ್ಣೇ. ಹೊಸ ಕಾಲ ಅಂತ ಹೆಂಗಸರಿಗೆ ಮೀಸೆ ಬರ್ತಾವೇನು ?' ಅಂತ." ಸರಲಕ್ಕನ ಮಾತಿಗೆ ಕುಮುದಳು ಬಿದ್ದು ಬಿದ್ದು ನಕ್ಕಿದ್ದಳು. ಆವರೆ ಅಂದು ಹಾಸ್ಯಕಾರಕ ಎಂದೆನಿಸಿದ ಮಾತೇ ಇಂದು ಕುಮುದಳಿಗೆ ತತ್ತ್ವಪೂರಿತ ಮಾತು ಎಂದೆನ್ನಿಸು ತ್ತಿದೆ. ಆದರೆ ಯಾರಿಗೆ ಹೇಳುವುದು ? ಸರಲಕ್ಕ ಸುಖ-ದುಃಖದ ಈ ಲೋಕ ವನ್ನೆ ಬಿಟ್ಟು ಹೋಗಿದ್ದಾಳೆ. ಕುಮುದ ಅಣಕಿಸ ಮುಗುಳ್ನಗೆಯನ್ನು ನಕ್ಕಳು. "ಲೋಕವನ್ನೆ ಬಿಟ್ಟು ಹೋಗಿದ್ದಾಳೆ" ಅಂತೆ! ಸರಲಕ್ಕ ಜೀವದಿಂದಿದ್ದರೂ ಆಕೆಗೆ ಏನನ್ನು ಹೇಳುವುದು ? ಹೇಗೆ ಹೇಳುವುದು ? "ನಿನ್ನ ಗಂಡನಲ್ಲಿ ನನ್ನ ಮನಸನ್ನು ನೆಟ್ಟಿವೆ" ಎಂದು ಹೇಳುವುದೆ ? "ನನ್ನನ್ನು ನಿನ್ನ ಗಂಡನು ಕೂಡಿ ಕೊಂಡಿದ್ದಾನೆ. ನಾನು ಮನಸನ್ನು ಮಾಡಿದರೆ ನನಗೆ ಗಂಡ-ಮಕ್ಕಳ ಸುಖ ದೊರೆಯುವುದು. ನಿನ್ನ ಉಪದೇಶವನ್ನು ನಾನು ನಡೆಸಿರುವೆ, ಅಕ್ಕಾ" ಎಂದು ಹೇಳಬಹುದಾಗಿತ್ತೆ? ಗಂಡ, ಮಕ್ಕಳು. ಎರಡನ್ನೂ ಹೇಳಿದ್ದಳಲ್ಲವೆ ಸರಲಕ್ಕ ? ಮದುವೆಯ ಗಂಡನಿಲ್ಲದೆ ಮಕ್ಕಳಿದ್ದರೆ ಸುಖವಿಲ್ಲ, ಮಕ್ಕಳಿಲ್ಲದೆ ಗಂಡನಿದ್ದರೂ ಸುಖವಿಲ್ಲ, ಮಕ್ಕಳಿದ್ದು ಗಂಡನಿದ್ದು ಮದುವೆಯ ಸಂಬಂಧ-ವಿಲ್ಲದಿದ್ದರೂ ಸುಖವಿಲ್ಲ ! ಎಷ್ಟು ಪರತಂತ್ರವಾಗಿದೆ ಹೆಣ್ಣಿನ ಬಾಳು ! ಅಷ್ಟೆ ತೊಡಕಿನದೂ ಆಗಿದೆ. ಸರಲಕ್ಕನ ಆ ಮಾತುಗಳನ್ನೆಲ್ಲ ನೆನೆದಾಗ ಮಕ್ಕಳಿಲ್ಲ ದ್ದಕ್ಕೆ ಆಕೆಗೂ ಸುಖವಿರಲಿಲ್ಲ ಎಂದು ಕುಮುದಳಿಗೆ ಹೊಳೆದಿತ್ತು. ಅದಕ್ಕಾ-ಗಿಯೆ ಇಂದು ಸಿನಿಮಾ ಸೇರಬೇಕೆಂಬ ಹಿಂದಿನ ಮಾತು ಸ್ಮರಣೆಗೆ ಬಂದಿ-ತೇನೊ ! ಯಾವುದರಿಂದಲೂ ಹೆಣ್ಣಿಗೆ ಸುಖದ ಭರವಸೆ ಇಲ್ಲದಿದ್ದರೆ ಸಿನಿಮಾ ವ್ಯವಸಾಯದಲ್ಲಿ ತೊಡಗುವುದೆ ಒಳ್ಳೆಯದಲ್ಲವೆ ? ಕಸಿಷ್ಟಸಕ್ಷಕೆ ಯೋಗ್ಯತೆ ಇದ್ದಲ್ಲಿ,ಯತ್ನಮಾಡಿದಲ್ಲಿ ದುಡ್ಡು ದೊರಕಬಹುದು,ಹೆಸರನ್ನು ಗಳಿಸ-ಬಹುದು.

ವಿಚಾರದ ಭರದಲ್ಲಿ ತಾನು ಹಾಸಿಗೆಯನ್ನು ಬಿಟ್ಟು ಮೇಜಿನ ಮೇಲಿದ್ದ ಕನ್ನಡಿಯ ಎದುರು ನಿಂತುದು ಕುಮುದಳ ಲಕ್ಷ್ಯಕ್ಕೆ ಬಂದಿತು. ಒಂದು ನಿಮಿಷ ಎದುರು ತನ್ನ ಪ್ರತಿಬಿಂಬವಿದೆ ಎಂಬುದು ಲಕ್ಷ್ಯಕ್ಕೆ ಬಾರದೆ ಮತ್ತೆ

ಯಾರೊ ಬಂದಿದ್ದಾರೆಂದು ಬೆಚ್ಚಿಬಿದ್ದಳು. ಮರುಗಳಿಗೆಯಲ್ಲಿ ತಿಳಿದು ಬಂದಿತು. ಯಾರು ಬರುವವರು ತನ್ನ ಕಡೆ? ಜನರು ಎಂದಿನಿಂದಲೊ ಆಡಿಕೊಳ್ಳುತ್ತಿದ್ದಾರೆ. ನೆರೆಯ ಹೆಂಗಸರು ತನ್ನನ್ನು ಕಂಡರೆ ಮೈಲಿಗೆ ಎಂಬಂತೆ ಸಾವರಸಿಕೊಂಡು ಎದ್ದು ಹೋಗುತ್ತಾರೆ. ತನಗೆ ಯಾರೂ ಇಲ್ಲ! ರಾಮಣ್ಣನೂ ತನ್ನವನಲ್ಲ. ಎಂತಹ ಹುಚ್ಚಿ ತಾನು! ಒಂದಾನೊಂದು ಕಾಲದಲ್ಲಿ ರಾಮಣ್ಣ . ತನ್ನವ ಎಂದೇ ತಿಳಿದಿದ್ದಳು. ರಾಮಣ್ಣನಿಗಾಗಿ ತನಗಿದ್ದಂತೆಯೆ ಅವನಿಗೂ ತನಗಾಗಿ ಹುಚ್ಚು ಇದೆ ಎಂದು ಬಲವಾಗಿ ನಂಬಿದ್ದಳು. ಇಷ್ಟೇಕೆ? ಏನೇನೊ ಕನಸಿನ ರಾಜ್ಯವನ್ನು ಕಟ್ಟಿಕೊಂಡಿದ್ದಳು.

ಮತ್ತೆ ಕನ್ನಡಿಯಲ್ಲಿ ನೋಡಿದಳು. ಯಾರ ಮುಖ ಇದು? ಈ ಬಾಡಿದ ಮುಖ, ಈ ಜೋಲು ಮೋರೆ ತನ್ನದಲ್ಲ. "ಕುಮುದಾ, ಎಲ್ಲಿ ನನ್ನ ದೃಷ್ಟಿ ತಾಕುವುದೊ ನಿನಗ, ಖೋಡಿ!" ಎಂದು ಎಷ್ಟು ಸಲ ಸರಲಕ್ಕ ಅಂದಿರಲಿಲ್ಲ! ಸಾಯುವ ಒಂದು ತಿಂಗಳು ಮುಂಚೆ ಅದೇ ಮಾತನ್ನು ಸರಲಕ್ಕ ನುಡಿದಿದ್ದಳು. ಇಂದಿಗೆ ನಾಲ್ಕೇ ತಿಂಗಳು, ಇಷ್ಟರಲ್ಲಿ ಎಂತಹ ವ್ಯತ್ಯಾಸವಾಗಿದೆ! ಸತ್ತ ಸರಲಕ್ಕನದೆ ದೃಷ್ಟಿ ತಾಕಿದೆಯೆ? ಅಥವಾ – ಸರಲಕ್ಕನಿಗಾಗಿ ಬಗೆದ ದ್ರೋಹಕ್ಕಾಗಿ ಶಾಪ ತಟ್ಟಿದೆಯೆ?

ತನ್ನ ನಡತೆಯಲ್ಲಿ ಏನೊ ತಪ್ಪಿದೆ ಎಂದು ಇತ್ತೀಚೆತ್ತ, ವಿಶೇಷವಾಗಿ ಸರಲಕ್ಕ ತೀರಿಕೊಂಡ ನಂತರ ಕುಮುದಳನ್ನು ಒಂದು ವಿಚಾರವು ಪೀಡಿಸುತ್ತಿತ್ತು. ಹಾಸಿಗೆ ಹಿಡಿದ ಹೆಂಡತಿಯ ಗಂಡನನ್ನು, ಅದೂ ತನ್ನನ್ನು ಸಾಕಿ–ಸಲುಹಿದ ಸರಲಕ್ಕನ ಗಂಡನನ್ನು ಈ ರೀತಿ ಒಲಿಸಿಕೊಳ್ಳುವುದು – ದ್ರೋಹ ಎಂಬ ಕಲ್ಪನೆ ಆಕೆಗೆ ಬಾರದಿದ್ದರೂ, ಅದೊಂದು – ಪಾಪ ಎಂದೆನ್ನಿಸಿತು ಕುಮುದಳಿಗೆ. ತಾನು ಮಾಡಿದ್ದು ಪಾಪ, "ನೀನು ಮಾಡಿದ್ದು ಪಾಪ, ನಿನ್ನ ಮುಖವನ್ನು ನೋಡಲಾಸಲ್ಲ" ಎಂದು ಪ್ರತಿಬಿಂಬಕ್ಕೆ ರೇಗಿ ಮತ್ತೆ ಹಾಸಿಗೆಯ ಮೇಲೆ ಬಂದು ಕುಳಿತಳು. ತಾನು ಮಾಡಿದ್ದು – ಅಲ್ಲ, ತಾನು ಮಾಡಿದ್ದಾದರೂ ಏನು? ಅದು ಹೇಗೆ ಪಾಪ? ತನ್ನದೇನು ತಪ್ಪು? ಹಾಗೆ ನೋಡಿದರೆ ತನ್ನದು ಯಾವ ತಪ್ಪೂ ಇಲ್ಲ. ಈಗಲೂ ತನಗೆ ನೆನಪಿದೆ. ಯಾವುದಕ್ಕೆ ತಾನು ಪಾಪವೆನ್ನುವಳೊ ಅದರ ಪ್ರಾರಂಭ ಹೇಗಾಯಿತು, ಯಾರಿಂದಾಯಿತು ಎಂಬುದು ಇಂದಿಗೂ ಕುಮುದಳ ಕಣ್ಣು ಕಟ್ಟಿದಂತಿದೆ.

ಆ ವಿಚಾರವೆ ಬೇಡ ಎನ್ನಿಸಿತು, ಆದರೂ ಆ ನೆನಪಿಗಾಗಿ ಹೃದಯ ಹಾತೊ-ರೆಯುತ್ತಿತ್ತು ........

ಸಿನಿಮಾ ನೋಡಿ ಬಂದ ಮರುದಿವಸ ನಡೆದ ಸಂಗತಿ. ಸಿನಿಮಾ ನೋಡಿದ್ದಕ್ಕೆಂದೊ, ರಾಮಣ್ಣನ ಜೊತೆ ಒಂದೆಡೆ ಕುಳಿತು ಬಂದುದಕ್ಕೊ – ಅಂತೂ ಮರುದಿವಸ ಕುಮುದ ಅತ್ಯಂತ ಉತ್ಸಾಹದಲ್ಲಿದ್ದಳು. ಆ ಉತ್ಸಾಹ ಹೆಚ್ಚೆಚ್ಚಾಗಿ ಪುಟಿಯಲು ಇನ್ನೂ ಒಂದು ಕಾರಣವಿದ್ದಿತು. ಪ್ರಯತ್ನ ಮೀರಿಯೂ ಯಾವಾಗಲಾದರೊಮ್ಮೆ ರಾಮಣ್ಣನ ದೃಷ್ಟಿಗೆ ತನ್ನ ದೃಷ್ಟಿ ಕೂಡಿದಾಗ ಅವನು ನಗೆಮೊಗದಿಂದ ತನ್ನನ್ನು ನೋಡುತ್ತಿರುವುದು ಕಂಡು ಬಂದಿತು. ಅದರಿಂದ ನಾಚಿ ಮುಖ ತಿರುಗಿಸಿ ಅವನ ದೃಷ್ಟಿಯನ್ನು ತಪ್ಪಿಸಲು ಯತ್ನಿಸಿದರೂ ಮತ್ತೆ ಯಾರೊ ಬಲವಾಗಿ ಎಳೆದಂತಾಗಿ, ತಟ್ಟನೆ ನಾಚಿಕೆಯು ತಡೆಯಬೇಕೆಂದಾಗ ಕೆಳ ನೋಟದಿಂದ ಅವನನ್ನು ನೋಡಿದರೆ ಇನ್ನೂ ಅದೇ ನಗೆಮೊಗ! ಇಡೀ ದಿನವೆಲ್ಲ ನೆಲದ ಮೇಲೆ ನಡೆದಂತೆಯೆ ಎನ್ನಿಸಿರಲಿಲ್ಲ! ದಿನದ ನಡಿಗೆಯಾದರೂ ತನಗೆ ಮಾತ್ರ ತನ್ನ ಹೆಜ್ಜೆ ಕುಣಿತದ ಹೆಜ್ಜೆಯಾಗಿದೆ ಎಂಬಂತೆ ತೋರುತ್ತಿತ್ತು. ಇಷ್ಟೊಂದು ದಿನವೆಲ್ಲ ನಗೆಬಿಸಿಲು ಬೆಳಗಿದ ಮೇಲೆ ಮೋಡ ಬಂದರೆ ಆಶ್ಚರ್ಯವೇನು? ಅಂತಹದೊಂದು ಮೋಡವೂ ಕವಿದಿತ್ತು. ಹಿಂದಿನ ದಿನದ ತನ್ನ ಮಾತನ್ನು ನೆನೆಯುತ್ತ ಸರಲಕ್ಕ ರಾಮಣ್ಣ ನೊಡನೆ ಮಾತನಾಡುತ್ತಿದ್ದಳು. ರಾಮಣ್ಣ ಸಂಜೆಯ ಊಟ ಮುಗಿಸಿ ಹೊರಗೆ ಹೊರಟಿದ್ದ. ಆಗ ಮಾತನಾಡುತ್ತ "ನಮ್ಮ ಕುಮುದಾ ಸಿನಿಮಾ-ದಾಗ ಪಾರ್ಟ ಮಾಡಬೇಕಂತಾಳ" ಎಂದಿದ್ದಳು. ಅದಕ್ಕೆ ರಾಮಣ್ಣ – ಯಾವ ಉತ್ತರವನ್ನು ಕೊಟ್ಟಿದ್ದ?....ಆಂ?....ಅಲ್ಲ....ಯಾವುದೋ ಉತ್ತರ ವನ್ನು ಕೊಟ್ಟಿದ್ದ. ಅದು ನಗೆಮಾತಾಗಿದ್ದರೂ ಮನಸ್ಸನ್ನು ನೋಯಿಸು ವಂತಹದಿದ್ದಿತು. ಯಾವುದು ಆ ಮಾತು?....(ಸುಡಲಿ, ಬೇಕೆಂದದ್ದು ಯತ್ನಿಸಿದರೂ ನೆನಪಾಗುವುದಿಲ್ಲ, ಬೇಡಾದ ನೆನಪು ಕರಗಿಸದಂತೆ ಕೊರೆಯು ವುದು)....ಹೋಗಲಿ, ಮಾತು ಮುಖ್ಯವಾಗಿರಲಿಲ್ಲ. ಆ ಮಾತಿಗೆ ಸರಲಕ್ಕ ನಕ್ಕದ್ದೂ, ತನ್ನ ಮನಸ್ಸಿಗೆ ಇನ್ನಿಷ್ಟು ನೋವಾದದ್ದೂ ಮುಖ್ಯ. ಮಾತನಾಡಿ ರಾಮಣ್ಣ ಹೊರಟು ಹೋದ. ತನ್ನ ಊಟದ ಸಿದ್ಧತೆಯನ್ನು ನಡೆಸಿದ ಕುಮುದಳಿಗೆ ಊಟ ಬೇಡ ಎನ್ನಿಸಿತು....ಉಳಿದ ಕೆಲಸವನ್ನು ಸಾವರಿಸ

ಉಡಗಿದ್ದಳು. ಹೊರಗಿನಿಂದ ಸರಲಕ್ಕ ನಗುತ್ತ "ಕೇಳಿದಿಯೇನ, ಕುಮುದಾ ?" ಎಂದಿದ್ದಳು. ಆ ಮಾತಿಗೆ ತಾನು ಉತ್ತರವನ್ನು ಕೊಟ್ಟಿರಲಿಲ್ಲ. ಕೆಲಸವನ್ನು ಸಾವರಿಸಿ ಹೊರಗೆ ಬಂದು,

"ನಿನಗ ಏನು ಬೇಕೇನು, ಸರಲಕ್ಕಾ?" ಎಂದಳು.

"ಅಯ್ಯ ! ಇದೇನು ? ಇಷ್ಟರಾಗ ಊಟ ಆಯಿತೇನ !" ಎಂದು ಸರಲಕ್ಕ ಚಕಿತಳಾಗಿ ಕೇಳಿದ್ದಳು.

"ಇಲ್ಲ – ನನಗ ಹಸಿವೆ ಇಲ್ಲ."

"ಹಸಿವೆ ಹ್ಯಾಂಗ ಇಲ್ಲ ?"

"ಏನೊ ! ನನಗ ತಲೆಶೂಲಿ ಎದ್ದಿದೆ."

"ತಲೆಶೂಲಿ ! ತಲೆಶೂಲಿ ಏಳಲಿಕ್ಕೆ ಏನಾಯ್ತು ? ಏನಾದರೊಂದು ಹೇಳಬ್ಯಾಡ. ಇಷ್ಟೊತ್ತಿನ ತನಕ ಛಲೊ ನಗತಿದ್ದಿ, ಮಾತಾಡತಿದ್ದಿ —"

"ಇಲ್ಲ, ಖರೇನೆ ನನಗ ತಲೆಶೂಲಿ ಎದ್ದಿದೆ" ಎಂದು ಹಟದಿಂದ ಹೇಳಿದ್ದಳು ತಾನು. ಸರಲಕ್ಕ ಒಂದು ನಿಮಿಷ ತನ್ನನ್ನು ದಿಟ್ಟಿಸಿ, "ಏನು, ಅವರ ಮಾತಿಗೆ ಸಿಟ್ಟು ಬಂದಿತೊ ?" ಎಂದಳು.

"ಯಾರ ಮಾತು ?"

ತನ್ನ ದನಿಯುಲ್ಲಿಯ ವಂಚನೆ ಸರಲಕ್ಕನಿಗೆ ತಿಳಿಯಿತೇನೊ !

"ಸಾಕ್ಬಿಡೆ ! ಗೊತ್ತಾಯಿತು !" ಎಂದಿದ್ದಳು.

"ಇಲ್ಲ, ನನಗ ಖರೇನೆ — "

"ಹುಚ್ಚಿ ! ಇಷ್ಟು ದಿವಸ ಈ ಮನೇವಳಗ ಇದ್ದು ಅವರ ಸ್ವಭಾವ ಗೊತ್ತಾಗಿಲ್ಲ ? ಬರೇ ಮಾತಿನ ಮೋಜು ಅದು, ಮನಸ್ಸಿನಾಗ ಏನೂ ಇರೋದಿಲ್ಲ."

"ಇಲ್ಲ, ಅಕ್ಕಾ, ನೀ ಏನಂತೀ ನನಗ ತಿಳೀನೇ ಒಲ್ಲದು."

"ಅಯ್ಯ ! ನನ್ಮುಂದ ಢೋಂಗ ಮಾಡ್ತೀ ಏನು ? ನನಗೆಲ್ಲಾ ಗೊತ್ತಾಯ್ತು. ಅವರ ಮಾತಿಗೇ ನೀನು ಸಿಟ್ಟಾದದ್ದು ! ಅಯ್ಯ ! ಹುಚ್ಚಿ ! ಅವರು ಹಾಂಗ ಮಾತಾಡಿದರ ಅವರಿಗೇ ಗೊತ್ತಿರೋದಿಲ್ಲ. ಏನಾದರೂ ಒಂದು ಮನಸ್ಸಿನೊಳಗ ಉತ್ಸಾಹ ಇತ್ತಂದರ, ಏನಾರೆ ಹೊಸದಾಗಿ ಬರೆಯೋದು ಹೊಳೆದಿದ್ದರೆ ಅದನ್ನು ಸುರುವು ಮಾಡೋತನಕ ಸಿಕ್ಕವರಿಗೆ,

ಸಿಕ್ಕದ್ದಕ ಏನಾದರೂ ವಟವಟ ವೋಜು ಮಾತಾಡ್ತಾರ. ಹಾಂಗೇ ಮಾತಾಡಿದರು. ನಿನ್ನ ಹೆಸರಿಗಾಗಿ ಅವರ ಲಕ್ಷ್ಯ ಸಹಿತ ಇರಲಿಕ್ಕಿಲ್ಲ. ನನಗೊತ್ತಿಲ್ಲ ? ಇಂದಿಲ್ಲ ನಾಳೆ ನಿನಗೂ ರೂಢಿ ಆದೀತು ಅವರ ಸ್ವಭಾವ" ಎಂದು ನಗುತ್ತ, "ಹೋಗು, ನಿನ್ನ ತಾಟ ಇಲ್ಲಿಯೆ ತಗೊಂಡು ಬಾ, ನನ್ನ ಜೋಡಿ ಮಾತಾಡತಾ ಊಟ ಮಾಡೀಯಂತ. ಹ್ಯಾಂಗ ಹಸಿವೆ ಆಗಿಲ್ಲ ನೋಡ್ತೀನಿ" ಎಂದಿದ್ದಳು.

ಆದರೆ ತನಗೆ ಮಾತ್ರ ಮನಸ್ಸಾಗಿರಲಿಲ್ಲ. ಒಳಗಿನ ನೋವಿನ ಒತ್ತಡಕ್ಕಾಗಿ ಅಲ್ಲಿ ಹೆಚ್ಚೊತ್ತು ನಿಲ್ಲುವುದು ಶಕ್ಯವಿರಲಿಲ್ಲ. "ಇಲ್ಲ, ನನಗ ಬಹಳೇ ತಲೆಶೂಲಿ ಅದ. ಏನಾದ್ರೂ ಬೇಕಾದರ ಕರೆ, ಬರ್ತೀನಿ" ಎಂದು ತನ್ನ ಕೋಣೆಗ ಧಾವಿಸಿದಳು.

ಕೋಣೆಯಲ್ಲಿ ಮನಸ್ಸು ಸ್ಥಿರವಾಗಿ ನಿಲ್ಲಲೊಲ್ಲದು. ಕತ್ತಲಾಗಿದ್ದರೂ ಕೋಣೆಯಲ್ಲಿ ದೀಪವನ್ನು ಹಚ್ಚದೆ ಹಾಗೆಯೆ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಳು. ಲಕ್ಷ್ಯವೆಲ್ಲ ಹೊರಬಾಗಿಲಿನ ಸದ್ದಿನ ಕಡೆಗೆಯೆ. ಕೊನೆಗೊಮ್ಮೆ ಹೊರಬಾಗಿಲಿನ ಸದ್ದಾಯಿತು. ಮೆಲ್ಲನೆ ಎದ್ದಳು. ಸದ್ದುಮಾಡದೆ ಸರಲಕ್ಕನ ಕೋಣೆಯ ಹೊರಗೆ ಹುದುಗಿ ನಿಂತುಕೊಂಡಳು. ಒಳಗೆ ಏನೇನೊ ಮಾತು ನಡೆದಿತ್ತು. ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಕೊನೆಗೆ, "ಛೆ! ಛೆ! ಇದೇನು ? ಮನಸ್ಸು ನೊಂದಿದ್ದರ ತಪ್ಪಾಯ್ತು ಅಂತ ಹೇಳ್ತೀನಿ. . ಹುಂ.... ಕರಕೊಂಡೇ ಬರ್ತೀನಿ" ಎಂದು ರಾಮಣ್ಣನ ಮಾತು ಕೇಳಬಂದಿತು. ಆ ದನಿ ಹೆಚ್ಚೆಚ್ಚು ಸಮೀಪವೆನ್ನಿಸಿ, ರಾಮಣ್ಣ ತನ್ನ ಕಡೆಗೇ ಹೊರಟಿದ್ದಾನೆ ಎಂದು ಗಾಬರಿಯಾಗಿ ತುದಿಗಾಲ್ಗಳ ಮೇಲೆ ಕೋಣೆಗೆ ಓಡಿದಳು, ಹಾಗೆಯೆ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಳು.

ಕಾಲ ಅನಂತವಾಗಿದೆ ಎಂಬುದರ ಅರ್ಥ ಕುಮುದಳಿಗೆ ಆಗ ತಿಳಿದಿರಬೇಕು. ಒಂದೆರಡು ನಿಮಿಷಗಳಲ್ಲಿಯೆ ರಾಮಣ್ಣ ತನ್ನ ಕೋಣೆಗೆ ಬಂದರೂ ಕುಮುದಳಿಗೆ ಅನಾದಿ ಕಾಲದಿಂದ ದಾರಿ ಕಾಯ್ದಂತೆ ಭಾಸವಾಗಿತ್ತು. ಅವಸರದಿಂದ, ಗಾಬರಿಯಿಂದ ಓಡಿಬಂದದ್ದರಿಂದ ಎದೆ ಬಡೆದುಕೊಳ್ಳುತ್ತಿತ್ತು. ಆ ಸದ್ದು ರಾಮಣ್ಣನಿಗೆ ಕೇಳಿಸಬಾರದೆಂಬ ಹೆದರಿಕೆಯಿಂದ ಕೈಗಳನ್ನು ಎದೆಯಮೇಲಿಟ್ಟುಕೊಂಡಳು. ಅಷ್ಟರಲ್ಲಿ ರಾಮಣ್ಣ ಬಂದ ; ಕೋಣೆಯಲ್ಲಿ

ದೀಪವಿಲ್ಲದ್ದಕ್ಕೆ ಅವನು ಹೆದರಿದ್ದನೇನೂ! ಯಾಕೆಂದರೆ ಮೆಲ್ಲನಿಯಲ್ಲಿಯೆ "ಕುಮುದಾ........ಕು–ಮು–ದಾ!" ಎಂದಿದ್ದ. ತಾನು ಉತ್ತರವನ್ನು ಕೊಟ್ಟಿರಲಿಲ್ಲ. ಏನೆಂದು ಉತ್ತರವನ್ನು ಕೊಡುವುದು? ಹೆದರಿಕೆ ಎನ್ನಿಸಿತು. ಉತ್ತರವನ್ನು ಕೊಟ್ಟರೆ ಅವನು ಬಾಗಿಲಿನಲ್ಲಿಯೆ ನಿಂತು ಮಾತಾಡಬಹುದು, ಒಳಗೆ ಬರಲಿಕ್ಕಿಲ್ಲ ಎಂದೂ ಹೆದರಿಕೆಯಾಯಿತು. ತನ್ನ ಎದೆಯ ಡಬಡಬವನ್ನೆ ಕೇಳುತ್ತ ಸುಮ್ಮನೆ ಒರಗಿಕೊಂಡಳು. ರಾಮಣ್ಣ ಒಳಗೆ ಬಂದ, ಮತ್ತೆ ತನ್ನ ಹೆಸರನ್ನು ನುಡಿದ. "ಎಲ್ಲಿದ್ದೀ, ಕುಮುದಾ? ಇದೇನು, ಮಲಗಿಕೊಂಡಿಯೇನು?" ಎನ್ನುತ್ತ ಹಾಸಿಗೆಯ ಬದಿಯ ಮೇಲೆ ಕುಳಿತು, "ತಲೆಶೂಲಿ ಅದ ಏನು ನಿನಗ?" ಎಂದು ತನ್ನ ಎರಡೂ ಗಂಡಸ್ಥಲಗಳನ್ನು ಬೆರಳುಗಳಿಂದ ಒತ್ತಿ ಹಿಡಿದ. (ಮೋಕ್ಷವೆಂದರೆ ಸುಖ–ದುಃಖ–ಕಾಲ–ದೇಶ ಮೊದಲಾದುವುಗಳ ತಾರತಮ್ಯವನ್ನು ಮೀರಿ ನಿಂತ ಒಂದು ನಿತ್ಯ–ಸಾತ್ವಿಕ–ಸುಖದ ಅವಸ್ಥೆ ಎಂದು ಕುಮುದಳಿಗೆ ತಿಳಿಯುವಂತಿದ್ದರೆ ಆ ಕ್ಷಣದಲ್ಲಿ ತನಗೆ ಮೋಕ್ಷ ಲಭಿಸಿತು ಎಂದು ಆಕೆ ಹೇಳಬಹುದಿತ್ತು. ಆದರೆ ಅಂತಹ ಕಲ್ಪನೆ ಇಲ್ಲದ್ದಕ್ಕೆ) ಕುಮುದಳು ಜೀವವಿದ್ದೂ ಅಸುರಳಾದಂತೆ ಮೈಮರೆತಿದ್ದಳು.

"ತಲೆ ನೋವು ನಿನಗ? ಛಿ! ಹುಚ್ಚಿ! ತಲೆನೋವು ಬರಬೇಕಾದರೆ ಮುಂಚೆ ತಲೆ ಇರಬೇಕಾಗೋದು. ತಲೆ ಇದ್ದಿದ್ದರೆ ನನ್ನ ಮಾತಿನ ಅರ್ಥ ಸರಿಯಾಗಿ ತಿಳೀತಿತ್ತು. ಹೌದೊ–ಇಲ್ಲೊ? ಆಂ? ಏಳು, ಊಟಾ ಮಾಡು. ಪಾಪ! ಸರಲಾ, ಎಷ್ಟು ಮನಸ್ಸಿಗೆ ಹಚ್ಚಿಕೊಂಡಾಳ."

ಮೊದಲಿನ ಮಾತಿಗೆ ನಗೆ ಬಂದಿತ್ತು, ಸರಲೆಯ ಸ್ಥಿತಿಯನ್ನು ಕೇಳಿ ಪಶ್ಚಾತ್ತಾಪವಾಗಿತ್ತು, ಆದರೂ ತಾನು ಎದ್ದಿರಲಿಲ್ಲ. ರಾಮಣ್ಣನು ರಮಿಸುವವನ ದನಿಯಲ್ಲಿ ಮಾತಾಡುತ್ತ ಕೊನೆಗೆ ತನ್ನನ್ನು ಕೈಹಿಡಿದು ಎಬ್ಬಿಸಹೋದನು, ಮೈ ತುಂಬ ಮಿಂಚಿನ ಸೆಳೆತ ಸುಳಿದಂತಾಯಿತು. ಕೈಗಳು ಸರಿದದ್ದಕ್ಕೆ ಎದೆ ಇನ್ನಿಷ್ಟು ಪುಟಿಯತೊಡಗಿತು. ತನ್ನ ಕೈಗಳನ್ನು ಎಳೆಯಬೇಕೆಂದಿದ್ದ ರಾಮಣ್ಣನ ಕೈಗಳು ಅನುಕೂಲದ ಆತಂಕ ಒದಗಿದಂತಾಗಿ ಇದ್ದಲ್ಲಿಯೆ ಸಮಾಧಾನದ ಸೊಕ್ಕಿನಿಂದ ಮುಷ್ಟಿ ಬಿಗಿದವು....ಒಂದು ಕ್ಷಣ, ಒಂದು ಯುಗ – ಅಲ್ಲ, ಅಷ್ಟರಲ್ಲಿ "ಸರಲಾನ ಸಲುವಾಗಿ ಆದರೂ ಊಟ

ಮಾಡಿ ಬಾ. ಬೇಕಾದರ ನನ್ನ ತಪ್ಪಿಗೆ ಆ ಮ್ಯಾಲೆ ನಾ ಕ್ಷಮಾ ಬೇಡ್ತೀನಿ." ಎನ್ನುತ್ತ ರಾಮಣ್ಣ ತನ್ನನ್ನು ಕೋಣೆಯಿಂದ ಹೊರಗೆ ಸಾಗಿಸಿದ್ದ.

ಆ ರಾತ್ರಿ ಊಟ ಮಾಡಿದುದರ ಎಚ್ಚರವೆ ಇದ್ದಿರಲಿಲ್ಲ. "ಛಲೊ ಆಯ್ತು, ತಾಯೀ! ಹೊಟ್ಟೆ ತುಂಬಿ ಊಟ ಮಾಡಿದಿ" ಎಂದು ಸರಲಕ್ಕ ನುಡಿದಾಗ ತಾನು ಊಟವನ್ನು ಮುಗಿಸಿದಳೆಂದು ತಿಳಿದುಬಂದಿತ್ತು. "ಇನ್ನ ತಲೆಶೂಲಿ ಇಲ್ಲ ಅಹುದಲ್ಲೊ? ಹಸಿವೆ ಭಾಳ ಆಗಿದ್ದು ತಿಳೀಲಾರದೆ ತಲೆ ಶೂಲಿ ಅಂದಿತೊ ಏನೊ ಹುಡಿಗೆ!" ಎಂದು ಸರಲಕ್ಕ ನಗೆಯಾಡಿದ್ದನ್ನು ಕೇಳಿ ತಾನು ಲಕ್ಷ್ಯವಿಲ್ಲದೆ ಎಲ್ಲಿ ಸಿಕ್ಕಾಬಟ್ಟೆ ತಿಂದೆನೊ ಎಂದು ಹೆದರಿಕೆ ಯಾಗಿತ್ತು. "ಹೊಟ್ಟೆ ತುಂಬಿ ಊಟ ಮಾಡತಿದ್ದರ ಯಾರ ಮಾತೂ ಮೈಗೆ ಹತ್ತೋದಿಲ್ಲ ನೋಡು" ಎಂದೂ ಸರಲಕ್ಕ ತನ್ನನ್ನು ಕೆಣಕಿದ್ದಳು. ಅಂತೂ ಹೇಗೊ ಹೇಗೊ ಊಟದ ಜವಾಬ್ದಾರಿಯಿಂದ ಪಾರಾಗಿ, ಸರಲಕ್ಕನ ಮನಸ್ಸಿನೊಳಗಿನ ಕಿಲ್ಬಿಷವನ್ನು ತೆಗೆದುಹಾಕಿ ತನ್ನ ಕೋಣೆಗೆ ಬಂದಿದ್ದಳು. ಬಂದವಳೆ ಅತ್ಯಂತ ಪರಿಶ್ರಮವಾದವಳಂತೆ, ಯಾವುದೊ ಕುತ್ತಿನಿಂದ ಪಾರಾ ದವಳಂತೆ ಉಸಿರೆಳೆದು ಹಾಸಿಗೆಯ ಮೇಲೆ ಇದ್ದಕ್ಕಿದ್ದ ಹಾಗೆಯೆ ಮಲಗಿ ಕೊಂಡಳು. ದೀಪ ಹಚ್ಚಿದರೆ ಎಲ್ಲಿ ಒಳಗಿನ ವಿಚಾರ ಓಡಿಹೋಗುವುದೊ ಎಂಬ ಸಂದೇಹದಿಂದ ದೀಪವನ್ನು ಹಚ್ಚಿರಲಿಲ್ಲ. ಒಳಗೆ ಒಂದೇ ಒಂದು ವಿಚಾರ. "ಆ ಮ್ಯಾಲೆ ನಾ ಕ್ಷಮಾಬೇಡ್ತೀನಿ" ಎಂದಿದ್ದ ರಾಮಣ್ಣ. ಹಾಗಾದರೆ ಮತ್ತೆ ಕೋಣೆಗೆ ಬರಬಹುದಲ್ಲ? ದೀಪ ಹಚ್ಚಿಡುವುದೆ ಒಳಿತು ಎಂದೆನ್ನಿಸಿತು; ಆದರೆ ಬೆಳಕಿನಲ್ಲಿ ತನ್ನ ನಾಚಿದ ಮುಖ ರಾಮಣ್ಣನಿಗೆ ಕಾಣಬಹುದು, ಆದಕಾಗಿ ದೀಪ ಬೇಡ ಎಂದುಕೊಂಡಳು. ಕತ್ತಲಲ್ಲಿಯೆ ಬಾಗಿಲನ್ನು ದಿಟ್ಟಿಸುತ್ತ ಮಲಗಿದಳು. ರಾಮಣ್ಣ ನಿಜವಾಗಿಯೆ ಬಂದರೆ? ಬಂದರೆ? ನಿಜವಾಗಿಯೆ ಕ್ಷಮೆಯನ್ನು ಬೇಡಿದರೆ? ತಾನು ಏನನ್ನಬೇಕು? ಛಿ! ಎಂತಹ ಹುಚ್ಚು ವಿಚಾರ! ರಾಮಣ್ಣ ಸಂತಹನು ತನ್ನ ಕ್ಷಮೆ ಬೇಡುವು ದೆಂದರೇನು? ಮುಂದಾಗಿ ತಪ್ಪು ತನ್ನದು ಎಂದು ತಾನೇ ಹೇಳಬೇಕು. ಎಂತಹ ಮೋಜಿನ ರೀತಿ ರಾಮಣ್ಣನದು! ತನಗೆ ತಲೆ ಇಲ್ಲ ಎಂದು ಹೇಳು ವಾಗ ತಲೆಯ ಮೇಲೆಯೆ ಕೈಯನ್ನಾಡಿಸುತ್ತಿದ್ದನು! "ಕುಮುದಾ!" ಬೆಚ್ಚಿ ಬಿದ್ದಳು. ರಾಮಣ್ಣನ ದನಿ! ಅವ್ವಯ್ಯಾ – ಬಂದೇಬಿಟ್ಟರು! – ಎಂದು

ಏಳಬೇಕೆಂಬಾಗ ಕಾಲ್ಗಳು ಅವಳ ಇಚ್ಛೆಯನ್ನು ಪೂರಯಿಸದಾಗಿದ್ದವು. ಏಳಬೇಕು, ಎದ್ದು ತಾನೇ ಕ್ಷಮೆ ಕೇಳಬೇಕು ಎಂದು ಹಂಚಿಕೆ ಹಾಕುತ್ತಿದ್ದ ಕುಮುದಳ ಬಾಯಿಯಿಂದ ಶಬ್ದಗಳೆ ಹೊರಟರಲಿಲ್ಲ. ಕೋಣೆಯು ತುಂಬ ಪಸರಿಸಿದ ಕತ್ತಲೆಯೆ ಅವಳಿಗೆ ಧೈರ್ಯವನ್ನು ತಂದುಕೊಟ್ಟಿತ್ತು, ತನ್ನ ದುರವಸ್ಥೆ ಯಾರಿಗೂ ಕಾಣಿಸದು ಎಂದು. ರಾಮಣ್ಣನಿಗೆ ಮಾತ್ರ ತಾನು ಏಳಲಾರದ್ದು ಕಾಣಿಸಿತ್ತೇನೊ! ನೆಟ್ಟನೆ ಬಂದು ಹಾಸಿಗೆಯ ಬದಿಗೆ ಕುಳಿತು ಕೊಂಡ.

"ತಲೆಶೂಲಿ ಹ್ಯಾಂಗ ಅದ? ಆಂ?"

ಏನೆಂದು ಉತ್ತರವನ್ನು ಕೊಡಬೇಕು? ಹಣೆಯಿಂದ ಕೂದಲುಗಳನ್ನು ತನ್ನ ಕೈಯಿಂದ ಮೇಲೆ ನೇವರಿಸುತ್ತಿದ್ದಾನೆ ರಾಮಣ್ಣ. ಅದಕ್ಕಾಗಿ ಏನೂ ತಿಳಿಯದಂತಾಗಿದೆ. ಏನೆಂದು ಉತ್ತರವನ್ನು ಕೊಡಬೇಕು?

"ನಿನ್ನ ಕ್ಷಮಾ ಕೇಳಲಿಕ್ಕೆ ಬಂದೀನಿ, ಕುಮುದಾ. ನೀ ಬಾಯಿ ಯಿಂದ ಹುಂ ಅಂತ ಹೇಳದ ಹೊರತು ಹೊರಬೀಳೋದಿಲ್ಲ" ಎಂದಿದ್ದ ರಾಮಣ್ಣ.

ಹಾಗಿದ್ದರೆ ತಾನು 'ಹುಂ' ಎಂದಾದರೂ ನುಡಿಯಬೇಕಿತ್ತು? ಅದೊಂದು ಶಬ್ದದ ಮೇಲೆಯೆ ತನ್ನ ಭವಿಷ್ಯ ನಿಲ್ಲಬೇಕಾಗಿತ್ತೆ? ಬಾಯಿ ಕೂಡ ತೆರೆಯದಂತಾಗಿತ್ತು.

"ನಾನು ಹೋಗೋದಿಲ್ಲ ಅಂದ್ರ ಹೋಗೋದಿಲ್ಲ" ಎಂದು ರಾಮಣ್ಣ ಹಾಸಿಗೆಯ ಮೇಲ ಕಾಲು ಚಾಚಿ ಅಡ್ಡಾದ.

ಕುಮುದಳ ಮೈ ಥರಥರ ನಡುಗುತ್ತಿದ್ದಿತು. ಅದು ರಾಮಣ್ಣನಿಗೆ ತಿಳಿಯದಿರಲಿಲ್ಲ. "ಎಲ! ಖರೇನೆ ಜ್ವರಗಿರ ಬರೋದಿಲ್ಲ ಹೌದಲ್ಲೊ?" ಎನ್ನುತ್ತ ಹೊಟ್ಟೆಗೆ ಹೊರ ಅಂಗೈ ಹಚ್ಚಿದ್ದ. ತನ್ನ ಮೈ ನಡುಗುವುದು ನಿಂತಿತ್ತು.

"ನೀನು ಹುಂ ಕೂಡಾ ಅನ್ನೋದಿಲ್ಲ? ಎಂತಹ ಹಟ ನಿನ್ನದು?" ಎಂದು ಕಿವಿಯಲ್ಲಿಯೆ ಉಸಿರಿದ್ದ. ರಾಮಣ್ಣನ ಮುಖ ತನ್ನ ಮುಖಕ್ಕೆ ಈಗ ಹತ್ತಿರವಾಗಿತ್ತು. "ಹೇಳು, ನಡುಗುವ ನಾಟಕ ಮಾಡಬೇಡ" ಎನ್ನುತ್ತ ಎಡಮಗ್ಗುಲಾಗಿ ಬಲಗೈಯಿಂದ ತನ್ನನ್ನು ಬಿಗಿದು ಹಿಡಿದಿದ್ದ

ಕುಮುದಳ ಬಾಯಿಗೆ ಏನಾಗಿದ್ದಿತೊ! ಅರೆತೆರೆದಿದೆ, ಒಂದು ಶಬ್ದ ಹೊರ ಬೀಳಲೊಲ್ಲದು! "ನೀನು ಬಾಯಿಮುಚ್ಚಿಕೊಂಡರೆ ನಾನೂ ಬಾಯಿ ಮುಚ್ಚಿ ಕೋತೀನಿ" ಎಂದವನೆ ಬಾಯಿಗೆ ಬಾಯಿಯನ್ನಿಟ್ಟು ಬಲಗೈಯಿಂದ ಇನ್ನಿಷ್ಟು ಹತ್ತಿರ ತನ್ನನ್ನು ಎಳೆದುಕೊಂಡಿದ್ದ.

ಆ ರಾತ್ರಿ ಕುಮುದಳಿಗೆ ಯಾವುದೊ ಹೆಸರಿಡದಂತಹ ಹೆದರಿಕೆಯಾಗಿತ್ತು. ಸೃಷ್ಟಿಯು ಹೆಣ್ಣಿಗೆ ವಹಿಸಿಕೊಟ್ಟ ಧರ್ಮದ ಕಲ್ಪನೆಯು ಅವಳಿಗಿದ್ದಿರಲಿಲ್ಲ, ಅರಿವೂ ಪೂರ್ತಿಯಾಗಿರಲಿಲ್ಲ. ಆದರೆ ಆ ಧರ್ಮದ ಹಾದಿ ಮಾತ್ರ ಸುಗಮವಾದದ್ದಲ್ಲ ಎಂದು ಒಮ್ಮೆ ಎನ್ನಿಸಿತ್ತು. ಯಾವುದು ನಿಜ? ದೇಹಕ್ಕಾದ ಪೀಡೆಯೊ? ಮನಸ್ಸಿಗಾದ ಆನಂದವೊ? ಒಮ್ಮೊಮ್ಮೆ ಪೀಡೆಯೆ ಆನಂದವೆನ್ನಿಸಿದಂತಾಗಿ ಏನೂ ತಿಳಿಯದಂತಾಗುತ್ತಿತ್ತು. ರಾಮಣ್ಣನ ಕೈಗಳು ತನ್ನ "ಎದೆ"ಗಳನ್ನು ಮುಟ್ಟಿದಾಗ, ಆ ಕೈಗಳಲ್ಲಿ ಎಂತಹ ಕಸುವಿದೆ ಎಂಬುದನ್ನು ಕಂಡಾಗ – ಅದೇನು ಸುಖವೊ? ದುಃಖವೊ? ಅವಳಿಗೆ ತಿಳಿದಿರಲಿಲ್ಲ. ತನ್ನ ಬಾಯಿಗೆ ಸೋಂಕಿದ ರಾಮಣ್ಣನ ಬಾಯಿ ತನ್ನ ಕೆಳ ದುಟಿಯನ್ನು ಕಚ್ಚಿದಾಗ ರಕ್ತದೊಡನೆ ಸುಖವೂ ಹೊರಚಿಮ್ಮಿತೇನೊ ಎನ್ನುವಂತಾಗಿತ್ತು. ಒಮ್ಮೆ ಅದಾವುದೊ ಒಂದು ತಡೆಯದ ವೇದನೆಯಾದಂತಾಗಿತ್ತು; ಆದರೆ ಅದು ವೇದನೆಯಲ್ಲ ಎನ್ನುವಂತೆ ತನ್ನ ಬಾಯಿಯಿಂದ ಅತ್ಯಂತ ಸಮಾಧಾನದಿಂದ ಸೂತ್ಕಾರ ಹೊರಬಿದ್ದಿತ್ತು. ಬೇಡ, ಬೇಡ ಎನ್ನುವಾಗಲೆ ಬೇಕೆಂಬ ಭಾವನೆ ತನ್ನ ತೊಡೆಯ ಮೇಲೆ ಕೂಸಿನಂತೆ ನಗುತ್ತಿತ್ತು. "ಕುಮುದಾ, ಕುಮುದಾ" ಎಂದು ರಾಮಣ್ಣನು ಉಸುಗರೆದ ತನ್ನ ಹೆಸರು ನೇರವಾಗಿ ತನ್ನ ಹೃದಯವನ್ನು ಮುಟ್ಟಿ ಅದನ್ನು ಹೊಡೆದೆಬ್ಬಿಸಿತ್ತೇನೊ! ಆ ಹೆಸರನ್ನು ರಾಮಣ್ಣನು ಉಸುಗರೆದ ಮಾತ್ರಕ್ಕೆ ಕುಮುದಳು ತನ್ನ ಎರಡೂ ತೋಳ್ಗಳಿಂದ ರಾಮಣ್ಣನನ್ನು ಬಲವಾಗಿ ಬಿಗಿದು ಸೆಳೆದುಕೊಂಡಳು. ಆಗ, ರಾಮಣ್ಣನ ಈ ದೇಹವನ್ನು ತನ್ನ ತೋಳ್ಗಳಿಂದ ಬಿಗಿದು ಮುರಿದು ಅದನ್ನು ತನ್ನಲ್ಲಿ ವೈಗರಿಸಿಕೊಳ್ಳಬೇಕು ಎನ್ನುವಷ್ಟು ಒಂದು ಕ್ರೂರವಾದ ಪ್ರೇಮದ ಹಂಬಲ ತನ್ನಲ್ಲಿ ಮೂಡಿತ್ತು.

"ಪ್ರೇಮ" – ಕುಮುದ ಕನಸಿನಿಂದ ಎಚ್ಚೆತ್ತವಳಂತೆ ಹಿಂದಿನ ಈ ನೆನಪನ್ನು ಕೊಡುಹಲು ತಲೆ ಜಾಡಿಸಿದಳು. ಉಸುಗರೆದಳು. ಪ್ರೇಮ!

ಎರಡು ವರ್ಷ ಆ ಶಬ್ದಕ್ಕೆ ತಾನು ಆಹುತಿಯಾಗಿದ್ದಾಳೆ. ಅಂದು "ಕುಮುದಾ, ಕುಮುದಾ" ಎಂದು ಕತ್ತಲಲ್ಲಿ ಹೃದಯವನ್ನೆ ತೆರೆದು ಉಸುರ್ಗರೆದ ರಾಮಣ್ಣ ಈಗ – ಹೋಗಲಿ, ಎಂದುಕೊಂಡಳು. ಇನ್ನು ಆ ವಿಚಾರ ಯಾಕೆ? ಆ ಮೊದಲ ರಾತ್ರಿಯ ತಪ್ಪು ನನ್ನದಲ್ಲ, ರಾಮಣ್ಣನು ಆ ರೀತಿ – ವರ್ತಿಸಿದ್ದಿಲ್ಲ ವೆಂದರೆ ತನಗೆ ಧೈರ್ಯವೆ ಆಗುತ್ತಿರಲಿಲ್ಲ; ತಪ್ಪು ತನ್ನದಲ್ಲ, ತಾನು ಮನದಣಿಕೆಯಿಂದ ಪಾಪಕ್ಕೆ ಪ್ರೇರಿತಳಾದವಳಲ್ಲ – ಎಂದುಕೊಂಡಳು. ಆದದ್ದೆಲ್ಲ ಸುಳ್ಳು, ನಡೆದದ್ದಷ್ಟೆ ನಿಜ ಎಂದುಕೊಂಡು ಉಸುರ್ಗರೆದು ಹಾಸಿಗೆ ಯಿಂದ ಎದ್ದಳು. ಇನ್ನು ಎಚ್ಚರಿದ್ದರೆ ಈ ನೆನಪುಗಳ ಕಾಟ ತಪ್ಪದೆಂದು ಮಲಗುವ ಸಿದ್ಧತೆಯಲ್ಲಿ ತೊಡಗಿದಳು. ಯಾವ ವಿಚಾರ ಬಂದಿತೊ ಏನೊ! ಹಾಸಿಗೆಯ ಮೇಲಿನ ಹೊದಿಕೆಯನ್ನು ತೆಗೆಯಬೇಕೆಂದವಳು ಅದನ್ನು ಅರ್ಧಕ್ಕೆ ಎತ್ತಿ ಚಿತ್ರದ ಗೊಂಬೆಯಂತೆ ಹಾಗೇ ನಿಂತಳು.

## ೬

ಸುಲಭವಾಗಿ ದೊರೆಯುವ ವಸ್ತುವಿಗಾಗಿ ಮೊದಲು ಅತ್ಯಾಶೆ, ಇಷ್ಟು ಸುಲಭವಾಗಿ ದೊರೆತಿದೆ ಎಂಬುದಕ್ಕೆಯೆ ಆ ಮೇಲೆ ಅದರ ಬಗ್ಗೆ ತಿರಸ್ಕಾರ. ರಾಮಣ್ಣ ಚಕಿತನಾದ. ಯಾವ ಮಾತಿನ ಬಗ್ಗೆ ಈ ವಿಚಾರ ತನ್ನ ಮನಸ್ಸಿ ನಲ್ಲಿ ಬಂದಿತು? ತನ್ನ ಕೈಯೊಳಗಿದ್ದುದು ಪುಸ್ತಕ; ಅದನ್ನು ಓದಲು ತೊಡಗಿದ್ದ. ಆ ಪುಸ್ತಕದ ಬಗ್ಗೆ ಈ ವಿಚಾರ ಬರುವುದು ಶಕ್ಯವಿಲ್ಲ. ಹಾಗಿದ್ದರೆ ತಾನು ಬರೆಯುವ ಪುಸ್ತಕಗಳಿಗಾಗಿಯೆ? ಯಾಕೆಂದರೆ, ಅನೇಕ ಸಲ ಅವನಿಗೆ ಅಂತಹ ಅನುಭವ ಬಂದಿತ್ತು. ಒಂದು ಮಾತು ಅತ್ಯಂತ ಮಹತ್ತ್ವದ್ದೆಂದು ಹೊಳೆದು ಯಾವಾಗ ಅದನ್ನು ಕುರಿತು ಪುಸ್ತಕವನ್ನು ಬರೆದೇನು ಎಂದು ಆತುರ; ಆ ಮೇಲೆ ಒಮ್ಮೆ ಪ್ರಾರಂಭಿಸಿ ಕೆಲವೇ ದಿನಗಳಲ್ಲಿ ಅದನ್ನು ಮುಗಿಸಿದೊಡನೆ ಅದಕಾಗಿ ಜಿಗುಪ್ಸೆ. ಯಾಕೆ? ಕೆಲವೇ ದಿನಗಳಲ್ಲಿ ಮುಗಿಸಲ್ಪಡಬಲ್ಲ ಪುಸ್ತಕ ಮಹತ್ವದ್ದೆನ್ನಿಸೀತೆ – ಎಂದು. ಆದರೆ ಆ ವಿಚಾರವಾದರೂ ಈಗ ಯಾಕೆ ಬರಬೇಕು? ತನ್ನ ಕೈಯಲ್ಲಿ ಪುಸ್ತಕವಿದೆ ಎಂದೊ? ಹಾಂ – ತಿಳಿಯಿತು. "ಕೈಯಲ್ಲಿ ಪುಸ್ತಕ". ಪುಸ್ತಕಕ್ಕಿಂತ

"ಕೈಯಲ್ಲಿ" ಎಂಬುದನ್ನೆ ತನ್ನ ಒಳಮನಸ್ಸು ಒತ್ತಿ ತೋರಿಸುತ್ತಿದೆ. ಇದು ವರೆಗೆ ಹಿಂದಿನ ನೆನಪುಗಳನ್ನು ನೆನೆಯುತ್ತಿದ್ದ ಆ ಓಘದಲ್ಲಿ ೨-೨॥ ವರ್ಷಗಳ ಮುಂಚೆ ಕುಮುದ ತನ್ನ "ಕೈಯಲ್ಲಿ" ಸಿಕ್ಕಳು ಎಂದು ಒಳಮನಸ್ಸು ತಾನಾಗಿಯೆ ನೆನೆದುಕೊಂಡಿದೆ. ಈಗ ತನಗೆ ಕುಮುದಳಿಗಾಗಿ ಒಂದು ತರದ ಜಿಗುಪ್ಸೆ ಇದ್ದುದು ನಿಜವಾದ್ದರಿಂದ, ಆ ಜಿಗುಪ್ಸೆಗಾಗಿ ಸಮಾಧಾನ ವನ್ನು ತಂದುಕೊಳ್ಳುತ್ತಿತ್ತು ಒಳಮನಸ್ಸು. ಅದು ಹೊರಮನಸ್ಸಿಗೆ ಕೇಳಿಸಿ ತೇನೊ ! ಅದೇ ತನಗೆ ಹೊಳೆದ ವಿಚಾರವಾಗಿರಬಹುದೇನೊ ! "ಸುಲಭ ವಾಗಿ ದೊರೆಯುವ ವಸ್ತುವಿಗಾಗಿ ಮೊದಲು ಅತ್ಯಾಶೆ", ನಿಜ. ತನ್ನ ಮತ್ತು ಕುಮುದಳ ಸಂದರ್ಭದಲ್ಲಿ ಈ ಮಾತು ಅಕ್ಷರಶಃ ನಿಜವಾಗಿತ್ತು. ಹೇಗೊ ಏನೊ - ಅಂದು ಕಪಾಟನೆದುರಿನಲ್ಲಿ ಅವಳನ್ನು ಬಿಗಿದಪ್ಪಿದಾಗ ಆಕೆಯ ಮುಖಮುದ್ರೆಯನ್ನು ನೋಡಿ ರಾಮಣ್ಣನಿಗೆ ಒಳಗೊಳಗೆ ಒಂದು ಆಶೆ ಅಂಕುರಿಸಿತ್ತು. ಈಕೆ ಈ ಮೊದಲೇ ನನ್ನನ್ನು ಒಲಿದಿದ್ದಾಳೆ, ಎಂದೂ ಎನ್ನಿಸಿತ್ತು. ಆದರೂ ಅಂತರಂಗದ ಈ ಸಾಕ್ಷ್ಯದ ಮೇಲೆ ರಾಮಣ್ಣನು ಪೂರ್ತಿಯಾಗಿ ವಿಶ್ವಾಸವನ್ನಿಟ್ಟಿರಲಿಲ್ಲ. ಯಾರಿಗೆ ಗೊತ್ತು ? ಒಂದು ವೇಳೆ ಸರಲೆಗೆ ಹೇಳಿದರೆ ? - ಎಂದು ಹೆದರಿದ್ದ. ಅದಕಾಗಿ - ಈಗಲೂ ರಾಮಣ್ಣನ ಮುಖದಲ್ಲಿ ಆ ನೆನಪಿಗಾಗಿ ಮುಗುಳ್ನಗೆ ಮೂಡುತ್ತಿದೆ - ಮರು ದಿನ ತಾನು ಸರಲೆಯ ಸಮೀಪದಲ್ಲಿಯೆ ಹೆಚ್ಚಾಗಿ ಸುಳಿದಿದ್ದ, ಇಡೀ ದಿನ ಹೊರಗೆ ಅಡ್ಡಾಡಿದ್ದ. ಆದರೆ ಅಪ್ಪಿತಪ್ಪಿ ಒಮ್ಮೆ ಕುಮುದಳ ಕಡೆ ನೋಡಿ ದಾಗ ಆಕೆಯ ಕಣ್ಣಲ್ಲಿ ಹೆದರಿಕೆ ಇರಲಿಲ್ಲ, ಸಿಟ್ಟು ಇರಲಿಲ್ಲ, ಆ ಹುಬ್ಬುಗಳು ಸ್ವಾಗತದ ಕಮಾನಿನಂತೆ ಕಂಡಿದ್ದುವು ರಾಮಣ್ಣನಿಗೆ. ಒಳಗಿನ ಆಶೆಯನ್ನು ಕೆಣಕಿದಂತಾಯಿತು. ಆಗ ಮಾತ್ರ ಮೊದಲ ಮತ್ತು ಕೊನೆಯ ಸಲ ರಾಮಣ್ಣ ಯತ್ನ ಮಾಡಿದ್ದನೆನ್ನಬಹುದು, ತನ್ನ ಮನಸ್ಸನ್ನು ತಡೆಯಲು. ಬೇಡ, ಈ ಗೊಡವೆಯೆ ಬೇಡ ಎಂದುಕೊಂಡಿದ್ದ. ಸರಲೆಯ ಮಗ್ಗುಲಲ್ಲಿ ಮಾತಾಡುತ್ತ ಕುಳಿತಾಗಲೂ ಹಿಂದಿನ ರಾತ್ರಿಯ ಸ್ಪರ್ಶಸುಖದ ಸವಿ ಬಾಯಿಗೆ ನೀರೊಡೆದಂತೆ ನೆನಪಾಗಿತ್ತು. ಆಗ ಸರಲೆಯ ಕೈಯನ್ನು ತನ್ನ ಕೈಯಿಂದ ಹಿಚುಕಿ ಆ ನೆನಪಿನ ಸುಖವನ್ನು ಮರೆಯಲು ಯತ್ನಿಸಿದ್ದ. ಸರಲೆಯು ನಗೆಮೊಗದಿಂದ ತನ್ನನ್ನು ನೋಡುತ್ತ "ದೇವರು ಬ್ಯಾಗ ನನಗ

ಆ ಶಕ್ತಿ ಕೊಡಲಿ" ಎಂದಿದ್ದಳು. ಮೊದಲು ಸಂದರ್ಭ ತಿಳಿಯದೆ ರಾಮಣ್ಣ ಬೆಚ್ಚಿ-ಬಿದ್ದು "ಏನಂದಿ ?" ಎಂದಿದ್ದ. ಸರಲೆ ಅದೇ ನಗೆಮೊಗದಿಂದ "ಏನಿಲ್ಲ" ಎನ್ನುತ್ತ ಈಗ ತನ್ನ ಕೈಯನ್ನು – ಪಾಪ! ಅಶಕ್ತಳಾಗಿದ್ದರೂ – ವಾತ್ಸಲ್ಯದ ಶಕ್ತಿಯಿಂದಲೊ ಏನೊ ಎನ್ನುವಂತೆ ಹಿಸುಕಿದ್ದಳು. ಆ ದಿನ ಮತ್ತೇನೊ ಒಂದು ವಿಶೇಷ ನಡೆದಿತ್ತು, ಮನೆಯ ವ್ಯವಸ್ಥೆಯ ಬಗ್ಗೆ. ಯಾವ ಮಾತು ? ಹೋಗಲಿ, ನೆನಪಿದ್ದ ಮಾತೆಂದರೆ, ಮರುದಿನ ಕುಮುದ ಳನ್ನು ಸಿನಿಮಾಕ್ಕೆ ಕರೆದೊಯ್ಯಬೇಕೆಂಬುದು. ಅದೂ ಸರಲೆಯ ಒತ್ತಾಯ !

ಈ ಮಾತು ನೆನಪಾದ ಕೂಡಲೆ ರಾಮಣ್ಣ ಮತ್ತೆ ಮುಖ ತಿರುಗಿಸಿ ಭಾವಪಟವನ್ನು ನೋಡಿದನು, ಉಸಿರೆಳೆದನು. "ಹುಚ್ಚಿ ! ನಾನು ಎಷ್ಟು ಪ್ರಯತ್ನ ಮಾಡಿದ್ದೆ ! ಅದನ್ನೆಲ್ಲಾ ಕೆಡಿಸಿಬಿಟ್ಟೆ ನೀನು ! ನಿನ್ನ ಕೈಯಿಂದಲೆ ನಿನ್ನ ಜೀವವನ್ನು ಇನ್ನೊಬ್ಬರಿಗೆ ಎತ್ತಿ ಕೊಟ್ಟೆ ನೀನು ! ಅದಕ್ಕೇ ಹೇಳತಾ ಇದ್ದೀನಿ, ಸರಲಾ, ಇದೆಲ್ಲಾ ನಿನ್ನ ತಪ್ಪು ಅಂತ" ಎಂದು ಭಾವಪಟಕ್ಕೆ ಕತೆಯನ್ನೂ ಬುದ್ಧಿಯ ಮಾತನ್ನೂ ಹೇಳಿದ.

ರಾಮಣ್ಣ ವಿಚಾರ ಮಾಡಿದ. ನಿಜವಾಗಿ ನಡೆದುದೆಲ್ಲ ಸರಲೆಯ ತಪ್ಪು ಎಂದೆನ್ನುವಾಗಲೂ ಸರಲೆಯ ಶುದ್ಧ ಅಂತಃಕರಣದ ನೆನಪು ಅವನನ್ನು ಪೀಡಿಸುತ್ತಿತ್ತು. ಶುದ್ಧ ಅಂತಃಕರಣದಿಂದ ಮಾಡಿದ್ದು ತಪ್ಪೆನ್ನಬಹುದೆ ? ಎನ್ನಬಾರದೇಕೆ ? ವ್ಯವಹಾರದ ರೀತಿಯೆ ವಿಪರೀತವಾಗಿದ್ದಾಗ ಜೀವನದ ರೀತಿಯೂ ವಿಪರೀತವಾಗಿರಬಾರದೇಕೆ ? ಅನ್ಯಾಯದಿಂದ ಗಳಿಸಿದ ಹಣ ದಿಂದ ದೇವಸ್ಥಲವನ್ನು ಕಟ್ಟಿಸಿದವನನ್ನು ಜನರು "ಪುಣ್ಯವಂತ" ಎಂದು ತಿಳಿಯುವುದಿಲ್ಲವೆ ? ಪಾಪದಿಂದ ಪ್ರೇರಿತನಾಗಿ ಪುಣ್ಯವನ್ನು ಮಾಡಬಹು-ದಾದರೆ ಪುಣ್ಯದಿಂದ ಪ್ರೇರಿತನಾಗಿಯೆ ಪಾಪವನ್ನು ಮಾಡಲಾಗದೇಕೆ ? ಹಿಂದಿದ್ದ ಶುದ್ಧ ಅಂತಃಕರಣವು ಮುಖ್ಯವೆ ? ಮುಂದೆ ಅದರಿಂದ ಘಟಿಸಿದ ಅನರ್ಥ ಮುಖ್ಯವೆ ? ದೇಶ-ಕಾಲಗಳ ಮೇರೆಯಿಂದಲೆ ಜ್ಞಾನ ದೊರೆಯುವ ಈ ಜಗತ್ತಿನಲ್ಲಿ ಕ್ರಿಯೆ ಮುಖ್ಯ, ಆದುದರಿಂದ ಘಟಿಸಿದ ಅನರ್ಥ ಮುಖ್ಯ, ಆದುದರಿಂದ – ರಾಮಣ್ಣ ತಡೆದ. ತನಗೆ ಹುಚ್ಚು ಮಾತ್ರ ಹಿಡಿಯಲಿಕ್ಕಿ ಲ್ಲವಷ್ಟೆ ? ಎಂತಹ ಮಾತು, ಯಾವ ಸಂದರ್ಭ, ಅವುಗಳ ಸಮಾಧಾನಕ್ಕಾಗಿ ತಾನು ಉರುಳಿಸುತ್ತಿರುವ ತತ್ವಜ್ಞಾನದ ಬಂಡೆಗಳೆಂತಹವು ! ಈ

ಸ್ವಭಾವಕ್ಕಾಗಿಯೆ ಮನುಷ್ಯನು ಕೊನೆಗೆ ಜ್ಞಾನವನ್ನು ಮುಚ್ಚುವ ಬದಲು ಆ ಬಂಡೆಗಲ್ಲುಗಳ ಕೆಳಗೆ ಸಿಕ್ಕು ಪುಡಿಪುಡಿಯಾಗುತ್ತಾನೆ. ರಾಮಣ್ಣ ತನಗಾಗಿಯೆ ತಿರಸ್ಕಾರವನ್ನು ವ್ಯಕ್ತಪಡಿಸುವ ನಗೆಯಿಂದ ಪುತ್ರ ಭಾವಪಟವನ್ನು ನೋಡಿದ. "ಸರಲಾ, ನೋಡಿದೆಯಾ ನಿನ್ನ ಗಂಡನ ಅವಸ್ಥೆಯನ್ನು? ಬೇಕಾದ್ದನ್ನು ಮಾಡುವ ಯೋಗ್ಯತೆಯುವ ಎಂದು ನೀನು ತಿಳಿದಿದ್ದ, ಆದರೆ ಬೇಡಾದದ್ದನ್ನು ಮಾಡಿ ಅದನ್ನು ದಕ್ಕಿಸಲಾರದೆ ನೆನಪುಗಳ ಅಜೀರ್ಣವಾಗಿ ಬಳಲುತ್ತಿದ್ದಾನೆ." ರಾಮಣ್ಣ ಎದ್ದು ಅತ್ತಿತ್ತ ತಿರುಗಾಡತೊಡಗಿದ, ಅಜೀರ್ಣಕ್ಕಾಗಿ ವ್ಯಾಯಾಮ ಬೇಕೆಂಬ ವಿಚಾರದಿಂದಲೊ ಏನೊ ಎನ್ನುವಂತೆ. ಬೆನ್ನಿಗೆ ಕೈ ಕಟ್ಟಿದ. ಹೆಜ್ಜೆಗಳನ್ನು ನೋಡುತ್ತ, ಮುಖವನ್ನು ಕೆಳಗೆ ಮಾಡಿ ಅತ್ತಿಂದಿತ್ತ ಸುಳಿದಾಡುವಾಗ, ಒಮ್ಮೆಲ "ಆ ಹಾಳು ಸಿನಿಮಾಕ್ಕ ಹೋದದ್ದೆ ಇದನ್ನೆಲ್ಲ ಮಾಡಿತು, ನಮ್ಮನ್ನ ಸಿನಿಮಾಕ್ಕ ಕಳಿಸಿದಾಕ ಸರಲಾನೇ" ಎಂದುಕೊಂಡ. ಸಿಟ್ಟು ಬಂದಿತು. ಯಾರಿಗಾಗಿ ಎಂಬುದು ಸ್ಪಷ್ಟವಿದ್ದಿರಲಿಲ್ಲವಾದ್ದರಿಂದ ಕುರ್ಚಿಯನ್ನು ಬಲವಾಗಿ ಎಳೆದು ಅಪ್ಪಳಿಸಿ ಅದರಲ್ಲ ಕುಕ್ಕರಿಸಿ ಎದುರು ಗೋಡೆಯನ್ನು ದಿಟ್ಟಿಸುತ್ತ ಕುಳಿತ.

ಒಳಗೆ ಸಿನಿಮಾದ ವಿಚಾರ, ಹೊರಗೆ ಎದುರಿನಲ್ಲಿ ಗೋಡೆ. ದಿಟ್ಟಿಸಿ-ದಿಟ್ಟಿಸಿದಂತೆ ರಾಮಣ್ಣನಿಗೆ ಅಂದು ಕುಮುದಳನ್ನು ಸಿನಿಮಾಕ್ಕೆ ಕರೆದುಕೊಂಡು ಹೋದ ಅನುಭವವೇ ಮರುಕಳಿಸಿತು. ಈಗಲೂ ಕುಮುದ ತನ್ನ ಎಡಬದಿಯ ಕುರ್ಚಿಯ ಮೇಲೆ ಕುಳಿತಿರುವಳೇನೊ ಎಂಬಂತೆ ತನು ಎಡಕ್ಕೆ ಮೈಯನ್ನು ಬಾಗಿಸಿ ಸರಿದು ಕುಳಿತ. ಆ ದಿನ ಸಿನಿಮಾದಲ್ಲಿ ಕುಳಿತಾಗ ಅವಳ ಮೈಯನ್ನು ಮುಟ್ಟಬೇಕೆಂಬಾನೆ, ಕೈಯನ್ನು ಕೈಯಲ್ಲಿ ತೆಗೆದುಕೊಳ್ಳಬೇಕೆಂಬಾನೆ, ಒಮ್ಮೊಮ್ಮೆ ಎಡಗೈಯಿಂದ ಅವಳನ್ನು ಸುತ್ತಿ ಬಿಗಿಯಬೇಕೆಂ-ಬಾನೆ. ಇದೆಲ್ಲದರಿಂದ ಮನಸ್ಸನ್ನು ಹಿಂಪಡೆಯಲು ಅವನು ಕುಮುದಳಿಗೆ ಕತೆಯನ್ನು ತಿಳಿಸಿಕೊಡುವುದರಲ್ಲಿ ಉತ್ಸಾಹಿತನಾದ. ಎಷ್ಟು ಮಾತಾಡಿದನು ಅಂದು! ಕುಮುದ ಮಾತ್ರ ಹುಂ ಕೂಡ ಎಂದಿರಲಿಲ್ಲ. ಆದರೆ ಒಂದೆರಡು ಸಲ ಕತ್ತಲಲ್ಲಿ ಮಾತನಾಡುವ ತನ್ನನ್ನು ನೋಡುತ್ತಿದ್ದಾಗ, ಪಟಪ್ರದರ್ಶನದ ಬೆಳಕಿನಲ್ಲಿ ಅವಳ ಎರಡು ಕಣ್ಣುಗಳು ಮಿಂಚಿದಾಗ, ಆ ಮುಖವನ್ನೆತ್ತಿ ಮುದ್ದಿಡಬೇಕೆಂದೆನ್ನಿಸಿತ್ತು. ತಟ್ಟನೆ ಉಗುಳ್ನುಂಗಿ ಮಾತನ್ನು ತಡೆದಿದ್ದ.

ಇದು ಯಾರ ತಪ್ಪು ? ತನ್ನದೊ ? ಸರಳೆಯದೊ ? ಇಷ್ಟು ಕಾಲಾವಧಿಯ ನಂತರ ರಾಮಣ್ಣನು ಈ ಪ್ರಶ್ನವನ್ನು ಕೇಳಿಕೊಳ್ಳುತ್ತಿದ್ದಾನೆ.

ಯಾರದೆ ತಪ್ಪಿರಲಿ, ಹಾಕಿಟ್ಟ ನಿಯಮದಂತೆ ಎನ್ನುವ ಹಾಗೆ ಘಟನೆ ನಡೆಯಿತಲ್ಲ ? ಕುಮುದಳಿಗೆ ಚಿತ್ರಪಟವನ್ನು ನೋಡುವ ಅಪರಿಚಿತ ಅನುಭವ ದಿಂದ ಉಲ್ಲಾಸ, ತನಗೆ ಕುಮುದಳನ್ನು ನೋಡಿ ಉಲ್ಲಾಸ. ಮರುದಿನ ತಾನು ಅದೇ ಉಲ್ಲಾಸವೃತ್ತಿಯಲ್ಲಿದ್ದಾಗ ಯಾವ ಮಾತು ತನ್ನ ಬಾಯಿ ಯಿಂದ ಹೊರಟಿತ್ತೊ ! ಆ ಮಾತಿಗಾಗಿ — ಎಂತಹ ಮೋಜು ! – ಆ ನೆನಪಿಗೆ ಬಾರದಂತಹ ಕ್ಷುಲ್ಲಕ ಮಾತಿಗಾಗಿ ಎಂದಿಗೂ ನೆನಪು ಮರೆಯ ದಂತಹ ಕತೆಗೆ ಪ್ರಾರಂಭವಾಯಿತು ! ಕುಮುದಳ – ಸಿಟ್ಟೊ ? ನಿಜವಾಗಿಯೆ ತಲೆಶೂಲಿಯೊ ?–ಅಸಮಾಧಾನವನ್ನು ಸಂತೈಸಲು ತಾನು ಅವಳ ಕೋಣೆಗೆ ಹೋದಾಗ ರಾಮಣ್ಣನಿಗೆ ಪೂರ್ತಿಯಾಗಿ ಭರವಸೆಯಾಯಿತು, ಕುಮುದಳು ತನಗೆ ಅಧೀನಳು ಎಂದು .... ಈಗಲೂ ಆ ಮೊದಲ ಅನುಭವ ನೆನಪಿದೆ .... ರಮಿಸುತ್ತ ಆಕೆಯನ್ನು ಕೈಹಿಡಿದು ಎಬ್ಬಿಸಬೇಕೆಂದು ತಾನು ಕೈಚಾಚಿ – ಆಕೆಯ ಕೈಯನ್ನು ಹಿಡಿಯಲು ಹೋದಾಗಿನ ಆ ಘಟನೆ ಈಗಲೂ ನೆನಪಿ ನಲ್ಲಿದೆ, ನೆನಪಿಗೆ ಬಂದರೆ – ತಾನೇನು ಸುಸಂಸ್ಕೃತ ಮನುಷ್ಯನೆ ? ಪಶುವೆ ? (ಆದರೆ ಪಶುವಿಗೆ ಇಂತಹ ಸ್ಮರಣೆ ಇರಬಹುದೆ ?) – ಈಗಲೂ ಆನಂದದಿಂದ ಮೈ ಜುಮ್ಮೆನ್ನುತ್ತಿದೆ. ಆಕೆಯು ತನ್ನ ಕೈಗಳನ್ನು ಎದೆಯ ಮೇಲಿಟ್ಟು ಕೊಂಡು ಮಲಗಿದ್ದಳು. ಕೈ ಹಿಡಿಯಲು ತಾನು ಕೈಚಾಚಿದಾಗ ಆಕೆಯ ಕೈಬೆರಳು ಮಾತ್ರ ತನ್ನ ಕೈಗೆ ತಾಗಿದರೂ ಜೊತೆಗೆ ಆಕೆಯ ಸ್ತನಭಾಗವನ್ನೂ ತನ್ನ ಕೈ ಮುಟ್ಟಿತ್ತು. ಒಂದೇ ಒಂದು ನಿಮಿಷ ಅವಾಕ್ಕಾಗಿದ್ದ, ಎಲ್ಲಿ ಆಕೆ ಹೆದರುವಳೊ ಇಲ್ಲವೆ ಕೂಗುವಳೊ ಎಂದು. ಆದರೆ ಅಷ್ಟರಲ್ಲಿ ಆಕೆ ತನ್ನ ಕೈ ಬೆರಳನ್ನು ಸರಿಸಿಕೊಂಡು ತನ್ನ ಕೈಗೆ ಪೂರ್ತಿ ಅವಕಾಶವನ್ನು ಮಾಡಿ ಕೊಟ್ಟಿದ್ದಳು. ಆಗ ರಾಮಣ್ಣನಿಗೆ ಪೂರ್ತಿಯಾಗಿ ಭರವಸೆಯಾಗಿತ್ತು, ಮೈ ಮರತಂತಾಗಿತ್ತು ; ಆದರೂ ಅತ್ಯಂತ ಪರಿಶ್ರಮದಿಂದ, ಬುದ್ಧಿಪೂರ್ವಕ ವಾಗಿ ತಡೆದುಕೊಂಡಿದ್ದ. "ಕುಮುದಳನ್ನು ಕರೆತರುವೆ" ಎಂದು ಸರಳೆಗೆ ಹೇಳಿ ಬಂದಿದ್ದಾನೆ, ಈಗ ಹೊತ್ತು ಕಳೆಯುವ ಹಾಗಿಲ್ಲ, ಆದರೆ ದೊರೆಯು ತ್ತಿದ್ದ ಅವಕಾಶವನ್ನು ದೂಡುವ ಹಾಗೂ ಇಲ್ಲ – ಎಂದುಕೊಂಡು ಒಂದು

ಮಾತನ್ನು ಹೇಳಿ ಆಕೆಯನ್ನು ಎಬ್ಬಿಸಿದ್ದ. ಎಂತಹ ಚಮತ್ಕೃತಿಯ ಮಾತದು! ನಿಜವಾದ ಸ್ಫೂರ್ತಿ ತನಗೆಂದಾದರೂ ಬಂದಿದ್ದರೆ ಆ ಮಾತನ್ನು ನುಡಿದಾಗ ಬಂದಿರಬೇಕು. "ಸರಲೆಗಾಗಿ ಊಟ ಮಾಡು, ನಾನು ಆಮೇಲೆ ಕ್ಷಮೆಯನ್ನು ಬೇಡುವೆ." ಸ್ಫೂರ್ತಿಯ ರಹಸ್ಯ ತಿಳಿದಂತಾಗಿತ್ತು – ಅಥವಾ ಸ್ಫೂರ್ತಿ ಎಂಬುದು ಬೇರೆ ಏನೂ ಅಲ್ಲ. ನೈಸರ್ಗಿಕವಾದ ಕಾಮತೃಪ್ತಿಗಾಗಿ ಮೈ ಮರೆಯುವ ಪ್ರಕೃತಿಗುಣದಿಂದಲ ಸ್ಫೂರ್ತಿ ಹುಟ್ಟುವುದೆ?

ಆಗ ಕೂಡ ಸ್ಫೂರ್ತಿಯ ವಿಚಾರ ಬಂದಿರಲು ಒಂದು ವಿಶೇಷ ಕಾರಣ ವಿದ್ದಿತು. ಆ ರಾತ್ರಿ ತಾನು ಕುಮುದಳನ್ನು ಕೂಡಿದ್ದು ಅನುಭವಿಕನಾದ ಅವನಿಗೂ ಒಂದು ಹೊಸಶಕ್ತಿಯನ್ನು ಕೊಟ್ಟಿತ್ತು. ಅಂದೇ ಒಂದು ಹೊಸ ಪುಸ್ತಕವನ್ನು ಬರೆಯಲು ಪ್ರಾರಂಭಿಸಿದ್ದ. ಆ ಪುಸ್ತಕವನ್ನು ತಾನು ಎಂದಿಗಿಂತಲೂ ಹೆಚ್ಚಾಗಿ ಮೈಮರೆತು ಬರೆಯುತ್ತಿದ್ದ. ರಾಮಣ್ಣನಿಗೆ ಆಶ್ಚರ್ಯವಾಗಿತ್ತು. ಒಂದು ದೃಷ್ಟಿಯಿಂದ, ಸಮಾಜವನ್ನು ಸುಗಮವಾಗಿ ಸಾಗಿಸುವುದಕ್ಕಾಗಿ ಕಟ್ಟಿಕೊಂಡ ನಿಯಮಗಳ – ಲೌಕಿಕದ – ದೃಷ್ಟಿಯಿಂದ ತಾನು ಮಾಡಿದ್ದು ಅಪರಾಧ, ಪಾಪ; ಆದರೂ ತನ್ನ ಮನಸ್ಸು ಉಲ್ಲಸಿತವಾಗಿದೆ, ತನ್ನ ಬುದ್ಧಿ ಚುರುಕಾಗಿದೆ, ತನ್ನ ದೇಹ ಬಲಗೊಂಡಂತಾಗಿದೆ! ಯಾಕೆ? ಕುಮುದಳಲ್ಲಿ ತನ್ನ ಪ್ರೀತಿ ಇರಬಹುದೆ?

ಈ ಪ್ರಶ್ನೆಕ್ಕೆ ಮರುದಿನ ಬೆಳಗಾದೊಡನೆ ಉತ್ತರ ದೊರೆಯಿತು ನಿಚ್ಚಳವಾದ ಉತ್ತರ, ಕುಮುದಳಲ್ಲಿ ತನ್ನ ಪ್ರೀತಿ ಇಲ್ಲ ಎಂದು. ಯಾಕೆಂದರೆ ಎದ್ದೊಡನೆ ರಾಮಣ್ಣ ಸರಲೆಯ ಕಡೆಗೆಯೆ ಧಾವಿಸಿದ್ದ, ತಾನು ಪ್ರಾರಂಭಿಸಿದ ಪುಸ್ತಕದ ಬಗ್ಗೆ ಉತ್ಸಾಹದಿಂದ ಅವಳಿಗೆ ಹೇಳ ತೊಡಗಿದ, ಅವಳ ಅಭಿಮಾನ ಪೂರಿತ ದೃಷ್ಟಿ ತನ್ನಲ್ಲಿ ನೆಟ್ಟಾಗ ಜಗತ್ತಿನಲ್ಲಿ ಸರಲೆ ಮತ್ತು ತಾನು ಇಬ್ಬರ ಹೊರತು ಬೇರೆ ಯಾರೂ ಇಲ್ಲ ಎಂಬಂತೆ ಮೈಮರೆತಿದ್ದ. ಇಷ್ಟೇಕೆ? ಇಡಿಯ ದಿನ ಸರಲೆಯ ಹತ್ತಿರ ಕುಳಿತ, "ಬರೆಯುವುದಿಲ್ಲವೆ?" ಎಂದು ಕೇಳಿದಾಗ "ರಾತ್ರಿ ಬರೆಯುವೆ" ಎಂದು ಆಕೆಗೆ ಉತ್ತರ ಕೊಟ್ಟಿದ್ದ; "ಆದರೆ ಲಕ್ಷ್ಯ ಇಲ್ಲದೆ ನನ್ನನ್ನ ನೋಡಿಕೋತ ಇಲ್ಲಿ ಯಾಕೆ ಕೂತಿರಿ?" ಎಂದು ಆಕೆ ಹಂಗಿಸಿದಾಗ "ಲಕ್ಷ್ಯ ಹೊರಗ ಇಲ್ಲ, ಒಳಗ ಅದ, ಯಾಕಂದ್ರ ನೀನೂ ಒಳಗ ಇದ್ದೀ" ಎಂದಿದ್ದ; ಅದಕ್ಕೆ ಆಕೆ "ಸುರುವಾಯ್ತು ಸವಿಮಾತು" ಎಂದು

ನಾಚಿ ನುಡಿದಾಗ, "ಸವಿಮಾತಲ್ಲ, ಸರಿ ಮಾತು. ಹುಚ್ಚೀ, ಒಳಗ ಸೀನಿಲ್ಲದೆ ಹೊರಗ ಪುಸ್ತಕಾನೇ ಬರೋದಿಲ್ಲ" ಎನ್ನುತ್ತ ತಟ್ಟನೆ ಅವಳ ಹಣೆಯನ್ನು ಚುಂಬಿಸಿದ್ದ. ಇವೆಲ್ಲದರಿಂದ ಸರಲೆಯಲ್ಲಿಯೆ ತನ್ನ ಪ್ರೀತಿ ದೃಢವಾಗಿದೆ ಎಂದು ತಿಳಿಯುವಷ್ಟರಲ್ಲಿ ಸಂಶಯ ಪಿಶಾಚಿಯು ಅವನ ಮೈಯಲ್ಲಿ ಹೊಕ್ಕಿತು ಸರಲೆಯಲ್ಲಿ ಪ್ರೀತಿ ಎಂಬುದಕ್ಕೆ ನಾನು ಹೀಗೆ ವರ್ತಿಸುತ್ತಿ-ರುವೆನೆ, ಇಲ್ಲವೆ ಸರಲೆಗೆ ಮಾಡಿದ ಅನ್ಯಾಯಕ್ಕಾಗಿ ನಷ್ಟಭರಣವನ್ನು ಕೊಡುತ್ತಿರುವೆನೆ? ದಿನಬೆಳಕು ಕಳೆದಂತೆ ಈ ಸಂಶಯಕ್ಕೆ ಪುಟ ದೊರ ಯಿತು. ಬೆಳಗಿನಿಂದ ಅದುವರೆಗೆ ಅವನು ಕುಮುದಳ ಕಣ್ಣನ್ನು ತಪ್ಪಿಸಿದ್ದರೂ ಹೊತ್ತು ಕಳೆದಂತೆ ಅವಳನ್ನು ನೋಡಬೇಕು ಎಂದೆನ್ನಿಸಿತ್ತು. ಆಗಾಗ ಬೇಕು-ಬೇಡ ಎಂಬ ಎರಡು ಹಗ್ಗಗಳಿಂದ ಬೇರೆ ಬೇರೆ ಕಡೆ ಎಳೆಯಲ್ಪಟ್ಟು ದರಿಂದ ಮೂರನೆಯ ದಾರಿಯನ್ನೆ ಮನಸ್ಸು ಹಿಡಿದಿದೆ ಏನೋ ಎನ್ನುವಂತೆ ಓರೆ ನೋಟದಿಂದ ಕುಮುದಳನ್ನು ನೋಡುತ್ತಿದ್ದ. ಕೊನೆಗೆ ರಾತ್ರಿಯೂಟ ವಾದ ಮೇಲೆ ಕೆಲಹೊತ್ತು ಸರಲೆಯೊಡನೆ ಮಾತನಾಡಿ ಆಮೇಲೆ "ಇನ್ನು ಮಾತ್ರ ಬರೀಲಿಕ್ಕೆ ಸುರುವು ಮಾಡ್ತೀನಿ" ಎಂದು ಲಗೆಬಗೆಯಿಂದ ಎದ್ದು, ಹೊರಬೀಳುವಾಗ ಬಾಗಿಲಿಗೆ ಮುಖ ತಿರುಗಿಸಿ ನಿಂತು "ನಾಳೆ ಹೇಳ್ತೀನಿ ನಿನಗ ಹ್ಯಾಂಗ ನಡೆದವ ಅನ್ನೋದು" ಎಂದು ಸರಲೆಗೆ ಬಾಯಿಯಿಂದ ಹೇಳು ವಾಗ ಕಣ್ಣಗಳು ಎದುರು ಒಳಬಾಗಿಲನ್ನು ನೋಡುತ್ತಿದ್ದುವು; ಆ ಬಾಗಿಲಿಗೆ ತುಸು ಮರೆಯಾಗಿ ನಿಂತ ಕುಮುದಳನ್ನು ನೋಡಿ ನಗೆಯಿಂದ "ನನ್ನ ಕೋಣೆಗೆ ಹೋಗ್ತೀನಿ" ಎಂದಿದ್ದ, ಕುಮುದಳಿಗೆ ಆ ಸಂದೇಶ ಎನ್ನುವ ದೃಷ್ಟಿಯಿಂದ.

ದೇಹ, ಬುದ್ಧಿ ಇವೆರಡರ ತಿಕ್ಕಾಟದಿಂದ ರಾಮಣ್ಣ ಕೆಲವು ದಿನಗಳ ವರೆಗೆ ಗಾಸಿಯಾಗಿದ್ದ. ದೇಹಕ್ಕೆ ಬೇಕೆನಿಸಿದ್ದು, ಬುದ್ಧಿಗೆ ಬೇಡೆನ್ನಿಸು ತ್ತಿತ್ತು; ಆದರೆ ಯಾವಾಗಲೂ ದೇಹದ ಬೇಡಿಕೆ ಸಂತೃಪ್ತವಾದ ತರುವಾಯ ದಲ್ಲಿಯೆ. ಎಷ್ಟೊ ಸಲ ಬುದ್ಧಿಯು ಬೇಡ ಎಂದು ವಾದಿಸಿದಷ್ಟೂ ದೇಹದ ಹಟ ಹೆಚ್ಚಾಗುತ್ತಿತ್ತು. ಆದರೂ ದೇಹ-ಬುದ್ಧಿಗಳು ಪರಸ್ಪರ ವಿರುದ್ಧವಾಗಿ ನಿಂತು ಹೋರಾಡುತ್ತಿವೆ ಎಂದೂ ಹೇಳುವಂತಿರಲಿಲ್ಲ. ಯಾಕೆಂದರೆ, ಪ್ರತಿ ಯೊಂದು ಸಲ ದೇಹವು ತೃಪ್ತಿವಡೆದು ತಣಿದಂತೆ ಬುದ್ಧಿ ಚುರುಕಾಗುತ್ತಿತ್ತು.

ಬರೆಯುವ ಅನುಭವವಿದ್ದ ರಾಮಣ್ಣನಿಗೆ ಇದರಿಂದ ಆಶ್ಚರ್ಯವೆನ್ನಿಸಿದಷ್ಟೆ ಹೆದರಿಕೆಯೂ ಎನ್ನಿಸಿತ್ತು. ಮಾನವನ ಸಂಸ್ಕೃತ ಬುದ್ಧಿಯ ಚಟುವಟಿಕೆಯ ಮೇಲೆ ಈ ರೀತಿ ದೇಹದ ಪ್ರಭಾವವಿರುವುದೆ ? ಈ ಮಾತು ನಿಜವಿದ್ದರೆ ನೈತಿಕ ಸಂಸ್ಕೃತಿ ಎಂಬುದು ಹುರುಳಿಲ್ಲದ ಆತ್ಮವಂಚನೆಯಾಗುವುದು. ಛೆ ! ಇದು ಸರಿಯಾದ ವಿಚಾರವಲ್ಲ. ಹಸಿವೆ ನೈಸರ್ಗಿಕ ವಾಸನೆ ಎಂದು ಮನುಷ್ಯನು ಸಿಕ್ಕಲ್ಲಿ, ಸಿಕ್ಕಂತೆ, ಸಿಕ್ಕುವುದನ್ನು ತಿನ್ನುವುದಿಲ್ಲವಲ್ಲ ? ಬರಗಾಲದ ಕಾಲಕ್ಕೆ ಮಾತ್ರ ಅಂತಹ ನಡತೆ ಅಲ್ಲಲ್ಲಿ ಘಟಿಸಿದ್ದು ತಿಳಿದು ಬರುವುದು. ಎಂದರೆ ? ಕಾಮವಾಸನೆಗೂ ಹಾಗೆಯೆ ಇದೆಯೆ ? ಹೆಂಡತಿಯು ಹಾಸಿಗೆ ಹಿಡಿದಿದ್ದು ತನ್ನ ಪಾಲಿಗೆ ಬರಗಾಲವಾಯಿತೆ ? ಅದಕಾಗಿಯೆ ತಾನು ಅಪವಾದವಂತೆ ನಡೆದುಕೊಂಡಿರಬಹುದೆ ? ಯಾಕಿರಬಾರದು ? ಪ್ರತಿಯೊಂದು ನೈಸರ್ಗಿಕ ವಾಸನೆಗೂ ನಕಾಲದಲ್ಲಿ ತೃಪ್ತಿ ಇಲ್ಲದಿದ್ದರೆ ಅದು ಮಾನವನನ್ನು ಹೀಗೆ ಹುಚ್ಚು ಹಿಡಿಸಿ ಕುಣಿಸಬಹುದ ?

ತನ್ನ ಜೀವನದಲ್ಲಿ ರಾಮಣ್ಣನು ಈ ದಿಶೆಯಲ್ಲಿ ವಿಚಾರಮಾಡಿದ್ದು ಅದೇ ಮೊದಲು ನಲ, ಅದೇ ಕೊನೆಯ ನಲ ಎಂದೂ ಹೇಳಬಹುದು. ಈಗಲೂ ಕುಮುದ ಮನೆಯಲ್ಲಿಯೆ ಇದ್ದಾಳೆ, ಸರಲೆಯ ತೊಡಕು ಕೂಡ ಇಲ್ಲ. ಆದರೆ ತನ್ನ ಮನಸ್ಸು ಕುಮುದಳನ್ನು ಬಯಸಲು ಸಿದ್ಧವಿಲ್ಲ. ಇಂದು ಸಿನಿಮಾಕ್ಕೆ ಹೋಗಬೇಕೆಂದು ಆಕೆಯ ಮನಸ್ಸಿನಲ್ಲಿ ತೀವ್ರವಾಗಿ ಇದ್ದಿತೇನೋ ! ಹೋಗಲಿಲ್ಲ, ಒಳಿತೆ ಆಯಿತು. ಹೋಗಿದ್ದರೆ, ಆಗಿದ್ದ ಹಿಂದಿನ ಅಂತಹದೆ ನೆನಪು ಮರುಕಳಿಸಿದ್ದರೆ, ತಾನು ಅಲ್ಲಿಂದೆದ್ದು ಓಡಿ-ಹೋಗುತ್ತಿದ್ದ ಎಂದೆನ್ನಿಸಿತು ಅವನಿಗೆ! ಕುರ್ಚಿಯಿಂದ ಈಗಲೂ ಎದ್ದ. ಮತ್ತೆ ಅಡ್ಡಾಡತೊಡಗಿದ, ಭಾವಪಟಕ್ಕೆ ಇದಿರಾಗಿ ನಿಂತ, ಯಾವುದೋ ಒಂದು ವಿಚಾರದಿಂದ ತಲೆಯನ್ನಲ್ಲಾಡಿಸಿದ, ತಿರುಗಿ ಬಂದು ಕುರ್ಚಿಯಲ್ಲಿ ಕುಳಿತು ಏನನ್ನೊ ಪಟಿಸುಟ್ಟಿದ.

ಏನು ತಾನು ಪಟಿಸುಟ್ಟುತ್ತಿರುವುದು ?— ರಾಮಣ್ಣ ತನ್ನನ್ನೇ ನಗೆ-ದನಿಯಲ್ಲಿ ಕೇಳಿಕೊಂಡ. ಆ ವಾಕ್ಯ ಯಾಕೆ ತನ್ನ ಸ್ಮರಣೆಗೆ ಬಂದಿತೊ ! ಓಹೋ ! “ ಕಾಮ ” ಎಂಬ ಶಬ್ದ ಮನಸ್ಸಿನಲ್ಲಿ ನುಳಿದಾಡುತ್ತಿರು-ವುದರಿಂದ ಹೀಗಾಗಿರಬಹುದು....ಅದೇ ವಾಕ್ಯವನ್ನು ಈಗ ಗಟ್ಟಿಯಾಗಿ

ಉಚ್ಚರಿಸಿದ : ಸೋಽಕಾಮಯತ । ಬಹು ಸ್ಯಾಂ, ಪ್ರಜಾಯೇಯ ಇತಿ.... ಬರೆದವನು ಹೆಸರಿಗೆ ಋಷಿಯಾದರೂ ಬುದ್ಧಿ ಎಂತಹ ಕಿಡಿಗೇಡಿಯಾಗಿದೆ ! ಆದರೂ ಉಪನಿಷತ್ಕಾಲದ ಈ ಮುದಿಮಹರ್ಷಿ ಹೇಳಿದ ಈ ಮಾತಿನಲ್ಲಿ ಎಂತಹ ಸತ್ಯಾರ್ಥ ಗರ್ಭಿತವಾಗಿದೆ ! ಜಗತ್ತು ಹೇಗೆ ಹುಟ್ಟಿತು ಎಂಬುದನ್ನು ಎಲ್ಲವನ್ನೂ ಬಲ್ಲವನಂತೆ ಎಲ್ಲರಿಗೂ ಗೊತ್ತಿದ್ದುದನ್ನೇ ಹೇಳಿದ ಈ ಗಡ್ಡದ ಗಾಂಭೀರ್ಯ ಕಿಡಿಗೇಡಿತನವಲ್ಲದೆ ಮತ್ತೇನು ? ಮೊದಲು "ಅದು" ಇದ್ದಿತಂತೆ—ಅಲ್ಲ—"ಸಃ" ಎಂದರೆ "ಅವನು" ಇದ್ದನಂತೆ; ಅವನು "ಕಾಮಿ"ಸಿದನಂತೆ, ನಾನು ಅನೇಕ ಆಗುವೆ, ಹುಟ್ಟಿಸುವೆ, ಎಂದು ; ಸೃಷ್ಟಿ ಆಯಿತಂತೆ ! ಎಷ್ಟು ಸುಗಮವಾಗಿದೆ ಜಗತ್ತಿನ ಮೂಲ ! ಆದರೂ ಇದರಲ್ಲಿ ಹೊಸ ಮಾತು ಯಾವುದು ? ಜಗತ್ತಿನಲ್ಲಿ ಸೃಷ್ಟಿಸುವ ಶಕ್ತಿ, ಕಾಮ ಇದೆಯಂತೆ ; "ಕಾಮವಾಸನೆ" ಎಂಬ ಶಬ್ದವನ್ನು ಬಳಸಿದರೆ ಅದೇ ಮಾತು ಅಸಹ್ಯವೆನ್ನಿಸುವುದು. ಆದರೂ ಉಪನಿಷತ್ತಿನಲ್ಲಿ ಹೇಳಿದ ಕಾಮ ಮತ್ತು ಈ ಕಾಮವಾಸನೆ ಇವೆರಡೂ ಸೃಷ್ಟಿಸುವ ಒಂದೇ ಶಕ್ತಿಯಲ್ಲವೆ ? ಇದು ಮೂಲಶಕ್ತಿ ಎಂದು ಹೇಳಿ ಮಹರ್ಷಿ ಮುತ್ತಾತನು ಉಪಕಾರವನ್ನೇ ಮಾಡಿದ್ದಾನೆ. ಆಯಿತು – ಇಂದಿನವರೆಗಿನ ತನ್ನ ನಡತೆಗೆ ಉಪನಿಷತ್ತಿನ ಸರ್ಟಿಫಿಕೇಟು ಸಿಕ್ಕಂತಾಯಿತು.

ರಾಮಣ್ಣ ಕುರ್ಚಿಯಿಂದೆದ್ದ, ಮತ್ತೆ ಗಡಿಯಾರವನ್ನು ನೋಡಿಕೊಂಡ. ಹನ್ನೊಂದು ಗಂಟೆಯಾಗಿದೆ ! ಎಂತಹ ಹುಚ್ಚು ತಾನು ! ಇಷ್ಟೊತ್ತಿನ-ವರೆಗೆ ನಿರರ್ಥಕವಾಗಿ ತಲೆಯನ್ನು ಕೆಡಿಸಿಕೊಂಡಿದ್ದಾನೆ ! ತಾನು ಸರಲೆ-ಯನ್ನು ಪ್ರೀತಿಸುವನೋ ? ಕುಮುದಳನ್ನೊ ? ಯಾರಿಗೆ ಬೇಕಾಗಿದೆ ಉತ್ತರ ? ಅದರ ಅಗತ್ಯವಾದರೂ ಏನಿದೆ ? ಸರಲೆ ತೀರಿಕೊಂಡು ಮೂರು ತಿಂಗಳಾದವು, ಕುಮುದಳ ಬಗ್ಗೆ ತನಗೆ ಆಸ್ಥೆಯೆ ಇಲ್ಲ. ಇದನ್ನರಿತೂ ವಿಚಾರವನ್ನು ಮಾಡುವುದೆಂದರೇನು ? ನಿದ್ದೆ ಬರುವವರೆಗೆ ಒಂದು ಸಂಸ್ಕೃತ ಪುಸ್ತಕವನ್ನಾದರೂ ಓದೋಣ, ಉಪನಿಷತ್ತಿನ ವಾಕ್ಯ ನೆನಪಾಗಿ ಉಪಕಾರವೆ ಆಯಿತು. ಎಂದು ಮೇಜಿನ ಬದಿಗಿದ್ದ ಶೆಲ್ಫಿನಿಂದ ಪುಸ್ತಕವೊಂದನ್ನು ಆಯ್ದು ಕೊಳ್ಳುವುದರಲ್ಲಿ ತೊಡಗಿದ.

## ೧೦

ಮಲಗುವ ಸಿದ್ಧತೆಯಲ್ಲಿ ಹಾಸಿಗೆಯ ಮೇಲಿನ ಹೊದಿಕೆಯನ್ನು ತೆಗೆಯಬೇಕೆಂದು ಕೈಎತ್ತಿದಾಗ ಕೈಗೆ ಕಟ್ಟಿದ ಗಡಿಯಾರದ ಮುಳ್ಳುಗಳು ಕುಮುದಳ ಕಣ್ಣಿನ ಮುಂದೆ ಮಿಂಚಿದುವು; ಹನ್ನೊಂದು ಗಂಟೆಯಾಗಿದೆ! ರಾತ್ರಿಯ ಈ ಸಮಯ ಲಕ್ಷ್ಯಕ್ಕೆ ಬಂದೊಡನೆ ಕುಮುದಳು ಎಲ್ಲವನ್ನೂ ಮರೆತು ಚಿತ್ರದ ಗೊಂಬೆಯಂತೆ ನಿಂತುಬಿಟ್ಟಳು. ಇದೇ ಸಮಯ; ತಾನು ಎಂದಿಗೂ ಮರೆಯಲಾರದ ಸಮಯ. ಕುಮುದ ಉಸುರ್ಗರೆದು ಇದ್ದಕ್ಕಿದ್ದ-ಹಾಗೆ ಹಾಸಿಗೆಯ ಮೇಲೆ ಕುಳಿತಳು. ತಾನು ನರಲಕ್ಕನ ವಿಷಯದಲ್ಲಿ ಪಾಪಬುದ್ಧಿಯಿಂದ ಪ್ರೇರಿತಳಾದವಳಲ್ಲ ಎಂದು ಒಂದು ನಿಮಿಷ ಮುಂಚಿತ ನಿರ್ಣಯಿಸಿದ್ದಳು. ಆ ನಿರ್ಣಯ ಈಗ ಕುಸಿದು ಬಿದ್ದಿತು. ರಾತ್ರಿಯ ಹನ್ನೊಂದು ಗಂಟೆಯ ಸಮಯವಾಗಿದೆ ಎಂಬುದು ಲಕ್ಷ್ಯಕ್ಕೆ ಬಂದಾಗ ಹಿಂದಿನ ಚಿತ್ರವೊಂದು ಠರಾತ್ತಾಗಿ ಬಂದು ಕಣ್ಣುಮುಂದೆ ನಿಂತಿತು, ಅವಳ ಮನಸ್ಸಿನಲ್ಲಿ ತನ್ನ ಶುದ್ಧ ಅಂತಃಕರಣದ ಬಗ್ಗೆ ಇದ್ದ ಆತ್ಮ-ವಿಶ್ವಾಸವನ್ನು ಬದಿಗೆ ಸರಿಸಿತು. ರಾತ್ರಿಯ ಹನ್ನೊಂದು ಗಂಟೆ. ಆದಿನವೂ ಇದೇ ಸಮಯವಾಗಿತ್ತು; ಎರಡು ಮೂರು ದಿನಗಳಾಗಿದ್ದವು ತಾನು ರಾಮಣ್ಣನ ತೋಳನೆರೆಯಾಳಾಗಿ - ಮೊದಲು ತಾನು ಹೆದರಿದ್ದಳು, ಪ್ರಾರಂಭದ ನೆನಪು ಆ ಹೆದರಿಕೆಗೆ ಪುಟವನ್ನು ಕೊಟ್ಟಿತ್ತು, ಮರುದಿನ ಬೆಳಗಿನಲ್ಲಿ ಎದ್ದೊಡನೆ ತೊಡೆಗಳು ಥರಥರ ನಡುಗಿದ್ದವು. ನರಲಕ್ಕನನ್ನು ಎದುರಿಸುವುದು ಹೇಗೆ—ಎಂದೂ ಅಧೈರ್ಯ ಉಂಟಾಗಿತ್ತು. ರಾಮಣ್ಣನು ಈಗ ತನ್ನನ್ನು ಮಾತನಾಡಿಸಬಹುದೆ? ಕತ್ತಲಲ್ಲಿ ಕರುಣಾಳುವಾಗಿ ಕಂಡ ಅವನ ಮುಖ, ನಗೆಯಿಂದ ಮಿಂಚುತ್ತಿದ್ದ ಅವನ ಕಣ್ಣುಗಳು ಬೆಳಗಿನಲ್ಲಿ ಬೇರೆಯಾಗಿ ಕಾಣುವವೆ? ಅವನನ್ನು ತಾನು ಎದುರಿಸುವುದು ಶಕ್ಯವೆ? ಎಂದು ಏನೋ ಯೋಚಿಸುತ್ತ ದಿನನಿತ್ಯದ ಕೆಲಸದಲ್ಲಿ ತೊಡಗಿದ್ದಳು. ಆದರೆ ನರಲಕ್ಕನೂ ರಾಮಣ್ಣನೂ ಎಂದಿನಂತೆಯೆ ಕಂಡರೆಂಬುದು ಆಕೆಗೆ ಆಶ್ಚರ್ಯವನ್ನುಂಟುಮಾಡಿದ್ದಿತು. ಎರಡನೆಯ ರಾತ್ರಿ ರಾಮಣ್ಣ ಮತ್ತೆ ಬಂದಿದ್ದ, ಆಗಲೂ ಅವನೊಡನೆ ಮಾತನಾಡುವ ಧೈರ್ಯ-

ವಾಗಿರಲಿಲ್ಲ; ಮೂರನೆಯ ರಾತ್ರಿ ಮಾತ್ರ — ಎಲ್ಲಿಂದ ಧೈರ್ಯ ಬಂದಿತೊ ತನಗೆ! – ರಾಮಣ್ಣನ ಬರವನ್ನು ನಿರೀಕ್ಷಿಸುತ್ತಲೆ ಕುಳಿತಿದ್ದಳು. ರಾಮಣ್ಣ ಬಂದವನೆ "ಸ್ಫೂರ್ತಿದೇವಿಯ ಕೃಪಾದೃಷ್ಟಿ ತೆಗೆದು ನಿಂತಿದೆಯಲ್ಲ?" ಎಂದಿದ್ದ.

ಮಾತನಾಡಲು ಮನಸ್ಸಾದರೂ ಧೈರ್ಯ ಸಾಲದೆ ತಾನು ತಲೆಯನ್ನಲ್ಲಾಡಿಸಿದಳು.

"ಇದೇನು? ಓಹೋ! ತೆರೆದಿಟ್ಟ ನಿನ್ನ ಕಣ್ಗಳು ನಿನಗೇ ಕಾಣಿ–ಸುವುದಿಲ್ಲ, ಅಲ್ಲವೆ?" ಎಂದಿದ್ದ.

ಈ ಸಲ ಬಂದ ನಗೆಯನ್ನು ತಡೆಯುತ್ತ ತಲೆಯನ್ನಲ್ಲಾಡಿಸಿದ್ದಳು.

ರಾಮಣ್ಣ ಬಂದವನೆ ತನ್ನ ತಲೆಯನ್ನು ಗಟ್ಟಿಯಾಗಿ ಹಿಡಿದು, "ತಲೆ ಅಲ್ಲಾಡಿಸಲಿಕ್ಕೆ ಅಶಕ್ಯ ಆದ ಮ್ಯಾಲಾದರೂ ಬಾಯಿಯನ್ನ ತೆರೆದೀಯೊ ಇಲ್ಲೊ? ಉಂ?"ಎಂದು ಮುಖಕ್ಕೆ ಮುಖ ಹತ್ತಿರದಲ್ಲಿರಿಸಿ ಕೇಳಿದ್ದ.

"ನಿಂಮುಂದ ಮಾತಾಡೋ ಯೋಗ್ಯತಾ ನನಗ—"ಇದೇ ಅವಳ ಮೊದಲ ಮಾತು. ಅದೂ ವಾಕ್ಯ ಮುಗಿದಿರಲಿಲ್ಲ.

"ಬಾಯಿಂದ ನುಡಿದರೇನೇ ಮಾತಾಡಿಧಾಂಗ ಅಂತ ತಿಳಿದೀ ಏನು ನೀನು?

"ಅಂದ್ರೆ?"

"ಅಂದ್ರೇನು? ಈ ನಾಲ್ಕು ದಿವಸದೊಳಗ ನನಕಿಂತ ನೀನೇ ಹೆಚ್ಚು ಮಾತಾಡಿದಿ!"ಎಂದಿದ್ದ ರಾಮಣ್ಣ.

"ನನಗ ತಿಳಿಯೋದೇ ಇಲ್ಲ."

"ಅಬ್ಬ ತಿಳಿಯೋದಿಲ್ಲ ಅಂದಾಗ ಇಷ್ಟು ಮಾತಾಡಿದವಳು ತಿಳಿದ–ಮ್ಯಾಲೆ ಎಷ್ಟು ಮಾತಾಡಬಹುದು!"

ಕುಮುದಳಿಗೆ ಹೆದರಿಕೆಯಾಗಿತ್ತು, ತಾನೇನಾದರೂ ಕನಸಿನಲ್ಲಿ ಬಡಬಡಿಸಿರಬಹುದೆ – ಎಂದು;

"ಕನಸಿನಲ್ಲಿ ನಾನು ಏನಾದರೂ—"ಎಂದು ತಾನು ನುಡಿವಷ್ಟರಲ್ಲಿ ರಾಮಣ್ಣ ನಕ್ಕುಬಿಟ್ಟಿದ್ದ.

"ಹುಚ್ಚಿ! ಕನಸಿನಲ್ಲಿ–ಅಂತೆ! ಒಂದು ದೃಷ್ಟಿಯಿಂದ ಅದು ನನಗೆ

ಕನಸು ಎನ್ನಿಸಬೇಕು. ನೀನು ಮಾತ್ರ ಎಚ್ಚರವಾಗಿಯೆ ಇದ್ದಿ. ಇಷ್ಟ್ಯಾಕೆ ಹೆದರಿ ನೋಡುವೆ ನನ್ನ? ಅದಕ್ಕೇ ಹೇಳಲಿಲ್ಲವೇನು, ಬಾಯಿಯಿಂದ ನುಡಿದರೇನೆ ಮಾತಾಡಿಧಾಂಗ ಅಲ್ಲ ಅಂತ. ನೀನು ಇಟ್ಟ ಒಂದೊಂದು ಹೆಜ್ಜೆ ಮಾತಾಡುತಿತ್ತು, ನೀನು ಬೀರಿದ ಒಂದೊಂದು ನೋಟ ಮಾತಾಡ ತಿತ್ತು, ನಿನ್ನ ಅರೆದೆರೆದ ತುಟಿಗಳೇ ಮಾತಾಡುತ್ತಿದ್ದುವು, ಇಷ್ಟು ಯಾಕೆ? ನಿನ್ನ ಮೌನ ಕೂಡ ವಾಚಾಳಿಯಾಗಿತ್ತು. ಅವುಗಳೆಲ್ಲದರ ಮಾತನ್ನು ಕೇಳಿಯೆ ಅಲ್ಲವೆ ನಾನು ಹೀಗೆ ಹುಚ್ಚನಾದದ್ದು? ಆಂ? ಹೇಳೆ! ಈಗ ಮಾತಾಡು – ಬಾಯಿಯಿಂದಲ್ಲ ಮತ್ತೆ" ಎನ್ನುತ್ತ ತನ್ನ ಬಾಯಿಯಿಂದ ಕುಮುದಳ ಬಾಯಿಗೆ ಸ್ನೇಹರಸದ ಬೀಗವನ್ನು ಹಾಕಿದ್ದ. ಆ ರಾತ್ರಿ ಕತ್ತಲಲ್ಲಿ ತಾವಿಬ್ಬರೆ ಮಲಗಿದಾಗ ಮೆತ್ತನ್ನ ದನಿಯಲ್ಲಿ ರಾಮಣ್ಣ ಎಂತಹ ಏಕಾಂತದ ಮಾತುಗಳನ್ನು ಹೇಳಿದ್ದ! "ನೀನು ನನ್ನ ಸ್ಫೂರ್ತಿದೇವಿ. ಸುಳ್ಳಲ್ಲ, ಬೇಕಾದರೆ ನನ್ನ ಕೋಣೆಗೆ ಬಂದು ನೋಡು, ನಿನ್ನ ಸಹವಾಸದಿಂದ ಪ್ರೇರಿತನಾಗಿ ನಾನು ಹೊಸ ಪುಸ್ತಕವನ್ನು ಪ್ರಾರಂಭಿಸಿದ್ದೇನೆ....ಆಂ ?.... ಹುಚ್ಚಿ ನೀನು! ಒಂದು ರಾತ್ರಿ ನಿನ್ನನ್ನು ಕಾಣದಿದ್ದರೆ ನನ್ನ ಲೇಖನಿ ಕುಂಠಿತ ವಾಗುವುದು... ನಿನ್ನಿಂದ ಹೊಸ ಚೈತನ್ಯ ಬಂದಿದೆ ನನ್ನಲ್ಲಿ....ನನ್ನ ಸಾಹಿತ್ಯ ಜೀವನದ ಉಸಿರು ನೀನು...." ಎಂದು ಏನೇನೊ ನುಡಿದಿದ್ದ. ಆ ಮಾತಿ ನಿಂದ ತಾನೂ ಮೈಮರೆತಿದ್ದಳು. ಅಂದು ತಾನಾಗಿಯೆ ರಾಮಣ್ಣನನ್ನು ಬಿಗಿದಪ್ಪಿದ್ದಳು, ತನ್ನನ್ನು ಬಿಟ್ಟು ಹೋಗಬಹುದು ಎಂಬ ಭೀತಿ ಇದ್ದಿತೇನೊ ಎನ್ನುವಂತೆ. ಇದೆಲ್ಲ ಹೀಗೆ ನಡೆದದ್ದರಿಂದಲೆ ಮರುದಿನ ಆಕೆಗೆ ಆಶ್ಚರ್ಯ ವಾಗಿತ್ತು. ರಾಮಣ್ಣನು ಇನ್ನೂ ಬಂದಿರಲಿಲ್ಲ, ಕೈ ಗಡಿಯಾರವನ್ನು ನೋಡಿದ್ದಳು, ಸರಿಯಾಗಿ ರಾತ್ರಿಯ ಹನ್ನೊಂದು ಗಂಟೆಯಾಗಿತ್ತು! ಇಷ್ಟು ತಡ! ದಿನಾಲು ಇದಕ್ಕೂ ಮುಂಚಿತ ಬರಬೇಕಾಗಿದ್ದ ರಾಮಣ್ಣ ಇನ್ನೂ ಬರಲಿಲ್ಲವಲ್ಲ! ನಿರೀಕ್ಷಣೆಯೂ ಅಸಹ್ಯವಾಯಿತು. ಒಂದು ನಿಮಿಷ ಉಸಿರನ್ನೂ ತಡೆದವಳಂತೆ ಸ್ತಬ್ಧಳಾಗಿ ಲಕ್ಷ್ಯಗೊಟ್ಟು ಕೇಳಿದ್ದಳು. ಎಲ್ಲಿಂದಲೊ ಗುಜುಗುಜು ಮಾತನಾಡಿದಂತೆ ಸದ್ದು ಕೇಳಬರುತ್ತಿದೆ! ಇಷ್ಟೊತ್ತಿನಲ್ಲಿ ಯಾರು ಮಾತನಾಡುವವರು? ಸರಲಕ್ಕನಂತೂ ಒಂಬತ್ತು ಗಂಟೆಗೆ ಮಲಗುವವಳು. ಹಾಂ – ರಾಮಣ್ಣನೆ ಏನನ್ನೊ ಓದುತ್ತ ಕುಳಿ

ತಿರಬೇಕು! ಆ ಭರದಲ್ಲಿ ತನ್ನಡೆ ಬರುವುದನ್ನು ಮರೆತಿರಬೇಕು! ಆಗ ಕುಮುದ ಕಿಡಿಗೇಡಿತನವನ್ನು ಮಾಡಲಿದ್ದ ಹುಡುಗನಂತೆ ಮುಗುಳ್ನಗೆಯನ್ನು ನಕ್ಕಿದ್ದಳು. ಇಷ್ಟೊಂದು ಎಲ್ಲವನ್ನೂ – ತನ್ನನ್ನೂ – ಮರೆತು ರಾಮಣ್ಣನು ಓದುತ್ತಿರುವನಲ್ಲವೆ? ಮೆಲ್ಲಗೆ ನಡೆದು ಹೋಗಬೇಕು. "ನನಗೆ ಸ್ಫೂರ್ತಿದೇವಿ ಎಂದು ಕೊಟ್ಟ ಸರ್ಟಿಫಿಕೇಟನ್ನು ನೋಡಲು ಬಂದಿದ್ದೇನೆ. ನೀವೇ ಹೇಳಿದ್ದಿಲ್ಲವೆ ಕೋಣೆಗೆ ಬಂದು ನೋಡು ಎಂದು" – ಎಂದು ಹೇಳಿದರಾಯಿತು. ತನ್ನನ್ನು ನೋಡಿ ರಾಮಣ್ಣನು ಬೆಚ್ಚಿ ಬೀಳಬಹುದಾದ ಚಿತ್ರವನ್ನು ಕಲ್ಪಿಸಿಕೊಂಡು ಕುಮುದ ಒಳಗಿಂದೊಳಗೆಯೆ ನಕ್ಕಿದ್ದಳು. ಮೆಲ್ಲನೆ ಹಾಸಿಗೆಯಿಂದೆದ್ದು, ಸದ್ದು ಮಾಡದೆ ರಾಮಣ್ಣನ ಕೋಣೆಯ ಬಾಗಿಲಿಗೆ ಬಂದಳು, ಸಿಡಿಲು ಬಡೆದವಳಂತೆ ಅವಾಕ್ಕಾಗಿ ನಿಂತಳು. ಕೋಣೆಯ ಬಾಗಿಲು ಮುಚ್ಚಿತ್ತು, ಒಳಗೆ ದೀಪವೂ ಇದ್ದಿರಲಿಲ್ಲ. ಇದರಿಂದ ಎಷ್ಟು ನಿರಾಶೆಯಾಗಿತ್ತೊ ಅದರ ಎರಡರಷ್ಟು ಅನಹನೆಯ ಕೋಪ ಬಂದಿತ್ತು ಆಕೆಗೆ ಇನ್ನೊಂದನ್ನು ನೋಡಿ. ಅದೇಂದರೆ, ಗುಜುಗುಜು ಮಾತಾಡುವ ಸದ್ದು ಸರಲಕ್ಕನ ಕೋಣೆಯಿಂದ ಕೇಳಬರುತ್ತಿದೆ, ಆ ಬಾಗಿಲೂ ಅರ್ಧ ತೆರೆದಿದೆ, ಒಳಗೆ ದೀಪ ಢಾಳವಾಗಿ ಉರಿಯುತ್ತಿದೆ! ಅದನ್ನು ನೋಡಿ ಅಂದು ತನಗೆ ಕೋಪ ಬಂದದ್ದು ನಿಜ. ಬಿರಬಿರನೆ ಕೋಣೆಗೆ ಹೋಗಿ, ಬಾಗಿಲಿಗೆ ಒಳಕೊಂಡಿಯನ್ನು ಹಾಕಿ ದೀಪವನ್ನು ಆರಿಸಿ ಸತ್ತಂತೆ ಮಲಗಿಕೊಂಡು ಬಿಡಬೇಕು ಎಂದೆನಿಸಿತ್ತು. ಮರುಗಳಿಗೆಯಲ್ಲಿ ಯಾವುದೊ ಒಂದು ತಡೆಯದ ಕುತೂಹಲವು ಅವಳನ್ನು ಸರಲಕ್ಕನ ಕೋಣೆಯ ಬಾಗಿಲವರೆಗೆ ಎಳೆದೊಯ್ದಿತ್ತು. "ರಾಮಣ್ಣ ಸರಲಕ್ಕನೊಡನೆ ಮಾತನಾಡುತ್ತ ತನ್ನನ್ನು ಮರೆತಿದ್ದಾನೆ" ಎಂದು ಒಮ್ಮೆ, "ರಾಮಣ್ಣ ತನ್ನ ಹೆಂಡತಿಯೊಡನೆ ಮಾತನಾಡುತ್ತಿದ್ದಾನೆ" ಎಂದು ಇನ್ನೊಮ್ಮೆ ತನಗೆ ತಾನೇ ಹೇಳಿಕೊಳ್ಳುತ್ತ ಕುಮುದ ಅನುಮಾನಿಸುತ್ತ ಬಾಗಿಲಿಗೆ ನಿಂತಾಗ "ಅಷ್ಟಾದರೆ ನಾ ಸುಖದಿಂದ ಕಣ್ಮುಚ್ಚೇನಿ" ಎಂಬ ಸರಲಕ್ಕನ ಮಾತು ಕೇಳಬಂದಿತ್ತು. ಕುಮುದ ಮೊದಲು ಗಾಬರಿಯಾಗಿದ್ದಳು; ಇದೇನು ಅಕ್ಕನ ಕೊನೆಯ ಗಳಿಗೆಯೆ ಎಂಬ ಹೆದರಿಕೆಯಿಂದ ಕೋಣೆಯಲ್ಲಿಯೆ ನುಗ್ಗಿಬಿಡುವವಳಿದ್ದಳು. ಅಷ್ಟರಲ್ಲಿ ರಾಮಣ್ಣನ ಮಾತು ಕೇಳಿಸಿತ್ತು, "ಈಗ ಇದ್ದುದರ ಮುಂದೆ ನನಗ ಬೇರೆ ಯಾವ ಸುಖಾನೂ

ಇಲ್ಲ" ಎಂದು. ಈಗ ಮಾತ್ರ ಕುಮುದಳಿಗೆ ತಡೆಯಲು ಅಶಕ್ಯವಾಗಿತ್ತು. ಮೆಲ್ಲನೆ ಹಣಿಕಿಕ್ಕಿ ನೋಡಿದ್ದಳು, ಒಂದು ನಿಮಿಷ ಮಾತ್ರ. ಆ ನಿಮಿಷದಲ್ಲಿ ಆಕೆಗೆ ಕಾಣಿಸಿದ ದೃಶ್ಯ ಅವಳನ್ನು ಅಲ್ಲಿಂದ ಬಲವಾದ ಬಿರುಗಾಳಿಯಂತೆ ಎತ್ತಿ ತನ್ನ ಕೋಣೆಯಲ್ಲಿ ಹಾಸಿಗೆಯ ಮೇಲೆ ಒಯ್ದೊಗೆದಿತ್ತು....

ಕುಮುದ ಮತ್ತೆ ಕೈಗಡಿಯಾರವನ್ನು ನೋಡಿಕೊಂಡು ಉಸುರ್ಗರೆದು ಎದ್ದಳು. ಇನ್ನು ಗಟ್ಟಿ ಮನಸ್ಸುಮಾಡಿ ಮಲಗಿದ್ದರೆ ಆ ಹಿಂದಿನ ನೆನಪು ತನ್ನನ್ನು ಪೀಡಿಸದೆ ಬಿಡುವಂತಿಲ್ಲ ಎಂಬುದು ಆಕೆಗೆ ತಿಳಿದಿತ್ತು. ಆ ನೆನಪು ಎಂದರೆ ನಿಜವಾಗಿಯು ಪೀಡೆಯಾಗಿತ್ತು, ಅದರಲ್ಲೂ ಸರಲಕ್ಕ ತೀರಿಕೊಂಡಂದಿನಿಂದ ಅದೊಂದು ಭಯಾನಕ ಅನುಭವನ್ನೆನ್ನಿಸುತ್ತಿತ್ತು. ಆ ದಿನ ತಾನು ಎಂತಹ ಅನ್ಯಾಯವನ್ನು ಮಾಡಿದ್ದಳಲ್ಲ ? ತನಗೆ ಒಂದು ನಿಮಿಷದಲ್ಲಿ ಕಂಡ ದೃಶ್ಯ ಯಾವುದು ? ಅದೂ ಹೋಗಲಿ, ಅಂತಹ ಕುತ್ಸಿತ ಕುತೂಹಲವಾದರೂ ಯಾಕೆ ಬೇಕಿತ್ತು ? ಪಾಪ ! ತಿಂಗಳುಗಟ್ಟಲೆಯಾಗಿ ಹಾಸಿಗೆ ಹಿಡಿದ ಸರಲಕ್ಕ; ಆಕೆಯ ಮನಸ್ತಾಪ ಎಷ್ಟಿರಬಹುದು ! ಅಂತಹ ಒಂದು ಸಂದರ್ಭದಲ್ಲಿ ಗಂಡ ಆಕೆಯನ್ನು ಸಂತೈಸಿದರೆ ತಪ್ಪೇನು ? ಅದು ತಪ್ಪು ಎನ್ನಲು ಇನ್ನೊಬ್ಬರಿಗೆ ಅಧಿಕಾರವಿದೆಯೆ ? ಇಷ್ಟಾದರೂ ತಾನು ಕಂಡದ್ದೇನು ? ಗಂಡನ ತೊಡೆಯ ಮೇಲೆ ತಲೆಯನ್ನಿಟ್ಟು ಪ್ರೇಮರಸದಿಂದ ಮಿಂಚುವ ಕಣ್ಗಳ ಮುಖವನ್ನು ಮೇಲೆತ್ತಿ ಗಂಡನ ಮುಖವನ್ನು ನೋಡುತ್ತ ಸರಲಕ್ಕ ಮಲಗಿದ್ದಾಳೆ. ಗಂಡನು ಒಂದು ಕೈಯನ್ನು ಅವಳ ತಲೆಗೂದಲ ಮೇಲಾಡಿಸುತ್ತ ಇನ್ನೊಂದು ಕೈಯಿಂದ ಹೆಂಡತಿಯ ಕೈಯನ್ನೆತ್ತಿ ತನ್ನ ಗಲ್ಲಕ್ಕೆ ಇಟ್ಟುಕೊಂಡಿದ್ದಾನೆ, ನಗೆ-ಮೊಗದಿಂದ ಹೆಂಡತಿಯ ಮುಖವನ್ನು ನೋಡುತ್ತಿದ್ದಾನೆ. ಇಷ್ಟೆ ತಾನು ಕಂಡ ದೃಶ್ಯ.

ಆದರೆ ಅಂದು ಮಾತ್ರ ಆ ದೃಶ್ಯ ಅವಳಿಗೆ ಬೆಂಕಿಯಂತೆ ಕಂಡಿತ್ತು. ತುಂಬಿದ ವಿಚಾರಗಳಿಂದ ತುಳುಕಿ ಸ್ಫುರಿಸುವಂತೆ ಅವಳ ಹೃದಯವು ಬಡೆದುಕೊಳ್ಳುತ್ತಿದ್ದಿತ್ತು ಒಂದನ್ನೊಂದು ನೂಕನುಗ್ಗಲಾಟವಾಡುತ್ತ ವಿಚಾರಗಳು ಹೃದಯದಿಂದ ಪುಟಿದೇಳುತ್ತಿದ್ದುವು. ಇದ್ದುದರ ಮುಂದೆ ಬೇರೆ ಸುಖಾನೇ ಇಲ್ಲ ಅಂತ ! ಅವನನ್ನ ಇನ್ನೊಮ್ಮೆ ಕೋಣೆಯೊಳಗ ಕಾಲಿಡಗೊಡಬಾರದು. ಅವನ ಕೈ ತನ್ನ ಮೈಯ್ಯನ್ನು ಇನ್ನೆಂದಿಗೂ ಮುಟ್ಟಬಾರದು. ಹ್ಯಾಂಗ

ನೋಡತಿದ್ದುವು ಆ ಕಣ್ಣು! ಎದೆಯೊಳಗ ಶೂಲ ಚುಚ್ಚಿಧಾಂಗ ಆಗಿತ್ತು. ಮೋಸಗಾರ! ಕಪಟಿ! ತಾನಿಲ್ಲಿ ಹಾದೀಕಾಯುತಾ ಕಣ್ಣಿಗೆ ಕಣ್ಣವೆ ಬಡೀತಾ ಕೂತಾಳ! ಅಂಥಾದ್ದೇನು ಏಕಾಂತೊ ಹಾಸಿಗೆ ಹಿಡಿದ ಹೆಂಡತೀ ಜೋಡಿ! ಇನ್ನೊಮ್ಮೆ – ಎಂದೆಂದಿಗೂ – ನಾಯೋತನಕ – ಕಣ್ಣೆತ್ತಿ ನೋಡಬಾರದು ಅವನನ್ನು, ತುಟಿ ಬಿಚ್ಚಿ ಮಾತಾಡಬಾರದು ಅವನ ಕೂಡ. ಬಂದಾದರೂ ಬರಲಿ! . ಸಿಟ್ಟಿನ ವಿಚಾರ ಭರದಲ್ಲಿ ಕುಮುದಳ ಲಕ್ಷ್ಯಕ್ಕೆ ಬಂದಿತ್ತು, ತಾನು ತನ್ನ ಕೋಣೆಯ ಬಾಗಿಲದ ಒಳಕೊಂಡಿಯನ್ನು ಹಾಕಿಕೊಂಡಿದ್ದಳೆಂಬುದು. ಹಾಗಾದರೆ ಅವನು ಬರುವುದು ಹೇಗೆ? ಅವನು ಬರಲು ಅನಕಾಶವಿಲ್ಲದಿದ್ದರೆ ತನ್ನ ಮನಸ್ಸಿನೊಳಗಿನ ಮಾತುಗಳನ್ನು ಅವನಿಗೆ ಆಡಿ ತೋರಿಸುವುದು ಹೇಗೆ? ಒಂದು ವೇಳೆ ಬಾಗಿಲು ಮುಚ್ಚಿದ್ದನ್ನು ನೋಡಿ, "ಒಳ್ಳೆಯದೆ ಆಯಿತು" ಎಂದುಕೊಂಡು ಹೊರಗಿಂದ್ಹೊರಗೆಯೆ ಹೋಗಿಬಿಡಬಹುದಲ್ಲ? ಅವನಿಗೆ ಅಂತಹ ಅವಕಾಶನನ್ನೆ ಕೊಡಬಾರದು. ಇಲ್ಲಿಯವರೆಗೂ ಅವನು ನಡೆದು ಬರಲಿ, ನಾನು ಮಲಗಿದ್ದನ್ನು ಕಣ್ಣಾರೆ ಕಾಣಲಿ, ಆಗ ನನ್ನ ಹತ್ತಿರ ಬರಲಿ, ನೋಡೋಣ ಎಂದುಕೊಂಡು ಕುಮುದಳು ಎದ್ದು ಕೊಂಡಿಯನ್ನಷ್ಟೆ ಅಲ್ಲ, ಬಾಗಿಲನ್ನೂ ತೆರೆದಿಟ್ಟು, ದೀಪವನ್ನು ಹಚ್ಚಿಟ್ಟು, ಹಾಸಿಗೆಯ ಮೇಲೆ ಮಲಗಿ ಕೊಂಡಿದ್ದಳು. "ಹಾಸಿಗೆ ಬಿಟ್ಟು ಏಳಲಾರದ ಹೆಂಡತಿ! ಯಾರ ಹೆದರಿಕೆ?" ಎಂದು ಕುದಿಯುತ್ತಿದ್ದ ಸಂತಾಪದಿಂದ ಹೇಳಿಕೊಂಡಿದ್ದಳು.

ಕುಮುದಳು ಧುಮುಮುಸುಕೊಂಡು ಹಾಗೆಯೆ ಎಷ್ಟೊತ್ತು ಮಲಗಿ ಕೊಂಡಿದ್ದಳೊ! ಈಗ ಬರುವ, ಇನ್ನೊಂದು ಕ್ಷಣದಲ್ಲಿ ಬರುವ, ಬಂದರೆ ನಾನು ಮುಖವನ್ನು ಕೂಡ ಆ ಕಡೆ ತಿರಿಗಿಸುವುದಿಲ್ಲ ಎಂದು ಹಟದಿಂದ ಹೇಳಿಕೊಳ್ಳುತ್ತ ಮುಖ ತಿರುಗಿಸಿ ಮಲಗಿಕೊಳ್ಳುತ್ತಿದ್ದಳು. ಇನ್ನೂ ರಾಮಣ್ಣ ಬರಲಿಲ್ಲ ಎಂದೊಡನೆ ಮತ್ತೆ ಬಾಗಿಲ ಕಡೆ ಮುಖ ತಿರುಗಿಸಿ ನಿರೀಕ್ಷೆಯ ದೃಷ್ಟಿಯಿಂದ ಕಣ್ಣುಗಳನ್ನು ತೆರೆದು ಮಲಗಿಕೊಳ್ಳುತ್ತಿದ್ದಳು.

ಆ ರಾತ್ರಿಯ ತನ್ನ ನಡತೆಗಾಗಿ ಕುಮುದಳಿಗೆ ಮೊದಲು ಆಶ್ಚರ್ಯ ವೆನ್ನಿಸಿತ್ತು. ತನಗೆ ಎಂತಹ ರಭಸದಿಂದ ಸಿಟ್ಟುಬಂದಿತ್ತು! ತಾನು ಎಷ್ಟು ಗಟ್ಟಿಯಾಗಿ ನಿಶ್ಚಯಿಸಿಕೊಂಡಿದ್ದಳು! ಆದರೇನು? ಕೊನೆಗೆ ರಾಮಣ್ಣ ಬಂದಾಗ ಮನಸ್ಸಿನಲ್ಲಿ ಮಾಡಿಕೊಂಡಂತೆ ಯಾವುದೂ ನಡೆದಿರಲಿಲ್ಲ.

ಅದಕಾಗಿ ರಾಮಣ್ಣನ ಮೇಲೂ ಆಕೆಯ ಸಿಟ್ಟು ಇದ್ದಿತು. ರಾಮಣ್ಣ ಬರುವ, ಬಂದೊಡನೆ ತನ್ನನ್ನು ಮಾತನಾಡಿಸುವ, ತಡವಾದುದಕ್ಕೆ ತಾನು ಸಿಟ್ಟಾದುದನ್ನು ಕಂಡು ನೆವನನ್ನು ಹೇಳತೊಡಗುವ, ಆಗ ತಾನು ಮೌನದಿಂದ, ತಿರುಗಿಸಿದ ಮುಖದಿಂದ, ಕೊನೆಗೆ ಚುಚ್ಚು ಮಾತುಗಳಿಂದ ಅವನ ಮನಸ್ಸನ್ನು ಹಣ್ಣಾಗುವಂತೆ ನೋಯಿಸಬೇಕು ಎಂದು ಎಣಿಕೆ ಹಾಕಿ, ಸಿದ್ಧತೆ ಮಾಡಿಕೊಂಡು ತಾನು ಮಲಗಿದ್ದಳು. ಆದರೆ ರಾಮಣ್ಣ ಬಂದವನೆ ಮೊದಲು ಬಾಗಿಲನ್ನು ಮುಚ್ಚಿ ದೀಪವನ್ನು ಆರಿಸಿಬಿಟ್ಟ. ಕುಮುದಳ ಒಂದು ಶಸ್ತ್ರವೆ ಕಳಚಿ ಬಿದ್ದಂತಾಯಿತು. ಯಾಕೆಂದರ ಕತ್ತಲಲ್ಲಿ ಮಾತನಾಡದೆ ತನ್ನ ಸಿಟ್ಟನ್ನು ತೋರಿಸುವುದು ಹೇಗೆ? ಅದಕಾಗಿ ಮುಖ ತಿರುಗಿಸಿ ಮಲಗಿಕೊಂಡು ಅವನು ಮಾತನಾಡುವ ದಾರಿಯನ್ನು ಕಾಯ್ದಳು. ಏನೊ ಅವನು ಉಸುರ್ಗರೆದಂತ ಕೇಳಬಂದಿತು. ಆಹಾ! ಏನಾದರೂ ಠಕ್ಕತನದ ಆಟವಿರಬಹುದು, ನಾನು ಮೆತ್ತಗಾಗುವುದು ಬೇಡ ಎಂದು ಗಟ್ಟಿಯಾಗಿ – ಕತ್ತಲಿದ್ದರೂ – ಕಣ್ಣಗಳನ್ನು ಮುಚ್ಚಿದಳು. ರಾಮಣ್ಣ ಒಂದೆರಡು ನಿಮಿಷಗಳಲ್ಲಿ ಹತ್ತಿರ ಬಂದು ಮಲಗಿಕೊಂಡ; ತುಸು ದೂರ ಸರಿದಳು. ಕೈಯನ್ನು ಅವಳ ಮೈಮೇಲೆ ಒಗೆದು ಬಲವಾಗಿ ಅವಳನ್ನು ಹತ್ತಿರ ಎಳೆದುಕೊಂಡ. ಮನಸ್ಸಿಗೆ ಸುಖವೆನ್ನಿಸಿದರೂ ಕತ್ತಲಲ್ಲಿ ಅವನಿಗೆ ಕಾಣುವುದಿಲ್ಲ. ಒಳಿತೇ ಆಯಿತು ಎಂದು ಇನ್ನೂ ರಾಮಣ್ಣನ ಕಡೆ ಮುಖ ತಿರುಗಿಸಿರಲಿಲ್ಲ. ಒಮ್ಮೆ ಮಾತನಾಡಲಿ, ಆಮೇಲ ನೋಡೋಣ ಎಂದುಕೊಂಡಿದ್ದಳು. ಆದರೆ ರಾಮಣ್ಣ ಮಾತನ್ನೆ ಆಡಿರಲಿಲ್ಲ, ಸುರಿತ ಕೈಗಳನ್ನು ಅವಳ ಅಂಗಾಂಗಗಳ ಮೇಲೆ ಆಡಿಸುತ್ತ, ಹಾವುಗಾರನು ಹಾವನ್ನು ತನಗೆ ಇಷ್ಟವಿದ್ದ ಕಡೆ ತಿರುಗಿಸಿಕೊಳ್ಳುವಂತೆ, ಕುಮುದಳ ದೇಹವನ್ನು ತನ್ನ ವಶಪಡಿಸಿಕೊಂಡಿದ್ದ. ಅಂಗೈಯಲ್ಲಿಟ್ಟ ಬರ್ಫದ ಕರಣಿಯಂತೆ ರಾಮಣ್ಣನ ಕೈಗೆ ಸಿಕ್ಕ ಅವಳ ದೇಹ ಕರಗಿ ನೀರಾಯಿತು; ದೇಹದ ಆಶ್ರಯ ತಪ್ಪಿದ್ದಕ್ಕೇನೊ ಎನ್ನುವಂತೆ ಅವಳ ಹೃದಯ ರಾಮಣ್ಣನ ಹೃದಯದ ಮೊರೆ ಹೊಕ್ಕಿತು; ತಾರುಣ್ಯದ ನೈಸರ್ಗಿಕ ಅಪೇಕ್ಷೆಯ ಎದುರು ಕೃತಕ ಕೋಪವು ಹೇಳಹೆಸರಿಲ್ಲದಂತೆ ಮಾಯವಾಗಿತ್ತು. ಒಂದು ನಿಮಿಷ ಹಿಂದಿನ ಜನ್ಮಜನ್ಮಾಂತರಗಳ ಅನುಭವಗಳೆಲ್ಲ ಮರೆತು ಹೋದಂತೆ ಸದ್ಯದ ಸುಖದಲ್ಲಿ ತನ್ಮಯಳಾಗಿದ್ದಳು; ಇನ್ನೊಂದು ನಿಮಿಷ,

ಚಿರಂತನ ಸುಖ ದೊರೆಯಿತೆಂಬಂತೆ ನಿಟ್ಟುಸಿರನ್ನು ಹರಿಸಿ ಸುಖದ ಉದ್ಗಾರವನ್ನು ಬಾಯಿಯಿಂದ ಉಸಿರಿದ್ದಳು; ಮತ್ತೊಂದು ನಿಮಿಷದಲ್ಲಿ, ಇಡಿಯ ಸಂಸಾರವನ್ನೆ ಕ್ಷಮಿಸಲು ಅರ್ಹವಾದ ವಾತ್ಸಲ್ಯದಿಂದ ಅವಳ ಹೃದಯವು ವಿಶ್ವಾಕಾರವಾಗಿ ನಿಂತಂತಾಗಿತ್ತು. ಇಂತಹ ಅನುಭವವನ್ನು ಕೊಟ್ಟ ರಾಮಣ್ಣನ ಮೇಲೆ ಸಿಟ್ಟಾಗುವುದೆ? ಪೂರ್ವಜನ್ಮದಲ್ಲಿ ಯಾವ ಪುಣ್ಯವನ್ನು ಮಾಡಿರುವಳೆಂದು ಇಂದು ತನಗೆ ಈ ದುಃಖವಿಮೋಚನೆ ದೊರೆತಿದೆ? ಆಗ ಕುಮುದಳು ತುಂಬಿ ಬಂದ ಹೃದಯದಿಂದ ರಾಮಣ್ಣನನ್ನು ಬಿಗಿದಪ್ಪಿ-ಕೊಳ್ಳಬೇಕೆಂದು ಮಗ್ಗಲಾಗಿ ಕೈ ಚಾಚಿದಳು — ಅಲ್ಲಿ ಯಾರೂ ಇದ್ದಿರಲಿಲ್ಲ.! ಇದೇನೊ ಕನಸೊ ಭೂತಾಟಿಕಿಯೋ ಎಂದು ಹೆದರು - ವಷ್ಟರಲ್ಲಿ ಮೆಲ್ಲನೆ ಬಾಗಿಲನ್ನು ಮುಚ್ಚಿಕೊಂಡು ಯಾರೊ ಹೊರಬಿದ್ದಂತೆ ಸದ್ದಾಯ್ತು. ರಾಮಣ್ಣ ಹೊರಟುಹೋಗಿದ್ದ!

ಇದೇನು? ಹೀಗೇಕಾಯಿತು? ಎನ್ನುತ್ತ ಕುಮುದ ಧಿಗ್ಗನೆ ಹಾಸಿಗೆಯಮೇಲೆ ಎದ್ದು ಕುಳಿತಿದ್ದಳು. ಬಂದನೇಕೆ? ಹಾಗೆ ಹೋದನೇಕೆ? ಆ ಪ್ರಶ್ನೆಗಳಿಗೆ ಉತ್ತರ ಕುಮುದಳಿಗೆ ಗೊತ್ತಿರಲಿಲ್ಲವೆಂದಲ್ಲ, ಆದರೆ ಆ ಉತ್ತರ ಅವಳಿಗೆ ಬೇಡಾಗಿತ್ತು, ಮನಸ್ಸಿಗೆ ಅಸಹ್ಯವೆನ್ನಿಸುವಂತಿತ್ತು. ಅಸ್ತವ್ಯಸ್ತವಾಗಿದ್ದ ತನ್ನ ಮೈಮೇಲಿನ ವಸ್ತ್ರಗಳು, ಹಣೆಗೆ ಅಂಟಿಕೊಂಡ ಬೆವರ ಹನಿಗಳು, ಒಳಗೆ ಡವಡವ ಹಾರುತ್ತಿರುವ ಎದೆ, ಹೊರಗೆ ಪೆಟ್ಟು ತಿಂದಾಗಿನ ಒಳನೋವಿನಂತೆ ಗಾಸಿಯಾದ ವಕ್ಷಃಸ್ಥಳ, ತನ್ನ ತೊಡೆಗಳಲ್ಲಿಯ ನಡುಕು—ಇದೆಲ್ಲವೂ ರಾಮಣ್ಣನು ಬಂದು ಹೋದುದರ ಸಾಕ್ಷ್ಯವಾಗಿತ್ತು. ಆದರೆ ಅವನು ಬಂದು ಹೋದುದಕ್ಕೆ ಇದಿಷ್ಟೆ ಕಾರಣವಾಗಿದ್ದಿತೆ? ದೇಹಗಳ ಸಂಬಂಧದ ಹೊರತು ಬೇರೆ ಯಾವ ಸಂಬಂಧವೂ ಇಲ್ಲವೆ?

ತಾನು ಸಿಟ್ಟಾಗಿರಬಹುದೆಂದು ಊಹಿಸಿ ರಾಮಣ್ಣ ಹಾಗೆ ನಡೆದು - ಕೊಂಡಿರಬಹುದು ಎಂದು ಒಮ್ಮೆ ಎನ್ನಿಸಿತು ಆಕೆಗೆ. ಅವನು ಉಸುರಿ-ದದ್ದು ಕೇಳಿದಂತಾಗಿರಲಿಲ್ಲವೆ? ಪಾಪ! ಅವನಿಗೆ ಯಾವುದೋ ಮನಸ್ತಾಪವಿದ್ದಿರಬೇಕು - ಎಂಬ ವಿಚಾರಬಂದಿತ್ತು. ಏನಿರಬಹುದು? ತುಸು ಹೊತ್ತಿನ ಮುಂಚೆ ಅವನು ಸರಲಕ್ಕನೊಡನೆ ಮಾತನಾಡುತ್ತಾ ಕುಳಿತಿದ್ದನ್ನು ನೋಡಿರಲಿಲ್ಲವೆ? ಅಲ್ಲಿ ಏನಾದರೂ ಮನಸ್ತಾಪ ಉಂಟಾಗಿರಬಹುದೆ?

ಸರಲಕ್ಕ ಯಾವುದಾದರೊಂದು ಮನನೋಯುವಂತ ಮಾತನಾಡಿರಬಹುದೆ- ಇಲ್ಲವೆ - ಇಲ್ಲವೆ? ಕುಮುದಳ ವಿಚಾರದೊಡನೆ ಅವಳ ಹೃದಯಕ್ರಿಯೆಯೂ ತಡೆದಂತಾಗಿತ್ತು. ಸರಲಕ್ಕನಿಗೆ ತಿಳಿದಿರಬಹುದೆ? ಆ ವಿಚಾರಕ್ಕಾಗಿ ಒಂದೇ ನಿಮಿಷ ಕುಮುದ ಹೆದರಿದ್ದಳು. ಮರುಗಳಿಗೆಯಲ್ಲಿ ಈ ಮೊದಲು ಉಂಟಾಗಿದ್ದ ಕೋಪ, ಅಸಹನೆ ಎರಡೂ ಸಿಡಿದೆದ್ದಿದ್ದವು. ಹಾಸಿಗೆ ಹಿಡಿದು, ಜೀವವಿದ್ದು ಇಲ್ಲದಂತಾದ, ರಾಮಣ್ಣನಂತಹನಿಗೆ ಕಾಲ್ತೊಡಕಿನಂತಾದ ಸರಲಕ್ಕನು ಗಂಡನ ಮನಸ್ಸನ್ನು ನೋಯಿಸಿರಬೇಕು ಎಂದು ಕುಮುದಳಿಗೆ ಖಾತ್ರಿಯಾಗಿತ್ತು. ಏನೊ ಅಂದಿದ್ದಳಲ್ಲ ಆಕೆ? ಏನು? ಹಾಂ— ಅಷ್ಟಾದರೆ ನಾ ಸುಖದಿಂದ ಕಣ್ಮುಚ್ತೇನಿ, ಎಂದು. ಅಷ್ಟು ಎಂದರೆ ಎಷ್ಟು? ಯಾವುದು? ಸದಾಕಾಲದ ಈ ರೋಗಿಯು ಗಂಡನು ತನ್ನ ಮಗ್ಗಲಲ್ಲಿಯೆ ಕೊಳೆಯಬೇಕು ಎಂದು ಬಯಸಿರುವಳೆ? ಈಕೆಯ ಸುಖ-ದುಃಖ ಯಾರಿಗೆ ಬೇಕು? ಈಕೆ ಕಣ್ಮುಚ್ಚಿದರೆ ಇನ್ನೊಬ್ಬರಿಗೆ ಸುಖ—

ಹಾಸಿಗೆಯ ಮೇಲೆ ಕುಳಿತ ಕುಮುದ ಗಾಬರಿಯಿಂದ ಎದ್ದಳು. ಅವಳ ಅಂಗಾಂಗವೆಲ್ಲ ನಡುಗುತ್ತಿತ್ತು. ಹಿಂದಿನ ಈ ನೆನಪು ಈಗಲೂ ಅವಳನ್ನು ಹಿಂಡಿ ಹಿಪ್ಪೆ ಮಾಡುತ್ತಿತ್ತು? ಅಂದಿನ ತನ್ನ ವಿಚಾರಗಳನ್ನು ಹೀಗೆ ನೆನೆವಾಗ ಕುಮುದಳ ಕಣ್ಣುಗಳು ನೀರಿನಿಂದ ತೊಯ್ದುವು. ಅಂದು ಹಾಗೆ ಸರಲಕ್ಕನ ಬಗ್ಗೆ ಮಾಡಿದ ವಿಚಾರ ಪಾಪ! ಆ ಪಾಪಕ್ಕೆ ಇಂದು ಪ್ರಾಯಶ್ಚಿತ್ತವನ್ನು ಭೋಗಿಸುತ್ತಿದ್ದೇನೆ - ಎಂದುಕೊಂಡಳು. ಪಾಪ! ಸರಲಕ್ಕನೆ ತನ್ನ ಸುಖಕ್ಕೆ ಅಡ್ಡ ಬಂದಿರುವಳೆಂದು ಆಗ ತಾನು ತಿಳಿದಿರಲಿಲ್ಲವೆ? ಈಗ ಸರಲಕ್ಕ ಯಾರ ದಾರಿಯಲ್ಲೂ ಇಲ್ಲ, ಆದರೂ ತನಗೆ ಸುಖವಿಲ್ಲ. ಒಬ್ಬರ ಸುಖ, ಒಬ್ಬರ ದುಃಖ ಇನ್ನೊಬ್ಬರ ಕೈಯಲ್ಲಿರುವುದಿಲ್ಲ ಎಂದು ಕುಮುದಳಿಗೆ ಈಗ ತಿಳಿದಿತ್ತು. ಕೆಲವು ವರ್ಷ ಮುಂಚಿತ, ಸರಲಕ್ಕ ಜೀವದಿಂದಿದ್ದಾಗ ಈ ಮಾತು ತಿಳಿದಿದ್ದರೆ? ಆದರೆ ಆಗ ತಿಳಿಯುವುದೆ ಶಕ್ಯವಿದ್ದಿರಲಿಲ್ಲ, ಯಾಕೆಂದರೆ ಸುಖವೆಂಬುದರ ಕಲ್ಪನೆಯೆ ಆಗ ಇದ್ದಿರ-ಲಿಲ್ಲ. ರಾಮಣ್ಣನ ಸಾನ್ನಿಧ್ಯದಲ್ಲಿಯೆ ತನ್ನ ಸುಖ ಎಂದು ತಿಳಿದು ರಾಮಣ್ಣನನ್ನು ಸರಲಕ್ಕನಿಂದ ತನ್ನ ಹತ್ತಿರ ಎಳೆಯುವುದೆ ಆಗ ಕುಮುದಳ ಜೀವನ ಧ್ಯೇಯವಾಗಿತ್ತು. ಇದಲ್ಲದೆ ರಾಮಣ್ಣನ ಸಾನ್ನಿಧ್ಯ ದೊರೆಯುವುದು

ರಾಮಣ್ಣ ನನ್ನು ಅವಲಂಬಿಸಿದೆ ಎಂಬುದೂ ಆಗ ತನ್ನ ಲಕ್ಷ್ಯಕ್ಕೆ ಬಂದಿರಲಿಲ್ಲ. ಎಂತಹ ಹುಚ್ಚು ತನ್ನದು ! ಸಾನ್ನಿಧ್ಯವೆಂದರೆ ದೇಹಸಾನ್ನಿಧ್ಯ ಎಂದೇ ತಿಳಿದು, ಆ ಸುಖವನ್ನು ಅನುಭವಿಸಿ ಈಗ ದೇಹಸಾನ್ನಿಧ್ಯ ಮನಸ್ಸಿಗೆ ಅಸಹ್ಯವೆನ್ನಿ ಸುತ್ತಿದೆ. ತನ್ನ ಸುಖದ ಹಾದಿ ತನಗೆ ಗೊತ್ತಾಗಿರಲಿಲ್ಲ, ಇನ್ನೊಬ್ಬರ ಮೇಲೆ ತಪ್ಪು ಹೊರಿಸಿದ್ದಳು, ತಾನು ಮಾಡಿದ್ದು ತಪ್ಪು–ಎಂದುಕೊಂಡಳು. ಅದರಲ್ಲೂ ಸರಲಕ್ಕನ ಬಗ್ಗೆ ಹಾಗೆ ತಿಳಿದದ್ದೂ ನಡೆದುಕೊಂಡದ್ದೂ ಪಾಪ ಎಂದುಕೊಂಡಳು.

ಇದುವರೆಗೆ ಹಿಂದಿನ ನೆನಪುಗಳನ್ನು ಮರೆಯಬೇಕು, ಗಟ್ಟಿಯಾಗಿ ಕಣ್ಮುಚ್ಚಿ ಮಲಗಿಕೊಳ್ಳಬೇಕು ಎನ್ನುತ್ತಿದ್ದ ಕುಮುದಳಿಗೆ ಇದೊಂದು ನೆನಪನ್ನು ಮತ್ತೆ ಮತ್ತೆ ನೆನೆದುಕೊಳ್ಳಬೇಕು ಎಂದೆನ್ನಿಸಿತು. ಆದದ್ದಾಗಿದೆ, ಕಡೆಗೆ ಈ ನೆನಪಿನ ನಿಮಿತ್ತದಿಂದ ನನ್ನ ಪಾಪದ ಪ್ರಾಯಶ್ಚಿತ್ತವನ್ನಾದರೂ ಭೋಗಿಸುತ್ತೇನೆ ಎಂದು ಆಕೆಯ ಸಮಾಧಾನ. ಅಂದಿನ ಆ ರಾತ್ರಿ, ರಾಮಣ್ಣ ಹಾಗೆ ಯಂತ್ರದ ಗೊಂಬೆಯಂತೆ ಬಂದು ಹೋದ ಮೇಲೆ ಸಿಟ್ಟು, ಅಸೂಯೆ, ದ್ವೇಷ, ಅಸಹನೆ ಇವು ಒಂದೊಂದಾಗಿ ಕುಮುದಳನ್ನು ಪಿಶಾಚಿಯಂತೆ ಹಿಡಿದುಕೊಂಡಿದ್ದುವು. ರಾಮಣ್ಣನ ಬಗ್ಗೆ ತನ್ನಲ್ಲಿ ಅನಿವಾರ ಪ್ರೇಮವಿದೆ ಎಂದು ಅವಳಿಗೆ ಅಂದು ಭರವಸೆಯಾಗಿತ್ತು ; ತನ್ನ ಪ್ರೇಮದ ದಾರಿಯಲ್ಲಿ ಸರಲಕ್ಕ ಮುಳ್ಳಿನ ಕಂಟಿಯಂತೆ ಅಡ್ಡಗಟ್ಟಿ ಬಿದ್ದಿದ್ದಾಳೆ ಎಂದೂ ಆಕೆಗೆ ಸಂಶಯ ಬಂದಿತ್ತು. ಆದರೆ ರಾಮಣ್ಣನು ತನಗೆ ಜೀವನದ ಉಸಿರಿನಂತೆ, ಅವನಿಲ್ಲದಿದ್ದಲ್ಲಿ ತನ್ನ ಪುಟ್ಟಿಗೆ ಸೂರ್ಯನಿಗೂ ಬೆಳಕಿಲ್ಲ ಎನ್ನಬೇಕು, ಅವನನ್ನು ಹೊರತುಪಡಿಸಿದರೆ ತನಗೆ ಜೀವನವೆ ಇಲ್ಲ – ಎಂದು ಎಷ್ಟೆಷ್ಟು ದೃಢವಾಗಿ ನಂಬಿಕೊಂಡಿದ್ದಳೊ ಅಷ್ಟಷ್ಟು ಸರಲಕ್ಕನ ಬಗೆಗಿದ್ದ ಹೆದರಿಕೆ ದೂರವಾಗುತ್ತಿತ್ತು. ಇಂತಹ ಪ್ರೇಮದ ಎದುರಿನಲ್ಲಿ ಪಾಪ ! ಸರಲಕ್ಕ ನಂತಹ ನಿತ್ರಾಣ, ನಿರ್ಜೀವಪ್ರಾಯ ರೋಗಿ ನಿಲ್ಲಬಹುದೆ ? ಕೊನೆಕೊನೆಗೆ, ನಿದ್ದೆ ಅನಿವಾರ್ಯವಾಗುತ್ತ ಬಂದಂತೆ ಸರಲಕ್ಕನ ಬಗ್ಗೆ ಕುಮುದಳ ಹೃದಯ ದಲ್ಲಿ ಕನಿಕರ ಮೂಡಿತ್ತು. ಅವಳ ಬಗ್ಗೆ ಅಲ್ಲದ ಸಲ್ಲದ ವಿಚಾರ ಮಾಡುವು ದೇಕೆ ? ಹಾಸಿಗೆಯನ್ನು ಬಿಟ್ಟೇಳದ ಆಕೆಯಿಂದ ತನಗೆ ಯಾವ ಹೆದರಿಕೆ ? ರಾಮಣ್ಣನಿಗೆ ಯಾವ ಸುಖ ? ಜೀವದಿಂದಿದ್ದರೂ ಅಷ್ಟೆ, ಇಲ್ಲದಿದ್ದರೂ ಅಷ್ಟೆ;

ದಿನದಂತೆ ಅವಳೊಡನೆ ನಡೆದುಕೊಂಡರೆ ಅವಳಿಗೂ ಯಾವ ಸಂಶಯ ಬರಲಿಕ್ಕಿಲ್ಲ ಎಂದು ತನ್ನ ಯುಕ್ತಿಗೆ ತಾನೇ ಮೆಚ್ಚಿದ್ದಳು. ತನ್ನ ಹೃದಯ ರಾಮಣ್ಣನಿಂದಲೆ ತುಂಬಿಬಿಟ್ಟಿದೆ, ಅಲ್ಲಿ ಇನ್ನೊಬ್ಬರಿಗೆ ಯಾವ ನೆಪದಿಂದಲೂ ಜಾಗೆ ಬೇಡ – ಎಂದು ಸಮಾಧಾನವನ್ನು ತಂದುಕೊಂಡಿದ್ದಳು.

ಆದರೆ ರಾಮಣ್ಣ ಉಸುರ್ಗರೆದುದನ್ನು ನೆನೆದು ಆಕೆ ಮತ್ತೆ ವಿಚಾರಕ್ಕೆ ತೊಡಗಿದ್ದಳು. ಯಾವುದೊ ಒಂದು ಮನಸ್ತಾಪವಿದೆ ಅವನಿಗೆ ? ಯಾವುದು? ಅದನ್ನು ತಗೆಯಲೇಬೇಕು. ಹೆಂಡತಿಯು ಏನಾದರೂ ಹೇಳಿದ್ದನ್ನು ಕೇಳಿ ಅವನು ತನಗಾಗಿ ಸಿರಾಸೆಯನ್ನು ತಾಳಿರಬಹುದ ? ಒಂದು ವೇಳೆ ಸರಲಕ್ಕನಿಗೆ ತಿಳಿದರೆ, ಇಲ್ಲವೆ ಆಕೆಗೆ ತಿಳಿದಿದೆ ಎಂದು ನನಗೆ ತಿಳಿದರೆ ನಾನು ಹಿಂಜರಿಯ ಬಹುದೆಂದು ರಾಮಣ್ಣನಿಗೆ ಸಂಶಯವಿದ್ದಿರಬಹುದೆ? ಅದಕಾಗಿ ಅವನು ಉಸುರ್ಗರೆದಿರಬಹುದೆ? ಛೆ – ಹಾಗಿದ್ದರೆ ಎಷ್ಟೊತ್ತಿನ ಮನಸ್ತಾಪವದು ? ಒಂದು ವೇಳೆ ಶೇಷನಿಂದ ಬಿಗಿದು ಎಂಟು ದಿಗ್ಗಜಗಳಿಂದ ಎಳೆಯಿಸಿದರೂ ನನ್ನ ಹೃದಯ ರಾಮಣ್ಣನನ್ನು ಬಿಡದು – ಆ ಮಾತು ಅವನಿಗೆ ಗೊತ್ತಿಲ್ಲ ವೇನೊ ! ಅಂತಹ ದೃಢಪ್ರೇಮ ರಾಮಣ್ಣನಿಗಾಗಿ ತನ್ನಲ್ಲಿದೆ ಎಂದು ಪೂರ್ಣ ವಾಗಿ ಆ ರಾತ್ರಿಯಲ್ಲಿ ಕುಮುದ ಕಂಡುಕೊಂಡಿದ್ದಳು. ಕೊನೆಗೆ ಅಂದು ಮಲಗುವಾಗ ಕುಮುದ ದೇವನಲ್ಲಿ ಒಂದೇ ಒಂದು ಬೇಡಿಕೆಯನ್ನು ಮಾಡಿ ಕೊಂಡಿದ್ದಳು. "ದೇವಾ, ನಾನು ಅವರನ್ನು ಪ್ರೀತಿಸುವಷ್ಟು ಅವರು ನನ್ನನ್ನು ಪ್ರೀತಿಸೋ ಹಾಗೆ ಮಾಡು, ಇಷ್ಟೆ ಸಾಕು. ಆ ಮ್ಯಾಲೆ ನನಗ ಯಾರ ಹೆದರಿಕೆಯೂ ಇಲ್ಲ, ಯಾರ ಸಹಾಯಾನೂ ಬ್ಯಾಡ" ಎಂದು.

ಈಗ ಮಾತ್ರ ಕುಮುದಳಿಗೆ ಈ ಹಿಂದಿನ ನೆನಪು ಅಸಹ್ಯವಾಯಿತು. ಅದೇನು ದುರ್ಬುದ್ಧಿಯೊ ? ಸದ್ಬುದ್ಧಿಯೊ ? "ಅವರು ನನ್ನನ್ನು ಪ್ರೀತಿಸೋ ಹಾಗ ಮಾಡು ?" ಎಂದು ಆ ರಾತ್ರಿ ತನ್ನ ಬಾಯಿಯಿಂದ ಶಬ್ದಗಳು ಬಂದಿದ್ದು ವಲ್ಲವೆ ಆ ಶಬ್ದಗಳು ಎಷ್ಟು ಸೂಚಕವಾಗಿದ್ದುವು ಎಂಬುದು ಇಂದು–೨–೨॥ ವರ್ಷಗಳ ತರುವಾಯು–ಕುಮುದಳಿಗೆ ಹೊಳೆಯಿತು. ರಾಮಣ್ಣನು ತನ್ನನ್ನು ಪ್ರೀತಿಸುತ್ತಿದ್ದಿಲ್ಲ ಎಂದು ಆಗಲೂ ತನಗೆ ಸಂದೇಹವಿದ್ದಿತೇನೊ ! ಅದಕಾಗಿಯೆ ಅವನನ್ನು ಒಲಿಸಿಕೊಳ್ಳಲು ದೇವನ ಸಹಾಯವನ್ನು ಬೇಡಿಕೊಳ್ಳಬೇಕಾಗಿ ಬಂತು ! ಆಗ ತನಗೆ ತಿಳಿದಿರಲಿಲ್ಲ, ಸಂಶಯವಿದ್ದಿತು. ಈಗ, ತನಗೆ ತಿಳಿದಿದೆ

— ವಾಕ್ಯವನ್ನು ಪೂರ್ತಿಗೊಳಿಸದೆ ಕುಮುದ ಹಾಸಿಗೆಯಿಂದ ಎದ್ದಳು. ನಿದ್ದೆಯ ಗುಂಗೊ ವಿಚಾರದ ಭರವೊ – ಯಂತ್ರದಂತೆ ಹಾಸಿಗೆಯನ್ನು ಸರಿಪಡಿಸಿಕೊಂಡು, ಆಯಾಸವಾದವಳಂತೆ ಒರಗಿದಳು. ಅವಳಿಗೆ ತಿಳಿಯುವ ಮುಂಚೆಯೆ ಆಕಳಿಕೆಯೊಂದು ಸದ್ದಿಲ್ಲದೆ ಹೊರಬಿದ್ದಿತು.

## ೧೧

"ದ್ವೀಪಾದನ್ಯಸ್ಮಾದಪಿ ಮಧ್ಯಾದಪಿ ಜಲನಿಧೇರ್ದಿಶೋಽಪ್ಯಂತಾತ್ ।
ಆನೀಯ ಝಟಿತಿ ಘಟಯತಿ ವಿಧಿರಭಿಮತಮಭಿಮುಖೀಭೂತಃ ॥"

ರಾಮಣ್ಣ ಕಣ್ಣು ತಿಕ್ಕಿಕೊಂಡು ದಿಟ್ಟಿಸಿ ನೋಡಿದ. ಏನಿದು ? ಎಷ್ಟೊತ್ತಿನಿಂದ ತಾನು ಆ ಶ್ಲೋಕವನ್ನು ಇದಿರಿಟ್ಟುಕೊಂಡು ಕುಳಿತಿದ್ದಾನೆ? ಮನಸ್ಸನ್ನು ಕಲಕುವ ವಿಚಾರಗಳನ್ನು ಮರೆಯಲು ಸಂಸ್ಕೃತ ಗ್ರಂಥವೊಂದನ್ನು ಓದಲು ತಾನು ನಿಶ್ಚಯಿಸಿದ್ದ ಎಂಬುದು ಗೊತ್ತು ; ಅತ್ತಿತ್ತ ನೋಡುವಾಗ ಶ್ರೀಹರ್ಷನ ರತ್ನಾವಲೀ ನಾಟಕ ಅವನ ಕೈಗೆ ಬಂದಿತು. ಎಳೆಹರೆಯದಲ್ಲಿ ಓದಿದಾಗ ಮನಸ್ಸನ್ನು ಹಿಡಿದಿದ್ದ ಆ ನಾಟಕ ಕೈಗೆ ಬಂದುದಕ್ಕೆ ಅವನಿಗೆ ಆನಂದವೆ ಆಯಿತು. ಹಾಯಾಗಿ ಕುರ್ಚಿಯಲ್ಲಿ ಬಿದ್ದುಕೊಂಡು, ಮೇಜಿನ ಮೇಲೆ ಕಾಲ್ಗಳನ್ನೊಗೆದು ಮೊದಲಿನಿಂದಲೆ ಓದಲು ತೊಡಗಿದ್ದ. ಸೂತ್ರಧಾರನು ಪ್ರಸ್ತಾವನೆಯ ಕೊನೆಗೆ "ದ್ವೀಪಾದನ್ಯ-ಸ್ಮಾದಪಿ' ಎಂಬ ಶ್ಲೋಕವನ್ನು ಹೇಳುವನು. ಆ ಶ್ಲೋಕದ ಅರ್ಥ ಎಂದಿನಿಂದಲೂ ಅವನ ಮನಸ್ಸನ್ನು ತಟ್ಟಿತ್ತು. ಬುದ್ಧಿ ಮತ್ತು ತರ್ಕಗಳಲ್ಲಿಯೆ ಪೂರ್ತಿಯಾಗಿ ವಿಶ್ವಾಸವನ್ನಿಟ್ಟ ರಾಮಣ್ಣನಿಗೆ ಅವೆರಡನ್ನೂ ಮೀರಿ ಒಂದು ಘಟನೆಯನ್ನು ನಡೆಸುವ ನಿಸರ್ಗದ ಯುಕ್ತಿ (ಏನು ಶಕ್ತಿಯೊ ?) ಯಾವಾಗಲೂ ಮೋಜಿನದೆನ್ನಿಸಿತ್ತು. ಅದೇ ಮಾತು ಈ ಶ್ಲೋಕದಲ್ಲಿದ್ದುದರಿಂದ ಇದು ಅವನ ಮೆಚ್ಚುಗೆಯ ಶ್ಲೋಕವಾಗಿತ್ತು. ವಿಧಿಯು ಎಂಬುದೆ ನಿಸರ್ಗದ ಆ ಯುಕ್ತಿ (ಇಲ್ಲವೆ ಶಕ್ತಿ). ಅದು ಮನಸ್ಸು ಮಾಡಿತೆಂದರೆ ಎರಡು ಬೇರೆ ಬೇರೆ ದ್ವೀಪಗಳಿಂದ, ಇಲ್ಲವೆ ಸಮುದ್ರದ ಮಧ್ಯದಿಂದ, ಇಲ್ಲವೆ ದಶದಿಗಂತಗಳ

ಕೊನೆಯಿಂದ ಒಂದು ಸಂಗತಿಯನ್ನು ಇಲ್ಲವೆ ವ್ಯಕ್ತಿಯನ್ನು ಹಿಡಿದೆಳೆದು ತಂದು ತನ್ನ ಘಟನೆಯನ್ನು ನಡೆಸುವುದು. ಮನುಷ್ಯನಿಗೆ ಯಾವುದು ಆಕಸ್ಮಿಕ ಘಟನೆ ಎನ್ನಿಸುವುದೊ ಅದು ನಿಸರ್ಗದಲ್ಲಿ ನಿಯಮಬದ್ಧವಾದ ಘಟನೆಯಂತಿರುವುದು. ಎಂತಹ ಮೋಜಿನ, ಆದರೂ ಸತ್ಯಾನುಭವದ ಅರ್ಥ! ಅತ್ಯುತ್ತಮ ಶ್ಲೋಕಗಳಲ್ಲಿ ಇದೊಂದು. "ದ್ವೀಪಾದನ್ಯನ್ – " ರಾಮಣ್ಣ ತಡೆದ. ಅದಲ್ಲ ನರಿ. ಆದರೆ, ಸುಮಾರು ಅರ್ಧಗಂಟೆಯಾಗಿರ ಬಹುದು ಈಗ, ಅಷ್ಟೊತ್ತೂ ಅದೇ ಶ್ಲೋಕದ ಸುತ್ತುಮುತ್ತಲೆ ತಾನು ಗುಣುಗಾಡುತ್ತಿರುವನಲ್ಲ! ಹೀಗೇಕಾಯಿತು ? .... ರಾಮಣ್ಣ ಉಸುರ್ಗರೆದ. .... ಯಾವುದನ್ನು ಮರೆಯಲು ತಾನು ಬುದ್ಧಿಪೂರ್ವಕವಾಗಿ ಈ ಪುಸ್ತಕದ ಸಹಾಯದಿಂದ ಯತ್ನಿಸುತ್ತಿದ್ದನೊ ಕೊನೆಗೆ ಅದೇ ಸಂಗತಿಯ ನೆನಪು ಈ ಶ್ಲೋಕದಿಂದ ಮರುಕಳಿಸಿವೆ! ಹಲ್ಲಿನ ಸಂದುಗಳೊಳಗೆ ಸಿಕ್ಕ ಪಲ್ಯದ ತೊಪ್ಪಲ ತುಣುಕಿನಂತೆ ಅದು ತನ್ನನ್ನು ಪೀಡಿಸುತ್ತಲಿದೆ, ಎಡಚೆಡಚಾಗುತ್ತಲಿದೆ, ಅದನ್ನು ಎಲ್ಲ ರೀತಿಯಿಂದಲೂ ನಾಲಗೆಯನ್ನಾಡಿಸಿ ಹೊರಗೆಳೆಯಲೇಬೇಕು, ಇಲ್ಲದೆ ಹೋದರೆ ಸಮಾಧಾನವೆ ಇಲ್ಲ. ಆದರೆ ಆ ನಿರ್ದಿಷ್ಟವಾದ ನೆನಪಾದರೂ ಯಾವುದು ? ಹಾಂ – ಇದೇ ಕೆಲನಿಮಿಷ ಮುಂಚೆ ತನ್ನ ತಲೆಯನ್ನು ತಿನ್ನು ತ್ತಿರಲಿಲ್ಲವೆ ? ಅದೇ ನೆನಪು.

"ತಾನು ಸರಲೆಯನ್ನು ಪ್ರೀತಿಸುವೆನೊ ? ಕುಮುದಳನ್ನೊ ?" ಎಂದು ಕೇಳಿಕೊಂಡು "ಯಾರಿಗೆ ಬೇಕಾಗಿದೆ ಉತ್ತರ ?" ಎಂದು ಕೈಜಾಡಿಸಿದ್ದನಲ್ಲ ಕೆಲವು ನಿಮಿಷ ಮುಂಚಿತ ? ಅವೇ ಪ್ರಶ್ನೆಗಳು ಈ ಶ್ಲೋಕದ ಮಾರ್ಗವಾಗಿ ತನ್ನ ಹೃದಯವನ್ನು ಹೊಕ್ಕು ಕಾದಾಡುತ್ತಲಿವೆ. ಯಾರಿಗೆ ಬೇಕಾಗಿವೆ ಉತ್ತರ ಎಂದು ಈಗ ರಾಮಣ್ಣನೇನೊ ಉದಾಸೀನಭಾವವನ್ನು ತಾಳು ತ್ತಾನೆ. ಆದರೆ ಎರಡು ವರ್ಷಗಳ ಮುಂಚಿತ ರಾಮಣ್ಣನ ಮನಃಸ್ಥಿತಿ – ಬೇರೆಯಾಗಿತ್ತು. ಈ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ ನಿಚ್ಚಳವಾದ ಉತ್ತರ ಅವನಿಗೆ ಅಗತ್ಯವೆನ್ನಿಸಿತ್ತು. ಒಂದು ದಿನವಂತೂ – ಅಲ್ಲ, ಒಂದು ರಾತ್ರಿ ಎನ್ನಬಹುದು – ಈ ಪ್ರಶ್ನೆಗಳು ತನ್ನನ್ನು ನಿರ್ವಿಣ್ಣ ಮಾಡಿದ್ದುವು. ಒಮ್ಮೆ ಒಂದು, ಒಮ್ಮೆ ಇನ್ನೊಂದು ಉತ್ತರ ಯೋಗ್ಯ ಎನ್ನಿಸುತ್ತಿತ್ತು. ಆ ರಾತ್ರಿ ಹೃದಯದ ಹೊಯ್ದಾಟದಿಂದ ಬುದ್ಧಿ ನಿರ್ವಿಣ್ಣವಾದಾಗ ತಾನು ಪಶುವಿನಂ

ತಾಗಿದ್ದನು. ಪಶುವಿಗೂ ಮಾನವನಿಗೂ ಅಂತರವೆಂದರೆ ಬುದ್ಧಿಯೊಂದೇ, ಬುದ್ಧಿ ನಿಷ್ಕ್ರಿಯವಾದೊಡನೆ ಮಾನವನು ಪಶುವಿನ ಸ್ಥಿತಿಗಿಳಿಯುವನು ಎಂದು ಆ ರಾತ್ರಿ ರಾಮಣ್ಣನು ಕಂಡುಕೊಂಡಿದ್ದನು. ಅಹುದು ಅದೇ ರಾತ್ರಿ, ತನಗೆ ಈ ಶ್ಲೋಕವೂ ನೆನಪಿಗೆ ಬಂದದ್ದು.

ಆ ರಾತ್ರಿ ತಾನು ಕುಮುದಳೊಡನೆ ಪಶುವಿನಂತೆ ನಡೆದುಕೊಂಡಿದ್ದ ಎಂದು ಇಂದು ಎನ್ನಿಸಿದಂತೆ ಅಂದು ಕೂಡ ಎನ್ನಿಸಿತ್ತು. ತಾನು ಯಾಕೆ ಹಾಗೆ ನಡೆದುಕೊಳ್ಳಬೇಕಾಗಿ ಬಂದಿತ್ತೊ? ಹಾಂ – ಅಹುದು. ಅಂದು ತನ್ನ ಮನಸ್ಸು ಕಕ್ಕಾವಿಕ್ಕಿಯಾಗಿತ್ತು. ಈಗ 3–4 ದಿನಗಳಿಂದ ಪ್ರತಿರಾತ್ರಿ ಕೆಲ ಕಾಲವನ್ನು ಕುಮುದಳೊಡನೆ ಕಳೆಯುತ್ತಿದ್ದ. ಇಂದ್ರಿಯ ಸುಖದ ಹವಾಪಿಯೊ? ಎಳೆಹರೆಯದ ಹುಡುಗೆಯ ಸಹವಾಸದಿಂದ ಮೂಡುತ್ತಿದ್ದ ಹೊಸ ಹುರುಪೊ? ಒಂದು ಕಾರಸ್ಥಾನದ ಕೆಲಸವನ್ನು ಸಾಧಿಸಿಕೊಂಡೆನೆಂಬ ಒಳಮನಸ್ಸಿನ ಉಬ್ಬೊ? – ಅಂತೂ ಯಾವುದೊ ಒಂದು ಕಾರಣಕ್ಕಾಗಿ ಆ ಆ ಹೊಸ ಅನುಭವದ ಸವಿ ಅಭ್ಯಾಸವಾಗತೊಡಗಿತ್ತು ಅವನಿಗೆ. ಮೂರು ನಾಲ್ಕು ದಿನಗಳಿಂದ ಆ ಕಾರ್ಯಕ್ರಮ ತಪ್ಪಿರಲಿಲ್ಲ. ಅಂದು ಸುಮಾರು ಹತ್ತೂವರೆ ಗಂಟೆ ರಾತ್ರಿಯಾದ ಮೇಲೆ ಕುಮುದಳ ಕೋಣೆಗೆ ಹೋಗ ಬೇಕೆಂದು ಎದ್ದಿದ್ದ. ಮೆಲ್ಲನೆ ಬಾಗಿಲನ್ನು ತೆರೆದು ತನ್ನ ಕೋಣೆಯಿಂದ ಹೊರಬಿದ್ದು ಬಾಗಿಲನ್ನು ಹಾಗೇ ಮುಚ್ಚಿಕೊಳ್ಳುವಷ್ಟರಲ್ಲಿ ಸರಲೆಯ ಕೋಣೆಯಿಂದ ಆಕೆ ಕೆಮ್ಮಿದ ಸದ್ದು ಕೇಳಬಂದಿತ್ತು. ಅನಪೇಕ್ಷಿತವಾಗಿ ಆದ ಸದ್ದಿನಿಂದ ರಾಮಣ್ಣ ಬೆಚ್ಚಿದ, ಅದಕಾಗಿ ಬಾಗಿಲನ್ನು ಮುಚ್ಚುವ ಕೈ ನಡುಗಿತು, ಬಾಗಿಲು ಸದ್ದಿಲ್ಲದ ಮುಚ್ಚುವುದು ತಪ್ಪಿತು. ಆಗ ತಟ್ಟನೆ ಒಂದು ನಿರ್ಧಾರದಿಂದ ಸರಲೆಯ ಕೋಣೆಗೆ ಹೋದ; ಒಮ್ಮೆಲೆ ತಾನು ತನ್ನ ಕೋಣೆಯಿಂದ ಧಾವಿಸಿ ಬಂದುದಕ್ಕೆ ತನ್ನ ಬಾಗಿಲ ಸದ್ದು ಆಗಿರಬಹುದು ಎಂದು ಯಾರಿಗಾದರೂ ಎನ್ನಿಸಬಹುದಲ್ಲವೆ? ಆದರೆ ಸರಲೆಯ ಕೋಣೆಯಲ್ಲಿ ಕಾಲಿಟ್ಟೊಡನೆ ಅವನ ಅಂತಹ ಎಲ್ಲ ವಿಚಾರಗಳೂ ದೂರಾಗಿ ಸಹಜ ಕಳ-ಕಳಿಯಿಂದಲೆ ಸರಲೆಯ ಕಡೆ ಧಾವಿಸಿದ್ದ. ಆಕೆಯ ಮುಖದಲ್ಲಿ ಆಯಾಸದ ಕಳೆ ಇದ್ದಿತು, ಮುಖ ತುಸು ಕಪ್ಪಿಟ್ಟಂತೆಯೂ ಆಗಿತ್ತು, ಅಶಕ್ತತೆಗಾಗಿ ಉಸಿರಾಡಿಸುವುದು ಕೂಡ ಪರಿಶ್ರಮ ಎಂಬುದಕ್ಕೇನೊ ಎನ್ನುವಂತೆ ಮೂಗಿನ

ಹೊರಳಿಗಳು ಯತ್ನದಿಂದ ಉಸಿರು ಬಿಡುತ್ತಿರುವುದು ಕಂಡುಬಂದಿತ್ತು. ಆದರೂ ತನ್ನನ್ನುನೋಡಿದೊಡನೆ ಸರಲೆ ಮುಗುಳ್ನಗೆ ನಗಲು ಯತ್ನಿಸಿದ್ದಳು. ಎಂತಹ ಜೀವನ! ತನಗೆ ಕಷ್ಟವಾಗುತ್ತಿದ್ದರೂ ಅದನ್ನು ತೋರಗೊಡದೆ ಅನ್ಯರಿಗೆ ಸಂತೋಷವನ್ನುಂಟುಮಾಡುವ ಹಂಬಲ – ಎಂದೆನ್ನಿಸಿ ರಾಮಣ್ಣ ನಿಗೆ ಗಂಟಲಲ್ಲಿ ಏನೊ ಸಿಕ್ಕಂತಾಗಿತ್ತು. ಹೋದವನೆ ಅವಳ ಮಗ್ಗುಲಲ್ಲಿ ಕುಳಿತುಕೊಂಡು ಅವಳ ಹಣೆ – ಮೈಗಳನ್ನು ಮುಟ್ಟಿ ನೋಡತೊಡಗಿದ್ದ.

"ನನಗೇನಾಗೇದ ಇಷ್ಟು ನೀವು ಗಾಬರಿಯಾಗಿ ಓಡಿಬರಲಿಕ್ಕೆ?" ಎಂದಿದ್ದಳು.

ರಾಮಣ್ಣನ ಬಾಯಿಯಿಂದ ಉತ್ತರ ಬಂದಿರಲಿಲ್ಲ.

"ಬರೆಯೋದನ್ನ ಬಿಟ್ಟೇ ಬಂದಿರ್ರ್ಯಾ ಏನು ಮತ್ತೆ?"

"ಅಂಥಾದ್ದೇನು ಮಹತ್ತ್ವದ್ದು ಬರೀತಿದ್ದೆ!" ಎಂದು ಮಾತು ಬದ ಲಾಯಿಸುವವರಂತೆ ರಾಮಣ್ಣ ಉತ್ತರಿಸಿದ್ದ.

"ಖೋಡಿ! ನನ್ನ ಜೀವನ! ತನಗೂ ಸುಖ ಇಲ್ಲ, ಮಂದಿಗೂ ಸುಖ ಇಲ್ಲ!" ಎಂದ ಕಣ್ಣೀರು ತಡೆಯುವ ಯತ್ನವೆಂದು ಮುಖ ಹೊರಳಿಸಿ ಮಗ್ಗುಲಾಗಿದ್ದಳು.

ರಾಮಣ್ಣ ಒಂದು ನಿಮಿಷ ಧ್ಯಾನಸ್ಥನಂತೆ ಕುಳಿತಿದ್ದ. ಜನ್ಮಜನ್ಮಾಂ-ತರಗಳ ಅಭ್ಯಾಸದಿಂದಲೊ ಏನೊ ಎನ್ನುವಂತೆ ಅವನ ಕೈ ವಾತ್ಸಲ್ಯದ ತಂಗಾಳಿಯಂತೆ ಅವಳ ಬೆನ್ನ ಮೇಲೆ ಸೂಸುತ್ತಿತ್ತು. ಕೆಲವು ನಿಮಿಷ ಸರಲೆಯೂ ನಿಶ್ಶಬ್ದವಾಗಿ ಮಲಗಿದ್ದಳು. ರಾಮಣ್ಣನ ಸ್ಪರ್ಶವು ಅವಳ ದುಃಖದ ಬೇಗೆಯನ್ನು ನೊಂದಿಸಿತ್ತು. ಆ ಮೌನದಲ್ಲಿ ಅವೆರಡೂ ಹೃದಯ ಗಳು ಪರಸ್ಪರವಾಗಿ ಸಮ್ಮಿಲಿತವಾದಂತಾಗಿದ್ದುವು. ಕೆಲವು ನಿಮಿಷಗಳ ತರುವಾಯ ರಾಮಣ್ಣನೆ ಮೊದಲು ಮಾತನಾಡಿದ್ದ.

"ಯಾಕ, ಸರಲಾ, ಏನಾದರೂ ಹೆಚ್ಚು ಕಡಮೆ ತ್ರಾಸ ಆಗಿದೆ ಏನು?"

ಮಲಗಿದಲ್ಲಿಯೆ ತಲೆಯನ್ನಲ್ಲಾಡಿಸಿ ಏನೂ ಇಲ್ಲ ಎಂದು ಸರಲೆ ಸೂಚಿಸಿದ್ದಳು.

"ಮತ್ತೆ? ಇಷ್ಟೊತ್ತಾದರೂ ನಿನಗೆ ನಿದ್ದೆ ಬಂದಿಲ್ಲಲ್ಲ?" ಅಷ್ಟರಲ್ಲಿ

ಒಳಗೆ ಏನೊ ಮುಳ್ಳು ಚುಚ್ಚಿದಂತಾಗಿ, "ನನಗ ಕರೀಬೇಕಾಗಿತ್ತು" ಎಂದಿದ್ದ.

ಸರಲೆ ಸುಮ್ಮನಿದ್ದಳು.

ರಾಮಣ್ಣ ಮೆಲ್ಲನೆ ಅವಳನ್ನು ಬೆನ್ನ ಮೇಲಾಗುವಂತೆ ಮಲಗಿಸುತ್ತ, ಅವಳ ಗದ್ದವನ್ನು ಎಡಗೈಯಿಂದ ಎತ್ತಿ ಹಿಡಿಯುತ್ತ ಹಟದಿಂದ ಕೇಳಿದ್ದ:—

"ಏನಾಗೇದ ಹೇಳು" ಎಂದು.

"ಏನೂ ಇಲ್ಲ"

"ಊಹುಂ. ಸುಳ್ಳು ಹೇಳುವೆ. ಮುಖದ ಮ್ಯಾಲೆ ಕಾಣಿಸ್ತದೆ ಏನೊ ಆಗಿರಬೇಕು ಅಂತ ?"

"ಏ-ನೂ-ಏ-ನೇ-ನೂ ಇಲ್ಲ" ನಕ್ಕಿದ್ದಳು.

"ಹಾಗಿದ್ದರೆ ನಿದ್ದೆ ಯಾಕ ಬರಲಿಲ್ಲ ?"

"ಅದೂ ಆದ್ರೂ ಎಷ್ಟಂತ ಬಂದೀತು? ವರ್ಷಾನುವರ್ಷ ನಡೆದೇ ನಡೆದಿದೆ. ಎಂದು ಮುಗೀತದೊ ಏನೊ!"

"ಛಿ! ಹುಚ್ಚಿ! ಅಂಥಾ ಯಾವ ವಿಚಾರನೂ ಮಾಡಬ್ಯಾಡ ಅಂದ್ರ ಮತ್ತ ಅದನ್ನೆ ತಲೇ ವಳಗ ತುಂಬಿಕೊಂಡು ಕೂಡುವೆ!"

"ನಾ ಆದ್ರೂ ಏನ್ಮಾಡಲಿ ? ನನಗೇ ಇಷ್ಟು ಬ್ಯಾಸರ ಆಗೇದ, ಇನ್ನು ಮುಂದಿಗೆಷ್ಟು ಬ್ಯಾಸರ ಆಗಿರಬಾರದು ?"

"ನಿನಗ ಮಲಗಿದಲ್ಲಿಯೆ ಮಲಗಿಕೋಬೇಕಾಗ್ತದ ಅಂತ ಬ್ಯಾಸರ ಆಗಿರಬಹುದು. ನಮಗೇನು ಧಾಡಿ ಬ್ಯಾಸರ ಆಗ್ಲಿಕ್ಕೆ? ಮ್ಯಾಲೆ, ನೀನು ಸುಧಾರಿಸುವೆ ಅಂಬೋ ಆಶಾದಿಂದ ಕ್ಷಣಧಾಂಗ ಕಳೆದುಹೋಗ್ತಾವ ದಿನಗಳು."

"ನಾನು ಸುಧಾರಿಸೇನು ಅಂಬೋದು ಹುಚ್ಚು ಕಲ್ಪನಾ. ನೋಡಿರಲ್ಲ, ನೀವೇನು ಕಡಿಮೆ ಮಾಡ್ತೀರಾ ? ಎಲ್ಲಾ ತರದ ಬಾಟ್ಲ ಆದುವು, ಯಾವಾವೊ ಇಂಜೆಕ್‌ಶನ್ ಆದುವು, ಯಾವ ಛಲೋ ಡಾಕ್ಟರನೂ ಉಳೀಲಿಲ್ಲ — "

"ಅಂದ್ರೇನು ? ನೀನು ಸುಧಾರಿಸೋದೇ ಇಲ್ಲ ಅಂತ ಗೊತ್ತಿದ್ದೂ ನಾ ಇದನ್ನೆಲ್ಲ ನಡೆಸೀನೇನು ?"

"ಪಾಪ! ನೀವು ನಿಂ ಕರ್ತವ್ಯ ಮಾಡಿದಿರಿ. ಆದರೆ ಇದು ನೆಟ್ಟಗಾಗೋ ಜಡ್ಡೇ ಇದ್ದಿಲ್ಲ ಅಂದರೆ ಯಾರೇನು ಮಾಡ್ತಾರ ?"

ರಾಮಣ್ಣ ನಗೆಯಿಂದ ಆ ವಿಚಾರವನ್ನು ಹೊಡೆದು ಹಾಕಲು ಯತ್ನಿಸಿದ್ದ: "ಕರ್ತವ್ಯ ಅಂದ್ರ ? ಇಷ್ಟು ವರ್ಷ ಈಕೆ ನನ್ನ ಹೆಂಡತಿ ಅಂತ ಅಡಿಗೆ ಮಾಡಿ ಊಟಕ್ಕ ಹಾಕತಿದ್ದಳು, ಸಂಸಾರ ಸುಖ ಒದಗಿಸತಿದ್ದಳು, ಇಷ್ಟು ನನ್ನ ಹರಿದ ಬಟ್ಟೆ ಹೊಲಿದು ಕೊಟ್ಟಿದ್ದಳು, ಇಷ್ಟು ಶರ್ಟಿಗೆ ಒಡೆದ ಗುಂಡಿ ಹಚ್ಚಿಕೊಟ್ಟಿದ್ದಳು ಅಂತ ಲೆಕ್ಕ ಹಾಕಿ – ಈಕೆಗೆ ಆ ಲೆಕ್ಕದ ಪ್ರಕಾರ ಇಷ್ಟು ದಿವಸ, ಇಷ್ಟು ಬಿಲ್ ಆಗೋತನಕ ಔಷಧ ಕೊಡಿಸಬೇಕು, ಮುಂದ – "

"ನಾಕು ತಗೀರಿ! ನಾ ಹಾಂಗ ಹೇಳಿಲ್ಲ ಅನ್ನೋದೇನು ಗೊತ್ತಿಲ್ಲ ನಿಮುಗ ? ಆದರೆ ಸಾಯೋ ಗಿಡಕ್ಕ ಸೇದಿ ನೀರು ಹಾಕೋದು ಶಾಣೇತನ ಅಲ್ಲ ಅಂತ—"

"ಇಲ್ಲಿ ನೋಡು, ಸರಲಾ; ನೀನು ಸಾಯೋ ವಿಚಾರ ಬಿಡು, ಬದುಕೋದು ಹ್ಯಾಂಗ ಅಂಬೋದನ್ನ ನೋಡಿಕೊಳ್ಳೋದು ನನ್ನ ಜವಾಬ್ದಾರಿ. ಆಯ್ತಿಲ್ಲೊ? ಮತ್ತ ಇನ್ನೊಂದು ಮಾತು, ಚೇಳು ಕಣ್ಣಿಗೆ ಬಿದ್ದ ಕೂಡಲೆ 'ಆಸ್ತಿಕ, ಆಸ್ತಿಕ' ಅಂದ್ಬಿಡು."

"ಅಂದ್ರ ?" ಎಂದು ನಗೆಮೊಗದಿಂದ ಕೇಳಿದ್ದಳು.

"ಇಂಥಾ ಕೆಟ್ಟ ವಿಚಾರ ಬರೋದು ಅಂತ ಸಂಶಯ ಬಂದ ಕೂಡಲೆ ನನ್ನ ಕರೆದುಬಿಡು, ನಾ ಬಂದ್ಕೊಡ್ತೀನಿ ನಿನಗ ನಿದ್ದೆ ಬರೋತನಕ."

ಒಂದರೆ ನಿಮಿಷ ಸುಮ್ಮನಿದ್ದು, ಉಸುರ್ಗರೆದು ಸರಲೆ "ಅದನ್ನೆ ನಾ ಹೇಳೋದು" ಎಂದಿದ್ದಳು.

"ಅದನ್ನ ಹೇಳೋದಂದ್ರ ?" ರಾಮಣ್ಣನಿಗೆ ಸಂದರ್ಭ ತಿಳಿದಿರಲಿಲ್ಲ.

"ಮತ್ತ ಮಂದಿಗೆ ತ್ರಾಸ ಕೊಡೋದು, ಅಂದೆ."

"ಇಲ್ಲಿ ಬಂದು ಕೊಡೋದು ತ್ರಾಸ ಅಂದೆನೆ ನಾ ?"

"ನೀವು ಅನ್ನಲಿಲ್ಲ, ನಿಮುಗ ಅನ್ನಿಸಲಿಕ್ಕಿಲ್ಲ ಹಾಂಗ, ಆದರೂ ನೀವು ಬರೀತಾ ಕೂತಾಗ ನಿಮ್ಮನ್ನ ನಾ ಕರೀಲಾರೆ."

"ನನ್ನಕಿಂತ ನಿನಗೇ ಮಹತ್ತ್ವದ್ದಾಗೇದೇನು ನಾನು ಬರೆಯೋದು ?"

"ಯಾಕಾಗಬಾರದು ? ನಿಂ ಬರೆಯೋದರಿಂದ ನಿಮುಗೂ ಸುಖ ಅದ,

ಜನರಿಗೂ ಸುಖ ಅದ. ಅದನ್ನ ಬಿಟ್ಟು ಇಂದೊ ನಾಳೆಯೊ ಅನ್ನೊ ನನ್ನ ಮಗ್ಗುಲಿಗೆ ಮೂಲೆ ಹಿಡಿದು ಕೂತರೆ ಏನ್ಮಾಡಿಧಾಂಗಾಯ್ತು?"

"ನೀನೇ ಲೇಖಕ ಆಗಿದ್ದರೆ ನಿನ್ನ ಮನೆಯವರದು ಗೋಳಿತ್ತು." ಎಂದು ರಾಮಣ್ಣ ನಕ್ಕು ಆಕೆಯನ್ನೂ ನಗಿಸಿ ಆ ವಿಚಾರವನ್ನೆ ಮರೆಯಿಸಿ ಬಿಟ್ಟಿದ್ದ.

"ಆದರೂ – ಯಾಕೊ ಏನೊ ? – ನಾಲ್ಕಾರು ದಿವಸಗಳಿಂದ ಮನಸ್ಸಿನೊಳಗ ಏನೇನೊ ವಿಚಾರ ಬರ್ತಾವ. ನಾನೂ ಎಷ್ಟು ಪ್ರಯತ್ನಮಾಡ್ತೀನಿ–"

"ಇಲ್ಲಿ ನೋಡು, ಸರಲಾ, ಬಂದ ವಿಚಾರ ತ್ರಾಸ ಕೊಡಲಾರಧಾಂಗ ನಿನಗೊಂದು ಯುಕ್ತಿ ಹೇಳಿಕೊಡ್ತೀನಿ. ಬರೋದೊಂದೇ ತಡ ಅದನ್ನ ಹೊರಗ ಹಾಕಿಬಿಡಬೇಕು; ವಿಚಾರ ಬರೋದಂದ್ರ ಸೀನು ಬಂಧಾಂಗ, ಒಳಗ ತಡೆದುಕೊಂಡು ಕೂತರ...."

"ಹೊರಗ ಹಾಕೋದಂದ್ರ ಏನು? ಕೆಮ್ಮೋದೊ ? ಸೀನು ಬಿಡೋದೊ ?"

"ಇನ್ನೊಬ್ಬರಿಗೆ – ಅಂದ್ರೆ ನನಗೆ – ಹೇಳೋದು. ಆಗಲಿ, ಹೇಳು ನೋಡೋಣ. ನಿನ್ನೆ ಮೊನ್ನಿನ ವಿಚಾರ ಸದ್ಯಕ್ಕಿರಲಿ. ಈ ಹೊತ್ತು ಬಂದ ವಿಚಾರ ಹೇಳು."

"ಊಹುಂ"

"ನೋಡಿದೆಯಾ? ಔಷಧ ಒಲ್ಲೆ ಅಂದು ಜಡ್ಡು ನೆಟ್ಟಗಾಗೋದಿಲ್ಲ ಅಂಥಾಂಗ."

"ನೀವು ನಗ್ತೀರಿ"

"ಇಲ್ಲ"

"ನೀವು ಸಿಟ್ಟಿಗೇಳ್ತೀರಿ."

"ಇಲ್ಲ....ಎಲ! ಇಲ್ಲಾ ನಗಿಸೋದು, ಇಲ್ಲಾ ಸಿಟ್ಟಿಗೆಬ್ಬಿಸೋದು ಅಂದ್ರ ನಿನ್ನ ವಿಚಾರ ಆದ್ರೂ ಎಂಥಾದಿದ್ದಿರಬೇಕು ಅಂತೀನಿ!"

"ಇಷ್ಟಾಗಿ ಹೇಳಿದರೂ ಏನು ಉಪಯೋಗ ?"

"ಮೊದಲು ಹೇಳು, ಅದರ ಉಪಯೋಗ ಏನು ಅಂಬೋದನ್ನ ಹೇಳಿದೆನಲ್ಲ ನಾನು ?"

"ಉಹುಂ. ಬರೇ ಬಾಯಿಯಿಂದ ಆಡಿದರೆ ಹೋಗೋ ವಿಚಾರ ಅಲ್ಲ."

"ಏನ್ಮಾಡಿದ್ರ ಹೋಗ್ತಾವಂತೀ ಹೇಳು."

"ನೀವು ಅವನ್ನ ನಡೆಸಿಕೊಡ್ತೀನಿ ಅಂದ್ರ—" ಎಂದು ತಡೆದು, "ಸಾಕು ಸುಮ್ಮಸುಮ್ಮನೆ ನೀವಾದರೂ ಯಾಕೆ ಹೊತ್ತು ಕಳೀತೀರಿ? ಹನ್ನೊಂದು ಹೊಡೀಲಿಕ್ಕೆ ಬಂದಿತು. ನನಗೂ ಇನ್ನು ನಿದ್ದೆ ಬರೋಹಾಂಗ ಕಾಣ್ತದ." ಎಂದಿದ್ದಳು.

ಒಂದೆರಡು ನಿಮಿಷ ರಾಮಣ್ಣ ಮೌನದಿಂದಲೆ ಅವಳನ್ನು ದಿಟ್ಟಿಸ್ಸಿ ನೋಡಿದ್ದ. ಕ್ರಮೇಣ ಅವನ ಮುಖದಲ್ಲಿ ಮುಗುಳ್ನಗೆ ಮೂಡಿತ್ತು. ಹೃದಯುವೆ ಹೊರಬಿದ್ದಿದೆ ಏನೊ ಎನ್ನುವಷ್ಟು ನಯಸ್ಪರ್ಶದಿಂದ ಅವನ ಕೈ ಅವಳ ಹಣೆಯ ಮೇಲೆ ಸುಳಿಯಿತು. ಮೆಲ್ಲನೆ ಅವಳ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿರಿಸಿಕೊಂಡ. ಹಾಗೇ ಅವಳ ಮುಖವನ್ನು ದಿಟ್ಟಿಸುತ್ತಿದ್ದ. ಅವಳೂ ಕಣ್ಣಳನ್ನು ಮೇಲೇರಿಸಿ ಅವನ ಮುಖವನ್ನು ದಿಟ್ಟಿಸಿದಳು. ದೃಷ್ಟಿಗೆ ದೃಷ್ಟಿ ಕೂಡಿತು, ಮತ್ತೆ ಹೃದಯದಲ್ಲಿ ಹೃದಯ ಬೆರೆಯಿತು. ಅವಳ ಹೃದಯಾಂತರಾಳದಲ್ಲಿದ್ದ ವಿಚಾರ ತಟ್ಟನೆ ರಾಮಣ್ಣನಿಗೆ ಹೊಳೆಯಿತೇನೊ!

"ಅದೊಂದನ್ನ ಬಿಟ್ಟು ಬೇಕಾದ್ದಿರಲಿ, ನಡೆಸಿಕೊಡ್ತೀನಿ" ಎಂದಿದ್ದ ನಗೆಮೊಗದಿಂದ.

"ಯಾವುದೊಂದನ್ನ ಬಿಟ್ಟು?" ಆಕೆಯೂ ಕೆಣಕುವ ದನಿಯಲ್ಲಿ ಕೇಳಿದ್ದಳು.

"ಈಗ ನಿನ್ನ ಮನಸ್ಸಿನಾಗ ಏನದ, ಅದನ್ನ!"

"ನನಗ ಗೊತ್ತೇ ಇತ್ತು!" ಎಂದು ಸರಲೆ ಉಸುರ್ಗರೆದಿದ್ದಳು.

"ಅದು ಶಕ್ಯ ಇಲ್ಲ ಅಂತ ನಿನಗ ಎಂದೋ ಗೊತ್ತಿರಬೇಕಿತ್ತು."

"ಯಾವುದು ಶಕ್ಯ ಇಲ್ಲ ಅಂತೀರಿ ಹೇಳಿರಲ್ಲ?" ಹಣ್ಣಾದರೂ ದನಿಯಲ್ಲಿ ಹಟವಿದ್ದಿತು.

"ಯಾವುದೆಂದರೇನು? ಇಲ್ಲಿ ನೋಡು, ಸರಲಾ, ನಿನಗ ಏನೂ ಆಗೋದಿಲ್ಲ. ನೀನು ಆ ವಿಚಾರ್ನೆ ಬಿಟ್ಟುಬಿಡು."

"ಏನೂ ಆಗೋದಿಲ್ಲ!" ಸರಲೆ ತನ್ನಷ್ಟಕ್ಕೆ ಮಾತನಾಡುವಂತೆ ತನ್ನ

ಶಬ್ದಗಳನ್ನು ಪುನಃ ಉಚ್ಚರಿಸಿದ್ದಳು. "ಏನು ಸುಖದ ವಿಚಾರ ಅಂತ ಹೇಳ್ತೀರಿ, ಏನೂ ಆಗೋದಿಲ್ಲ, ಅಂತ? ವರ್ಷದ ಮ್ಯಾಲಾಯಿತು ಹೀಂಗ ಬಿದ್ದುಕೊಂಡು. ಮನೆ ಅಂದರ ಭಣಭಣ ಅಂತದ. ನನ್ನಿಂದ ಅದಕ ಯಾವ ವೈಭವಾನೂ ಸಿಗಲಿಲ್ಲ. ಏನೂ ಆಗೋದಿಲ್ಲ ಅಂದರೂ ಸಿಗೋ ಹಾಂಗಿಲ್ಲ. ನೀವೇನೂ ಮುದುಕರ ತದುಕರ? ಮಕ್ಕಳಿಲ್ಲದ ಮನೆ ಎಂಥಾದ್ದು?"

"ಹುಚ್ಚಿ! ಮೊದಲು ಹೆಂಡತಿ ಇದ್ದರೇನೆ ಮಕ್ಕಳ ಮಾತಲ್ಲ?"

"ನನ್ನಂಥಾ ಹೆಂಡತಿ ಇದ್ದರ ಆ ಮಾತೇ ಏಳೋದಿಲ್ಲ."

ರಾಮಣ್ಣ ಈಗ ಏನೂ ಉತ್ತರ ಕೊಡದಂತಾಗಿದ್ದ. ಆಗಾಗ ಸರಲೆ ಈ ಮಾತನ್ನು ಹೇಳುತ್ತಿದ್ದಳಾದರೂ ಸದ್ಯದ ಸಂದರ್ಭದಲ್ಲಿ ಆ ಮಾತಿಗಾಗಿ ಅವನಿಗೆ ಏನೂ ತೋಚದಂತಾಗಿತ್ತು. ಯಾವುದೊ ಒಂದು ಒಳಗಿನ ಹೆದರಿಕೆಗಾಗಿ ತಾನು ಈ ಬಳಲಿಕೆಯಿಂದ ಪಾರಾಗುವುದಿಲ್ಲ ಎಂದು ಸರಲೆ ತಿಳಿದುಕೊಂಡಿದ್ದಳು. ಆಕೆಯ ಆ ವಿಚಾರವನ್ನು ತೆಗೆದುಹಾಕುವುದು ರಾಮಣ್ಣನಿಗೆ ಶಕ್ಯವಾಗಿರಲಿಲ್ಲ. ಆ ವಿಚಾರ ಅವನಿಗೂ ಬೇಡಾಗಿತ್ತು. ಎಷ್ಟೊ ಸಲ ಆ ವಿಚಾರದಿಂದ ಅವನಾದರೂ ಒಳಗಿಂದೊಳಗೆಯೆ ಹೆದರಿದ್ದ. ಈಗ ಕೂಡ ಅವನ ಮೈ ನಡುಗಿತ್ತು.

"ಯಾಕ?" ಮೈ ನಡುಗಿದ್ದು ಸರಲೆಗೆ ಗೊತ್ತಾಯಿತೇನೊ?

ರಾಮಣ್ಣ ಆಗ ತುಸು ಸಿಟ್ಟಿನ ದನಿಯಲ್ಲಿಯೆ ಹೇಳಿದ್ದ: "ನಿನ್ನ ಸಲುವಾಗಿ ಕೆಟ್ಟ ವಿಚಾರ ಬಂದರೇನೇ ನನ್ನ ಮೈ ನಡಗತದ, ಆ ವಿಚಾರವನ್ನ ಆಡಿತೋರಿಸೋದಂತೂ ಇರಲಿ. ನಾನಾದರೂ ಏನ್ಮಾಡಲಿ ಹೇಳು, ಸರಲಾ?" ಎಂದು ಹತಾಶನ ದನಿಯಲ್ಲಿ ಅವನ ಬಾಯಿಯಿಂದ ಶಬ್ದಗಳು ತಡವರಿಸಿದ್ದುವು.

ಮಲಗಿದಲ್ಲಿಯೆ ತನ್ನ ಕೈಯನ್ನೆತ್ತಿ ಅವನ ಗಲ್ಲವನ್ನು ನೇವರಿಸುತ್ತ, ನಗೆಯಿಂದ ಸರಲೆ ಹೇಳಿದ್ದಳು: "ಅಯ್ಯ! ಈಗ ಯಾರಿಗೆ ಹುಚ್ಚ ಅನ್ನ ಬೇಕೊ! ಕೆಟ್ಟ ವಿಚಾರ ಅಂತ! ನಾ ಯಾಕ ಕೆಟ್ಟ ವಿಚಾರ ಹೇಳಲಿ? ನಾನು ಸತ್ತಮ್ಯಾಲೆ ನೀವು ಏನ್ಮಾಡ್ತೀರೊ ಯಾರು ನೋಡಲಿಕ್ಕೆ ಬಂದಾರು? ನಾನು ಸಾಯಬಾರದು, ನನ್ನಕಣ್ಮುಂದೇ ನನ್ನ ವಿಚಾರ ನಡೆಸಿಕೊಡ್ಬೇಕು –"

ಸರಲೆಯ ಮಾತನ್ನು ಪೂರ್ತಿಯಾಗಿ ಕೇಳಿಕೊಳ್ಳದೆ, ಮೊದಲಿನ ಶಬ್ದಗಳಿಂದಲೆ ಉತ್ಸಾಹಭರಿತನಾಗಿ "ಹಾಂಗಿದ್ರ ಹೇಳು, ಬೇಕಾದ್ದನ್ನ ನಡೆಸಿಕೊಡ್ತೀನಿ" ಎಂದಿದ್ದ. ಎಂತಹ ಪ್ರಮಾದವೆನ್ನಿಸಿತ್ತದು! ತನ್ನ ಬಾಯಿಯಿಂದ ಶಬ್ದಗಳು ಹೊರಡುವುದೊಂದೇ ತಡ, ಸರಲೆಯು,

"ಆ ಭಾಗ್ಯ ನೋಡ್ಲಿಕ್ಕೆ ದೇವರು ನನಗೂ ಆಯುಷ್ಯ ಕೊಡಲಿ, ಖರೇನೇ ನಡೆಸಿಕೊಡ್ತೀರಾ? ಖರೇನೆ? –" ತಾನು ತಲೆ ತೂಗುತ್ತಿದ್ದಿರ ಬೇಕು ಆಗ – "ಹಾಂಗಿದ್ದರ ಇನ್ನೊಂದು ಹೆಂಡ್ತೀನ್ನ — "

"ಆಂ!" ಎಂದು ಸಿಡಿಲು ಬಡೆದವನಂತೆ ಬೆಚ್ಚಿಬಿದ್ದಿದ್ದ.

"ಇಲ್ಲ. ನಿಮಗ ಕೈಮುಗಿದು ಹೇಳ್ತೀನಿ. ನನ್ನ ವಿಚಾರ ಅದು. ನನ್ನ ಸಲುವಾಗಿ ನಡೆಸಿಕೊಡ್ತೀರಾ? ಈ ಮನೇವಳಗ ಮಕ್ಕಳು ಮರಿ ಓಡಾಡೋದನ್ನ ನೋಡಿ ಸಾಯ್ಬೇಕು ಅಂತ — "

ಯಂತ್ರದಂತೆ ತಾನು ತಲೆಯನ್ನು ಅಲ್ಲಾಡಿಸುತ್ತಿದ್ದ, "ಆಗದು, ಆಗದು" ಎಂದು ಒಳಗೆ ಹೃದಯ ಬಡೆದುಕೊಳ್ಳುತ್ತಿತ್ತು.

"ಅಷ್ಟು – ಅಷ್ಟಾದರೆ ನಾ ಸುಖದಿಂದ ಕಣ್ಮುಚ್ಚತೀನಿ" ಹೃದಯದ ಸೆರಗೊಡ್ಡಿ ಬೇಡಿಕೊಳ್ಳುವಂತೆ ಸರಲೆ ನುಡಿದಳು.

"ಈಗ ಇದ್ದುದರ ಮುಂದೆ ಬೇರೆ ನನಗ ಯಾವ ಸುಖಾನೂ ಇಲ್ಲ" ಎಂಬ ಶಬ್ದಗಳು ಅವನ ಬಾಯಿಯಿಂದ ಹೊರನುಗ್ಗಿದ್ದುವು.

ಇಬ್ಬರೂ ಮಾತನಾಡುವಂತಿರಲಿಲ್ಲ. ಸರಲೆಯ ಕಣ್ಗಳಲ್ಲಿ ನೀರಿನ ಹನಿಗಳು ಮಿಂಚಿದ್ದುವು. ರಾಮಣ್ಣನಿಗೆ ಬಹಳ ವ್ಯಥೆಯಾಗಿತ್ತು. "ಸರಲಾ, ಸರಲಾ, ನನಗೂ ಎಷ್ಟು ನೋವಾಗ್ತದ ಅಂಬೋದನ್ನ ನೋಡ್ಬಾರ್ದ್ದ?" ಎಂದಿದ್ದ. ಆ ಮಾತಿಗ ಸರಲೆ ಒಮ್ಮೆಲೆ ಚಿಮ್ಮುತ್ತಿರುವ ದುಃಖವನ್ನು ತಡೆದುಕೊಂಡು ಸಮಾಧಾನದ ದನಿಯಲ್ಲಿ "ನಿಮಗ ನೋವಾಗ್ತಿದ್ದರ ಈಗ ಆ ಮಾತೇ ಬ್ಯಾಡ" ಎಂದಿದ್ದಳು; ನಗೆಮೊಗದಿಂದ ತನ್ನನ್ನೆ ಸಂತೈಸಿದ್ದಳು.

ಇಷ್ಟೊತ್ತು ಮಾತನಾಡಿದ್ದಕ್ಕೆ ಆಯಾಸವಾಗಿತ್ತೊ, ವಿಚಾರ ಹೊರ ಬಿದ್ದುದಕ್ಕೆ ನೆಮ್ಮದಿ ಎನಿಸಿತ್ತೊ, ಅಂತೂ ಸರಲೆ ಕೂಸಿನಂತೆ ಮುಂದೆ ಎರಡೇ ನಿಮಿಷಗಳಲ್ಲಿ ನಿದ್ರೆ ಹೋಗಿದ್ದಳು. ಕೆಲ ನಿಮಿಷ ತಡೆದು ರಾಮಣ್ಣ

ಮೆಲ್ಲನೆ ಅವಳ ತಲೆಯನ್ನು ತಲೆದಿಂಬಿನ ಮೇಲಿರಿಸಿ ತುದಿಗಾಲಿನಿಂದ ಹೊರಬಿದ್ದಿದ್ದ.

ಬಹುದೂರದ ವರೆಗೆ ಪ್ರವಾಸಮಾಡಿ ಒಂದು ಅಪರಿಚಿತ ಸ್ಟೇಶನ್‌ದಲ್ಲಿ ಇಳಿದುಕೊಂಡರೆ ಆಗುವಂತೆ ರಾಮಣ್ಣನು ದಿಗ್‌ಭ್ರಾಂತನಾಗಿದ್ದ – ಸರಲೆಯು ಕೋಣೆಯಿಂದ ಹೊರಬಿದ್ದೊಡನೆ. ಇದೇನು? ಎಲ್ಲಿಗೆ ಬಂದಿರುವೆ? ಇಲ್ಲವೆ ಎಲ್ಲಿಗಾದರೂ ಹೊರಟಿರುವೆನೆ? ಎನ್ನುವವನಂತೆ ಕಳೆಗೇಡಾದ ಕಣ್ಣುಗಳಿಂದ ಅತ್ತಿತ್ತ ಪಿಳಿಪಿಳಿ ನೋಡುವಾಗ ಕುಮುದಳ ಕೋಣೆಯ ಬಾಗಿಲು ಕಂಡಿತು. ಹಾಂ – ಎಷ್ಟೋ ದಿನಗಳ ಮುಂಚೆ – ಅಲ್ಲ, ಕೆಲವು ನಿಮಿಷಗಳಿಗೆ ಮುಂಚಿತ ತಾನು ಹೊರಟದ್ದು ಆ ಕೋಣೆಗೆ ಎಂದು ಅತ್ತ ಹೊರಡುವಷ್ಟರಲ್ಲಿ "ಛಿ! ಇದೆಂತಹ ವಿಚಾರ!" ಎಂದವನೆ ಬಿರಿಬಿರಿ ನಡೆದು ತನ್ನ ಕೋಣೆಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಕುಳಿತಿದ್ದ. ಆದರೆ ಮನಸ್ಸು ಕಲಕಿದಂತಾಗಿತ್ತು, ಯಾವುದೊ ಒಂದು ಅನಮಾಧಾನವು ಅವನನ್ನು ಕುಳಿತಲ್ಲಿ ಕೂಡ್ರಗೊಡಲೊಲ್ಲದು, ಏನೊ ಹುಡುಕುವವನಂತೆ ಆದರೆ ಶೂನ್ಯದೃಷ್ಟಿಯಿಂದ ಅತ್ತಿತ್ತ ಸುಳಿದಾಡಿದನು. "ಇದೊಂದು ದಿನ ಹೋಗಿ ಬಂದರಾಯಿತು" ಎಂದುಕೊಂಡಿದ್ದ. ಆದರೂ ಕಾಲ್ಗಳು ಕೇಳಲೊಲ್ಲವು. ಸರಲೆಯು ಬೇಡಿಕೆಯ ಆ ದೀನವಾಣಿಯು ಇನ್ನೂ ಅವನ ಕಿವಿಯೊಳಗಿಂದ ಎದೆಗೆ ತಟ್ಟಿದ್ದು ಹೊರಗೆ ಬಂದಿರಲಿಲ್ಲ. ಇಂದು ಇಷ್ಟೊಂದು ಕಕ್ಕುಲಾತಿಯಿಂದ ಬೇಡಿಕೊಂಡಳೇಕೆ? "ನನ್ನ ನಲುವಾಗಿ" ಎಂದಳು, "ಅಷ್ಟಾದರೆ ಸುಖದಿಂದ ಕಣ್ಮುಚ್ಚೇನಿ" ಎಂದಳು. ಯಾಕೆ? ಆಕೆಗೆ ತಿಳಿದಿರಬಹುದೆ? ಬೇನೆಯ ಬಳಲಿಕೆಯಿಂದ ಹಣ್ಣಾದ ಆ ಸ್ತ್ರೀ ಹೃದಯಕ್ಕೆ ತನ್ನ ವಂಚನೆಯಿಂದ ಎಂತಹ ಆಘಾತವಾಗಿರಬೇಕು? ಅಥವಾ, ತಿಳಿದಿರಲಿಕ್ಕಿಲ್ಲ. ಮುಂಚೆ ಕೂಡ ಆಕೆ ಇದೇ ಮಾತನ್ನು ಹೇಳುತ್ತಿದ್ದಳು. ಆದರೆ ಇಂದು ಇಷ್ಟೊಂದು ದೀನವಾಣಿ ಇದ್ದಿತಲ್ಲ? ತಾನು ಜೀವದಿಂದಿರುವಾಗಲೆ ಇದು ನಡೆಯಬೇಕು ಎಂದಳಲ್ಲ? ಓಹೊ – ತನ್ನ ಸಂಬಂಧಿಕಳಾದ ಕುಮುದಳನ್ನೆ ಮದುವೆಯಾಗಬೇಕೆಂದು ಆಕೆಯ ಮನಸ್ಸಿನಲ್ಲಿದ್ದಿರಬಹುದೆ? ಮುಂದೆ ಮತ್ತೆ ಯಾರನ್ನಾದರೂ ಮದುವೆ ಯಾದೇನೆಂದು ಹೆದರಿ ತನ್ನ ಜೀವಮಾನದಲ್ಲಿಯೆ ನಡೆಯಬೇಕೆಂದು ಹಂಬಲಿಸುತ್ತಿರುವಳೆ? ಪಾಪ! ಎಂತಹ ಶುದ್ಧ ಅಂತಃಕರಣ! ಎಂತಹ

ಸರಲ ಸ್ವಭಾವ ! ಇಂತಹ ಹೆಂಡತಿಯ ಅನುಭವವನುಂಡ ನಾನು ಇನ್ನೊಂದು ಮದುವೆಯಾಗುವನೆಂದು ಇವಳು ತಿಳಿದಳಾದರೂ ಹೇಗೆ ? ಹೃದಯದ ಸಂಭ್ರಮವು ಹೆಗುರಾಗಿ ಈಗ ರಾಮಣ್ಣನು ತನ್ನ ವಿಚಾರಕ್ಕಾಗಿ ತಾನೇ ನಕ್ಕಿದ್ದನು. ಇನ್ನೊಂದು ಮದುವೆಯಂತೆ ! ಎಂತಹ ಮುಗ್ಧೆ ಈ ಸರಲೆ ! ತನಗೆ ಇನ್ನೊಂದು ಮದುವೆಯೆ ಇಲ್ಲ. ಬೇರೆ ಯಾರೊಡನೆ ಮದುವೆ ಯಂತೂ ಇರಲಿ, ಕುಮುದಳು ಕೂಡವೂ—ಆಗ ರಾಮಣ್ಣನಿಗೆ ಮತ್ತೆ ದಿಗ್‌ಭ್ರಮೆಯಾದಂತಾಗಿತ್ತು. ಇದೇನು ಹೀಗೆ ವಿಚಾರಗೊಂದಲದಲ್ಲಿ ಸಿಕ್ಕಿಕೊಂಡೆ ನಾನು—ಎಂದುಕೊಂಡಿದ್ದ. ಕುಮುದಳನ್ನೂ ಮದುವೆಯಾ ಯಾಗುವುದಿಲ್ಲ ಎಂಬ ವಿಚಾರ ತನಗೆ ಬಂದಿತಲ್ಲ ? ಆದರೆ ಈಗ ಕುಮುದಳ ಕೋಣೆಗೆ ಹೊರಟಿರುವನಲ್ಲ ? ಯಾಕೆ ತಾನು ಅಲ್ಲಿಗೆ ಹೋಗುವುದು ? ಅಂತಹ ಉದ್ದೇಶದಿಂದ ಹೋಗಬಯಸುವ ತನ್ನ ಮನಸ್ಸು ಆಕೆಯನ್ನು ಮದುವೆಯಾಗಲು ಒಲ್ಲೆನ್ನುವುದು ! ಛೆ ! ಈ ತೊಡಕಿನಿಂದ ತಾನು ಈಗಲೇ ಜಾರಿಕೊಳ್ಳತಕ್ಕದ್ದು. ಆದದ್ದಾಗಿ ಹೋಯಿತು, ಇಂದಿನಿಂದ ಕುಮುದಳ ಕೋಣೆಯಲ್ಲಿ ಕಾಲಿಡತಕ್ಕದ್ದಲ್ಲ—ಎಂದುಕೊಂಡ

ಆದರೇನು ? ತನ್ನಷ್ಟಕ್ಕೆ ಮನಬಂದಂತೆ ವಿಚಾರ ಮಾಡಿದ್ದನ್ನು ರಾಮಣ್ಣನ ಬುದ್ಧಿ ಒಪ್ಪಲಿಲ್ಲ. "ನಿನ್ನಷ್ಟಕ್ಕೆ ನೀನು ಹೋಗುವುದಿಲ್ಲ ಎಂದು ಇಲ್ಲಿ ಕುಳಿತರೆ ಆಕೆಗೆ ತಿಳಿಯುವುದು ಹೇಗೆ ? ಇಬ್ಬರ ಒಪ್ಪಿಗೆಯಿಂದ ಕೈಕೊಂಡ ಕರಾರನ್ನು ಒಬ್ಬನೇ ಮುರಿಯುವುದು ಯಾವ ನ್ಯಾಯ ? ಇದಲ್ಲದೆ ನಿನ್ನನ್ನು ಮದುವೆಯಾಗಬೇಕೆಂದು ಕುಮುದಳ ಮನಸ್ಸಿನಲ್ಲಿದ್ದರೆ ನಿನ್ನ ನಿಶ್ಚಯಕ್ಕೆ ತುಸುಮಟ್ಟಿಗಾದರೂ ಅರ್ಥವಿದೆ. ಆದರೆ ಆಕೆಗೂ ಮದುವೆಯ ವಿಚಾರವಿದ್ದಿಲ್ಲವೆಂದರೆ ? ಆಗ ತೊಡಕು ಎಲ್ಲಿದೆ ? ಹೀಗೆ ಹುಚ್ಚನಂತೆ ಮಾಡಬೇಡ. ಹೋಗು, ಅವಳು ನಿನ್ನ ದಾರಿಯನ್ನು ಎಷ್ಟೊತ್ತಿನಿಂದ ಕಾಯು ತ್ತಿರುವಳೊ !" ಎಂದು ಬುದ್ಧಿಯು ಮುಂದಾಗಿ ಅವನನ್ನು ಎಳೆಯುತ್ತಿತ್ತು. ಹೆಜ್ಜೆ ಮುಂದಿಟ್ಟೊಡನೆ "ಮಕ್ಕಳಿಲ್ಲದ ಮನೆ ಎಂತಹ ಮನೆ ! ನನ್ನ ಸಲುವಾಗಿಯಾದರೂ ಮದುವೆಯಾಗಿರಿ, ಮನೆಯಲ್ಲಿ ಮಕ್ಕಳು ಓಡಾಡುವು ದನ್ನು ನೋಡಿ ಸಾಯುವೆ" ಎಂದು ಅವನ ಹೃದಯದಲ್ಲಿ ಇನ್ನೂ ಗುಣಗು- ತ್ತಿದ್ದ ಸರಲೆಯ ದನಿ ಹಗ್ಗದಂತೆ ಅವನನ್ನು ಹಿಂದೆಳೆಯುತ್ತಿತ್ತು. "ಹುಚ್ಚ

ನೀನು ! ಸರಲೆಯ ಸಮಾಧಾನಕ್ಕೆ ನಿನಗೆ ಸರಿ ಎನ್ನಿಸಿದಾಗ ಮದುವೆಯಾದೀ ಯಂತೆ. ಆದರೆ ಎಂದಿನ ಮಾತಿಗೂ ಹೆದರಿ ಇಂದಿನ ಸುಖವನ್ನು ತಪ್ಪಿಸಿ-ಕೊಳ್ಳುವುದರಲ್ಲಿ ಯಾವ ಜಾಣತನವಿದೆ ? ನಡೆ" ಎಂದು ಮತ್ತೆ ಬುದ್ಧಿಯು ಪ್ರೋತ್ಸಾಹಿಸುತ್ತಿತ್ತು. "ಖರೇನೆ – ಖರೇನೇ ನಡೆಸಿಕೊಡ್ತೀರಾ ? ಅಷ್ಟು – ಅಷ್ಟಾದರೆ ನಾ ಸುಖದಿಂದ ಕಣ್ಮುಚ್ತೀನಿ" ಎಂದು ಸರಲೆಯ ದನಿಯು ಈಗ ಮೂರ್ತಿಮತ್ತಾಗಿ ಕೈ ಹಿಡಿದು, ಮುಂದೆ ಹೋಗದಂತೆ ಜೋತು ಬಿದ್ದಂತಾಗುತ್ತಿತ್ತು. "ಹಹ ! ಇಷ್ಟ್ಯಾಕೆ ಸರಲೆಯ ವಿಚಾರ ? 'ನೀವೇನು ಮುದಕರ ತದುಕರ ?' ಎಂದು ಆಕೆ ನಿನ್ನ ಅಗತ್ಯವನ್ನು ಅರಿತುಕೊಂಡಿಲ್ಲವೆ ? ಆಕೆ ಹೇಳಿದ್ದು ನಿನ್ನ ಸುಖದ ಸಲುವಾಗಿಯಲ್ಲವೆ ? ಈಗ ನಿನಗಾಗಿ ಸುಖ ಅಲ್ಲಿ ಹಾಸಿಗೆಯ ಮೇಲೆ ನಿರೀಕ್ಷಿಸುತ್ತ ಬಿದ್ದುಕೊಂಡಿದೆ, ಇನ್ನಾದರೂ ತಡಮಾಡಬೇಡ" ಎಂದು ಒಮ್ಮೆಲೆ ಬುದ್ಧಿ ಕಸುವಿನಿಂದ ನಾಲ್ಕಾರು ಹೆಜ್ಜೆ-ಗಳನ್ನು ಮುಂದೆ ಎಳೆದಂತಾಗಿತ್ತು. ಸರಲೆಯ ದನಿ ಹಿಂದೆ ನಿಂತಲ್ಲಿಯೆ ಉಳಿಯಿತೇನೊ ! ಈಗ ಅಸ್ಪಷ್ಟವಾಗಿ ಕೇಳಿಸುತ್ತಿತ್ತು. "ಹುಚ್ಚಾ ! ಹುಚ್ಚಾ ! 'ಈಗ ಇದ್ದುದರ ಮುಂದೆ ನನಗೆ ಬೇರೆ ಯಾವ ಸುಖಾನೂ ಇಲ್ಲ' ಎಂದು ಸರಲೆಯ ಮುಂದೆ ಒಪ್ಪಿಕೊಂಡಿರುವೆ. ಈಗ ಇದ್ದುದನ್ನು ಬಿಟ್ಟು ಬೇರೆ ಎಲ್ಲಿ ಸುಖ ಕಾಣುವೆ ?" ಎನ್ನುತ್ತ ಬುದ್ಧಿ ಅವನನ್ನು ಕೋಣೆ-ಯಿಂದ ಹೊರಗೆ ಎಳೆದೊಯ್ದು ಬಿಟ್ಟಿತ್ತು.

ರಾಮಣ್ಣ ಮೊದಲು ನಿರ್ವಿಣ್ಣನಾದ, ಆಮೇಲೆ ಕೋಪಗೊಂಡ. ಇಷ್ಟೊಂದು ವಿಚಾರದಿಂದ ತಲೆ ಕೆಡಿಸಿಕೊಳ್ಳುವುದೇಕೆ ? ಮದುವೆಯ ವಿಚಾರ ಯಾಕೆ ? ನ್ಯಾಯದ ವಿಚಾರ ಯಾಕೆ ? ನಿಸರ್ಗವೆ ಈ ನೀತಿಯನ್ನು ಹಾಕಿಕೊಟ್ಟಿದೆ – ಎಂಬ ವಿಚಾರದಿಂದ ತುಸು ಬಿಂಕದಿಂದಲೆ ಕುಮುದಳ ಕೋಣೆಯಲ್ಲಿ ಕಾಲಿಟ್ಟಿದ್ದ. ದೀಪ ಢಾಳವಾಗಿ ಉರಿಯುತ್ತಿತ್ತು. ಬದಿಯ ಗೋಡೆಗಿದ್ದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ಕಂಡಿತು; ತನ್ನನ್ನು ತಾನೇ ನೋಡಲು ಹೆದರಿಕೆಯಾಗಿತ್ತೇನೊ ! ಆ ಬೆಳಕಿನಲ್ಲಿ ಕುಮುದಳನ್ನು ಎದುರಿಸಲು ನಾಚಿಕೆಯೆನ್ನಿಸಿತ್ತೇನೋ ? ಕುಮುದಳ ಮುಖ ಬಾಗಿಲ ಕಡೆ ಇದ್ದಿರಲಿಲ್ಲ. ಇದೇ ಸಮಯವನ್ನು ಸಾಧಿಸಿ ಕೋಣೆಯಿಂದ ಜಾರಿ-ಕೊಳ್ಳಬೇಕೆಂಬ ವಿಚಾರವೂ ಬಂದಿತ್ತು. ಆದರೆ ಕೂಡಲೆ ಗಂಡನನಾದ

ರಾಮಣ್ಣನಿಗೆ ಅವಮಾನವಾದಂತಾಗಿತ್ತು. ಯಾಕೆ ಓಡಿಹೋಗುವುದು ? ಈ ಹುಡುಗಿಗೆ ಹೆದರುವೆನೆ ? ನನ್ನ ಉದ್ದೇಶವೇನಿದೆ ಎಂಬುದನ್ನು ಸ್ಪಷ್ಟವಾಗಿ ಇವಳಿಗೆ ತೋರಿಸಿಕೊಡುವೆ – ಎಂದವನೆ ದೀಪವನ್ನಾರಿಸಿ ಹಾಸಿಗೆಯ ಮೇಲೆ ಮಲಗಿಕೊಂಡಿದ್ದ, ಗಂಡಸಿನ ಅಧಿಕಾರವನ್ನು ನಡೆಸಿದವನೆ ಕೋಣೆ–ಯಿಂದ ಹೊರಬಿದ್ದಿದ್ದ.

ಅಲ್ಲ – ಇನ್ನು ಹೊರಬೀಳುವೆ ಎಂದುಕೊಂಡಿದ್ದ ಮಾತ್ರ. ಆದರೆ ನಿಜವಾಗಿ ಅಂದು ತಾನು ಆ ಕೋಣೆಯಿಂದ, ತಪ್ಪಿಸುವ ಕಳ್ಳನಂತೆ ಜಾರಿಕೊಂಡಿದ್ದ. ಅದುವರೆಗಿನ ಉನ್ಮಾದವು ಇಳಿದಾಕ್ಷಣ ರಾಮಣ್ಣನು ಬೇರೆವ್ಯಕ್ತಿಯೆ ಆಗಿದ್ದ. ಇದೇನು–ಹೀಗೆ ಮಾಡಿದೆ ? ಎಂದುಕೊಂಡರೂ ಅಲ್ಲಿ ನಿಂತು ಸಮಾಧಾನವನ್ನಾಗಲಿ ಕ್ಷಮೆಯನ್ನಾಗಲಿ ಕೊಡಲು ಅಭಿಮಾನ ಹಿಂಜರಿಯಿತೆಂದೇ ಅವನು ಜಾರಿಕೊಂಡಂತೆ ಕೋಣೆಯಿಂದ ಹೊರಬಿದ್ದಿದ್ದ. ತನ್ನ ಕೋಣೆಗೆ ಹೋದೊಡನೆ ಅಲ್ಲಿ ಕೂಡ ಅವನಿಗೆ ದೀಪದ ಬೆಳಕು ಅಸಹ್ಯವೆನ್ನಿಸಿತ್ತು, ಕತ್ತಲಲ್ಲಿಯೆ ಕುಳಿತುಕೊಂಡಿದ್ದ. ಪಶು ! ನಾನು ಶುದ್ಧ ಪಶು ! ಎಂದುಕೊಂಡಿದ್ದ. ಮರುಗಳಿಗೆಯಲ್ಲಿ ಆ ಮಾತು ಪಶುವಿಗೇ ಅವಮಾನ, ಯಾವ ಪಶುವೂ ಮನುಷ್ಯನಂತೆ ಅತಿಕಾಮಜೀವಿಯಾಗಿಲ್ಲ, ಪ್ರಕೃತಿಯ ಒಂದು ನಿಯಮಿತ ಹೊಣೆಯಾಗಿರುತ್ತದೆ – ಎಂದು ತನ್ನನ್ನೇ ಬೇರೆಯಾಗಿ ಹಳಿದುಕೊಂಡಿದ್ದ. ಆಗ ಅವನಿಗೆ ವಿಚಾರಬಂದಿತ್ತು-ಕುಮುದಳ ಸಹವಾಸವಿಲ್ಲದೆ ಹೋದರೆ ತನ್ನ ಬದುಕಿನಲ್ಲಿ ಏನೋ ಒಂದು ಕೊರತೆ–ಯಾದಂತನ್ನಿಸುವುದು ಎಂದು ಎಷ್ಟು ಪರಿಯಿಂದ ವಿಚಾರಮಾಡಿದರೂ ಕೊನೆಗೂ ತಾನು ಕುಮುದಳ ಕಡೆಗೆಯೇ ಧಾವಿಸಿದ್ದನಲ್ಲ ? ನಿಮಿಷ ಮುಂಚಿತ ಅಲ್ಲಿ ಅನೈಸರ್ಗಿಕವಾಗಿ ನಡೆದುಕೊಂಡರೂ ಕುಮುದಳಿಗಾಗಿ ತನಗೆ ಸಿಟ್ಟು ಇದ್ದಿಲ್ಲ, ಹೋಗಿ ಕ್ಷಮೆಯನ್ನು ಬೇಡಬೇಕು ಎಂದೆನ್ನಿಸುತ್ತಿತ್ತು. ಅಂದಿನ ಅನುಭವವನ್ನು ಮರೆತು ಮನಸ್ಸು ಮುಂಚಿನ ದಿನಗಳ ಅನುಭವ–ವನ್ನು ನೆನೆದು ಸವಿಯುತ್ತಿದ್ದಿತು. ಕುಮುದಳಿಗೆ ತಾನು ಮನ ಸೋತಿರುವನೆ ? ಆಗ ನೆನಪಾಗಿತ್ತು ರತ್ನಾವಲಿ ನಾಟಕವಲ್ಲಿಯ ಶ್ಲೋಕ. ಮನಸ್ಸು ಎಂತಹದೊ ! ಅದು ಹೇಗೆ ಮತ್ತು ಯಾಕೆ ಸೋಲುವುದೋ ! ಮನುಷ್ಯನನ್ನು ಮೀರಿದ ಮಾತು "ವಿಧಿ" ಎಂಬುದರ ಬದಲಾಗಿ "ಸ್ಮರ"

ಎಂಬ ಪದವನ್ನು ಸೇರಿಸಿ ರಾಮಣ್ಣನು ಅಂದು ಆ ಶ್ಲೋಕದ ಅರ್ಥವನ್ನು ಹಚ್ಚಿ ಸಮಾಧಾನವನ್ನು ತಂದುಕೊಂಡಿದ್ದನು. ಸ್ಮರನು ಮನಸ್ಸು ಮಾಡಿದರೆ ಸಾಕು, ದ್ವೀಪಾಂತರದಿಂದ ಇಲ್ಲವೆ ಸಮುದ್ರದಿಂದಾಚೆಯಿಂದ ಇಲ್ಲದೆ ಭೂಗೋಲದ ಅಂತದಿಂದ ಒಂದು ಹುಡುಗೆ ಅಕಸ್ಮಾತ್ತಾಗಿ ಬಂದು ನಿಮ್ಮ ಹೃದಯವನ್ನು ಅವಹರಿಸುವಳು.

ಕುಮುದಳು ಹಾಗೆ ಮಾಡಿರುವಳೆ? ಎಂಬ ವಿಚಾರದಲ್ಲಿ ಮಗ್ನನಾಗಿ ಇಡಿಯ ರಾತ್ರಿ ಕುಳಿತ ಕುರ್ಚಿಯಲ್ಲಿಯೆ ನಿದ್ರೆಹೋಗಿದ್ದ.

ಅವೆಲ್ಲ ನೆನಪಾಗಿ ಈಗ ರಾಮಣ್ಣ ಕುರ್ಚಿಯಿಂದೆದ್ದ. ಅಂದಿನಂತೆ ಇಂದೂ ಕುರ್ಚಿಯಲ್ಲಿಯೆ ನಿದ್ರೆಹೋಗುವುದು ಬೇಡ, ಆಗ ಸುಖದ ಕನಸು ಗಳಿದ್ದವು, ಈಗ ಕನಸಿನಲ್ಲಿಯೂ ಸುಖವಿಲ್ಲ ಎಂದು ಎದ್ದು ಆಕಳಿಸಿ ಬೇಸರ ದಿಂದ ಕೈಯೊಳಗಿನ ಪುಸ್ತಕವನ್ನು ಮೇಜಿನ ಮೇಲೆ ಬಿಸುಟಿ ಒಗೆದ. ದೂರದಲ್ಲಿ ಯಾವುದೊ ಗಡಿಯಾರದಲ್ಲಿ ಹನ್ನೆರಡು ಗಂಟೆಯು ಸದ್ದು ಕೇಳ ಬಂದುವು.

## ೧೨

ಆಕಳಿಕೆ ನಿದ್ದೆಯ ಲಕ್ಷಣ ಎಂದು ಹೇಳುವುದು ಸುಳ್ಳೆನಿಸಿತು ಕುಮುದಳಿಗೆ. ಈಗ ತನಗೆ ಒಂದೇ ಸವನೆ ಆಕಳಿಕೆಗಳು ಬರುತ್ತಿದ್ದರೂ ನಿದ್ರೆಯ ಲಕ್ಷಣವೆ ಇಲ್ಲ! ನಿದ್ರೆಬಾರದಂತಹ ಬೇಸರ ಒಳಗೆ ಹುದುಗಿಕೊಂಡಿದ್ದು ಈಗ ಆಕಳಿಕೆಯ ರೂಪದಿಂದ ಹೊರಬರುತ್ತಿರುವುದೊ ಏನೊ ! ದೂರದಿಂದ ಯಾವುದೊ ಒಂದು ಗಡಿಯಾರದ ಗಂಟೆಗಳು ಕೇಳಬರುತ್ತಿವೆ. ಒಂದು,ಎರಡು, ಮೂರು....ಹನ್ನೆರಡು! ಮಧ್ಯರಾತ್ರಿಯಾಗಿದೆ,ಇನ್ನೂ ತನಗೆ ನಿದ್ದೆ ಬರಲೊಲ್ಲದು. ದೂರದ ಗಡಿಯಾರದ ಗಂಟೆಗಳು ಕೇಳಬರುವಷ್ಟು ಜಗತ್ತು ಶಾಂತತೆಯಲ್ಲಿ ಮುಸುಕಿದ್ದರೂ ಒಳಗಿನ ವಿಚಾರಗಳ ಗಲಾಟೆ – ಗೊಂದಲಗಳಲ್ಲಿ ನಿದ್ದೆ ಬಾರ ದಂತಾಗಿವೆ. ಅದೆಷ್ಟು ಸಲ ತಾನು ನಿದ್ದೆ ಬರಕೂಡದೆಂದು ಪ್ರಯತ್ನಿಸಿದ್ದಳು! ಈಗ ನಿದ್ದೆ ಬರಲಿ ಎಂದು ಪ್ರಯತ್ನಿಸುತ್ತಿದ್ದಾಳೆ! ಒಂದು ಕಾಲವಿದ್ದಿತು, ಆಗ ರಾತ್ರಿಯ ಶಾಂತತೆಯಲ್ಲೂ ಗಡಿಯಾರದ ಗಂಟೆಗಳು ಕೇಳಬರುತ್ತಿರಲಿಲ್ಲ, ನಿದ್ರೆಯನ್ನೂ ತಾನು ಬಯಸುತ್ತಿರಲಿಲ್ಲ. ಅದೆಲ್ಲ ಹಿಂದಿನ ಜನ್ಮದ ನೆನಪಿ-

ನಂತೆ ಆಗಿದೆ. ಆದರೆ ಕೇವಲ ಒಂದೆರಡು ವರ್ಷಗಳ ಹಿಂದಿನ ಮಾತು. ಆಗ ಎಷ್ಟೋ ರಾತ್ರಿ ಸುಖದ ಕನಸುಗಳನ್ನು ಕಣ್ಣಾರೆಯೆ ಕಾಣಬೇಕೆಂಬ ಹಟದಿಂದ ತಾನು ನಿದ್ದೆಯನ್ನು ತಪ್ಪಿಸುತ್ತ ಮಲಗುತ್ತಿದ್ದಳು. ಒಂದು ಅನುಭವವಂತೂ ಇನ್ನೂ ಅವಳ ಕಣ್ಣು ಕಟ್ಟಿದೆ. ಅಂದು ತನ್ನ ಜೀವನದ ಸೂರ್ಯ ಉದಯವಾದ, ಇನ್ನೆಲ್ಲಿಯ ರಾತ್ರಿ ಎಂಬಂತೆ ಬೆಳಗಿನವರೆಗೂ ಎಚ್ಚರಾಗಿಯೆ ಉಳಿದಿದ್ದಳು. ಎಚ್ಚರಿದ್ದು ಕನಸನ್ನು ಕಾಣಬೇಕೆಂಬ ಹಂಬಲ ಅಂದು ಪೂರೈಸಿತ್ತು, ಆದರೆ ಆ ಕನಸೂ ಇಂದು ಉಳಿದ ಕನಸುಗಳಂತೆಯೆ ಜಾರಿಹೋಗಿದೆಯಲ್ಲ! ಹೋಗಲಿ, ನೆನಪಿನಿಂದಾದರೂ ಸುಖವನ್ನು ತಂದು ಕೊಡುವ ಕನಸಾಗಿದೆಯಲ್ಲ – ಎಂಬ ಸಂತಸದಿಂದ ಅವಳ ಮುಖ ಅರಳಿತು. ಹಿಂದಿನದನ್ನು ಕಾಣುವ ಹಟದಿಂದ ಎಂಬಂತೆ ಅವಳ ಕಣ್ಗಳು ಸುತ್ತುಮುತ್ತ-ಲಿಗಾಗಿ ಅಲಕ್ಷ್ಯವನ್ನು ತಳೆದು ಯಾವುದೊ ಪರೋಕ್ಷವನ್ನು ದಿಟ್ಟಿಸಲು ಅರಳಿದುವು. ಎಷ್ಟು ಕಾಲದ ಮುಂಚಿನ ಮಾತು? ಹೋಗಲಿ, ಕಾಲ ಮುಖ್ಯವಲ್ಲ, ಮಾತು ಮುಖ್ಯ. ಅಂದಿನ ರಾತ್ರಿ......

ನಿಜವಾಗಿ ಅಂದಿನ ರಾತ್ರಿ ಕುಮುದಳು ಉಲ್ಲಸಿತಳಾಗಿದ್ದಿರಲಿಲ್ಲ. ಕೆಲವು ದಿನಗಳಿಂದ ಅವಳು ಅನುಭವಿಸುತ್ತಿದ್ದ ಸುಖದ ಪ್ರವಾಹಕ್ಕೆ ತಡೆ ಬಂದಂತಾಗಿತ್ತು. ಗಂಡ–ಹೆಂಡಿರ ಏಕಾಂತದ ದೃಶ್ಯವು ನಡೆದ, ರಾಮಣ್ಣನು ಹಾಗೆ ಒಂದು ತುಚ್ಛತೆಯಿಂದ ತನ್ನ ದೇಹವನ್ನು ಅವಮಾನಗೊಳಿಸಿ ಹೋದ ತರುವಾಯದ ಕೆಲದಿನಗಳಲ್ಲಿ ಕುಮುದಳ ಮನಃಸ್ಥಿತಿ ಉದ್ವಿಗ್ನ-ವಾಗಿತ್ತು. ಒಂದೆಡೆ ರಾಮಣ್ಣನಿಗಾಗಿ ಒಂದು ತರದ ದ್ವೇಷಭಾವವಿದ್ದಿತು, ಇನ್ನೊಂದೆಡೆ ಅವನು ತನ್ನ ಹತ್ತಿರ ಬಂದಾಗಲೆಲ್ಲ ಎಲ್ಲವನ್ನೂ ನುಂಗಿ ನಾಚಿಕೆಗೇಡಿಯಂತೆ ತನ್ನ ಮನಸ್ಸು ತೃಪ್ತಿವಡೆಯುತ್ತಿತ್ತು. “ರಾಮಣ್ಣ ಬಂದಾಗಲೆಲ್ಲ” ಎನ್ನುವುದಾದರೂ ಯಾಕೆ? ಮೊದಲು ಮೂರು–ನಾಲ್ಕು ದಿನ ರಾಮಣ್ಣ ಬಂದಿರಲೇ ಇಲ್ಲ. ಅದನ್ನು ಆಕೆ ಹೇಗಾದರೂ ತಡೆದುಕೊಳ್ಳಬಹುದಾಗಿತ್ತು; ತನ್ನ ನಡತೆಗಾಗಿ ನಾಚಿಕೊಂಡು ಅವನು ಹೀಗೆ ಮಾಡುತ್ತಿ-ರುವನು ಎಂದು ಸಮಾಧಾನವನ್ನು ತಂದುಕೊಳ್ಳಬಹುದಾಗಿತ್ತು. ಆದರೆ ರಾಮಣ್ಣನ ನಡತೆ ಇನ್ನಷ್ಟು ತನ್ನ ಹೃದಯವನ್ನು ಚುಚ್ಚುವಂತಾಗಿತ್ತು. ಆ ಮೂರು–ನಾಲ್ಕು ದಿನಗಳ ಮಟ್ಟಿಗೆ ತನ್ನನ್ನು ಕಣ್ಣೆತ್ತಿ ನೋಡಿರಲಿಲ್ಲ,

ತನ್ನ ಕಡೆ ಬಂದಿರಲಿಲ್ಲ; ಬರೆಯುವುದರಲ್ಲಿ ಒಂದು ವೇಳೆ ತೊಡಗಿದ್ದರೆ ಕುಮುದಳು ಹೇಗಾದರೂ ಸಮಾಧಾನವನ್ನು ತಂದುಕೊಳ್ಳಬಹುದಿತ್ತು. ಆದರೆ ಇಂತಹ ಯಾವುದೂ ಇಲ್ಲದೆ, ಇಡಿಯ ದಿನ ರಾಮಣ್ಣ ಸರಲೆಯ ಸನ್ನಿಧಿಯಲ್ಲಿಯೆ ಇರುತ್ತಿದ್ದ; ಅತ್ಯಂತ ಮನಃಪೂರ್ವಕವಾಗಿ ಉಪಚಾರವನ್ನು ಮಾಡುತ್ತಿದ್ದ; ರಾತ್ರಿ ನಿದ್ರೆ ಬರುವವರೆಗೆ ಆಕೆಯೊಡನೆ ಹರಟುತ್ತಿದ್ದ; ರಾತ್ರಿ ಕೂಡ ಉಪಚಾರಕ್ಕೆಂದು ಅಲ್ಲಿಯೆ, ಬೇರೆ ಹಾಸಿಗೆ ಕೊಂಡೊಯ್ದು, ಮಲಗುತ್ತಿದ್ದ ಎಂದೂ ಕುಮುದಳಿಗೆ ಸಂದೇಹ ಬಂದಿತ್ತು. ಯಾಕೆ? ಬೇಕಾದ ಉಪಚಾರವನ್ನು ಮಾಡಲು ತಾನು ಎಂದಿನಿಂದಲೂ ಸಿದ್ಧಳಿದ್ದಾಗ ರಾಮಣ್ಣ ತನ್ನ ಎಲ್ಲ ಕೆಲಸವನ್ನು ಬಿಟ್ಟು ಆ ಪರಿಶ್ರಮವನ್ನು ಯಾಕೆ ವಹಿಸುತ್ತಿದ್ದ? ಎಲ್ಲಿಯ ಉಪಚಾರ? ಅದೆಲ್ಲ ನೆವಮಾತ್ರ, ತನ್ನನ್ನು ತಪ್ಪಿಸಲು ಹೂಡಿದ ಆಟ ಎಂದು ತಿಳಿದುಕೊಂಡು ಕುಮುದ ಬಹಳೇ ಖತಿಗೊಂಡಿದ್ದಳು. ಇನ್ನು ಈ ಮನೆಯಲ್ಲಿ ತನಗೆ ಸ್ಥಾನವಿಲ್ಲ, ಅಕ್ಕನ ಉಪಚಾರಕ್ಕೂ ತಾನು ಅಯೋಗ್ಯಳೆಂದರೆ ಯಾರಿಗೆ ಬೇಕಾಗಿದ್ದಾಳೆ ತಾನು? ಕುಮುದ ತನ್ನಷ್ಟಕ್ಕೆ ಕಣ್ಣೀರು ಸುರಿಸಿದ್ದಳು, ಹಳಿದುಕೊಂಡಿದ್ದಳು, ನಾಳೆ ಎದ್ದೊಡನೆ ಹೀಗೆ ಮಾಡಬೇಕು – ಹಾಗೆ ಮಾಡಬೇಕು ಎಂದು ದಿನಾಲು ಮಲಗುವಾಗ ಏನೇನೊ ನಿರ್ಣಯಗಳನ್ನು ಕೈಕೊಳ್ಳುತ್ತಿದ್ದಳು. ಆದರೆ ಯಾವ ನಿರ್ಣಯವನ್ನೂ ನಡೆಸುವ ಸಂದರ್ಭ ಒದಗಿರಲಿಲ್ಲ – ಇಷ್ಟೇಕೆ? ಆ ನಿರ್ಣಯಗಳನ್ನು ಪೂರ್ತಿಯಾಗಿ ಬದಲಾಯಿಸುವ ಪ್ರಸಂಗವೇ ಬಂದಿತ್ತು. ಒಂದು ದಿನ ಬೆಳಿಗ್ಗೆ ರಾಮಣ್ಣ ಧಾವಿಸುತ್ತ ತನ್ನ ಕೋಣೆಗೆ ಬಂದ. "ಕುಮುದಾ, ಕುಮುದಾ?" ರಾಮಣ್ಣನ ದನಿ! ತನ್ನನ್ನು ಕರೆಯುತ್ತಿದ್ದಾನೆ! ಛೆ – ಕನಸು! ಎಂದುಕೊಂಡಿದ್ದಳು ನಿದ್ದೆಗಣ್ಣಿನಲ್ಲಿ. ಆದರೆ ಅದು ಕನಸಾಗಿದ್ದಿಲ್ಲ, ರಾಮಣ್ಣನೇ ಸಾಕ್ಷಾತಾಗಿ ಬಂದು ತನ್ನನ್ನು ಅಲುಗಾಡಿಸುತ್ತ, "ಕುಮುದಾ, ಕುಮುದಾ" ಎಂದು ಎಚ್ಚರಿಸುತ್ತಿದ್ದ; ಥಿಂಗನೆ ಎದ್ದು ಭೂತ ಬಡೆದವಳಂತೆ ನೋಡತೊಡಗಿದ್ದಳು. "ಬೇಗ, ಸರಲಾನ ಕೋಣೆಗೆ ಬಾ" ಎಂದು ರಾಮಣ್ಣ ಕನಸ್ಸಿನಲ್ಲಿ ಬಂದು ಹೋದವನಂತೆ ಹೊರಟೇ ಹೋಗಿದ್ದ. ತಾನು ಸರಲಕ್ಕನ ಕೋಣೆಯಲ್ಲಿ ಕಾಲಿಡುವುದಕ್ಕೆ ಅವನು ಕೋಟನ್ನು ಹಾಕಿಕೊಳ್ಳುತ್ತಿದ್ದ. ಅದೇ ಕೋಣೆಯ ಒಂದು ಮೂಲೆಗೆ ಅವನ ಹಾಸಿಗೆ ಇದ್ದುದು ಅವಳ

ಲಕ್ಷ್ಯಕ್ಕೆ ಬರದಿರಲಿಲ್ಲ. "ನಾನು ಡಾಕ್ಟರನ್ನ ಕರೆದುಕೊಂಡು ಬರ್‍ತೀನಿ, ನೀನು ಇಲ್ಲೇ ಕೂತಿರು" ಎಂದವನೆ ರಾಮಣ್ಣ ಹೊರಗೆ ಧಾವಿಸಿದ್ದ.

ಆ ದಿನ ತಾನು ಭಾವಿಯಲ್ಲಿ ಜಿಗಿದು ಜೀವವನ್ನು ಬಿಡಬೇಕೆಂದೆನ್ನಿಸಿತ್ತು ಕುಮುದಳಿಗೆ. ಎಂತಹ ನಾಚಿಕೆಗೇಡಿ, ಎಂತಹ ಸ್ವಾರ್ಥಿ, ಎಂತಹ ಕಟುಕ, ಎಂತಹ ಉಪಕಾರಗೇಡಿ ತಾನು ಎಂದು ತನ್ನನ್ನು ಮನವಾರೆ ಬೈದು ಕೊಂಡಿದ್ದಳು. ಮೂರು-ನಾಲ್ಕು ದಿನಗಳಿಂದ ಸರಲಕ್ಕನ ಹೃದಯ ದುರ್ಬಲ ವಾಗತೊಡಗಿತ್ತಂತೆ. ತನಗೆ ತಿಳಿಯುಬಾರದಾಗಿತ್ತೆ? ಯಾವಾಗಲೂ ರಾಮಣ್ಣನು ಆಕೆಯ ಹತ್ತಿರ ಇರುತ್ತಿದ್ದನೆಂದು ತಾನು ಅಲ್ಲಿ ಕುಳಿತಿರುತ್ತಿರಲಿಲ್ಲ; ನಿಜ; ತನ್ನನ್ನು ನೋಡಿದೊಡನೆ ಸರಲಕ್ಕ ಎಂದಿನಂತೆ ಮುಗುಳ್ನಗೆ ನಗುತ್ತಿದ್ದಳು, ಎಂಬುದೂ ನಿಜ. ಆದರೇನಾಯಿತು? ಕೇವಲ ತನ್ನವೆ ಹಾಳು, ಹೊಲಸು ವಿಚಾರಗಳಿಂದ ತಲೆಯನ್ನು ತುಂಬಿಕೊಂಡಿದ್ದು ತಾನು ಸರಲಕ್ಕನ ಅವಸ್ಥೆಯನ್ನು ಗುರುತಿಸಿರಲೇ ಇಲ್ಲ. ಎಂತಹ ಕುಲಗೇಡಿ ತಾನು! ಪಾಪ! ಮೂರು-ನಾಲ್ಕು ದಿನಗಳನ್ನು ರಾಮಣ್ಣನೊಬ್ಬನೆ ಹೇಗೆ ತಡೆದುಕೊಂಡಿರಬೇಕು? ಅನಿವಾರ್ಯವಾಗಿ ತನ್ನನ್ನು ಎಚ್ಚರಿಸಲು ಬರಬೇಕಾದರೆ ಕಾರಣವಿದ್ದಿತು. ಆ ದಿನ ನಸುಕಿನ ಸಮಯಕ್ಕೆ ಸರಲಕ್ಕ ಕೆಲವು ನಿಮಿಷ ಮೂರ್ಛೆ ಹೋಗಿದ್ದಳಂತೆ. ಆಕೆಯನ್ನು ಎಚ್ಚರಿಸಿ, ಉಪಚರಿಸಿ, ಸಂತಯಿಸಿ, ಆಮೇಲೆ ತನ್ನನ್ನು ಅಲ್ಲಿ ಕೂಡ್ರಿಸಿ ರಾಮಣ್ಣ ಡಾಕ್ಟರನ ಕಡೆಗೆ ಹೋಗಿದ್ದ.

ಅಂದು ಸಂಜೆಯ ಹೊತ್ತಿಗೆ ಸರಲಕ್ಕ ಸುಧಾರಿಸಿದ್ದು ಎಲ್ಲರ ಪುಣ್ಯವೆಂದೆನ್ನಿಸಿತ್ತು ಕುಮುದಳಿಗೆ. "ಎಲ್ಲರ" ಎಂದು ತನ್ನನ್ನು ಸೇರಿಸಿಕೊಳ್ಳುವುದೇಕೆ? ಇಡಿಯ ದಿನ ಹೊರಗಿನ ಓಡಾಟದಿಂದ, ಒಳಗಿನ ಕಳವಳದಿಂದ ಹಣ್ಣಾದವನು ರಾಮಣ್ಣ; ಅವನ ಪುಣ್ಯ, ಎಂದಿದ್ದಳು. ಅಂದು ಆವನು ನಿಮಿತ್ತವಾಗಿ ಊಟಮಾಡಿದ್ದು ರಾತ್ರಿ ೯ ಗಂಟೆಗೆ ಮಾತ್ರ. ಅಷ್ಟರಲ್ಲಿ ಸರಲಕ್ಕನು ಎಷ್ಟೋ ಸುಧಾರಿಸಿದ್ದಳು. ಆ ರಾತ್ರಿ ಡಾಕ್ಟರರು ಆಕೆಗೆ ನಿದ್ದೆಯ ಔಷಧವನ್ನು ಕೊಟ್ಟು, ಇನ್ನು ಯಾವ ಹೆದರಿಕೆಯೂ ಇಲ್ಲ ಎಂದು ಹೇಳಿ ಹೋಗಿದ್ದರು. ರಾತ್ರಿ ಊಟ-ಉಪಚಾರವಾದ ಮೇಲೆ ಕುಮುದಳು ಸರಲಕ್ಕನು ಸುಧಾರಿಸಿದ್ದನ್ನು ಕಣ್ಣಾರೆ ಕಂಡು ತನ್ನ ಕೋಣೆಗೆ ಹೋಗಿದ್ದಳು.

ಬುದ್ಧಿ ಪೂರ್ವಕವಾಗಿಯೆ ತುಸು ಜಾಗ್ರತೆಯಾಗಿಯೇ ಹೋಗಿದ್ದಳು. ಇಡಿಯ ದಿನ ರಾಮಣ್ಣನ ಮುಖವನ್ನು ನೋಡಿದ್ದಳು. ಆ ಮುಖಮುದ್ರೆಯ ಅರ್ಥ ಆಕೆಗಾಗಿತ್ತು. ಹೆಂಡತಿಯೊಡನೆ ಮಾತನಾಡಲು ಅವನಿಗೆ ಅವಕಾಶ ದೊರೆಯ ಲೆಂದೇ ತಾನು ಹಾಗೆ ಹೋದದ್ದು. ತನ್ನ ಪರಿಶ್ರಮದ ಸತ್ಪರಿಣಾಮವನ್ನು ಸವಿಯುವ ಆತುರ ಅವನಿಗಿದೆ ಎಂದೂ ಆಕೆಗೆ ತಿಳಿದಿತ್ತು. ಅಂದು ತನ್ನ ಕೋಣೆಗೆ ಹೋದಾಗ ಕುಮುದಳ ಮನಸ್ಸು ಪ್ರಸನ್ನವಾಗಿತ್ತು. ರಾಮಣ್ಣ-ಸರಲಕ್ಕ ಇಬ್ಬರೂ ಈಗ ಒಬ್ಬರೊಬ್ಬರೊಡನೆ ಎಷ್ಟೊಂದು ಆನಂದದಿಂದ ಮಾತಾಡುತ್ತಿರಬಹುದು ಎಂಬ ಕಲ್ಪನೆಯಿಂದ ಅವಳಿಗೂ ಆನಂದವೆನ್ನಿಸಿತ್ತು. ದೇಹದ ದಣಿವು, ಮನಸ್ಸಿನ ಆನಂದ-ಇದಕಾಗಿ ಕಣ್ಣು ಮುಚ್ಚಿ ಎಚ್ಚರ ಉಳಿ ಯುವ ವಿಚಿತ್ರ ವಿಶ್ರಾಂತಿಯನ್ನು ಅವಳು ಅನುಭವಿಸುತ್ತಿದ್ದಳು. ಹಾಗೆಯೆ ಎಷ್ಟೊತ್ತು ಒರಗಿಕೊಂಡಿದ್ದಳೊ! ಒಮ್ಮೆಲೆ ರಾಮಣ್ಣ ತನ್ನ ಹಾಸಿಗೆಯ ಹತ್ತಿರ ಬಂದು ನಿಂತುದೆ ಅವಳ ಕಣ್ಣನ್ನು ತೆರೆಯಿತು. ದಣಿವಿನಿಂದುದ್ಭವಿಸಿದ ಮೆತ್ತನ್ನ ಕಳೆ, ಆನಂದಕ್ಕಾಗಿ ಸೂಸುತ್ತಿದ್ದ ಮುಗುಳ್ನಗೆ – ಇಂತಹ ಮುಖಮುದ್ರೆಯ ರಾಮಣ್ಣನನ್ನು ನೋಡಿದೊಡನೆ ಆಕೆಯ ಹೃದಯದಲ್ಲಿ ಯಾವುದೊ ಒಂದು ಕಳವಳವಾಗಿತ್ತು, ಆ ಕಳವಳಕ್ಕಾಗಿ ಮನಸ್ಸು ಹಗುರೆನ್ನಿಸಿತ್ತು.

ಅಂದಿನ ರಾಮಣ್ಣ ಜನ್ಮ-ಜನ್ಮಾಂತರಗಳ ಪುಣ್ಯದ ಫಲರೂಪನಾಗಿದ್ದ ಎಂದೆನ್ನಿಸಿತ್ತು ಕುಮುದಳಿಗೆ. ಎಷ್ಟು ಶಾಂತನಾಗಿದ್ದ! ಎಂತಹ ನಿರ್ಮಲ ಮನಸ್ಸಿನಿಂದ ಮಾತನಾಡಿದ್ದ ! ಅಂದು ರಾಮಣ್ಣನನ್ನು ವೈದಡವಿ ಮುಂದೆ ಎಳೆದುಕೊಂಡಿದ್ದಳು ತಾನು. ತಿಳಿಯದ ದುಃಖದಿಂದ ಹಣ್ಣಾದ ಮಗು ಸಮಾಧಾನವನ್ನು ಬಯಸಿ ಬಂದಂತೆ ರಾಮಣ್ಣ ತನ್ನ ಕಡೆ ಬಂದಿದ್ದ ಎಂಬುದು ಅವಳಿಗೆ ಹೊಳೆಯಲು ಸಮಯ ಬೇಕಿರಲಿಲ್ಲ. ಮಾತನಾಡುತ್ತಾಡುತ್ತ ಮಲಗಿಕೊಂಡವನು ಬೆಳಗಿನವರೆಗೂ ಹಾಗೆಯೆ ತನ್ನ ತೋಳ ಆಶ್ರಯವನ್ನೆ ಹೊಂದಿ ಮಲಗಿದ್ದನು. ತನಗೆ ತಡವಾಗಿ ನಿದ್ದೆ ಬಂದಿತ್ತೇನೊ! ಬೆಳಗಿನಲ್ಲಿ ತನಗಿಂತ ಮುಂದೆ ಎದ್ದ ರಾಮಣ್ಣನು ತನ್ನ ಹಣೆಗೆ ಮುತ್ತಿಟ್ಟಾಗಲೆ ಆಕೆಗೆ ಎಚ್ಚರಿಕೆ. ತುಸು ಗಾಬರಿಯಿಂದ ಕಣ್ದೆರೆದೊಡನೆ ಹೆದರಿದ ಮಕ್ಕಳು ಒಬ್ಬರೊಬ್ಬರಿಗೆ ಸಂದೇಶ ಕೊಡುವಂತೆ ತುಟಿಗೆ ಕೈಹಚ್ಚಿಕೊಂಡು ಸುಮ್ಮ-ನಿರಲು ಸದ್ದುಮಾಡಿದ್ದ; ಮುಖ ಮಾತ್ರ ಮುಗುಳ್ನಗೆಯಿಂದ ಅರಳಿತ್ತು.

ಆ ಬೆಳಗಿನಲ್ಲಿ ತಾನು ಹೆಣ್ಣಾಗಿ ಹುಟ್ಟಿದುದು ಸಾರ್ಥಕ ಎಂದೆನ್ನಿಸಿತ್ತು ಕುಮುದಳಿಗೆ.

ಒಂದು ನಿಮಿಷ ಮಿಂಚಿದ್ದ ರಾಮಣ್ಣನ ಆ ಮುಖಮುದ್ರೆಯನ್ನು ನೋಡಿ ತನ್ನಿಂದ ಒಂದು ಹೃದಯಕ್ಕೆ ಶಾಂತಿ ದೊರೆಯಿತಲ್ಲ ಎಂದು ಕುಮುದಳಿಗೆ ಎನ್ನಿಸಿತ್ತು. ಅಂದಿನ ಅವಳ ಹೃದಯದ ವೈಭವ ಅಷ್ಟಕ್ಕೇ ಮುಗಿದಿರಲಿಲ್ಲ. ಅಷ್ಟಕ್ಕೇ ಮುಗಿದಿದ್ದರೂ ಅವಳು ತನ್ನ ಜನ್ಮ ಕೃತಾರ್ಥ ಎಂದು ಬಗೆಯಲು ಸಿದ್ಧಳಿದ್ದಳು. ಆದರೆ ಸುಖವಾಗಲಿ ದುಃಖವಾಗಲಿ, ಅನುಭವವು ಕೆಲವು ಕ್ಷಣಗಳ ವರೆಗೆ ಮರ್ಯಾದಿತವಾಗಿದ್ದರೂ, ಅನುಭವದ ನೆನಪು ಬಹುಕಾಲ ಬಾಳುವುದು. ಇದಲ್ಲದೆ ಅನುಭವದ ಕಾಲಕ್ಕೆ ಸುಖವು ಅನುಕೂಲವಾದದ್ದು, ದುಃಖವು ನೋವನ್ನುಂಟುಮಾಡುವುದು ಎಂದು ಭೇದವಿದ್ದರೆ ನೆನಪಿನಲ್ಲಿ ಮಾತ್ರ ಸುಖ, ದುಃಖ ಎರಡೂ ಒಂದೇ. ದುಃಖದ ನೆನಪಿನಿಂದ ಕಣ್ಣೀರು ಬಂದರೂ ಆಗ ಹೃದಯ ಹಗುರಾಗಿ ಸುಖವೇ ಎನ್ನಿಸುವುದು. ಇವೆಲ್ಲ ಮಾತುಗಳು ಅಷ್ಟು ಸ್ಪಷ್ಟವಾಗಿ ಕುಮುದಳಿಗೆ ತಿಳಿದಿರಲಿಲ್ಲ (ತಿಳಿದಿದ್ದರೆ ಅವಳು ಸುಖ-ದುಃಖಾತೀತಳಾಗುತ್ತಿದ್ದಳೇನೊ !), ಆದರೆ ಆ ಮಾತುಗಳ ಅನುಭವ ಮಾತ್ರ ಆಕೆಗೆ ಆ ದಿನ ಸಂಜೆಯೊಳಗಾಗಿ ಬಂದಿತ್ತು. ರಾಮಣ್ಣನ ಮಗುವಿನಂತೆ ಮುದ್ದಾದ ಮುಖವನ್ನು ಆಗಾಗ ನೆನೆದುಕೊಳ್ಳುತ್ತಿದ್ದಳು. ಅವನ ಬಗ್ಗೆ ನಾನು ಏನೇನೊ ತಿಳಿದುಕೊಂಡೆನಲ್ಲವೆ ? ಇಡೀ ದಿನ ದೇಹ ಮತ್ತು ಹೃದಯಗಳ ಬಳಲಿಕೆಯಿಂದ ಹಣ್ಣಾದವನು ನನ್ನ ಕಡೆ ಬಂದ, ನನ್ನೊಡನೆ ಸುಖದುಃಖದ ಮಾತುಗಳನ್ನಾಡಿದ, ನನ್ನ ಮಗ್ಗುಲಲ್ಲಿ ಮಗುವಿನಂತೆ ಗಾಢವಾಗಿ ಮಲಗಿದ್ದ. ಯಾಕೆ ? ಅವನ ಜೀವನದಲ್ಲಿ ನನಗೆ ಸ್ಥಾನವಿದ್ದಿರಲೇಬೇಕು. ಇಲ್ಲವಾದರೆ ದುಃಖದ ಸಮಯಲ್ಲಿ ಆತ್ಮೀಯತೆಯನ್ನು ತೋರಿಸುತ್ತಿದ್ದನೆ ? ಅವನ ಹೃದಯ, ನನ್ನ ಹೃದಯ ಒಂದನ್ನೊಂದು ಹೊಂದಿಕೊಂಡಿರಬೇಕು. ಕೆಲ ದಿನಗಳ ಹಿಂದಿನ ದೇಹಸಂಬಂಧಕ್ಕಿಂತಲೂ ಹೃದಯಗಳ ಈ ಗಾಢಸಂಬಂಧವು ಕುಮುದಳಿಗೆ ಹೆಚ್ಚು ಸುಖವನ್ನುಂಟು ಮಾಡಿತ್ತು. ಮೂರು-ನಾಲ್ಕು ದಿನಗಳಿಂದ ರಾಮಣ್ಣನ ನಿಮಿತ್ತವಾಗಿ ತನ್ನಲ್ಲಿ ಉಂಟಾಗಿದ್ದ ದುಃಖಸಂತಾಪಗಳೆಲ್ಲ ಈಗಿನ ನೆನಪಿನಲ್ಲಿ ಸುಖದ ಚಿಗುರುಗಳಂತೆ ಕಂಗೊಳಿಸಿದ್ದವು. ಹನ್ನೆರಡು ಗಂಟೆಗಳ ಅದೊಂದು ದಿವಸ

ದಲ್ಲಿ ಕುಮುದಳ ಮುಖಕಾಂತಿ ಹೆಚ್ಚು ಮನೋಹರವಾಗಿ ಕಂಡಿತು, ಅವಳ ಅಂಗಾಂಗಗಳೆಲ್ಲ ಪ್ರೇಮರಸದ ಲೇಪದಿಂದೆಂಬಂತೆ ಮಿಂಚುತ್ತಿದ್ದವು, ಅವಳ ನಡಿಗೆಯಲ್ಲಿ ಸೂರ್ಯೋದಯದ ನವಚೈತನ್ಯವಿದ್ದಂತಿತ್ತು, ಅವಳ ಮಾತುಗಳು ಮಳೆಗಾಲದ ಪ್ರಾರಂಭದ ಹನಿಗಳಂತೆ ಆನಂದದಿಂದ ಬೆರೆತ ತಂಪನ್ನು ಬೀರುವಂತಿದ್ದವು; ಅವಳ ಹೃದಯವು ಅಕ್ಕಪಕ್ಕದ ಹಳ್ಳಪಳ್ಳಗಳನ್ನೆಲ್ಲ ಕೈಗೂಡಿಸಿಕೊಂಡು ಸರಲ ಮಾರ್ಗವನ್ನು ಹುಡುಕುತ್ತ ಸಮುದ್ರವನ್ನು ಸೇರುವ ನಿಶ್ಚಯದಿಂದ ಹೊರಟ ನದಿಯಂತೆ ಕ್ಷಣಕ್ಷಣಕ್ಕೆ ವಿಶಾಲವಾಗುತ್ತಿರುವಂತೆ ಭಾಸವಾಗಿತ್ತು.

ಈ ಅಪರಿಚಿತ ಭಾವನೆಯನ್ನು ಕೈಗೂಡಿಸಿಕೊಂಡು ಮೆಲಕಾಡಿಸುತ್ತಿರುವ ಕುಮುದಳ ಚರ್ಯೆಯು ಬದಲಾಗಿತ್ತೇನೊ! ಆ ದಿನಗಳಲ್ಲಿ ಸರಲಕ್ಕ ತನ್ನನ್ನು ತುಂಬಿದ ಕಣ್ಗಳಿಂದ ನೋಡುವಂತೆ ನೋಡುತ್ತಿದ್ದಳು; ಮೇಲಿಂದ ಮೇಲೆ ಹತ್ತಿರ ಕರೆಯುತ್ತಿದ್ದಳು; ಕೈಯಲ್ಲಿ ಕೈಯನ್ನಿಟ್ಟು ಎಷ್ಟು ಹೊತ್ತು ಸುಮ್ಮನೆ ಒರಗಿರುತ್ತಿದ್ದಳು. ಒಂದು ದಿನ ಮಾತ್ರ — ಅದನ್ನು ತಾನೆಂದಿಗೂ ಮರೆಯಲಿಕ್ಕಿಲ್ಲ – ಹಾಗೆ ಕೆಲಹೊತ್ತು ಸುಮ್ಮನಿದ್ದ ಮೇಲೆ ಸರಲಕ್ಕ ಕಳಕಳಿಯ ದನಿಯಲ್ಲಿ "ಕುಮುದಾ" ಎಂದಿದ್ದಳು. ಎಲ್ಲಿಯೋ ಹೋಗಿದ್ದ ತನ್ನ ಹೃದಯವನ್ನು, ಅಡಗಿಕೊಂಡ ಮಗುವನ್ನು ಹುಡುಕಿ – ಹಿಡಿದೆತ್ತಿ ಮುದ್ದಿಡುತ್ತ ತರುವ ತಾಯಿಯಂತೆ, ಆ ದನಿ ಸೆಳೆದಿತ್ತು.

"ಯಾಕೆ, ಅಕ್ಕಾ?" ಎಂದು ಆತುರತೆಯ ದನಿಯಲ್ಲಿ ತಾನೂ ಕೇಳಿದ್ದಳು.

"ನನ್ನ ತ್ರಾಸ ಬಹಳ ಆಯ್ತು ಎಲ್ಲರಿಗೆ"

"ಯಾರು ಹೇಳಿದರು ನಿನಗೆ?"

"ಯಾರು ಯಾಕ ಹೇಳಲಿಕ್ಕೆ ಬೇಕು. ನನಗೇ ತಿಳಿಯೋದಿಲ್ಲೇನು?"

"ನಿನಗ ತ್ರಾಸ ಆಗದಿದ್ದರ ಸಾಕು. ಮಂದಿಯ ಕಾಳಜಿ ಯಾಕ?"

"ನನಗೂ ತ್ರಾಸ ಅದsನ, ಕುಮುದಾ? ನನ್ನದಿನ್ನೇನು ವಾಸನಾ ಉಳಿದಿಲ್ಲ ಈ ಸುಟ್ಟ ಜೀವ ಹೀಂಗ ಹಿಡಿದುಕೊಂಡು ಹಾಸಿಗೆ ಮ್ಯಾಲೆ ಹೊರಳಾಡಲಿಕ್ಕೆ."

"ನೀ ಎಷ್ಟು ಮಂದಿಗೆ ಬೇಕಾಗೀದಿ ಅಂಬೋದನ್ನ ಮರೀಬ್ಯಾಡ, ಅಕ್ಕಾ."

"ಹುಚ್ಚಿ, ಕುಮುದ! ಯಾರು ಯಾರಿಗೆ ಬೇಕಾಗ್ತಾರ? ಇರೋ-ತನಕ ಬೇಕು ಅಂತ ಅನಿಸತದ, ಸತ್ತಮ್ಯಾಲೆ ಮರೀತದ. ಇಲ್ಲದಿದ್ದರ ಸಂಸಾರ ಹ್ಯಾಂಗ ನಡೆದೀತ, ಕುಮುದಾ?"

"ಬ್ಯಾಡಾ ಅಂದ್ರೂ ನೀನು ಅದೇ ವಿಚಾರ ಮಾಡ್ತಿ, ಅಕ್ಕಾ."

"ಏನ್ಮಾಡ್ಲಿ ಹೇಳು, ಕುಮುದಾ? ಮೊನ್ನೆ ಬವಳಿ ಬಂಧಾಂಗ ಆದಾಗ ಎಲ್ಲಿ ಹೋಗಿಯೆ ಬಿಡತೀನ್ಯೊ ಅಂತ ಹೆದರಿದ್ದೆ."

"ಹಾಂ, ಹೀಂಗ ಮಾತಾಡೆ, ಅಕ್ಕಾ! ಹೋಗ್ಲಿಕ್ಕೆ ಹೆದರಿದ್ದೆ ಅಂದೆಯಲ್ಲ – ಅದು ಸಂತೋಷದ ಮಾತು."

"ಹೆದರಿದ್ದು ನನ್ನ ಸಲುವಾಗಿ ಅಲ್ಲ, ಕುಮುದಾ. ನನ್ನಿಂದ ಛಲೋದಾಗಲಿಲ್ಲ ಯಾರಿಗೂ, ಕೆಟ್ಟದಾದರೂ ಆಗಬ್ಯಾಡ ಅಂತ ಬೇಡಿ-ಕೋತೀನಿ."

"ಯಾರಿಗೆ ಏನೂ ಕೆಟ್ಟದಾಗಲಿಕ್ಕೆ ಕೂತಿಲ್ಲ."

"ಆದರೂ ನಾ ಸಾಯೋದರಾಗ ಅದಿಷ್ಟಾದರ ಒಳ್ಳೆಯದು – ಅಂತ —"

"ಏನದು?"

"ನಿನ್ನ ಮದುವೆ."

"ಹೋಗೆ, ಅಕ್ಕಾ! ಮೊದಲು ನೆಟ್ಟಗಾದೀಯಂತ, ಆ ಮ್ಯಾಲೆ–"

ಅಷ್ಟಕ್ಕೆ ಕುಮುದಳು ತಡೆದಿದ್ದಳು. ತನ್ನ ಮದುವೆಯ ಮಾತು ಎತ್ತಿದ್ದಕ್ಕೆ ಮೊದಲ ಕ್ಷಣ ಸಹಜವಾಗಿಯೆ ಆಕೆಗೆ ನಾಚಿಕೆ ಎನ್ನಿಸಿತ್ತು. ಆದರೆ ತಟ್ಟನೆ ಬೇರೊಂದು ವಿಚಾರ ಬಂದಿತ್ತು. ತನ್ನ ಮದುವೆ? ಅಕ್ಕನಿಗೆ ಈ ವಿಚಾರ ಯಾಕೆ ಬಂದಿರಬೇಕು? ತನಗಾಗಿ ಸಹಜವಾಗಿದ್ದ ವಾತ್ಸಲ್ಯದಿಂದಲೆ? ಇಲ್ಲವೆ – ಇಲ್ಲವೆ – ಮತ್ತಾವ ಸಂಶಯದಿಂದಲೆ? ತಾನು ಸಾಯೋ ಮುಂಚೆ ನನ್ನ ಮದುವೆ ಆಗತಕ್ಕದ್ದು ಎಂದು ಸರಲಕ್ಕ ಬಯಸಿದ್ದಾಳೆ; ಎಂದರೆ ಬೇರೆ ಯಾವನೊಬ್ಬನ ಕೂಡ ತನ್ನ ಮದುವೆ?

"ಅಕ್ಕಾ, ನೀನು ನೆಟ್ಟಗಾಗೋತನಕ ಇಲ್ಲದ ವಿಚಾರ ತಲೀವಳಗ

ಹಾಕಿಕೋಬೇಡ, ನಾನಂತೂ ಎಂದಿಗೂ ಒಪ್ಪಲಿಕ್ಕಿಲ್ಲ” ಎಂದಿದ್ದಳು ಕುಮುದ.

“ಅವರ ಮುಂದೂ ಹೇಳೀನಿ, ನಿನ್ನ ಮುಂದೂ ಹೇಳ್ತೀನಿ, ನನ್ನ ಹಣೇಬರಹದಾಗಿದ್ದರ ಕಣ್ಣಾರೆ ನೋಡಿ ಸಾಯ್ತೀನಿ” ಎಂದು ಸರಲಕ್ಕ ಉಸುರ್ಗರೆದಿದ್ದಳು.

ಅವರ ಮುಂದೂ ಹೇಳೀನಿ! ಕುಮುದಳ ಹೃದಯಕ್ರಿಯೆ ನಿಂತಂ-ತಾಯಿತು. ಏನೆಂದು ಹೇಳಿರಬಹುದು ಸರಲಕ್ಕ? ಅಥವಾ ಬೇರೊಬ್ಬನ ಕೂಡ ನನ್ನ ಮದುವೆ ಎಂದು ಸರಲಕ್ಕನ ಇಚ್ಛೆಯನ್ನು ತಿಳಿದು ರಾಮಣ್ಣನು ತನ್ನೊಡನೆ – ಮೊನ್ನಿನ ರಾತ್ರಿಯಲ್ಲಿಯಂತೆ – ಕೇವಲ ಸ್ನೇಹದಿಂದ ವರ್ತಿಸಿದ್ದನೆ? ನಾನು ಏನೇನೊ ತಿಳಿದಿದ್ದೆನಲ್ಲ? ಇದೆಂತಹ ಹೊಸ ಉಪಕ್ರಮ ಎದ್ದಿತು?

“ಅಕ್ಕಾ, ನಿನಗ ಕೈಮುಗಿದು ಬೇಡ್ತೀನಿ, ನೀನು ನೆಟ್ಟಗಾಗೋತನಕ — ”

“ಹುಚ್ಚಿ, ಕುಮುದ! ಇನ್ನು ನಾ ನೆಟ್ಟಗಾಗೋದನ್ನ ಮರೆ. ಅದಕೇ ಸಾಯೋ ಅಕ್ಕನ ಸಮಾಧಾನಕ್ಕಾಗಿ, ನನ್ನ ಕಡೆಯ ವಾಸನಾ ಅಂಬೋ-ದಕ್ಕಾಗಿ — ”

“ಅಕ್ಕಾ, ನನ್ನಾಣೆಯಾಗಿದೆ ಈ ಮಾತನ್ನು ನೀನು ಬೆಳೆಸಿದಿ ಎಂದರೆ” ಎಂದು ಕುಮುದಳು ಹೃದಯದ ಅಂತರಾಳದಿಂದ ದನಿ ತೆಗೆದಿದ್ದಳು.

ತನ್ನ ಆ ದನಿ, ದನಿಯೊಳಗಿದ್ದ ಹಟ, ಜೊತೆಗೆ ಚರ್ಯೆಯ ಮೇಲೆ ಇರಬಹುದಾಗಿದ್ದ ಒಂದು ದೃಢನಿಶ್ಚಯದ ಕಳೆ – ಇದನ್ನೆಲ್ಲ ನೋಡಿ ಸರಲಕ್ಕನೂ ಬೆರಗಾಗಿದ್ದಳು.

“ಯಾಕ, ಕುಮುದಾ? ಹೋಗಲಿ ಬಿಡು. ಅವರಿಗೇ ಹೇಳ್ತೀನಿ, ಅವರೇ ನಿನ್ನ ಮಾತಾಡಿಸಲಿ” ಎಂದಿದ್ದಳು. ಸರಲಕ್ಕನ ಆ ಮಾತಿನಿಂದಂತೂ ಕುಮುದಳ ಜೀವವೇ ಹಾರಿಹೋದಂತಾಗಿತ್ತು. ಇದೇನು ವಿಪರೀತಕ್ಕಿಟ್ಟಿತು – ಎಂದುಕೊಂಡಿದ್ದಳು. ಹೇಗಾದರೂ ಮಾಡಿ ವಿಷಯವನ್ನು ಬದಲಾಯಿಸಲು ಯತ್ನಿಸಿದ್ದಳು. ಮೂರು ನಾಲ್ಕು ದಿನ ರಾಮಣ್ಣ ಸರಲಕ್ಕನನ್ನು ಹೇಗೆ ಉಪಚರಿಸುತ್ತಿದ್ದ, ಆಕೆ ಮೂರ್ಛೆ ಹೋದ ದಿನ ಎಷ್ಟು

ಗಾಬರಿಯಿಂದ ಓಡಾಡಿದ್ದ, ರಾತ್ರಿಯ ವರೆಗೆ ಅವನಿಗೆ ಹೇಗೆ ಊಟದ ಎಚ್ಚರವೆ ಇದ್ದಿಲ್ಲ ಮೊದಲಾದ ಸಂಗತಿಗಳನ್ನು ರುಚಿಕಟ್ಟಾಗಿ ಮಾಡಿ ಹೇಳತೊಡಗಿದ್ದಳು. ಕ್ರಮೇಣ ಸರಲಕ್ಕನು ಆನಂದ–ಅಭಿಮಾನಗಳಿಂದ ಅರಳಿದ ಮುಖದಿಂದ ತನ್ನ ಮಾತುಗಳನ್ನು ಕೇಳುವುದರಲ್ಲಿ ತಲ್ಲೀನಳಾಗಿದ್ದಳು. ಎಷ್ಟೊ ಹೊತ್ತಿನ ಮೇಲೆ ಇನ್ನು ಮದುವೆಯ ವಿಷಯ ಬರಲಿಕ್ಕಿಲ್ಲ ಎಂದು ಆಕೆಗೆ ಭರವಸೆಯಾಗಿತ್ತು, ಮಾತನ್ನು ತಡೆದಿದ್ದಳು. ಕೊನೆಗೆ ಸರಲಕ್ಕ "ಹೌದೇನ ? ನೀನೂ ಎಷ್ಟು ಎಲ್ಲಾನ್ನ ನೋಡಿಟ್ಟಿರುವಿ ಸೂಕ್ಷ್ಮವಾಗಿ ಅಂತೀನಿ" ಎಂದು ನಗುತ್ತ ತನ್ನ ಬೆನ್ನ ಮೇಲೆ ಕೈಯನ್ನಾಡಿಸಿದ್ದಳು. "ನನ್ನ ದೈವ ಅಷ್ಟೇನು ಖೊಟ್ಟಿ ಇಲ್ಲ, ಹೋಗು, ತಾಯೀ." ಎಂದಿದ್ದಳು.

ಕುಮುದಳಿಗೆ ಕೊನೆಯ ಮಾತಿಗಾಗಿ ಆಶ್ಚರ್ಯವಾಗಿತ್ತು. ಯಾವ ಸಂದರ್ಭಕ್ಕಾಗಿ ಸರಲಕ್ಕ ಆ ಮಾತನ್ನು ಹೇಳಿದ್ದಳು ? ತಾನು ರಾಮಣ್ಣನ ವಿಷಯವಾಗಿ ಹರಟೆ ಕೊಚ್ಚಿದ್ದು – ಹಾಂ – ತಿಳಿಯಿತು, ಅಂತಹ ಗಂಡ ತನ್ನವನಿದ್ದಾಗ ತನ್ನ ದೈವ ಖೊಟ್ಟಿ ಅಲ್ಲ ಎಂದಿರಬಹುದೇನೊ – ಎಂದು ಒಮ್ಮೆ ಎನ್ನಿಸಿತ್ತು. ದೈವ ಖೊಟ್ಟಿ ಇಲ್ಲ ಎನ್ನುವುದರಲ್ಲಿ ತಾನು ಬಯಸಿ ದಂತೆ ಕುಮುದಳ ಮದುವೆ ಆಗಿಯೇ ತೀರುವುದು ಎಂಬ ಭರವಸೆ ಇದ್ದಿತೇನೊ ಎಂದು ಮತ್ತೊಮ್ಮೆ ತೋಚಿತ್ತು. ಆದರೆ ಕುಮುದಳು ಆ ಬಗ್ಗೆ ಹೆಚ್ಚು ವಿಚಾರ ಮಾಡುವ ಮನಃಸ್ಥಿತಿಯಲ್ಲಿದ್ದಿರಲಿಲ್ಲ. ಸರಲಕ್ಕನ ಬಾಯಿಯಿಂದ ತನ್ನ ಮದುವೆಯ ಪ್ರಸ್ತಾವ ಬಂದೊಡನೆ ಇದುವರೆಗೆ ಎಲ್ಲಿಯೊ ಹುದುಗಿಕೊಂಡಿದ್ದ ವಿಚಾರಗಳು ಒಮ್ಮೆಲೆ ಸುತ್ತಲಿನಿಂದ ಧುಮುಕಿ ದಂತಾಗಿತ್ತು. ಮದುವೆ! ಎಂತಹ ಆಶ್ಚರ್ಯ! ಇದುವರೆಗೂ ತನಗೆ ಆ ವಿಚಾರವೆ ಬಂದಿರಲಿಲ್ಲವಲ್ಲ! ರಾಮಣ್ಣನೊಡನೆ ನಡೆದ ಅನುಭವದ ತರುವಾಯ ಕೂಡ ಮದುವೆ ಎಂಬ ವಿಷಯ ಅವಳಿಗೆ ತೋಚಿರಲೇ ಇಲ್ಲ! ಕುಮುದಳು ಸರಲಕ್ಕನ ಅನೇಕ ಮಾತುಗಳನ್ನು ನೆನೆದುಕೊಂಡು ಮೆಲು-ಕಾಡಿಸತೊಡಗಿದ್ದಳು. ತಾನು ಸಾಯುವ ಮುಂಚಿತವೆ ಈ ಮದುವೆ ಯಾಗಬೇಕೆಂಬ ಹಟವೊಂದು ಮಾತ್ರ ಅವಳನ್ನು ಸರಲಕ್ಕನ ಬಗ್ಗೆ ಸಂಶಯ ಗ್ರಸ್ತಳನ್ನಾಗಿ ಮಾಡುತ್ತಿದ್ದಿತು. ಒಂದು ವೇಳೆ ರಾಮಣ್ಣನೊಡನೆ ತನ್ನ ಮದುವೆ ನಡೆಯಬೇಕೆಂದು ಸರಲಕ್ಕನ ವಿಚಾರವಿದ್ದಿರಬಾರದೇಕೆ ? ಎಂದರೆ?

- ತಮ್ಮಿಬ್ಬರ ಬಗ್ಗೆ ಸರಲಕ್ಕನಿಗೆ ಸಂಶಯ ಬಂದಿರಬಹುದೆ? ಛೆ! ಅಕ್ಕನ ಸ್ವಭಾವ ತೀರಾ ನಿಷ್ಕಪಟ. ಹೆಂಗಸಿಗೆ ಗಂಡ–ಮಕ್ಕಳು ಇವೇ ವೈಭವ ಎಂದು ಆಕೆ ಎಷ್ಟು ಸಾರೆ ಹೇಳಿದ್ದಿಲ್ಲ? ತನಗೆ ಮಕ್ಕಳಿಲ್ಲ ಎಂಬುದು ದುಃಖವಿದ್ದಷ್ಟೆ, ಮನೆಯಲ್ಲಿ ಮಕ್ಕಳಿದ್ದುದನ್ನು ನೋಡಿದರೆ ಆಕೆಗೆ ಸುಖ. ಹೀಗಿರಬಹುದೆ? ಕುಮುದಳನ್ನು ಅವಳ ವಿಚಾರಲಹರಿ ಮನಬಂದಂತೆ ತೇಲಿಸತೊಡಗಿತ್ತು. ಎಷ್ಟೊತ್ತು ವಿಚಾರ ಮಾಡಿದರೂ ತೃಪ್ತಿ ಇದ್ದಿರಲಿಲ್ಲ. ಕಣ್ಣು ಮುಚ್ಚಿದೊಡನೆ ಒಂದು ಚಿತ್ರ ಮುಂದೆ ಬಂದು ನಿಲ್ಲುತ್ತಿತ್ತು; ತಾನು, ರಾಮಣ್ಣ ಸಿನೀಮಾಕ್ಕೆ ಹೊರಟಿದ್ದಾರೆ. ತಮ್ಮ ಮಕ್ಕಳು ಮನೆಯಲ್ಲಿ ಓಡಾಡುತ್ತಿವೆ. ಎದುರು ಹಾಸಿಗೆಯ ಮೇಲೆ ಸರಲಕ್ಕ ನಗೆಮೊಗದಿಂದ ಮಕ್ಕಳನ್ನು ನೋಡುತ್ತ “ ಈಗ ನನ್ನ ಜನ್ಮ ಸಾರ್ಥಕ ಆಯ್ತು, ಇನ್ನು ನೀವಿಬ್ಬರೂ ಸಿನಿಮಾಕ್ಕ ಹೋಗಿರಿ, ವಿಲಾಯತಿಗೆ ಹೋಗಿರಿ; ನನ್ನ ಪಾಲಿಗೆ ಇದೇ ಮನೆ ” ಎನ್ನುತ್ತಿದ್ದಳು. ಕಣ್ಣು ತೆರೆದೊಡನೆ ಈ ಚಿತ್ರ ಮಾಯವಾಗುತ್ತಿತ್ತು.

ನೆನಪಿನ ಸವಿಯನ್ನು ಅನುಭವಿಸುತ್ತ ಈಗ ಕುಮುದ ಹಾಸಿಗೆಯಿಂದ ಎದ್ದಳು. ಆ ದಿನಗಳಲ್ಲಿ ನಿದ್ದೆ ಬಾರದಿದ್ದುದೆ ಎಷ್ಟು ಸುಖವಾಗಿತ್ತು ಎಂದುಕೊಂಡಳು. ಈಗ – ? ಅಂದು ನನ್ನೊಡನೆ ಸರಸವಾಡಿದ ನಿದ್ದೆ ಈಗ ದುಷ್ಯಂತನು ಶಕುಂತಲೆಯನ್ನು ಮರೆತಂತೆ ಮರೆತಿದೆ ಏನೊ ಎಂದು-ಕೊಂಡಳು. ದುಷ್ಯಂತ ಶಕುಂತಲೆ. ಈ ಮಾತು ತನ್ನ ಬಾಯಿಯಿಂದ ಹೇಗೆ ಬಂದಿತೊ! ಅಹುದು – ಈ ಕತೆಯನ್ನು ಒಂದು ರಾತ್ರಿ – ಥೂ! ಮತ್ತೆ ಮತ್ತೆ ಅದೇ! ಓಡಿಹೋಗಬೇಕೆಂದೆನ್ನಿಸುವುದು–ಎಂದು ಕುಮುದಳು ಅಕ್ಕಸದಿಂದ ಕಾಲನ್ನಪ್ಪಳಿಸಿ ಸರ್‍ರನೆ ಹಾಸಿಗೆಯನ್ನೇರಿ ಮುಖವನ್ನೂ ಮುಚ್ಚುವಂತೆ ಮುಸುಕನ್ನು ಬಿಗಿದುಕೊಂಡು ಮಲಗಿದಳು.

## ೧೩

ರಾಮಣ್ಣ ಬಿಸುಟಿ ಒಗೆದ ಪುಸ್ತಕ ಮೇಜಿನ ಮೇಲೆ ಪುಟಿದು, ಕೆಳಮೇಲಾಗಿ ಜಿಗಿದು, ಪುಟಗಳು ತೆರೆದು ಮಡಚಿ ಮುದ್ದೆಯಾಗಿ, ತೂಕ

ತಪ್ಪಿ ಎತ್ತರದ ಮೇಲಿಂದ ಬಿದ್ದು ಮೂರ್ಛೆ ತಾಳಿದವನಂತೆ ನೆಲದ ಮೇಲೆ ಕುಸಿಯಿತು. "ಜಗತ್ತಿನಲ್ಲಿ ಮನುಷ್ಯಪ್ರಾಣಿ ಹುಟ್ಟಿದಂದಿನಿಂದ ಎಷ್ಟು ಮನುಷ್ಯರಾಗಿರುವರೊ ಅವರೆಲ್ಲರಿಗೂ ಒಬ್ಬೊಬ್ಬನಿಗೆ ಒಂದು ಪುಸ್ತಕ ಎಂಬ ಪ್ರಮಾಣದಲ್ಲಿ ಪುಸ್ತಕಗಳಿದ್ದರೂ ನನ್ನ ತೊಡಕಿಗೆ ಸಮಾಧಾನವನ್ನು ತೋರುವ ಪುಸ್ತಕ ದೊರೆಯುತ್ತಿರಲಿಲ್ಲ" ಎಂದು ಸಿಟ್ಟಿನಿಂದ ನೋಡುತ್ತ ಆ ಪುಸ್ತಕಕ್ಕೆ ಹೇಳಿದ. "ಜೀವನ ಸಮಸ್ಯೆಗಳನ್ನು ಬಿಡಿಸುವುದು ಸಾಹಿತ್ಯ ವಂತೆ! ಹುಚ್ಚು! ಜೀವನವೆಂದರೇನು! ಅದರ ಸಮಸ್ಯೆ ಎಷ್ಟು ಅಸಂಖ್ಯಾತ ವಾಗಿವೆ! ಅವುಗಳನ್ನು ಬಿಡಿಸುವುದೆಂದರೇನು?" ಎಂಬ ವಿಚಾರದಿಂದ ಕ್ಷಣಮಾತ್ರ ಸಾಹಿತಿಯಾಗಿದ್ದ ತನಗಾಗಿ ಅವನಲ್ಲಿ ತಿರಸ್ಕಾರದ ಕನಿಕರ ಮೂಡಿತು.

ತನ್ನ ಸಮಸ್ಯೆ ಯಾವುದು? ಹಾಗೆ ನೋಡಿದಲ್ಲಿ ಸಮಸ್ಯೆ ಇಲ್ಲವೇ ಇಲ್ಲ ಎಂದು ಕೆಲವರು ಹೇಳಬಹುದು, ಇದೇನು ಕಠಿಣವಾದ ಸಮಸ್ಯೆ – ಎಂದು ಇನ್ನು ಕೆಲವರು ನಗೆಯಿಂದ ಅದನ್ನು ಹಾರಿಸಿಬಿಡಬಹುದು. ಹುಂ! ಮೂರ್ಖರು! ಪಾಪ! ಅಜ್ಞಾನದ ಹಸುಗೂಸುಗಳು! ತಮ್ಮದು ಅಜ್ಞಾನ ಎಂದು ಅರಿಯದ ದುರ್ದೈವಿಗಳು!

ಎಲ್ಲಿದೆ ಸಮಸ್ಯೆ? ಅದೇ ಕುಮುದಳ ವಿಚಾರ ಅಹುದಲ್ಲವೆ? ಅದರಲ್ಲಿ ಸಮಸ್ಯೆ ಯಾವುದು? ಪ್ರೀತಿಯ ಹೆಂಡತಿ – ತೀರಿಕೊಂಡಿದ್ದಾಳೆ, ಇನ್ನು ದಾಂಪತ್ಯ ಜೀವನಕ್ಕಾಗಲಿ ಪ್ರೇಮಕ್ಕಾಗಲಿ ಮನಸ್ಸಾಗದು, ಯಾವ ತರದ ಬಂಧನವೂ ಇಲ್ಲ, ಅವಳನ್ನು ಬಿಟ್ಟುಬಿಟ್ಟರಾಯಿತು. ಬಿಡುವುದೆಂದರೆ ಹೊರದೂಡುವುದೆ ಅಲ್ಲ. ಅಷ್ಟೊಂದು ಕಳಕಳಿ ಇದ್ದರೆ, ಹೇಗಾದರೂ ಹೆಂಡತಿ ಆಕೆಯನ್ನು ಸಾಕಿ ಸಲಹುತ್ತಿದ್ದಳಲ್ಲವೆ? ಯಾವುದಾದರೊಂದು ಸ್ತ್ರೀಶಿಕ್ಷಣದ ಸಂಸ್ಥೆಗೆ ಆಕೆಯನ್ನು ಕಳುಹಿಸಿ ಆಕೆ ಸ್ವಾವಲಂಬಿಯಾಗುವಂತೆ ಮಾಡಿದರಾಯಿತು. ಇವೇನು ದೊಡ್ಡ ಸಮಸ್ಯೆ!

ಮೂರ್ಖರು! ಹೀಗೆ ಹೇಳುವವರಿಗೆ ತನ್ನ ಸಮಸ್ಯೆಯೆ ತಿಳಿದಿಲ್ಲ. ಪ್ರೀತಿಯ ಹೆಂಡತಿ ತೀರಿಕೊಂಡಳು, ನಿಜ. ಆದರೆ ಕುಮುದಳಲ್ಲಿ ಪ್ರೀತಿ ಇದೆಯೆ ಇಲ್ಲವೆ – ಯಾರಿಗೆ ಗೊತ್ತು? ಯಾರು ಆ ಮಾತನ್ನು ಕೇಳಿದ್ದಾರೆ?

ಕುಮುದಳಲ್ಲಿ ಪ್ರೀತಿ–ಇದ್ದರೆ ಅವಳನ್ನು ಮದುವೆಯಾಗಬೇಕು, ಅದಕ್ಕೆ ಯೋಚನೆ ಯಾಕೆ?

ಛಿ! ಇವರೂ ದಡ್ಡರು! ಪ್ರೀತಿಯ ರಹಸ್ಯವೆ ಗೊತ್ತಿಲ್ಲ. ಪ್ರೀತಿ ಇದೆಯೆ ಇಲ್ಲವೆ ಎಂಬುದನ್ನು ಹೇಳುವುದು ಹೇಗೆ? ಹೊಟ್ಟೆ ತುಂಬಿದ ಮೇಲೆ ಅಡಿಗೆ ಸೇರುವುದೆ ಎಂದು ಕೇಳಿದರೆ? ಸೇರುವುದು ಎಂದರೆ – ಇನ್ನೊಮ್ಮೆ ತಿನ್ನು ಎನ್ನುವರು, ಅದು ಅಶಕ್ಯ; ತಿನ್ನಲು ಆಗದಿದ್ದರೆ ನಿನಗೆ ಸೇರಿದ್ದು ಸುಳ್ಳು ಎನ್ನುವರು; ಆದರೆ ಹೊಟ್ಟೆ ತುಂಬ ತಿಂದದ್ದೇ ಸೇರಿದೆ ಎಂಬುದಕ್ಕೆ ಸಾಕ್ಷ್ಯವಾಗಿರುವುದು. ಕುಮುದಳಲ್ಲಿ ಪ್ರೀತಿ ಇದೆಯೆ?

ಈ ಪ್ರಶ್ನವನ್ನು ರಾಮಣ್ಣನು ಆದಷ್ಟುಮಟ್ಟಿಗೆ ಕೇಳಿಕೊಳ್ಳುತ್ತಿರಲಿಲ್ಲ. ಯಾಕೆಂದರೆ, ಆ ಪ್ರಶ್ನಕ್ಕೆ ನೇರವಾದ ಉತ್ತರವನ್ನು ಕೊಡುವುದಕ್ಕೆ ಮುಂಚಿತವಾಗಿಯೆ ನೂರಾರು ಸಂಗತಿಗಳು ಅವನ ಕಣ್ಣುಕಟ್ಟೆ ನಿಲ್ಲು ತ್ತಿದ್ದುವು.

ಯಾವ ದಿನ ಅದು? – ಅಂದು? – ಆ – ? ಹಾಂ. ..ಸರಲೆ ಒಂದು ನಸುಕಿನಲ್ಲಿ ಗಾಬರಿಮಾಡಿದ ದಿವಸ. ಅಂದು ಇಡಿಯ ದಿನ ಒಂದು ಯಂತ್ರ ದಂತೆ ತಾನು ಚಲನವಲನವನ್ನು ನಡೆಸಿದ್ದನು. ರಾತ್ರಿ ಸರಲೆ ಮೊದಲಿನಂತೆ ಹುಷಾರಾಗುವವರೆಗೆ, ಡಾಕ್ಟರನು ಮೂರುನಾಲ್ಕು ಸಲ ಹೆದರಿಕೆ ಇಲ್ಲ ಎಂದು ಭರವಸೆ ಕೊಡುವವರೆಗೆ ತನ್ನ ಕಾಲ್ಗಳು ನಡೆದಿದ್ದುವು, ಕೈ ಕೆಲಸದಲ್ಲಿ ತೊಡಗಿತ್ತು, ಕಣ್ಣು ನೋಡುತ್ತಿದ್ದವು, ಕಿವಿಗೆ ಕೇಳಿಸುತ್ತಿತ್ತು – ಆದರೆ ಇವುಗಳಲ್ಲಿ ಒಂದು ಕ್ರಿಯೆಯ ಎಚ್ಚರವೂ ತನಗಿದ್ದಿರಲಿಲ್ಲ. ಎಲ್ಲ ಸರಿಹೋದ ಮೇಲೆ, ಏನೊ ತುಸು ತಿಂದ ಮೇಲೆ ಒಂದೆಡೆ ಅಪಾರವಾದ ಸಮಾಧಾನ, ಇನ್ನೊಂದೆಡೆ ಅನಿವಾರ್ಯವಾದ ನಿದ್ದೆ; ಸರಲೆಯೊಡನೆ ತಾನೂ ಪುನರ್ಜನ್ಮ ವನ್ನು ಪಡೆದಂತಾಗಿತ್ತು. ಮನಸ್ಸಿಗಾದ ಆನಂದಕ್ಕಾಗಿ ಎಲ್ಲಿಯಾದರೂ ಹಾಯಾಗಿಕುಳಿತುಕೊಂಡು "ಹೊಟ್ಟೆ ತುಂಬು"ವಂತೆ ಅಳಬೇಕು ಎಂದೆನ್ನಿ ಸಿತು. ಕೊನೆಗೆ ಯಾರೊಡನಾದರೂ ತನಗಾದ ಆನಂದವನ್ನು ತೋಡಿ ಕೊಳ್ಳಬೇಕು ಎಂದೆನ್ನಿಸಿತು. ಆಗ ತಾನು ಕುಮುದಳ ಕೋಣೆಗೆ ಹೋಗಿದ್ದ. ತನಗೆ ಪೂರ್ತಿಯಾಗಿ ನೆನಪಿನಲ್ಲಿದೆ, ಕುಮುದಳನ್ನು ತಾನು ಸ್ನೇಹದಿಂದ ಕಂಡಿದ್ದನೆ ಹೊರತು ಸಂಭೋಗದ ಹೆಣ್ಣೆಂಬ ದೃಷ್ಟಿಯಿಂದಲ್ಲ. ಆ ರಾತ್ರಿಯ

ನೆನಪು ಬಂದಾಗೊಮ್ಮೆ ರಾಮಣ್ಣನಿಗೆ ಆಶ್ಚರ್ಯವಾಗುತ್ತಿದ್ದಿತು ; ಮರುದಿನ ಸಸುಕಿನಲ್ಲಿ – ತನಗೆ ಏನೆನ್ನಿಸಿತೊ ಏನೊ ! – ಕುಮುದಳ ಹಣೆಗೆ ತಾನು ಮುದ್ದಿಟ್ಟದ್ದನಲ್ಲ ? ಆಗ ಕುಮುದಳ ಮುಖ ಹೆಣ್ಣಿನ ಮುಖ ಎಂಬ ವಿಚಾರ ಕೂಡ ಬಂದಿರಲಿಲ್ಲ.

ಅಂದಿನ ರಾತ್ರಿ ತನ್ನ ಮನೋಭಾವನೆಯ ಬಗ್ಗೆ ರಾಮಣ್ಣನಿಗೆ ಪೂರ್ತಿಯಾಗಿ ಭರವಸೆ ಇದ್ದಿತು. ಆದರೇನು ? ಒಳಗಿನ ಪ್ರಪಂಚವೆ ವಿಚಿತ್ರ ಪ್ರಪಂಚವಾಗಿದೆ. ತಾನೊಂದು ಬಗೆದರೆ ದೈವವೊಂದು ಬಗೆಯುವುದೆನ್ನು ವರಲ್ಲ ? ಇಷ್ಟೆ, ಕುಮುದಳು ಇನ್ನೊಂದು ಬಗೆದಿದ್ದಳು. ಆ ಮಾತಿನ ಬಗ್ಗೆ ರಾಮಣ್ಣನಿಗೆ ಸಂಶಯವೆ ಇದ್ದಿರಲಿಲ್ಲ. ತನ್ನ ಮತ್ತು ಕುಮುದಳ ಸಂಬಂಧದ ವಿಷಯದಲ್ಲಿ ಇದುವರೆಗೆ ಯಾವ ವಿಚಾರವು ಬಂದಿರಲಿಲ್ಲವೊ ಆ ವಿಚಾರಕ್ಕೆ ಈಗ ರಾಮಣ್ಣನ ತಲೆಯಲ್ಲಿ ಪ್ರವೇಶ ಸಿಕ್ಕಿತು. ಕುಮುದಳು ತನ್ನನ್ನು ಪ್ರೀತಿಸುತ್ತಿದ್ದಾಳೆ ! ಆ ಮಾತು ಹೊಳೆದಾಗ ರಾಮಣ್ಣನ ಎದೆ ಧಸ್ಸೆಂದಿತ್ತು. ಇವೇನು ಹೊಸ ತೊಡಕು–ಎಂದುಕೊಂಡಿದ್ದನು. ಮೇಲಾಗಿ ತನ್ನ ಕೈ ಮೀರಿದ ತೊಡಕು, ಕುಮುದಳು ತನ್ನನ್ನು ಪ್ರೀತಿಸುತ್ತಿದ್ದರೆ ತಾನು ಏನು ಮಾಡಬಲ್ಲನು ? ತಾನು ಪರತಂತ್ರ ಎಂಬುದಕ್ಕಾಗಿ ಅವನಿಗೆ ಸಿಟ್ಟು ಬಂದಿತ್ತು. ಮೊದಲು ತನ್ನಲ್ಲಿಯೆ ರೇಗಿಕೊಂಡ. ಇದುವರೆಗಿನ ತನ್ನ ನಡತೆ ಕುಮುದಳಿಗೆ ಪ್ರೋತ್ಸಾಹ ಕೊಟ್ಟದ್ದರೆ ತನ್ನ ಮೂರ್ಖತನಕ್ಕೆ ತಕ್ಕ ಪ್ರಾಯಶ್ಚಿತ್ತ ಎಂದು ಸ್ವಂತಕ್ಕೆ ಬೈದುಕೊಂಡಿದ್ದ. ಮೂರ್ಖ ! ತಾನು ಶತಮೂರ್ಖ ! ಕೇವಲ ಕಾಮತೃಪ್ತಿಗೆ ಹಂಬಲಿಸಿ, ಮುಗ್ಧತನದ ಲಾಭ ಪಡೆದುಕೊಂಡು ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳುವಾಗ ಬೇರೆ ಯಾವ ವಿಚಾರವೂ ಇದ್ದಿರಲಿಲ್ಲವಲ್ಲ ! ಸುಲಭಸಾಧ್ಯಳಾಗಿ ಅವಳು ಒಲಿದ-ಳೆಂಬುದಕ್ಕಾದರೂ ನನಗೆ ತಿಳಿಯಬೇಕಿತ್ತು, ಆಕೆ ನನ್ನನ್ನು ಮೋಹಿಸುತ್ತಿರು ವಳೆಂದು ಎಂದು ಹಣೆಯನ್ನು ಬಡೆದುಕೊಂಡಿದ್ದ. ಮತ್ತೊಮ್ಮೆ ಹೆಣ್ಣಿನ ಜಾತಿಯ ಮೇಲೆಯೆ ಸಿಡಿದಿದ್ದ. ಕಾಮಜೀವನ ಎಂದರೆ ಹೆಣ್ಣಿಗೆ ಮೊದಲು ಮದುವೆಯ ವಿಚಾರವೆ ! ಒಂದು ವಾಸನೆಯ ತೃಪ್ತಿಗಾಗಿ ಅವರ ವಿಚಾರ ವಿಲ್ಲ, ಅದಕ್ಕೊಂದು ನೈತಿಕಬಂಧನದ ಹಿನ್ನೆಲೆ ಬೇಕೇಬೇಕು ! ಬೇರೆ ಯಾವ ನೈಸರ್ಗಿಕ ವಾಸನೆಯೂ ಮನುಷ್ಯನ ಮೇಲೆ ಇಷ್ಟು ಪರಿಣಾಮವನ್ನು,

ಇಂತಹ ಪಾಪ-ಪುಣ್ಯದ ಹೊರೆಯನ್ನು ಹೊರೆಸುತ್ತಿರಲಿಕ್ಕಿಲ್ಲ. ಕುಮುದಳು ತನ್ನನ್ನು ಪ್ರೀತಿಸುತ್ತಿದ್ದರ ಮುಂದಿನ ಮಾರ್ಗವೇನು ?

ಆವತ್ತು ಒಂದರ ಮೇಲೊಂದು ಬರಲೇಬೇಕು ! ಎಂತಹ ಕ್ರೂರ ನಿಯಮವಿದೆಯೊ ನಿಸರ್ಗದಲ್ಲಿ ! ಮೊದಲೇ ತನ್ನ ಸುತ್ತಲು ಸಾಕಷ್ಟು ತೊಡಕುಗಳನ್ನು ನಿಲ್ಲಿಸಿಕೊಂಡ ರಾಮಣ್ಣನನ್ನು ಈಗ ಹೊಸ ತೊಡಕೊಂದು ಎದುರಿಸಿತ್ತು. ಅದು ಗಂಡಾಂತರದಿಂದ ಪಾರಾದ ಮೇಲೆ ಸರಲೆಯ ಬಗ್ಗೆ ಬಹಳ ಎಚ್ಚರದಿಂದಿರಬೇಕು ಎಂದು ಡಾಕ್ಟರನು ಹೇಳಿದ್ದನು. "ಅವರಿಗೆ ಆಘಾತ ತಡೆದುಕೊಳ್ಳುವ ಶಕ್ತಿ ಉಳಿದಿಲ್ಲ. ಬೇಡಿದ್ದನ್ನು ಕೊಟ್ಟು ಕೂಸಿನಂತೆ ರಮಿಸತಾ ಇರ್ರಿ ಅವರನ್ನ" ಎಂದು ಹೇಳಿದ್ದ. ರಾಮಣ್ಣನಿಗೆ ಆಗಿನ ಸಂದರ್ಭದಲ್ಲಿ ಅದು ಅನುಕೂಲವಾಗಿಯೆ ಬಂದಿತು. ಕುಮುದಳು ತನ್ನನ್ನು ಪ್ರೀತಿಸುವಳೆಂದು ಸಂಶಯ ಬಂದ ಮೇಲೆ ಆದಷ್ಟು ಆಕೆಯ ನಿಕಟ ಸಹವಾಸವನ್ನು ತಪ್ಪಿಸಬೇಕು ಎಂಬ ರಾಮಣ್ಣನಿಗೆ ಈಗ ಸರಲೆಯ ಹತ್ತಿರ-ದಲ್ಲಿಯೆ ಬೇಕಾದಷ್ಟು ವೇಳೆಯನ್ನು ಕಳೆಯಲು ನೆವ ದೊರೆತಂತಾಗಿತ್ತು. "ಕೂಸಿನ್ಹಾಂಗ ರಮಿಸಬೇಕು ನಿನ್ನ, ಅಂತ ಹೇಳ್ಯಾರ ಡಾಕ್ಟರ್ರು. ಅದಕ್ಕೇ ಇಲ್ಲಿಯೆ ಕೂತಿರತೀನಿ. ಚಾಕ್‌ಲೆಟ್ ಬೇಕು ಅಂದ್ರ್ಯಾಡ್ಲೆ ತಂದ್ಕೊಡ್ತೀನಿ, ಆಂ ?" ಎಂದು ಅವಳ ಹಾಸ್ಯವನ್ನು ಮಾಡುತ್ತಿದ್ದ.

"ಆಯ್ತು, ಚಾಕ್‌ಲೆಟ್ ಅಂತ ಚಾಷ್ಟೀ ಮಾಡೋ ಪೂರ್ತಿ ನಿಂ ಮಾತು !" ಎಂದು ಒಮ್ಮೆ ಸರಲೆಯೂ ತನ್ನ ಹಾಸ್ಯವನ್ನು ಹಂಗಿಸಿದ್ದಳು.

"ಚಾಕ್‌ಲೆಟ್ ಅಂತ ಚಾಷ್ಟಿ ; ಹುಚ್ಚು ಇದ್ದೀ ಏನು ನೀನು ? ಬೇಕಾದರ ನನ್ನ ಪರೀಕ್ಷಾ ಮಾಡಿನೋಡು. ಸರಲೇ, ನೀನು ತ್ರೈಲೋಕ್ಯ ಬೇಡಿದರೂ ತಂದುಕೊಟ್ಟೇನು " ಎಂದು ತಾನೂ ವಿನೋದದ ಭರದಲ್ಲಿ ನಾಟಕದೊಗಿನ ಪಾತ್ರದಂತೆ ನುಡಿದಿದ್ದ.

ಒಮ್ಮೆಲೆ ಸರಲೆ ಉಸುರ್ಗರೆದಿದ್ದಳು. ವಿನೋದಕ್ಕೆ ತಡೆಯನ್ನುಂಟು ಮಾಡುವ ಈ ನಿಟ್ಟುಸಿರಿನಿಂದ ರಾಮಣ್ಣ ಚಕಿತನಾಗಿದ್ದ.

"ಯಾಕ ? ನಿನಗ ಸುಳ್ಳು ಅನ್ನಿಸ್ತದೇನು ?"

ಸರಲೆ ಮಾತನಾಡದೆ ತಲೆಯನ್ನಲ್ಲಾಡಿಸಿದ್ದಳು.

"ಅಂತೂ ಗಂಡನ ಮ್ಯಾಲಿನ ವಿಶ್ವಾಸ ಹಾರಿತನ್ನು."

"ಉಹುಂ" ಎನ್ನುತ್ತ ಮತ್ತೆ ತಲೆಯನ್ನಲ್ಲಾಡಿಸಿದ್ದಳು.

"ಅಂದ್ರ ಮನಸಿನೊಳಗ ಇದ್ದದ್ದನ್ನ ಹೇಳಿ ನೋಡಲ್ಲ ?"

ಸರಲೆ ಹಿರಿತನದ ನಗೆಯೊಂದನ್ನು ನಕ್ಕಿದ್ದಳು.

"ಅಂಥಾ ಮೋಜಿನದೇನದು ? ಹೇಳಿಯಾದರೂ ಹೇಳು, ನೋಡೋಣ ಸರಲಾ."

"ನೀವು ಅದನ್ನ ನಡೆಸಿಕೊಡೋದಿಲ್ಲ ಅನ್ನೋದು ಗೊತ್ತು ಅದ ನನಗ."

ಹೂ ಎಂದು ರಾಮಣ್ಣ ಆಕೆಯನ್ನು ದಿಟ್ಟಿಸಿ ಕೆಣಕುವ ನಗೆಯಿಂದ ನುಡಿದಿದ್ದ, "ನನ್ನದೂ ನಿನ್ನದೂ ಹೃದಯ ಅಷ್ಟು ಒಂದಾಗಿವೆಯಲ್ಲ, ನನ್ನ ವಿಚಾರ ನಿನಗೆ ಮೊದಲೇ ಗೊತ್ತಿರುವಷ್ಟು ?"

"ಆಯ್ತು – ಇಂಥಾ ಮಾತು ಸುರುವಾದ್ರಂತೂ — "

"ಬಾಯಿ ಮುಚ್ಚಿಕೋತೀನಿ, ಆಯ್ತು ? ಏನು ಕಣ್ಮುಚ್ಚಲ್ಯೊ ? ಅಲ್ಲಲ್ಲ – ಇದು ನೋಡುವ ವಸ್ತು ಅಲ್ಲವಲ್ಲ ? ಆಗಲಿ, ಕಿವಿ ಮುಚ್ಚಿಕೋತೀನಿ, ಹೇಳು" ಎಂದು ಕಿವಿಗೆ ಕೈಯಿಟ್ಟುಕೊಂಡಿದ್ದ.

" ನೀವು ಎಂದಿನಿಂದಲೂ ಕಿವಿ ಮುಚ್ಚೀರಿ ನನ್ಮಾತಿಗೆ."

"ಹೋಗಲಿ ಬಿಡು. ಡಾಕ್ಟರಿಗೇ ಹೇಳ್ತೀನಿ. ಬೇಡಿದ್ದನ್ನ ಕೊಡಿರಿ ಅಂತ ಹೇಳಿದ ಪುಣ್ಯಾತ್ಮ. ಅದಕ್ಕ ನಿನಗ ಬಾಯಿಬಿಚ್ಚಿ ಬೇಡುವಂಥಾ ಔಷಧ ಕೊಡು ಅಂತ."

"ಬಾಯಿ ಬಿಚ್ಚಿ ಯಾಕೆ ? ಕೈ ಮುಗಿದು ಬೇಡ್ತೀನಿ."

"ಬೇಡು ಹಾಗಾದರೆ ಭಕ್ತ ಶ್ರೇಷ್ಠಳೆ, ಪ್ರಸನ್ನನಾದ ನಿನ್ನ ದೇವನು ಕಣ್ಮುಚ್ಚಿ ಕೊಡುವನು ನೀನು ಬೇಡಿದ್ದನ್ನು."

ತಾನು ಆ ಮಾತನ್ನು ಎಂತಹ ವಿನೋದಾತ್ಮಕವಾಗಿ, ಎಷ್ಟು ಉಲ್ಲಾಸದಿಂದ, ಯಾವ ಹುಡುಗಾಟಿಕೆಯ ಮುಗ್ಧ ಕಿಡಿಗೇಡಿತನದಿಂದ ನುಡಿದಿದ್ದ ! ಆದರೆ ಬೇಸಗೆಯ ಅಡ್ಡಮಳೆಯಂತೆ ತನ್ನ ಉಲ್ಲಾಸ ವೃತ್ತಿಯನ್ನು ಸರಲೆಯ ಉತ್ತರವು ಅಕಸ್ಮಾತ್ತಾಗಿ ಬಂದು, ಕವಿದು ಮುತ್ತಿ ಸುರಿದಿತ್ತು. ಆ ಮಳೆಯಿಂದ ತಪತಪ ತೋಯ್ದವನಂತೆ ತನ್ನ ಮೈ ಒಮ್ಮೆಲೆ ಬೆವರಿತ್ತು ಆಕೆಯ ಆ ಉತ್ತರದಿಂದ. ಕಣ್ಣು ಮುಚ್ಚಿದ್ದಾನೆ ತಾನು, ನಗೆ ಕುಣಿಯುತ್ತಿದೆ ತನ್ನ

ಮುಖದಲ್ಲಿ, ಹೃದಯ ಹಾತೊರೆಯುತ್ತಿದೆ ಹುಡುಗಾಟದ ಮುಂದಿನ ಹೆಜ್ಜೆಗಾಗಿ; ಆದರೆ ಇದೆಲ್ಲ ಒಂದು ಕ್ಷಣಮಾತ್ರ. ಮರುಗಳಿಗೆಯಲ್ಲಿ ಸರಲೆಯ ಬಾಯಿಯಿಂದ

"ನೀವು ಕುಮುದಾನ ಮದುವೆಯ ವಿಚಾರ ಮಾಡಬೇಕು."

ಎಂಬ ಶಬ್ದಗಳು ಹೊರಬಿದ್ದಾಗ ಅವನಿಗೆ ಮುಚ್ಚಿದ ಕಣ್ಣು ತೆರೆಯಲು ಹೆದರಿಕೆಯಾದಂತಾಗಿತ್ತು.

"ಏನಿದು ? ಯಾವ ಮಾತು, ಸರಲಾ ?"

"ಬೇಡ ಎಂದರೂ ನೀವೇ ಕೇಳಿದಿರಲ್ಲ ?"

"ಹೀಗೆ ಮಾತಾಡಿದರೆ, ಸರಲಾ, ನಾನು ಏನು ಮಾಡಬೇಕು ?"

"ಈಗ ಕೇಳಿರಿ ಡಾಕ್ಟರರಿಗೆ."

ನಿಜವಾಗಿ ಆ ಮಾತನ್ನು ಅವಳು ಸದುದ್ದೇಶದಿಂದಲೆ ಆಡಿದ್ದಳೆಂಬುದು ಮುಂದೆ ಎಷ್ಟೋ ದಿನಗಳ ಮೇಲೆ ತಿಳಿದುಬಂದಿತ್ತು ರಾಮಣ್ಣನಿಗೆ. ಡಾಕ್ಟರರ ಮಾತನ್ನು ತಾನೇ ಮೊದಲು ಎತ್ತಿದ್ದ, ಉದ್ವೇಗದ ವಾತಾವರಣವನ್ನು ಪ್ರಸನ್ನಮಾಡುವ ಸದುದ್ದೇಶದಿಂದ ಸರಲೆ ಬುದ್ಧಿಪೂರ್ವಕವಾಗಿ, ನಗೆಯ ಮಾತು ಎಂದು ಹಾಗೆ ಹೇಳಿದ್ದಳು. ಆದರೆ ಇಷ್ಟೆಲ್ಲ ಆಗ ರಾಮಣ್ಣನಿಗೆ ಹೊಳೆದಿರಲೇ ಇಲ್ಲ.

ಸರಲೆಯು ಡಾಕ್ಟರರನ್ನು ಕೇಳಿರಿ ಎಂದಾಗ ರಾಮಣ್ಣನಿಗೆ ಒಂದೇ ಒಂದು ವಿಚಾರ ಬಂದಿತ್ತು. ತನ್ನ ಮತ್ತು ಕುಮುದಳ ಸಂಬಂಧ ಸರಲೆಗೆ ಗೊತ್ತಾಗಿದೆ. ಅಥವಾ ಕುಮುದಳೆ ಹೇಳಿರಬೇಕು. ಈ ನಾಲ್ಕಾರು ದಿನ ಇಬ್ಬರೂ ಪಿಸುಪಿಸು ಮಾತಾಡುತ್ತಿದ್ದರು. ಈಗ ಡಾಕ್ಟರರ ಹೆಸರನ್ನೆತ್ತಿದಳೆಂದ ಮೇಲೆ ಏನೊ ಅನರ್ಥವಾಗಿದೆ! ಅನರ್ಥವೇನು ಸುಟ್ಟಿತು ! ಆಗುವುದೇ ಆಗಿದೆ, ಅನಿಷ್ಟವಾಗಿದೆ! ಬೀದಿಯಲ್ಲಿ ಹೋಗುತ್ತಿರುವ ಭೂತವನ್ನು ಮನೆಯಲ್ಲಿ ಹೊಕ್ಕಿಸಿಕೊಂಡಂತೆ ಈ ಹಾಳು ಕುಮುದಳನ್ನು ಯಾವ ಕೆಟ್ಟ ಮುಹೂರ್ತದಲ್ಲಿ ಸೇರಿಸಿಕೊಂಡೆನೊ ! ಈ ಹುಡುಗೆಯಾದರೂ ಎಂತಹ ಠಕ್ಕ! ತನ್ನ ಮುಂದೆ ಯಾಕೆ ಹೇಳಲಿಲ್ಲ ? ಯಾಕೇನು ? ತನ್ನನ್ನು ಬಲೆಯಲ್ಲಿ ಸಿಕ್ಕಿಸಿಕೊಳ್ಳಲು ಮುಂಚಿನಿಂದಲೂ ಅವಳು ಈ ಆಟವನ್ನು ಹೂಡಿರಲೇಬೇಕು. ಸಂಶಯವೆ ಇಲ್ಲ. ಅಂದು ಕೋಣೆಗೆ ಪುಸ್ತಕವನ್ನು ಹುಡುಕಲು

ಬಂದದ್ದು, ಅದಕ್ಕೂ ಮುಂಚೆ ನನ್ನ ಕೈಗೆ ತನ್ನ ಕೈಯನ್ನು ಹಚ್ಚಿದ್ದು ತನ್ನನ್ನು ನಾನು ಸಿನಿಮಾಕ್ಕೆ ಕರೆದುಕೊಂಡು ಹೋಗುವಂತೆ ಶುದ್ಧಹೃದಯದ ಸರಲೆಯನ್ನು ಒಲಿಸಿದ್ದು – ಇದೆಲ್ಲ ಮುಂಚೆನಿಂದಲೆ ತಯಾರಿಸಿದ ಯೋಜನೆಯಾಗಿರಬೇಕು. ಅದಕಾಗಿ ಈಗ ಸರಲೆಗೇ ಹೇಳಿಬಿಟ್ಟಿದ್ದಾಳೆ, ನಾನು ಜಾರದಂತೆ ಸಿಕ್ಕಿಕೊಳ್ಳಬೇಕೆಂದು ! ಅಬ್ಬ !

"ಕುಮುದಳೆ ಹೇಳಿರುವಳೆ ನಿನ್ನ ಮುಂದೆ ?" ಎಂದು ತಡೆಯದೆ ತನ್ನ ಬಾಯಿಯಿಂದ ಬಂದಿತ್ತು.

"ಛಿ ! ಇಂಥಾ ಮಾತನ್ನ ಆ ಹುಡುಗೆ ತಾನಾಗಿಯೆ ಹೇಳೀತೇನು ? ನಾ ನಿಂ ಮುಂದ ಆಡ್ತೀನಿ ಅನ್ನೋದು ಕೂಡಾ ಗೊತ್ತಿಲ್ಲ ಆಕೆಗೆ."

ಸರಲೆಯ ಈ ಉತ್ತರವನ್ನು ಕೇಳಿಯಂತೂ ರಾಮಣ್ಣನ ಸಂಶಯ ದೃಢವಾಗಿತ್ತು. ಸರಲೆಗೆ ಯಾವ ಆಘಾತವಾಗದಂತೆ ತಾನು ಉತ್ತರ ಕೊಡಬೇಕಿತ್ತು. ತನ್ನ ಮನಸ್ಸಿನೊಳಗಿನ ವಿಚಾರಗಳ ಸುಳಿವು ಕೂಡ ಆಕೆಗೆ ಬೇಡ ಎಂದು, ಹೇಗೊ ಮಾಡಿ, ನಗೆಯ ಮುಖದಿಂದ "ಆಗಲಿ, ಡಾಕ್ಟರ್ರಿಗೇ ಕೇಳ್ತೀನಿ" ಎಂದಿದ್ದ.

ಆ ದಿನ ಮಾತ್ರ ರಾಮಣ್ಣನು ಏಕಾಂತದಲ್ಲಿ ವಿಚಾರ ಮಾಡಬೇಕಾಗಿ ಬಂದಿತ್ತು. ಎರಡು ಮಾತುಗಳು ಅವನ ಮುಂದೆ ಸ್ಪಷ್ಟವಾಗಿ ನಿಂತಿದ್ದುವು: ಕುಮುದಳ ಸಂಬಂಧದ ಪರಿಣಾಮವೇನು ಎಂಬುದರ ಕಲ್ಪನೆಯಾಗಿತ್ತು; ಕುಮುದಳು ಬುದ್ಧಿಪೂರ್ವಕವಾಗಿ ಬೀಸಿದ ಬಲೆ ಇದು, ಆದುದರಿಂದ ಇದರಿಂದ ಪಾರಾಗಲು ಬುದ್ಧಿಸರ್ವಸ್ವವನ್ನು ವೆಚ್ಚಮಾಡಬೇಕು. ಆ ಕ್ಷಣದಲ್ಲಿ ಕುಮುದಳಿಗಾಗಿ ತನ್ನಲ್ಲಿ ಎಷ್ಟು ಕಠೋರವಾದ ತಿರಸ್ಕಾರಭಾವ ಉಂಟಾಗಿದ್ದಿತು ! ನನ್ನನ್ನು ಬಲೆಯಲ್ಲಿ ಎಳೆಯುವುದೆ ? ನನ್ನ ಮನೆಯಲ್ಲಿದ್ದುಕೊಂಡು ನನ್ನ ಹೆಂಡತಿ ಅಸಹಾಯಳಾಗಿದ್ದಾಳೆ ಎಂಬುದನ್ನು ಪೂರ್ತಿಯಾಗಿ ಅರಿತುಕೊಂಡು, ಅದರ ದುರ್ಲಾಭವನ್ನು ಪಡೆಯುವ ಹಂಚಿಕೆಯೆ ? ಅವಮಾನ–ಸಿಟ್ಟು–ತಿರಸ್ಕಾರ–ದ್ವೇಷ–ಅಸಹನೆ ಇವುಗಳ ಜಂಜಾಟದಿಂದ ಸುಂಟರಗಾಳಿಯಲ್ಲಿ ಸಿಕ್ಕಂತೆ ಅವನು ದಿಕ್ಕುತಪ್ಪಿ ಹೊಯ್ದಾಡಿದ್ದನು.

ಮರುದಿನದೊಳಗಾಗಿ ಉದ್ವೇಗವೆಲ್ಲ ಶಾಂತವಾಗಿತ್ತು. ತನ್ನದೂ ತಪ್ಪಿಲ್ಲದೆ ಇಲ್ಲ ಎಂದು ನಿರುಪಾಯನಾಗಿ ಅವನು ರಾತ್ರಿ ಮಲಗಿದಲ್ಲಿಯೆ

ಒಪ್ಪಿಕೊಂಡಿದ್ದ. ಏನೆ ಇರಲಿ, ಇನ್ನು ಈ ಜಂಜಾಟ ಮಾತ್ರ ಬೇಡ ಎಂದು ನಿರ್ಧರಿಸಿದ್ದ. ಆ ದಿನದಿಂದ ಕುಮುದಳನ್ನು ಕಣ್ಣೆತ್ತಿ ನೋಡಲು ಕೂಡ ಅವನ ಮನಸ್ಸಾಗಿದ್ದಿಲ್ಲ; ಸರಲೆ ಮುಂದೆ ಆ ಮಾತನ್ನು ಎತ್ತಿರಲಿಲ್ಲವಾದರೂ ತನ್ನ ಲಕ್ಷ್ಯವಿಲ್ಲದಾಗ ತನ್ನನ್ನು ಏನೊ ಒಂದು ಅಪೇಕ್ಷಾದೃಷ್ಟಿಯಿಂದ ನೋಡುತ್ತಿದ್ದಳೆಂಬುದನ್ನು ಕಂಡಿದ್ದ; ಹಗಲು ಸರಲೆಯೊಡನೆ ಮಾತು-ಕತೆ, ಸಂಜೆಗೆ ಬಯಲು ಹವೆಗಾಗಿ ತಿರುಗಾಟ; ರಾತ್ರಿ ಬರೆಯುವುದು. ಎಲ್ಲವೂ ಈಗ ಸರಾಗವಾಗಿ ನಡೆದಂತಿದ್ದರೂ ಒಳಗೊಳಗೆ ಅವನಿಗೆ ಒಂದು ಹೆದರಿಕೆ ಇದ್ದೇ ಇದ್ದಿತು: 'ಡಾಕ್ಟರನ ಪ್ರಶ್ನೆ' ಯಾವಾಗ ಅನಿವಾರ್ಯವಾದೀತೊ – ಎಂದು. ಒಂದು ದಿನ "ಡಾಕ್ಟರನ್ನಾದರೂ ಕೇಳಿರಿ" ಎಂದು ಸರಲೆ ನುಡಿದಾಗ ಬೆಚ್ಚಿಬಿದ್ದಿದ್ದ. "ಯಾಕ? ಏನಾಯ್ತೀಗ?" ಎಂದು ಹುಚ್ಚಾಗಿ ಕೇಳಿದ್ದ.

"ಆಗಬೇಕೆ ಏನು? ಕನ್ನಡಿ ಆದರೂ ನೋಡಿಕೋರಿ" ಎಂದಿದ್ದಳು. ಆಗ ತಿಳಿದಿತ್ತು ಸಂದರ್ಭ!

"ಹೆ! ನನಗಂತೀಯಾ? ನನಗೇನು ಧಾಡಿ" ಎಂದು ಹಾರಿಸಿಕೊಳ್ಳಲೆತ್ನಿಸಿದ್ದ.

"ಸುಮ್ಮನೆ ಮಾತಾಡಿದರಾಯ್ತೇನು? ಮಾರಿ ಅನ್ನೋದು ಬೆಳ್ಳಗ ಆಗೇದ."

"ಏನಾದ್ರೊಂದು ಹೇಳಬ್ಯಾಡ. ನಿನಗ ನಾ ಛಂದ ಕಾಣಿಸ್ತಿರಬೇಕು ಈ ಹೊತ್ತು–ಹಹ!"

"ನನ್ನ ಸಲುವಾಗಿ ಛಂದ ಕಾಣಿಸೋ ದಿವಸ ಎಂದೋ ಹೋದುವು."

ಮಾತು ಮತ್ತೆ ತನ್ನ ಮೈಮೇಲೆ ಬರಬಹುದೆಂದು ಹೆದರಿ ರಾಮಣ್ಣ ವಿಷಯವನ್ನು ಬದಲಾಯಿಸಿದ್ದ. "ಔಷಧ ತಕ್ಕೊಂಡೆಯಾ? ಅಂದ್ರೇನು ಬ್ಯಾಡ ಅಹುದಲ್ಲೊ? ನಾನು ಹೋಗಲಿಯಾ ಬರೀಲಿಕ್ಕೆ?" ಎಂದಿದ್ದ.

"ನೀವು ಹೋಗಿರಲ್ಲ. ಕುಮುದಾನ ಊಟನೂ ಆಯ್ತು. ಆಕೆ ಕೂಡ್ತಾಳ—"

ರಾಮಣ್ಣ ಅವಸರದಿಂದಲೆ ಹೋಗಿದ್ದ. ಅಷ್ಟರಲ್ಲಿಯೆ ಮತ್ತೊಂದು ವಿಚಾರವೂ ಅವನನ್ನು ಕೆಣಕಿತ್ತು. ತಾನು ಈ ರೀತಿ ತನ್ನ ಕೋಣೆಯಲ್ಲಿಯೆ

ಹೆಚ್ಚು ವೇಳೆ ಕಳೆಯುಹತ್ತಿದಂದಿನಿಂದ ಕುಮುದಳು ಸರಲೆಯ ಹತ್ತಿರ ಹೆಚ್ಚು ವೇಳೆ ಕೂಡ್ರುತ್ತಿದ್ದಳು. ಮತ್ತೆ ಯಾವ ಜಾಲ ಬೀಸಲಿದ್ದಾಳೆ?....

ರಾಮಣ್ಣ ಒಮ್ಮೆಲೆ ತಲೆ ತುರಿಸಿಕೊಂಡು ಎದ್ದು ನಿಂತ, ಎದುರಿಗೆ ನೋಡಿದ, ಅವನಿಗೆ ನಗೆ ಬಂದಿತು. ಪಾಪ! ನೋಡಬಾರದೆ? ತಾನು ಇಷ್ಟೊತ್ತಿನವರೆಗೆ ನೆನಪಿನ ಸಿಂಹಾಸನದಲ್ಲಿ ವಿರಾಜಮಾನವಾಗಿದ್ದಾಗ ಆ ಪುಸ್ತಕ ಮಾತ್ರ ಸೋತು ಮೊರೆಹೊಕ್ಕ ಶತ್ರುವಿನಂತೆ ಹಾಗೆ ನೆಲಕ್ಕೆ ತಲೆ ಹಚ್ಚಿ ಬಿದ್ದುಕೊಂಡಿದೆ! ತನ್ನದೆ ಹುಚ್ಚು. ಪುಸ್ತಕದೊಳಗಿನ ಆ ಶ್ಲೋಕಕ್ಕಾಗಿ ತಾನು ರೇಗಿದನಲ್ಲ? ಯಾಕೆ? ಆ ಶ್ಲೋಕವು ಸತ್ಯವಾದುದನ್ನೆ ಹೇಳುವುದು ಎಂಬುದಕ್ಕಾಗಿ ಅದರ ಮೇಲೆ ನನ್ನ ಸಿಟ್ಟು! ಆ ಶ್ಲೋಕ ಹೇಳುವುದು ಅಕ್ಷರಶಃ ನಿಜವಾಗಿದೆ. "ಮತ್ತೆ ಯಾವ ಜಾಲ ಬೀಸಲಿದ್ದಾಳೆ?" ಎಂದು ಅಂದು ತಾನು ಮನಸ್ಸಿನಲ್ಲಿ ಕೇಳಿಕೊಂಡಿದ್ದನಲ್ಲ? ಅದು ಜಾಲವಲ್ಲ, ಕುಮುದಳು ಬೀಸಿದ್ದಂತೂ ಅಲ್ಲವೇ ಅಲ್ಲ, "ಆನೀಯ ಝಟಿತಿ ಘಟಯತಿ ವಿಧಿಃ" ಎಂದು ಆ ಶ್ಲೋಕ ಹೇಳುತ್ತಿದ್ದ ಜಾಲ, ವಿಧಿಯು ಬೀಸಿದ ಜಾಲ, ಸೃಷ್ಟಿಮಾಯೆಯು ಬೀಸಿದ ಜಾಲ, ಅನಾದಿಯಾಗಿ ಜಗತ್ತನ್ನು ವ್ಯಾಪಿಸಿ ಬೀಸಿದ ಜಾಲ. ಅದಕ್ಕೆಂದೇ ಕೊನೆಗೂ ತಾನು ಅದರಲ್ಲಿ ಸಿಕ್ಕಿಕೊಂಡನು. ಸೋಲನ್ನು ಒಪ್ಪಿಕೊಳ್ಳುವಂತೆ, ನಿಂತಲ್ಲಿಯೆ ಮೊಳಕಾಲೂರಿ ಶರಣಾಗತನಾಗುವಂತೆ ರಾಮಣ್ಣ ಕುರ್ಚಿಯಲ್ಲಿ ಮತ್ತೆ ಕುಳಿತುಕೊಂಡ.

## ೧೪

ಮುಖವನ್ನು ಮುಸುಕಿನಲ್ಲಿ ಮುಚ್ಚಿಕೊಂಡರೆ ಹೊರಜಗತ್ತು ಕಾಣದು, ಆದರೆ ಒಳಜಗತ್ತು ಮರೆಯಾಗದು ಎಂದು ಕುಮುದಳಿಗೆ ತಿಳಿಯಲು ತಡವಾಗಲಿಲ್ಲ. ಇಷ್ಟೇ ಅಲ್ಲ, ಹೊರಜಗತ್ತು ಪೂರ್ತಿ ಮರೆಯಾದುದಕ್ಕೊ ಏನೊ, ಒಳಜಗತ್ತಿನ ಚಿತ್ರ ಹೆಚ್ಚು ಮಹದಾಕಾರವಾಗಿ ನಿಲ್ಲುವುದೆಂದೂ ಕುಮುದಳು ಕಂಡಳು. ಮೆಲ್ಲನೆ ಮುಸುಕನ್ನು ತೆರೆದು ಅತ್ತಿತ್ತ ನೋಡಿದಳು. ಎಲ್ಲವೂ ಹಿಂದೊಮ್ಮೆ ಕಂಡಂತೆ ಭಾಸವಾಯಿತು. ದಿನಾಲು ನೋಡುತ್ತಿರುವ ಕೋಣೆಯ ದೃಶ್ಯವೆ ಆದರೂ ಯಾವುದೊ ಒಂದು ರೀತಿ

ಯಲ್ಲಿ ಹೀಗೇ ತನ್ನ ಕೋಣೆಯ ವಾತಾವರಣ – ಹಂ, ವಾತಾವರಣವೆ ಸರಿ – ಒಮ್ಮೆ ಪರಿಚಿತವಾದಂತೆ ಕಂಡಿತು. ಎಂದು ? ಯಾವಾಗ ತನಗೊಮ್ಮೆ ಕೋಣೆ ಈ ರೀತಿ ಕಂಡಿತ್ತು ? ತಾನು ಮುಸುಕು ಹಾಕಿ ಮಲಗಿರಬೇಕು, ಅದು ಅಸಹ್ಯವೆನ್ನಿಸಬೇಕು, ಆಗ ತಾನು ಮುಸುಕನ್ನು ತೆರೆದು ಸುತ್ತಲು ನೋಡಬೇಕು, ಹೀಗೆ – ಅಹುದು, ಕಂಡಿತ್ತು.

ರಾತ್ರಿ ನಸುಕಾಗುತ್ತ ನಡೆದಂತೆ, ನಿದ್ದೆ ಬಾರದಂತಾದುದಕ್ಕೆ ದಣಿದ ಕುಮುದಳ ಮನಸ್ಸಿಗೆ ಯಾವ ದಿನ, ಎಷ್ಟು ಕಾಲ ಮುಂಚಿತ ಎಂಬುದು ಸ್ಪಷ್ಟವಾಗಿ ನೆನಪಾಗಲೊಲ್ಲದು. ಆದರೆ ಸಂದರ್ಭ ಮಾತ್ರ – ಬರೀ ಸಂದರ್ಭ ಯಾಕೆ ? ನಡೆದುದೆಲ್ಲ, ಒಂದೊಂದು ಹೆಜ್ಜೆ, ಒಂದೊಂದು ಮಾತು ಎಲ್ಲ – ಪೂರ್ತಿಯಾಗಿ ನೆನಪಿದೆ.

ಆಗ ರಾಮಣ್ಣನ ಮನಸ್ಸು ಸಮಾಧಾನದಲ್ಲಿದ್ದಿರಲಿಲ್ಲ ಎಂದು ಕುಮುದ ಳಿಗೆ ಎನ್ನಿಸಿತ್ತು. ಒಂದು ಬೆಳಿಗ್ಗೆ. ಸರಲಕ್ಕ ಮೂರ್ಛೆ ಹೋದಂದಿನಿಂದ ರಾಮಣ್ಣನ ಮುಖದಲ್ಲಿ ಒಂದು ಚಿಂತಾತುರ ಕಳೆ ಕಂಡಿತ್ತು. ಸರಲಕ್ಕನಿಗೆ ಇಡಿಯ ದಿನದ ಚಿಂತಾಜನಕ ಪರಿಸ್ಥಿತಿ – ಸುಧಾರಿಸಿ ರಾತ್ರಿ 'ಇನ್ನು ಉಳಿದಳು' ಎಂದೆನ್ನಿಸಿದಾಗ, ಆ ರಾತ್ರಿ ಮಾತ್ರ ರಾಮಣ್ಣ ತನ್ನ ಕೋಣೆಗೆ ಬಂದಿದ್ದ. ಮುಂದೆ ಎಷ್ಟೊ ದಿನಗಳ ವರೆಗೆ ಬಂದಿರಲೇ ಇಲ್ಲ. ಹೆಂಡತಿಯ ಬಗ್ಗೆ ಚಿಂತೆಯಿಂದ ಮನಸ್ಸು ವ್ಯಾಕುಲವಾಗಿ ಅವನು ಹಾಗೆ ಮಾಡಿರಬಹುದು ಎಂದು ಮೊದಲು ತಿಳಿದಿದ್ದಳು. ಆದರೆ ದಿನಗಳು ವಾರಗ ಳಾದುವು, ವಾರಗಳು ತಿಂಗಳಾದುವು ಆದರೂ ರಾಮಣ್ಣನು ತನ್ನ ಕಡೆ ಬಂದಿರಲೇ ಇಲ್ಲ ! ಇದಿಷ್ಟೆ ತನ್ನ ಚಿಂತೆಯಾಗಿದ್ದರೆ ಕುಮುದಳು ಸಮರ್ಪಕ ವಾದ ಕಾರಣವನ್ನು ಹುಡುಕಿಕೊಂಡು ಸಮಾಧಾನವನ್ನು ತಂದುಕೊಳ್ಳ ಬಹುದಾಗಿತ್ತು. ಆದರೆ ಮನೆಯಲ್ಲಿ ಸಂದರ್ಭ ಬಂದಾಗ ಕೂಡ ತನ್ನನ್ನು ಮುಖವೆತ್ತಿ ನೋಡುತ್ತಿರಲಿಲ್ಲವಲ್ಲ ! ಕುಮುದಳಿಗೆ ಸಂಶಯ ಬಂದಿತು, ಆಮೇಲೆ ಹೆದರಿಕೆಯಾಯಿತು; ಇಲ್ಲವಾದರೆ ತಾನಾಗಿ ಅವನ ಕೋಣೆಗೆ ಹೋಗಿ ಅವನನ್ನು ಮಾತಾಡಿಸಿ ಕೇಳುತ್ತಿದ್ದಳು. ಒಳಗಿನ ಉದ್ವೇಗವನ್ನು ಎಷ್ಟು ದಿನ ತಡೆದಾಳು ? ಮನಸ್ಸನ್ನು ತಡೆಹಿಡಿಯುವ ಉದ್ದೇಶದಿಂದ ರಾತ್ರಿ ಸರಲಕ್ಕನ ಜೊತೆ ಹೆಚ್ಚು ಹೊತ್ತು ಕಳೆಯುತ್ತಿದ್ದಳು. ಆಗಲಾದರೂ

ರಾಮಣ್ಣನನ್ನು ಕಣ್ತುಂಬ ನೋಡೇನೆಂದು ಒಳಗಿನದೊಂದು ಆಸೆ. ಆದರೆ ತಾನು ಸರಲಕ್ಕನ ಹತ್ತಿರ ಕುಳಿತಾಗ ರಾಮಣ್ಣ ಅಲ್ಲಿ ಹಣಿಕಿ ಕೂಡ ನೋಡುತ್ತಿರಲಿಲ್ಲ ! ಎಷ್ಟೋ ಸಲ, ತಾನು ಬಂದಾಗ ರಾಮಣ್ಣ ಅಲ್ಲಿ ಕುಳಿತಿದ್ದರೆ, ತನ್ನನ್ನು ಬಾಗಿಲಿನಲ್ಲಿ ನೋಡಿದಾಕ್ಷಣ "ಆಯ್ತು, ಜೋಡಿ ಆಯ್ತಲ್ಲ" ಎನ್ನುತ್ತ ಹುಸಿನಗೆಯಿಂದ್ ಹೋಗಿಯೆ ಬಿಡುತ್ತಿದ್ದ. ಇದನ್ನೆಲ್ಲ ಕಂಡು ಒಮ್ಮೊಮ್ಮೆ ಕುಮುದಳಿಗೆ ರಾಮಣ್ಣನ ಬಗ್ಗೆ – ಯಾಕೊ ? ಏನೊ ? – ವ್ಯಥೆಯಾಗುತ್ತಿತ್ತು. ಒಮ್ಮೆ ಅಂತಹ ಮನಃಸ್ಥಿತಿಯಲ್ಲಿದ್ದಾಗ ಧೈರ್ಯ ತಂದುಕೊಂಡು ತಾನೇ ಸರಲಕ್ಕನನ್ನು ಕೇಳಿದ್ದಳು :—"ಯಾಕ ? ಅವರ ಪ್ರಕೃತಿ-ಸರಿಯಾಗಿಲ್ಲೇನು ?"

"ಕೇಳಿದರ ನನಗೇನು ಧಾಡಿ ಆಗೇದ ಅಂತಾರವ್ವಾ!" ಎಂದು ಸರಲಕ್ಕ ಉಸುರ್ಗರೆದಿದ್ದಳು.

"ಅಲ್ಲ, ಮುಖ ಬೆಳ್ಳಗಾಗೇದ, ಅದಕ್ಕಂದೆ."

"ನಾನು ಹಾಂಗ ಹೇಳಿದರ ಏನೋ ಅಂದ್ಬಿಟ್ಟರು."

"ಕೇಳಿಯಾದರೂ ನೋಡ್ತೀ ಏನು ಅಂತ. ಯಾಕಂದ್ರ — "

"ನಾ ಕೇಳಿದರ ಅವರು ಹೇಳಲಿಕ್ಕಿಲ್ಲ" ಮತ್ತೆ ಸರಲಕ್ಕ ಉಸುರ್ಗರೆ-ದಿದ್ದಳು.

ಕುಮುದಳ ಸಂಶಯ ಮತ್ತೆ ತಲೆ ಎತ್ತಿತು. ಇದೇನು ? ಗಂಡ – ಹೆಂಡಿರ ಜಗಳವಿರಲಿಕ್ಕಿಲ್ಲವಷ್ಟೆ ? ತನ್ನದೇನೂ ಸಂಬಂಧವಿರಲಿಕ್ಕಿಲ್ಲವಲ್ಲ ? ತನ್ನ ಕಡೆ ಬರುವುದಂತೂ ಇರಲಿ, ನೋಡುವುದು ಕೂಡ ಇಲ್ಲ, ಏನಾದರೂ ಸರಲಕ್ಕನಿಗೆ ತಿಳಿದುಬಂದು – ?

"ನಿನಗ ಹೇಳದೆಯೆ ಯಾರಿಗೆ ಹೇಳ್ತಾರ, ಅಕ್ಕಾ ?" ಎಂದು ಹುಸಿನಗೆಯ ಪರದೆಯಿಂದ ಒಳಗಿನ ವಿಚಾರಗಳನ್ನು ಮರೆಯಾಗಿಸಲು ಯತ್ನಿಸುತ್ತ ಕುಮುದ ಕೇಳಿದ್ದಳು.

"ಹುಂ" ದೀರ್ಘವಾಗಿ ನಿಟ್ಟುಸಿರಿಟ್ಟು, "ನನ್ನ ಮ್ಯಾಲೆ ಸಿಟ್ಟಾಗ್ಯಾರ" ಎಂದಿದ್ದಳು ಸರಲಕ್ಕ.

ಗಂಡಹೆಂಡಿರ ವಾದದಲ್ಲಿ ಮೂರನೆಯವ ಬಾಯಿ ಹಾಕುವುದು ಬಲು ಸೂಕ್ಷ್ಮ ಎಂದು ಅರಿತ ಕುಮುದ ಸುಮ್ಮನಿದ್ದಳು.

"ಅವರದಾದರೂ ತಪ್ಪೇನು?" ಸರಲಕ್ಕ ವಿಷಾದದ ದನಿಯಲ್ಲಿ ನುಡಿದಿದ್ದಳು.

ಆ ಮಾತಿಗೂ ಕುಮುದ ತಲೆಕೆಳಗೆ ಮಾಡಿ ಸರಲಕ್ಕನ ಹೊದಿಕೆಯನ್ನು ಸರಿಪಡಿಸುತ್ತ ಮೌನದಿಂದಲೇ ಇದ್ದಳು. ಆದರೂ ಸರಲಕ್ಕನ ಮನಸ್ಸಿನೊಳಗಿದ್ದುದು ಈಗ ತಡೆಯದಂತಾಗಿತ್ತು, ಅದು ಹೊರಬೀಳಲೇಬೇಕು ಎಂದು ತಾನು ಕುತೂಹಲದಿಂದ ಕಾದಿದ್ದಳು. ಸರಲಕ್ಕನ ವಿಚಾರ ಲಹರಿ ದಂಡೆಯನ್ನು ದಾಟಿತು.

"ಅವರದಾದರೂ ತಪ್ಪೇನು ಹೇಳು, ಕುಮುದಾ. ಹೊರಗಿನ ತನ್ನ ಕೆಲಸಕ್ಕ ಕೈ ಖಾಲಿ ಇರಲಿ ಅಂತ ಹೆಂಡತೀನ್ನ ಮಾಡಿಕೊಳ್ಳೋದು, ಇಲ್ಲಿ ಹಾಸಿಗೆ ಹಿಡಿದ ಹೆಂಡತಿಯು ಸಲುವಾಗಿ ಮನೇವಳಗ ಕೈ ಕಟ್ಟಿ ನಿಲ್ಲೋದು! ಯಾಕ, ಕುಮುದಾ?" ಸರಲಕ್ಕನ ಮುಖದ ಮೇಲೆ ವಿಷಾದ, ನಿರಾಶೆಗಳ ಉರಿನಗೆಯ ಬೆಳಕು ಕಂಡಿತ್ತು.

"ಅದಕೇ ಅಂದೆ, ಅವರದಾದರೂ ತಪ್ಪೇನು?"

ಈಗಲೂ ಕುಮುದ ಮಾತಾಡಿರಲಿಲ್ಲ. ಆಕೆ ಮಾತಾಡಬಹುದೆಂಬ ವಿಚಾರ ಕೂಡ ಸರಲಕ್ಕನಿಗೆ ಇದ್ದಿರಲಿಲ್ಲ, ಆಕೆ ಹಾಗೇ ತನ್ನ ಮಾತನ್ನು ಮುಂದರಿಸಿದ್ದಳು.

"ಮನೀಗೆ ಬಂದರೆ ಒಂದು ಹಾದೀ ನೋಡೋದ, ಒಂದು ನಗೋದ, ಒಂದು ದಣಿದಿರಾ ಅಂತ ಕೇಳೋದ? ಏನಿಲ್ಲ, ಕಾಲಿಡೋದೊಂದೇ ತಡ ಹಾಸಿಗೇ ಮ್ಯಾಲ ಸಾಯಲಾರದೇ ಬಿದ್ದಿರೋ ಇದೊಂದು ಸುಟ್ಟ ಹೆಣ್ಣು!"

ಈಗ ಮಾತ್ರ ಕುಮುದಳಿಗೆ ಮಾತನಾಡಲೇ ಬೇಕೆನ್ನಿಸಿತ್ತು.

"ಇದೇನ, ಅಕ್ಕಾ? ಇಲ್ಲದ್ದೊಂದು ಕಲ್ಪನಾ ಮಾಡಿ ಮನಸ್ಸಿಗೆ ತ್ರಾಸ ಮಾಡಿಕೋಬ್ಯಾಡ. ಒಂದು ದಿನ ನೀನು ಅವರಿಗೆ ಕಾಣಿಸಲಿಲ್ಲ ಅಂದ್ರ ಹುಚ್ಚು ಹಿಡೀತದ ಅವರಿಗೆ. ನಿನಗ್ಯಾರು ಹೇಳಿದರು ಈ ಭೂತದ ಕತೆಯನ್ನ?"

"ಹುಚ್ಚಿ, ಕುಮುದ! ಇದನ್ನ ಯಾರು ಹೇಳಬೇಕು? ಅವರ ಮೋರೀ ಮ್ಯಾಲೇ ಕಾಣ್ತದ. ಮೊದಮೊದಲು ಬಂದ್ಕೂಡ್ಲೆ ನೋಡತಿದ್ದರು, ಏನಾದರೂ ಸುಧಾರಿಸೀನೇನೊ ಅಂತ. ಈಗ ಅದು ಖಾತ್ರಿಯಾಯಿತು

ಶಕ್ಯ ಇಲ್ಲ ಅಂತ; ಈಗ ಅವರು ಬಂದ್ಮ್ಯಾಕ್ಷೆ ನನ್ನ ನೋಡಿ ತಂ ಮನಸ್ಸಿನೊಳಗಿನ್ದು ತಡೆದುಕೊಂಡು ಬ್ಯಾರೇ ಏನಾದ್ರೂ ಮಾತಾಡ್ಲಿಕ್ಕೆ ಪ್ರಯತ್ನ ಮಾಡ್ತಾರಲ್ಲ ?—ಆಗ ಅಂತೂ ಅವರ ಮುಖ ನೋಡಿದರ ನನ್ನ ಕರುಳು ಕಿತ್ತಿ ಕಯ್ಯಾಗ ಬಂಧಾಂಗ ಆಗ್ತದ. ನಾನಾದ್ರೂ ಏನ್ಮಾಡಲಿ ಹೇಳು, ಕುಮುದ ? ಮನೇವಳಗ ಒನ್ನಾಲ್ಕು ಮಕ್ಕಳಾದ್ರೂ ಇದ್ದರ ಹೊರಗಿನಿಂದ ಬಂದ ಕೂಡಲೆ ಹುಡುಗರ ಆಟ-ಗದ್ದಲದಿಂದ ಏನಾದ್ರೂ ಸಮಾಧಾನ ಆಗ ಬಹುದಿತ್ತು. ನನ್ನ ಹಣೇ ವಳಗ ಏನೂ ಬರೆದಿಲ್ಲ; ಬಂದು ಅವರನ್ನ ಸೂರೆ ಮಾಡಿದೆ, ಹೋಗುವಾಗೂ — ”

ಇಷ್ಟೊಂದುದ್ದ ಮತ್ತು ಕಳಕಳಿಯ ಮಾತುಗಳನ್ನಾಡುವುದು ಸರಲಕ್ಕನಿಗೆ ದಣಿವನ್ನು ತಂದುಕೊಟ್ಟತ್ತೇನೊ ! ಆದರೆ ಆ ದಣಿವನ್ನು ಕೂಡ ತಡೆದುಕೊಳ್ಳುವ ಶಕ್ತಿ ದೇಹಕ್ಕೆ ಇಲ್ಲದಾಗಿ ಆಕೆಯ ಕಣ್ಣುಗಳಲ್ಲಿ ಅಸಹಾಯುಕತೆಯ ಕಂಬನಿಗಳು ಮಿಂಚಿದ್ದುವು. ಕುಮುದಳಿಗೂ ಅದನ್ನು ನೋಡಿ ಅತೀವ ವೇದನೆಯಾಗಿತ್ತು.

“ಒಬ್ಬಳೇ ಮಲಗಿ ಇಲ್ಲದ ವಿಚಾರ ತಂದುಕೊಳ್ಳತಿ, ಅಕ್ಕಾ. ಯಾರ್ಯಾರಿಗೂ ಈ ಮನೇವಳಗ ಎಂದಿಗೂ ಅಂತಹ ವಿಚಾರ ಬಂದಿಲ್ಲ.”

ಸರಲಕ್ಕನು ದುಃಖದ ಆವೇಗವನ್ನು ತಡೆಯುತ್ತ ಹೇಳಿದ್ದಳು. “ಆದರೂ ನನಗ ಸಮಾಧಾನ ಇಲ್ಲ, ಕುಮುದಾ. ಇದ್ದಾಗ ನನ್ನ ಕರ್ತವ್ಯ ಮಾಡಲಿಲ್ಲ, ಸಾಯೋವಾಗ ಆದ್ರೂ ಮಾಡೋಣ ಅಂತೀನಿ. ಅದಕ್ಕೇ ಒಂದು ಮಾತು ಹೇಳಿದೆ ಅವರಿಗೆ, ನನ್ನ ಮ್ಯಾಲೆ ಸಿಟ್ಟಾಧಾಂಗ ಕಾಣ್ತದ.”

“ಯಾವ ಮಾತೇ ಅದು, ಅಕ್ಕಾ ? ಅವರಿಗೆ ಸಿಟ್ಟುತರುವಂಥಾ ಮಾತು ನಿನ್ನ ಬಾಯಿಯಿಂದ ಬಂದಿತು ಅಂತ ನನಗ ಸಹಿತ ವಿಶ್ವಾಸ ಇಲ್ಲ.”

“ಏನೊ, ತಾಯೀ ! ಸಿಟ್ಟು ಬಂದದ್ದಂತೂ ಖರೇ.”

“ಅಂಥಾದ್ದೇನಕ್ಕಾ ನೀನಂದದ್ದು ?”

ಕುಮುದ ತುಸು ಕೆಣಕುವ ಮತ್ತು ತುಸು ವಿನೋದದ ದನಿಯಲ್ಲಿಯೆ ಈ ಪ್ರಶ್ನವನ್ನು ಕೇಳಿದ್ದಳು. ಅದನ್ನು ಕೇಳುವಾಗ ಕೊನೆಗೆ ಇದೊಂದು ರೂಢಿಯ ಗಂಡ-ಹೆಂಡಿರ ವಾದವೇ ಎಂದು ಹೊರಬೀಳುವುದು ಎಂದು ಕುಮುದಳ ನಂಬುಗೆ. ತಾನು ಆ ಮನೆಯಲ್ಲಿದ್ದುಕೊಳ್ಳಹತ್ತಿದಂದಿನಿಂದ

ಸರಲಕ್ಕನ ಬಾಯಿಯಿಂದ ಬಿರಸು ಇಲ್ಲವೆ ಕೊಂಕು ಮಾತನ್ನಾಗಲಿ, ಆಕೆಯು ಯಾವುದೆ ಮಾತಿಗಾಗಿ ರಾಮಣ್ಣ ಸಿಟ್ಟನಿಂದ ಗದ್ದರಿಸಿದ್ದಾಗಲಿ ಕೇಳಿರಲಿಲ್ಲ; ಈಗಂತೂ ಅಸಹಾಯಸ್ಥಿತಿಯಲ್ಲಿದ್ದಾಳೆ ಸರಲಕ್ಕ, ಆದ್ದರಿಂದ ರಾಮಣ್ಣ ಸಿಟ್ಟಿಗೆ ಬರುವುದು ಶಕ್ಯವೇ ಇಲ್ಲ; ಬೇನೆಯ ಅಶಕ್ತಿಗಾಗಿ ಎಂತೆಂತಹರ ಬುದ್ಧಿಯೂ ಹುಡುಗಬುದ್ಧಿಯಾಗುವುದು, ಹೃದಯ ಬಹಳೇ ಮೃದು ಆಗುವುದು; ಹಾಗಾಗಿ ಸರಲಕ್ಕ ನೊಂದುಕೊಂಡಿರಬಹುದು ಎಂದು ತಾನು ಮನಸ್ಸಿನಲ್ಲಿ ಎಣಿಕೆಯನ್ನು ಹಾಕಿ ಕುಮುದ ಆ ಪ್ರಶ್ನವನ್ನು ಕೇಳಿದ್ದಳು.

"ಅವರಿಗೆ ನಾ ಇನ್ನೊಂದು ಮದುವೆ ಮಾಡಿಕೊಳ್ಳಲಿಕ್ಕೆ ಹೇಳಿ-ಕೊಂಡೆ."

ಸರಲಕ್ಕನ ಈ ಉತ್ತರವನ್ನು ಕೇಳಿ ಕುಮುದಳ ಅವಸ್ಥೆ, ಎತ್ತರದಿಂದ ಕೆಳಗೆ ಬಿದ್ದು ಎಚ್ಚರ ತಪ್ಪಿದವನು ಎಚ್ಚೆತ್ತಂತಾಗತಿತ್ತು. ತಾನು ಇರುವುದೆಲ್ಲಿ? ಮಾತನಾಡುತ್ತಿರುವವರು ಯಾರು? ಮಾತಿನ ಸಂದರ್ಭವೇನು? ಒಂದು ಕ್ಷಣ ಯಾವುದೂ ತಿಳಿದಿರಲಿಲ್ಲ. ಮದುವೆ? ರಾಮಣ್ಣನಿಗೆ? ಇನ್ನೊಂದು ಮದುವೆ? ಯಾಕೆ? ಹೆಂಡತಿಯೆ- ಆ ಮಾತನ್ನು ಹೇಳುತ್ತಿರುವಳಲ್ಲ? ಯಾಕೆ? ಇಂತಹ ಮಾತಿಗಾಗಿ ನಕ್ಕು ನಗೆಯಾಡುವ ರಾಮಣ್ಣ ಸಿಟ್ಟಿಗೆ ಬಂದಿದ್ದಾನಂತೆ? ಯಾ-ಕೆ- ? ಹೀಗೆ ನಾನಾತರದ ವಿಚಾರಗಳು ನೂಕ-ನುಗ್ಗಲಾಟವಾಡುತ್ತ ತನ್ನ ತಲೆಯನ್ನು ಧೈಧೈ ಕುಣಿತದಿಂದ ತುಳಿದು ತಿಪ್ಪೆ ಮಾಡಿದಂತೆನ್ನಿಸಿತ್ತು. ಜೊತೆಗೆ ಮುಖದಲ್ಲಿ ಯಾವುದನ್ನೂ ತೋರಿಸಿಕೊಡಬಾರದೆಂಬ ಯತ್ನ! ರಾಮಣ್ಣನ ಮದುವೆಯ ಬಗ್ಗೆ ತನಗೇಕೆ ಇಷ್ಟು ಚಿಂತೆ-ಎಂದು ಸರಲಕ್ಕನಿಗೆ ಸಂಶಯ ಬಂದಿದ್ದರೆ? ಅದಕಾಗಿ - ತನ್ನ ವಿಚಾರಗಳ ನುಗ್ಗಾಟದ ಸದ್ದು ತನಗೇ ಕೇಳಿಸಬಾರದೆಂಬಂತೆ ತಾನು ಗಟ್ಟಿಯಾಗಿ ನಕ್ಕುಬಿಟ್ಟದ್ದಳು! ನೋವಿನಿಂದಲೂ ನಗಬಹುದು ಎಂಬ ವಿಚಿತ್ರ ಅನುಭವ ತನಗೆ ಅಂದು ಬಂದಿತ್ತು.

"ಅಯ್ಯ! ಇಂಥಾ ಹುಡುಗಾಟದ ಮಾತು ಆಡಿದರ ಸಿಟ್ಟಿಗೆ ಬರದೇ ಬಿಡ್ತಾರೇನ, ಅಕ್ಕಾ?" ಎಂದು ನಗುತ್ತಲೇ ಕೇಳಿದ್ದಳು.

"ಅವರು ಸಿಟ್ಟಿಗೆ ಬಂದರು, ನೀನು ನಗತೀ!"

ಸಲಕ್ಕನಿಗೆ ವ್ಯಥೆಯಾದುದನ್ನು ನೋಡಿ ಕುಮುದ ನೊಂದಿದ್ದಳು. "ನಗ್ತೀನಿ ಅಂತ ತಪ್ಪು ತಿಳೀಬ್ಯಾಡ, ಅಕ್ಕಾ. ಅಲ್ಲ, ನೀನೇ ನೋಡು, ಹೆಂಡ್ತೀನ್ನ ಉಳಿಸಿಗೋಬೇಕು ಅಂತ ಹಗಲು-ರಾತ್ರಿ ಹಣ್ಣಾಗುವವರಿಗೆ ಇನ್ನೊಂದು ಹೆಂಡ್ತೀನ್ನ ಮಾಡಿಕೋರಿ ಅಂದ್ರ — "

"ಅಷ್ಟೇನು ನನಗ ತಿಳಿಯೋದಿಲ್ಲೇನೆ, ಕುಮುದಾ? ಅವರು ನನ್ನ ಉಳಿಸಿಗೋಬೇಕು ಅನ್ನುವಾಗ ನಾ ಯಾಕ ಸಾಯ್ಬೇಕು ಅಂತೀನಿ? ಆದ್ರ, ಇಷ್ಟು ಕಷ್ಟಪಡುವವರಿಗೆ ಒಂದಿಷ್ಟಾದರೂ ಸುಖ ಸಿಗಲಿ, ಅದೂ ನನ್ಕಣ್ಮುಂದೇ ಸಿಗಲಿ ಅಂತ — "

"ಇನ್ನೊಂದು ಹೆಂಡತಿ ಅಂದರ ಅವರಿಗೆ ಸುಖ ಅನ್ನಿಸಲಿಕ್ಕಿಲ್ಲ."

ಆ ಮಾತನ್ನಾಡಿದ ಮೇಲೆ ತನ್ನ ನಾಲಗೆಯನ್ನು ಕೊಯ್ದೊಗೆಯ ಬೇಕೆಂದೆನ್ನಿಸಿತ್ತು ಕುಮುದಳಿಗೆ. ಎಂತಹ ಅಭದ್ರ ಮಾತು ಬಂದಿತು ತನ್ನ ಬಾಯಿಯಿಂದ!....

ಕುಮುದಳು ಹೊದಿಕೆಯನ್ನು ಬಿಸುಡಿ ಹಾಸಿಗೆಯಿಂದ ಎದ್ದಳು. ಅಂದು ತನ್ನ ಬಾಯಿಯಿಂದ ಹೊರಬಿದ್ದ ಮಾತು ಅಭದ್ರ ಮಾತು ಎಂದು ಈಗ ತನಗೆ ನ್ನಿಸಿದೆ, ಆಗ ಎನ್ನಿಸಿರಲಿಲ್ಲ ಎಂದುಕೊಂಡಳು. ಆದರೂ ಆ ರಾತ್ರಿ ಸರಲಕ್ಕ ನೊಡನೆ ನಡೆದ ಮಾತುಕತೆಗಳಿಂದ ತನ್ನ ಮನಸ್ಸು ಕಲಕಿತವಾಗಿತ್ತು ಎಂಬುದು ಮಾತ್ರ ನಿಜ. ಮಾತು ಮುಗಿಸಿ, ಸರಲಕ್ಕ ನಿದ್ದೆ ಹೋದೊಡನೆ ತನ್ನ ಕೋಣೆಗೆ ಬಂದ ಕುಮುದಳಿಗೆ ಒಂದೆಡೆ ನಿಲ್ಲಲು ಮನಸ್ಸಾಗಿರಲಿಲ್ಲ. ಹಾಗೆ ನಿಂತರೆ ತನ್ನ ಮನಸ್ಸಿನಲ್ಲಿದ್ದ ವಿಚಾರವು ಧುತ್ತೆಂದು ತನ್ನನ್ನು ಎದುರುಗಟ್ಟಿ ಮಾತನಾಡಿಸುವುದೊ ಎಂಬ ಹೆದರಿಕೆ. ಆ ವಿಚಾರವನ್ನು ತಪ್ಪಿಸುವಂತೆ ಕೋಣೆಯಲ್ಲಿ ಅತ್ತಿತ್ತ ಸುಳಿದಾಡಿದ್ದಳು. ಕೊನೆಗೂ ಆ ವಿಚಾರ ತನ್ನನ್ನು ಎದುರುಗಟ್ಟದೆ ಬಿಟ್ಟಿರಲಿಲ್ಲ.

ರಾಮಣ್ಣನ ಮದುವೆ! ಅದು ನಿನ್ನ ಕೂಡವೆ ಯಾಕಿರಬಾರದು? ಮದುವೆ ಗೊತ್ತಾದ ಅಕ್ಕನನ್ನು ಪೀಡಿಸುವ ತಮ್ಮನಂತೆ ಈ ವಿಚಾರವು ಅಂದು ಕುಮುದಳನ್ನು ಕೆಣಕಿತ್ತು. ಒಂದೇ ಸಮನೆ ಅದೇ ಅದೇ ಪ್ರಶ್ನವನ್ನು ಪುನರುಚ್ಚರಿಸಿ ಕೊನೆಗೆ ಕುಮದಳಿಗೂ "ಇದು ನಿಜವಿರಬಹುದೆ?" ಎಂದೆನ್ನಿಸತೊಡಗಿತ್ತು. ಆದರೆ ಆ ಹುಸಿ ನೆಮ್ಮದಿ ಬಹಳೊತ್ತು ತಡೆದಿರಲಿಲ್ಲ.

ಆ ವಿಚಾರ ನಿಜವಿದ್ದರೆ ರಾಮಣ್ಣ ಸಿಟ್ಟಿಗೆ ಬಂದಿರುವ ಎಂಬ ಮಾತು ಆಘಾತದಂತಾಗುವುದು. ತನ್ನೊಡನೆ ಮದುವೆ ರಾಮಣ್ಣನಿಗೆ ಅಷ್ಟು ಅನಿಷ್ಟ, ಅಷ್ಟು ಅಸಹ್ಯ ಎನ್ನಿಸಿತೆ? ಎದುರು ಕನ್ನಡಿಯಲ್ಲಿ ಕಾಣುವ ತನ್ನನ್ನು ನೋಡಿಕೊಂಡಳು, ಆ ದೇಹದ ಮೇಲೆ ರಾಮಣ್ಣನಿಗೆ ಯಾವ ತರದ ಅಧಿಕಾರ ಬಂದಿದೆ ಎಂಬ ಚಿತ್ರವೂ ಅವಳ ಕಣ್ಣು ಮುಂದೆ ನಿಂತಿತ್ತು. ಹೀಗಿದ್ದೂ – ರಾಮಣ್ಣನಿಗೆ ಸಿಟ್ಟು! ಛೆ – ಈ ಮದುವೆ ತನಗೆ ಸಂಬಂಧಿಸಿದ್ದೇ ಅಲ್ಲ – ಎಂದುಕೊಂಡಿದ್ದಳು. ಇಂದಿಗೆ ಎಷ್ಟು ದಿನಗಳಾಗಿದ್ದುವು ರಾಮಣ್ಣ ತನ್ನ ಕಡೆಗೆ ಬಾರದೆ? ಕಣ್ಣೆತ್ತಿ ನೋಡದೆ? ಯಾಕೆ? "ಹಾಂ – ತಿಳಿಯಿತು–" ಎಂದೆನ್ನಿಸಿತ್ತು ಕುಮುದಳಿಗೆ. "ಮತ್ತೆ ಯಾರೊಡನಾದರೂ ಮದುವೆಯ ವಿಚಾರ ಅವನ ಮನಸ್ಸಿನಲ್ಲಿದ್ದಿರಬೇಕು, ಅದಕಾಗಿ ನನ್ನ ಸಹವಾಸವನ್ನು ಅವನು ತಪ್ಪಿಸುತ್ತಿರಬೇಕು!"

ಆ ವಿಚಾರ ಬಂದೊಡನೆ ಕುಮುದಳ ಜೀವವೆ ಹಾರಿಹೋದಂತಾಗಿತ್ತು. ಇನ್ನೊಬ್ಬಾಕೆಯೊಡನೆ ರಾಮಣ್ಣನ ಮದುವೆ – ಎಂಬ ವಿಚಾರ ತಡೆಯಲು ಕೂಡ ಅಶಕ್ಯ ಎಂಬಂತೆ ಗಟ್ಟಿಯಾಗಿ ಕಣ್ಣಗಳನ್ನು ಮುಚ್ಚಿ, ಭೂತ ಹೊಕ್ಕವರಂತೆ ಆವೇಶದಿಂದ ತಲೆಯನ್ನಲ್ಲಾಡಿಸುತ್ತ — "ಅಲ್ಲ–ಅಲ್ಲ–ಇದು ಸುಳ್ಳು – ಇದಾಗದು" ಎಂದು ಕನ್ನಡಿಯೊಳಗಿನ ಕುಮುದಳಿಗೆ ಹಟದಿಂದ ಹೇಳತೊಡಗಿದ್ದಳು. ಕನ್ನಡಿಗೆ ತೀರ ಹತ್ತಿರವಿದ್ದಾಗ ಅವಳಿಗೆ ಎಚ್ಚರ ಬಂದಂತಾಗಿತ್ತು. ಇದೇನು ಹುಚ್ಚುತನ! ಅಲ್ಲದ ಸಲ್ಲದ ಕಲ್ಪನೆಗೆ ಭ್ರಮಿಷ್ಟಳಂತಾಗುವುದೆ? ಆದರೆ ಇದು ಕಲ್ಪನೆಯಲ್ಲ, ಸರಲಕ್ಕ ಬಾಯಿಯಿಂದ ಹೇಳಿದ್ದನ್ನು ತಾನೇ ಕಿವಿಮುಟ್ಟಿ ಕೇಳಿದ್ದಾಳೆ, ರಾಮಣ್ಣನ ಎರಡನೆಯ ಮದುವೆ —

ಛೆ! ಇದೆಂದೂ ಶಕ್ಯವಿಲ್ಲ – ಎಂದು ಸಮಾಧಾನವನ್ನು ತಂದುಕೊಂಡಿದ್ದಳು. ಆ ಮಾತಿಗೆ ರಾಮಣ್ಣ ಸಿಟ್ಟಿಗೆ ಬಂದಿರುವ ಎಂದು ಸರಲಕ್ಕನೇ ಹೇಳಲಿಲ್ಲವೆ? ಒಂದು ಕ್ಷಣ ಸಂತೋಷವೆನ್ನಿಸಿತ್ತು ಆ ವಿಚಾರಕ್ಕಾಗಿ. ಕೂಡಲೇ ವಿಷಾದವೂ ಆವರಿಸಿತ್ತು ಅವಳ ಮುಖವನ್ನು. ರಾಮಣ್ಣನ ಎರಡನೆಯ ಮದುವೆ ಶಕ್ಯವಿಲ್ಲ – ಎಂದರೆ – ಎಂದರೆ? — ಒಂದು ವೇಳೆ ತನ್ನ ಸಂಬಂಧವಾಗಿಯೆ ಆ ಮಾತು ಇದ್ದರೆ ರಾಮಣ್ಣ ತನ್ನನ್ನೂ ಮದುವೆಯಾಗಲು ಸಿದ್ಧನಿಲ್ಲ – ಎಂದಂತಾಯಿತಲ್ಲ? ಕನ್ನಡಿಯೊಳಗಿನ ಕುಮುದ

ಸಮಾಧಾನದ ಉತ್ತರವನ್ನು ಕೊಡುವಳು ಎಂಬಂತೆ ಅಪೇಕ್ಷಾದೃಷ್ಟಿಯಿಂದ ತನ್ನ ಪ್ರತಿಬಿಂಬವನ್ನು ನೋಡಿದ್ದಳು.

ಮನಸ್ಸು ನಿಜವಾಗಿಯೆ ಎಷ್ಟು ಚಂಚಲವಾಗಿದೆ! ಹಾಗೆ ಪ್ರತಿಬಿಂಬವನ್ನು ಒಂದೇ ಸಮನೆ ದಿಟ್ಟಿಸುತ್ತ ನಿಂತಾಗ ಮೊದಲಿದ್ದ ವಿಚಾರ ಎಲ್ಲಿಯೊ ಮಾಯವಾಗಿ ಪ್ರತಿಬಿಂಬದ ವಿಚಾರವೆ ಅಲ್ಲಿ ನೆಲೆಯೂರಿ ನಿಂತಿತ್ತು. ತನ್ನ ಪ್ರತಿಬಿಂಬವನ್ನು ತಾನೇ ಮೋಹಿಸಿದವಳಂತೆ ಆನಂದ, ಅಭಿಮಾನ ಎರಡೂ ಅವಳ ಮುಖದಲ್ಲಿ ಮೂಡಿದ್ದುವು. "ರಾಮಣ್ಣನ ಸೊತ್ತು ಇದು" ಎಂದಳು. "ಮದುವೆಯಾಗಲಿ ಆಗದಿರಲಿ, ಇದು ಪೂರ್ತಿ ರಾಮಣ್ಣನ ಸೊತ್ತು. ರಾಮಣ್ಣ ಯಾರನ್ನೆ ಮದುವೆಯಾದರೆ ಇದು ಮಾತ್ರ ರಾಮಣ್ಣನ ಸೊತ್ತು. ತಿಳಿಯಿತೆ ?" ಎಂದು ಪ್ರತಿಬಿಂಬಕ್ಕೆ ತಿಳುಹಿಸಿಕೊಡುವಂತೆ ಕೇಳಿದ್ದಳು. ಯಜ್ಞದಲ್ಲಿ ಆಹುತಿಯಾಗುವ ಪಶುವಿಗೂ ಸ್ವರ್ಗ ಸಿಕ್ಕುವುದು ಎಂಬುದನ್ನು ನಂಬದವರಿಗೆ ಸ್ವರ್ಗದ ಕಲ್ಪನೆಯೆ ಇದ್ದಿರಲಿಕ್ಕಿಲ್ಲ – ಎಂದು ಆಗ ಕುಮುದಳು ವಾದಿಸಲು ಸಿದ್ಧಳಿದ್ದಳು. ಒಂದು ತರದ ಯಜ್ಞದಲ್ಲಿ ತನ್ನ ದೇಹ ಆಹುತಿಯಾಗಿದೆ, ಅದಕಾಗಿ ಆ ದೇಹಕ್ಕೆ ಆನಂದವೆ ಆಗಿದೆ ಎಂಬುದನ್ನು ಆಕೆ ಪುಲಕಿತವಾದ ತನ್ನ ದೇಹದಿಂದ ಅಂದು ಕಂಡುಕೊಂಡಿದ್ದಳು. ಕನ್ನಡಿಯಲ್ಲಿ ಅದನ್ನು ನೋಡಿ ನೋಡಿದಂತೆ ಆ ದೇಹಕ್ಕಾಗಿ ಮೊದಲು ಅಭಿಮಾನ, ಆಮೇಲೆ ಆನಂದ, ತರುವಾಯ ಕನಿಕರ, ಕೊನೆಗೆ ವಾತ್ಸಲ್ಯ ಎನ್ನಿಸಿತ್ತು ಆಕೆಗೆ. ಯಾವುದನ್ನೂ ವಿಚಾರ ಮಾಡದೆ ಲಗಬಗೆಯಿಂದ ಆ ದೇಹವನ್ನು ಸಿಂಗರಿಸಿಕೊಂಡಿದ್ದಳು. ಆಹುತಿಯಾದಲ್ಲಿ ಆನಂದ, ಎಷ್ಟು ಬೇಗ ಆಹುತಿಯಾಗುವುದೊ ಅಷ್ಟು ತೀವ್ರವಾಗಿ ಆನಂದ; ಆದುದರಿಂದಲೆ ಈಗಲೆ ಈ ಆಹುತಿಯನ್ನು ಅರ್ಪಿಸತಕ್ಕದ್ದು ಎಂದು ನಿರ್ಧರಿಸಿ ಕೋಣೆಯಿಂದ ಹೊರಬಿದ್ದಿದ್ದಳು; ರಾಮಣ್ಣನ ಕೋಣೆಯು ಬೆಳಕು ಬಾಗಿಲ ಕೆಳಸಂದಿಯಿಂದ ಕಾಣುತ್ತಿತ್ತು, ಆ ಬೆಳಕಿನ ಒಂದು ಸೂಕ್ಷ್ಮ ಎಳೆಯಿಂದ ಬಿಗಿಯಲ್ಪಟ್ಟು ಬಲವಾಗಿ ಸೆಳೆದುಕೊಳ್ಳಲ್ಪಡುತ್ತಿರುವಳೇನೊ ಎಂಬಂತೆ ಕುಮುದ ನೇರವಾಗಿ ಆ ಬಾಗಿಲಿಗೆ ಬಂದಿದ್ದಳು.

ಅದೇ ಬೆಳಕಿನ ಎಳೆ ಬಾಗಿಲಿಗೆ ಬಂದಾಗ ಅವಳ ಕಾಲಿಗೆ ಒಂದು ಕ್ಷಣ ತೊಡಕಿದಂತಾಗಿತ್ತು, ತಡೆದಿದ್ದಳು ಇದೇನು ? ತಿಳಿಯದೆ ತಾನು

ಬಾಗಿಲನ್ನು ಬಡಿದಳೆ ? ಅಲ್ಲ – ಅದು ತನ್ನ ಹೃದಯ ಬಡಿದುಕೊಳ್ಳುತ್ತಿರುವ ಸದ್ದು. ಡಕ್ ! ಡಕ್ ! ಅಲ್ಲ – ಕೋಣೆಯೊಳಗಿನ ಗಡಿಯಾರದ ಸದ್ದು. ಡಕ್ ! ಡಕ್ ! ಉಹುಂ – ಒಳಗೆ ರಾಮಣ್ಣ ಅತ್ತಿಂದಿತ್ತ ಸುಳಿದಾಡುತ್ತಿದ್ದಾನೆ! ತಟ್ಟನೆ ಕುಮುದಳಿಗೆ ಹೊಳೆದಂತಾಗಿತ್ತು, ಹೊಳೆದುದಕ್ಕಾಗಿ ಅವಳ ಮುಖದಲ್ಲಿ ಮುಗುಳ್ನಗೆಯೂ ಮೂಡಿತ್ತು. ಮನಸ್ಸಿನಷ್ಟು ವೇಗವುಳ್ಳ ಶಕ್ತಿ ಇನ್ನೊಂದಿದೆಯೆ ಜಗತ್ತಿನಲ್ಲಿ? ಕುಮುದಳ ಮನಸ್ಸು ಅದೊಂದು ನಿಮಿಷದಲ್ಲಿ ಕಂಡುಕೊಂಡ ರಂಗತರಂಗವಾದ ವಿಚಾರಪ್ರವಾಹದ ಸಂತತ ಓಘದಿಂದ ತಾನೇ ಆ ಮನಸ್ಸಿನೊಡನೆ ಹದಿನಾಲ್ಕು ಲೋಕಗಳನ್ನು ಸಂಚರಿಸಿ ಬಂದಂತೆನ್ನಿಸಿತ್ತು ಆಕೆಗೆ. ರಾಮಣ್ಣ ಅತ್ತಿಂದಿತ್ತ ಸುಳಿದಾಡುತ್ತಿದ್ದಾನೆ: ಯಾಕೆ? ತನಗಾಗಿ, ಕೇವಲ ತನಗಾಗಿ ಎಂದು ತಿಳಿದುಕೊಳ್ಳಲು ಕುಮುದಳ ಹಂಬಲಿಸುವ ಮನಸ್ಸಿಗೆ ತಡವಾಗಲಿಲ್ಲ. ತನ್ನನ್ನು ಬಿಟ್ಟು ರಾಮಣ್ಣ ಇರಲಾರ! ಆದರೆ – ಪಾಪ! – ತನ್ನ ಕಡೆ ಬರಲಾರ! ಸರಲಕ್ಕನ ಮಾತಿಗೆ ಹೆದರಿದ್ದಾನೆ! ಅದಕಾಗಿ ಸುಳಿದಾಡುತ್ತಿದ್ದಾನೆ! ಈಗ ಅವನಿಗೆ ಎಂತಹ ಆಶ್ಚರ್ಯವಾಗಬಹುದು! ದೇವನ ಅನುಗ್ರಹಕ್ಕಾಗಿ ಹೆದರಿಕೊಂಡ ಭಕ್ತನ ಎದುರು ದೇವ ತಾನಾಗಿ ಸಾಕ್ಷಾತ್ತಾಗಿ ಬಂದು ನಿಂತರೆ ಆ ಭಕ್ತನ ಅವಸ್ಥೆ ಏನಾಗಬಹುದು ?....ಮೆಲ್ಲನೆ ಬಾಗಿಲಿಗೆ ಕೈ ಹಚ್ಚಿದ್ದಳು ಕುಮುದ. ಬಾಗಿಲು ತೆರೆದವ್ವೇ ಇದೆ! ಈಗ ತಾನು ಒಳಗೆ ಹೋಗಬೇಕು, ಹೋದವಳೆ ರಾಮಣ್ಣನ ಕಣ್ಣನ್ನು ಹಿಂದಿನಿಂದ ಗಟ್ಟಿಯಾಗಿ ಮುಚ್ಚಬೇಕು!....ಉಹುಂ. ಕಣ್ಣಗಳನ್ನು ಮುಚ್ಚಿದರೆ ಸಮಾಧಾನವಿಲ್ಲ. ರಾಮಣ್ಣನನ್ನು ಬಿಗಿದಪ್ಪಬೇಕು, ಬಲವಾಗಿ ಬಿಗಿದಪ್ಪಬೇಕು, ತನ್ನ ತೋಳಗಳಲ್ಲಿ ಸಿಕ್ಕ ಅವನ ಮೈ ಕ್ರಮೇಣ ಕರಗಿ ಕರಗಿ ತನ್ನಲ್ಲಿ ಮೈಗೂಡಿಕೊಳ್ಳಬೇಕು, ಅಷ್ಟು ಬಲವಾಗಿರಬೇಕು ತನ್ನ ಅಪ್ಪುಗೆ! ಬೇಡ – ಅದೂ ಬೇಡ....ಅದೊ – ಈಗ ಇತ್ತ ಕಡೆ ಬರುತ್ತಿದ್ದಾನೆ; ಒಳಗಿನ ಕಳವಳದಿಂದ ಅವನ ಮುಖ ಎಷ್ಟು ಸುಂದರವಾಗಿ ಕಾಣುತ್ತಿದೆ! ಯಾವುದೊ ವಿಚಾರಕ್ಕಾಗಿ ಅವನ ತುಟಿಗಳು ನಡುಗುತ್ತಿವೆ. ನಡುಗುವ ಆ ತುಟಿಗಳನ್ನು ನೋಡಿ ಕುಮುದಳ ಬಾಯಿ ಅರೆದೆರೆದಿತ್ತು. ಆ ತುಟಿಗಳನ್ನು ತನ್ನ ತುಟಿಗಳಿಂದ ಗಟ್ಟಿಯಾಗಿ ಹಿಡಿಯಬೇಕು, ಅವು ನಡುಗದಂತೆ, ಎನ್ನಿಸಿತ್ತಾಕೆಗೆ. ಅಷ್ಟಕ್ಕೆ ಸಮಾಧಾನವಾದೀತೆ? ಎರಡೂ ಕೈಗ-

ಳಿಂದ ಅವನ ಮುಖವನ್ನು ಗಟ್ಟಿಯಾಗಿ ಹಿಡಿದು – ? ಅವ್ವಯ್ಯ ! ಆ ಮುಖ ಹೀಗೇ ತನ್ನೆದುರಿನಲ್ಲಿದ್ದರೆ ತನಗೆ ಹುಚ್ಚು ಹಿಡಿದೀತು ! ಅದನ್ನು ಎದುರಿನಲ್ಲಿ ಕಾಣಗೊಡಬಾರದು – ಅದನ್ನು ಮುಚ್ಚಿಡಬೇಕು, ಮುತ್ತಿಡಬೇಕು, ಚೂರು ಚೂರಾಗಿಸಿ —

ಅಂದು ರಾತ್ರಿ ತಾನು ಮನಸ್ಸಿನಿಂದ ತೀರ ಭ್ರಷ್ಟಳಾಗಿದ್ದರಲ್ಲಿ ಸಂದೇಹವಿದ್ದಿರಲಿಲ್ಲ. ಒಂದರ ಮೇಲೊಂದು ನುಗ್ಗುತ್ತಿರುವ ವಿಚಾರಗಳಿಂದ ಕೊನೆಗೆ ಎಚ್ಚರದಪ್ಪಿದಂತಾಗಿತ್ತೇನೊ ! ರಾಮಣ್ಣ ಮಂಚದ ಮೇಲೆ ಕುಳಿತದ್ದು, ತಾನು ಅವನ ಮಗ್ಗುಲಿನಲ್ಲಿದ್ದುದು, ಅವನು ತನ್ನನ್ನು ಕೈಯಿಂದ ತಡೆಯುತ್ತ ಮಂಚದಿಂದ ಏಳುತ್ತಿರುವುದು – ಇದನ್ನು ನೋಡಿಯೆ ಅವಳಿಗೆ ಎಚ್ಚರವಾಗಿತ್ತು.

"ಇದೇನು ? ಹೀಗ್ಯಾಕ ? ಇಲ್ಲಿ ಯಾಕೆ ಬಂದೆ ?" ಎಂದು ತಡವರಿಸುತ್ತ ರಾಮಣ್ಣ ಎದ್ದು ತನ್ನಿಂದ ದೂರ ಸರಿದಿದ್ದ.

ಆಗ ಕುಮುದಳ ಹಣೆ – ಮೈ ಎಲ್ಲ ಬೆವತು ಮಳೆಯಿಂದ ತಂಪಾದ ನೆಲ ಉಸಿರಿಡುವಂತೆ ಅವಳ ಹೃದಯ ಉಸುರ್ಗರೆದಿತ್ತು. ಆ ಉಸಿರಿನೊಡನೆ ಜೀವವೆ ಹಾರಿಹೋಗಬಾರದಿತ್ತೆ – ಎಂದೆನ್ನಿಸಿತ್ತು ಆಕೆಗೆ. ರಾಮಣ್ಣನ ಮುಖದಲ್ಲಿದ್ದ ಕಳೆಯನ್ನು ನೋಡಿನೋಡಿದಂತೆ ಅವಳ ಹುಚ್ಚು ಜಾರುತ್ತಲಿದ್ದಿತು. ಕೊನೆಗೆ ತಾನು ಯಾವ ಮಾತನ್ನೂ ಆಡದೆ ಮುಖ ಕೆಳಗೆ ಮಾಡಿಕೊಂಡು ಅಲ್ಲಿಂದೆದ್ದು ತನ್ನ ಕೋಣೆಗೆ ಬಂದಿದ್ದಳು. ಆನಂದದಲ್ಲಿದ್ದಾಗ ಮನಸ್ಸಿನ ವೇಗ ಎಷ್ಟು ತ್ವರಿತವಾಗಿರುವುದೊ, ಅಷ್ಟೆ ನಿರಾಶೆಯಲ್ಲಿದ್ದಾಗ ದೇಹದ ಜಾಡ್ಯ ಹೆಚ್ಚಾಗುವುದೇನೊ ! ಯಾಕೆಂದರೆ, ಅಲ್ಲಿಂದ ತನ್ನ ಕೋಣೆಗೆ ನಡೆಯಲು ಕಾಲ್ಗಳಿಗೆ ಅದೆಷ್ಟು ಯುಗಗಳು ಹಿಡಿದಿದ್ದುವು ! ಬಂದು, ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡು ಮುಖವನ್ನು ಗಟ್ಟಿಯಾಗಿ ಮುಸುಕಿನಿಂದ ಮುಚ್ಚಿಕೊಂಡಾಗಲೆ, ತಡೆಯದ ವಿಚಾರ ಬಿಗಿದ ತನ್ನ ತುಟಿಗಳನ್ನು ರಭಸದಿಂದ ಬಿರಿದು ಹೊರನುಗ್ಗಿತ್ತು—"ನಾನು ಅವರಿಗೆ ಬೇಡಾಗಿದ್ದೇನೆ – ಬೇಡಾಗಿದ್ದೇನೆ." ಮರುಗಳಿಗೆಯಲ್ಲಿ ತಾನು ಜಗತ್ತಿಗೇ ಬೇಡಾಗಿದ್ದೇನೆ ಎಂಬ ವಿಚಾರದಿಂದ ಅವಳ ಮೈ ಗದಗದ ನಡುಗಿತ್ತು....

ಎಂದಿನ ನೆನಪು ಇದು ? ಹಾಂ – ಆ ರಾತ್ರಿಯ ನೆನಪು. ಅಂದು

ತಾನು "ನಾನಿನ್ನು ಹೃದಯದಿಂದ ವಿಧವೆ" ಎಂದುಕೊಂಡಿದ್ದಳು. ಸರಿ. ಈಗ? ಸರಲಕ್ಕ ದೇಹದಿಂದಿಲ್ಲದಿದ್ದರೂ ಮನೆತುಂಬ, ಮನತುಂಬ ಆಕೆಯ ಮೂರ್ತಿ ವ್ಯಾಪಿಸಿಕೊಂಡೇ ನಿಂತಂತಿದೆ. ಅದಕಾಗಿ ತಾನು ಸಾಯುವವರೆಗೂ ಹೃದಯದ ವಿಧವೆಯೆ! ದೇಹದಿಂದ ತಾನು ವಿಧವೆಯಲ್ಲ ಎಂಬುದನ್ನು ಕುಮುದಳು ಮರೆತಿರಲಿಲ್ಲ. ಮನಸ್ಸಿಗೆ ಅಭಿಮಾನವಿದ್ದಂತೆ ದೇಹಕ್ಕೆ ಸ್ವಾಭಿಮಾನ ಎಂಬುದು ಇಲ್ಲವೇ ಇಲ್ಲ – ಎಂದುಕೊಂಡಳು. ದೇಹದ ವಿಚಾರ ಬಂದೊಡನೆ ದೇಹ ದಣಿದಿವೆ ಎಂಬುದೂ ಲಕ್ಷ್ಯಕ್ಕೆ ಬಂದಿತು. ದೇಹ – ? ಕುಮುದಳು ಒಮ್ಮೆಲೆ ಗಾಬರಿಯಾದಳು. ಅಯ್ಯೋ! ಎಂತಹ [illegible]ಕೆಗೇಡಿಯಾಗಿದೆ ಈ ದೇಹ – ಎಂದವಳಿ ಪಾರಾಗುವ ದಾರಿ ಕಾಣದೆ, [illegible]ರಿಂದ ಸುತ್ತಲ್ಪಟ್ಟ ಮೃಗದಂತೆ ಕುಮುದ ಮತ್ತೆ ಹಾಸಿಗೆಯ ಮೇಲೆ ಕುಳಿತಳು, ಎರಡೂ ಕೈಗಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡಳು.

## ೧೫

ಪೂರ್ತಿಯಾಗಿ ಹೊರಬೀಳದ ನೆಗಡಿ ಬಂದವನಂತಾಯಿತು ರಾಮಣ್ಣನ ಸ್ಥಿತಿ. ನೋವಾದರೂ ಚಿಂತೆ ಇಲ್ಲ, ಸೀನುಗಳನ್ನು ತಂದುಕೊಳ್ಳಲೇಬೇಕು, ಇಲ್ಲದೆ ಹೋದಲ್ಲಿ ನೆಗಡಿ ಹಗುರಾಗುವಂತಿಲ್ಲ. ರಾಮಣ್ಣ ಕುರ್ಚಿಯಲ್ಲಿ ಕುಳಿತುಕೊಂಡೇ ಸರಲೆಯ ಭಾವಪಟವನ್ನು ದಿಟ್ಟಿಸುತ್ತಲಿದ್ದ. "ಹುಚ್ಚೀ, ನೋಡಿದೆಯಾ? ನಿನ್ನ ಉದ್ದೇಶ ಎಷ್ಟು ಒಳ್ಳೆಯದಾಗಿತ್ತೊ ಅದರ ಪರಿಣಾಮ ಅಷ್ಟೆ ಘೋರವಾಗಿದೆ! ಕೊನೆಗೆ ನನಗಿಂತಲೂ ಶ್ರೇಷ್ಠ ಸಾಹಿತಿ ನೀನಾದೆ! ಅಂ? ಎಂತಹ ಉದ್ವೇಗದ ಟ್ರ್ಯಾಜೆಡಿಯನ್ನು ರಚಿಸಿ ಹೋದೆ ನೀನು! ಆದನ್ನು ತಿಳಿಯದೆ ನಿನ್ನದೆ ತಪ್ಪು ಎಂದೆ. ತಪ್ಪು ಯಾರದೂ ಅಲ್ಲವೆಂದೇ ಟ್ರ್ಯಾಜೆಡಿ ಪರಿಣಾಮಕಾರಕವಾಗಿದೆ." ರಾಮಣ್ಣ ಚಟ್ಟನೆ ಎದ್ದ. ನಾನು ಮುದುಕನಾದೆ – ಎಂದುಕೊಂಡ. ಮನುಷ್ಯನು ಸದ್ಯವನ್ನು ಕೂಡ ಮರೆತು ಹಿಂದಿನದನ್ನು ನೆನೆಸಿಕೊಳ್ಳಲು ಉತ್ಸುಕನಾದರೆ ಅದು ಅವನಿಗೆ ಮುಪ್ಪು ಬಂದುದರ ಲಕ್ಷಣ ಎಂದು ಎಲ್ಲಿಯೊ ಓದಿದ್ದು ಅವನ ನೆನಪಿಗೆ—ಥೂ! ಮತ್ತೆ ನೆನಪು – ಎನ್ನುತ್ತ ಅತ್ತಿತ್ತ ಸುಳಿದಾಡತೊಡಗಿದ. ಹೀಗೇ ಸುಳಿ –

ಹಾಂ! ಅಂದಿನ ನೆನಪು! ಹೋಗಲಿ ಈ ನೆನಪೊಂದನ್ನು ಪೂರ್ತಿಯಾಗಿ ಬಯಲಿಗೆಳೆದು ಮನಸ್ಸನ್ನು ಹಗುರಾಗಿಸಿಕೊಂಡು ಮಲಗೋಣ – ಎಂದು ನಿರ್ಧರಿಸಿದವನಂತೆ ಹೆಜ್ಜೆಗಳನ್ನಿಡುತ್ತ ಅತ್ತಿತ್ತ ಸುಳಿದಾಡತೊಡಗಿದ. ಅಹುದು. ಅಂದು ತಾನು ಹೀಗೆಯೆ ಸುಳಿದಾಡುತ್ತಿದ್ದ. ಯಾಕೆ? ಅಂದು ಏನಾಗಿತ್ತು? ಅಹುದಲ್ಲವೆ? ಸರಳೆ ಮತ್ತೆ ಅಂದು ತನ್ನ ಮದುವೆಯ ಮಾತನ್ನೆತ್ತಿದ್ದಳು. ಆ ಮಾತು ಬಂದಾಗೊಮ್ಮೆ ತನಗೆ ನಾಚಿಕೆಯಿಂದ ಓಡಿಹೋಗಬೇಕೆನ್ನಿಸುತ್ತಿತ್ತು. ಯಾಕೊ – ಏನೊ? ಸರಳೆ "ಮದುವೆ" ಎಂದೊಡನೆ ತನ್ನ ಕಣ್ಣ ಮುಂದೆ ಕುಮುದಳ ಮೂರ್ತಿ ನಿಲ್ಲುತ್ತಿತ್ತು; ಬದಿಗೆ ಆ ಮೂರ್ತಿ, ಎದುರಿಗೆ ಸರಲೆ – ಇದಕಾಗಿ ತಾನು ಸರಲೆಯನ್ನು ವಂಚಿಸಿದೆ ನಲ್ಲ ಎಂಬ ವಿಚಾರವೂ ಬರುತ್ತಿತ್ತು; ಆಗ ಅಪರಾಧಿಯಂತೆ ಓಡಬೇಕೆನ್ನಿಸು ತ್ತಿತ್ತು. ತನ್ನ ಮತ್ತು ಕುಮುದಳ ಕಳ್ಳಸಂಬಂಧದ ಸಂಶಯ ಸರಲೆಗೆ ಬಂದಿದೆ, ಅದನ್ನು ತಡೆಯುವ ಪರಿಸ್ಥಿತಿಯಲ್ಲಿ ತಾನಿಲ್ಲ ಎಂಬುದನ್ನು ಮನಗಂಡೇ ಸರಲೆ ಈ ಮಾತನ್ನು ಎತ್ತುತ್ತಾಳೆ ಎಂಬ ಸಂಶಯ ಆ ಮಾತು ಬಂದಾಗೊಮ್ಮೆ ಅವನ ಹೃದಯವನ್ನು ಕರಗಸದಂತೆ ಕೊರೆಯುತ್ತಿತ್ತು. ಒಮ್ಮೊಮ್ಮೆ – ಸರಲೆಯ ಅಂತಃಕರಣ ಶುದ್ಧವಾದುದು, ಆಕೆ ನಿರ್ಮಲ ಬುದ್ಧಿಯಿಂದಲೆ ಹೀಗೆ ಹೇಳುತ್ತಿರುವಳು, ತನಗಾದರೂ ಕುಮುದಳ ಸಹವಾಸದ ಅಭ್ಯಾಸವಾಗಿದೆ, ಹುಂ ಎಂದು ಬಿಡೋಣವೆ – ಎಂದು ಎನ್ನಿಸುತ್ತಿತ್ತು. ಆಗ ತಟ್ಟನೆ ನಾಲಗೆಯನ್ನು ಕಚ್ಚಿಕೊಳ್ಳುತ್ತಿದ್ದ. ಎಂತಹ ಮೂರ್ಖತನ! ಸರಲೆಯ ವಿಚಾರವೇನೊ! ತನ್ನ ವಿಚಾರವೇನೊ! ಆಕೆ "ಇನ್ನೊಂದು ಮದುವೆ" ಎಂದಿಷ್ಟೆ ಹೇಳುತ್ತಿದ್ದಾಳೆ; ಕುಮುದಳೊಡನೆ ಮದುವೆ ಎಂದು ಹೇಳಿಲ್ಲ. ಆ ವಿಚಾರ ಆಕೆಯದಾಗಿದ್ದರೆ ಸ್ಪಷ್ಟವಾಗಿ ಹೇಳುತ್ತಿರಲಿಲ್ಲವೆ? ಹಾಗೆ ಒಮ್ಮೆಯೂ ಹೇಳಿರಲಿಲ್ಲ. ಹೀಗಿರುವಾಗ ತಾನಾಗಿಯೆ "ಆಗಲಿ, ನಾನು ಕುಮುದಳನ್ನು ಮದುವೆಯಾಗುವೆ" ಎಂದು ಹೇಳಿದರೆ ತನ್ನ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಂಡಂತಾಗಲಿಕ್ಕಿಲ್ಲವೆ?

ಆದರೆ ತನ್ನದು ತಪ್ಪು ಎಂದು ರಾಮಣ್ಣನು ಯಾವಾಗಲೂ ಒಪ್ಪಲು ಸಿದ್ಧನಿದ್ದಿರಲಿಲ್ಲ. ಒಂದು ವೇಳೆ ತಾನು ಕುಮುದಳನ್ನು ಪ್ರೀತಿಸುತ್ತಿದ್ದರೆ ಅದು ಒಂದು ದೃಷ್ಟಿಯಿಂದ ತಪ್ಪೆನ್ನಿಸಬಹುದಾಗಿತ್ತು. ಆದರೆ ತಾನು

ಕುಮುದಳನ್ನು ಪ್ರೀತಿಸುವುದಿಲ್ಲ. ಪ್ರೀತಿಸುವುದಿಲ್ಲ? ಎಂದರೆ ಪ್ರೀತಿ ಇಲ್ಲದ ದೇಹಸಂಬಂಧ ವ್ಯಭಿಚಾರವಲ್ಲವೆ? ತಾನು ನಿಜವಾಗಿಯೆ ಕಾಮುಕ ವೃತ್ತಿಯವನೆ? ಅದನ್ನೂ ಒಪ್ಪಲು ರಾಮಣ್ಣ ಸಿದ್ಧನಿರಲಿಲ್ಲ. ಅಥವಾ – ತನಗೆ ತಿಳಿಯದೆಯೆ ತಾನು ಕುಮುದಳನ್ನು ಪ್ರೀತಿಸುತ್ತಿರಬಹುದೆ? ಯಾವ ನಿರ್ಣಯಕ್ಕೂ ಬಾರದ ಮನಃಸ್ಥಿತಿಯಲ್ಲಿದ್ದಾಗ ಮತ್ತೆ ಸರಲೆಯು "ಇನ್ನೊಂದು ಮದುವೆ"ಯ ಮಾತನ್ನು ಎತ್ತಿದೊಡನೆ ಒಮ್ಮೊಮ್ಮೆ ಅವನಿಗೆ ತಡೆಯದಂತಾಗುತ್ತಿದ್ದಿತು. ತನ್ನ ಹೃದಯದ ಬಗ್ಗೆ ರಾಮಣ್ಣನು ಇನ್ನೂ ನಿರ್ಧಾರಕ್ಕೆ ಬಾರದಿದ್ದರೂ ಕುಮುದಳ ಬಗ್ಗೆ ಅವನಿಗೆ ಸಂದೇಹ ಉಳಿಯ ಲಿಲ್ಲ. ಅಂದು ಆ ರಾತ್ರಿ ನಡೆದ ಘಟನೆಗಾಗಿ ರಾಮಣ್ಣನಿಗೆ ಪೂರ್ತಿಯಾಗಿ ಭರವಸೆಯಾಗಿತ್ತು. ಅಂದು ತಾನು ಮನಸ್ಸಿನ ನಿರ್ಧಾರವಿಲ್ಲದ್ದಕ್ಕೆ ಹೀಗೇ ಅತ್ತಿಂದಿತ್ತ ಸುಳಿದಾಡುತ್ತ ಕೊನೆಗೂ ಮನಸ್ಸೂ ಕಾಲ್ಗಳೂ ದಣಿದುದಕ್ಕೆ ಮಂಚದ ಮೇಲೆ ಕುಳಿತುಕೊಂಡಿದ್ದ. ಆಗ ಒಮ್ಮೆಲೆ – ತನ್ನ ಮನಸ್ಸಿ ನೊಳಗಿನ ಸಂಶಯ – ಹೆದರಿಕೆ – ಅಪರಾಧ ಬುದ್ಧಿ—ಇವು ಮೂರೂ ಮುಪ್ಪುರಿಗೊಂಡು ಮೂರ್ತಿ ತಾಳಿ ನಿಂತಿವೆಯೆ – ಎನ್ನುವಂತೆ ಕುಮುದ ತನ್ನ ಕೋಣೆಯ ಬಾಗಿಲಿನಲ್ಲಿ ನಿಂತಿದ್ದಳು. ಕುಮುದಳು ತನ್ನನ್ನು ಪ್ರೀತಿಸು ತ್ತಿದ್ದಳೆಂಬುದರ ಬಗ್ಗೆ ಅಂದಿನ ಅವಳ ಮುಖಚರ್ಯೆಯನ್ನು ನೋಡಿ ರಾಮಣ್ಣ ಪೂರ್ತಿಯಾಗಿ ಮನಗಂಡಿದ್ದ. ಆದರೆ ಪ್ರೇಮವು ಕೋಮಲ- ವಾದಷ್ಟೆ ಕ್ರೂರವೂ ಆಗಿದೆ, ಆಕರ್ಷಕವಾದಷ್ಟೆ ಅತಿಭಯಂಕರವೂ ಆಗಿದೆ, ಆನಂದದಂತೆ ಅಸಹ್ಯವನ್ನೂ ಬೀರುತ್ತಿದೆ – ಎಂಬುದನ್ನು ಮಾತ್ರ ರಾಮಣ್ಣ ಅಂದಿನ ವರೆಗೆ ಕಣ್ಣಾರೆ ಕಂಡಿದ್ದಿಲ್ಲ. ಎಂತಹ ಮೂರ್ತಿ ಕುಮುದಳದು ಆ ಕ್ಷಣದಲ್ಲಿ! ದೀಪದ ಹುಳುವಿಗೆ ಜ್ವಾಲೆಯಂತೆ ಅವನಿಗೆ ಕುಮುದಳು ಆಕರ್ಷಕವಾಗಿ ಕಂಡಿದ್ದಳು. ಅವಳನ್ನು ದಿಟ್ಟಿಸಲು ಕೂಡ ರಾಮಣ್ಣ ಹೆದರಿದ್ದ; ನೋಡಿದರೆ ಅವಳ ಸೌಂದರ್ಯದ ಪಾಶ ತನ್ನನ್ನು ಬಿಗಿದೆಳೆವು ದಲ್ಲಾ ಎಂದು ಹೆದರಿದವನಂತೆ ಅವನು ಮುಖ ತಿರುಗಿಸಿ ಮಂಚದಿಂದ ಏಳಲು ತೊಡಗಿದ್ದ; ಅದಕಾಗಿ ಚಾಚಿದ ಅವಳ ಕೈಗಳು ಅವನನ್ನು ಇನ್ನೂ ಮುಟ್ಟಿರಲಿಲ್ಲ. ಒಂದು ಕ್ಷಣ – ಅರ್ಧ ಕ್ಷಣ – ಈ ಕಣ್ಣೆವೆಯಲ್ಲಿ – ಇನ್ನು ತಾನು ಆಹುತಿಯಾಗುವವ – ಆದ – ಎನ್ನುವಷ್ಟರಲ್ಲಿ ಆಕೆ ಕೈಚಲ್ಲಿ ತನ್ನನ್ನು

ಮುಖವೆತ್ತಿ ನೋಡಿದ್ದಳು. ಎಷ್ಟು ಚಮತ್ಕಾರವಾಗಿದೆ ಸೃಷ್ಟಿಯ ಆಟ! ಅದೊಂದು ಕ್ಷಣದಲ್ಲಿ ಬೆಮರಿನೊಡನೆ ಅವಳ ಸೌಂದರ್ಯವು ತೊಳೆದು ಹೋದಂತಾಗಿತ್ತು. ಈಗ ಆಕೆಯ ಮುಖದಲ್ಲಿ ಮೊದಲು ಬರೀ ಕ್ರೂರ, ಆಮೇಲೆ ಅಸಹ್ಯ ಕಳೆ – ಇದಿಷ್ಟೆ ಉಳಿದಂತಾಗಿತ್ತು. ಕ್ರಮೇಣ ತಾನೂ ಆಕೆಯನ್ನೂ ದಿಟ್ಟಿಸತೊಡಗಿದ. ಆ ಬದಲಾದ ಕಳೆಯನ್ನು ನೋಡಿ ನೋಡಿದಂತೆ ಈಗ ತಾನು ಧೈರ್ಯದಿಂದ ಆಕೆಯನ್ನು ನೋಡಬಲ್ಲ ಎಂಬುದು ಅವನಿಗೆ ಕಂಡುಬಂದಿತ್ತು. ಆಗ ಮಾತಿನ ಅಗತ್ಯವೆ ಇರದಿದ್ದರೂ ತನ್ನ ಬಾಯಿಯಿಂದ ಏನೊ ಮಾತು ಹೊರಬಿದ್ದಿತ್ತು, ಆ ಮಾತಿನೊಡನೆ ಕುಮುದಳೂ ಹೊರಬಿದ್ದಿದ್ದಳು.

ಅಂದಿನಿಂದ ರಾಮಣ್ಣನ ಹೆದರಿಕೆ ಹೆಚ್ಚಾಗಿತ್ತು. ತಾನು ಪ್ರೀತಿಸುವ ಮಾತು ಬೇರೆ, ಇನ್ನೊಬ್ಬರು ತನ್ನನ್ನು ಪ್ರೀತಿಸುವರೆಂಬ ಮಾತು ಬೇರೆ ಎಂಬುದು ಆಗ ಅವನಿಗೆ ತಿಳಿದುಬಂದಿತ್ತು. ಪ್ರೀತಿ ತನ್ನದಾಗಿದ್ದರೆ ಆನಂದವಿದೆ, ಪ್ರೀತಿಯ ವಸ್ತು ತನ್ನನ್ನು ಪ್ರತಿಯಾಗಿ ಪ್ರೀತಿಸಿಲ್ಲವಾದರೂ ಸುಖವಿದೆ. ಆದರೆ ಇನ್ನೊಬ್ಬರ ಪ್ರೀತಿಯ ವಸ್ತು ತಾನು ಎಂದಾಗ ಬೇಟೆಯ ಆಹುತಿಯಾದಂತೆನ್ನಿಸುವುದು, ವಿಶೇಷವಾಗಿ ತನ್ನಲ್ಲಿ ಪ್ರೀತಿ ಇಲ್ಲದಿದ್ದಾಗ – ಎಂಬುದು ಇದುವರೆಗೆ ರಾಮಣ್ಣನಿಗೆ ತಿಳಿದಿರಲಿಲ್ಲ. ಬೇಟೆಯ ನಾಯಿಗಳನ್ನು ತಪ್ಪಿಸುವ ಮೊಲದಂತೆ ಅಂದಿನಿಂದ ರಾಮಣ್ಣ ಕುಮುದಳನ್ನು ತಪ್ಪಿಸಿ ತನ್ನ ಕೋಣೆಯಲ್ಲಿ ಹೆಚ್ಚು ವೇಳೆ ಹುದುಗಿಕೊಳ್ಳುತ್ತಿದ್ದ. ಕ್ರಮೇಣ ಸರಲೆಯ ಸಹವಾಸಕ್ಕೂ ಹೆದರತೊಡಗಿದ್ದ. "ಇನ್ನೊಂದು ಮದುವೆ" ಎಂಬ ಶಬ್ದಗಳು ತನ್ನ ಕಿವಿಯ ಮೇಲೆ ಬಿದ್ದರೆ ತನ್ನ ಅವಸ್ಥೆ ಏನಾದೀತೊ – ಎಂಬ ಹೆದರಿಕೆ. ಇವರಿಂದ ಆದಷ್ಟು ದೂರ ಇದ್ದರೆ ಸಾಕು, ಸುರಕ್ಷಿತ ಎಂದು ತಿಳಿದು–ಕೊಂಡಿದ್ದ. ಎಂತಹ ಹುಚ್ಚ ತಾನು! ದೂರ! ಎಂದರೇನು? ಆ ಶಬ್ದಕ್ಕೆ ಅರ್ಥವೆ ಇಲ್ಲ ಎಂದು ಕ್ರಮೇಣ ರಾಮಣ್ಣನಿಗೆ ತಿಳಿಯತೊಡಗಿತ್ತು. ದೇಹದಿಂದ ತಾನು ಎಷ್ಟೆಷ್ಟು ದೂರವಾಗಿರುತ್ತಿದ್ದನೊ ಮನಸ್ಸು ಅವನನ್ನು ಅಷ್ಟಷ್ಟು ಕುಮುದಳ ಹತ್ತಿರ ಒಯ್ಯತೊಡಗಿತ್ತು. ಕುಮುದ ದೇಹದ ಮಗ್ಗುಲಲ್ಲಿರದಿದ್ದರೂ ಮನಸ್ಸಿನ ಮಗ್ಗುಲಲ್ಲಿಯೆ ಖಂಡಿತವಾಗಿ ಇದ್ದಾಳೆ ಎಂಬುದನ್ನು ಕಂಡು ಅವನು ಹತಾಶನಂತಾಗಿದ್ದನು. ಹೀಗಿರುವಾಗ ಬರೀ ದೇಹದಿಂದ

ದೂರವಿದ್ದರೆ ಏನು ಸಾಧಿಸಿದಂತಾಯಿತು ಎಂದು ಒಮ್ಮೊಮ್ಮೆ ಎನ್ನಿಸುತ್ತಿತ್ತು. ಹೇಗಾದರೂ ಆಕೆ ತನ್ನನ್ನು ಪ್ರೀತಿಸುತ್ತಿದ್ದಾಳೆ, ಆದುದರಿಂದ ಆಕೆಯ ತಿರಸ್ಕಾರದ ಹೆದರಿಕೆಯೆ ಇಲ್ಲ, ಒಮ್ಮೆ ದೇಹದ ಬಯಕೆಯನ್ನು ತೃಪ್ತಿಗೊಳಿಸಿದರೆ ತಪ್ಪೇನು – ಎನ್ನಿಸುವುದು. ಮದುವೆಯ ಮಾತಂತೂ ಕುಮುದಳ ಬಾಯಿಯಿಂದ ಬಂದಿಲ್ಲವಲ್ಲ ? ಇನ್ನು ಯಾವ ಹೆದರಿಕೆ ? – ಎಂದೂ ಧೈರ್ಯವನ್ನು ಹೇಳಿಕೊಳ್ಳುವನು. ಇಷ್ಟಕ್ಕೂ ಮೀರಿದರೆ ಸರಲೆಯ ತರುವಾಯ —

ಆಗ ರಾಮಣ್ಣ ತನಗಾಗಿ ತಾನು ಅಸಹ್ಯಪಟ್ಟಿದ್ದ. "ಸರಲೆಯ ತರುವಾಯ" ಎಂದು ಎಂದೂ ಬಾರದ ವಿಚಾರ ಬಂದಿತೇಕೆ ? ಇಷ್ಟು ಕಟುಕನೆ, ಕೃತಘ್ನನೆ, ಅಸಂಸ್ಕೃತನೆ ತಾನು ? ಒಳಗಿಂದೊಳಗೆ ತನ್ನ ಮನಸ್ಸು ಸರಲೆಯ ಕೊನೆಯನ್ನು ನಿರೀಕ್ಷಿಸುತ್ತಿದೆಯಲ್ಲ ? ಛೆ ! – ಆ ದೇವಿಯ ಮುಂದೆ ರಾಕ್ಷಸನು ನಾನು ! ತನ್ನ ಕಷ್ಟ–ನಷ್ಟಗಳನ್ನು ನುಂಗಿಕೊಂಡು, ನನ್ನ ಸುಖಕ್ಕಾಗಿ ಆಕೆ ತಾನಾಗಿಯೆ ನನಗೆ ಇನ್ನೊಂದು ಮದುವೆಯಾಗಲು ಬೇಡಿ ಬೇಡಿ ಕಾಡುತ್ತಿರುವಾಗ ಈ ವಿಚಾರ ಯಾಕೆ ? ಆಕೆಯಿಂದ ನನಗೆ ಯಾವ ಆತಂಕ ಉಂಟಾಗಿದೆ ಎಂದು ನಾನು ಆಕೆಯ ಮರಣವನ್ನು ಬಯಸುತ್ತಿರುವೆ — ಎಂದು ರಾಮಣ್ಣ ಪರಿಪರಿಯಿಂದ ತನ್ನನ್ನು ಹಳಿದುಕೊಂಡಿದ್ದ. ಕೆಲವು ತಿಂಗಳುಗಳ ತರುವಾಯ ಒಮ್ಮೆ ತಾನಾಗಿಯೆ ಹೋಗಿ ಸರಲೆಯ ಕಾಲ ಮೇಲೆ ಬಿದ್ದು ಎಲ್ಲವನ್ನೂ ಒಪ್ಪಿಕೊಂಡು ಇನ್ನೊಂದು ಮದುವೆಗೆ ಸಮ್ಮತಿಸಬೇಕೆಂದು ನಿರ್ಧರಿಸಿದ್ದ. ಆದರೆ ಕೊನೆಯ ಗಳಿಗೆಗೆ ಧೈರ್ಯವಾಗಿರಲಿಲ್ಲ. ಆಗ ಕ್ರಮೇಣ ಸರಲೆಯ ಪ್ರಕೃತಿಯು ದಿನದಿನಕ್ಕೆ ಹೆಚ್ಚು ಕ್ಷೀಣವಾಗ ತೊಡಗಿತ್ತು. ಈ ರೀತಿ ಉದ್ವೇಗಕರ ಭಾವನೆಯನ್ನು ಅವಳಲ್ಲಿ ಒದವಿಸುವುದು ಅವಳ ಪ್ರಕೃತಿಗೆ ಹಿತವಲ್ಲ ಎಂದು ಬಹಿರಂಗವಾಗಿ ನೆಪವನ್ನು ಮುಂದೆ ಮಾಡಿಕೊಂಡಿದ್ದ ; ಆದರೆ ಒಂದು ವೇಳೆ ಆ ಇನ್ನೊಂದು ಮದುವೆಯಲ್ಲಿ ಕುಮುದಳ ಪಾತ್ರವೆ ಇಲ್ಲದಿದ್ದರೆ ಹೇಗೆ – ಎಂಬ ಹೆದರಿಕೆಯೂ ಅವನನ್ನು ತಡೆದಿತ್ತು.

ಕೊನೆಗೆ ಮಾತುಮಾತಿಗೆ, ಕ್ಷಣಕ್ಷಣಕ್ಕೆ ಕುಮುದಳು ರಾಮಣ್ಣನ ಮನಸ್ಸಿನಲ್ಲಿ ಬಂದು ನಿಲ್ಲತೊಡಗಿದ್ದಳು. ಸರಲೆಯ ಪ್ರಕೃತಿ ಕ್ಷೀಣವಾಗ

ಹತ್ತಿದಂದಿನಿಂದ ಕುಮುದಳ ಕಣ್ಣು ತಪ್ಪಿಸುವುದು ರಾಮಣ್ಣನಿಗೆ ಶಕ್ಯವಾಗಿರಲಿಲ್ಲ. ರೋಗಿಯ ಉಪಚಾರಕ್ಕಾಗಿ, ಅನಿವಾರ್ಯವಾಗುತ್ತಲಿರುವ ದುಃಖದಾಯಕ ಘಟನೆಯ ನೆರಳಿನಲ್ಲಿ ರಾಮಣ್ಣ ಮತ್ತು ಕುಮುದ ಹೆಚ್ಚಾಗಿ ಸಹಕರ್ಮಿಗಳಾಗಬೇಕಿತ್ತು. ಸರಲೆಯ ಕೊನೆ ಇನ್ನು ಬಹಳ ದೂರದಲ್ಲಿಲ್ಲ ಎಂಬ ವಿಚಾರದ ಉದ್ವೇಗದಿಂದ ಹಣ್ಣಾದ ರಾಮಣ್ಣನ ಮನಸ್ಸಿಗೆ ಆತ್ಮನಿಗ್ರಹದ ಶಕ್ತಿ ಉಳಿದಿರಲಿಲ್ಲ; ಅಂತೂ ಕೊನೆಗೆ ಒಂದು ರಾತ್ರಿ ಗಲ್ಲಿಗೇರಿಸಲ್ಪಡುವ ಅಪರಾಧಿ ಶೂಲದ ಕೆಳಗೆ ಹೋಗಿ ನಿಲ್ಲುವ ತೀರ ಅಸಹಾಯ ಮನಃಸ್ಥಿತಿಯಲ್ಲಿ ಕುಮುದಳ ಕೋಣೆಗೆ ಹೋಗಿದ್ದ.

ಕುಮುದ ತನ್ನನ್ನು ಪ್ರೀತಿಸುತ್ತಿದ್ದಾಳೆ, ಇಂದಿಲ್ಲ ನಾಳೆ ಆಕೆಯನ್ನೆ – ಹಾಗೆನ್ನಿಸಿದರೆ – ಮದುವೆಯಾಗಬಹುದು ಎಂಬ ಎರಡು ವಿಚಾರಗಳು ಈಗ ಕುರುಡನಂತಾಗಿದ್ದ ರಾಮಣ್ಣನ ಎರಡೂ ಕೈಗಳಲ್ಲಿ ಎರಡು ಕೋಲುಗಳಂತೆ ಆಧಾರಗಳಾಗಿದ್ದುವು. ಕುಮುದಳು ನನ್ನನ್ನು ಪ್ರೀತಿಸುತ್ತಿದ್ದಾಳೆ – ಅಹುದೆ ? ಎಂದು ಒಮ್ಮೊಮ್ಮೆ ಅವನಿಗೆ ಸಂಶಯವೂ ಬರದಿರುತ್ತಿರಲಿಲ್ಲ. ಎಷ್ಟೋ ಸಲ ಯಾವಾಗಲೂ ತನ್ನ ಸ್ಪರ್ಶಕ್ಕೆ ಇನ್ನಿಷ್ಟು ಮಿದುವಾಗುತ್ತಿರುವ ಕುಮುದಳ ಅಂಗಾಂಗಗಳು ತನ್ನ ಕೈ ಮುಟ್ಟಿದೊಡನೆ ಬಿಗಿದು ಬಿರುಸಾದಂತಾಗುತ್ತಿದ್ದವು. ಯಾಕೊ ? ಆದರೂ ಕುಮುದಳು ಮಾತ್ರ ತನ್ನ ಅನಿಚ್ಛೆಯನ್ನು ಎಂದೂ ವ್ಯಕ್ತಮಾಡಿ ತೋರಿಸುತ್ತಿರಲಿಲ್ಲ. ಅದೇ ರಾಮಣ್ಣನ ಮನಸ್ಸಿಗೆ ಧೈರ್ಯವನ್ನು ಕೊಡುತ್ತಿದ್ದಿತು. ಒಮ್ಮೊಮ್ಮೆ ಹಿಂದೊಮ್ಮೆ ತನಗೆ ಕಂಡ ಕ್ರೂರ ಕಳೆಯ ಕುಮುದಳ ಚಿತ್ರ ಕಣ್ಣು ಮುಂದೆ ನಿಲ್ಲುತ್ತಿದ್ದಿತು; ಆ ಚಿತ್ರ ಕಣ್ಮುಂದೆ ನಿಂತಾಗೊಮ್ಮೆ ತಾನೂ ಕಠೋರನಾಗಿಯೆ ವರ್ತಿಸುತ್ತಿದ್ದ, ಅಪರಾಧವನ್ನೆಸಗಿದಾಕ್ಷಣ ಓಡಿಹೋಗುವ ಅಪರಾಧಿಯಂತೆ ಕಾಲ್ಕಿತ್ತು ಗೆಯುತ್ತಿದ್ದ. ಎಷ್ಟೋ ಸಲ ತನ್ನ ವಿಚಾರಕ್ಕಾಗಿ, ತನ್ನ ನಡತೆಗಾಗಿ ನಾಚಿಕೆಗೊಂಡ ಮನಃಸ್ಥಿತಿಯಲ್ಲಿ ಕುಮುದಳಿಗಾಗಿ ಅವನಲ್ಲಿ ಕನಿಕರಭಾವ ಮೂಡುತ್ತಿದ್ದಿತು. ಆಗ ಆಕೆಯನ್ನು ಮಾತಾಡಿಸಿ ಒಲಿಸಿಕೊಳ್ಳಲು ಯತ್ನಿಸುತ್ತಿದ್ದ. ಹೆಚ್ಚಾಗಿ ಮೌನವಾಗಿರುವ ಕುಮುದ ಒಮ್ಮೆ ತನ್ನನ್ನು ನಿರುತ್ತರಳನ್ನಾಗಿ ಮಾಡಿದ್ದು ಅವನ ಮನಸ್ಸಿನಲ್ಲಿ ಎಂತಹ ಅಧೈರ್ಯವನ್ನು ತಂದಿತ್ತು ?

"ಕುಮುದಾ, ನನ್ನ ಮ್ಯಾಲೆ ನೀ ಸಿಟ್ಟಾಗಿರಬೇಕು" ಎಂದಿದ್ದ ಒಮ್ಮೆ ಅತ್ಯಂತ ಕನಿಕರ ಮತ್ತು ಪಶ್ಚಾತ್ತಾಪಗಳ ದನಿಯಲ್ಲಿ.

ಕುಮುದ ಉತ್ತರ ಕೊಟ್ಟಿರಲಿಲ್ಲ. ಆದರೂ ನಿಟ್ಟುಸಿರು ತಡೆಯುವ ಯತ್ನದಲ್ಲಿ ಆಕೆಯ ಮೈ ನಡುಗಿದ್ದು ತನ್ನ ಕೈಗೆ ತಿಳಿದುಬಂದಿತ್ತು.

"ನೀನು ಸಿಟ್ಟಾಗಿದ್ದರೂ ನಿನ್ನ ತಪ್ಪಲ್ಲ ಅಂತೀನಿ." ಕ್ಷಮೆ ಬೇಡುವವನಂತೆ ಹೇಳಿದ್ದ.

"ತಪ್ಪು ಮಾಡಿದವರಿಗೆ ಮಂದಿಯ ತಪ್ಪು ಹಿಡಿಯೋ ಅಧಿಕಾರ ಇಲ್ಲ."

ಅಬ್ಬ! ಎಂತಹ ಉತ್ತರ ಅದು!

"ಅದೇ ಹೇಳ್ತೀನಿ ನಾನು, ಅದಕೇ ತಪ್ಪು ನಿನ್ನದು ಅಂತಾ ನಾ ಹೇಳೋದೇ ಇಲ್ಲ."

"ನಾನು ನನ್ನ ಸಲುವಾಗಿ ಹೇಳಿದೆ. ಇನ್ನೊಬ್ಬರ ತಪ್ಪು ಹಿಡಿಯೋ ಅಧಿಕಾರ ನನಗಿಲ್ಲ ಅಂದೆ." ಎನ್ನುತ್ತ ದೂರ ಸರಿಯುವ ಯತ್ನದಲ್ಲಿದ್ದಳು.

ಅವಳನ್ನು ತನ್ನ ಹತ್ತಿರ ಎಳೆದುಕೊಳ್ಳುತ್ತ, "ಹುಚ್ಚಿ! ನೀ ಏನು ತಪ್ಪು ಮಾಡೀದಿ? ಇಷ್ಟು ದಿವಸ ನಾ ನಿನ್ನನ್ನ ಮರೆತ ಹಾಂಗೆ ನಡೆದುಕೊಂಡೆ. ಅದು ನನ್ನ ತಪ್ಪು, ಅದಕ್ಕ ನೀ ಸಿಟ್ಟಾದರೂ ಅದು ಯೋಗ್ಯ ಅಂದೆ" ಎಂದಿದ್ದ.

ಕತ್ತಲಲ್ಲಿ ನಗುವ ಆ ಮುಖ ಕಾಣದಿದ್ದರೂ ಆಕೆಯ ನಗೆಯಲ್ಲಿ ಅತ್ಯಂತ ತಿರಸ್ಕಾರ – ಜಿಗುಪ್ಸೆ – ನಿರಾಶೆಗಳ ವಿಷವಾಯು ಇದ್ದಿತೆಂಬುದು ರಾಮಣ್ಣನಿಗೆ ತಿಳಿಯದೆ ಹೋಗಿರಲಿಲ್ಲ. ಒಮ್ಮೆಲೆ ಅವನಿಗೆ ಅಧೈರ್ಯವಾದಂತಾಗಿತ್ತು. ಅದನ್ನು ತೋರಗೊಡಬಾರದೆಂದು ತುಸು ಬಿರುಸು ಧ್ವನಿಯಲ್ಲಿಯೆ ಕೇಳಿದ್ದ "ಯಾಕ? ನಿನಗ ವಿಶ್ವಾಸ ಇಲ್ಲೇನು ನನ್ನ ಮಾತಿನೊಳಗ?" ಎಂದು.

"ಇಟ್ಟ ವಿಶ್ವಾಸ ನಡೆಸಿಕೊಡಬೇಕು ಅಂತ ನಿಂ ಜೋಡಿ ಯಾರು ಕರಾರು ಮಾಡಿಲ್ಲವಲ್ಲ?"

"ಹೀಗ್ಯಾಕ ಕುಮುದ? ನಾಯೇನು ನಿನ್ನ ಮೋಸಮಾಡಬೇಕು ಅಂತ ಮಾಡೀನಿ ಅಂತ ತಿಳಿದೀಯಾ?"

"ಕಣ್ಣು ತೆರೆದು ಕತ್ತಲೆಯೊಳಗ ನಡೀಬೇಕು ಅನ್ನೋ ಹುಚ್ಚಿ ನಾನು!"

"ಇಷ್ಟು ವಿಶ್ವಾಸ ಇಲ್ಲದಿದ್ದರೆ ನೀ ಏನು ಮಾಡಂತೀ ಹೇಳು, ಅದನ್ನ ಮಾಡಲಿಕ್ಕೆ ಸಿದ್ಧ ನಾನು"

ಆ ಮಾತಿಗೂ ನಕ್ಕಿದ್ದಳು. "ತುಡುಗ ಮಾಡಿದವರು ಮಾಡೋದೇನು? ಮುಚ್ಚಿಡೋದು!" ಎಂದಿದ್ದಳು.

"ಬೇಕಾದರೆ ಈಗೇ ನಡೆ. ಸರಲಾನ ಮುಂದೆ ನನ್ನ ಬಾಯಿಂದಲೇ ಎಲ್ಲಾ ಒಪ್ಪಿಕೋತೀನಿ."

"ಯಾಕ? ಇಂಥಾ ಮಾತು ಹೇಳಿ ಆಕೇನ್ನ ಕೊಲ್ಲಬೇಕಂತೀರೇನು?"

"ಆಂ? ಏನಂದಿ?"

"ಏನಂದ್ರೇನು? ನೀ ಹಾಸಿಗೆ ಹಿಡಿದಾಗ ನಾವು ಈ ಹಾದಿ ಹಿಡಿದೀವಿ ಅಂತ ಹೇಳಿದರೆ ಆಕೆಯ ಎದೆ ಒಡೆದು ಚೂರಾಗಲಿಕ್ಕಿಲ್ಲ? ಇಂಥಾ ಉಪಕಾರ ಏನು ನೀವು ಮಾಡೋದು ಬ್ಯಾಡ ನನ್ನ ಮ್ಯಾಲೆ."

"ನಾನೂ ಅದಕೇ ಬಿಟ್ಟೇನಿ. ಆದರೆ ಮತ್ತೇನು ಮಾಡಬೇಕಂತೀ ಹೇಳು, ಅದಕ್ಕ ನಾನು ಸಿದ್ಧ."

"ಅಕ್ಕ ಜೀವದಿಂದಿರೋತನಕ ನನ್ನ ಕಡೆ ಬರೋದನ್ನ ಬಿಡತೀರಾ?"

ಆ ಮಾತಿನ ಹಿನ್ನೆಲೆ ಆಗ ತನಗೆ ತಿಳಿದಿರಲಿಲ್ಲ. ಅದಕ್ಕೆಂದೇ ಅದೊಂದು ವಿನೋದದ ಮಾತು ಎಂದು ಭಾವಿಸಿ ನಕ್ಕಿದ್ದ. "ಕೆಟ್ಟ ಕೆಲಸ ಮಾಡೋದನ್ನ ಕಳವಿನಿಂದ ಮಾಡ್ತಾರ, ಆದರೆ ಅದನ್ನ ಬಿಡೋದನ್ನೂ ಕಳವಿನಿಂದೇ ಬಿಡಬೇಕು ಅಂತ ನೀ ಹೇಳೋದು ಮಾತ್ರ ಒಳ್ಳೇ ಮೋಜಿನ ವಿಚಾರ ನೋಡು! ಆಂ? ಹಹ."

"ಅಂದ್ರ? ಇದು ಕೆಟ್ಟ ಕೆಲಸ ಅಂತ ನೀವು ತಿಳಿದೀರಿ ಅನ್ನಿರಿ."

"ಆಂ? ಏನಂದೆ? ಛೆ!–ಛೆ! ನನ್ನ ಮಾತು ಅಂತ ಹೇಳಲಿಲ್ಲ. ಮಂದಿ ಹಾಂಗ ತಿಳೀತಾರ ಅದಕ್ಕ ಹೇಳಿದೆ."

"ಅಂದ್ರ ನಿಂ ದೃಷ್ಟಿಯಿಂದ ಇದು ಒಳ್ಳೆಯ ಕೆಲಸ ಅಂತೀರಾ?"

"ಇದೇನು, ಕುಮುದಾ? ಮಾತಿನೊಳಗ ನನ್ನ ತೊಡಕಿಸಬೇಕು ಅಂತೀ ಏನು? ಒಳ್ಳೆಯದು – ಕೆಟ್ಟದು! ನನಗೂ ನಿನಗೂ ಆ ವಿಚಾರದ

ಸಂಬಂಧವೆ ಬರೋದಿಲ್ಲ. ಇಬ್ಬರು ಮನಸ್ಸಿನಿಂದ ಒಪ್ಪಿ ಒಂದು ಕೆಲಸ ಮಾಡುವಾಗ — ”

“ನೀವೂ ಮನಸ್ಸಿನಿಂದ ಒಪ್ಪೀರಾ ?”

“ಅಂದ್ರ ? ಮನಸ್ಸು ನಿನಗಾಗಿ ನೋತಿದೆ ಅಂತಲೆ ಪ್ರಯತ್ನ ಮಾಡಿ-ದರೂ ನಿನ್ನನ್ನು ಬಿಟ್ಟು ಇರೋದಾಗಲಿಲ್ಲ, ನೀನೇ ನೋಡೀದಿ — ”

“ನನಗೇನು ಗೊತ್ತು ಇದು ನಿಂ ಮನಸ್ಸಿಗೆ ಒಪ್ಪಿದ ಮಾತು ಅಂತ. ನನಗ ಅನ್ನಿಸಿತ್ತು ಇದು ನಿಂ ದೇಹಕ್ಕ ಅಂಟಿಕೊಂಡ ಚಟ ಅಂತ” ಎಂದು ನಡುವೆಯೆ ಮಾತನಾಡಿ ತನ್ನನ್ನು ನಿರುತ್ತರನನ್ನಾಗಿ ಮಾಡಿದ್ದಳು.

ಎಂತಹ ಮಾತು ! ಎಲ್ಲಿಂದ ಬಂದಿತ್ತು ಆಕೆಗೆ ಅಷ್ಟೊಂದು ಬುದ್ಧಿ, ಅಂತಹ ವಿಚಾರ ? ಬಂದ ಸಂಕಟವನ್ನು ಎದುರಿಸಲು ನಿಸರ್ಗವೆ ಪ್ರಾಣಿಗೆ ತಕ್ಕ ಶಕ್ತಿಯನ್ನು ಕೊಡುತ್ತಿರಬಹುದೆ ? ಎಂದೂ ಇಷ್ಟೊಂದು ಮಾತನಾಡದ ಈಕೆ ಇಂದು ಹೀಗೇಕೆ ವರ್ತಿಸುತ್ತಿದ್ದಾಳೆ ?

“ಯಾಕ ? ಸುಮ್ಮನಾದಿರಿ ?”

“ಅಲ್ಲ, ಕುಮುದಾ, ತಪ್ಪು ತಿಳಿದುಕೋಬೇಕು ಅಂತ ನಿನ್ನ ಹಟಾನೇ ಇದ್ದರೆ ಏನು ಮಾಡೋದು ? ನಿದ್ದೆ ಸೋಗು ಹಾಕಿದವರನ್ನ — ”

“ಸೋಗನ್ನು ಹಾಕಿದವರು ಯಾರು ? ಒಂದು ಕಾಲಕ್ಕ ನನಗ ಯಾವುದರದೂ ಹೆದರಿಕೆ ಇದ್ದಿದ್ದಿಲ್ಲ ನಾನು ನಿಂ ಪ್ರೀತಿಯ ವಸ್ತು ಅಂತ ಹೇಳಿಕೊಳ್ಳಲಿಕ್ಕೆ.”

“ಒಂದು ಕಾಲಕ್ಕ ಯಾಕ ? ಈಗಲೂ ನೀನು ನನ್ನ — ”

“ಆದರೆ ಈಗ ಅದನ್ನ ಹೇಳಿಕೊಳ್ಳೋದರಲ್ಲಿ ನನಗ ಆನಂದ ಇಲ್ಲ”

“ಸುಮ್ಮನೆ ತಪ್ಪು—”

“ನಾನು ನಿಮ್ಮದೊಂದು ಚಟದ ಆಟಿಗೆ.” ಹಾಗೆಂದು ಕುಮುದ ಎದ್ದು ಹೋಗಿದ್ದಳು.

ಅದೆಲ್ಲ ಅನುಭವ ಇಷ್ಟೊಂದು ನೆನಪಿರಲಿಕ್ಕೆ ರಾಮಣ್ಣನಿಗೆ ಇನ್ನೂ ಒಂದು ಕಾರಣವಿದ್ದಿತು. ಅಂದಿನಿಂದ ಕುಮುದ ತನ್ನನ್ನು ಮುಖ ತಪ್ಪಿಸುತ್ತಿದ್ದಳು, ರಾತ್ರಿ ತನ್ನ ಕೋಣೆಯ ಬಾಗಿಲನ್ನು ಒಳಗಿನಿಂದ ಭದ್ರವಾಗಿ ಮುಚ್ಚಿಕೊಳ್ಳುತ್ತಿದ್ದಳು, ಯಾವಾಗಲಾದರೊಮ್ಮೆ ತಾನು ನಗೆಮೊಗ

ದಿಂದ ಆಕೆಯನ್ನು ದಿಟ್ಟಿಸುತ್ತ ಮಾತನಾಡಿಸಲು ಪ್ರಯತ್ನ ಮಾಡಿದರೆ ತನ್ನನ್ನು ತಿರಸ್ಕಾರದ ನೋಟದಿಂದ ನಿರುತ್ಸಾಹಗೊಳಿಸುತ್ತಿದ್ದಳು, ಹೆಚ್ಚಾಗಿ ವೇಳೆಯನ್ನು ಸರಲೆಯ ಮಗ್ಗುಲಲ್ಲಿ ಕಳೆಯುತ್ತಿದ್ದಳು, ತಾನೂ ಅಲ್ಲಿಯೆ ಕುಳಿತರೆ ತಾನು ಎದ್ದು ಹೋಗುವವರೆಗೆ ತಲೆ ತಗ್ಗಿಸಿಯೆ ಇರುತ್ತಿದ್ದಳು. ಒಂದೆಡೆ ಆಕೆಯ ಈ ನಡತೆಯಿಂದ ರಾಮಣ್ಣನಿಗೆ ತನ್ನ ಬಗ್ಗೆ ಪಶ್ಚಾತ್ತಾಪ ಮೂಡಿತ್ತು, ಇನ್ನೊಂದೆಡೆ ಕೆಣಕಿದಂತಾಗಿತ್ತು. ಆದರೆ ಈ ಮನಃಸ್ಥಿತಿ ವಿಕೋಪಕ್ಕೆ ಹೋಗುವ ಸಂದರ್ಭವೆ ಬರಲಿಲ್ಲ. ಮುಂದೆ ಒಂದೆರಡು ದಿನಗಳಲ್ಲಿಯೆ ತಾನು ಆಕೆ ಇಬ್ಬರೂ ಸರಲೆಯ ಹತ್ತಿರ ಕುಳಿತಾಗ "ಕುಮುದಾ ಒಂದಿಷ್ಟು ಕಾಫೀ ಆದ್ರೂ ಮಾಡ್ತೀಯಾ? ಯಾಕೊ ಬಾಯಿ ಕೆಟ್ಟ ಹಾಂಗ ಆಗೇದ" ಎಂದಿದ್ದಳು ಸರಲೆ. ಕುಮುದ ಎದ್ದು ಅಡುಗೆಯ ಮನೆಗೆ ಹೋಗಲು "ಒಂದಿಷ್ಟು ಆ ಬಾಗಿಲಾ ಮುಂದೆ ಮಾಡಿಕೊಂಡು ಬರ್ರಿ" ಎಂದಿದ್ದಳು ಸರಲೆ. ಯಾವ ಬಾಗಿಲು? ಮುಂದೆ ಯಾಕೆ? ಯಾವ ಸಂದರ್ಭದ ಮಾತು? ರಾಮಣ್ಣನಿಗೆ ತಿಳಿದಿರಲಿಲ್ಲ.

"ಅಡಿಗೇ ಮನೆಯ ಬಾಗಿಲಾ ಮುಂದೆ ಮಾಡಿಕೊಂಡು ಬರ್ರಿ ಅಂದೆ. ನಿಂ ಜೋಡಿ ಮಾತಾಡಬೇಕಾಗೇದ" ಎಂದು ಸರಲೆ ತಿಳಿಸಿ ಹೇಳಿದ್ದಳು.

ರಾಮಣ್ಣನ ಕಾಲ್ಗಳೇ ಏಳದಂತಾಗಿದ್ದವು. ಯಾವುದಕ್ಕೆ ತಾನು ಹೆದರಿದ್ದನೊ ಕೊನೆಗೂ ಆ ಪ್ರಸಂಗ ತಪ್ಪಲಿಲ್ಲ, ಕುಮುದಳು ಸೇಡನ್ನು ತೀರಿಸುವಂತೆ ಮಾಡಿದಳು—

"ಬಾಗಿಲಾ ಮುಂದೆ ಮಾಡಿಕೊಂಡು ಬರ್ರಿ ಅಂದೆ."

"ಅಲ್ಲ – ಅಂದ್ರ – ಸುಳ್ಳೇ ಮಾತಾಡಿ ತ್ರಾಸ ಯಾಕ ಮಾಡಿಕೋತೀ ಅಂತ? ಅಂಥಾದ್ದೇನು ನನ್ನ ಜೋಡಿ ಮಾತಾಡೋದು?"

ಆದರೂ ಬಾಗಿಲಾ ಮುಂದೆ ಮಾಡಿಕೊಂಡು, ಶಿಕ್ಷೆಗೆ ಸಿದ್ಧನಾದ ಅಪರಾಧಿಯಂತೆ ಬಂದು ಕುಳಿತಿದ್ದ.

"ನಿಮ್ಮ ಕೈ ತರ್ರಿ"

ಯಂತ್ರದಂತೆ ಕೈ ಮುಂದೆ ಚಾಚಿತ್ತು.

"ನಾ ಆಡ್ತೇನಿ ಅಂತ ಮನಸ್ಸಿಗ ಹಚ್ಚಿಕೋಬ್ಯಾಡಿರಿ."

"ಸರಲಾ, ಯಾಕ ತ್ರಾಸ ಮಾಡಿಕೋತಿ?" ಕೊನೆಯ ಯತ್ನವನ್ನು

ಮಾಡುವವನಂತೆ ನುಡಿದಿದ್ದ. "ತ್ರಾಸ!" ಸರಲೆಯ ಮುಖದಲ್ಲಿ ವೈರಾಗ್ಯದ ಸಮಾಧಾನದ ಕಳೆ ಇದ್ದಿತು. "ನನ್ನ ತ್ರಾಸದ ಕಾಳಜಿ ಮಾಡಬ್ಯಾಡಿರಿ ಇನ್ನ."

ಯಾರೋ ಹಿಂದಿನಿಂದ ಬಂದು ತನ್ನ ಗಂಟಲನ್ನು ಹಿಸುಕಿದಂತಾಯಿತು ರಾಮಣ್ಣನಿಗೆ. ಮುಖವನ್ನು ಹಿಂತಿರುಗಿಸಿದ. ತಾನು ದುಷ್ಟ, ಕ್ರೂರ, ಕೃತಘ್ನ, ಕಾಮುಕ—

"ಅಯ್ಯ! ಅಂಥಾದ್ದೇನಾಗೇದ ಕೆಟ್ಟ ಅನ್ನಿಸಿಕೊಳ್ಳಲಿಕ್ಕೆ? ಎಷ್ಟು ದಿನ ಹೀಂಗೇ ನರಳತಾ ಬೀಳಬೇಕು ನಾನಾದರೂ?"

"ಏನಂದಿ?" ರಾಮಣ್ಣನಿಗೆ ಇದೇನೊ ಬೇರೆ ವಿಷಯ ಎಂದು ಹೊಳೆದಂತಾಗಿತ್ತು. ಸರಲೆ ಕೈ ಮೇಲೆ ಕೈಯನ್ನಾಡಿಸುತ್ತ ಹೇಳಿದ್ದಳು, "ನಿಮ್ಮ ಮನಸ್ಸು ಗಟ್ಟಿ ಅಂತ ತಿಳಕೊಂಡು ಹೇಳ್ತೀನಿ. ನನ್ನ ವ್ಯಾಳ್ಯಾ ಸಮೀಪ ಬಂತು."

ವಿಚಾರವನ್ನು ಮಾಡುವ ಮುಂಚಿತವಾಗಿಯೆ ರಾಮಣ್ಣನ ಕಣ್ಣಿಂದ ನೀರು ದಳದಳ ಸುರಿಯತೊಡಗಿತು.

"ಇದೇನು ಸಣ್ಣ ಹುಡುಗರ್ಹಾಂಗ ಮಾಡ್ತೀರಿ? ಇರೋತನಕ ಈ ಮನೀವಳಗ ನಾನೂ ಬೇಕಾದಷ್ಟು ಸುಖ ಕಂಡೀನಿ. ಹೋದಮ್ಯಾಲೆ ನನ್ನಿಂದ ನಿಮಗ ತ್ರಾಸ ಆಗ್ಬಾರದ್ದು ಅಂತ ನಾ ಬೇಡಿಕೋತೀನಿ, ನೀವು ಮುಂಚೆಯೆ ಅಳಲಿಕ್ಕೆ ಸುರುವು ಮಾಡಿದಿರಲ್ಲ? ವಸ್ತ್ರ ಕೋಟಿನ ಕಿಸೇದಾಗ ಬಿಟ್ಟು ಬಂದಿರೊ ಏನೊ! ನನ್ನ ಸೆರಗಿನಿಂದೇ ಕಣ್ಣು ಒರೆಸಿಕೋರಿ."

ಅಂತಹ ಸಮಯದಲ್ಲೂ ಆ ಮಾತಿಗೆ ರಾಮಣ್ಣನ ಮುಖದಲ್ಲಿ ಮುಗುಳ್ನಗೆ ಮೂಡಿತ್ತು. ಮುಖ ಬಾಗಿಸಿ ಸೆರಗಿನಿಂದ ಕಣ್ಣೊರೆಸಿಕೊಳ್ಳುವಾಗ ಸರಲೆ ತನ್ನ ತಲೆಯ ಮೇಲೆ ಕೈಯನ್ನಿಟ್ಟಿದ್ದಳು. ಅದೆಂತಹ ಸ್ಪರ್ಶ! ಸಾವು ಸಮೀಪಿಸಿದಾಗಲೂ ತನ್ನಲ್ಲಿ ಹೊಸ ಚೈತನ್ಯವನ್ನು ತಂದುಕೊಟ್ಟಿತ್ತು. ಸರಲೆಗೆ ಸಾವು ಸಮೀಪಿಸಿದೆ ಎಂಬುದರ ಬಗ್ಗೆ ಅವನಿಗೀಗ ಸಂಶಯವಿದ್ದಿರಲಿಲ್ಲ. ಕಣ್ಣೀರು ಸುರಿದುದಕ್ಕೆ ದುಃಖದ ಆವೇಗವೂ ಕಡಮೆಯಾಗಿತ್ತು.

"ಸರಲಾ, ಇಷ್ಟು ನಾವೆಲ್ಲಾ ಬ್ಯಾಡಾದೆವೆ ನಿನಗ? ಯಾಕ ಮ್ಯಾಲಿಂದ ಮ್ಯಾಲೆ ಸಾಯೋ ಮಾತನ್ನ ಬಾಯಿಯಿಂದ ಆಡತೀ?"

"ಬಾಯಿಯಿಂದ ಆಡದಿದ್ದರ ಅದೇನು ತಡೆಯೋದಿ? ಸಾವು ಸಮೀಪಿಸಿತು ಅನ್ನೋ ಅಧಿಕಾರದಿಂದ ನಾ ಹೇಳ್ತೀನಿ – ಕೇಳತೀರಾ?"

"ನಾಯೋ ಮಾತು ಬ್ಯಾಡ. ಆದರೆ ನಿನಗ ಏನು ಹೇಳೋದದ ಅದನ್ನೆಲ್ಲಾ ಹೇಳು."

"ಕೇಳತೀರಾ?" ತನ್ನ ಅಂಗೈಯ ಮೇಲೆ ಕೈಯನ್ನಾಡಿಸುತ್ತ ಕೇಳಿದ್ದಳು.

"ಸಂಶಯ ಯಾಕ?"

"ಎಂದಿನಿಂದ ಹೇಳಿದರೂ ಕಿವಿಮ್ಯಾಲೆ ಹಾಕಿಕೊಂಡಿಲ್ಲ ನೀವು. ಸಿಟ್ಟಿಗೂ ಎದ್ದಿದ್ದಿರಿ. ಆದರೆ ಇನ್ನೊಮ್ಮೆ ಹೇಳೋ ಪ್ರಸಂಗ ಆದರೂ ನನಗ ಬರೋದೋ ಇಲ್ಲೋ! ಅದಕ್ಕ — "

"ಯಾವ ಮಾತು?"

"ನಾಯೋ ಹೆಂಡತಿಯ ಕಡೆಯ ವಾಸನಾ ಇದು."

"ಯಾವ ಮಾತು, ಸರಲಾ? ಇಷ್ಟು ಯಾಕೆ ಮನಸ್ಸಿಗೆ ಹಚ್ಚಿಕೊಳ್ಳುವೆ? ಯಾವುದು, ಹೇಳು"—

"ಯಾವುದೇನು? ಅದೇ—"

"ಏನು? ಇನ್ನೊಂದು ಮದುವೆ? ಹಹ!" ಹಾರಿಸಿಕೊಳ್ಳುವ ನಗೆಯಿಂದ ಕೇಳಿದ್ದ.

"ಹೌದು ಕುಮುದಾನ ಕೂಡ ಮದುವೆ."

"ಏನು?"

ರಾಮಣ್ಣನಿಗೆ ಬರಿ ಬೆನ್ನಿನ ಮ್ಯಾಲೆ ಯಾರೋ ಬೆತ್ತದಿಂದ ಹೊಡೆದಂತಾಗಿತ್ತು.

"ಯಾಕ? ನನ್ನ ಕಣ್ಣು ಮುಚ್ಚೋದರೊಳಗ ಆಗಿಬಿಟ್ಟರೆ—"

"ಕುಮುದಾನ ಕೂಡ ಮದುವೆ!"

"ಹೀಂಗ ಏನೂ ತಿಳೀದವರ್‍ಹಾಂಗ ಮಾತಾಡಬ್ಯಾಡಿರಿ. ಎಷ್ಟು ಸಾರೆ ನಾ ನಿಮಗ ಕೇಳೀನಿ"

"ಕುಮುದಾನ ಕೂಡ?"

"ಹೌದು. ಒಂದು ದಿನ ನನ್ನ ಮಾತು ಪೂರಾ ಕೇಳಿಕೋಳಿಲ್ಲ. ಎಷ್ಟು ಸಲ ಹೇಳಬೇಕೆಂದಿದ್ದೆ ನಾನು."

ರಾಮಣ್ಣನಿಗೆ ತಟ್ಟನೆ ಒಂದು ವಿಚಾರ ಹೊಳೆದಿತ್ತು. ಈಗ ಮಾತು ಬೆಳೆಯಿಸಿ ಉಪಯೋಗವಿಲ್ಲ. "ಆಗದು" ಎಂದರೆ ಅವಳ ಮನಸ್ಸಿಗೂ ಆಘಾತ. ಒಂದೆರಡು ದಿನಗಳಲ್ಲಿ ವಿಚಾರಮಾಡಿ ಹೇಳುವೆ ಎಂದರಾಯಿತು– ಎಂದುಕೊಂಡ, ಹಾಗೆ ಆಕೆಗೆ ಹೇಳಿದ್ದ.

"ಮತ್ತೆ ಯಾಕ ವಿಚಾರ ?"

"ಸರಲಾ, ನಿನ್ನ ಮಾತು ನನಗೆ ಎಷ್ಟು ನೋವು ಮಾಡಿದೆ ಗೊತ್ತಿಲ್ಲ ನಿನಗೆ. ತುಸು ಶಾಂತನಾಗಿ ವಿಚಾರಮಾಡಿ ಹೇಳುವೆ."

"ನೀವು ಹೇಳೋತನಕ ನಾನು ಇರ್ತೇನೊ ಇಲ್ಲೊ !" ಎಂದು ನಿರಾಶೆಯಿಂದ ಉಸುರ್ಗರೆದಿದ್ದಳು.

"ಹುಚ್ಚಿ ನೀನು !"

ಆದರೆ ಕೊನೆಗೆ ತಾನೇ ಹುಚ್ಚನಾಗಿದ್ದ. ಇದು ನಡೆದ ಮರುದಿನ ಬೆಳಗಿನಲ್ಲಿ ಸರಲೆಯು – ಯಾವುದನ್ನೂ ನೋಡಲಾರದಂತೆ – ಕೊನೆಯದಾಗಿ ಕಣ್ಣುಮುಚ್ಚಿದ್ದಳು ....

ರಾಮಣ್ಣ ಭಾವಪಟವನ್ನು ದಿಟ್ಟಿಸುತ್ತ ಕುಳಿತ. ಅಂದಿನ ನೆನಪಿನಲ್ಲಿ ತಲ್ಲೀನನಾಗಿದ್ದನೊ ಏನೊ ! ಅವನ ಕಣ್ಣಗಳಿಂದ ನೀರಿನ ಧಾರೆ ಸುರಿಯತೊಡಗಿತು. ಕಣ್ಣಗಳ ಮುಂದೆ ಮಂಜಿನ ಪರದೆ ಬಂದಂತಾಗಿ ಭಾವಪಟ ಸ್ಪಷ್ಟವಾಗಿ ಕಾಣದಿದ್ದರೂ ಆ ನಿಟ್ಟನ್ನೆ ದಿಟ್ಟಿಸುತ್ತ ಕುಳಿತ.

## ೧೬

ಗಟ್ಟಿಯಾಗಿ ತಲೆ ಹಿಡಿದುಕೊಂಡು ಕುಳಿತ ಕುಮುದ ಕೆಲವು ನಿಮಿಷಗಳ ತರುವಾಯ ಉಸುರ್ಗರೆದು ಎದ್ದಳು. ದೇಹ ನಾಚಿಕೆಗೇಡಿ ಇಷ್ಟೆ ಅಲ್ಲ, ಎಷ್ಟು ಪರಿಯಿಂದ ನಾಚಿಕೆಗೇಡಿಯಾಗಿದೆಯಲ್ಲ, ಎಂಬ ವಿಚಾರ ಬಂದಿತು ಅವಳಿಗೆ. "ನಿಂ ದೇಹಕ್ಕ ಅಂಟಿಕೊಂಡ ಚಟ" ಎಂದು ಒಂದು ದಿನ ತಾನೇ

ರಾಮಣ್ಣನಿಗೆ ಹೇಳಿದ್ದಿಲ್ಲವೆ ? ಆದರೆ ಇನ್ನೊಬ್ಬರಿಗೆ ಹೇಳುವ ಅಧಿಕಾರ ತನಗೆಲ್ಲಿಯದು? ಅಷ್ಟೊಂದು ಮನಸಿಗೆ ಅನಿಚ್ಚೆ, ಜಿಗುಪ್ಸೆ, ಅಸಹ್ಯ ಎನ್ನಿಸಿದ್ದರೂ ತನ್ನ ದೇಹಕ್ಕೂ ರಾಮಣ್ಣನು ಚಟವಾಗಿರುವನಲ್ಲ ? ಒಂದು ದಿನವನ್ನಾದರೂ ಅವನ ಸಾನ್ನಿಧ್ಯವನ್ನು ಬಯಸದೆ ತಾನು ಕಳೆದಿರುವಳೆ? ಸಾವಿನ ಗಳಿಗೆಯಲ್ಲಿ ಸರಲಕ್ಕಅವರಿಗೆ ಬಾಯಿ ಬಿಚ್ಚಿ ಹೇಳಿದ್ದಳು. ಆಗ ಹೆಂಡತಿಯನ್ನು ಉಳಿಸಲು ಕೂಡ ಅವರು ಒಪ್ಪಲಿಲ್ಲವಲ್ಲ ನನ್ನನ್ನು ಮದುವೆಯಾಗಲು ? ನನ್ನೊಡನೆ ಮದುವೆಯನ್ನು ತಪ್ಪಿಸಿಕೊಳ್ಳಲು ಹೆಂಡತಿಯ ಆಹುತಿಯನ್ನು ಕೊಡಲು ಅವರು ಸಿದ್ದರಾದರು ! ಇದನ್ನರಿತೂ ನನ್ನ ದೇಹ – ಇದನ್ನರಿತ ಮೇಲೂ – ಅವರ ಸೊತ್ತಾಗಿದೆ ! ಇಷ್ಟೇ ಅಲ್ಲ – ಈಗ ಅವರ ಸತ್ತ್ವವನ್ನು ಒಳಗೆ ಇಟ್ಟುಕೊಂಡಿದೆ. ನಾಚಿಕೆಗೇಡು—ಎಂದಳು : ತನಗೆ ಹೇಗೆ ತಿಳಿದಿರಲಿಲ್ಲ? ಈಗೊಂದು ತಿಂಗಳ ಮುಂಚಿತವಾಗಿಯೆ ತಿಳಿಯಬೇಕಿತ್ತು. ಆದರೆ ಲಕ್ಷ್ಯಕ್ಕೇ ಬಂದಿರಲಿಲ್ಲ .... ಕುಮುದ ಮತ್ತೆ ಹಾಸಿಗೆಯ ಮೇಲೆ ಕುಳಿತುಕೊಂಡಳು. ಯಾವುದಕ್ಕೂ ಸಿದ್ಧಳಾದ ಅವಳಿಗೆ ಈ ಹೊಸ ತೊಡಕಿನಿಂದ ಯಾವ ಹೆದರಿಕೆಯೂ ಇದ್ದಿಲ್ಲ. ಆದರೆ – ಒಂದೇ ಒಂದು ವಿಚಾರದಿಂದ ಅವಳಿಗೆ ವಿಷಾದವಾಯಿತು. ಮನೆಗೆ ಮಕ್ಕಳು ಬೇಕು ಎಂಬ ಸರಲಕ್ಕ ಕಣ್ಣಾರೆ ನೋಡದೆ ಹೋದಳಲ್ಲ–ಎಂದು. ಈಗ ಯಾರಿಗೆ ಇದು ಸಂತೋಷದ ಸಂಗತಿ ? ರಾಮಣ್ಣನಿಗೆ ? ಅತ್ಯಂತ ತಿರಸ್ಕಾರದ ನಗೆ ಮೂಡಿತು ಅವಳ ಮುಖದಲ್ಲಿ. ಒಮ್ಮೆಲೆ ಗೆಲುವಿನ ಕಳೆಯೂ ಮೂಡಿತು. ಈ ಸುದ್ದಿಯನ್ನು ರಾಮಣ್ಣನಿಗೆ ತಿಳಿಸಬೇಕು, ಆದನ್ನು ಕೇಳಿ ಅವನಿಗಾಗುವ ವ್ಯಥೆಯನ್ನು ಕಣ್ತುಂಬ ನೋಡಿ ಹೊಟ್ಟೆತುಂಬ ನಗಬೇಕು–ಎಂದುಕೊಂಡು ಹೊರಟಳು.

## ೧೭

ರಾಮಣ್ಣ ಮುಖ ಒರೆಸಿಕೊಂಡೆದ್ದ. ಇನ್ನು ಮುಂದೆ ಈ ಯಾತನೆಯೆ ಬೇಡ, ನಾಳೆ ಕುಮುದಳಿಗೆ ಸ್ಪಷ್ಟವಾಗಿ ತಿಳಿಸಿಬಿಡಬೇಕು, ಒಂದು ನಿರ್ಧಾರಕ್ಕೆ ಬರಬೇಕು, ಅಲ್ಲಿಯವರೆಗೆ ಶಾಂತಿ ದೊರೆಯುವಂತಿಲ್ಲ ಎಂದು

ಏಳುವಾಗ ಕೈಗಡಿಯಾರವನ್ನು ನೋಡಿಕೊಂಡ. ನಸುಕಿನ ನಾಲ್ಕು ಗಂಟೆಯಾಗಿವೆ! ಎಷ್ಟೊತ್ತು ತಾನು ಹೀಗೆ ಕುಳಿತಿರುವೆನೆಂಬುದರ ಕಲ್ಪನೆ ಬಂದ ಮೇಲೆ ಒಮ್ಮೆಲೆ ದಣಿವು ರಾಮಣ್ಣನನ್ನು ಮುತ್ತಿಕೊಂಡಿತು. ಆಕಳಿಸಿದ – ಹೊರಬೀಳುವಾಗ ಮತ್ತೊಮ್ಮೆ ಭಾವಪಟವನ್ನು ನೋಡಿದ. "ಸರಲೇ, ನಿನ್ನನ್ನು ಉಳಿಸುವುದಕ್ಕಾಗಿ ನಾನು ಒಪ್ಪಬಹುದಿತ್ತು. ಆದರೆ ಈಗ ಒಪ್ಪಿ ಪ್ರಯೋಜನವಿಲ್ಲ. ಅದಕಾಗಿಯೆ ನೀನು ಜೀವವನ್ನು ಕೊಟ್ಟೆ ಎಂಬುದನ್ನು ಎಂದಿಗೂ ಮರೆಯಲಾರೆ. ನಿನ್ನ ಆಹುತಿಗೆ ಕಾರಣವಾದುದನ್ನು ಮನೆಯಲ್ಲಿ ಇಟ್ಟುಕೊಳ್ಳಲಾರೆ, ಕ್ಷಮಿಸು" ಎಂದು ಒಳಗಿಂದೊಳಗೆಯೆ ಬೇಡಿಕೊಂಡನು.

ಇನ್ನೊಂದು ಮದುವೆ! ಛೆ!

ಆದರೆ ಪಾಪ! ಸರಲೆಗೆ ಮಾತ್ರ ಬಲವಾದ ಆಕಾಂಕ್ಷೆ ಇದ್ದಿತು. ಕೊನೆಗೆ ಮಕ್ಕಳಿಗಾಗಿಯಾದರೂ ನಾನು ಮದುವೆಯಾಗಬೇಕೆಂದು —

ರಾಮಣ್ಣ ಒಮ್ಮೆಲೆ ತಡೆದ. ಯಾವುದೊ ವಿಚಾರದಿಂದ ಜೀವ ಬಂದಂತಾಯಿತೇನೊ ಎನ್ನುವಂತೆ ಸಮಾಧಾನದ ಉಸಿರನ್ನು ಬಿಟ್ಟ.

ಹೌದಲ್ಲ? ಇಲ್ಲವಾದರೆ ಅದೊಂದು ಬಗೆಹರಿಯದ ತೊಡಕೇ ಆಗುತ್ತಿತ್ತು. ಆದರೆ ಈಗ ಯಾವ ತೊಡಕೂ ಇಲ್ಲ – ಎಂದು ಸಮಾಧಾನದ ನಗೆಮೊಗದಿಂದ ನಡೆದ. ಎದುರು ಕುಮುದಳೂ ನಗುತ್ತಲೆ ಬಂದಳು. ರಾಮಣ್ಣ ಒಂದು ನಿಮಿಷ ಗಾಬರಿಯಾದ.

"ಇಲ್ಲ – ಬರೀತಾ ಕೂತಿದ್ದೆ, ಹೊತ್ತಾಯ್ತು, ಈಗ ಮುಗೀತು, ವ್ಯಾಳ್ಯಾ ನೋಡಿದೆ — "

"ನನಗೂ ಸಂತೋಷದ ಸುದ್ದಿ ಹೇಳಬೇಕಾಗಿತ್ತು. ಅದಕ್ಕ ನೀವು ಬರೋತನಕ ಕೂಡೋದಾಗದೆ ನಾನೇ ಬಂದೆ."

"ಓಹೋ! ಹಿಂಗೇನು? ನನಗೂ ಒಂದ್ಮಾತು ಹೇಳ್ಬೇಕಾಗಿತ್ತು."

"ನಾನೀಗ ತಾಯಿಯಾಗುವಾಕೆ" ಒಮ್ಮೆಲೆ ಕುಮುದ ಹೇಳಿದಳು.

ಆಂ! ಎಂದಿತು ರಾಮಣ್ಣನ ಹೃದಯ. ತಟ್ಟನೆ ಅವನ ಬುದ್ಧಿ ಮುಂದಾಗುತ್ತ "ಆಂ – ಅಂದ್ರ – ಭಲೆ – ಒಳ್ಳೇ ಸಂತೋಷದ ಸುದ್ದಿ." ಎಂದಿತು.

ಆ ಮಾತು ತನ್ನ ಬಾಯಿಯಿಂದ ಹೊರಬಿದ್ದ ಮೇಲೆ ರಾಮಣ್ಣನಿಗೆ ಹೊಳೆಯಿತು – ಇನ್ನು ಏನು ಮಾಡಿದರೂ ಏನು ಪ್ರಯೋಜನ – ಎಂದು.

ರಾಮಣ್ಣನ ಉತ್ತರವನ್ನು ಕೇಳಿ ಕುಮುದಳೂ ಚಕಿತಳಾದಳು. "ಈ ಮನುಷ್ಯ ತನ್ನಂತೆ ಎಲ್ಲಕ್ಕೂ ಸಿದ್ಧನಾಗಿರುವನಲ್ಲ!" ಎಂದುಕೊಂಡಳು.

ರಾಮಣ್ಣನೆ ಮೊದಲು ಸುಧಾರಿಸಿಕೊಂಡ. "ಅಂ – ಈಗ ನಾನೂ ಸರಲಾನ ಫೋಟೋದ ಮುಂದ ಪ್ರತಿಜ್ಞಾ ಮಾಡಿಬಂದೀನಿ."

ಕುಮುದಳಿಗೆ ಆಶ್ಚರ್ಯವಾಯಿತು. "ಏನೆಂದು ?" ಉಸಿರಿನಲ್ಲಿಯೆ ಕೇಳಿದಳು.

"ಆಕೆಯ ಕೊನೆಯ ಇಚ್ಛೆಯನ್ನು ನಡೆಸಿಯೆ ತೀರುವೆನೆಂದು" ಎಂದು ರಾಮಣ್ಣ ಇಲ್ಲದ ನಿಶ್ಚಯದ ದನಿಯಲ್ಲಿ ಹೇಳಿದ.

ಅಂ! ಎಂದಿತು ಕುಮುದಳ ಹೃದಯ. ತಟ್ಟನೆ ಅವಳ ಬುದ್ಧಿ ಮುಂದಾಗುತ್ತ "ಬಯಸಿದ್ದು ನಡೆಯೋದನ್ನ ಕಣ್ಮುಟ್ಟ ನೋಡೋ ಭಾಗ್ಯ ಇರಲಿಲ್ಲ ಅಕ್ಕನಿಗೆ" ಎಂದಿತು. ಆಕೆ ಮುಖವನ್ನೂ ಕೆಳಗೆ ಮಾಡಿದಳು.

ಮುಂದೆ ಎರಡು ತಿಂಗಳೊಳಗೆ ಕುಮುದ – ರಾಮಣ್ಣರ ಮದುವೆ ಯಾಯಿತು. ಅಕ್ಕನ ಮಾತು ನಡೆಸಲಿಕ್ಕೆ ಕುಮುದ, ಹೆಂಡತಿಯ ಕೊನೆಯ ಬೇಡಿಕೆಯನ್ನು ನಡೆಸಲು ರಾಮಣ್ಣ ಮದುವೆಯಾಗಲು ಒಪ್ಪಿದರು ಎಂದು ಜನರು ಅವರಿಬ್ಬರ ನಿಷ್ಠೆಯನ್ನು ಪ್ರಶಂಸಿಸಿದರು. ಗಂಡ–ಹೆಂಡಂದಿರಿಗೆ ಸುಖ – ದೀರ್ಘಾಯು ದೊರೆಯಲಿ, ಮನೆ ತುಂಬ ಮಕ್ಕಳಾಗಲಿ ಎಂದು ಮನಃಪೂರ್ವಕವಾಗಿ ಬಯಸದವರು ಯಾರೂ ಇರಲಿಲ್ಲ.

ಎರಡನೆಯ ಭಾಗ

# ಅ ನ ೦ ತ

'ಅನಾದಿ'ಯ ಘಟನೆಯ ಹತ್ತು ವರುಷಗಳ ತರುವಾಯ

# ೧

ಕಾಮ ಅನಾದಿ, ಅದಕ್ಕೆ ಅಂತವೇ ಇಲ್ಲ.
ಪ್ರೇಮ ಅನಂತ, ಅದರ ಆದಿಯನ್ನೆ ಅರಿಯುವಂತಿಲ್ಲ.
ಅನಾದ್ಯನಂತ ಕಾಮ, ಅನಂತ – ಅನಾದಿ ಪ್ರೇಮ.
ಆದ್ದರಿಂದ ಕಾಮವೆಂದರೆ ಪ್ರೇ —

ರಾಮಣ್ಣ ತಡೆದ. ಯಾವ ವಿಚಾರ? ತಾನು ವಿಚಾರವನ್ನಾದರೂ ಮಾಡುತ್ತಿದ್ದನೆ? ಮುಖವನ್ನೆತ್ತಿ ಇದಿರು ನೋಡಿದ. ಕಿಟಕಿಯಿಂದ ಹೊರಗೆ ಕಾಣುತ್ತಿದೆ ನಗರ, ಜನಸಮೂಹ, ಜೀವನದ ಒಂದು ಅಣು, ಸಮಾಜದ ಒಂದು ಪ್ರತೀಕ. ಇಷ್ಟೊತ್ತಿನವರೆಗೂ ಕಿಟಕಿಯಿಂದ ಹೊರ ನೋಡುತ್ತಿರುವಾಗ ಇದೊಂದೂ ಕಂಡಿರಲಿಲ್ಲವಲ್ಲ? ಶೂನ್ಯ ಮನಸ್ಕನಾಗಿ ಕಿಟಕಿಯಾಚೆ ನೋಡುತ್ತಿರುವಾಗ ಮನಸ್ಸು ಮಾತ್ರ ಕಾಮ, ಪ್ರೇಮ ಎಂದು ಏನನ್ನೊ ವಿಚಾರಮಾಡುತ್ತಿದೆಯಲ್ಲ? ಎಂದರೆ ತಾನು ಶೂನ್ಯ ಮನಸ್ಕ – ನಾಗಿರಲಿಲ್ಲ! ಹಾಗಲ್ಲ, ತನಗೆ ಶೂನ್ಯವೆನ್ನಿಸಿದ್ದರೂ ಮನಸ್ಸು ತನಗೆ ತಿಳಿಯದೆ, ತನ್ನನ್ನು ಮೀರಿ ಜಾಗೃತವಾಗಿಯೆ ಇದ್ದಿತು! ಎಂದರೆ ತಾನು ಬೇರೆ, ಮನಸ್ಸು ಬೇರೆ!

ರಾಮಣ್ಣ ಮುಗಳ್ನಗೆಯ ಮುಖದಿಂದ ತನ್ನನ್ನು ತಾನೇ ಹಳಿದು–ಕೊಳ್ಳುವಂತೆ ಉಸುರ್ಗರೆದು ಕಿಟಕಿಯಿಂದ ತಿರುಗಿದ.

ಕಾಮ, ಪ್ರೇಮ! ತಾನು, ಮನಸ್ಸು! ಯಾಕೆ ಇಷ್ಟೆಲ್ಲಾ ದೀರ್ಘ ವಿಚಾರ? ಇನ್ನೊಂದು ಗಂಟೆಯೊಳಗಾಗಿ ತಾನು ಸಭೆಗೆ ಹೋಗಬೇಕು. ತನ್ನನ್ನು ಸತ್ಕರಿಸಿ ಕರೆದುಕೊಂಡು ಹೋಗಲು ಸಂಚಾಲಕರು ಬರುವರು; ಹೊತ್ತುಗಳೆಯದಾಗಿ ಅದರ ನಿರೀಕ್ಷೆಯಲ್ಲಿ ತಾನು ಕಿಟಕಿಗೆ ಹೋಗಿ ನಿಂತು ಕೊಂಡುದು. ಆಗ ಈ ಘನ ವಿಚಾರಗಳು ತನ್ನನ್ನು ಆವರಿಸಿಕೊಂಡುವು.

ಅಂತೂ ಏನಾದರೂ ವಿಚಾರವನ್ನು ಮಾಡುತ್ತಲೇ ಇರಬೇಕು. ಇಲ್ಲವಾದರೆ ಮನಸ್ಸು ಎಲ್ಲಿಂದಲೊ ತನ್ನ ವಿಚಾರಗಳನ್ನು ಮೆಲುಕ ತೊಡಗುವುದು.

ರಾಮಣ್ಣ ಕೈಗಡಿಯಾರವನ್ನು ನೋಡಿಕೊಂಡ—

ಈ ಗಡಿಯಾರ ಕೊಂಡುಕೊಂಡು ಅದೆಷ್ಟೋ ವರ್ಷಗಳಾದುವಲ್ಲ? ಕುಮುದಳನ್ನು ಮದುವೆಯಾದಾಗ ಕೊಂಡುಕೊಂಡ ಗಡಿಯಾರ—

ರಾಮಣ್ಣ ವಿಚಾರವನ್ನು ತಡೆದ. ಕುಮುದಳೂ ಸಭೆಗೆ ಬರಬೇಕಾಗಿದೆ. ಆಕೆ ಸಿದ್ಧಳಾಗಿರುವಳೊ ಇಲ್ಲವೊ? ನೋಡಿಕೊಂಡು ಬರೋಣವೆಂದರೆ ಆಕೆ ಸಿದ್ಧಳಾಗಿ ನಿಂತಿದ್ದರೆ ಹೇಗೆ ಎಂಬ ಹೆದರಿಕೆ. ಒಂದು ವೇಳೆ ಸಿದ್ಧಳಾಗಿರದಿದ್ದರೆ ಸಭೆಗೆ ತಡವಾಗಬಹುದಲ್ಲ? ಇಲ್ಲವೆ ಯಾವುದಾದ - ರೊಂದು ನೆವ ಹೇಳಿ, ತಪ್ಪಿಸಿಕೊಳ್ಳುವಳೊ! ತಪ್ಪಿಸಿಕೊಳ್ಳಲಿ ಎಂಬ ತನ್ನ ಮನದ ಬಯಕೆಗಾಗಿ ರಾಮಣ್ಣ ತನ್ನನ್ನು ತಾನೇ ಹಳಿದುಕೊಳ್ಳುವ. ನೆವಕ್ಕೇನು ಕಡಿಮೆ? ಮೋಹನ ಆಟದಿಂದ ಇನ್ನೂ ತಿರುಗಿ ಬಂದಿರುವನೊ ಇಲ್ಲವೊ?

ರಾಮಣ್ಣ ಮತ್ತೆ ಕಿಟಕಿಗೆ ನಡೆದು ಬಂದ. ಮಗ ಮೋಹನನು ಬಂದನೆ, ಬರುತ್ತಿರುವನೆ ಎಂಬ ನಿರೀಕ್ಷೆಯಿಂದ.

ಮೋಹನನಿಗೇನು ಅವಸರ? ಸಭೆ ಸತ್ಕಾರಗಳ ಆಕಾಂಕ್ಷೆ ಅವನಿ- ಗೆಲ್ಲಿಂದ?....ರಾಮಣ್ಣ ಒಂದರೆಕ್ಷಣ ತಡೆದ, ತನ್ನಷ್ಟಕ್ಕೆ ಚಕಿತನಾದ. ಒಂದು ಗಂಟೆ ಕಾಲ ಮುಂಚಿತವಾಗಿ ತಾನು ತಯಾರಾಗಿ ಕುಳಿತಿದ್ದಾನಲ್ಲ! ಆದರೂ ಆ ಸಭೆ, ಆ ಸತ್ಕಾರ, ಆ ಗೌರವ, ಆ ಮಾನಪತ್ರ ಇವುಗಳಿಗಾಗಿ ತನಗೆಯೆ ಆನಂದವಾಗಿಲ್ಲವಲ್ಲ! ಒಂದು ಕಾಲವಿದ್ದಿತು, ಆಗ ಭಾಷಣಕ್ಕೆ ಆಮಂತ್ರಣವೆಂದರೆ ಉತ್ಸಾಹವಿದ್ದಿತು. ಒಂದು ಕಾಲವಿದ್ದಿತು, ಆಗ ತನ್ನ ಕೈ ಖರ್ಚಿನಿಂದಲೆ ತಾನು ಬರೆದುದನ್ನು ಪ್ರಕಟಿಸಲು ಹಿಂದುಮುಂದು ನೋಡುತ್ತಿರಲಿಲ್ಲ. ಒಂದು ಕಾಲವಿದ್ದಿತು, ಆಗ ತನ್ನ ವಿಚಾರಗಳನ್ನು ಇನ್ನೊಬ್ಬರು ಕೇಳಿಕೊಳ್ಳಬೇಕು, ತನ್ನ ಕ್ರಾಂತಿಕಾರಕ ಕೃತಿಗಳನ್ನು ವಿಮರ್ಶಕರು ಲಕ್ಷ್ಯಪೂರ್ವಕವಾಗಿ ಓದಬೇಕು ಎಂಬ ಹಂಬಲವಿದ್ದಿತು. ಸಭೆಯಲ್ಲಿ ತನ್ನ ಪರಿಚಯ ಮಾಡಿಕೊಟ್ಟಾಗ ರಾಮಣ್ಣನಿಗೆ ಹರ್ಷವಾಗುತ್ತಿ- ದ್ದಿತು. ಕೊರಳಿಗೆ ಮಾಲೆಯನ್ನು ತೊಡಗಿಸುವಾಗ ಎದೆ ಉಬ್ಬುತ್ತಿತ್ತು.

ಆದರೆ ಆಗ ತನ್ನನ್ನು ಜನತೆ ಲಕ್ಷಿಸಲಿಲ್ಲ. ಈಗ ?....ಹುಂ....ಹಲ್ಲು ಇದ್ದಾಗ ಕಡಲೆ ಇಲ್ಲ, ಕಡಲೆ ಇದ್ದಾಗ ಹಲ್ಲು ಇಲ್ಲ ಎನ್ನುವರಲ್ಲ—ಹಾಗಾಯಿತು ತನ್ನ ಜೀವನ. ಅಥವಾ ಅದೇ ಜೀವನದ ಸ್ವಾರಸ್ಯವೊ ? ಬಯಸಿದಾಗ ಬಯಸಿದ್ದು ದೊರೆತರೆ ಜೀವನ ನೀರಸವಾಗಬಹುದಲ್ಲ ? ಬಯಸಿದ್ದೆಲ್ಲ ದೊರೆತರೆ ಮಾನವನ ಪ್ರಗತಿ-ಸಾಹಸಗಳೆ ಮಾಯವಾಗಬಹುದಲ್ಲ ? ಅದಕ್ಕಾಗಿಯೆ ದುಷ್ಯಂತ - ಶಕುಂತಲೆಯರ ವಿವಾಹಜೀವನ ವಯಸ್ಸು ಕಳೆದ ಮೇಲೆ ಪ್ರಾರಂಭವಾಯಿತೇನೊ ! ಇಂದಿನ ಸಭೆಯಲ್ಲಿ ತಾನು ಈ ವಿಚಾರಗಳನ್ನೇ ಹೇಳಬಹುದಲ್ಲ ?

ವಿಚಾರಗಳ ಮೆಲಕು ಹಾಕುತ್ತ ರಾಮಣ್ಣ ಮೆಲ್ಲ ಮೆಲ್ಲನೆ ನಡೆದು ಕುರ್ಚಿಯಲ್ಲಿ ಕುಳಿತುಕೊಂಡ. ನಿಜವಾಗಿಯೆ ವಿವೇಚಿಸತಕ್ಕ ವಿಚಾರ. ಮಗುವಿನ ನಿಮಿತ್ತ ದುಷ್ಯಂತ-ಶಕುಂತಲೆಯರು ಪರಸ್ಪರ ಹೊಂದಿಕೊಂಡರು. ಆದರೆ ಅಪತ್ಯವು ಗಂಡಹೆಂಡಿರನ್ನು ಕೂಡಿಸುವ ಗ್ರಂಥಿ ಎಂದು ಹೇಳುವ ಭವಭೂತಿಯೆ ತನ್ನ ನಾಟಕದಲ್ಲಿ ಮಗು ರಾಮ-ಸೀತೆಯರನ್ನು ಅಗಲಿಸಿದ್ದನ್ನು ಚಿತ್ರಿಸಿದ್ದಾನೆ. ನಿಜವಾಗಿ ಇದು ಮಹತ್ವದ ವಿಚಾರ....ರಾಮಣ್ಣ ತಟ್ಟನೆ ಎದ್ದು, ಕಿಟಕಿಯಿಂದ ನೋಡಿದ. ಮೋಹನನು ಬಂದನೆ ? ರಾಮಣ್ಣನಿಗೆ ಆತುರ, ಅಧೈರ್ಯ. ಸಾಯಂಕಾಲದ ಸಮಯ, ಬಾಲಕನಾದ ಮೋಹನ ತಡಮಾಡುವಸಲ್ಲ ಎಂಬ ಆತುರ. ಆದರೆ ಆಟದ ಆನಂದದಿಂದ ಕಣ್ಣರಳಿಸಿ ಬರುವ ಮಗನನ್ನು ನೋಡಲು ಅಧೈರ್ಯ. ದಿಟ್ಟಿಸಿ ನೋಡಿದರೆ ಯಾರನ್ನೊ ನೋಡಿಂತಾಗುತ್ತದೆ. ಯಾರ ಚಿತ್ರ ತನ್ನ ಕಣ್ಮುಂದೆ ನಿಲ್ಲುವುದೆಂಬುದನ್ನು ಬಲ್ಲ ರಾಮಣ್ಣ. ಮೋಹನ ತನ್ನ ಮಗ, ತನ್ನಿಂದ ಕುಮುದಳಲ್ಲಿ ಹುಟ್ಟಿದ ಮಗ, ಆದರೂ ಮೋಹನನ ಕಣ್ಗಳನ್ನು ನೋಡಿದಾಕ್ಷಣ ಸರಲೆಯ ಚಿತ್ರವೇ ತನ್ನ ಕಣ್ಗಳ ಮುಂದೆ ಮೂಡುವುದು.

ಇಂದಿಗೆ ಹತ್ತು ವರ್ಷಗಳಾದುವು ರಾಮಣ್ಣ ಈ ಗೂಢವನ್ನು ಬಿಡಿಸದವನಾಗಿ. ಸರಲೆ ತನ್ನ ಮೊದಲ ಹೆಂಡತಿ, ಅವಳಿಗೆ ತಾಯಾಗುವ ಆರೋಗ್ಯವಿರಲಿಲ್ಲ. ಕುಮುದಳನ್ನು ಮದುವೆಯಾದ. ಅವಳಲ್ಲಿ ಹುಟ್ಟಿದ ಮಗುವಿಗೆ ಸರಲೆಯ ಕಣ್ಗಳಿವೆಯಲ್ಲ ! ಎಷ್ಟೋ ಸಲ ಮೋಹನನನ್ನು ನೋಡಲು ಹಿಂಜರಿಯುತ್ತಿದ್ದ ರಾಮಣ್ಣ, ಹಿಂದಿನ ಸ್ಮರಣೆಗಳಿಗೆ ಹೆದರಿ.

೨

"ಮನೀವಳ್ಗ ಮಕ್ಕಳಿದ್ದರೇ ಚಂದ" ಎನ್ನುತ್ತಿದ್ದಳು ಸರಲೆ.

ರಾಮಣ್ಣನಿಗೆ ಗೊತ್ತು, ಅವನೆಂದಿಗೂ ಮರೆಯುವಂತಿರಲಿಲ್ಲ ಇಂತಹ ಸಂದರ್ಭಗಳನ್ನು.

"ಮನೀವಳ್ಗ ಮಕ್ಕಳಿಲ್ಲದಿದ್ದರ ಮನೀ ಭಣಭಣ ಅನ್ನೋದು" ಎನ್ನುವಳು.

"ಮಕ್ಕಳನ್ನ ಹಡೆಯೋದಕೆ ಹೆಂಡತಿ – ಬೇಕಲ್ಲ ? ಅದಕ್ಕೇ ನಾನು ಹೆಂಡತಿಯ ಆರೋಗ್ಯದ ಜೋಪಾನ ಮಾಡ್ತೀನಿ" ಎಂದು ರಾಮಣ್ಣನ ಉತ್ತರ.

"ಇಂದೊ ನಾಳೆಯೊ ಅಂತ ಹಾಸಿಗೆ ಹಿಡಿದ ನನ್ನಂತಹ ಹೆಂಡ್ತೀನ್ನ ಕಟ್ಟಿಕೊಂಡು ಏನ್ಮಾಡ್ತೀರಿ ?"

"ನನ್ನ ಹೆಂಡ್ತಿ ಹ್ಯಾಗಿರಬೇಕು ಅನ್ನೋ ವಿಚಾರ ನನ್ನದು."

"ನನ್ನಂತಹ ಹೆಂಡ್ತಿ ಇದ್ದರ ಬರೇ ವಿಚಾರದೊಳಗೇ ಉಳೀತಾಳ ಆಕೆ"

"ಹುಚ್ಚಿದ್ದಿ, ಸರಲಾ, ನೀನು ! ಒಂದು ನಾಲ್ಕು ದಿವಸ ಹಾಸಿಗೆ ಹಿಡಿದರೆ ಸುಧಾರಿಸುವುದೆ ಇಲ್ಲ ಅಂತ ತಿಳಿದಿರುವೆ ಏನು ?"

"ಇಲ್ಲದ ಆಶಾ ಇಟ್ಕೊಳ್ಳಬ್ಯಾಡಿರಿ ನೀವು. ಅದಕ್ಕೇ ಹೇಳ್ತೀನಿ, ನನ್ನ ಕಣ್ಮುಚ್ಚೋದರೊಳಗೆ ನೀವು ಇನ್ನೊಂದು ಮದುವೆ ಮಾಡಿಕೊಂಡು – ಮನೀ, ಮಕ್ಕಳು ಎಲ್ಲಾ ವೈಭವದ ಸುಖ ಪಡೆಯೋದನ್ನ ನೋಡ್ಬೇಕು ಅಂತ ನನ್ನ ಹಂಬಲ."

"ಓಹೊಹೊ ! ನಿನ್ನ ಗಂಡ ಅಂದ್ರೆ ಬೇಕಾದ ಹೆಣ್ಣು ಒಲಿಯೋ ಸುರೂಪಿ ಅಂತ ತಿಳಿದೀಯೊ ಏನು ? ಇಲ್ಲಾ, ನಿನ್ನ ಇಲ್ಲಿಯೆ ಬಿಟ್ಟು ನಾನು ಕನ್ಯಾಶೋಧಕ್ಕೆ ಹೋಗ್ಬೇಕಂತೀಯೊ ?"

"ಯಾರು ಒಲಿಯೋದೂ ಬ್ಯಾಡ, ಯಾವ ಶೋಧನೂ ಬ್ಯಾಡ. ನಮ್ಮ ಕುಮುದ ಇದ್ದಾಳ—"

"ಪಾಪ ! ಆ ಹುಡುಗೀ ಆಹುತಿಯಾಗಬೇಕ ?"

"ಇಶ್ಯ ! ಏನಾದ್ರೂ ಮಾತಾಡಬ್ಯಾಡ್ರಿ. ಆಕೇಗೂ 18 ವಯಸ್ಸು. ನೀವು, ನಿಮ್ಮ ಪುಸ್ತಕ ಅಂದ್ರ ಆಕೆಗೆ ಎಷ್ಟು ಅಭಿಮಾನ ಅಂತೀರಾ ?"

"ಅದರ ಲಾಭ ಹೊಡೆದುಕೊಂಡು ಬಿಡು ಅಂತೀಯಾ ?" ಎಂದು ರಾಮಣ್ಣ ತನ್ನ ಮಾತಿಗಾಗಿ ತಾನೇ ನಕ್ಕಿದ್ದ. ಸರಲೆ ತೀರಿಕೊಂಡಳು, ಕುಮುದಳನ್ನು ತಾನು ಮದುವೆಯಾದ, ಮಗನೂ ಹುಟ್ಟಿದ. ಆದರೆ ಅದನ್ನು ನೋಡಲು ಸರಲೆ ಜೀವದಿಂದಿರಲಿಲ್ಲ ....

ರಾಮಣ್ಣ ಕುಳಿತಲ್ಲಿಂದಲೆ ಎದುರು ಗೋಡೆಯನ್ನು ನೋಡಿದ. ಸರಲೆಯ ಭಾವಪಟ ತೂಗುತ್ತಿದೆ. ಒಂದೇ ಸವನೆ ದಿಟ್ಟಿಸಿ ನೋಡಿದ. ತಟ್ಟನೆ ವಿಚಾರ ಹೊಳೆಯಿತೆಂಬಂತೆ ಸೆಟೆದು ಕುಳಿತುಕೊಂಡ.

ಸರಲೆ ಜೀವದಿಂದಿದ್ದಾಳೆ ! ತನ್ನ ಸಂಸಾರವನ್ನು ನೋಡುತ್ತಿದ್ದಾಳೆ ! ಅದಕಾಗಿಯೆ ಮೋಹನನ ಕಣ್ಣುಗಳು ಸರಲೆಯ ಕಣ್ಣುಗಳ ತದ್ರೂಪವಾಗಿವೆ. ತನ್ನ ಸಂಸಾರವನ್ನು ನೋಡಲೇಬೇಕೆಂಬ ಹಟಕ್ಕಾಗಿ ಸರಲೆಯ ಕಣ್ಣುಗಳು ಆಕೆಯ ದೇಹದೊಡನೆ ನಷ್ಟವಾಗಲಿಲ್ಲ, ಉಳಿದುಕೊಂಡಿವೆ, ತನ್ನ ಜೀವನವನ್ನು ನೋಡುತ್ತಿವೆ ! ಇಂದು ತನಗಾಗಬೇಕಿದ್ದ ಸಾರ್ವಜನಿಕ ಸನ್ಮಾನಕ್ಕಾಗಿ ಆ ಕಣ್ಣುಗಳು ಆನಂದದಿಂದ ಅರಳಿ ನಿಲ್ಲುವುವು .... ರಾಮಣ್ಣನಿಗೆ ಭಯವಾಯಿತು, ಅವನ ಮೈ ನಡುಗಿತು .... ಈ ಹತ್ತು ವರುಷಗಳ ತನ್ನ ಎಲ್ಲ ಅನುಭವವನ್ನೂ ಆ ಕಣ್ಣುಗಳು ನೋಡಿರಬಹುದೆ ?

ಶೂ – ಎಂದ ರಾಮಣ್ಣ.

ಹೊರಗಿನಿಂದ ಗುಬ್ಬಿಯೊಂದು ಹಾರಿ ಬಂದು ಸರಲೆಯ ಚಿತ್ರಪಟದ ಮೇಲೆ ಕುಳಿತಿತ್ತು.

ಶೂ – ಎಂದ ಸಿಟ್ಟಿನಿಂದ.

ಗುಬ್ಬಿ ಹಾರಿತು, ರಾಮಣ್ಣನ ಮನಸ್ಸಿನೊಳಗಿನ ವಿಚಾರಚಿತ್ರಪಟವೂ ಹಾರಿತು. ಯಾವುದೊ ಕುತ್ತಿನಿಂದ ಪಾರಾದವನಂತೆ ರಾಮಣ್ಣ ಚಟ್ಟನೆ ಕುರ್ಚಿಯಿಂದೆದ್ದು ಅವಸರದ ಹೆಜ್ಜೆಗಳಿಂದ ಕಿಟಕಿಗೆ ಬಂದ. ಉಸಿರು ಸಿಕ್ಕವನಂತೆ ಹೊರಗಿನ ಹವೆಗೆ ಬಾಯ್ದೆರೆದ. ಕೈಗಡಿಯಾರವನ್ನು ನೋಡಿ-ಕೊಂಡ.

ಇನ್ನೂ ಪೂರ್ತಿ 55 ನಿಮಿಷಗಳಿವೆ ತನ್ನನ್ನು ಕರೆದೊಯ್ಯಲು ಸಂಚಾಲಕರು ಬರಲು.

೩

"ಇನ್ನೂ 55 ನಿಮಿಷ, ಒಂದು ಗಂಟೇನೇ ಅನ್ನಬಹುದು" ಎಂದುಕೊಂಡಳು ಕುಮುದ ತನ್ನ ಕೈಗಡಿಯಾರವನ್ನು ನೋಡಿಕೊಂಡು.

ಗಡಿಯಾರವನ್ನು ಮತ್ತೊಮ್ಮೆ ನೋಡಿದಳು, ಉಸುರ್ಗರೆದಳು.

ಹತ್ತು ವರ್ಷಗಳಾದುವು ಗಡಿಯಾರವನ್ನು ಹೀಗೇ ನೋಡಿ ಇಂತಹದೆ ಮಾತನ್ನು ನುಡಿದದ್ದು. ಹೋಗಲಿ. ಯಾಕೆ ಹಿಂದಿನ ವಿಚಾರ? ಮೋಹನನಿಗೆ ಬೇಗ ಬರಲು ಹೇಳಿದ್ದೆ, ಈ ಹುಡುಗ ಇನ್ನೂ ಯಾಕೆ ಬರವಲ್ಲನೊ – ಎನ್ನುತ್ತ ಕೆಲಸದಲ್ಲಿ ತೊಡಗಲು ಹವಣಿಸಿದಳು. ಮಾಡುವ ಕೆಲಸ ಇದ್ದಿರಲಿಲ್ಲ, ಇದ್ದುದನ್ನೆ ಸಾವರಿಸತೊಡಗಿದಳು.

ಆ ದಿನವೂ ಹೀಗೇ ಸಾಮಾನುಗಳನ್ನು ಸಾವರಿಸತೊಡಗಿದ್ದೆನಲ್ಲ?

ಹಾಳು ನೆನಪು! ಬೇಡಾದುದನ್ನೆ ಎತ್ತಿ ಎತ್ತಿ ತೋರಿಸುತ್ತಿದೆ. ಇಂದು ಹತ್ತು ವರ್ಷದ ಮೋಹನನ ಬರುವಿಕೆಗಾಗಿ ಕಾಯುತ್ತಿದ್ದಾಳೆ, ಅಂದು ಒಂದು ವರ್ಷದ ಮೋಹನನು ಎಚ್ಚರಾಗುವುದನ್ನು ಕಾಯುತ್ತಿದ್ದಳು.

ಹತ್ತೇ ವರ್ಷಗಳು, ಒಂದು ಜನ್ಮದಷ್ಟು ದೀರ್ಘವಾದ ಕಾಲಾವಧಿಯಂತೆ ಭಾಸವಾಗುತ್ತಿದೆ. ಆದರೂ ಒಂದೊಂದು ಮಾತೂ ಈಗಲೂ ಕಣ್ಮುಂದೆ ನಡೆವಂತೆ ಸ್ಪಷ್ಟವಾಗಿ ಸ್ಮರಣೆಗೆ ಬರುತ್ತಿದೆ.

ಮೋಹನನ ಮೊದಲ ವರ್ಷದ ಹುಟ್ಟುಹಬ್ಬ. ಹುಟ್ಟಿದ ದಿನವೇನೊ ನಿಜ, ಆದರೆ ಹಬ್ಬದ ದಿನ ಎನ್ನಿಸಿರಲಿಲ್ಲ. ಮದುವೆಯೆ ಮುಂಚಿತ ಮೂರ್ತಿಗೊಂಡ ಕೂಸು, ಆ ಕೂಸಿಗಾಗಿಯೆ ರಾಮಣ್ಣ ತನ್ನನ್ನು ಮದುವೆಯಾದದ್ದು; ಕೂಸು ಇದ್ದಿಲ್ಲವಾದರೆ ತನ್ನ ಮದುವೆಯಾಗುತ್ತಿರಲಿಲ್ಲ, ತಾನು ಇನ್ನೊಬ್ಬರ ಹಂಗಿನಲ್ಲಿ ಸಿಕ್ಕಿಬೀಳುತ್ತಿರಲಿಲ್ಲ, ಈಗ ಈ ಕೂಸಿಗಾಗಿಯೆ ತನ್ನ ದುರವಸ್ಥೆ! ಆಗ ತಾನು ಆ ಕೂಸನ್ನು ಪ್ರೀತಿಸುತ್ತಿರುವುದೆ ಶಕ್ಯವಿದ್ದಿರಲಿಲ್ಲ. ಒಂದು ವರ್ಷದ ಮಗುವಿಗೆ ತಾಯ ಹಾಲಿನ ಅಗತ್ಯವೂ ಇಲ್ಲ. ಇವರ ಕಾಮನಾಟದ

ಫಲ, ಇವರೇ ಉಣ್ಣಲಿ ಎಂದು ಆ ಕೂಸನ್ನು ಅಲ್ಲಿಯೇ ಬಿಟ್ಟು ಯಾರಿಗೂ ತಿಳಿಯದಂತೆ ಹೊರಟು ಹೋಗುವ ಹಂಚಿಕೆಯನ್ನು ಹಾಕಿಕೊಂಡಿದ್ದಳು. ಸಾಯಂಕಾಲ ಹೊರಟುಹೋಗುವುದು ಎಂದು ಬೆಳಗಿನಲ್ಲಿಯೆ ನಿಶ್ಚಯಿಸಿದಳು. ಆಗ ರಾಮಣ್ಣ ತನ್ನ ಕೋಣೆಗೆ ಬಂದಿದ್ದ. ಒಮ್ಮೆಲೆ ಮೈ ಜುಮ್ಮೆಂದಿತ್ತು, ಹೆದರಿಕೆಯಾಗಿದ್ದಿತು, ತನ್ನ ನಿಶ್ಚಯ ಕರಗಿಹೋಗಬಹುದೆ ಎಂಬ ಅಧೈರ್ಯ ಮೂಡಿತ್ತು. ರಾಮಣ್ಣ ಯಾಕೆ ಬಂದಿರಬಹುದು ಎಂಬುದರ ಬಗ್ಗೆಯೂ ಅಧೈರ್ಯವಾಗಿತ್ತು. ಯಾಕೆ? ಯಾಕೆ? ಹಿಂದಿನ ಅನುಭವ ಮರುಕಳಿಸಿತು. ರಾಮಣ್ಣ, ಗಂಡಸು, ಈಗಂತೂ ವಿಧಿಪೂರ್ವಕ ಮದುವೆಯಾದ ಗಂಡ, ಹಾಸಿಗೆ ಹಿಡಿದ ಹೆಂಡತಿಯ ಸರಳಾಟದ ಹೆದರಿಕೆಯೂ ಇಲ್ಲ, ಅದಕ್ಕಾಗಿ ಧೈರ್ಯದಿಂದ ಬಂದಿದ್ದಾನೆ. ತನ್ನ ಹಕ್ಕನ್ನು ನಡೆಸಲು ಬಂದಿದ್ದಾನೆ ಎಂಬ ವಿಚಾರದಿಂದ ಒಳಗಿದ್ದ ದ್ವೇಷ ಕಣ್ಣುಗಳಿಂದ ಹೊರಸೂಸುವಂತೆ ಅವನನ್ನು ನೋಡಿದ್ದಳು. ಈ ಮನೆಯಲ್ಲಿ ತನ್ನ ಅಸ್ತಿತ್ವಕ್ಕೆ ಇದೊಂದು ಕಾರಣವೆ? ತನ್ನ ಕೂಸಿನ ತಾಯಿ ಎಂಬ ವಿಚಾರವನ್ನು ಕೂಡ ಮರೆತು ತನ್ನ ಭೋಗದ ವಸ್ತು ಎಂದೇ ಬಂದಿರುವನಲ್ಲ ತನ್ನ ಕಡೆ?

"ಕುಮುದ"

ಅದೊ! ದನಿಯ ಪರಿಚಯ ತನಗಿಲ್ಲವೆ? ಎಷ್ಟು ಸಲ ತಾನು ಆ ದನಿಗೆ ಮನಸೋತು ಮೈಮರೆತಿಲ್ಲ? ನನಗೆ ಗೊತ್ತು, ಈ ದನಿ ಯಾವುದರ ಸೂಚಕ ಎಂಬುದನ್ನು ಚೆನ್ನಾಗಿ ಬಲ್ಲೆ.

"ಕುಮುದ ಈ ಹೊತ್ತು ಮೋಹನನ ಹುಟ್ಟು ಹಬ್ಬ ಅಂತ—"

ತಾನು ತಟ್ಟನೆ ಅವನನ್ನು ದಿಟ್ಟಿಸಿ ನೋಡಿದಳು. ಹುಂ........ನಾನೇ ಹುಚ್ಚಿ! ನನ್ನ ಸಲುವಾಗಿ ಇವರಿಗೆ ಯಾವ ಪರಿವೇನೂ ಇಲ್ಲ. ಇವರು ಬಂದದ್ದು ಮೋಹನನ ಸಲುವಾಗಿ. ಇನ್ನು ನನ್ನ ಅಗತ್ಯ ಇಲ್ಲ ಇವರಿಗೆ; ವಂಚಿಸಿ ವಶಪಡಿಸಿಕೊಳ್ಳೊವರೆಗೆ ನನ್ನಲ್ಲಿ ಆಸಕ್ತಿ ಇದ್ದಿತು. ಬಂದ ಸಿಟ್ಟನ್ನು ತಡೆಯುವ ಯತ್ನದಲ್ಲಿ ತುಟಿಯನ್ನು ಕಚ್ಚಿಕೊಂಡಳು.

ಆದರೆ ಸಿಟ್ಟಿಗಾಗಿ ತುಟಿಯನ್ನು ಕಚ್ಚಿಕೊಂಡಿದ್ದಳೆ ತಾನು? ಈ ಸಂಗತಿ – ನೆನಪಿಗೆ ಬಂದಾಗೊಮ್ಮೆ ಕುಮುದ ತನ್ನನ್ನು ತಾನೇ ಈ ಪ್ರಶ್ನೆ

ಕೇಳಿಕೊಳ್ಳುತ್ತಿದ್ದಳು. ತನಗೆ ಸಿಟ್ಟು ಬಂದಿತ್ತು. ರಾಮಣ್ಣನಿಗಾಗಿ ದ್ವೇಷ ಕುದಿಯುತ್ತಿತ್ತು ಎಂದು ಮೇಲಿಂದಮೇಲೆ ನೆನೆದುಕೊಂಡು ಅದನ್ನೇ ತಾನು ನಂಬಿಕೊಂಡಿದ್ದಳು. ಆದರೆ ಛಮ್ಮೊಮ್ಮೆ, ವಿಶೇಷವಾಗಿ ಕನಸಿನಲ್ಲಿ ಆ ಸ್ಮರಣೆ ಬಂದಾಗ ಬೇರೊಂದು ಅನುಭವವೇ ಕಂಡುಬರುತ್ತಿತ್ತು. ರಾಮಣ್ಣ ಬಂದಾಗ ತಾನು ಕಕ್ಕಾವಿಕ್ಕಿಯಾದದ್ದು ಹೆದರಿಕೆಯಿಂದಲ್ಲ, ಆತುರತೆಯಿಂದ ರಾಮಣ್ಣನಿಗಾಗಿ ಕಣ್ಣಲ್ಲಿ ದ್ವೇಷ ಇರಲಿಲ್ಲ, ಮೈಮುರಿಯುವಂತೆ ಅಪ್ಪಿಕೊಳ್ಳ-ಬೇಕು ಅನ್ನೋ ಆವೇಶ ಇದ್ದಿತು; ತನ್ನ ತುಟಿ ಕಚ್ಚಿಕೊಂಡದ್ದು, ಮನಸ್ಸಿನೊಳಗೆ ಬಂದ ವಿಚಾರವನ್ನು ತಡೆದುಕೊಳ್ಳುವುದಕ್ಕಿದ್ದಿತು.

ಕುಮುದಳು ಪೇಚಾಡುವುದು ಇದಕ್ಕಾಗಿಯೆ. ಬುದ್ಧಿಪೂರ್ವಕವಾಗಿ, ಸಾಧಕ–ಬಾಧಕ ಕಾರಣಗಳನ್ನು ಮುಂದಿಸಿ ತಾನು ರಾಮಣ್ಣನನ್ನು ದ್ವೇಷಿಸುತ್ತಿದ್ದೆ ಎಂದು ಹಟದಿಂದ ಹೇಳಕೊಳ್ಳುವಾಗಲೂ ಹೃದಯ ರಾಮಣ್ಣನಿಗಾಗಿ ಹಂಬಲಿಸುತ್ತಿತ್ತು ಎಂಬುದನ್ನು ಅಂದಿನಿಂದಲೂ ತಾನು ಬಲ್ಲಳು.

"—ಮೋಹನನ ಹುಟ್ಟು ಹಬ್ಬ ಅಂತ ನಿನಗೆ ಈ ಕೈ ಗಡಿಯಾರ—" ಎಂದು ರಾಮಣ್ಣ ನುಡಿದಾಗ ತನ್ನ ಶಕ್ತಿ ಪೂರ್ತಿ ಉಡುಗಿಹೋಗಿತ್ತು. ತನಗೆ ಎಚ್ಚರ ಕೂಡ ತಪ್ಪಿತ್ತೊ ಏನೊ! ಯಾಕೆಂದರೆ ಮತ್ತೆ ಕೆಳಗೆ ನೋಡಿದಾಗ ರಾಮಣ್ಣ ಕೈಮುಟ್ಟಿ ತನ್ನ ಕೈಯಲ್ಲಿ ಗಡಿಯಾರವನ್ನು ಕಟ್ಟಿದ್ದ.

"ಇದೇ ಆ ಗಡಿಯಾರ"ಎಂದು ಈಗ ಮತ್ತೊಮ್ಮೆ ಅದನ್ನು ನೋಡಿದಳು. "ಇನ್ನೂ ಸುಮಾರು ಒಂದು ಗಂಟೆ!" ಎಂದು ವಿಷಾದದಿಂದ ಉಸುರ್ಗರೆದು ಕನ್ನಡಿಯ ಮುಂದೆ ಕುಳಿತುಕೊಂಡಳು. ನಗೆಯೂ ಮೂಡಿತು ಮುಖದಲ್ಲಿ ಎಂತಹ ನಾಚಿಕೆಗೇಡಿ ಹೆಣ್ಣು ತಾನು ಎಂದು ಹೇಳಿದಳು ತನ್ನ ಪ್ರತಿಬಿಂಬಕ್ಕೆ. ಇನ್ನೊಂದು ಗಂಟೆಯಲ್ಲಿ ರಾಮಣ್ಣನ ಜೊತೆಗೆ ತಾನೂ ಸಭೆಗೆ ಹೋಗುವಳಾದ್ದರಿಂದ ಈ ಪರಿ ಸಿಂಗರಿಸಿಕೊಳ್ಳ ಬೇಕಾಯಿತಲ್ಲವೆ? ಅದಕಾಗಿಯೆ ಮೋಹನನಿಗೆ ಬೇಗ ಬರಬೇಕೆಂದು ಹೇಳಿದ್ದರೂ ಈ ಹುಡುಗ ಇನ್ನೂ ಬರಲಿಲ್ಲವಲ್ಲ! ತಲೆಬಾಗಿಲನ್ನು ತೆರೆದು ನೋಡಿದಳು. ಮೋಹನನ ಸುಳಿವಿಲ್ಲ ಹೊರಗೆ; ಯಾರ ಸುಳಿವೂ ಇಲ್ಲ. ಒಳಗೆ ಕೂಡ ಯಾರ ಸುಳಿವೂ ಇಲ್ಲದಂತಾಗಿದೆ ಎಂದು ಉಸುರ್ಗರೆದು

ಬಾಗಿಲನ್ನು ಮುಚ್ಚಿ ಮತ್ತೆ ಕನ್ನಡಿಗೆ ಇದಿರಾಗಿ ಕುಳಿತುಕೊಂಡಳು.

ಇಂದು ರಾಮಣ್ಣನ ಜೊತೆ ಹೋಗುವಾಕೆ, ಅವನ ಶ್ರೀಮತಿ–ಎಂದು.

ಅಂದು ರಾಮಣ್ಣನನ್ನು ಬಿಟ್ಟು ಹೋಗಿದ್ದಳು, ಮತಿಗೆಟ್ಟವಳಾಗಿ.

ಕೈ ಗಡಿಯಾರವನ್ನು ರಾಮಣ್ಣ ಕೊಟ್ಟ ಕ್ಷಣದಿಂದ ಆಕೆಗೆ ತನ್ನಲ್ಲಿಯೆ ವಿಶ್ವಾಸವಿಲ್ಲದಂತಾಗಿತ್ತು. ಅದರಲ್ಲೂ ರಾಮಣ್ಣ ಕೋಣೆಯಿಂದ ಹೊರ–ಬಿದ್ದಾಕ್ಷಣ ನಿದ್ದೆಯಲ್ಲಿದ್ದ ಮಗುವನ್ನು ಬಿಗಿಯಾಗಿ ಎದೆಗೆ ಅಪಚಿಕೊಂಡಾಗ ರಾಮಣ್ಣನಿಗಾಗಿ ಇನ್ನೂ ತನ್ನಲ್ಲಿ ಪ್ರೀತಿ – ಇದೆ ಎಂದು ಹೊಳೆದು ಗದಗದ ನಡುಗಿದ್ದಳು. ಅಂದು ಸಾಯಂಕಾಲ ರಾಮಣ್ಣ ಮತ್ತೆ ತನ್ನ ಕೋಣೆಗೆ ಬಂದಿದ್ದ. ಯಾರನ್ನೊ ನೋಡಲು ಹೊರಟಿದ್ದ. "ನಾನು ಒಂದು ಗಂಟೆಯೊಳಗೆ ಬರ್ತೀನಿ; ಹಾಗೆ ಕೇಳಿದರ 55 ನಿಮಿಷಗಳೊಳಗಾಗಿ ಬರ್ತೀನಿ" ಎಂದು ನಗೆಯಿಂದ ಹೇಳಿ ಹೋಗಿದ್ದ.

ಅವನು ಹೊರಬಿದ್ದಾಕ್ಷಣ ತಾನು ತನ್ನ ಕೈಗಡಿಯಾರವನ್ನು ನೋಡಿ–ಕೊಂಡು "ಇನ್ನು 55 ನಿಮಿಷ" ತನಗೆ ಆ ಮನೆಯಿಂದ ಜಾರಲಿಕ್ಕೆ–ಎಂದು ಕೊಂಡಿದ್ದಳು.

ಹುಂ ... ಏನೊ ಆಗಿ ಎಲ್ಲಿಗೊ ಬಂದಿತು, ಎಂದು ನೆನಪನ್ನು ಜಾಡಿಸುವಂತೆ ಸಾವರಿಸಿಕೊಂಡಿದ್ದಳು.

ಮೋಹನ ಬರಬಹುದೇನೋ ಎಂದು ನಿರೀಕ್ಷಿಸಿ ಬಾಗಿಲಿಗೆ ಬಂದಳು, ತೆರೆದು ನೋಡಿದಳು, ನಿರಾಶೆಯು ಸಿಟ್ಟನಿಂದ ಬಾಗಿಲನ್ನು ಧಡಾರನೆ ಮುಚ್ಚಿದಳು, ಸಿಟ್ಟನಿಂದ ನಡೆದು ಬಂದು ಕನ್ನಡಿಯ ಮುಂದೆ ನಿಂತು ಕೂದಲನ್ನು ನರಿಪಡಿಸಕೊಳ್ಳತೊಡಗಿದಳು.

೪

ರಾಮಣ್ಣ ಚಟ್ಟನೆ ಎದ್ದ ಬಾಗಿಲದ ಸದ್ದನ್ನು ಕೇಳಿ.

" ಯಾರೊ ಬಂದರು ಅನ್ನಿಸ್ತದ" ಎನ್ನುತ್ತ ಕಿಟಕಿಗೆ ಬಂದ, ನೋಡಿದ, ಯಾರ ಸುಳಿವೂ ಇರಲಿಲ್ಲ.

"ಬಾಗಿಲದ ಸದ್ದಾಯ್ತು–" ಎಂದು ತನ್ನಷ್ಟಕ್ಕೆ ಹೇಳಿಕೊಳ್ಳುವಂತೆ

ಮತ್ತೆ ಕೋಣೆಯೊಳಕ್ಕೆ ನಡೆದ, ಮೇಜಿನ ಇದಿರು ಬಂದು ನಿಂತ, ಮೇಲಿದ್ದ ಪೆನ್ಸಿಲನ್ನು ಎತ್ತಿದ, ಒಮ್ಮೆಲೆ ನಕ್ಕುಬಿಟ್ಟ. ನಗೆ ಮೊಗದಿಂದಲೆ ಕುರ್ಚಿಯಲ್ಲಿ ಕುಳಿತುಕೊಂಡು, "ಮನಸ್ಸಿನ ರೀತೀನೇ ವಿಚಿತ್ರ ಅದ"ಎಂದ.

ಬಾಗಿಲು ಸದ್ದಾಯ್ತು, ಯಾರೊ ಬಂದರು ಎಂದು ಕೊಂಡಿದ್ದ. ಹುಚ್ಚನಲ್ಲವೆ ತಾನು? ಬಾಗಿಲದ ಸದ್ದಾದರೆ ಯಾರೋ ಹೋಗಿರಲೂ ಬಹುದು. ಆದರೂ ಬಾಗಿಲದ ಸದ್ದು ಅಂದರೆ "ಒಳಗೆ ಪ್ರವೇಶ "ಎಂದು ಸಂಕೇತವೆ ಆದಂತಾಗಿದೆ.

ರಾಮಣ್ಣ ತಟ್ಟನೆ ಹೆದರಿದ ಕಳೆಯಿಂದ ಎದ್ದ, ಕಿಟಕಿಗೆ ಧಾವಿಸಿದ, ದೂರದವರೆಗೆ ನೋಡಿದ ಹೆದರಿದವನಂತೆ, ಕೊನೆಗೆ ಸಮಾಧಾನದಿಂದ ಉಸುರ್ಗರೆದು ಬಂದು ಕುಳಿತ.

" ಯಾರೋ ಹೋಗಿರಲೂ ಬಹುದು" ಎನ್ನುವುದು ಅಪಶಕುನದಂತೆ ತನ್ನ ಬಾಯಿಯಿಂದ ಬಂದಿತಲ್ಲ? ಯಾರಾದರೂ ನಿಜವಾಗಿಯೆ ಹೊರಟು ಹೋಗಿದ್ದರೆ?

ರಾಮಣ್ಣನ ಮೈ ಜುಮ್ಮೆಂದಿತು. ವಿಚಾರ ತಡೆಯದವನಂತೆ ಒಂದು ಕ್ಷಣ ಕಣ್ಮುಚ್ಚಿದ, ತಟ್ಟನೆ ಕಣ್ತೆರೆದ ಮುಚ್ಚಿದ ಕಣ್ಗಳ ಇದಿರಿಗೆ ನಿಂತ ಸ್ಮೃತಿಗೆ ಹೆದರಿ.

ಅಂದಿನ ಸ್ಮೃತಿ–ಎಂದಿಗೂ ಬೇಡ, ತನ್ನ ಶತ್ರುವಿಗೂ ಬೇಡ ಎಂದು ಕೊಂಡ.

ಅಂದು ಕೂಡ ಒಂದು ಸತ್ಕಾರ ಸಭೆಯು ಏರ್ಪಾಟಾಗಿತ್ತು. ಆದರೆ ತನಗೊಬ್ಬನಿಗೆಯೆ ಗೊತ್ತಿದ್ದಿತು; ಕುಮುದಳಿಗೆ ಹೇಳಿರಲಿಲ್ಲ. ಅನಿರೀಕ್ಷಿತ–ವಾಗಿ ಆಕೆಯನ್ನು ಪ್ರಸನ್ನಗೊಳಿಸಬೇಕೆಂದು ತನ್ನ ವಿಚಾರವಿದ್ದಿತು. ಅಂದು ಮೋಹನನ ಹುಟ್ಟುಹಬ್ಬ. ನಿಜವಾಗಿ ಮಗುವಿನ ಹುಟ್ಟುಹಬ್ಬವಾಗಿರಲಿಲ್ಲ, ಮದುವೆಯ ಮೊದಲ ವಾರ್ಷಿಕೋತ್ಸವವಾಗಿತ್ತು. ಯಾವುದೊ ಕಾರಣಕ್ಕಾಗಿ ಮೋಹನನು ಮದುವೆಗಿಂತ ಮುಂಚಿತ ತಮ್ಮ ಸಂಸಾರದಲ್ಲಿಪ್ರವೇಶಮಾಡಿದ್ದರಿಂದ ಅವನ ಹುಟ್ಟು ಹಬ್ಬವನ್ನೆ ಕೆಲ ತಿಂಗಳು ಮುಂದೂಡುವ ಹಂಚಿಕೆಯನ್ನು ಇಬ್ಬರೂ ಒಪ್ಪಿಕೊಂಡಿದ್ದರು. ಮುಂಚಿನ ದಿನವೆ ಕುಮುದಳನ್ನು ಮಾತನಾಡಿಸಲು ಯತ್ನಿಸಿದ; ಮದುವೆಯ ಮೊದಲ ವಾರ್ಷಿಕೋತ್ಸವ

ಎಂದು ಆಕೆಯನ್ನು ಉತ್ಸಾಹಗೊಳಿಸಲು ಯತ್ನಿಸಿದ. ಕಟ್ಟಿದ ಮನೆ ಸೋರಲು ಅದನ್ನು ತಪ್ಪಿಸಲು ದುರುಸ್ತಿ ಮಾಡುವುದಿಲ್ಲವೆ? ಹಾಗೆ ತಮ್ಮ ಮದುವೆ - ಎಂದಿದ್ದಳು ಕುಮುದ! ಅಬ್ಬ! ಎಂತಹ ಕಠೋರವಾದ ಮಾತು! ಅಂತೂ ಮರುದಿನ ತಾನು ಗಡಿಯಾರವನ್ನು ತೆಗೆದುಕೊಂಡು ಹೋಗಿದ್ದ. ಹೋದಾಕ್ಷಣ ವೈಮರೆತಂತವನಾಗಿ ನಿಂತುಬಿಟ್ಟಿದ್ದ.

ಈಕೆ ತನ್ನ ಕುಮುದಳೇ ಎನ್ನಿಸಿತು. ಕುಮುದಳು ತಾಯಿಯಾದಂದಿನಿಂದ ಆಕೆಯನ್ನು ನೋಡುತ್ತಾ ಬಂದಿದ್ದರೂ ಈ ಬದಲಾವಣೆ ತನ್ನ ಲಕ್ಷ್ಯಕ್ಕೆ ಬಂದಿರಲಿಲ್ಲವಲ್ಲ? ಒಂದೆ ವರ್ಷ ಮುಂಚಿತ ಮುಗ್ಧ ಬಾಲೆಯಾಗಿದ್ದಳು. ತನ್ನನ್ನು ನೋಡಿ ನಾಚುತ್ತಿದ್ದಳು, ಮುಟ್ಟಿದರೆ ನಗುತ್ತಿದ್ದಳು. ಬಯಸುವ ಕಣ್ಗಳಲ್ಲೂ ಹೆದರಿಕೆಯ ಛಾಯೆ ಇರುತ್ತಿದ್ದಿತು. ಆದರೆ ಈಗ? ತಾಯ್ತನದಿಂದ ಎದೆ ತುಂಬಿದೆ, ಮಗುವನ್ನು ಪೋಷಿಸಿದ್ದಕ್ಕೆ ಹಿರಿತನದ ಕಳೆ ಬಂದಿದೆ, ಮುಖದಲ್ಲಿ ಸೌಮ್ಯ ಆಕರ್ಷಣೆ ಇದೆ, ಮಗುವಿಗೆ ಆಧಾರವಾಗಿದ್ದ ತೊಡೆಗಳು ಹೊಸ ಶಕ್ತಿ ಸೌಂದರ್ಯಗಳನ್ನು ಪಡೆದಿವೆ! ರಾಮಣ್ಣನ ಸ್ಥೈರ್ಯ ಉಡುಗಿತ್ತು. ತಾನು ಯಾವುದಕ್ಕೆ ಬಂದಿದ್ದನೆಂಬುದನ್ನೆ ಮರೆತು "ಕುಮುದ" ಎಂದ, ಆ ಹೆಸರು ಹೊರಬಿದ್ದಾಕ್ಷಣ ಎಚ್ಚರವಾದಂತಾಗಿತ್ತು.

ತಾನು ಕೂಗಿದ ರೀತಿಯಿಂದ ಕುಮುದಳು ಆತ್ಮರಕ್ಷಣೆಗೆ ತೊಡಗಿದ ಪ್ರಾಣಿಯಂತಾಗಿದ್ದಳು. ತನ್ನ ಕೂಗಿನ ಅರ್ಥ ತನಗೂ ಆಗಿತ್ತು. ಗಂಡು ಹೃದಯದ ಕರೆ ಆಗಿದ್ದಿತು ಆ ಕೂಗು; ನಿಸರ್ಗದಲ್ಲಿ ಹೆಣ್ಣನ್ನು ಒಲಿಸಿಕೊಳ್ಳುವ ಗಂಡಿನ ಸರ್ವಶಕ್ತಿಯಾಗಿತ್ತು ಆ ಕೂಗು; ಮದವೇರಿದ ಗಂಡು ಹೆಣ್ಣನ್ನು ವಶಪಡಿಸಿಕೊಳ್ಳುವ ಸಾಮರ್ಥ್ಯಸೂಚಕ ಹುಂಕಾರವಾಗಿದ್ದಿತು ಆ ಕೂಗು. ಅದನ್ನು ಕೇಳಿದಾಕ್ಷಣ ಇರಿಯಲು ತಲೆಬಾಗಿಸಿ ನಿಂತ ಹಸುವಿನಂತೆ ಇದಿರಾಗಿದ್ದಳು ಕುಮುದ.

ಆಗ ರಾಮಣ್ಣನ ವಿವೇಕ ಶಕ್ತಿ ಭ್ರಾಂತವಾಗಿತ್ತು. ತನ್ನ ವ್ಯಕ್ತಿತ್ವದ ಅರಿವೂ ಬಂದಿತ್ತು. ತಾನೊಬ್ಬ ಸುಶಿಕ್ಷಿತ, ಸಾಮಾಜಿಕ ಜೀವನದಲ್ಲಿ ಸುಸಂಸ್ಕೃತ, ಸಾಹಿತಿ, ಬುದ್ಧಿಜೀವಿ ಎಂಬ ಚಿತ್ರ ಅಳಿಸಿ ನಿಸರ್ಗದಲ್ಲಿಯ ಮಿಕ್ಕ ಪಶುಗಳಂತೆ ತಾನೂ ಪಶು, ಬೇಕಿದ್ದರೆ ಮಾನವ ಪಶು ಎನ್ನಬಹುದು

ಎಂದುಕೊಂಡಿದ್ದ. ಹೆಣ್ಣನ್ನು ಹೆಣ್ಣುಮಾತ್ರವಾಗಿ ನೋಡುವುದು ಕಾಡು ಜೀವನ, ಹೆಣ್ಣು-ಗಂಡುಗಳಲ್ಲಿ ವ್ಯತ್ಯಾಸವಿಲ್ಲ ಸಮಾನತೆ ಇದೆ ಎಂಬುದು ಸಂಸ್ಕೃತಿಯ ಲಕ್ಷಣ ಎಂದು ತಿಳಿದ ರಾಮಣ್ಣನಿಗೆ ಕುಮುದಳನ್ನು ಕಂಡಾಕ್ಷಣ ತನ್ನಲ್ಲಿ ಉದ್ಭವಿಸಿದ ವಿಕಾರಗಳಿಗಾಗಿ ನಾಚಿಕೆಯಾಗಿತ್ತು. "ಕುಮುದಾ ಇಂದು ಮೋಹನನ ಹುಟ್ಟು ಹಬ್ಬ—" ಎಂದು ಬೇರೆ ಯಾವುದೊ ವಿಷಯವನ್ನು ಪ್ರಸ್ತಾಪಿಸಿದ್ದ. ಹೇಗೊ ಏನೊ, ಕೊನೆಗೆ ಆಕೆಯ ಕೈಯನ್ನು ಕೈಯಿಂದ ಮುಟ್ಟಿ ಗಡಿಯಾರವನ್ನು ಕಟ್ಟಿದ್ದ. ಅದೊಂದು ಕ್ಷಣ, ಕ್ಷಣವಲ್ಲ ಯುಗ, ಅಲ್ಲ ಕ್ಷಣವೂ ಅಲ್ಲ ಯುಗವೂ ಅಲ್ಲ ಕಾಲ ತಟಸ್ಥವಾಗಿದ್ದಿತು ತಾನು ಆಕೆಯ ಕೈಯನ್ನು ಮುಟ್ಟಿದಾಗ, ಎಂದೆನ್ನಿಸಿತ್ತು ರಾಮಣ್ಣನಿಗೆ.

ಅದೇ ಮದಾಂಧತೆಯಲ್ಲಿ ದಾರಿ ತಪ್ಪಿತೇನೊ! ತಾನು ಗೆಳೆಯನ ಮನೆಗೆ ಹೋಗಿದ್ದ.

"ದಾರಿ ತಪ್ಪಿತೇನೊ?" ಎಂದು ಗೆಳೆಯ ಕೇಳಿದಾಗ ಗಾಬರಿ-ಗೊಂಡು ಎಚ್ಚೆತ್ತವನಂತೆ ಕಕ್ಕಾವಿಕ್ಕಿಯಾಗಿದ್ದ. ಅದನ್ನು ಕಂಡು ಗೆಳೆಯ ನಕ್ಕಾಗ ತನ್ನ ಅವಸ್ಥೆ ಸ್ಮಿಮಿತಕ್ಕೆ ಬಂದು ತಾನೂ ನಗಲು ಯತ್ನಿಸಿದ್ದ. ತಾನು ಗೆಳೆಯನ ಮನೆಗೆ ಹೋದದ್ದು ಯಾಕೆ? ಹೋಗುವ ಮುಂಚಿತ ಆ ಬಗ್ಗೆ ವಿಚಾರವನ್ನೆ ಮಾಡಿರಲಿಲ್ಲ. ಆದರೂ "ಏನು ಇಷ್ಟೊತ್ತಿನ್ಯಾಗ ಬಂದಿ?" ಎಂದು ಗೆಳೆಯ ಕೇಳಿದಾಕ್ಷಣ "ಒಂದು ಮಹತ್ವದ ಕೆಲಸ ಅದ, ರಹಸ್ಯದ ಕೆಲಸ" ಎಂದು ತಟ್ಟನೆ ಉತ್ತರವನ್ನು ಕೊಟ್ಟಿದ್ದ.

"ಏನೊ, ರಾಮಣ್ಣ ಮಹತ್ವದ ಕೆಲಸ? ಮುಖ ನೋಡಿದರೆ ಭಾರೀ ಖುಶೀವಳ್ಗ ಇದ್ಧಾಗ ಕಾಣ್ತೀ, ಮ್ಯಾಲೆ ರಹಸ್ಯ ಅಂತೀ? ಆಂ? ಮತ್ತೇನಾದ್ರೂ ಲೀಲಾ ನಡೆದಿದೆ ಏನು?"

"ಆಂ!"

"ಗದರಿಸಬ್ಯಾಡೊ! ನೀವು ಸಾಹಿತಿಗಳು, ನಿಮ್ಮ ಮ್ಯಾಲೆ ವಿಶ್ವಾಸಾನೇ ಇಲ್ಲ. ಸಾಹಿತ್ಯ ಅಂದ್ರ ಜೀವನದ ಪ್ರತಿಬಿಂಬ ಅಂತ ತೋರಿಸೋ ಹಟಕ್ಕ ಪ್ರೇಮದ ಕತೆ ಬರೆಯೋ ಮುಂಚಿತ ಸ್ವಂತ ಆದರ

ಅನುಭವ ಪಡೆಯೋದಕೆ ಹಿಂದ್ಮುಂದು ನೋಡುವವರಲ್ಲ, ಅದಕ್ಕೇಳ್ದೆ ಏನಾದ್ರೂ ಹೊಸ ಲೀಲಾ—? ಆಂ ? ಹಹ"

ನಗುವ ಗಳೆಯ ಕಿರಿಯುವ ಹಲ್ಲುಗಳನ್ನು ಮುರಿಯಬೇಕು, ಅವನನ್ನು ನೆಲಕ್ಕೊಗೆದು ಅವನ ಮೈಮೇಲೆ ತಾಂಡವ ಕುಣಿತ ಕುಣಿಯಬೇಕು. ಕೂಡಲೆ ಕೈಲಾಸಕ್ಕೆ ಓಡಬೇಕು ಎಂದೆನ್ನಿಸಿತ್ತು ರಾಮಣ್ಣನಿಗೆ. ಆದರೆ ಸಂಸ್ಕೃತ ಸಮಾಜದಲ್ಲಿ ಅಷ್ಟೊಂದು ಪ್ರಾಮಾಣಿಕವಾಗಿ ನಡೆಯುವಂತಿಲ್ಲ. ತನ್ನ ಮತ್ತು ಕುಮುದಳ ಮದುವೆಯ ಬಗ್ಗೆ ಈ ಜನರು ಆಡಿಕೊಳ್ಳುತ್ತಿದ್ದ ರೆಂಬುದನ್ನು ಬಲ್ಲ-ರಾಮಣ್ಣ. ಆ ಬಗ್ಗೆಯೂ ಏನನ್ನೂ ಮಾಡುವಂತಿರಲಿಲ್ಲ. ಗೆಳೆಯನ ಮಾತಿಗೆ ಒಂದೇ ಉತ್ತರ. ಸುಳ್ಳು ನಗೆ. ಆ ನಗೆಯನ್ನು ನಕ್ಕಿದ್ದ.

" ಸಾಹಿತಿ ಅಂದ್ರೇನು, licence ಇಲ್ಲದ ಶ್ರೀಕೃಷ್ಣ ಅಂತ ತಿಳಿದೀಯಾ ?" ಎಂದಿದ್ದ.

" ನನಗೇನು ಗೊತ್ತು, ರಾಮಣ್ಣಾ. ಸತ್ತಿಲ್ಲ ಸ್ವರ್ಗ ಕಂಡಿಲ್ಲ. ಪುಸ್ತಕ ಬರೆದಿಲ್ಲ, ಹೆಸರು ಕೆಟ್ಟಿಲ್ಲ. ಆಂ ?"

" ಪುಸ್ತಕ ಬರೆದರೆ ಹೆಸರು ಕೆಡೋದು ಅನ್ನು."

" ನಾನ್ಯಾಕೆ ಅನ್ನಬೇಕು, ನೀನೇ ನೋಡ್ತೀಯಲ್ಲ, ರಾಮಣ್ಣಾ ? ಪುಸ್ತಕ ಛಲೋದಿತ್ತು ಅಂದ್ರ, ಇದಕ್ಕಿಂತ ಛಲೋ ಬರೀಬೇಕಾಗಿತ್ತು ಅಂತಾರ. ಪುಸ್ತಕ ಕೆಟ್ಟದಿದ್ದಿತು, ಇವರು ರದ್ದೀ ಪೇಪರ್ ವ್ಯಾಪಾರ ಮಾಡಿದರೆ ಒಳ್ಳೇದು ಅಂತಾರ. ಛಲೋ ಪುಸ್ತಕ ತಮಗೆ ತಿಳೀದಿದ್ದರ ಕೆಟ್ಟ ಅಂತಾರ, ಕೆಟ್ಟ ಪುಸ್ತಕ ಎಲ್ಲಾರಿಗೆ ತಿಳಿದರೆ ಕೀಳು ಸಾಹಿತ್ಯ ಅಂತಾರ ಒಟ್ಟು ಪುಸ್ತಕದಿಂದ ಬರೆದವನಿಗೂ ಸುಖ ಇಲ್ಲ, ಓದುವವನಿಗೂ ಸುಖ ಇಲ್ಲ ಆಂ ?"

" ಅಂಪ್ರ ಬರೆಯಿಸಿಕೊಂಡವನಿಗೊಬ್ಬನಿಗೆ ಸುಖ ಅನ್ನು. ಆಂ ?" ಎಂದು ತಾನೂ ಅವನಂತೆಯೆ ಹೇಕರಿಸಿದ್ದ.

" ಹೋಗಲಿ ಬಿಡೊ ! ಅದೇನೊ ಮಹತ್ವ, ರಹಸ್ಯ ಅಂದೆಯಲ್ಲ ?"

ಗೆಳೆಯನ ಪ್ರಶ್ನೆಕ್ಕೆ ಅಂದು ತಾನು ಕೊಟ್ಟ ಉತ್ತರದ ಬಗ್ಗೆ ರಾಮಣ್ಣನಿಗೆ ಇಂದಿಗೂ ಆಶ್ಚರ್ಯವಾಗುತ್ತಿತ್ತು. ಎಂತಹ ಸುಳ್ಳು,

ಎಷ್ಟೊಂದು ಅಪ್ರಾಮಾಣಿಕವಾಗಿದ್ದಿತು ತನ್ನ ಉತ್ತರ! ಅದನ್ನು ತಾನು ಎಂತಹ ಶುದ್ಧ ಸ್ವಭಾವದ ರೀತಿಯಲ್ಲಿ ಹೇಳಿದ್ದ! ಅಂದು ತಾನು ಬುದ್ಧಿ-ಪೂರ್ವಕವಾಗಿ ಠಕ್ಕತನದಿಂದ ವರ್ತಿಸಿದ್ದನೆಂಬುದು ತಿಳಿದರೆ, ತಾನಾಗಿಯೇ ತಿಳಿಹಿಸಿದರೆ ಸಮಾಜವು ಇಂದು ತನ್ನನ್ನು ಗೌರವಿಸಬಹುದಿತ್ತೆ? ಯಾರು ಹೇಳಬಲ್ಲರು? ಗೌರವಿಸಲೂ ಬಹುದಿತ್ತು. ತನ್ನಂತ ಅನೇಕ ಠಕ್ಕರ ಸಮೂಹವೇ ಸಮಾಜ. ಇಂದಿನ ಅವರ ಗೌರವವೂ ಒಂದು ಬಗೆಯ ಠಕ್ಕತನವಲ್ಲ ಎಂದು ಹೇಗೆ ಹೇಳಬಹುದು? ಆದರೆ – ಅದರೆ – ಅಂದಿನ ತನ್ನ ಉತ್ತರ ನಿಜವಾಗಿಯೆ ಠಕ್ಕತನದ್ದಾಗಿದ್ದಿತೆ? ತಾನು ಬುದ್ಧಿಪೂರ್ವಕ-ವಾಗಿ, ವಿಚಾರಮಾಡಿ ಹಾಗೆ ಹೇಳಿದ್ದನೆ? "ಅದೇನೊ ಮಹತ್ವ, ರಹಸ್ಯ ಅಂದೆಯಲ್ಲ?" ಎಂದು ಗೆಳೆಯ ಕೇಳಿದಾಕ್ಷಣ ತಾನು ಉತ್ತರಿಸಿದ್ದ.

"ಇಂದಿಗೆ ಸರಲಾ ತೀರಿಕೊಂಡು ಎರಡು ವರ್ಷಗಳಾದುವು" ಎಂದು.

"ಹುಂ....ಅಲ್ಲ, ರಾಮಣ್ಣಾ, ಹಿಂದಿನದನ್ನು ನೆನಸಿಕೊಂಡು — "

"ಛೆ! ನಾನು ದುಃಖಿಸ್ತೀನಿ ಅಂತ ತಿಳೀಬ್ಯಾಡ. ಅದಕ್ಕೇ ಮಹತ್ವದ ಮಾತು ಅಂದೆ. ತನ್ನ ತರುವಾಯ ನಾನು ದುಃಖಿಸಬಾರದು, ನಾನು ಸುಖದಿಂದ ಬಾಳಬೇಕು, ಮನೀಗೆ ಮಕ್ಕಳನ್ನು ಹಡೆಯಬೇಕು, ತಾನು ಯಾವಾಗಲೂ ನೋಡತಾ ಇರತಾಳೆ ಅಂತ ಸರಲಾ ಸಾವಿರ ಸಲ ನನಗೆ ಹೇಳಿದ್ದಳು. ಇಂದಿನ ಈ ಎರಡನೆಯ ಮದಿವೀನೂ ಸರಲಾನ ಸಂತೋಷ ಕ್ಕಾಗಿಯೆ. ಆಕೇನೇ ಗೊತ್ತುಮಾಡಿದ್ದಳು ಅನ್ನಬಹುದು. ಅವಸರದಲ್ಲಿ ಮುಹೂರ್ತ ಗೊತ್ತು ಮಾಡಿದ್ದೂ ಅದಕ್ಕಾಗಿಯೆ. ಆದರೂ ಆಕೆ—"

"ರಾಮಣ್ಣಾ, ನೂರು ಜನ್ಮಗಳೊಳಗೆ ಒಮ್ಮೆ ದೊರೇಬಹುದು ಇಂಥಾ ಹೆಂಡತಿ, ಆಗಲೂ ಪಡೆದು ಬಂದಿದ್ದರೆ. ಆಕೆ ಕಣ್ಣಾರೆ ನಿಮ್ಮ ಮದುವೆ ಆದದ್ದನ್ನ ನೋಡಲಿಲ್ಲ ಅಂತ ಹಳಹಳಿಸೋದೂ ತಪ್ಪು. ಎಲ್ಲಿದ್ದರೂ ನಿನ್ನನ್ನು ನೋಡ್ತಾ ಇರ್ತೀನಿ ಅಂತ ಹೇಳಿದ್ದಳಲ್ಲ?"

"ಆದ್ರೂ ನಮ್ಮ ಮನಸ್ಸಿಗೆ ಸಮಾಧಾನ ಬೇಕಲ್ಲ? ಅದಕ್ಕೇ ವರ್ಷದಲ್ಲಿ ಇದೊಂದು ದಿನ ಸ್ಮೃತಿ ದಿನ ಅಂತ ಆಚರಿಸ್ತೀನಿ. ಯೋನಕೇನ ಯೋಗ ದಿಂದ ಈ ದಿನ, ಮತ್ತು ಮೋಹನನ ಹುಟ್ಟು ಹಬ್ಬ ಎರಡೂ ಕೂಡಿಯೆ ಬರ್ತಾವ. ಈ ದಿನ ನಮ್ಮ ಸಂಸಾರದ ಸುಖಮಯ ವಾತಾವರಣವನ್ನ

ಸರಲಾ ನೋಡಲಿ, ನೋಡ್ತಾಳೆ ಅಂತ ನನ್ನ ಭಾವನೆ. ಅದಕ್ಕೆ ಈ ಹೊತ್ತು ಮಗುವಿಗೆ ಒಂದು ಬಂಗಾರದ ಸರ, ಕುಮುದಳಿಗೆ ಒಂದು ಒಳ್ಳೇ ಸೀರೆ—"

"ಹಾಂಹಾಂ! ಏ ಕೇಳಿದಿಯೇನೆ?"

"ಏ, ಕೂಗಬೇಡ, ಮಹಾರಾಯಾ! ಅದಕ್ಕೇ ರಹಸ್ಯದ ಮಾತು ಅಂತ ಹೇಳಿದ್ದೆ. ರಹಸ್ಯ ಅಂದ್ರೂ ಮುಖ್ಯ ಸಹಾಯ ನಿಂ ಮನೀಯವ ರಿಂದೇ ಆಗ್ಬೇಕಾಗಿದೆ ಅನ್ನು—"

"ಹಾಗಿದ್ದ ಮೇಲೆ ರಹಸ್ಯ ಏನು ಸುಟ್ಟಿತು?"

"ಸಂಜೆಯುವರೆಗೂ ರಹಸ್ಯ, ತಿಳಿಯಿತೆ? ಸಂಜೆಗೆ ನೀನು ಮನೆಯು ವರನ್ನ ಕರೆದುಕೊಂಡು ವಾಕಿಂಗ್ ಇಗೆ ಅಂತ ಹೊರಟು ದಾರೀ ತಪ್ಪಿತೇನೊ ಅನ್ನೋ ಹಾಗೆ ಮಾರ್ಕೆಟ್ಟಿಗೆ ಹೋಗು. ಅಲ್ಲಿ ಹೋದ ನ್ಯಾಲೆ ಅವರಿಗೆ ಹೇಳು. ಎರಡನ್ನೂ ಅವರೇ ಆರಿಸಲಿ. ನೀವು ಮನೆಗೆ ಬರೋ ಹೊತ್ತಿಗೆ ನಾನೂ ಬಂದಿರ್ತೀನಿ, ಅವನ್ನ ತಕ್ಕೊಂಡು ಹೋಗ್ತೀನಿ—"

"ಅಂದ್ರೆ? ನಾವು ಮಾರ್ಕೆಟನಿಂದ ನಮ್ಮ ಮನೀಗೇ ಬರಬೇಕು ಅನ್ನು. ಭಲೆ, ರಾಮಣ್ಣಾ! ನಿಮ್ಮನೀಗೇ ಬರ್ತೀವಿ, ಮೇಜವಾನಿ ಮಾಡಿಸು, ಸಮೀಚೀನ ಊಟ ಆಗಲಿ, ಆ ಮ್ಯಾಲೆ ನೀನು ಉಡಗೊರೆ ಕೊಟ್ಟೇ ಯಂತೆ—"

"ಈವೊತ್ತು ಬ್ಯಾಡ. ಈವೊತ್ತು ನೀವಿದ್ದರೆ—"

"ನಾವಿದ್ದರೆ ನಿನೆಗೇನು ತೊಂದರೆ? ಸುಧಾರಿಸಿದವ ನೀನು, ಸಾಹಿತಿ ನೀನು. ಉಡುಗೊರೆ ಕೊಟ್ಟು ನಿನ್ನ ಹೆಂಡತೀನ್ನ ನೀನು ಚುಂಬಿಸಿದರೆ ನಮ್ದೇನೂ ಅಡ್ಡಿ ಇಲ್ಲ. ಆಂ? ಹಹ!"

"ಅಂಥಾದ್ದೇನೂ ಇಲ್ಲವೊ! ಆದರೂ ಈವೊತ್ತು ಬ್ಯಾಡ. ಈವೊತ್ತು —ಅದಿರ್ಲಿ, ನಾನು ಬರ್ತೀನಿ, ಇಲ್ಲಿ ಹಣದ ನೋಟುಗಳನ್ನ ಇಟ್ಟೇನಿ ನೋಡು."

"ಬುದ್ಧಿ ನಮ ಇರದಿದ್ದರೆ ಸಾಹಿತಿ ಆಗತಾರೊ ಏನೊ – ! ..... "

ಇನ್ನು ಏನೇನು ವಟಗುಟ್ಟಿದನೊ ಗೆಳೆಯ. ತಾನು ಮಾತ್ರ ಅಲ್ಲಿಂದ ಜಾರಿಕೊಂಡಿದ್ದ. ಹೊರಬಿದ್ದಾಕ್ಷಣ ರೆಕ್ಕೆವಡೆದ ಹಕ್ಕಿ ತಾನು ಎನ್ನಿಸಿತ್ತು ರಾಮಣ್ಣನಿಗೆ. ಹಗಲು ಹೇಗೊ ಹೊರಗೆ ಕಳೆದು, ಕೊನೆಗೆ ಗೆಳೆಯನು

ತಂದ ತನ್ನ ವಸ್ತುಗಳನ್ನು ಪಡೆದುಕೊಂಡು ಸಾಯಂಕಾಲ ಹಕ್ಕಿಯಂತೆ ಮನೆಗೆ ಬಂದಿದ್ದ.

ಮನೆಯಲ್ಲಿ ಕುಮುದಳೂ ಇದ್ದಿರಲಿಲ್ಲ, ಮೋಹನನೂ ಇದ್ದಿರಲಿಲ್ಲ !

ರಾಮಣ್ಣ ಧಿಗ್ಗನೆ ಕುರ್ಚಿಯಿಂದೆದ್ದ. ಹತ್ತು ವರ್ಷಗಳ ಹಿಂದಿನ ಸ್ಮೃತಿ-ಪ್ರವಾಹದಲ್ಲಿ ತಾನು ಸಿಕ್ಕಿಕೊಂಡಿದ್ದನೆಂಬುದರ ಅರಿವು ಅವನಿಗೆ ಇದ್ದಿರಲಿಲ್ಲ ಒಂದು ಕ್ಷಣ. ಸೀರೆ, ಸರಗಳನ್ನು ಹಿಡಿದವನಂತೆ ಕೈಯೆತ್ತಿ ಕೊಂಡು ಕಿಟಕಿಯತ್ತ ನಡೆದು ಬಂದ. ಆಗ ಎಚ್ಚರವಾಯಿತು ಅವನಿಗೆ.

ನನಗೆ ಹುಚ್ಚು ಹಿಡಿಯಲಿಕ್ಕಿಲ್ಲವಷ್ಟೆ ? ಎಂದು ಕೈಯನ್ನು ಇಳಿಬಿಟ್ಟ, ಇಲ್ಲದ ಸೀರೆ ಬಿದ್ದು ಹೊಲಸಾದೀತು ಎಂಬ ಹೆದರಿಕೆಯಿಂದ ಮೆಲ್ಲನೆ ಇಳಿ-ಬಿಟ್ಟ. ನನಗೆ ಹುಚ್ಚು ಹಿಡಿಯಲಿಕ್ಕಿಲ್ಲವಷ್ಟೆ ಎಂದು ಮತ್ತೊಮ್ಮೆ ವಟಗುಟ್ಟುತ್ತ ತಲೆಯನ್ನು ಜಾಡಿಸಿದ.

ಒಮ್ಮೆಲೆ ನಗೆ ಬಂದಿತು ರಾಮಣ್ಣನಿಗೆ, ಅಂದು ಆ ಸೀರೆಗಾಗಿ ತನಗೆ ಬಂದ ವಿಚಾರವನ್ನು ನೆನೆದು.

ಹುಂ....ಇಂದಿನ ಸಭೆ ಬೇಗನೆ ಸುರುವಾದರೆ ಒಳಿತು, ಇಲ್ಲವಾದರೆ ತನಗೆ ಹುಚ್ಚು ಹಿಡಿಯುವುದು ಖಂಡಿತ ಎಂದುಕೊಂಡ.

ನಾಲಗೆ ವಿಷಯವನ್ನು ಬದಲಾಯಿಸಲು ಯತ್ನಿಸಿದರೂ ಮನಸ್ಸು ಕೇಳಲಿಲ್ಲ, ಸ್ಮೃತಿಯನ್ನು ಹಿಂಬಾಲಿಸಿಯೆ ಹೊರಟಿತು. ಸ್ಮೃತಿ-ಚಿತ್ರ ಮುಂದೆ ನಿಂತೊಡನೆ ರಾಮಣ್ಣ ಮತ್ತೊಮ್ಮೆ ನಕ್ಕ, ಅಂದು ಆ ಸೀರೆಗಾಗಿ ಬೆಳೆದ ವಿಚಾರವನ್ನು ನೆನೆದು.

೫

ಕುಮುದಳ ಸಿಟ್ಟು ಸೀರೆಯ ಮೇಲೆ ತಿರುಗಿತು. ಮೋಹನನು ಇನ್ನೂ ಬಾರನೆಂಬ ಅಸಮಾಧಾನದ ಸಿಟ್ಟಿನಿಂದ, ಕನ್ನಡಿಯ ಇದಿರು ನಿಂತು ಕೂದಲನ್ನು ಸರಿಪಡಿಸಿಕೊಳ್ಳುವಾಗ ಸೆರಗು ಜಾರಿತು, ಜಾರಿದ ಸೆರಗು ತೋರಿದ ಯೌವನಸಂಪತ್ತನ್ನು ಕಂಡು ಸಿಟ್ಟು ಇನ್ನಿಷ್ಟು ಕೆರಳಿತು, ಪೂರ್ತಿ-

ಯಾಗಿ ಪ್ರತಿಬಿಂಬವನ್ನು ನೋಡಿದಳು, ಉಟ್ಟ ಸೀರೆಗಾಗಿ ತನ್ನ ವ್ಯಕ್ತಿತ್ವಕ್ಕೆಯೆ ಕಳೆ ಏರಿದ್ದನ್ನು ಕಂಡು ಸೀರೆಯ ಮೇಲೆ ಕಿಡಿಕಿಡಿಯಾದಳು.

ಹಾಳು ಸೀರೆ! ಅಂದಿನಿಂದ ಇಂದಿನ ವರೆಗೆ ಕಹಿ ನೆನಪುಗಳಿಂದಲೆ ನೇಯ್ದಂತಿದೆ — ಎನ್ನುತ್ತ ಕನ್ನಡಿಗೆ ಬೆನ್ನು ತಿರುವಿ ಕುಳಿತುಕೊಂಡಳು. ಅಭ್ಯಾಸಬಲಕ್ಕಾಗಿ ತೊಡೆಯ ಮೇಲಿನ ಸೀರೆಯನ್ನು ಸರಿಪಡಿಸಿಕೊಂಡಳು, ತಟ್ಟನೆ ಮೈಲಿಗೆಯಾಯ್ತೆಂಬಂತೆ ಬಿಟ್ಟಳು ....

ಹತ್ತು ವರುಷಗಳ ಹಿಂದಿನ ಮಾತು. ಬೆಳಿಗ್ಗೆ ರಾಮಣ್ಣ ಕೈ-ಗಡಿಯಾರವನ್ನು ಕೊಟ್ಟಿದ್ದ, ಅಲ್ಲ, ಕೈಮುಟ್ಟಿ ಕಟ್ಟಿದ್ದ. ಆಗ ಒಂದು ಕ್ಷಣ, ಅವನ ಕೈಯನ್ನು ಹಿಡಿದೆಳೆಯಬೇಕೆನ್ನಿಸಿತ್ತು, ಹಿಂದಿನದೆಲ್ಲವನ್ನು ಮರೆತು ಒಮ್ಮೆ, ಆಯುಷ್ಯದಲ್ಲಿ ಕೊನೆಯ ಸಲ, ಮೈಗೆ ಮೈ ಸಮರಸವಾಗುವಂತೆ ಅಪ್ಪಿಕೊಳ್ಳಬೇಕೆನ್ನಿಸಿತ್ತು, ಅಷ್ಟರಲ್ಲಿ ರಾಮಣ್ಣ ಕೈಬಿಟ್ಟು ಹೊರಬಿದ್ದಿದ್ದ, ತಾನು ಪ್ರೇಮಾವೇಶದ ಭೂತದಂತೆ ಮಲಗಿದ ಮೋಹನನನ್ನು ಮುದ್ದೆ ಯಾಗುವಂತೆ ತಬ್ಬಿಕೊಂಡಿದ್ದಳು, ಆಗ ಎಚ್ಚರವಾದಂತಾಗಿತ್ತು ತನಗೆ. ಇನ್ನು ಈ ಮನೆಯಲ್ಲಿ ಉಳಿದರೆ ತಾನು ರಾಮಣ್ಣನ ವಶಳಾಗುವುದು ಖಂಡಿತ, ಆ ಅವಮಾನವನ್ನು ಸಹಿಸಲಾಗದು, ಅಲ್ಲಿಂದ ಹೊರಡಲೇಬೇಕು ಎಂದು ನಿಶ್ಚಯಿಸಿದ್ದಳು. ಕಾದ ಕಬ್ಬಿಣದಂತಾಗಿತ್ತು ತನ್ನ ದೇಹ. ಯಾವುದರ ಸ್ಪರ್ಶವಾದರೂ ಸಡುಗುತ್ತಿತ್ತು. ತಾನು ಅಲ್ಲಿಂದ ಹೊರಡಲೇಬೇಕು, ಹೊರಡಲೇ ಬೇಕು—

ಹತ್ತು ವರ್ಷಗಳ ತರುವಾಯ ಇಂದಿಗೂ ಕುಮುದಳಿಗೆ ಈ ಗೂಢ ಬಿಟ್ಟಿರಲಿಲ್ಲ. ಒಂದೆಡೆ ಅಗಾಧವಾದ ಪ್ರೇಮ, ಇನ್ನೊಂದೆಡೆ ಅಷ್ಟೆ ಅಗಾಧ ವಾದ ದ್ವೇಷ. ಯಾಕೆ? ಒಮ್ಮೊಮ್ಮೆನ್ನಿಸುವುದು ರಾಮಣ್ಣನದಲ್ಲ, ಎಲ್ಲ ತಪ್ಪು ತನ್ನದೆ ಎಂದು. ಅಂತಹ ಸಮಯದಲ್ಲಿ ಸರಳಕ್ಕನ ನೆನಪು ಬಂದು ಕುಮುದಳಿಗೆ ತನ್ನ ನಡತೆ ಎಂದರೆ ಅಕ್ಕನಿಗೆ ದ್ರೋಹ ಎನ್ನಿಸುತ್ತಿತ್ತು.

ಎಷ್ಟು ಸಲ ಹೇಳುತ್ತಿರಲಿಲ್ಲ ಸರಳಕ್ಕ? ಒಮ್ಮೊಮ್ಮೆ ರಾಮಣ್ಣ ಮನೆಗೆ ಬಾರಲು ತಡವಾದರೆ ಕೇಳುತ್ತಿದ್ದಳು.

"ಇವರು ಮನೀಗೆ ಬರೋದು ಎಷ್ಟು ತಡ, ಅಕ್ಕಾ?"

"ತಡ ಎಲ್ಲಿಂದ ಬಂದಿತ? ಅವರು ಬರೋ ಹೊತ್ತೇ ಅದು."

"ಅಲ್ಲ, ಸರಳಕ್ಕಾ, ನೀನು ಒಬ್ಬಾಕೆ ಮನೇವಳಗ—"

"ಆದ್ರೇನಾಯ್ತು ? ನನ್ನ ಕೆಲಸ ನನಗಿರ್‍ತದ—"

"ಅಲ್ಲ, ಅಕ್ಕಾ, ನೀನು ಜಡ್ಡಿನಾಕೆ ಅಂತಾದ್ರೂ—"

"ಅಯ್ಯ, ಹುಡುಗಿ ನೀ, ಕುಮುದಾ ನಾಳೆ ಮದುವೆ ಆಯ್ತು ಅಂದ್ರ ನಿನಗೂ ತಿಳಿದೀತು. ಗಂಡಸಿನ ಕೆಲಸ ಹೊರಗೆ."

"ಹೆಂಡತಿಗೆ ವೈಯಲ್ಲಿ ಗುಣ ಇಲ್ಲ ಅಂತಾದರೂ — "

"ನೋಡು, ಕುಮುದಾ, ಗಂಡಸಿನ ಸ್ವಭಾವ ಅದು, ಮನೇ ಹೊರಗ ಕೆಲಸ, ಮನೇ ಬಿಟ್ಟು ಅಡ್ಡಾಡೋದು. ಹೆಂಗ್ಸಿನ ಮಾತೇ ಬ್ಯಾರೆ, ತಾನಾಯ್ತು, ತನ್ನ ಮನೀ, ತನ್ನ ಮಕ್ಕಳು, ಕೆಲಸ–ಬೊಗಸೆ—ಇದನ್ನೆಲ್ಲಾ ಹ್ಯಾಗೆ ಬಿಡ್ಲಿಕ್ಕೆ ಬರೋದು ಹೆಂಗ್ಸಿಗೆ ?"

ಸರಳಕ್ಕನ ಸಹನ ಸ್ವಭಾವಕ್ಕೆ ಬೆರಗಾಗುತ್ತಿದ್ದಳು ತಾನು. ರಾಮಣ್ಣ ತನ್ನನ್ನು ಅಲಕ್ಷ್ಯ ಮಾಡುವನೆಂದರೂ ಆಕೆಗೆ ಅಸಮಾಧಾನವಿದ್ದಿರಲಿಲ್ಲ.

"ಗಂಡು ಜೀವನ. ನಾಲ್ಕು ಮಂದೀವಳಗ ಕಲ್ತು ಹರಟೀ ಹೊಡೆ-ದ್ರೇನಾಯ್ತು ? ಯಾರು ? ಇವರ ಸಲುವಾಗಿ ಅಂತೀಯಾ ? ಪಾಪ ! ಅವರು ಹೊರಗೆ ಹೋಗೋದೇ ಅಪರೂಪ. ಓದೋದಾಯ್ತು, ಬರೆಯೋದಾಯ್ತು. ಯಾವಾಗಾದ್ರೊಮ್ಮೆ ಬ್ಯಾಸರಿಕೆ ಬಂದಾಗ ಒಂದು ಗಳಿಗೆ ಹೆಚ್ಚೊತ್ತು ಹೊರಗಿದ್ದು ಬರ್‍ತಾರ." ಎಂದು ರಾಮಣ್ಣನನ್ನು ಆಕೆ ಅಭಿಮಾನದಿಂದ ಸಮರ್ಥಿಸುತ್ತಿದ್ದಳು.

"ಹೊರಗ ಹೋದಾಗಿನ ಮಾತಂತೂ ಬಿಡು. ಮನೀವಳ್ಗ ಇದ್ದಾಗ ಸಹಿತ ತಾಸು–ತಾಸುಗಟ್ಲೆ ನಾನು ಮನೀವಳಗ ಇದ್ದೀನೊ ಇಲ್ಲೊ ಅನ್ನೋ ಎಚ್ಚರ ಇರೋದಿಲ್ಲ ಅವರಿಗೆ. ಬರೆಯೋದ್ರೊಳಗ ಗುಂಗ ಆಗಿ ಹೋಗಿರ್‍ತಾರ ಅಷ್ಟು ಪರಿ" ಎನ್ನುವಾಗ ಸರಳಕ್ಕನ ನೀರಕ್ತ ಕೆನ್ನೆಗಳು ಅಭಿಮಾನದಿಂದ ಕೆಂಪೇರಿರುತ್ತಿದ್ದುವು.

"ಇಂಥವ್ರಿಗೆ ಹೆಂಡತಿ ಇದ್ದರೂ ಅಷ್ಟೆ, ಬಿಟ್ಟರೂ ಅಷ್ಟೆ" ಎಂದು ತಾನೇ ಒಮ್ಮೆ ತಾತ್ಸಾರವಾಗಿ ನುಡಿದಿದ್ದಳು ಕುಮುದ.

"ಅಯ್ಯ! ಹುಚ್ಚೀ ! ನಮ್ಮದು ನಾವು ಹೇಳಿಕೊಳ್ಳಬಾರದು. ಆದರೆ

ನಾನಿದ್ದಿದ್ದಿಲ್ಲ ಅಂದ್ರೆ ಒಂದು ಕ್ಷಣ ಚೈನ ಬೀಳೋದಿಲ್ಲ ಅವರಿಗೆ. ಒಮ್ಮೇ ಒಮ್ಮೆ ಒಂದು ತಿಂಗಳ ತವರ್ಮನೀಗೆ ಹೋಗಿದ್ದೆ, ಮದುವೆ ಆದ ಹೊಸತಾಗಿ. ಆ ಇಡೀ ತಿಂಗಳೊಳಗ ಒಂದು ಅಕ್ಷರ ಬರೆದಿದ್ದಿಲ್ಲ ಪುಣ್ಯಾತ್ಮರು" ಎಂದು ಅದೆಷ್ಟು ಸಂತೋಷದಿಂದ ಹೇಳಿದ್ದಳು ಸರಳಕ್ಕ!

"ಇಂಥಾ ಸುಖದ ಸಂಸಾರ ನನ್ನದು ಅಂತಲೇ ಮುತ್ತೈದೆತನದೊಳಗ ಸಾಯ್ಬೇಕು ಅಂತ ನನ್ನ ಹಟ" ಎಂಬ ಅಕ್ಕನ ಮಾತಿಗಾಗಿ ತಾನು ತಡೆಯುದಾಗಿ ಅತ್ತಿದ್ದಳು.

ಅದೇ ರಾಮಣ್ಣನಲ್ಲವೆ ಈಗಲೂ? ಆ ರಾಮಣ್ಣ ತನಗೆ ಪೂರ್ತಿಯಾಗಿ ಗೊತ್ತಿರಲಿಲ್ಲವೆ? ಗೊತ್ತಿದ್ದೆ ತಾನು ಅವನನ್ನು ಮೆಚ್ಚಿರಲಿಲ್ಲವೆ?

ಆದರೇನು? ಆ ರಾಮಣ್ಣ ತನ್ನವನಾಗಲಿಲ್ಲ, ತನ್ನವನಾಗಿಲ್ಲ ಎಂಬ ವಿಚಾರ ಕುಮುದಳ ಮನಸ್ಸಿನಲ್ಲಿ ದೃಢವಾಗಿತ್ತು. ತಾನು ಮೆಚ್ಚಿದ್ದು ರಾಮಣ್ಣನನ್ನು, ರಾಮಣ್ಣ ಮೆಚ್ಚಿದ್ದು—ತನ್ನ ದೇಹವನ್ನೆ? ಹೆಂಡತಿ ಹಾಸಿಗೆ ಹಿಡಿದವಳೆಂದೊ, ಹೊಸ ಅನುಭವವೆಂದೊ, ಗಂಡುತನದ ಹೆಮ್ಮೆಯೆಂದೊ ರಾಮಣ್ಣ ತನ್ನನ್ನು ಕೂಡಿಕೊಂಡನಲ್ಲವೆ? ಮದುವೆ ಇಲ್ಲದ ತಾಯ್ತನದಿಂದ ತನಗೆ ಸಮಾಜದಲ್ಲಿ ಪೀಡೆಯಾಗಬಹುದೆಂದು ಅನಿವಾರ್ಯವಾಗಿ, ಕನಿಕರದಿಂದ, ಉಪಕಾರ ಬುದ್ಧಿಯಿಂದ ತನ್ನನ್ನು ಮದುವೆಯಾಗಿದ್ದ ರಾಮಣ್ಣ ಎಂದು ನಂಬಿದ್ದಳು ತಾನು.

ಇವನ ಪ್ರೇಮ ಬೇಕು, ಉಪಕಾರ ಬೇಡ; ಸಮಾಜವು ತನ್ನನ್ನು ಹೊರಗಿಟ್ಟರೂ ಇಡಲಿ, ಪ್ರೇಮಕ್ಕಾಗಿ ಸುಖದ ತ್ಯಾಗವನ್ನು ಮಾಡಲು ತಾನು ಸಿದ್ಧಳಾಗಿರುವಾಗ ಪ್ರೇಮವಿಲ್ಲದ ಮದುವೆಯ ಬಂಧನದಲ್ಲಿ ತನ್ನನ್ನು ಸಿಕ್ಕಿಸಿಕೊಂಡನಲ್ಲ?

ಅಂದಿಗೇ ತನ್ನ ಪ್ರೇಮದ ಕತೆ ಮುಗಿದಿತ್ತು ಎಂದುಕೊಂಡಿದ್ದಳು ಕುಮುದ. ಮದುವೆಯಾದ ಒಂದು ತಿಂಗಳಲ್ಲಿ "ಸೋದರತ್ತೆ"ಯ ನೆಪದಿಂದ ಊರನ್ನು ಬಿಟ್ಟಿದ್ದಳು. ಮದುವೆಯಾಗಿದೆ, ಸಮಾಜದ ಹೆದರಿಕೆ ಇಲ್ಲ ಎಂಬ ಸಮಾಧಾನ ತನಗಿರಲಿಲ್ಲ; ಪ್ರೇಮವಿಲ್ಲದ ಮದುವೆಯ ಹಾದರದ ಬಸಿರು ತನ್ನದು ಎಂದು ಒಳಗೆ ರೂಪುಗೊಳ್ಳುವ ಜೀವನವನ್ನು ದ್ವೇಷಿಸತೊಡಗಿದ್ದಳು. ಸೋದರತ್ತೆ ಅಲ್ಲದಿದ್ದರೂ ದೂರದ ಸಂಬಂಧದ ಒಂದು ಮುದಿಜೀವವಿದ್ದಿತು,

ಅಲ್ಲಿ ತಿಂಗಳೊಪ್ಪತ್ತು ಕಳೆಯೋಣ ಎಂದುಕೊಂಡಿದ್ದಳು. ಅದೂ ಅಸಹ್ಯ-ವಾಗಿತ್ತು.

"ಎಷ್ಟು ಸಲಕ್ಷಣ ಕಾಣ್ತೀಯೆ ? ಬಸಿರಿದ್ದೀಯೊ ಏನು ?" ಎಂದು ಮರುದಿನ ಬೆಳಗಿನಲ್ಲಿಯೆ ಆ ಮುದುಕಿ ಕೇಳಿತ್ತು.

"ಮದುವೆ ಆಯ್ತು ಅನ್ನೋದಾದ್ರೂ ತಿಳಿಸಬಾರ್ದೇನ ? ಮದಿವೀಗೆ ಕರೀದಿದ್ರೂ ಅಷ್ಟೇ ಹೋಯಿತು ! ಕಡಲೇಬ್ಯಾಳಿಯ ಹೋಳಿಗೆ, ಹಲ್ಲಿಲ್ಲದ ಮುದುಕೀಗೆ ನಡೆಯೋದಿಲ್ಲ ಅಂತ ತಿಳಿದೆಯೇನು ಮತ್ತೆ !"

ಒಂದೆರಡು ದಿನಗಳಲ್ಲಿಯೆ ಹೊರಟುಹೋಗೋಣ ಎನ್ನಿಸಿತ್ತು ಕುಮುದಳಿಗೆ.

ಆದರೂ —

ಕುಮುದಳಿಗೆ ಇಂದಿಗೆ ನಗೆ ಬರುವುದು ಅದನ್ನು ನೆನೆದರೆ. ಆ ಮುದಿಜೀವನದ ಸಹವಾಸದಲ್ಲಿ ಎಂತಹ ಸೊಗಸಿತ್ತು ಎಂಬುದನ್ನು ನೆನೆದರೆ ಆ ಕೆಲವು ದಿನಗಳು ತನ್ನ ಸುಖದ ದಿನಗಳು ಎಂದು ತಿಳಿಯು-ತ್ತಿದ್ದಳು.

"ತಡ ಮಾಡಿ ಮದಿವೆ ಆಗೋದು, ತಿಂಗಳೊಪ್ಪತ್ತಿನೊಳಗ ಬಸಿರು ಆಗೋದು ! ಮುಗಿದೇ ಹೋಯ್ತು ಈಗಿನ ಹುಡುಗೇರ ಮದುವೇ ಸುಖ " ಒಂದು ದಿನ ಯಾವುದೊ ಸಂದರ್ಭದಲ್ಲಿ ನುಡಿದಿದ್ದಳಲ್ಲವೆ ಆ ಮುದುಕಿ ?

"ಮದಿವೆ ಅಂದ್ರೇನು ಅಂಬೋದು ಗೊತ್ತಾದ ಮ್ಯಾಲಾದರೂ ನಮ್ಮ ಮದಿವೆ ಆಗ್ತದ, ಅತ್ತೀ" ಎಂದು, ಯಾಕೊ ಏನೊ, ತಾನೂ ಕೆಣಕಿದ್ದಳು.

"ಏನು ಗೊತ್ತಾಗ್ತದ ನಿಮ್ಮ ತಲೆ ! ಮದಿವೆ ಅಂದ್ರೆ ಅದೊಂದೇ ಅಲ್ಲ !"

"ಅದು ಅಂದ್ರೆ ಯಾವುದು, ಅತ್ತೀ ?"

"ಈಗ ಮಾಡಿಕೊಂಡು ಕೂತೀದಿಯಲ್ಲ, ಅದು " ಎಂದು ಹಟದಿಂದ ಹೇಳಿತ್ತು ಮುದುಕಿ.

"ಅದನ್ನ ಬಿಟ್ಟರ ಮತ್ತೇನದ ಮದಿವೀವಳ್ಗ ?"

"ಹಾಂಗ ತಿಳಕೊಂಡೇ ಹಾಳಾಗ್ತಿವ, ಕುಮುದೀ, ಈಗಿನ

ಹುಡುಗೇರು ! ಅದನ್ನ ಬಿಟ್ರ ಏನದ ಅಂತ ? ಗಂಡಸೂ ಅದೇ ಮಾತ್ಹೇಳಿದ್ರ ನಿಂ ಗತಿ ಏನು ? "

"ನನಗನಿಸ್ತದ, ಅತ್ತೀ, ಗಂಡಸಿಗೇ ಅದೊಂದು ಮುಖ್ಯ ಅನ್ನಿಸ್ತದ ಅಂತ. ಹೆಂಗಸಿಗೆ ಹುಟ್ಟಿದ ಮಕ್ಕಳನ್ನ ಬೆಳೆಸೋದಾದ್ರೂ ಇರ್ತದ."

ಹಲ್ಲಿಲ್ಲದ ಬಾಯಿಯನ್ನು ತೆರೆದು ಮನಃಪೂರ್ತಿ ನಕ್ಕಿದ್ದಳು ಮುದುಕಿ ಆ ಮಾತಿಗೆ !

"ಗಂಡಸಿಗೇ ಅದು ಮುಖ್ಯ ಅಂತ ! ಅಯ್ಯ! ಹುಚ್ಚೀ! ಅದೇ ಮುಖ್ಯ ಆಗಿದ್ರ ಗಂಡಸು ಮದಿವೀನೇ ಮಾಡಿಕೋತಿದ್ದಿಲ್ಲ. ಮನೇ ಊಟದಕಿಂತ ಹೊಟೆಲ್‌ದ ತಿಂಡಿ ತಿನಿಸಿನ ರುಚಿ ಹೆಚ್ಚು ಗಂಡಸಿಗೆ. ನಿನ್ನ ಮದಿವಿ ಆಗಿ, ನಿನ್ನ ಮಕ್ಕಳ ಜಡ್ಡು-ಜಾಪತ್ರ ಸಹಿಸಿ, ನೀನು ಮುದುಕಿ ಆಗೋದನ್ನ ಕಾಣತಾ ಕಾಲಕಳೆಯೋ ಗಂಡಸಿಗೆ ಮದುವೆಯಲ್ಲಿ ಬೇಕಾದದ್ದು ಬ್ಯಾರೇನೆ ಇರ್ತದ, ಕುಮುದೀ !"

ಕುಮುದಳು ಅವಾಕ್ಕಾಗಿದ್ದಳು ಆ ಮಾತಿಗೆ. ಶಿಕ್ಷಣವಿಲ್ಲದ ಈ ಮುದಿ ಜೀವನದ ಬುದ್ಧಿವಂತಿಕೆಗೆ ಬೆರಗಾಗಿದ್ದಳು. ಅಷ್ಟರಲ್ಲಿ ಮುದುಕಿ ಸುಂಯ್ಗು ಡುತ್ತಿರುವುದನ್ನು ಕೇಳಿ ಇನ್ನಿಷ್ಟು ಚಕಿತಳಾಗಿದ್ದಳು.

"ಯಾಕೆ, ಅತ್ತೀ, ನನಗ ಬುದ್ಧಿ ಹೇಳ್ತಾ ನೀ ಅಳ್ತೀಯಲ್ಲ ?"

"ಅಳೋದಿಲ್ಲ, ತಂಗೀ. ಹಿಂದಿನ ಸುಖದ ದಿನ ನೆನಪಾಯ್ತು, ಸಂತೋಷ ತಡೀಧಾಂಗಾಯ್ತು"

ಈ ಮುದುಕಿ ಸುಖವನ್ನು ಕಂಡಿದ್ದಳೆಂಬುದೆ ಕುಮುದಳಿಗೆ ಹೊಸ ಸುದ್ದಿ. ಎಂದಿನಿಂದಲೂ ವಿಧವೆಯಾಗಿಯೆ ಇದ್ದ ಇವಳನ್ನು ನೋಡಿ ತನಗನ್ನಿಸಿತ್ತು —

ಕುಮುದಳಿಗೆ ಒಮ್ಮೆಲೆ ನಗೆ ಬಂದಿತ್ತು.

"ಯಾಕ ? ನಗ್ತೀ ಯಾಕ, ಕುಮುದೀ ?"

"ಏನಿಲ್ಲ ಅತ್ತೀ. ನೀ 'ಸುಖದ ದಿನ' ಅಂದದ್ದಕ್ಕ ಏನೊ ವಿಚಾರ ಬಂತು — "

"ಅಂದ್ರೇನ ? ನಾನು ಮದುವೆ ಆಗಿಲ್ಲ, ಸುಖ ಕಂಡಿಲ್ಲ ಅಂತ ತಿಳಿದೀಯೇನು ?" ಮುದುಕಿಗೆ ಹೊಳೆಯಿತೇನೊ, ನಗುತ್ತಲೆ ನುಡಿದಿದ್ದಳು,

"ನಾನು ಹುಟ್ಟಾ ಹೀಂಗೇ ಇದ್ದೀನಿ ಅಂತ ತಿಳಿದಿದ್ದೆಯೊ ಏನು ?"

"ನನಗನ್ನಿಸ್ತು ಸುಖದ ದಿನ ನೆನಪಾಗಿ ಕೆಟ್ಟು ಅನ್ನಿಸ್ತೇನೊ ಅಂತ "

"ಕೆಟ್ಟು ಅನ್ನಿಸೋದು ? ಅಲ್ಲ, ಹುಚ್ಚೀ, ಸುಖದ ದಿನ ನೆನವಾದ್ರ ಸಂತೋಷ ಆಗೋದು. ಇಲ್ಲಿದ್ರೆ ಇಷ್ಟು ದಿವಸ ಯಾಕೆ ಸಾಯ್ತಿದ್ದ ಜೀವಾ ಹಿಡಿದುಕೊಂಡು ? ಎಲ್ಯಾದರೂ ಕೆರೀಭಾವೀ ತಳದೊಳಗ ಸುಖದಿಂದ ಇರ್ತಿದ್ದೆ. ಆದ್ರೆ ಹಿಂದಿನ ಸುಖದ ಒಂದು ನೆನಪಿನಿಂದಲೇ ಇಂದಿಗೂ ನಾನು ಸುಖದಿಂದಿದ್ದೀನಿ ಅನ್ನು."

"ಅಂಥಾ ಸುಖ ಯಾವುದು, ಅತ್ತೀ ?"

"ನೀನು ಇನ್ನೂ ಸಣ್ಣಾಕೆ, ನಿನಗೆ ತಿಳಿಯೋದಿಲ್ಲ "

"ಅಯ್ಯ! ಈ ಆಟಾ ಹೂಡಬ್ಯಾಡ, ಅತ್ತೀ. ಇಂದಿನ ಹುಡುಗೇರು ಬಹಳ ಲಗೂನೆ ದೊಡ್ಡವರಾಗ್ತಾರ."

"ಯಾತಕ್ಕ ದೊಡ್ಡವರಾಗ್ತಾರೊ ! ಆ ಕೆಲಸಕ್ಕ ದನ ಸಹಿತ ಲಗೂ ದೊಡ್ಡೂ ಆಗ್ತಾವ !"

"ನಿನಗ ಎರಡನೇ ವಿಚಾರಾನೇ ಇಲ್ಲ, ಅತ್ತೀ." ನೊಂದ ದನಿಯಲ್ಲಿ ಹೇಳಿದ್ದಳು.

"ನಿನ್ನ ಮಾತು ಹೇಳಲಿಲ್ಲ, ಕುಮುದಾ. ಒಟ್ಟು ಈಗಿನ ಹುಡುಗೇರ ಮಾತು ಹೇಳ್ತಿದ್ದೆ. ನಂ ಕಾಲದೊಳಗ 8–10 ವರ್ಷದವರಿದ್ದಾಗ ಮದಿವೆ ಆಗ್ತಿತ್ತು. ಗೌರಿ–ಗಂಗಿ, ಪಂಚಮೀ – ಚತುರ್ಥಿ, ಬೀರಿಸೋದು – ಏರಿಸೋದು ಅಂತ ಹುಡುಗತನದಾಗ ಒಂದೆರಡು ವರ್ಷ ಸಂತೋಷದಿಂದ ಇರ್ತಿದ್ವಿ....ಆ ನೆವದಿಂದ ಬೆಳೆದ ಹೆಣ್ಮಕ್ಕಳೊಳಗ ಓಡಾಡ್ತಿದ್ವಿ, ಅವರ ಮಾತು–ಕತೆಗಳಿಂದ ಬುದ್ಧಿ ಕಲೀತಿದ್ವಿ—"

"ಅದಿರ್ಲಿ, ಅತ್ತೀ, ನಿನ್ನ ಆ ಒಂದು ಸುಖದ ನೆನಪು ಯಾವುದು ಹೇಳು."

"ಅದನ್ನೆ ಹೇಳ್ತೀನೆ. ಇದನ್ನೆಲ್ಲಾ ಹೇಳದಿದ್ರ ಅದು ತಿಳಿಯೋದಿಲ್ಲ. ಅಷ್ಟೆಲ್ಲ ಮಾಡಿ ಪ್ರಬುದ್ಧ ಆಗೋದರೊಳಗ ನಮಗೆಲ್ಲಾ ಗೊತ್ತಿರ್ತಿತ್ತು, ಗಂಡಸರು ಹ್ಯಾಂಗ, ಅವರ ಸ್ವಭಾವ ಏನು, ನಮ್ಮವರು ಎಂಥವರು, ಅವರು ಯಾರ್‍ಯಾರ ಕೂಡ ಇರ್ತಾರ — ಅದು – ಇದು – ಎಲ್ಲ. ಅದಕ್ಕೇ ನನಗ

ನಮ್ಮಾವರ ನಡತೀ ಬಗ್ಗೆ ಸಿಟ್ಟೂ ಬರಲಿಲ್ಲ, ಆಶ್ಚರ್ಯಾನೂ ಅನ್ನಿಸಿ-ರಲಿಲ್ಲ."

"ಯಾಕೆ ನಿಮ್ಮಾವರ ನಡತೆ ಸರಿ ಇರಲಿಲ್ಲೇನು, ಅತ್ತೀ ?"

"ಸರಿಯೋ ಬೆಸಾನೊ ? ನಾಲ್ಕು ಜನ ಸರೀಕರು ಇದ್ದಾಂಗಿದ್ದರು."

"ಅಂದ್ರ – ಅಂದ್ರ – ಹೊರಗ ಏನಾದ್ರೂ — "

"ಹೊರಗ ಇದ್ದಳು ಒಬ್ಬಾಕೆ ಹೊಯ್ಮಾಲಿ !"

"ಆದ್ರೂ ನಿಮ್ಮಾವರ ಮ್ಯಾಲೆ ನಿನ್ನ ಸಿಟ್ಟು ಇದ್ದಿರಲಿಲ್ಲ ಅಂತೀಯಲ್ಲ, ಅತ್ತೀ ?"

"ಅಂದ್ರ ? ಕೂಸು ಹೊಲಸಿನಾಗ ಕಯ್ಯಾಡಿಸಿದರ ಕೂಸಿನ ಮ್ಯಾಲೆ ಸಿಟ್ಟಾಗ್ತೀಯಾ ? ಹೊಲಸು ಅಂತ ತಿಳಿಯೋದಿಲ್ಲ ಅದಕ್ಕ. ಅದೇನೊ ಒಂದು ಹೊಸದು, ಒಂದು ಮೋಜು."

"ಅದೆಂಥಾ ಮೋಜು, ಅತ್ತೀ ? ಮನೀಯವರು ಇಲ್ಲಿ ಇವರ ಸಲುವಾಗಿ ಗೋಳಾಡಿದರೆ ?"

"ಗೋಳಾಡ್ಲಿಕ್ಕೆ ನನಗೇನು ಧಾಡಿ ಆಗಿತ್ತು ? ನನ್ನ ಕೂಡ ಜಗಳಾ-ಡಿದ್ದರೆ ? ನನ್ನ ಹೊಡೀ ಬಡೀತಿದ್ದರೆ ?"

"ಆದ್ರೆ ನಿನ್ನ ಬಿಟ್ಟು ಇನ್ನೊಬ್ಬಾಕೇ —"

"ಅಯ್ಯ ! ಹುಚ್ಚೀ ! ನನ್ಬಿಟ್ಟು ಅಂತ ! ನನ್ಯಾಕ ಬಿಡ್ತಾರ ?"

"ಅಲ್ಲ, ಅತ್ತೀ, ಬಿಡೋದು ಅಂದ್ರ – ಹೀಂಗ – ಅಲ್ಲ – ಅಂದ್ರ – ನೀ ಮನೀವಳಗಿದ್ದಾಗ ದಿನಾಲು ಅವರು—"

"ದಿನಾಲು ಅಂತ ! ಅದಕ್ಕೇ ಹೇಳ್ದೆ ಈಗಿನ ಹುಡುಗೇರಿಗೆ ಮದಿವೀ ಅಂದ್ರ ಅದೊಂದೇ ಅಂತ. ನನ್ನ ಜೋಡಿ ಸಂಸಾರ ಮಾಡಿದರ ಆಯ್ತಲ್ಲ ? ದಿನಾಲು ಏನು ಮಾಡ್ತಾರ, ಉಳಿದ ವ್ಯಾಳ್ಯಕ್ಕ ಏನ್ಮಾಡ್ತಾರ ನನಗೇ-ನ್ಮಾಡೋದು ? ನನಗೂ ಕೈ ತುಂಬ ಕೆಲಸ ಇರ್ತಿತ್ತು, ಮನೀ ತುಂಬ ಮಂದಿ ....ಅತ್ತೆ, ಮಾವ, ಮೈದುನ, ನಾದಿನಿ, ಬರೋವ್ರು, ಹೋಗೋವ್ರು— ಇದನ್ನೆಲ್ಲಾ ಬಿಟ್ಟು ದಿನಾ ಚಕ್ಕಂದ ಆಡ್ಲಿಕ್ಕೆ ನಾಯೇನು ಹುಚ್ಚಿಯೆ ?"

"ಇದೇ ನಿನ್ನ ಸುಖದ ದಿನದ ನೆನಪು ಅನ್ನು."

"ಇದು ದಿನದ ಮಾತಾಯ್ತು. ಸುಖದ ದಿನ ಅನ್ನೋದು ಬ್ಯಾರೇನೇ ಅದ."

"ಇಂಥಾದ್ದರೊಳಗ ಅದೆಂಥಾ ಸುಖದ ದಿನಾನೊ !"

"ಎಂಥಾದ್ದಂತೀಯಲ್ಲ ? ಕೇಳಿದಿ ಅಂದ್ರ ತಿಳಿದೀತು."

"ಹೇಳೋಹಾಂಗಿದ್ರ ಹೇಳು, ಅತ್ತೆ."

"ಹುಂ....ಇಲ್ಲಿ ತನಕ ಕೆದರಿ ಕೆದರಿ ನನ್ನ ಮಾತಾಡ್ಸಿ, ಇನ್ನು ಮುಂದ ಹೇಳೋಹಾಂಗಿದ್ರ ಹೇಳು ಅಂತಾಳ ನೋಡು ಚದುರಿ ! ಬಾಯಿಗೆ ನೀರು ಬಿಟ್ಟ ಮ್ಯಾಲೆ ತುತ್ತು ತಿನ್ನದೆ ಬಿಡ್ತಾರ ? ಹೇಳ್ತೀನಿ ಕೇಳು. ಒಂದಿನ ಎಲ್ಲಾ ಕೆಲಸ ಮುಗಿಸಿ ರಾತ್ರಿ ನಂ ಕೋಣೇವಳ್ಗ ಹೋಗಿ ಮಲಗೋ ತಯ್ಯಾರಿ ನಡಿಸಿದ್ದೆ."

"ಒಬ್ಬಾಕೀನೇ ?"

"ಅಂದ್ರ ? ನಾಯೇನು ಹೆದರಬುರುಕಿ ಇದ್ದೆ ಅಂತೀಯೇನು ?"

"ಅಲ್ಲ, ಅಂದ್ರ ನಿಮ್ಮವರು — ?"

"ನಮ್ಮವರು ಊಟ ಆದ ಕೂಡಲೆ ಹೊರಗ ಹೋಗಿದ್ದರು. ಊಟಾನೂ ಸರಿಯಾಗಿ ಮಾಡಿದ್ದಿಲ್ಲ. ಏನ ವಿಚಾರ ಅದನೊ ಏನೊ ಅಂತ ನಾನೂ ಸುಮ್ಮನಿದ್ದೆ, ರಾತ್ರಿ–ಬಂದ ಮ್ಯಾಲೆ ಕೇಳೋಣ ಅಂದ್ಕೊಂಡೆ."

"ರಾತ್ರಿ ಬರೋ ಭರವಸೆ ಇತ್ತು ಅನ್ನು."

"ಯಾವದರೊಳಗಾದ್ರೂ ಭರವಸೆ ಇಲ್ದೆ ಸಂಸಾರದೊಳಗ ಸುಖಾನೇ ಇಲ್ಲ, ಹುಡುಗೀ. ಹಿಂದಿನ 3–4 ದಿನ ಅವರು ಮನೀಗೆ ಬಂದಿರಲೇ ಇಲ್ಲ. ಏನೊ ಗೆಳೆಯರ ಜೋಡಿ ಇಸ್ಪೇಟು ಆಡತಿರಬೇಕು ಅಂತ ತಿಳಿದಿದ್ದೆ."

"ಸುಖ ಹಚ್ಚಿಕೊಳ್ಳೋ ಹಟಾನೇ ಇತ್ತು ಅನ್ನು ನಿನಗ ?"

"ಏನಂದಿ ?"

ತನ್ನ ಮಾತಿನ ರೀತಿ ಮುದುಕಿಗೆ ತಿಳಿದಿರಲಿಲ್ಲವೇನೊ ! ತುಸು ಕಕ್ಕಾವಿಕ್ಕಿಯಾಗಿದ್ದಳು ತನ್ನ ಪ್ರಶ್ನಕ್ಕೆ.

"ನಾನು ಎಲ್ಲೀತನಕ ಬಂದಿದ್ದೆ ?"

"3–4 ದಿನ ನಿಮ್ಮವರು ಮನೀಗೆ ಬಂದಿರಲಿಲ್ಲ, ಆವೊತ್ತು ನೀನು ಮಲಗೋ ತಯ್ಯಾರಿಯೊಳಗ ಇದ್ದಿ–"

"ಹಂ... ಅಷ್ಟರೊಳಗ ತಲೆಬಾಗಿಲ ಸದ್ದಾಯ್ತು. ನನಗ ಆಶ್ಚರ್ಯ. ಬಂದ್ರೂ ಇಷ್ಟು ಬ್ಯಾಗ ಬರೋನ್ರಲ್ಲ. ಊಟಾನೂ ಸರಿಯಾಗಿ ಮಾಡಿಲ್ಲ. ಯಾಕ ಸಿಟ್ಟು ಬಂದಿದಯೊ ಏನೊ–ಅಂತ....ಅಷ್ಟರೊಳಗ ಕೋಣೇ ವಳಗ ಬಂದ್ರು, ಅಂಗೀ ತಗದಿಟ್ರು, ಉಶ್ ಅಂತ ಬಂದು 'ಚಿಕ್ಕೀ' ಅಂದರು—"

"ಏನಂದ್ರು ?"

"ಚಿಕ್ಕೀ ಅಂದ್ರು. ನಾನು ಮದುವೇ ವಳಗ ಬಹಳ ಚಿಕ್ಕಾಕೆ ಕಾಣಿಸ್ತಿದ್ದೆ ಅಂತ ನನಗ ಚಿಕ್ಕೀ ಅಂತಿದ್ರು. ಮುಂದ ಸಂಸಾರ ಪ್ರಾರಂಭ ಆಗೋವಾಗ ಒಮ್ಮೆ ನನ್ನ ನೋಡಿ 'ಎಲೆ ! ನೀನು ಆಕಾಶದೊಳಗಿನ ಚಿಕ್ಕೆ ನೋಡು. ಮದುವೇ ವಳಗ ದೂರದಿಂದ ನೋಡಿದ್ವೆ, ಇಷ್ಟೇ ಕಾಣ್ತಿದ್ದಿ, ಈಗ ಹತ್ತಿರದಿಂದ ನೋಡಿದರ' – ಅಂತಾ – ಅಲ್ಲ – ಅಂತೂ ನನಗ 'ಚಿಕ್ಕೀ' ಅಂತ ಕರೀತಿದ್ರು. 'ಚಿಕ್ಕೀ' ಅಂದ್ರು. 'ಯಾಕ ಈವೊತ್ತು ಸರಿಯಾಗಿ ಊಟಾನೇ ಮಾಡಲಿಲ್ಲ ?' ಅಂತ ಕೇಳಿದೆ. 'ಯಾಕೊ, ತಲೆ ನೋವು, ಚಿಕ್ಕೀ' ಅಂದ್ರು. 'ಅಮೃತಾಂಜನ ತರಲೇನು ?' ಅಂತ ಕೇಳಿದೆ. 'ಅಮೃತಾಂಜನ ಬರಲಿ' ಅಂದರು — "

"ಏನಂದ್ರು ?"

"ಅಮೃತಾಂಜನ ಬರಲಿ ಅಂದ್ರು. ಅದು ಅವರ ಮಾತಿನ ರೀತಿ. 'ಯಾವ ಔಷಧಾನೂ ಬ್ಯಾಡ, ಚಿಕ್ಕೀ. ಇಲ್ಲಿ ಬಾ ನೀನು' ಅಂತ ನನ್ನ ಕೂಡಿಸಿಕೊಂಡು ನನ್ನ ತೊಡೆಯ ಮ್ಯಾಲೆ ತಲೆ ಇಟ್ಟು ಮಲಗಿದರು. ನಾ ಕೆಳಗೆ ನೋಡೋದ್ರೊಳಗ ನಿದ್ದೆ ಹತ್ತಿತ್ತs, ಕುಮುದೀ ! ಗಂಡಸು ಅಂದ್ರ ಆಟ ಆಡೋ ಹುಡುಗ ಅಂತ ಆವೊತ್ತು ನನಗ ಗೊತ್ತಾಯ್ತು. ಹೊರಗ ಯಾವ ಆಟಾನೇ ಆಡಲಿ, ಎಷ್ಟೊತ್ತೇ ಆಡಲಿ, ವಿಶ್ರಾಂತಿ, ಸಮಾಧಾನ, ಆಧಾರ ಅಂದ್ರ ಮನೀವಳಗಿನ ಹೆಂಡ್ತೀನೇ ನೋಡು. ಈವತ್ತಿಗೂ – ಈಗ ನನಗ ಬಾಯಿಗೆ ಹಲ್ಲಿಲ್ಲ, ಕಣ್ಣಿಗೆ ದೃಷ್ಟಿ ಇಲ್ಲ, ತೊಡೆ ಅಂದ್ರ ಒಣಗಿದ ಬೆಂಡ ಆಗ್ಯಾವ – ಆದ್ರೂ ಈವತ್ತಿಗೂ ಆ ನೆನಪು ನನಗ ಬಂತು ಅಂದ್ರ ಅಂದಿನ ಹರೇತಿರುಗಿ ಬಂಧಾಂಗಾಗ್ತದ ನೋಡು."

"ಸಾಕು, ಸಾಕು, ಅತ್ತೀ !"

"ಅಯ್ಯ ! ಹುಚ್ಚೀ ! ನಿನಗೇನಾಯ್ತು ಅಳಲಿಕ್ಕೆ ?"

"ನಾನು ಅಳೋದಿಲ್ಲ, ಅತ್ತೀ, ಅಳೋದಿಲ್ಲ" ಎಂದು ತಡೆಯುದಂತಾಗಿ ಕೋಣೆಗೆ ಓಡಿಹೋಗಿದ್ದಳು. ಅಂದಿನ ರಾತ್ರಿಯಷ್ಟು ಗಾಢವಾದ ನಿದ್ದೆ ಇನ್ನೆಂದಿಗೂ ಬಂದಿರಲಿಲ್ಲ.

ಬೆಳಿಗ್ಗೆ ಎದ್ದಾಕ್ಷಣ ನೋಡಿದಳು, ರಾಮಣ್ಣ ಬಂದಿದ್ದಾನೆ.

ಕೈಯಲ್ಲಿ ಹಿಡಿದದ್ದು, ಅಂದು ಕೈಯಲ್ಲಿ ಹಿಡಿದದ್ದು, ಇದೇ ಸೀರೆಯನ್ನು.

ತತ್ ಕ್ಷಣ ಮುನ್ನಾರಾತ್ರಿಯ ಸವಿಸೆಸಪು ಕನಸಿನಂತಾಯಿತು.

"ಹಾಳು! ಈ ಸೀರೆ ಅಂದ್ರ ಸುಖವನ್ನ ಮರೆಮಾಡೋ ಪರದೆ!"

ಆದರೂ ಯಾವುದೊ ಕಾರಣಕ್ಕಾಗಿ ಇಂದು ತಾನು ಅದನ್ನೆ ಉಟ್ಟಿದ್ದಾಳಲ್ಲ? ಹಿಂದೆ ಒಂದೇ ನಲ ಅದನ್ನುಟ್ಟಾಗ ಮೋಹನನಿಗೆ ಜ್ವರ ಬಂದಿತ್ತು.

ಛಿ! ಎಂತಹ ಕೆಟ್ಟ ವಿಚಾರ! ಮೋಹನ ಬರಬಹುದು ಇಷ್ಟರಲ್ಲಿಯೆ ಎಂದುಕೊಂಡು ನಿರಾಶೆಯಿಂದ ಹುದುಗಿಕೊಳ್ಳುವವಳಂತೆ ಅಲ್ಲಿಯೆ ಕುಳಿತುಕೊಂಡಳು ಎದುರು ಗೋಡೆಯನ್ನು ನೋಡುತ್ತ.

## ೬

ನಗೆಮೊಗದಿಂದಲೆ ರಾಮಣ್ಣ ಕಿಟಕಿಯ ವರೆಗೆ ಹೋಗಿ ಒಂದೆರಡು ನಿಮಿಷ ದೂರದವರೆಗೆ ನಿರಿಕಿಸಿ ನೋಡಿದ. ಕೈ ಗಡಿಯಾರವನ್ನು ನೋಡಿಕೊಂಡ. ಇನ್ನೂ ಏನಿಲ್ಲೆಂದರೂ 45 ನಿಮಿಷ ನಭೆಯಿಂದ ಕರೆಬರಲು. ಇಲ್ಲವಾದರೆ ಬಂದವರೆ ಕಾರಣವಿಲ್ಲದೆ ನಗುವ ತನ್ನನ್ನು ನೋಡಿ ಏನಾದರೂ ತಿಳಿದುಕೊಳ್ಳಬಹುದು. ಕಾರಣವಿಲ್ಲ ಎಂದಲ್ಲ, ಆ ಕಾರಣವನ್ನು ಅನ್ಯರಿಗೆ ಹೇಳುವಂತಿಲ್ಲ. ಇದೂ ಅಲ್ಲದೆ ಹತ್ತುವರ್ಷಗಳ ಹಿಂದಿನ ಸಂಗತಿ. ಅಷ್ಟಕ್ಕೂ ಮೀರಿ ತನದೊಂದು ಅನುಭವದ, ಸ್ವಂತದ ಭಾವನೆಯ ವಿಷಯ.

ಹೋಗಲಿ ಬಿಡು ಎನ್ನುವಂತೆ ಉಸಿರೆಳೆದು ಕುರ್ಚಿಯತ್ತ ನಡೆದ; ಹೆಜ್ಜೆ ಬದಲಾಯಿಸಿ ಪುಸ್ತಕಗಳ ಕಪಾಟನ್ನು ನೋಡಿ, ಆ ಕಡೆ ಹೋಗಿ, ಕಪಾಟನ್ನು ತೆರೆದು ಪುಸ್ತಕಗಳನ್ನು ನೋಡತೊಡಗಿದ; ಒಂದು ಪುಸ್ತಕವನ್ನೆತ್ತಿಕೊಂಡು ಪುಟ ತೆರೆದ. ಸಂಸ್ಕೃತ ಶ್ಲೋಕ! ಪುಸ್ತಕದ ಹೆಸರನ್ನು

ನೋಡಿದ, ಕಾಳಿದಾಸ ಕವಿಯ ಅಭಿಜ್ಞಾನ ಶಾಕುಂತಲಂ ನಾಟಕ. ಶ್ಲೋಕವನ್ನು ಮತ್ತೊಮ್ಮೆ ಓದತೊಡಗಿದ.

‘ ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್
ಪರ್ಯುತ್ಸುಕೀ ಭವತಿ ಯತ್ ಸುಖಿತೋಽಪಿ ಜಂತುಃ ।
ತಚ್ಚೇತಸಾ ಸ್ಮರತಿ ನೂನಮಬೋಧಪೂರ್ವಂ
ಭಾವಸ್ಥಿರಾಣಿ ಜನನಾಂತರಸೌಹೃದಾನಿ ॥
(ಪರ್ಯಾಕುಲಸ್ತಿಷ್ಠತಿ) ’

ಹುಂ ಹುಂ ಎಂದು ಗುಂಯ್ಗುಟ್ಟಿ ರಾಮಣ್ಣ ತಾನೂ “ಪರ್ಯಾಕುಲ” ನಾಗಿಯೆ ನಿಂತು ಬಿಟ್ಟ.

ಅದಕ್ಕೇ ಈ ಪುಣ್ಯಾತ್ಮನನ್ನ ಶ್ರೇಷ್ಠಕವಿ ಎಂದು ಹೊಗಳ್ತಾರೆ ಜನ – ಎಂದು ಕಾಳಿದಾಸನಿಗೆ ಶಿಫಾರಸ ಪತ್ರವನ್ನು ಕೊಟ್ಟು ಶ್ಲೋಕವನ್ನು ಮತ್ತೊಮ್ಮೆ ಓದುತ್ತ ಕುರ್ಚಿಯಲ್ಲಿ ಬಂದು ಕುಳಿತುಕೊಂಡ. ಕಾಳಿದಾಸ ಶ್ರೇಷ್ಠ ಕವಿ.

ಇದರಲ್ಲಿ ಸಂದೇಹವೆ ಇಲ್ಲ. ಹೊರಗಿನ ಜಗತ್ತಿಗಿಂತ ಮನುಷ್ಯನ ಒಳಗೆ ಇದ್ದ ಜಗತ್ತನ್ನು ಪ್ರವೇಶಿಸಿ, ಸಂಚಾರ ಮಾಡಿ, ನಮಗೆಲ್ಲರಿಗೂ ಅನುಕೂಲವಾಗುವಂತೆ ಅಂತಃಕರಣಗಳ ನಕ್ಷೆಯನ್ನೆ ಬರೆದಿಟ್ಟಿದ್ದಾನೆ ಎನ್ನಬಹುದು.

ಇಂದು ತಾನು ಉಲ್ಲಾಸದಲ್ಲಿರಬೇಕಾಗಿತ್ತು. ಯಾವ ಸಾಹಿತಿಗೂ ಇಲ್ಲದ ಗೌರವ ತನಗೆ. ಸಾರ್ವಜನಿಕ ಸಭೆ, ಸಾರ್ವಜನಿಕ ಸತ್ಕಾರ! ಇನ್ನೇನು ಬೇಕಿತ್ತು? ಸಾರ್ವಜನಿಕ ಉಪಚಾರಕ್ಕಾಗಿಯೆ ಇರಲಿ, ಕುಮುದಳೂ ತನ್ನೊಡನೆ ಸಭೆಗೆ ಬರತಕ್ಕವಳಿದ್ದಾಳೆ. ಅವಳ ವೇಷ, ಭೂಷಣ, ಅಲಂಕಾರ — ಎಲ್ಲಕ್ಕೂ ಹೆಚ್ಚಾಗಿ ಅವಳ ಅಂಗಾಗಗಳಲ್ಲಿ ಸ್ಫುರಿಸುತ್ತಿರುವ ನಿಗ್ರಹ ಜೀವನ – ಇದನ್ನು ಕ್ಷಣಮಾತ್ರ ಕಣ್ಣಾರೆ ಕಂಡಾಗ ರಾಮಣ್ಣನಿಗೆ ಸ್ವರ್ಗ ಲಭಿಸಿದಂತಾಯ್ತು. ಸ್ವರ್ಗ ಯಾಕೆ? ಮೋಕ್ಷವೆ ಲಭಿಸಿತೆನ್ನಬಹುದು ಕುಮುದಳು ಉಟ್ಟ ಸೀರೆಯನ್ನು ನೋಡಿ.

ಆ ಸೀರೆ! ಅಂದು ತಾನು ಮನಃಪೂರ್ವಕವಾಗಿ ಪ್ರೇಮದ ಕಾಣಿಕೆ

ಎಂದು ತಂದುಕೊಟ್ಟ ಸೀರೆ! ಆ ಸೀರೆಯುನ್ನುಟ್ಟ ಸೌಂದರ್ಯಮೂರ್ತಿ-ಯನ್ನು ನೋಡಿದಾಗ ಒಂದು ಕ್ಷಣ ಆನಂದವೆನಿಸಿತು. ಮುಂದಿನ ಕ್ಷಣವಲ್ಲಿ, ಮುಂದಿನ ಕ್ಷಣದಿಂದ ಮನಸ್ಸು ಉದ್ವಿಗ್ನವಾಯಿತು, "ಪರ್ಯಾಕುಲ" ವಾಯಿತು. ಯಾಕೆ ? ಹಿಂದಿನದು ಸ್ಮರಣೆಗೆ ಬಂದೊ ? ಮುಂದಾಗುವುದರ ಸೂಚಕವೆಂದೊ ?

ಕಾಳಿದಾಸ ಹೇಳುತ್ತಾನೆ, ಸುಂದರ ವಸ್ತುಗಳನ್ನು ನೋಡಿದಾಗ ಹಿಂದಿನ ಜನ್ಮದ ನೆನಪುಗಳು ನಮಗರಿಯದೆಯೆ ನಮ್ಮನ್ನು ಪರ್ಯಾಕುಲ ಮಾಡುವುವು ಎಂದು.

ಹಿಂದಿನ ಜನ್ಮದಷ್ಟು ದೂರ ಯಾಕೆ ? ಇಂದಿನ ಜನ್ಮದ ನೆನಪೇ ರಾಮಣ್ಣನನ್ನು ಗಾಸಿ ಮಾಡತೊಡಗಿದೆ. ಹತ್ತು ವರ್ಷಗಳ ಹಿಂದೆ, ಮದಾಂಧತೆಯ ಭರದಲ್ಲಿ, ಸುಳ್ಳಿನಿಂದ ಗೆಳೆಯನನ್ನು ವಂಚಿಸಿ ತಾನು ಆ ಸೀರೆಯನ್ನು ಕೊಂಡು ತರಿಸಿದ್ದ—ಕುಮುದಳಿಗಾಗಿ.

ಉತ್ಸಾಹದಿಂದ ಮನೆಗೆ ಹೋದರೆ ಕುಮುದಳೆ ಇದ್ದಿರಲಿಲ್ಲ !

ಒಂದು ಕ್ಷಣ ಗಾಬರಿಗೊಂಡಿದ್ದ ಆಗ ರಾಮಣ್ಣ. ಮರುಕ್ಷಣ ನಿರಾಶೆ ಯಿಂದ ನಿರ್ವಿಣ್ಣನಾಗಿದ್ದ ಮೂರನೆಯ ಗಳಿಗೆಗೆ ಗಟ್ಟಿಯಾಗಿ ನಕ್ಕುಬಿಟ್ಟಿದ್ದ.

ನಗೆಗೂ ಸಂತೋಷಕ್ಕೂ ಸಂಬಂಧವಿಲ್ಲ, ಅತ್ಯಂತ ಸಂತಪ್ತ ಹೃದಯ ದಿಂದಲೂ ನಗೆ ಸೂಚಿಸುವುದು ಎಂಬುದು ಅಂದಿನ ಅನುಭವದಿಂದ ಅವನಿಗೆ ತಿಳಿದುಬಂದಿತ್ತು. ಅಂದು ತಾನು ನಕ್ಕದ್ದು ಯಾಕೆ ? ನಾಟಕದಲ್ಲಿಯ ಪಾತ್ರನಾಗಿದ್ದರೆ ಯಾಕೆ ಎಂಬುದನ್ನು ದೀರ್ಘವಾದ ಸ್ವಗತದಿಂದ ಅನ್ಯರಿಗೆ ತಿಳುಹಿಸಬಹುದಾಗಿತ್ತು. "ಎಲವೊ ! ಮೂರ್ಖಾ ! ರಾಮಣ್ಣಾ, ಹೇಗಾ ಯಿತು ನಿನ್ನ ಫಜೀತಿ ! ಹೇಗೆ ಬಿತ್ತು ನಿನ್ನ ಕೆನ್ನೆಗೆ ಏಟು ! ಹಹ ! ಸೀರೆ ಯನ್ನು ತಂದಿರುವೆಯಲ್ಲವೆ ? ಹಹ ! ಕುಮುದಳಿಗಾಗಿ ಸೀರೆಯನ್ನು ತಂದಿರುವೆಯಲ್ಲವೆ ? ಹಹಹಹ ! ಎಲವೋ ಪ್ರೇಮವಂಚಕಾ, ನಿನಗಾಗಿ ಜೀವವನ್ನು ಕೊಟ್ಟು, ನೀನೇ ನನ್ನ ಜೀವ ಎಂದು ಹೇಳುತ್ತಿದ್ದ ನಿನ್ನ ಹೆಂಡತಿ ಸರಲೆ ಬದುಕಿದಾಗ ಒಂದು ಸಲವಾದರೂ ಆಕೆಗಾಗಿ ಇದರ ಅರ್ಧದಷ್ಟಾದರೂ ಒಳ್ಳೆಯ ಸೀರೆಯನ್ನು ತಂದಿದ್ದೆಯಾ ? ಹಃ ! ಈಗ ತಂದಿದ್ದಾನೆ !

ಯಾರಿಗಾಗಿ?...." ಆದರೆ ಈ ಭಾಷಣ ತನಗೂ ಕೇಳಿಸದಷ್ಟು ಸ್ವಗತಮಾಡಿ ತಾನು ಅಂದು ನಕ್ಕಿರಬೇಕು.

ಹತ್ತು ವರ್ಷಗಳ ತರುವಾಯ, ಇಂದು ವಿಚಾರಮಾಡಿ ನೋಡಿದರೆ? ವಿಚಾರವನ್ನು ಧೈರ್ಯದಿಂದ ಎದುರಿಸಿದರೆ ?

ರಾಮಣ್ಣ ತಟ್ಟನೆ ಹೆದರಿದ. ಒಳಗಿನ ಪ್ರಶ್ನೆಕ್ಕೆ ಸರಿಯಾಗಿ ತಾನು ಇದಿರು ನೋಡುತ್ತಿದ್ದುದು ಒಮ್ಮೆಲೆ ಲಕ್ಷ್ಯಕ್ಕೆ ಬಂದಿತು. ಇದಿರು ಗೋಡೆಗೆ ಸರಲೆಯ ಭಾವಪಟ !

ಮುಖ ತುಂಬ ನಗೆ ಇಡಿ ಭಾವಪಟದಲ್ಲಿ, ತುಟಿಗಳಲ್ಲಿ, ಬಾಯಿಯಲ್ಲಿ, ಕಪೋಲಗಳಲ್ಲಿ, ಕಣ್ಣುಗಳಲ್ಲಿ — ನೋಡಿದಲ್ಲೆಲ್ಲ ನಗೆ ! ಬಣ್ಣದ ಬದಲು ನಗೆಯಲ್ಲಿಯೆ ಕುಂಚವನ್ನದ್ದಿ ಬರೆದಂತಿದೆ ಚಿತ್ರ. ಮೊದಲು ಬಡತನ, ಆಮೇಲೆ ಬಳಲಿಕೆ. ಸುಖವನ್ನು ಕಾಣದೆ ನಗುವ ಜೀವನ ಸರಲೆಯದು.

"ಏನ್ಮಾಡ್ತಾ ಇದ್ದೀರಿ ?" ಎಂದಿದ್ದಳು ಒಮ್ಮೆ.

"ಬರೀತಾ ಇದ್ದೀನಿ" ಎಂದು ತಾನು ಉತ್ತರಿಸಿದ್ದ.

"ನಾಕ್ಬಿಡ್ರಿ. ಯಾವಾಗ ನೋಡಿದ್ರೂ ಬರೆಯೋದೇ ಬರೆಯೋದು ! ಏನ್ಸುಖಾ ಅದನೊ ಅದರೊಳಗ ?"

"ಸರಲಾ, ನಿನಗೆ ಸುಖ ತಂದ್ಕೊಡ್ಬೇಕು ಅನ್ನೋ ಅವಸರ ನನಗ. ಅದಕ್ಕ ಹೀಗೆ ಒಂದೇ ಸವನೆ ಬರೀತಾ ಇದ್ದೀನಿ."

"ನನಗ? ಇನ್ನೂ ಎಷ್ಟು ಸುಖಾ ತಂದ್ಕೊಡ್ಬೇಕಂತೀರಿ ? ಹೊಟ್ಟೀ ವಳಗ ಹಿಡಿಸಬೇಕೊ, ಹೆಚ್ಚಾಗಬೇಕೊ ?"

"ಹೆಚ್ಚಾಗಿ ಹೊರಸೂಸಬೇಕು, ಅಂದ್ರೇನೇ ನಿನಗೆ ಶೋಭಿಸ್ತದೆ" ಎನ್ನುತ್ತ ತಾನು - ಕಣ್ಣೀರಿನ ಜೊತೆಗೆ ಸ್ಮರಿಸಿಕೊಂಡ — ಅವಳ ತುಟಿಗೆ ಬೆರಳಿನಿಂದ ಮಿದುವಾಗಿ ಏಟನ್ನು ಕೊಟ್ಟಿದ್ದ. ಅದೇ ತಾಂಬೂಲವನ್ನು ಸವಿದುದಕ್ಕೆ ಕೆಂಪುರಸ ತುಟಿಗಳಿಂದ ಹೊರಚಿಮ್ಮುವಂತಿತ್ತು - "ಹೀಗ ಹೊರಸೂಸ್ಬೇಕು " ಎಂದಿದ್ದ.

"ಮಾತಾಡೋ ಹಾಗೇನೇ ಬರೀಬಾರ್ದು ? ಅಂದ್ರ ನಿಂ ಪುಸ್ತಕಗಳ ಮಾರಾಟಾದ್ರೂ ಆದೀತು."

"ಮಾತಾಡೋದನ್ನ ಕೇಳುವವಳು ಮನೆಯ ಹೆಂಡತಿ, ಬರೆದಿದ್ದನ್ನ ಓದುವವರು ಮುಂದಿಯ ಹೆಂಡಂದಿರು." ಎಂದು ತಾನು ನಗೆಯಾಡಿದ್ದ.

"ಅವರು ಓದೋದಕೆ ಒಂದಿವಸ ತಡ ಆದೀತು, ಈವೊತ್ತು ಬರೀ ಬ್ಯಾಡಿರಿ."

"ಯಾಕೆ ? ಈವೊತ್ತೇನಿದೆ ?"

"ಯಾವೊತ್ತು ಏನಿರೋದು ? ನಿಮ್ಮ ಕೈ ಹಿಡಿದಂದಿನಿಂದ — "

"ಹಾಂ. ತಡೆ, ತಡೆ ! ಥೂ ! ಮತ್ತೆ ಮರೆತೆ ನಾನು ! ಈಸಲಾನೂ, ಮರೆತೆ ! ಸರಲಾ, ಕ್ಷಮಿಸು ನನ್ನನ್ನು. ನನ್ನ ಬರೆಯೋದು ಅನ್ನುವಂಥಾ ಒಂದು ಕ್ಷುಲ್ಲಕ ಸ್ವಾರ್ಥಮದದಲ್ಲಿ ಇಂದು ನಮ್ಮ ಮದುವೆಯ ವಾರ್ಷಿಕೋತ್ಸವ ಅನ್ನೋದನ್ನ—"

ಸರಲೆ ತನ್ನ ಬಾಯಿಗೆ ಕೈಯನ್ನಿಟ್ಟು ತಡೆದಿದ್ದಳು. "ಅಂಥಾ ಮಾತ ನ್ನಾಡಬ್ಯಾಡಿರಿ. ವರ್ಷದೊಳಗೆ ಒಂದೇ ದಿನದ ಉತ್ಸವ ಅಲ್ಲ ನಮ್ಮ ಮದುವೆ. ನನಗಂತೂ ಪ್ರತಿಯೊಂದು ದಿನ ಉತ್ಸವದ ದಿನ ಅನಿಸ್ತದ."

"ಸರಲಾ, ನಿನ್ನಂಥವಳ ಕೈ ಹಿಡಿಯೋ ಯೋಗ್ಯತಾ ನನ್ನಲ್ಲಿಲ್ಲ. ಜನ್ಮ ಜನ್ಮಾಂತರಗಳು ಬೇಕು ಅದನ್ನ ಪಡೆದುಕೊಳ್ಳಲಿಕ್ಕೆ."

"ಅವೆಲ್ಲಾ ಜನ್ಮಗಳೊಳಗೂ ನಾನು ನಿಮ್ಮ ಬೆನ್ನು ಬಿಡುವಾಕಯಲ್ಲ" ಎಂದು ಅವಳೂ ನಗೆಯಾಡಿದ್ದಳು.

"ಹಿಂದಿನ ಜನ್ಮದೊಳಗ ನೀನು ಒಂದು ಕಡ್ಡಿಯನ್ನು ಕೂಡಾ ಕೈಯಿಂದೆತ್ತಿ ಇನ್ನೊಬ್ಬರಿಗೆ ಕೊಟ್ಟಿರಲಿಕ್ಕಿಲ್ಲ ನೋಡು, ಸರಲಾ."

"ಯಾಕ ? ಆ ವಿಚಾರ ಯಾಕ ಬಂತು ನಿಮಗ ?"

"ಅಲ್ಲ, ನನ್ನಂಥಾ ದರಿದ್ರ ಗಂಡ ಗಂಟುಬಿದ್ದನಲ್ಲ ನಿನಗ ? ಒಂದು ದಿವಸ ಒಂದು ಒಳ್ಳೇ ಸೀರೆ ತಂದುಕೊಡೋ ತಾಕತ್ತಿಲ್ಲ, ನಿನ್ನ ಸೌಂದ-ರ್ಯಕ್ಕೆ ಶೋಭಿಸೋವಂತಹಾದು !"

"ಹೆಂಡತೀ ಸೌಂದರ್ಯ ಶೋಭಿಸೋದು ಆಕೆ ಉಟ್ಟ ಸೀರೆಯಿಂದಲ್ಲ, ಆಕೇ ಕೈಹಿಡಿದವರು ಕೊಟ್ಟ ಪ್ರೇಮದಿಂದ."

"ಅಂತೂ ಸೌಂದರ್ಯಕ್ಕೂ concession rate ಇದೆ ಅನ್ನು."

ಆ ಮಾತಿಗೂ ಸರಲೆ ನಕ್ಕಿದ್ದಳು. ಯಾವ ಮಾತಿಗೂ ನಗೆ. ಇರುವಾಗ ನಗೆ, ಈಗ – ಈಗಲೂ ಭಾವಪಟದಲ್ಲಿ ನಗೆ!

ರಾಮಣ್ಣ ಉಸುರ್ಗರೆದ. "ಪರ್ಯಾಕುಲ". ಕಾಳಿದಾಸ ಸರ್ವಾಂತ ರ್ಯಾಮಿಯಾಗಿದ್ದನೊ ಏನೊ? ಸುಖದ ಸ್ಮರಣೆಯಿಂದ ದುಃಖ ಆಗೋದು ಅಂತ ಎಷ್ಟು ಸರಿಯಾಗಿ ಹೇಳಿದ್ದಾನೆ!

ಹುಂ....ಇನ್ನೊಂದು ಮಾತನ್ನು ಮಾತ್ರ ಕಾಳಿದಾಸ ಹೇಳಲಿಲ್ಲ. ಅದನ್ನ ತಾನು ಅನುಭವದಿಂದ ಕಾಣತಾ ಇದ್ದಾನೆ. ಅದೇಂದರೆ, ದುಃಖದ ಸ್ಮರಣೆಯಿಂದ ಸುಖ ಆಗೋದು! ಇಲ್ದಿದ್ರೆ ಹಿಂದಿನದನ್ನೆಲ್ಲಾ ತಾನು ಯಾಕೆ ಸ್ಮರಿಸತಾ ಕೂತುಕೊಳ್ಳಬೇಕಾಗಿತ್ತು?

ಮತ್ತೊಮ್ಮೆ ಕೈಗಡಿಯಾರವನ್ನು ನೋಡಿಕೊಂಡ. ಹುಂ. ವಿಚಾರದ ವೇಗಕ್ಕೂ ಗಡಿಯಾರದ ವೇಗಕ್ಕೂ ಎಷ್ಟು ಅಂತರ ಇದೆ. ಇನ್ನೂ 42 ನಿಮಿಷ ತನ್ನ ಸತ್ಕಾರದ ಸ್ವಾಗತ ಸಮಿತಿ – ಬರುವ ನಿರೀಕ್ಷೆಗೆ! ಈಗ ತಾನು ಒಂದಿಷ್ಟು ಗಂಭೀರನಾಗಿ ಕುಳಿತುಕೊಳ್ಳಲು ಯತ್ನಿಸಬೇಕು. ..ಮತ್ತೆ ನಗೆ ಬಂದಿತು. ಛೆ! ಆ ಸೀರೆಯ ನೆನಪನ್ನು ನಿವಿದೇ ಬಿಡೋಣ, ತಡೆದಿಟ್ಟರೆ ಸತ್ಕಾರ ಸಮಿತಿಯವರು ಬಂದಾಗ ನೆನಪಿಗೆ ಬಂದು ಅನಾಹುತವಾದೀತು.

ಥೂ! ಇದೇನು ಹುಡುಗಾಟದ ವಿಚಾರ ಎಂದು ಮತ್ತೆ ಕುರ್ಚಿಯಿಂದ ಎದ್ದ. ಯಾಕೆ ಈ ಹಾಳು ನೆನಪುಗಳು? ಬೆನ್ನಿಗೆ ಕೈಕಟ್ಟಿಕೊಂಡು ಕೋಣೆಯ ಉದ್ದ ಹೆಜ್ಜೆಗಳನ್ನಿಟ್ಟು ನಡೆದ. ಮೊದಲನೆಯ ಹೆಂಡತಿ ತೀರಿಕೊಂಡಳು; ಆಕೆ ಸಾಯೋ ಮುಂಚಿತ ಯಾವುದೊ ಕಾರಣಕ್ಕಾಗಿ ಮನೀವಳಗ ಇದ್ದ ಇನ್ನೊಬ್ಬಾಕೆಯನ್ನ ಮೋಹಿಸಿದೆ; ಹಾಸಿಗೆ ಹಿಡಿದ ಹೆಂಡತಿಗೆ ತಿಳಿಯದ ಹಾಗೆ ಆ ಇನ್ನೊಬ್ಬಾಕೆಯು ಕೂಡ ವ್ಯಭಿಚಾರದಿಂದ ವರ್ತಿಸಿದೆ, ಆ ಹುಡುಗಿಗೆ ಬಸಿರು ನಿಂತಿತು, ಹೆಂಡತಿ – ತೀರಿಕೊಂಡಳು, ಆ ಹುಡುಗೆಯನ್ನು ಮದುವೆಯಾದೆ. ಜಗತ್ತಿನಲ್ಲಿ ದಿನಾಲು ಎಷ್ಟೊ ಕಡೆ ಎಷ್ಟೊ ಜನರು ಹೀಗೆ ವರ್ತಿಸುತ್ತಿರಬಹುದಲ್ಲ? ಅವರಿಗಾಗದ ಅಂತರ್ವ್ಯಥೆ ನನ್ನನ್ನೆ ಯಾಕೆ ಪೀಡಿಸಬೇಕು? ಅಥವಾ ವ್ಯಭಿಚಾರವನ್ನು ದಕ್ಕಿಸಿಕೊಳ್ಳ-ಲಾರದಷ್ಟು ಪುಕ್ಕನೆ ನಾನು?

ಛೆ! 'ವ್ಯಭಿಚಾರ' ಎಂದು ಕುಮುದಳನ್ನು ಅವಮಾನಗೊಳಿಸುತ್ತಿದ್ದೇನೆ. ಅದು ವ್ಯಭಿಚಾರವಲ್ಲ. ನಿಜವಾಗಿಯೂ ಅದು—

ಅದು ಏನು? ಪ್ರೇಮವೊ? ಕಾಮವೊ?

ಇಂದಿಗೂ ಮಾತು ಮಾತಿಗೆ ಸರಳೆಯ ನೆನಪು ತನಗೆ ಬರುತ್ತಿದ್ದುದರಿಂದ ತನ್ನ ಪ್ರೇಮ ಇಂದಿಗೂ ಸರಳೆಯಲ್ಲಿಯೆ ಎಂದು ನಂಬಿದ್ದಾನೆ. ಯಾಕೆ? ಇಬ್ಬರನ್ನು ಒಂದೇ ರೀತಿ – ಪ್ರೀತಿಸಲು ಶಕ್ಯವಿಲ್ಲವೆ? ಇಲ್ಲವೆ ಮದುವೆಯಾದನಂತರ ಕಾಮಜೀವನ ನಡೆಯಿತೆಂದು ಮೊದಲನೆಯ ಹೆಂಡತಿಯಲ್ಲಿ ಪ್ರೇಮ, ಕಾಮಜೀವನದ ತರುವಾಯ ಮದುವೆಯಾಯಿತೆಂದು ಎರಡನೆಯವಳಾದ ಕುಮುದಳಲ್ಲಿ ವ್ಯಭಿಚಾರ ಎನ್ನಬೇಕೆ?

ಒನ್ನೊಮ್ಮೆ ಕುಮುದಳಲ್ಲಿಯೂ ತನ್ನ ಪ್ರೇಮವಿದೆ – ಅಲ್ಲ ಪ್ರೇಮವಿತ್ತು – ಯಾಕೆ ಇರಬಾರದು – ಎಂದೆನ್ನಿಸುವುದು ರಾಮಣ್ಣನಿಗೆ. ಅಂದು ತಾನು ಸೀರೆಯನ್ನು ತೆಗೆದುಕೊಂಡು ಹೋದಾಗ ಕುಮುದಳು ಮನೆಯಲ್ಲಿಲ್ಲದ್ದಕ್ಕೆ ಮೊದಲ ಕ್ಷಣ ತನ್ನ ಅಂತಃಕರಣ ಶೂನ್ಯ ಎನ್ನಿಸಿತ್ತಲ್ಲವೆ? ಅದು ಪ್ರೇಮದ ಲಕ್ಷಣವಲ್ಲವೆ? ಮುಂದೆ ಮರುಗಳಿಗೆಯ ಮಾತು ಬೇರೆ, ಆಗ ತಾನು ಬುದ್ಧಿಪೂರ್ವಕವಾಗಿ ವಿಚಾರಮಾಡಿ ಒಳಗಿನ ಕುದಿಯಿಂದ ನಗೆಯ ಕಿಡಿಗಳನ್ನು ಹಾರಿಸಿದ್ದನು. ಆದರೆ ಮೊದಲ ಕ್ಷಣದ ಅಂತಃಶೂನ್ಯತೆಯ ಅರ್ಥವೇನು?

ಆದರೂ ರಾಮಣ್ಣನಿಗೆ ಸಂದೇಹ. ಕುಮುದಳಲ್ಲಿ ತನ್ನ ನಿಜವಾದ ಪ್ರೇಮವಿದ್ದರೆ ಅವಳಿಗೆ ತಾನು ಇಷ್ಟೊಂದು ಅಸಹ್ಯನಾಗುತ್ತಿರಲಿಲ್ಲ. ಇಂದಿಗೆ ಹತ್ತು ವರ್ಷಗಳಾದುವು ಒಬ್ಬರೊಬ್ಬರ ಸಾಮೀಪ್ಯವನ್ನು ಬಯಸದೆ ಸಂಸಾರ ನಡೆಯಿಸಿ. ಇಷ್ಟಾದರೂ ತನಗೆ ಬೇರೆ ಕಡೆ ಆಸಕ್ತಿಯೆ ಹುಟ್ಟಿರಲಿಲ್ಲವಲ್ಲ? ಇದು ನಿಜವಾದ ಪ್ರೇಮದ ಲಕ್ಷಣವಿರಬಹುದೆ?

ವಿಚಾರಗಳ ಭಾರದಿಂದ ದಣಿದವನಂತಾಗಿ ರಾಮಣ್ಣ ಮತ್ತೆ ಕುರ್ಚಿಯಲ್ಲಿ ಕುಳಿತುಕೊಂಡ. ತಟ್ಟನೆ ಕುಮುದಳ ಮೂರ್ತಿ ಅವನ ಕಣ್ಣೆದುರು ನಿಂತಿತು. ..ಅತ್ತಿತ್ತ ನೋಡಿದ, ಸಾಕ್ಷಾತ್ತಾದ ಕುಮುದಳಿದ್ದಿರಲಿಲ್ಲ. ತನ್ನ ಮನಸ್ಸು ನಿರ್ಮಿಸಿಕೊಂಡ ಮೂರ್ತಿ. .ಮನಸ್ಸಲ್ಲ, ತನ್ನ ಸ್ಮೃತಿ ಮುಂದೆ ತಂದು ನಿಲ್ಲಿಸಿದ ಮೂರ್ತಿ. ಹತ್ತು ವರ್ಷಗಳ ಹಿಂದೆ, ಆಕೆ ಮನೆಯಲ್ಲಿಲ್ಲ

ದಾಗ, ತಾನು ಸರಿಯಾಗಿ ಊಹಿಸಿ ಆಕೆಯ ಸೋದರತ್ತೆಯ ಮನೆಗೆ ಬಂದಾಗ ಎದುರು ನಿಂತ ಮೂರ್ತಿ.

ಆಕೆಯ ಮುಖದಲ್ಲಿ ಮುಗುಳ್ನಗೆ ಮಿನುಗುತ್ತಿದ್ದುದನ್ನು ಕಂಡು ರಾಮಣ್ಣ ಹೆದರಿಕೊಂಡಿದ್ದ. ದಾರಿಯುದ್ದ ಅನೇಕರು ನಕ್ಕುದಕ್ಕಾಗಿ ಅವನಲ್ಲಿ ಆ ಬಗ್ಗೆ ಹೆದರಿಕೆಯುಂಟಾಗಿತ್ತು. ಹುಂ ಜನರಾದರೂ ನಗದೆ ಮಾಡುವರೇನು ?

ಕುಮುದಳು ಮನೆಯಲ್ಲಿಲ್ಲದ್ದಕ್ಕೆ ತನ್ನ ಅವಸ್ಥೆ ಏನೇನೊ ಆಗಿ ಕೊನೆಗೆ ಆಕೆ ಸೋದರತ್ತೆಯ ಊರಿಗೇ ಹೋಗಿರಬೇಕೆಂದು ಊಹಿಸಿದ್ದ; ಇಷ್ಟರಲ್ಲಿ ಅನೇಕ ಸ್ಥಳಗಳಲ್ಲಿ ಹುಡುಕಿಯೂ ಬಂದಿದ್ದ, ಯಾರನ್ನೂ ಕೇಳುವಂತಿಲ್ಲ, ಇನ್ನೊಬ್ಬರಿಗೆ ತಿಳಿಯುವಂತಿಲ್ಲ, ಹೀಗಾಗಿ ತೊಂದರೆ ಪಟ್ಟು ಅಲೆದಾಡಿ ಒಂದು ನಿಶ್ಚಯದಿಂದ ಸ್ಟೇಶನ್‌ದ ದಾರಿಯನ್ನು ಹಿಡಿದು ಬಂದಿದ್ದ; ನಿರ್ಣಯ ಗಟ್ಟಿಮಾಡಿ ಟಿಕೆಟ್ಟನ್ನು ಕೊಂಡು ಕಂಪಾರ್ಟಮೆಂಟಿಗೆ ಹೋಗುವಷ್ಟರಲ್ಲಿ ಟ್ರೇನ್ ಹೊರಡುವ ಹೊತ್ತಾಗಿತ್ತು. ಒಳಗೆ ನುಗ್ಗಿದ; ಮಿಕ್ಕ ಅಪರ್ ಕ್ಲಾಸ್ ಪ್ಯಾಸೆಂಜರರು ಚಕಿತರಾದವರಂತೆ ತನ್ನನ್ನು ನೋಡಿದರು. ನೋಡ ವಲ್ಲರೇಕೆ ಎಂದು ಖಾಲಿ ಇದ್ದ ಬರ್ಥ್‌ನ್ನು ಆಕ್ರಮಿಸಿದ. ಮಾತಾಡುವ ಮನಸ್ಸಿರಲಿಲ್ಲ, ಮಿಕ್ಕವರೂ ಇವನನ್ನು ಮಾತಾಡಿಸಲಿಲ್ಲ, ಆಗಾಗ ಕಳ್ಳನೋಟ ದಿಂದ ನೋಡುತ್ತಿದ್ದರು ಮಾತ್ರ. ಎಷ್ಟೊ ಹೊತ್ತು ನಿದ್ರೆ ಬರಲಿಲ್ಲ. ಹೊತ್ತು ಸರಿದಂತೆ ಮಿಕ್ಕವರು ತಮ್ಮ ಹಾಸಿಗೆಯನ್ನು ಪಸರಿಸಿದರು; ಇಷ್ಟರಲ್ಲಿ ರಾಮಣ್ಣ ದಣಿಕೆಯಿಂದ ಹಣ್ಣಾಗಿದ್ದು ಮಲಗುವ ವಿಚಾರದಿಂದ ಹಾಸಿಗೆಯನ್ನು —

ಥೂ! ಎಂತಹ ಮೂರ್ಖ ತಾನು! ಏನು ನಗೆಗೇಡು ತನ್ನ ಅವಸ್ಥೆ! ತಾನು ಊರಿಗೆ ಹೊರಟಾಗ ಕೈಯಲ್ಲಿದ್ದ ಅದೊಂದೆ ಸೀರೆಯನ್ನು ಹಿಡಿದಿದ್ದ ನಲ್ಲವೆ? ಈಗ ಅದನ್ನೆ ತನಗೆ ಹಾಸಿಗೆ ಎಂದು ಬಿಚ್ಚುತ್ತಿದ್ದಾನೆ, ಮಿಕ್ಕ ಪ್ಯಾಸೆಂಜರರಿಗೆ ಮೋಜು ತಡೆಯದಾಗಿದೆ. ಕೊನೆಗೆ ತನ್ನ ಅಪಹಾಸ್ಯ ಪರಿಸ್ಥಿತಿಗೆ ತಾನೇ ನಕ್ಕಿದ್ದ.

ಆದರೂ ಮಿಕ್ಕವರು ತನ್ನನ್ನು ಆ ಪರಿ ಕಂಡು ಇಡೀ ದಾರಿಯುದ್ದ ನಕ್ಕಿರಬಹುದಲ್ಲ ಎಂದು ರಾಮಣ್ಣ ಕುಮುದಳನ್ನು ಎದುರಿಸಲು ಅನುಮಾನಿ

ಸುತ್ತಿದ್ದ. ಯಾವ ಅವಲಕ್ಷಣ ತನ್ನ ಮುಖಲಕ್ಷಣದಲ್ಲಿ ಸುರಿಯುತ್ತಿದೆಯೊ! ಈಗ ಕುಮುದಳು ಕೂಡ ತನ್ನನ್ನು ಮುಗುಳ್ನಗೆಯಿಂದ ನೋಡುತ್ತಿದ್ದಾಳೆ. ಅಂದು ಬೆಳಗಿನಲ್ಲಿ ತನ್ನನ್ನು ಯಾವ ದೃಷ್ಟಿಯಿಂದ ಎದುರಿಸಿದ್ದಳೊ ಅದೇ ಮುಗುಳ್ನಗೆಯ ಮೂರ್ತಿ ಈಗ ರಾಮಣ್ಣನ ಕಣ್ಣು ಕಟ್ಟಿ ನಿಂತಿದೆ.

ರಾಮಣ್ಣ ಯೋಚಿಸಿದ. ಇಂದಿಗೆ ಹತ್ತು ವರ್ಷಗಳಾದರೂ ತನ್ನ ಕಣ್ಣೆದುರಿನಲ್ಲಿ ನಿಲ್ಲುವ ಕುಮುದಳ ಮೂರ್ತಿ ಅಂದಿನದೆ. ಎಷ್ಟೊಂದು ಪ್ರಯತ್ನಪಟ್ಟರೂ ಮತ್ತಾವ ಕಾಲದ ಕುಮುದಳ ಮೂರ್ತಿಯನ್ನು ನೆನೆಯಲಾರದಾಗಿದ್ದಾನೆ. ಇದೇನು ಮನಸ್ಸಿನ ಮೋಸಗಾರಿಕೆ! ಅಥವಾ ಜಗತ್ತಿನಲ್ಲಿ ಮನುಷ್ಯನ ವ್ಯವಹಾರವೇ ಹಾಗಿರುವುದೆ? ಅದಕ್ಕಾಗಿಯೆ ಶಂಕರಾಚಾರ್ಯರು ಜಗತ್ತು ಮಾಯೆ ಎಂದು ಹೇಳಿರಬಹುದೆ? ಯಾವ ವಸ್ತುವೂ ತಾನು ಇದ್ದಂತೆ ಕಂಡು ಬರುವುದೆ ಇಲ್ಲವೇನು? ನೋಡುವವನ ಇಷ್ಟವಿದ್ದಂತೆ ಒಲವಿದ್ದಂತೆ ಆ ವಸ್ತುವಿಗೆ ಸ್ವರೂಪ ಬರುವುದಲ್ಲದೆ ಅದೇ ಸ್ವರೂಪ ಕೊನೆಯವರೆಗೂ ಮೂಡಿ ನಿಲ್ಲುವುದು.

ಹುಂ. ತತ್ವಜ್ಞಾನದೊಡನೆ ಇಷ್ಟೊಂದು ತಿಣಿಕಿದರೂ ವ್ಯರ್ಥ, ಆತ್ಮವಂಚನೆ. ಇದ್ದುದನ್ನು ಒಪ್ಪಿಕೊಳ್ಳಲೇಬೇಕು. ಕುಮುದಳು ತನ್ನನ್ನು ಮೊದಲು ಆಕರ್ಷಿಸಿದ್ದು ಕಾಮಮೋಹಕವಾಗಿ, ಯಾವಾಗಲೂ ತನ್ನ ಕಣ್ಣೆದುರು ನಿಲ್ಲುವುದು ಆ ಕಾಮಮೋಹಕ ಮೂರ್ತಿಯೆ. ಬಾರೆಂದು ಸೂಚ್ಯವಾಗಿ ಸಂಕೇತಿಸುವವೇನೊ ಎನ್ನುವ ನೋಟದ ಕಣ್ಗಳು, ಕಂಡೊಡನೆ ತಬ್ಬಬೇಕೆನ್ನುವಂತೆ ತುಂಬಿದ ತೋಳ್ಗಳು, ಹತ್ತಿರ ಸುಳಿದಲ್ಲಿ ಲೋಹ ಚುಂಬಕದಂತೆ ಸೆಳೆದುಕೊಳ್ಳುವ ತುಟಿಗಳು, ತುಂಬಿದ ಎದೆ, ಆಕೆಯ ಹೆಜ್ಜೆಗೆ ತನ್ನ ಮೈ ನಡುಗುವುದೇನೊ ಎಂಬಂತೆ ತುಳುಕುವ ತೊಡೆಗಳು—

ತನಗೆ ನಾಚಿಕೆ ಇಲ್ಲವೆ ಎಂದೆನ್ನಿಸುವುದು ಒಮ್ಮೊಮ್ಮೆ. ಆದರೆ ಅಲ್ಲಿ ನಾಚಿಕೆಯ ಪ್ರಶ್ನವೆ ಇದ್ದಿರಲಿಲ್ಲ; ತಾನು ಬುದ್ಧಿಪೂರ್ವಕವಾಗಿ ಕಲ್ಪಿಸಿಕೊಳ್ಳುವ ಚಿತ್ರವದಾಗಿರಲಿಲ್ಲ, ಅದನ್ನು ಅಳಿಸುವ, ಮರೆಯಿಸುವ ಶಕ್ತಿಯೂ ತನಗಿದ್ದಿರಲಿಲ್ಲ. ಅಂದು ಸೋದರತ್ತೆಯ ಮನೆಗೆ ಹೋದಾಗ ಸಾಕ್ಷಾತ್ತಾಗಿ ಕುಮುದಳೆ ಎದುರು ನಿಂತಾಗ, ಆಕೆಯ ಮುಖದಲ್ಲಿ ಮುಗುಳ್ನಗೆಯನ್ನು ಕಂಡಾಗ ರಾಮಣ್ಣನ ಕಣ್ಗಳಿಗೆ ಕತ್ತಲೆಗಟ್ಟಿದಂತಾಗಿತ್ತು ಒಂದು ಕ್ಷಣ.

ಓಹೊ ! ರಾಮಣ್ಣನಿಗೆ ಸರಿಯಾಗಿ ನೆನಪಿಗೆ ಬಂದಿತು. ಸೀರೆಯನ್ನು ಒಯ್ದುದ್ದು ಆಗಲ್ಲ, ಎರಡನೆಯ ಸಲ. ಮುಂಚೆ, ಮೋಹನನು ಹುಟ್ಟುವ ಮುಂಚೆ, ಮದುವೆಯಾದ ಕೆಲವೇ ದಿನಗಳಲ್ಲಿ ಕುಮುದ ಸೋದರತ್ತೆಯ ಮನೆಗೆ ಮೊದಲ ಸಲ ಹೋಗಿದ್ದಳಲ್ಲ ? ಆಗೊಮ್ಮೆ ತನ್ನ ಅವಸ್ಥೆ ಹಾಗೇ ಆಗಿದ್ದಿತು. ಆಗಲೂ ಕುಮುದ ನಗೆಮೊಗದಿಂದಲೆ ತನ್ನನ್ನು ಇದಿರಿಸಿದ್ದಳು. ಆಗ ! ಈಗ ! ಯಾವಾಗಾದರೇನು ? ಕುಮುದಳನ್ನು ನೆನೆದಾಗೊಮ್ಮೆ ಆಕೆಯ ಒಂದೇ ಸ್ವರೂಪದ ಮೂರ್ತಿ ತನ್ನ ಕಣ್ಣೆದುರು ನಿಲ್ಲುವುದು. ಆಗ, ಮೊದಲ ಸಲ, ಇನ್ನೂ ಮೋಹನನನ್ನು ಹಡೆಯುವ ಮುಂಚಿತ, ಮದುವೆಯ ಶಾಸ್ತ್ರ ಮುಗಿದಾಗ, ಅಕಸ್ಮಾತ್ತಾಗಿ ತನಗೆ ಅಸಹ್ಯಪಟ್ಟು ಹೋಗಿದ್ದಳಲ್ಲ ! ಅಂದಿನ ಅನುಭವ ನೆನೆದರೆ ಇಂದಿಗೂ ಮೈಜುಮ್ಮೆನ್ನುವುದು ; ನಗೆಮೊಗದಿಂದ ಆಕೆ ನಿಂತಿದ್ದಾಳೆ, ಅವಾಕ್ಕಾಗಿ ತಾನು ನಿಂತಿದ್ದಾನೆ. ತಾಯ್ತನ ಮೂಡುತ್ತಿರುವುದಕ್ಕಾಗಿಯೊ ಏನೊ, ಆಕೆಯ ಮುಖದಲ್ಲಿ ಹಿರಿತನದ ಕಳೆ ಇದೆ, ಕಣ್ಣುಗಳಲ್ಲಿ ಕನಿಕರ ದೃಷ್ಟಿ ಇದೆ ; ಅದನ್ನು ಎದುರಿಸದಾಗದೆ ತಾನು ಅಪರಾಧಿಯಂತೆ ನಿಂತಿದ್ದಾನೆ. ಎಷ್ಟೊತ್ತು ಹಾಗೇ ನಿಲ್ಲಬೇಕಾದೀತೊ ಎಂಬ ಹೆದರಿಕೆ. ಆ ಮೂರ್ತಿ ಅಷ್ಟೊತ್ತು ಎದುರು ನಿಂತರೆ ತಾನು ಎಚ್ಚರದಪ್ಪಿ ವರ್ತಿಸಬಹುದು – ಇದು ಖಂಡಿತ—ಎನ್ನುವಷ್ಟರಲ್ಲಿ ಒಳಗಿನಿಂದ ಮುದಿ ದನಿ ಕೇಳಬಂದಿತ್ತು :

"ಕುಮುದೀ, ಯಾರೇ ಒಬ್ಬ ಗಂಡಸು ಬಂದವರು ?"

ಏನೆಂದು ಉತ್ತರ ಕೊಡುವಳು ? ತನ್ನ ಪರಿಚಯವಿಲ್ಲವೆಂದೆ ? ಗೆಳೆಯನೆಂದೆ ? ದೂರದ ಆಪ್ತನೆಂದೆ ? ಯಾವನೊ ಘಟಿಂಗ – ಎಂದೇ ?

"ಅತ್ತೀ, ನಮ್ಮವರು ಬಂದವರು. ಬಾ ಇಲ್ಲಿ."

ಆ ಕ್ಷಣ ರಾಮಣ್ಣನಿಗೆ ಧೈರ್ಯ ಬಂದಿತ್ತು, ಭರವಸೆಯೂ ಆಗಿತ್ತು–ಕುಮುದ ಇನ್ನೂ ತನ್ನನ್ನು ಪ್ರೀತಿಸುತ್ತಾಳೆಂದು. "ನಮ್ಮವರು" ಎಂದಳಲ್ಲ —"ನನ್ನವರು" ಎನ್ನಲಿಲ್ಲ. ಅಷ್ಟೊಂದು ಆತ್ಮೀಯತೆ ಇದ್ದಂತಿಲ್ಲ.

"ಅಯ್ಯ ! ನಿನ್ನ ಗಂಡ ಏನು ? ಹೀಂಗ್ಯಾಕ ಬಂದಾನ ಸಾಲೇ ತಪ್ಪಿಸಿ ಬಂದ ಹುಡುಗನ್ಹಾಂಗ ?" ಎನ್ನುತ್ತ ಮುದುಕಿ ಕೋಣೆಯೊಳಕ್ಕೆ ಬಂದಿದ್ದಳು.

ಚಿತ್ರದಲ್ಲಿಯ ಗೊಂಬೆಗಳಂತೆ ತಾವಿಬ್ಬರೂ ನಿಂತುದನ್ನು ನೋಡಿ ಮುದುಕಿಯ ಕಣ್ಣುಗಳಲ್ಲಿ ಕಿಡಿಗೇಡಿತನ ಚಿಮ್ಮಿತ್ತು.

"ಯಾಕಪ್ಪ, ಮದಿವೀಗೆ ಈ ಮುದುಕೀನ್ನ ಕರೀದಿದ್ರೂ ಚೊಚ್ಚಲ ಬಾಣಂತಿತನ ಮಾತ್ರ ನನ್ನ ಮ್ಯಾಲೇ ಹೇರಿಬಿಟ್ಟೆಯಾ ?"

ತಾನು ಉತ್ತರವನ್ನು ಕೊಡದೆ ಹುಚ್ಚನಂತೆ ಹಲ್ಲು ಕಿರಿದಿದ್ದನೇನೊ !

"ನಗು, ಅಪ್ಪ, ನಗು. ಒಂದಿಲ್ಲ ಒಂದು ದಿನ ಎಲ್ಲಾರೂ ಹೀಂಗೇ ಮುದುಕರಾಗೋರು. ಅದಕ್ಕ ಹರೇತನ ಇದ್ದಾಗ ನಗತಾ, ಕೆಲೀತಾ ಇರ್ಬೇಕು. ಹೀಂಗ್ಯಾಕ ನಿಂತೀದೆಯೆ, ಕುಮುದೀ ? ಮನೀಗೆ ಬಂದವ್ರಿಗೆ ಕೂಡಂತ ಹೇಳ್ಬಾರ್ದ ?"

"ಮನೀ ನಿನ್ದು, ಅತ್ತೀ."

"ಯಜಮಾನ ನಿನ್ನವ. ನೀನಿದ್ದಲ್ಲಿ ಅವನ ಮನೆ. ಕೂಡಪ್ಪ. ವಿಶ್ರಾಂತಿ ತಗೋ, ಆಕೆ ಊರ ಸುದ್ದಿ ಹೇಳಿ ನಿನ್ನ ತಲೆ ಎಬ್ಬಿಸಲಿಲ್ಲ ಅಂದ್ರ. ನಾನು ಚಾ ಮಾಡಿಕೊಂಡು ಬರ್ತೀನಿ, ಆ ಮ್ಯಾಲೆ ಸ್ನಾನಾ ಮಾಡೀಯಂತ. ಹೆಂಡತಿ ಎಲ್ಲಿ ಹೋಗತಿದ್ದಳೊ, ಬಂದ ಮರುದಿವಸ ಹಿಂದಿನಿಂದ ಓಡಿ ಬರಲಿಕ್ಕೆ."

ತನ್ನ ಉತ್ತರವನ್ನು ಅಪೇಕ್ಷಿಸದೆ, ಕೊನೆಯ ಮಾತನ್ನು ತನ್ನಷ್ಟಕ್ಕೆ ಹೇಳಿಕೊಳ್ಳುತ್ತ ಮುದುಕಿ ಹೋದ ಮೇಲೆ ರಾಮಣ್ಣನಿಗೆ ತುಸು ಧೈರ್ಯ ಬಂದಿತ್ತು.

"ಕುಮುದ – ?"

"ಏನು ?"

"ನನ್ನ ಮೇಲೆ ಸಿಟ್ಟೆ ?"

"ಯಾಕೆ ?"

"ಮದುವೆ ನಿನಗೆ ಬೇಕಿರಲಿಲ್ಲವೆ ?"

"ಇಲ್ಲವಾದರೆ ಬೀದಿಯ ಬಸವಿಯಾಗುತ್ತಿದ್ದೆ. ನಿಮ್ಮ ಕರುಣೆಯಿಂದ ಉಳಿದೆ."

"ತಿಳೀತು. ನನ್ನ ಮ್ಯಾಲೆ ಸಿಟ್ಟು ನಿನಗೆ."

"ನಿಮ್ಮ ಮ್ಯಾಲೆ ಅಲ್ಲ, ನನ್ನ ಮ್ಯಾಲೆ."

"ಆಂ ?"

"ನಿಂ ಸವಿಮಾತಿಗೆ ಮೋಸಬಿದ್ದು—"

"ಕುಮುದಾ, ಕುಮುದಾ, ಹಾಗನ್ನಬ್ಯಾಡ. ಮನಸಾ ಮದಿವಿ ಆಗೀವಿ ಇಬ್ಬರೂ."

"ಮದಿವೆ ಆದದ್ದಕ್ಕ, ಹುಟ್ಟೋ ಕೂಸಿಗೆ, ಹೆಸರಿನ ಮುಂದೆ ತಂದೇ ಹೆಸರು ಸಿಕ್ಕಿತು. ನನ್ಗೇನು—"

"ಕುಮುದಾ, ನಿನ್ನನ್ನ ಮನಃಪೂರ್ವಕ—"

"ನಾಕು ನಿಮ್ಮ ಮನಃಪೂರ್ವಕ. ಸಾಹಿತಿಗಳು ನೀವು, ಶಬ್ದದ ಮಹತ್ತ್ವ ಗೊತ್ತು; ಅದಕ್ಕೇ 'ಮನಃಪೂರ್ವಕ' ಅಂತೀರಿ, 'ಪ್ರೇಮ ಪೂರ್ವಕ' ಅಂತ ತಪ್ಪಿ ಕೂಡಾ—"

"ಯಾಕ, ಕುಮುದೀ, ಇನ್ನೂ ಮಾತಾಡ್ತಾನೇ ಇದ್ದೀಯೇನು ?" ಎನ್ನುತ್ತ ಮುದುಕಿ ಒಳಗೆ ಬಂದಿದ್ದಳು. ಅದನ್ನು ರಾಮಣ್ಣ ಎಂದೂ ಮರೆಯುವಂತಿರಲಿಲ್ಲ. ಆಗ ಆ ಮುದುಕಿ ಬಂದಿರಲಿಲ್ಲವೆಂದರೆ ಸಂನಿವೇಶದ ಆವೇಶದಲ್ಲಿ ತಾನು ಏನನ್ನಾದರೂ ಹೇಳಿ ಬಿಡುತ್ತಿದ್ದನೇನೊ ! ಮುದುಕಿಯ ಪ್ರವೇಶದಿಂದ ಸಂನಿವೇಶದ ರಸ–ಆವೇಶಗಳ ಭಂಗವಾಯಿತು. ಅದರಿಂದಲೆ ತನಗೆ ಧೈರ್ಯ ಬಂದಿತ್ತೇನೊ ! ಕುಮುದಳಿಗೆ ಆಗ ಹೇಳಿದ ಮಾತನ್ನು ಈಗಲೂ ತನಗೆ ತೊಡಕಾಗಿದ್ದುದನ್ನು ಅನುಭವಿಸುತ್ತಾನೆ. ಹತ್ತು ವರ್ಷಗಳಾದುವು, ತೊಡಕು ಬಿಟ್ಟಿಲ್ಲ.

ಕುಮುದಳನ್ನು ತಾನು ಪ್ರೀತಿಸಬಲ್ಲ, ಪ್ರೀತಿಸುತ್ತಾನೆ ಎನ್ನಬಹುದು; ಆದರೆ ಸರಲೆಯ ಸ್ಮರಣೆ ಮಸಕಾಗುವವರೆಗೆ ಕುಮುದಳಲ್ಲಿ ತನ್ನ ಪ್ರೇಮ ಎಂದು ಹೇಗೆ ಧೈರ್ಯವಾಗಿ ಹೇಳಬಲ್ಲ ? ಅಂದು ಆ ಪ್ರಶ್ನವನ್ನು ಕುಮುದಳಿಗೇ ಕೇಳಿದ್ದ. ಆಕೆಯ ಉತ್ತರ ನಿಷ್ಠುರವಾಗಿದ್ದಿತು.

"ನಿಮ್ಮ ಪ್ರೇಮ ಬೇಡ, ನಿಮ್ಮೊಡನೆ ಜೀವನ ಬೇಡ" ಎಂದಿದ್ದಳು.

ಆದರೆ ಕೊನೆಗೆ ಒಪ್ಪಿದ್ದಳು, ತನ್ನ ಮನೆಯಲ್ಲಿ ಉಪಚಾರಕ್ಕಾಗಿ ಇದ್ದುಕೊಳ್ಳಲು, ಒಂದು ಕರಾರಿನ ಮೇಲೆ; ಸದ್ಯದ ಪ್ರಸೂತಿ ಆಗುವವರೆಗೆ ಆಕೆ ಸೋದರತ್ತೆಯಲ್ಲಿಯೆ ಇದ್ದುಕೊಳ್ಳುವುದು, ಆಮೇಲೆ ತನ್ನಲ್ಲಿ ಬಂದರೆ ತಾನು ಆಕೆಯೊಡನೆ ದಾಂಪತ್ಯಜೀವನದ ಅಧಿಕಾರವನ್ನು ನಡೆಯಿಸಕೂಡದು.

"ಒಪ್ಪಿದೆ, ಸಂತೋಷದಿಂದ ಒಪ್ಪಿದೆ" ಎಂದಿದ್ದನು.

ಒಪ್ಪಿದೆ ಎಂದಿದ್ದನು. ತನಗೇ ಆಶ್ಚರ್ಯ. ಯಾವ ಸಂದರ್ಭ? ಏನನ್ನು ಒಪ್ಪುತ್ತಲಿದ್ದೇನೆ?....ಕೊನೆಗೆ ಸ್ಮೃತಿ-ಚಿತ್ರಗಳನ್ನು ಅನುಭವಿಸಿದ್ದು ಲಕ್ಷ್ಯಕ್ಕೆ ಬಂದು – ದೀರ್ಘವಾಗಿ ಉಸಿರೆಳೆದು – ಕಾಳಿದಾಸ ಮಹಾಕವಿ ಎಂಬುದನ್ನು ಒಪ್ಪಿದೆ ಎಂದುಕೊಂಡನು.

## ೭

"ಅಂದು ಒಪ್ಪಿದ್ದೆ ತಪ್ಪಾಯ್ತು" ಎಂದಳು ಕುಮುದ ಎದುರು ಗೋಡೆಗೆ. ಇಂದು ತಾನು ಗಂಡನ ಸತ್ಕಾರ ಸಮಾರಂಭದಲ್ಲಿ ಅವನ ನೆರಳಿನ ಹಾಗೆ, ಅನಿವಾರ್ಯವಾಗಿ, ಎಳೆಯಲ್ಪಡುವುದು ಅಂದಿನ ತಪ್ಪಿಗೇ ತಕ್ಕ ಪ್ರಾಯಶ್ಚಿತ್ತ ಎಂದುಕೊಂಡಳು. ಎಷ್ಟಾದರೂ ಹೆಣ್ಣಿನ ಸ್ವಭಾವ; ಮತ್ತೆ ಕನ್ನಡಿಯತ್ತ ಮುಖ ತಿರುಗಿಸಿ ಕುಳಿತುಕೊಂಡಳು. ಮುಖ ಕಾಣ ಬೇಕು, ಸೀರೆ ಕಾಣಬಾರದು ಎಂದರೆ ಹೇಗೆ ನಡೆದೀತು ಹುಚ್ಚೀ – ಎಂದು ತನ್ನನ್ನು ತಾನೇ ಮೂದಲಿಸಿಕೊಂಡಳು. ದಾಂಪತ್ಯದ ಅನುಕೂಲ ಬೇಕು, ಅನನುಕೂಲ ಬೇಡ ಅಂದರೂ ಹೇಗೆ ನಡೆದೀತು? ಮದುವೆಯ ಮುಂಚಿತ ತಾನು ಹೇಗೆಯೆ ವರ್ತಿಸಿರಲಿ, ಈಗ ಮದುವೆಯಾದ ಗೃಹಿಣಿ, 'ಗಂಡನುಳ್ಳ ಗರತಿ–'! ಹೊಟ್ಟೆ–ಬಟ್ಟೆಗಳ ಚಿಂತೆ ಇಲ್ಲ, ಸುಖಕ್ಕೆ ಹೆಕ್ಕು ಇಲ್ಲ!

ಅಂದೇ ತಾನು ಧೈರ್ಯದಿಂದ ವರ್ತಿಸಬೇಕಾಗಿತ್ತು.

ಹೊಟ್ಟೆಯೊಳಗಿನ ಕೂಸಿಗಾಗಿ ತಾನು ಮೆತ್ತಗಾಗಿದ್ದಳು. ಅದಕಾಗಿ ಪ್ರಾರಂಭದಲ್ಲಿ ಆ ಕೂಸಿನ ಮೇಲೆ ಕುಮುದಳ ಸಿಟ್ಟು ಇದ್ದಿತು. ರಾಮಣ್ಣನ ಕೂಸು – ಅದನ್ನು ಕಂಡಾಗಲೆಲ್ಲ ರಾಮಣ್ಣನನ್ನು ಮರೆಯುವಂತಿರಲಿಲ್ಲ. ರಾಮಣ್ಣನನ್ನು ನೆನೆದಾಗಲೆಲ್ಲ — ಈಗಲೂ ಮೈ ಪುಲಕಿತವಾಗುತ್ತಿತ್ತು ಕುಮುದಳಿಗೆ!

ಒಂದು ದೃಷ್ಟಿಯಿಂದ ತನ್ನ ಆನಂದಗೋಪುರದ ಕಳಸವಾಗಿದ್ದಿತು ಆ ಕೂಸು.

"ಕುಮುದೀ, ನಿನ್ನ ಮೈ ತುಂಬೋದನ್ನ ಕಂಡರ ನೀ ಗಂಡ ಹಡೀತಿ – ಅಂತ ಕಾಣಿಸ್ತದ" ಎಂದಿದ್ದಳು ಒಂದು ದಿನ ಮನೆ–ಮುದುಕಿ.

"ಏನಾಗೋದು ಆಗ್ತದ. ಅದೇನು ಯಾರ ಕಯ್ಯೊಳಗಿನ ಮಾತೇನು, ಅತ್ತೇ" ಎಂದು ತಾನು ತುಸು ಹಿರಿತನದ ದನಿಯಲ್ಲಿಯೆ ಹೇಳಿದ್ದಳು.

"ಹುಂ. .ಈಗ ಹೇಳ್ತಾಳ ಯಾರ ಕಯ್ಯೊಳಗಿನ ಮಾತೇನು ಅಂತ?" ಎಂದು ಮುದುಕಿ ತನ್ನನ್ನು ಮೂದಲಿಸಿದ್ದಳು.

ಕುಮುದಳಿಗೆ ವಿಚಾರ ಬರುತ್ತಿದ್ದಿತು ಆಗಾಗ. ಇದೇನು ರಹಸ್ಯ? ಮನುಷ್ಯ ಪೂರ್ತಿ ಪರತಂತ್ರ ಎಂದು ಹೇಳುವುದಾಗಿದ್ದರೆ ಮನುಷ್ಯನ ಜನ್ಮವನ್ನೆ ನೋಡಬೇಕು. ತನಗೆ ಇದು ಗೊತ್ತಿದ್ದಿತೆ? ಈಗ ಕೇಳಿದರೆ "ಗೊತ್ತಿದ್ದಿತು" ಎಂದು ಹೇಳಬಹುದು, ನಿಜ. ಆದರೆ ಆಗ? ಆಗ ಬೇರೆ ಯಾವುದೂ ಗೊತ್ತಿರಲಿಲ್ಲ, ಯಾವುದರ ಅಪೇಕ್ಷೆಯೂ ಇದ್ದಿರಲಿಲ್ಲ, ಯಾವುದರ ಎಚ್ಚರವೆ ಇರುತ್ತಿರಲಿಲ್ಲ.

ಎಂತಹ ಆಶ್ಚರ್ಯ! ಈಗ, ನಡೆದುದೆಲ್ಲವನ್ನು ನೋಡಿ, ವಿಚಾರ ಮಾಡಿ, ಲೆಕ್ಕಹಾಕಿ, ಸಾಧಕ–ಬಾಧಕಗಳನ್ನು ಎಣಿಸಿದ ತರುವಾಯ ರಾಮಣ್ಣನ ಮೇಲೆ ಸಿಟ್ಟು. ಆದರೆ ಅತ್ತೆ ಹೇಳುವ ಮಾತು ನಿಜವಿದ್ದರೆ ರಾಮಣ್ಣ ಎಲ್ಲ ಗಂಡಸರಂತೆ, ಅಥವಾ ಗಂಡಸರೆಲ್ಲ ರಾಮಣ್ಣನಂತೆ. ಹಸಿದಾಗ ರುಚಿ, ಹೊಟ್ಟೆ ತುಂಬಿದ ಮೇಲೆ ನಿದ್ರೆ. ಜಗತ್ತಿನಲ್ಲಿ ರೂಢಿಯಾಗಿದೆ. ಅಥವಾ ರಾಮಣ್ಣನದಾದರೂ ತಪ್ಪೇನು? ತಪ್ಪು ತನ್ನದೂ ಇದೆ. ಚಪ್ಪಾಳೆಗೆ ಎರಡು ಕೈಗಳು ಬೇಕು. ಜೀವಕ್ಕೆ ಎರಡು ಜೀವಗಳು ಬೇಕು. ಹೊಸ ಎಲೆ ಚಿಗುರಬೇಕಾದರೆ ಹಳೆ ಎಲೆ ಉದುರಬೇಕು. ನಿಜ, ಆದರೆ ತಾನೊಬ್ಬಳೆ ಯಾಕೆ ಹಳೆ ಎಲೆ ಆಗಬೇಕು? ರಾಮಣ್ಣನೂ ಯಾಕೆ ಉದುರಬಾರದು?

ಕ್ರಮೇಣ ಕುಮುದಳಲ್ಲಿ ಒಂದು ತರದ ಮಾರ್ದವ ಮೂಡಿತ್ತು. ರಾಮಣ್ಣನ ವಿಟಗಾರಿಕೆಗೆ ಮೋಸ ಹೋದ ಅರಿಯದ ಹುಡುಗಿ ತಾನು ಎಂಬ ವಿಚಾರ ಹಿಂದೊತ್ತಿ ಒಂದು ಹೊಸಜೀವವನ್ನು ಸೃಷ್ಟಿಯಲ್ಲಿ ತಂದು ಬದುಕಿಸಿ ಬೆಳೆಯಿಸುವ ತಾಯಿ ತಾನು ಎಂಬ ವಿಚಾರ ಆಕೆಯನ್ನು ಪುಲಕಿತಗೊಳಿಸುತ್ತಿತ್ತು. ಆ ಯೋಗ್ಯತೆ ತನ್ನಲ್ಲಿದೆಯೆ ಎಂದು ಅನನುಭವಕ್ಕಾಗಿ ಹೆದರಿಕೆ, ಆ ಯೋಗ್ಯತೆ ತನ್ನಲ್ಲಿ ಮೂಡುತ್ತಿದೆ ಎಂಬ ದಿನದಿನದ

ಅನುಭವಕ್ಕಾಗಿ ಉತ್ಸಾಹ. ತೊಡೆಗಳು ಭಾರವೆನ್ನಿಸಿದಷ್ಟು ಸಂತೋಷ; ಹುಟ್ಟಿದ ಮಗುವನ್ನು ಕೂಡಿಸಿ, ಆಡಿಸಿ ಬೆಳೆಯಿಸಲು ಆಧಾರವಾಗುವಷ್ಟು ಶಕ್ತಿ ಅವುಗಳಿಗೆ ಬೇಕಲ್ಲವೆ? ಒಮ್ಮೊಮ್ಮೆ ಯಾವುದೋ ಒಂದು ಹೇಳಲಾಗದ ವೇದನೆ ಹೃದಯದೊಳಗೆ; ಅಲ್ಲ, ಹೃದಯದ ಒಳಗಲ್ಲ, ಮಗುವಿನ ಆಹಾರ ಕ್ಕಾಗಿ ಪೂರ್ವ ಸಿದ್ಧತೆ ನಡೆದ ಹೊರಗಿನ ಶಾರೀರಿಕ ಪರಿಶ್ರಮ ಅದು ಎಂದು ಸಂತೋಷಗೊಳ್ಳುವಳು.

ಪಾಪ! ರಾಮಣ್ಣನ ಮೇಲೆ ಸಿಟ್ಟಾಗಿ ಪ್ರಯೋಜನವೇನು—ಎಂದು ಕೊಳ್ಳುವಳು ಆಗಾಗ. ಏಷ್ಟಾದರೂ ಗಂಡಸು! ಕ್ಷಣಿಕ ಬುದ್ಧಿ, ಕ್ಷಣಿಕ ಸುಖದ ಲೋಭ! ಚಿರಂತನ ತಾಯ್ತನದ ಸುಖದ ಅನುಭವ ಗಂಡಸಿಗಿರು ವುದಿಲ್ಲ. ಎಲ್ಲ ಗಂಡಸರಂತೆ ರಾಮಣ್ಣ ಎಂದು ಅವನಿಗಾಗಿ ಕನಿಕರಪಡುವಳು. ಅದೇ ವಿಚಾರಸರಣಿಯಲ್ಲಿ ತನಗೆ ಗಂಡುಮಗು ಹುಟ್ಟುವುದೆಂಬ ಭರವಸೆ ಯಲ್ಲಿ ಆ ಗಂಡಿಗಾಗಿಯೂ ಒಮ್ಮೊಮ್ಮೆ ಕನಿಕರಪಡುವಳು. ಕನ್ನಡಿಯ ಮುಂದೆ ಕುಳಿತಾಗೊಮ್ಮೆ ಹೆಮ್ಮೆಯ ಮುಗುಳ್ನಗೆ ಆಕೆಯ ಮುಖದಲ್ಲಿ ಮೂಡುವುದು. ಹುಚ್ಚು ಗಂಡಸು! ಇಂತಹ ಸೌಂದರ್ಯಕ್ಕಾಗಿ ಮೋಹಿತ ನಾದುದರಲ್ಲಿ ಆಶ್ಚರ್ಯವೇನು?

ಒಮ್ಮೊಮ್ಮೆ ವಿಚಾರಸರಣಿಯಲ್ಲಿ ಸರಳಕ್ಕ ಸ್ಮರಣೆಗೆ ಬರುವಳು. ಪಾಪ! ಯಾವ ಸುಖವನ್ನೂ ಕಾಣದೆ ಮರಮರಮರುಗಿ ಜೀವ ಬಿಟ್ಟಳಲ್ಲ! ಮನೆ ಅಂದ್ರೆ ಮಕ್ಕಳು–ಮರಿ ತುಂಬಿರಬೇಕು ಎನ್ನುತ್ತಿದ್ದಳು ಆಕೆ. ಹುಂ....ಆಗ ತಾನು ಎಂತಹ ಅರಿಯದ ಮುಗ್ಧೆಯಾಗಿದ್ದಳು! ಒಂದು ದಿನ, ಅಕ್ಕನ ಜೊತೆ ಮಾತನಾಡುತ್ತಿದ್ದಾಗ ತಾನು ಕೇಳಿದ ಪ್ರಶ್ನೆ ಎಷ್ಟು ಹುಚ್ಚು-ತನದ್ದಿತ್ತು!

"ನೋಡು, ಕುಮುದಾ, ಹೆಂಗಸಿನ ಸುಖ ಅಂದ್ರೆ ತನ್ನದು ಅನ್ನೋ ಮನೆ, ಹೊಟ್ಟೆ ತುಂಬಿ ತಿಂದು ದಕ್ಕಿಸಿಕೊಳ್ಳೋ ಗಂಡ, ಮನೇ ತುಂಬ ಓಡಾಡೋ ಮಕ್ಕಳು."

"ನಿನಗ ನಿನ್ನ ಮನೆ ಅದ—"

"ತಿನ್ನೋದು ನೆನಪಾದರ ಮಾತ್ರ, ತಿಂದದ್ದನ್ನ ದಕ್ಕಿಸಿಕೊಳ್ಳೋ ಗಂಡ ಇದ್ದಾರ" ಎಂದು ಸರಳಕ್ಕ ನಗೆಯಿಂದಲೆ ಹೇಳಿದ್ದಳು.

"ಆಯ್ತಲ್ಲ, ಇಂದಿಲ್ಲ ನಾಳೆ ಮಕ್ಕಳೂ ಆಗ್ತಾವ."

ತನ್ನ ಮಾತಿಗೆ ಅಕ್ಕ ದೀರ್ಘವಾಗಿ ಉಸಿರೆಳೆದು ಮಲಗಿದಲ್ಲಿಯೆ ಮಾಳಿಗೆಯನ್ನು ನೋಡುತ್ತ ಸ್ತಬ್ಧಳಾಗಿದ್ದಳು.

"ಆ ಮ್ಯಾಲೆ—"

"ಹುಚ್ಚಿ ನೀನು" ಎಂದಿದ್ದಳು ಅಕ್ಕ.

ತನಗೆ ಏನೂ ತಿಳಿದಿರಲಿಲ್ಲ. ಗಂಡನಿದ್ದರೆ ಮಕ್ಕಳಾಗಲೇ ಬೇಕು ಎಂಬುದನ್ನು ಸಿದ್ಧಾಂತವಾಗಿ ತಾನು ತಿಳಿದುಕೊಂಡಿದ್ದಳು.

"ಹುಚ್ಚಿ ನೀನು, ಕುಮುದಾ. ಈ ಜಡ್ಡಿನಿಂದ ನಾನು ಸುಧಾರಿ ಸೋದೆ ಕಠಿಣ—"

"ಅಕ್ಕಾ!"

"ಒಂದ್ವೇಳೆ ಸುಧಾರಿಸಿದೆ ಅಂತ ತಿಳಿ. ಆಗಲೂ ಮಕ್ಕಳ ಸುಖ ನನ್ನ ಪಾಲಿಗಿಲ್ಲ."

"ಯಾಕ ?"

ಸರಳಕ್ಕ ಕಿಲಕಿಲ ನಕ್ಕಿದ್ದಳು. ನಗೆಯಿಂದ ಆಕೆಯ ಮುಖ ಆಯಾಸ ಗೊಂಡು ಇನ್ನಿಷ್ಟು ಸುಂದರವಾಗಿ ಕಂಡಿದ್ದಳು.

"ಯಾಕ–ಅಂತ ? ಯಾಕ – ಏನು – ಅಂಬೋದೆಲ್ಲಾ ನಾಳೆ ನಿನಗೇ ತಿಳಿದೀತು ಮದುವೆ ಆದ ಮ್ಯಾಲೆ." ಎಂದಿದ್ದಳು ಅಕ್ಕ.

ಅಂದ್ರೆ ? ಮದುವೆ ಆದ್ರೂ ಮಕ್ಕಳು ಆದಾವು ಅನ್ನೋ ಭರವಸೆ ಇಲ್ಲ, ಹೆಂಗಸು ತಾಯಿ ಆಗಿಯೇ ಆಗುವಳು ಎಂಬ ಭರವಸೆಯೂ ಇಲ್ಲ! ಈ ಗೂಢ ಏನು – ಎಂಬುದು ತಿಳಿದಿರಲಿಲ್ಲ ತನಗೆ ಆಗ.

ಆಗ ತಿಳಿದಿರಲಿಲ್ಲ, ಮುಂದೆ ತಿಳಿಯಲೂ ತಡವಾಗಲಿಲ್ಲ.

ಬುದ್ದಿ ಇದ್ದಾಗ ತಿಳಿಯಲಿಲ್ಲ, ಬುದ್ಧಿಯನ್ನು ಕಳೆದುಕೊಂಡ ಮೇಲೆ ತಿಳಿಯಿತು !

ಎಂತಹ ಉದ್ವಿಗ್ನ ಮನಸ್ಕಳಾದಾಗೂ ಕುಮುದಳಿಗೆ ಆ ನೆನಪುಗಳಿಂದ ಹೃದಯದಲ್ಲಿ ಹೊಸ ಚೈತನ್ಯ ಹರಿದಾಡಿದಂತಾಗುತ್ತಿತ್ತು.

ಬುದ್ಧಿ ಕಳೆದುಕೊಂಡ ಮೇಲೆಯೆ ತಿಳಿಯಿತು.

ಕುಮುದಳಿಗೆ ಈಗಲೂ ಆಶ್ಚರ್ಯ, ಆಗಿನ ತನ್ನ ಮನಃಸ್ಥಿತಿಯನ್ನು

ನೆನೆದುಕೊಂಡು. ಒಂದು ಕಾಲವಿದ್ದಿತು, ಆಗ ರಾಮಣ್ಣನನ್ನು ನೋಡಿದೊಡನೆ, ರಾಮಣ್ಣನನ್ನು ನೆನೆದ ಮಾತ್ರಕ್ಕೆ ಬುದ್ಧಿ ತನ್ನ ವಶವನ್ನು ತಪ್ಪಿಸಿಕೊಂಡು ಹೋಗುತ್ತಿತ್ತು. ಯಾಕೆ ಹಾಗಾಗುತ್ತಿದ್ದಿತೊ ? ಎಲ್ಲರಿಗೂ ಹಾಗೆಯೆ ಆಗುವುದೆ ಎಂಬುದರ ಬಗ್ಗೆ ಕುಮುದಳಿಗೆ ನಿಶ್ಚಿತ ಭಾವನೆ ಇದ್ದಿರಲಿಲ್ಲ. ತನ್ನದು ಮಾತ್ರ ಹಾಗಾಗುತ್ತಿತ್ತು. ಬುದ್ಧಿ, ಶರೀರ ಎರಡರ ಮೇಲೂ ವಶವಿರುತ್ತಿದ್ದಿಲ್ಲ. ಯೋಗಿಗಳ ಮಾತನ್ನು ಹೇಳುವರಲ್ಲ ? ಪ್ರತ್ಯಕ್ಷವಿಲ್ಲದ್ದು ಅವರಿಗೆ ಕಾಣುವುದಂತೆ, ಶರೀರದ ಸುಖದುಃಖಗಳ ಅರಿವು ಅವರಿಗೆ ಇರುವುದಿಲ್ಲವಂತೆ. ಮೋಹನನ ತಾಯಿಯಾಗುವ ಅರ್ಹತೆಯನ್ನು ಪಡೆಯುವ ಮುಂಚಿತ ತಾನೂ ಅಂತಹ ಯೋಗ ಸಿದ್ಧಿಯನ್ನೆ ಪಡೆದುಕೊಂಡಿದ್ದಳೇನೊ !

ತನಗೆ ಇನ್ನೂ ನೆನಪಿದೆ ಒಂದು ದಿನ ನಡೆದ ಘಟನೆ. ಅಂದು ತನ್ನ ಕತೆ ಮುಗಿಯಿತೆಂದೇ ತಿಳಿದಿದ್ದಳು. ತನ್ನ ರಹಸ್ಯ ಸರಳಕ್ಕನಿಗೆ ಗೊತ್ತಾಯಿತೆಂದು ಅವಳ ಮನವರಿಕೆಯಾಗಿಬಿಟ್ಟಿತು. ಅಂದಿನ ತನ್ನ ಅನುಭವ ಮುಂದೆ ತನಗೆಯೆ ಆಶ್ಚರ್ಯವನ್ನುಂಟುಮಾಡಿತ್ತು.

ನಡೆದದ್ದೇನೊ ಸಣ್ಣ ಮಾತು. ರಾತ್ರಿ 9 ಗಂಟೆಯಾಗಿರಬಹುದು, ರಾಮಣ್ಣ ಹೊರಗೆ ಹೋದವನು ಇನ್ನೂ ಬಂದಿರಲಲ್ಲ. ತಾನು ಊಟವನ್ನು ಮಾಡಿರಲಿಲ್ಲ, ಸರಳಕ್ಕನೂ ಹಾಲನ್ನು ತೆಗೆದುಕೊಂಡಿರಲಿಲ್ಲ. ಅಕ್ಕ ಅಷ್ಟೊತ್ತು ತಡೆಯುವುದು ತನ್ನ ಮನಸ್ಸಿಗೆ ಬಂದಿರಲಿಲ್ಲ. ಒಂದೆರಡು ಸಲ ಹಟದಿಂದ ಹೇಳಿದ್ದಳು—

"ಅಕ್ಕಾ, ನಿನಗ ಹಾಲು ತಂದುಕೊಡಲ್ಯಾ ?" ಎಂದು ಕೇಳಿದ್ದಳು.

"ನನಗೇನವಸರ ಅದ ? ಅವರು ಬರ್ಲಿ, ಊಟ ಆಗಲಿ."

"ನಾನು ಕೂತಿರತೀನಿ, ಅಕ್ಕಾ, ಅವರು ಬರೋತನಕ—"

"ನಾನೂ ಕೂತಿರತೀನಿ, ನನ್ಗಾದರೂ ಏನು ಕೆಲಸದ ?"

"ಕೂತೀಯಂತ. ಆದರೆ ಹಾಲು ತಕ್ಕೊಂಡು—"

"ಇರಲಿ ಬಿಡೆ, ಕುಮುದಾ ! ನಾನೇನು ಹಸಿವೇಯಿಂದ ಸಾಯೋದು ಅಷ್ಟರಾಗೇ ಅದ !" ಎಂದು ಸರಳಕ್ಕನೂ ತುಸು ಬೇಸರಗೊಂಡೇ ಹೇಳಿದ್ದಳು.

ಕೆಲಹೊತ್ತು ಕಳೆಯಿತು, ಆದರೂ ರಾಮಣ್ಣ ಬಂದಿರಲಿಲ್ಲ. ತನಗೆ ಏನನ್ನಿಸಿತ್ತೊ ಏನೊ! ತಟ್ಟನೆ "ಅಕ್ಕಾಹಾಲು ತರ್ತೀನಿ" ಎಂದು ಎದ್ದಿದ್ದಳು.

"ಬ್ಯಾಡ ಅಂತ ಹೇಳಿಲ್ಲೇನೆ? ನಾನೊಬ್ಬಳೇ—"

"ನಾನೂ ಮುಗಿಸ್ತೀನಿ, ಅಕ್ಕಾ."

ಸರಳಕ್ಕನಿಗೆ ತನ್ನ ಮಾತಿನ ಅಪಾರ್ಥವಾಗಿದ್ದಿತು.

"ಅಯ್ಯ! ಹುಚ್ಚೀ! ನಿನಗ ಯಾರು ಬ್ಯಾಡಾ ಅಂದ್ರು? ನಾನು ನಿನಗ ಯಾವಾಗಿನಿಂದ ಹೇಳೀನಿ. ಇನ್ನೂ ಬೆಳೆಯೋ ಹುಡುಗಿ ನೀನು, ಹಸಿವೆ ತಡೀಬಾರ್ದು ಅಂತ. ಹಸಿವಿ ಆಗಿದ್ದರ ನೀ ಊಟಾ ಮಾಡಿಬಿಡು, ನಾ ಕೂತಿರತೀನಿ."

"ಹಾಂಗಲ್ಲ, ಅಕ್ಕಾ. ನಾನು ಹಸಿವೆ ಆಗೇದ ಅಂತ ಅನ್ನಲಿಲ್ಲ. ಅವರು ಹೊರಗ ಅಕಸ್ಮಾತ್ತಾಗಿ ಯಾರ ಮನೀವಳಗೊ ಊಟಕ್ಕೆ ಹೋಗ್ಯಾರ."

"ಅಂದ್ರ? ಯಾವಾಗ ಹೇಳಿದ್ದರು?"

"ಯಾವಾಗರೇ ಹೇಳಲಿ. ಅದಕ್ಕೇ ಅಂದೆ, ಇಬ್ಬರೂ ಮುಗಿಸಿ ಬಿಡೋಣ."

"ಏನೊ – ಏನೊ! ಯಾವಾಗ ಹೇಳಿದ್ದರೊ ಏನೊ!" ಎಂದು ಸರಳಕ್ಕ ಅಸಮಾಧಾನದಿಂದ ಗೊಣಗಿದ್ದಳು. ತಾನು ಅಕ್ಕನಿಗೆ ಹಾಲು ತಂದು ಕೊಟ್ಟು, ಒಳಗೆ ತನ್ನ ಊಟದ ತಯ್ಯಾರಿಯನ್ನು ನಡೆಸಿದ್ದಳು. ತಯ್ಯಾರಿ ಮಾಡುತ್ತಿರುವಾಗಲೆ ಹೊರಗಿನಿಂದ ಯಾರದೊ ಮಾತು ಕೇಳಿಸಿ ದಂತಾಯಿತು. ಲಕ್ಷ್ಯಗೊಟ್ಟು ಕೇಳಿದ್ದಳು. ಹೊರಗೆ ಯಾರೂ ಇದ್ದಿರ ಲಿಲ್ಲ, ಆದರೂ ತಾನು ಕೇಳಿದ್ದು ನಿಜ ಎಂದೆನ್ನಿಸಿ ತನ್ನ ಊಟದ ಸಿದ್ಧತೆ ಯನ್ನು ತಡೆದಿದ್ದಳು. ಕೆಲಹೊತ್ತಿನ ಮೇಲೆ ಹೊರಗೆ ಬಂದೊಡನೆ —

"ಅಯ್ಯ! ಇಷ್ಟು ಲಗೂ ಊಟಾಯ್ತೇನ, ಕುಮುದಾ?" ಎಂದಿದ್ದಳು.

"ಇಲ್ಲ. ಊಟ ಮಾಡಬೇಕಂದಿದ್ದೆ. ಅಷ್ಟರೊಳಗ ಏನೊ ಮಾತು ಕೇಳಿಸಿಧಾಂಗಾಯ್ತು—"

"ಯಾರ ಮಾತು?"

"ಯಾರೂ ಇದ್ದಿರಲಿಲ್ಲ, ಆದ್ರೂ ಮಾತು ಕೇಳಿಸಿತು — "

"ಅಷ್ಟಕ್ಕ ಎದ್ದು ಬಂದೆಯಾ ? ಹೋಗು, ಇಲ್ಲಿಯೆ ತಕ್ಕೊಂಡ್ಬಾ ನಿನ್ನ ಎಲೆಯನ್ನ, ಒಬ್ಬಾಕೀನೇ ಒಳಗ ಕೂಡೋದಕಿಂತ."

"ಇಲ್ಲ, ನಾ ಇನ್ನೊಂದಿಷ್ಟು ಹಾದೀ ನೋಡ್ತೀನಿ."

"ಅವರು ಯಾರಲ್ಲಿಯೊ ಊಟಮಾಡಿ ಬರ್ತಾರ ಅಂತ ಹೇಳಿದಿಯಲ್ಲೆ ?"

"ಹೌದು, ಅಕ್ಕಾ. ಆದರೆ ಅಷ್ಟರಾಗೇ ಮಾತು ಕೇಳಿಸಿತು ಅಂದ್ನೆಲ್ಲ ?"

"ಅಂದ್ರ ? ಇವರೇ ಮನೀಗ ಬಂದಾರ, ನನಗ ತಿಳೀಧಾಂಗ ಅಂತೀ ಯೇನು ?"

"ಇಲ್ಲ, ಅಕ್ಕಾ. ಗೆಳೇರು ಹಟಮಾಡಿ ಊಟಕ್ಕ ಕರೆದುಕೊಂಡು ಹೊರಟಿದ್ದರೇನೊ ? ಇವರೂ ಹೊರಟವರು ತಟ್ಟನೆ 'ತಡ ಬಹಳ ಆಗ್ತದ, ನಾನು ಮನೀಗಿ ಹೋಗ್ತೀನಿ' ಅಂತ ಹೇಳಿ ಮನೀ ಕಡೆ ಹೊರಟ್ಹಾಂಗ—"

"ಹಸಿದ ಹೊಟ್ಟೀಲೆ ಕಣ್ಣಿಗೆ ಜಂಪ ಹತ್ತಿತ್ತು ನೋಡಿ ನಿನಗ" ಎಂದು ಅಕ್ಕ ನಗುತ್ತಿರುವಾಗಲೆ ಹೊರಬಾಗಿಲ ಸದ್ದಾಯ್ತು. ತಲೆಗೆ ಸೆರಗನ್ನು ಸುತ್ತಿಕೊಂಡು ಬಾಗಿಲನ್ನು ತೆರೆದು, ತಟ್ಟನೆ ಒಳಗೆ ಓಡಿಬಂದಿದ್ದಳು. ಯಾಕೊ ಏನೊ ! ಡಂಗುರ ಬಡೆವಂತೆ ಬಡೆದುಕೊಳ್ಳುತ್ತಿತ್ತು ಎದೆ. ಅಡಿಗೆಯ ಮನೆಯ ಮರೆಯಿಂದಲೆ ಕೇಳುತ್ತ ನಿಂತಿದ್ದಳು.

ರಾಮಣ್ಣ ಬಂದವನೆ ಅತ್ತಿತ್ತ ನೋಡಿ,

"ಓಹೊ ! ಔಷಧ - ಹಾಲು ಮುಗಿಸಿಬಿಟ್ಟೆಯಲ್ಲ ? ಚಲೋ ಆಯ್ತು! ನೀವೆಲ್ಲಿ ನನ್ನ ಸಲುವಾಗಿ ಹಾದೀ ನೋಡ್ತೀರೊ ಅಂತ ಸುಮ್ಮಸುಮ್ಮನೆ, ಅಂದ್ಕೊಂಡಿದ್ದೆ."

"ನಿಮ್ಮ ಊಟ ಆಯಿತ ?" ಸರಳಕ್ಕ ಕೇಳಿದ್ದಳು.

ರಾಮಣ್ಣನಿಗೆ ಸಂದರ್ಭವೆ ತಿಳಿದಿರಲಿಲ್ಲವೇನೊ ?

"ಏನಂದಿ ?" ಎಂದಿದ್ದ.

"ಅಲ್ಲ, ಯಾರೋ ಗೆಳೇರು ಹಟ ಮಾಡಿ ಕರೆದಿದ್ರಂತ—"

"ಆಂ ! ನಿನಗ ಯಾರು ಹೇಳಿದರು ?"

"ಕುಮುದಾ ಹೇಳಿದಳು."

"ಆಕೆಗೆ ಯಾರು ಹೇಳಿದರು ?"

"ಯಾಕ ? ನೀವೇ ಹೇಳಿರಲಿಲ್ಲೇನು ಹೋಗುವಾಗ ?"

ರಾಮಣ್ಣ ಕಕ್ಕಾವಿಕ್ಕಿಯಾಗಿ ಅತ್ತಿತ್ತ ನೋಡಿದ್ದ ತನ್ನನ್ನು ಹುಡುಕುತ್ತಿದ್ದನೇನೊ ! ಸರಳಕ್ಕನನ್ನೂ ದಿಟ್ಟಿಸಿ ನೋಡುತ್ತ ನಿಂತುಕೊಂಡ.

"ಯಾಕ ? ಏನಾಯ್ತೀಗ ? ಎಲ್ಯಾದರೂ ಊಟ ಆಯ್ತಿಲ್ಲ !"

ಅಕ್ಕನ ಮಾತಿಗೆ ರಾಮಣ್ಣ ಗಟ್ಟಿಯಾಗಿ ನಕ್ಕಿದ್ದ.

"ನೀವಿಬ್ಬರೂ ಹೆಂಗಸರು ಕೂಡಿ ತಡಾ ಮಾಡಿ ಬಂದದ್ದಕ ನನಗ ಉಪವಾಸದ ಶಿಕ್ಷಾ ಕೊಡ್ಬೇಕು ಅಂತ ಮಾಡಿಧಾಂಗ ಕಾಣಿಸ್ತದ. ಆದರೆ ನಾನು ತಪ್ಪ್ಪ ಒಪ್ಕೋತೀನಿ, ಯಾಕಂದ್ರ ಹಸಿವೆ ಆಗೇದ."

"ಹಸಿವೆ ಆಗೇದ ? ಅಂದ್ರ, ಗೆಳೇರಲ್ಲಿ ಊಟ—?"

"ಆ ಪುಣ್ಯಾತ್ಮ ಬಹಳೇ ಹಟ ಮಾಡಿದ. ನಾನೂ ಒಪ್ಕೊಂಡು ಅರ್ಧ ಹಾದೀ ಹೋಗಿದ್ದೆ. ಆದರೆ ಅಷ್ಟರಾಗೇ ನನಗನ್ನಿಸಿತು ಇದು ಎಲ್ಲಾ ಮುಗಿಯೋದಕ ಎಷ್ಟು ತಡ ಆಗ್ತದ ಏನೊ ಅಂತ—ಅದಕ್ಕ ನಡುವೇನೇ ಅವನಿಗೆ ಹೇಳಿ ಬಂದ್ಬಿಟ್ಟೆ. ಹಹ !"

"ಅಂದ್ರ – ನಿಮ್ಮ ಊಟ ಆಗಿಲ್ಲ ?" ಸರಳಕ್ಕ ಅತ್ಯಂತವಾಗಿ ಬೆರಗಾದ ದನಿಯಲ್ಲಿ ಕೇಳಿದ್ದಳು. ರಾಮಣ್ಣ ತಲೆ ಅಲ್ಲಾಡಿಸಿದ್ದ.

"ಮೊದಲು ಹಟಕ್ಕ ಒಪ್ಪಿದಿರಿ, ಆ ಮ್ಯಾಲೆ ತಡ ಆಗ್ತದ ಅಂತ ಬಿಟ್ಟು ಬಂದಿರಿ !" ಸರಳಕ್ಕ ಅದೇ ದನಿಯಲ್ಲಿ ತನ್ನಷ್ಟಕ್ಕೆ ಮಾತನಾಡಿಕೊಳ್ಳುವಂತೆ ನುಡಿದಿದ್ದಳು.

ಮುಂದಿನ ಸಂಭಾಷಣೆಯನ್ನು ಕೇಳಲು ತಾನು ನಿಲ್ಲಲಾರದೆ ರಾಮಣ್ಣನ ಊಟದ ಸಿದ್ಧತೆಯನ್ನು ಮಾಡಿ ಮರೆಯಾಗಿದ್ದಳು. ಅಂದು ಸರಳಕ್ಕ, ರಾಮಣ್ಣ ಇಬ್ಬರೂ ತನ್ನನ್ನು ನೋಡುವ ದೃಷ್ಟಿಯ ಅರ್ಥ ತನಗಾದಂತಾಗಿತ್ತು. ಹೊರಗೆ ನಡೆದ ಸಂಗತಿಯನ್ನು ತಾನು ಸರಿಯಾಗಿ ಹೇಳಿದ್ದನ್ನು ನಂಬಲಾರರು, ನಂಬದೆ ಗತ್ಯಂತರವಿರಲಿಲ್ಲ. ಇಷ್ಟೇಕೆ ? ತಾನೇ ನಂಬದಾಗಿದ್ದಳು. ಆದರೂ ತನಗೆ ಗೆಳೆಯನ ಒತ್ತಾಯ, ರಾಮಣ್ಣನ ಅವಸರ ಎರಡರ ಬಗ್ಗೆಯೂ ಸ್ಪಷ್ಟವಾಗಿ ಮಾತು ಕೇಳಿಸಿದಂತಾಗಿತ್ತು. ತನಗೆ ಅನ್ನಿಸಿದ್ದೇ ನಿಜವಾಗಿತ್ತು. ಏನೊ – ಎಲ್ಲ ಸರಿಹೋಯ್ತು, ಹೋಯ್ತು.

ತಾನು ಕೂಡ ನಂಬದ ಮಾತಾಗಿತ್ತು. ತಾನು ನಂಬುತ್ತಲೂ ಇರಲಿಲ್ಲ, ಆ ಇನ್ನೊಂದು ಘಟನೆ ನಡೆದಿದ್ದಿಲ್ಲವೆಂದರೆ.

ಆ ಎರಡನೆಯ ಘಟನೆಯಿಂದಲೆ ತನ್ನ ಮನಸ್ಸು ಚಲ-ವಿಚಲವಾಗಿತ್ತು: ತನಗೆ ಹೆದರಿಕೆಯೂ ಎನ್ನಿಸಿತ್ತು. ಇದೇನೊ ಒಂದು ಮೋನ ಇಲ್ಲವೆ ಭೂತಾಟಿಕೆಯಾಗಿರಬಹುದೆ - ಎಂಬುದು ತನ್ನ ಹೆದರಿಕೆ. ಮುಂಚೆ, ರಾಮಣ್ಣನ ರಾತ್ರಿಯೂಟದ ಬಗ್ಗೆ ಹಾಗೆ ನಡೆದುಹೋದ ಸಂಗತಿಯ ಬಗ್ಗೆ ತನಗೆ ಆಶ್ಚರ್ಯವಾಗಿದ್ದರೂ ತಾನು ಅದನ್ನು ಕೆಲ ದಿನಗಳಲ್ಲಿ ಮರೆತು ಬಿಟ್ಟಿದ್ದಳು. ಅಕ್ಕ - ರಾಮಣ್ಣ ಇಬ್ಬರಿಗೂ ಆಶ್ಚರ್ಯವಾಗಿತ್ತಾದರೂ ಅವರೂ ಅದನ್ನು ಮರೆತರು. ಮುಂಚೆ ಕೆಲದಿನ "ಇಂದಿನ ಭವಿಷ್ಯ ಏನು ?" ಎಂದು ತನ್ನನ್ನು ನಗೆಯಿಂದ ಪೀಡಿಸಿದರು, ಕ್ರಮೇಣ ಎಲ್ಲವೂ ಮೊದಲಿನಂತೆಯೆ ಸಾಗಿತ್ತು.

ಒಂದು ದಿನ ಇಳಿಹೊತ್ತಿನ ಸಮಯ. ತಾನು ಅಕ್ಕನೊಡನೆ ಮಾತನಾಡುತ್ತ ಕುಳಿತಿದ್ದಾಳೆ. ರಾಮಣ್ಣ ಯಾವುದೊ ಒಂದು ಪುಸ್ತಕವನ್ನು ತರಲು ಅವಸರದಿಂದ ಹೊರಬಿದ್ದಿದ್ದಾನೆ. "ಈಗ ಬರ್ತೀನಿ ನಾನು. ಒಂದು ವಿಷಯದಿಂದ ತಡೆದು ನಿಂತಿದೆ, ಸಂದರ್ಭ ನೋಡಿಕೊಳ್ಬೇಕಂದ್ರೆ ಪುಸ್ತಕಾನೇ ಇಲ್ಲ. ಅದನ್ನ ತಕ್ಕೊಂಡವನೆ ಬಂದ್ಬಿಡ್ತೀನಿ" ಎಂದು ಲಗಬಗೆಯಿಂದ ಹೊರಬಿದ್ದಿದ್ದ.

ನಾಲ್ಕೈದು ನಿಮಿಷ ತಾನು ಅಕ್ಕನೊಡನೆ ಮಾತಾಡಿ ತಟ್ಟನೆ ಎದ್ದಿದ್ದಳು. ಎದ್ದವಳೆ "ಅಯ್ಯಯ್ಯ!" ಎಂದು ನೋವಾದವಳಂತೆ ಬಲಗಾಲನ್ನು ಹಿಡಿದುಕೊಂಡಿದ್ದಳು.

"ಯಾಕ ? ಏನಾಯ್ತು ಕಾಲಿಗೆ ?"

"ಎಡವಿ ಬಿದ್ದೆ."

"ಏನಂದಿ ?" ಎಂಬ ಅಕ್ಕನ ಮಾತಿಗೆ ತನಗೆ ಎಚ್ಚರ ಬಂದಂತಾಗಿತ್ತು. ಪೆಚ್ಚು ಕಳೆಯಿಂದ ಅಕ್ಕನನ್ನು ನೋಡುತ್ತ ನಿಂತಳು.

"ಹಗಲುಗನಸು ಕಾಣ್ತಿದ್ದಿಯೆ ಏನೆ, ಕುಮುದಾ ?" ಎಂದು ಅಕ್ಕ ನಗುತ್ತಲೆ ಕೇಳಿದ್ದಳು.

"ಇಲ್ಲ, ಅಕ್ಕ. ಖರೇನೇ ಏನೊ ಎಡವಿ ಬಿದ್ದು ಕಾಲಿಗೆ ಪೆಟ್ಟು ತಾಕಿ

ಬಹಳ ನೋವಾಧಾಂಗಾಯ್ತು ಒಮ್ಮೆಲೆ" ಎಂದು ಕಾಲನ್ನು ಹಿಡಿದು ಕೊಂಡು ಹೇಳುವಾಗ ಪೆಟ್ಟೂ ತಾಕಿರಲಿಲ್ಲ, ನೋವೂ ಆಗಿರಲಿಲ್ಲ ಎಂಬುದು ತನ್ನಂತೆ ಅಕ್ಕನಿಗೂ ಸ್ಪಷ್ಟವಾಗಿದ್ದಿತು.

"ಆಯ್ತು. ಈ ಬ್ಯಾನಿಗೆ ನಿನ್ಗ ಬ್ಯಾಗ ಔಷಧಾ ಕೊಡಿಸ್ಬೇಕು" ಎಂದು ಅಕ್ಕ ನಗುತ್ತಿರುವಾಗಲೆ ಯಾರೊ "ಬಾಗಿಲಾ ತಗೀರಿ" ಎಂದಿದ್ದರು.

ಬಾಗಿಲನ್ನು ತೆರೆದಾಗ ರಾಮಣ್ಣ, ಇನ್ನೊಬ್ಬರ ಹೆಗಲ ಮೇಲೆ ಕಯ್ಯ್ನೂರಿ ನಿಂತಿದ್ದ. ಅವಸರದಿಂದ ಹೋಗುವಾಗ ಎಡವಿ ಬಿದ್ದು ಬಲಗಾಲಿಗೇ ಪೆಟ್ಟನ್ನು ತಾಕಿಸಿಕೊಂಡು ಬಂದಿದ್ದ !

ಅಂದಿನಿಂದ ಕುಮುದಳಿಗೆ ಪೂರ್ತಿ ಭರವಸೆಯಾಗಿತ್ತು. ಯಾಕೆ ಹೀಗಾಗುವುದು ಎಂಬುದು ತಿಳಿಯದಿದ್ದರೂ ರಾಮಣ್ಣನನ್ನು ಕುರಿತು ತನಗಾಗುವ ಇಂತಹ ಅನುಭವಗಳಿಂದ ತಾನು ಪೂರ್ತಿಯಾಗಿ ರಾಮಣ್ಣನಿಗೆ ಮನಸೋತವಳು ಎಂಬ ಭರವಸೆ ಅನಿವಾರ್ಯವಾಗಿತ್ತು.

ಎಷ್ಟೋ ಸಲ ವಿಚಾರಮಾಡಿದ್ದಳು. ಪ್ರೇಮವೆಂದರೆ ಹೀಗಿರುವುದೆ? ಪ್ರೀತಿಸುವ ವಸ್ತುವಿನ ಬಗ್ಗೆ ಇಷ್ಟು ಆತ್ಮೀಯತೆ ಬರುವುದೆ?

ತನ್ನದಂತೂ ಆ ಅವಸ್ಥೆಯಾಗಿತ್ತು. ಹೊಟ್ಟೆಯೊಳಗಿನ ಕೂಸು ರೂಪುಗೊಳ್ಳುವುದಕ್ಕೆ ತಾನು ಈಪರಿ ಯೋಗವನ್ನು ಆಚರಿಸಬೇಕಾಗಿತ್ತು. ತಾಯ್ತನ ಎಂದರೆ ಕಾಮತೃಪ್ತಿಗೆ ಶಿಕ್ಷೆ ಅಲ್ಲ, ಸಂಭೋಗಮದದ ಆಯಾಸ ಫಲವಲ್ಲ, ಗಂಡುಹೆಣ್ಣಿನ ಕೂಟದ ಕುಪರಿಣಾಮವಲ್ಲ, ಯಾವ ವಾಸ್ತವಿಕ ಕಾರಣದಿಂದ ಹುಟ್ಟಿದ ಕಾರ್ಯವಲ್ಲ, ಎರಡು ಹೃದಯಗಳು ಒಂದಾದುದರ ಬಾಹ್ಯಸಂಕೇತ – ಎಂಬ ಭಾವನೆ, ಆಕೆ ಬುದ್ಧಿಶಕ್ತಿಗೆ ಮೀರಿದ್ದರಿಂದ, ಅಸ್ಪಷ್ಟರೂಪದಲ್ಲಿ ಮೂಡಿತ್ತು. ಆ ತಾಯ್ತನದ ಪ್ರಭಾವದಿಂದಲೆ ಅಂದು ತಾನು ಒಪ್ಪಿಕೊಂಡಿದ್ದಳು, ಹೆರಿಗೆಯಾದೊಡನೆ ಮತ್ತೆ ರಾಮಣ್ಣನೊಡನೆ ಇದ್ದುಕೊಳ್ಳಲು. ಆದರೂ ಹಟದಿಂದ ಕರಾರನ್ನು ಹಾಕಿದ್ದಳು, ದಾಂಪತ್ಯ ಜೀವನವನ್ನು ಮಾತ್ರ ನಡೆಸುವಂತಿಲ್ಲ ಎಂದು.

ಆದರೂ ಒಪ್ಪಬಾರದಾಗಿತ್ತೇನೊ ಎಂದೆನ್ನಿಸುತ್ತಿತ್ತು ಆಗಾಗ. ಮುಂದೆ ಆ ಸೀರೆಯ ಸಂದರ್ಭದಲ್ಲಂತೂ "ಒಪ್ಪಿದ್ದು ತಪ್ಪು" ಎನ್ನಿಸಿತ್ತು.

"ನಾನು ಒಪ್ಪಬಾರದಾಗಿತ್ತು" ಎಂದಳು. ತಟ್ಟನೆ ಸುತ್ತಲೂ

ನೋಡಿದಳು. ಏನೊ ಮಾತನಾಡಿದೆನಲ್ಲ ನಾನು ? ಒಪ್ಪಬಾರದಾಗಿತ್ತು ಎಂದೆನಲ್ಲ ? ಕೈಗಡಿಯಾರವನ್ನು ನೋಡಿಕೊಂಡಳು, ಸ್ಮರಣೆಗೆ ಬಂದಿತು. ಇಂದು ಇವರ ಕೂಡ ಇವರ ಸತ್ಕಾರಸಭೆಗೆ ಹೋಗಲು ಒಪ್ಪಬಾರದಾಗಿತ್ತು ಎಂಬ ವಿಚಾರವಾಗಿ ತನ್ನ ಬಾಯಿಯಿಂದ ಹಾಗೆ ಬಂದಿತೇನೊ ಎಂದು ಸಮಾಧಾನವನ್ನು ತಂದುಕೊಂಡು ಎದ್ದಳು. "ಈ ಹುಡುಗನ ಸ್ವಭಾವ ನನಗ್ಗೊತ್ತು. ಆಡ್ಲಿಕ್ಕೆ ಹೋದರ ಯಾವುದರ ಪರಿವೀನೇ ಇರೋದಿಲ್ಲ. ಎಷ್ಟು ಸರಿ ಹೇಳಿದ್ದೆ, ಈವೊತ್ತು ಸಭಾಕ್ಕ ಹೋಗ್ಬೇಕಾಗೇದ, ಬ್ಯಾಗ ಮನೀಗೆ ಬಾ" ಅಂತ. ಇನ್ನೂ ಸುಳಿವಿಲ್ಲ. ಇವ ಬರೋದು ಯಾವಾಗ, ಇವನ ತಯಾರಿ ಆಗೋದ ಯಾವಾಗ ? ಎಂದು ಮತ್ತೊಮ್ಮೆ ಗಡಿಯಾರ ವನ್ನು ನೋಡಿಕೊಂಡಳು. "ಅಯ್ಯ ! ಇನ್ನು ಅರ್ಧ ಗಂಟೇನೆ ಉಳೀತಲ್ಲ ಹೊರಡಲಿಕ್ಕೆ ?" ಎಂದು ಚಡಪಡಿಸುತ್ತ ಬಾಗಿಲಿಗೆ ಬಂದು ಮೋಹನನನ್ನು ಪ್ರತೀಕ್ಷಿಸುತ್ತ ನಿಂತಳು.

೮

"ಇನ್ನೂ ಅರ್ಧ ಗಂಟೆ ! ಅಬ್ಬ ! ಹೊತ್ತೇ ಸರೀವಲ್ಲದು" ಎಂದ ರಾಮಣ್ಣ ಕೈಗಡಿಯಾರವನ್ನು ನೋಡಿಕೊಂಡು. ಛಿ ! ಎಂತಹ ಹುಚ್ಚ ನಾನು ! ವರ್ಷಾನುವರ್ಷಗಳ ಸ್ಮೃತಿಪಥವನ್ನು ದಾಟುವಾಗಲೂ ಹೊತ್ತೇ ಸರಿಯಲೊಲ್ಲದು – ಎನ್ನುತ್ತಿದ್ದೇನೆ ! ಹೋಗಲಿ – ಇಂದಿನ ಸತ್ಕಾರಸಭೆ ಯಂತೂ ಸ್ಮೃತಿಯ ವಿಷಯ ಅಲ್ಲವಲ್ಲ. ಅದಕ್ಕಾಗಿ ತಾನು ದಾರಿ ಕಾಯುತ್ತಿರುವುದು. ತಾನು ಲೇಖಕ ಎಂಬುದಕ್ಕಾಗಿ ಸಾರ್ವಜನಿಕ ಸತ್ಕಾರ ತನಗೆ. ವಯಸ್ಸು 45. ನಿಜವಾಗಿ ಅಭಿಮಾನ ಪಡುವಂತಹ ಮಾತು. ಪ್ರಜಾಪ್ರಭುತ್ವದ ಈ ಕಾಲದಲ್ಲಿ ಪ್ರಜೆಗಳೆ ತನ್ನನ್ನು ಸತ್ಕರಿಸು ತ್ತಿದ್ದಾರೆ. ನಿಜವಾಗಿಯೂ ಹೆಮ್ಮೆಯ ವಿಷಯ. ಆದರೂ ಆ ಬಗ್ಗೆ ತನಗೆ ಯಾವ ಉತ್ಸಾಹವೂ ಇಲ್ಲವಲ್ಲ ? ಯಾಕೆ ? ಯಾಕೇನು ? ಇಡಿಯ ಪ್ರಪಂಚವೇ ಮೋಸ—ಕ್ಷಮಿಸಬೇಕು, ಅದು ಸೌಜನ್ಯವಲ್ಲವೇನೊ ? — ಇಡಿಯ ಪ್ರಪಂಚವೇ ಮಾಯೆ. ಹಾಂ ! ಮೋಸ ಎಂದರೆ ಒರಟುತನ,

ಮಾಯೆ ಎಂದರೆ ತತ್ತ್ವಜ್ಞಾನ. ಇಲ್ಲಿದೆ ಸಾಹಿತ್ಯದ ಶಕ್ತಿ. ಆದರೂ ಮನೆಯಲ್ಲಿ ವಿಚಾರ ಮಾಡುವಾಗ 'ಮೋಸ' ಎಂಬ ಹೆಚ್ಚು ಸಮರ್ಪಕ-ವಾದ ಶಬ್ದವನ್ನೆ ಬಳಸಬಹುದಲ್ಲ? ಮೋಸ, ತನ್ನ ಸಾಹಿತ್ಯಸೇವೆ ಮೋಸ, ಇಂದಿನ ಸಾರ್ವಜನಿಕ ಸತ್ಕಾರ ಮೋಸ. ತನ್ನ ಸಾಹಿತ್ಯ ಎಂತಹುದು? ಈಗ ತಾನು ನಡೆಸಿರುವನಲ್ಲ? ಇಂತಹ ವಿಚಾರಗಳನ್ನು ಬರೆದಿರುವನೆ ತಾನು? ಇಷ್ಟು ದಿನ ಅನುಭವಿಸಿದನಲ್ಲ? ಅದನ್ನು ಎಲ್ಲಿಯಾದರೂ ವರ್ಣಿಸಿರುವನೆ ತಾನು? ಪ್ರೇಮದ ಹೆಂಡತಿ – ಒಬ್ಬಾಕೆ, ಘಟಿಂಗತನದ ಹೆಂಡತಿ ಒಬ್ಬಾಕೆ. ಆ ಕತೆಯನ್ನು ಹೇಳಿರುವನೆ ತಾನು? ಹೇಳಲು ಭಾಷೆ ಇಲ್ಲ, ತಂತ್ರವಿಲ್ಲ, ಔಚಿತ್ಯವಲ್ಲ, ಹೇಳಿದರೆ ಕೇಳುವವರು ತಿಳಿದುಕೊಳ್ಳುವರೆ?

ಹುಚ್ಚ! ಹುಚ್ಚ! ಜನರು ತಿಳಿದುಕೊಳ್ಳುವರು ಎಂಬ ಆತ್ಮವಿಶ್ವಾಸದಿಂದ ಇಷ್ಟು ವರ್ಷಗಳ ವರೆಗೆ ' ನಿನ್ನದ ಆದ ಶೈಲಿಯಲ್ಲಿ ವಿಚಾರಪರಿಪ್ಲುತ, ವಿಚಾರ ಪ್ರಚೋದಕ' ಭಾಷಣಗಳನ್ನು ಎಷ್ಟು ಮಾಡಿರುವೆ ಗೊತ್ತಿದೆಯೆ? ಸಾಹಿತ್ಯಕೃತಿಗಳನ್ನು ಎಷ್ಟು ಬರೆದೆ? ಸಮಾಜ ಪ್ರಗತಿಹೊಂದಿದೆಯೆ ನಿನ್ನ "ಸೇವೆ"ಗಾಗಿ?

ಮೋಸ! ಇಡಿಯ ಪ್ರಪಂಚವೆ ಮೋಸ. ನಿಜವಿದ್ದುದೆಂದರೆ ಒಂದೇ – ನಮ್ಮ ಪಾಶವೀವೃತ್ತಿಯ ಜೀವನ. ಭರ್ತೃಹರಿಯು ಹೇಳುವಂತೆ, ಆಹಾರ, ನಿದ್ರಾ, ಭಯ, ಮೈಥುನ–ಇದಿಷ್ಟೆ ನಿಜವಾದ ಜೀವನ. ಮನುಷ್ಯನ ಸಹಜ ಜೀವನವೆಂದರೆ ಈ ವೃತ್ತಿಗಳಲ್ಲಿಯೆ. ಮಿಕ್ಕದೆಲ್ಲ ಕೃತಕ, ಮೋಸ; ಕೆಲ ಕಾಲ ಈ ವೃತ್ತಿಗಳನ್ನು ಹತ್ತಿಕ್ಕಿ ನಮ್ಮನ್ನು ನಾವೇ "ಸುಸಂಸ್ಕೃತ" ಎಂದುಕೊಳ್ಳುವೆವು; ಒಂದು ದಿನ ಒತ್ತಡ ತಡೆಯದಂತಾಗಿ ಯುದ್ಧ, ವ್ಯಭಿಚಾರ, ಸುಲಿಗೆಗಳಿಂದ ಹಿಂದಿನ ಎಲ್ಲ ನಿಗ್ರಹವನ್ನೂ ತೃಪ್ತಿಗೊಳಿಸಿಕೊಳ್ಳುತ್ತೇವೆ; ಆಗ ಕ್ಷಣಕಾಲ ನಾಚಿಕೆ; ಮುಖಕ್ಕೆ ಮುಖ ಇದಿರಾಗದೆ, ಬೆನ್ನಿಗೆ ಬೆನ್ನನ್ನು ತಗುಲಿಸಿ ಬಾಳುವೆವು, "ಸುಸಂಸ್ಕೃತ"ರಾಗುವೆವು; ಆಮೇಲೆ ಮತ್ತೆ—ಆಮೇಲೆ ಮತ್ತೆ—

ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರನೇಮಿಕ್ರಮೇಣ.

ಇಂದಿನ ಸಭೆಯಲ್ಲಿ ಇದೇ ವಿಷಯದ ಬಗ್ಗೆ ಮಾತನಾಡಿದರೆ? ಓ- ಮಾನಪತ್ರ ಸಮರ್ಪಣೆ ಒಂದಿದೆಯಲ್ಲವೆ? ವಿಧಿಯು ಕ್ರೂರ ಎನ್ನುವುದು ಇದಕ್ಕಾಗಿ. ನನ್ನ ಸಾಹಿತ್ಯಸೇವೆಯನ್ನಷ್ಟೆ ಅಲ್ಲ, ನನ್ನ ಆದರ್ಶದಾಂಪತ್ಯ ವನ್ನೂ ಹೊಗಳಿದ್ದಾರೆ ಮಾನಪತ್ರದಲ್ಲಿ!

ಎಂತಹ ಆದರ್ಶ! ಹತ್ತು ವರುಷಗಳಾದುವು "ದಾಂಪತ್ಯ" ಎಂಬು ದನ್ನರಿಯದೆ, ಹತ್ತು ವರ್ಷಗಳಾದುವು ಸಂಸಾರದ ನಾಟಕವನ್ನು ನಡೆಯಿಸಿ.

ಆದರೂ ಇಂದಿನ ಸಭೆಗೆ ನನ್ನೊಡನೆ ಬರಲು ಕುಮುದಳು ಒಪ್ಪಿದ ಳಲ್ಲ! ಆಶ್ಚರ್ಯ! ಹಿಂದೊಮ್ಮೆ ಹೀಗೆಯೆ ಒಪ್ಪಿದ್ದಳು ಆಶ್ಚರ್ಯವಾಗುವಂತೆ, ಮೋಹನನ ಹೆಂಗೆಯಾದ ಮೇಲೆ ಮನೆಗೆ ಬಂದು ಇದ್ದುಕೊಂಡಿದ್ದಳು. ಹಾಂ .... ಈಗ ಸ್ಮರಣೆಗೆ ಬಂದಿತು, ಸೀರೆಯ ಸಂದರ್ಭ ನಡೆದದ್ದು ಆ ತರುವಾಯ, ಮೋಹನನ ಮೊದಲ ಹುಟ್ಟಿದ ಹಬ್ಬದ ದಿನ. ಆ ದಿನವೂ ಹೊರಟುಹೋಗಿದ್ದಳಲ್ಲ? ನನ್ನೊಡನೆ ಇರುವುದಕ್ಕೆ ಆಕೆಯು ಒಪ್ಪಿದರೂ ಕರಾರಿ ನಂತೆ ತಾನು ಬ್ರಹ್ಮಚಾರಿಯಾಗಿ ವರ್ತಿಸಿದ್ದರೂ ಹೊರಟು ಹೋಗಿದ್ದಳು. ಇಂದೂ ಹಾಗೆಯೆ ಮಾಡಿದರೆ? ಸತ್ಕಾರಸಭೆಯವರು ಕರೆಯಲು ಬರುವ ಷ್ಟರಲ್ಲಿ ಹೊರಟುಹೋದರೆ?

ರಾಮಣ್ಣನಿಗೆ ಗಾಬರಿಯಾದಂತಾಯಿತು. ಮೆಲ್ಲಗೆ ಕೆಳಗಿಳಿಯುವ ಪಾವಟಿಗೆ ಹತ್ತಿರ ಹೋಗಿ ನಿಂತುಕೊಂಡ. ಕೆಳಗಿನ್ನೂ ಕುಮುದಳ ಸದ್ದು ಇದೆ!

ಛಿ! ಎಂತಹ ಅಧೀರವೃತ್ತಿಯವನಾಗಿದ್ದಾನೆ ತಾನು! .... ಓ - ಇನ್ನೊಂದು ವಿಚಾರ. ಮೋಹನನು ಮನೆಯಲ್ಲಿಲ್ಲ, ಅವನನ್ನು ಬಿಟ್ಟು ಆಕೆ ಹೋಗಲಾರಳು.

ಮೋಹನನನ್ನು ಬಿಟ್ಟು ತಾನೂ ಇರಲಾರ, ಮೋಹನನನ್ನು ಬಿಟ್ಟು ಕುಮುದಳೂ ಇರಲಾರಳು; ಆದ್ದರಿಂದ ತಾನು-ಕುಮುದ ಒಬ್ಬರನ್ನೊಬ್ಬರು ಬಿಟ್ಟು ಇರಲಾರರು.

ಭಲೆ! ಇದೊಳ್ಳೆ ಲೆಕ್ಕ—ಎನ್ನುತ್ತ ಮತ್ತೆ ಮೇಲೆ ನಡೆದನು.

ಒಂದೇ ವಸ್ತುವಿಗೆ ಸಮವಾದ ಎರಡು ವಸ್ತುಗಳು ಪರಸ್ಪರ ಸಮವಾಗಿರುವುವು.

ಒಂದೇ ಜೀವಕ್ಕೆ ಅಂಟಿಕೊಂಡ ಎರಡು ಜೀವಗಳು ಪರಸ್ಪರ ಅಂಟಿಕೊಂಡಿರಬೇಕಲ್ಲವೆ ?

ಭವಭೂತಿಯೂ ಹೇಳಿದ್ದಾನೆ, "ಆನಂದಗ್ರಂಥಿರೇಕೋಽಯಂ ಅಪತ್ಯಮಿತಿ ಬಧ್ಯತೇ" ಎಂದು ; ಗಂಡ-ಹೆಂಡಿರನ್ನು ಒಂದುಗೂಡಿಸುವ ಗಂಟು ಮಗು ಎಂದರೆ.

ಮೋಹನನನ್ನು ಕರೆದುಕೊಂಡು ಸೋದರತ್ತೆಯ ಮನೆಯಿಂದ ಮೊದಲ ಸಲ ಕುಮುದಳು ಬಂದಾಗ ತಾನೂ ಹಾಗೆಯೆ ತಿಳಿದಿದ್ದನು. ಅವನ ಬಗ್ಗೆ ತನ್ನೊಡನೆ ಮಾತುಗಳನ್ನಾಡುವಳು, ಸೋದರತ್ತೆಯ ಮನೆಯಲ್ಲಿಯ ಅವನ ಲೀಲೆಗಳನ್ನು ವರ್ಣಿಸುವಳು, ತಾನು ಮಗುವನ್ನಾಡಿಸುತ್ತಿದ್ದಾಗ ಹೆಮ್ಮೆ-ಸಂತೋಷಗಳಿಂದ ತನ್ನನ್ನು ನೋಡುವಳು ; ಕ್ರಮೇಣ, ತನಗೆನ್ನಿಸಿತ್ತು ತಮ್ಮ - ತಮ್ಮೊಳಗಿನ ವೈಮನಸ್ಯ ದೂರಾಗಿ ತಾನೂ ಕುಮುದಳೂ - ತಾನೂ ಕುಮುದಳೂ—ಏನು ?

ಪ್ರೇಮದ ಸಂಸಾರವನ್ನು ನಡೆಯಿಸಬಹುದೆಂದೆ ? ಅಲ್ಲ - ಆ ರೀತಿ ತನಗೆ ವಿಚಾರವೆ ಬರುತ್ತಿರಲಿಲ್ಲ. ತಾನೂ ಕುಮುದಳೂ ಮೊದಲಿನಂತೆ ಇರಬಹುದು ಎಂಬ ಆಶೆ ಹುಟ್ಟಿತ್ತು. ಮೊದಲಿನಂತೆ ಯಾಕೆ ಇರಬಾರದು ಎಂದು - ಒಮ್ಮೆ ಧೈರ್ಯವನ್ನು ತಂದುಕೊಂಡು ಆಕೆಯನ್ನು ಕೇಳಿಯೂ ಬಿಟ್ಟಿದ್ದ !

"ಮೊದಲಿನ್ಹಾಂಗಂದ್ರ ?" ಎಂದು ಕುಮುದ ಮರುಸವಾಲನ್ನು ಹಾಕಿದ್ದಳು.

"ಅಲ್ಲ-ಅಂದ್ರ-ಸುಮ್ಮನೆ ಹೀಂಗ ಇರೋದಕಿಂತ—ಅಂತಂದೆ."

"ಹೀಂಗಂದ್ರ ?"

"ಅಲ್ಲ - ಯಾವುದು ಇದು ಇಲ್ದೆ - ಅಂದ್ರ—"

"ಈಗೇನು ಕಡಿಮೆ ಬಿದ್ದದ ನಿಮಗ ?

"ಕಡಿಮೆ ಅಂತಲ್ಲ. ಅಂದ್ರ - ಖರೇ ಅಂದ್ರ—ಒಂದೇ ಮನೀವಳಗ ಇದ್ದೂ - ಯಾಕ—"

"ಬೇಕಾದ್ರೆ ಒಂದೇ ಮನೀವಳಗ ಇರೋದು ಬ್ಯಾಡ "

"ಛೆ ! ಛೆ ! ಹಾಗನ್ನಲಿಲ್ಲ ನಾನು—"

"ಮತ್ತೆ ಹ್ಯಾಗಂದ್ರಿ ?"

ಹೇಗೆ ಅನ್ನುತ್ತಿದ್ದನೊ, ಏನು ಅನ್ನುತ್ತಿದ್ದನೊ ! ಆದರೆ ಆ ಪ್ರಸಂಗವೆ ಬಂದಿರಲಿಲ್ಲ. ಇಷ್ಟೆಲ್ಲ ಮಾತ ನಡೆವಾಗ ಕುಮುದಳ ಬಗಲಲ್ಲಿದ್ದ ಕೂಸು –ಮೋಹನ–ಒಂದೇ ಸವನೆ ತನ್ನ ಕಡೆ ಬರಲು ಯತ್ನಿಸುತ್ತಿದ್ದ, ಕುಮುದಳು ಅಭ್ಯಾನಬಲದಿಂದಲೆ ಎನ್ನುವಂತೆ ಮಗುವನ್ನು ಗಟ್ಟಿಯಾಗಿ ಹಿಡಿದು ಕೂಡ್ರಿಸಿ ಕೊಳ್ಳ ಯತ್ನಿಸುತ್ತಿದ್ದಳು, ಮಗುವಿನ ಹಟ ಹೆಚ್ಚಾಗಿತ್ತು, ಕುಮುದಳು ತುಸು ಬಲದಿಂದಲೆ ಮಗುವನ್ನು ತಡೆದಿದ್ದಳೊ ಏನೊ – ಮಗು ಮುಂದೆ ಕೈಮಾಡಿ ಅಳುವುದರ ಸೂಚನೆಯನ್ನು ಕೊಟ್ಟಿತ್ತು. ರಾಮಣ್ಣನ ಜೀವ ಉಳಿದಂತಾಗಿತ್ತು. ಇದುವರೆಗಿನ ಸಂವಾದ, ಸಂಭಾಷಣೆ ಯಾವ ರೀತಿ ಯಿಂದಲೂ ತಾನು ಬಯಸಿದಂತೆ ನಾಗಿರಲಿಲ್ಲ. ಹೇಳಬೇಕೆಂದು ಹಟ-ದಿಂದ ನೆನೆದಿಟ್ಟುಕೊಂಡ ಮಾತುಗಳೆಲ್ಲ ನರ್ವನಾಮಗಳಾಗಿಬಿಟ್ಟಿದ್ದುವು. ಚರ್ಚೆಯನ್ನು ಮುಂದೆ ಹೇಗೆ ನಾಗಿಸಬೇಕೆಂಬುದೆ ತಿಳಿಯದಾಗಿತ್ತು. ಹೀಗಾಗಿ ಮುಂದೆ ಕೈಮಾಡಿ ತನ್ನ ಕಡೆ ಬರಬೇಕೆನ್ನುವ ಮಗು ವಿಪತ್ತಿ-ನಿಂದ ತನ್ನನ್ನು ಪಾರುಗಾಣಿಸಲು ಇಳಿದುಬಂದ ಪರಮಾತ್ಮನ ಅವತಾರ ಎನ್ನುವಂತೆ ಕಂಡಿತು. ಶ್ರದ್ಧಾವಂತ ಭಕ್ತನಂತೆ ತಾನೂ ಮುಂದೆ ಕೈ ಮಾಡಿದ್ದ ಕೂಸನ್ನು ಎತ್ತಿಕೊಳ್ಳಲು. ಚಿಕ್ಕಮಕ್ಕಳಿಗೆ ಅದೆಲ್ಲಿಂದ ಬರುವುದೊ ಕಿಡಿಗೇಡಿತನದ ಬುದ್ಧಿ ? ಇದುವರೆಗೆ ತನ್ನ ಕಡೆ ಬರಲು ಹಟ ಮಾಡುವ ಮಗು, ತಾನು ಕೈಮುಂದೆ ಮಾಡಿದೊಡನೆ ಕುಳಿತಲ್ಲಿಯೆ ತಾಯಿಯನ್ನು ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡಿತ್ತು. ಅದು ಹಾಗೆ ಮಾಡೀತೆಂಬ ಕಲ್ಪನೆಯಿಲ್ಲದೆ ಅದನ್ನು ಎತ್ತಿಕೊಳ್ಳಲು ಹೋದ ತನ್ನ ಕೈಗಳು ಮಗುವಿನ ಕೈಯನ್ನು ತಾಯಿಯಿಂದ ಬಿಡಿಸಿಕೊಳ್ಳುವಾಗ —

ನೆನಪಿಗಾಗಿ ಈಗಲೂ ಮೈ ನಡುಗಿತು. ರಾಮಣ್ಣನು ಆ ಪರಿ ವಿದ್ಯುತ್ಸಂಚಾರದ ಸುಖವನ್ನು ಅವನೆಂದಿಗೂ ಅನುಭವಿಸಿರಲಿಲ್ಲ. ಒಂದು ಕ್ಷಣ, ಅಲ್ಲ ಒಂದು ಹತ್ತರಷ್ಟು–ಅಲ್ಲ–ನೂರರಷ್ಟು, ಕಣ್ಣೆವೆ ಬಡೆಯುವಷ್ಟು ಅಲ್ಪಕಾಲದಲ್ಲಿ ತನ್ನ ಮೈಯಲ್ಲಿ, ಕುಮುದಳ ಮೈಯಲ್ಲಿ, ತನ್ನಿಂದ ಅವಳಲ್ಲಿ, ಅವಳಿಂದ

ತನ್ನಲ್ಲಿ ಬರೀ ವಿದ್ಯುತ್ಸಂಚಾರವಷ್ಟೆ ಅಲ್ಲ, ಆ ಅನುಭವದ ಬಗ್ಗೆ ಒಬ್ಬರಿಂದೊಬ್ಬರಿಗೆ ಸಂದೇಶ, ಆ ಸಂದೇಶಕ್ಕೆ ಒಬ್ಬರಿಂದೊಬ್ಬರಿಗೆ ಉತ್ತರ ಆ ಉತ್ತರಕ್ಕೆ ಒಬ್ಬರೊಬ್ಬರ ಒಪ್ಪಿಗೆ—ಇದಿಷ್ಟೋ ಅಲ್ಲದೆ ಇನ್ನೂ ಏನೇನೊ ನಡೆದು ಹೋಗಿರಬೇಕು. ಅಷ್ಟು ಅವಧಿ ತಾವಿಬ್ಬರೂ ಗೊಂಬೆಗಳಂತೆ ನಿಂತುಕೊಂಡಂತಿದ್ದಿತು.

ಎಷ್ಟು ಯುಗಗಳ, ಎಷ್ಟು ಜನ್ಮಗಳ ಅನುಭವ ಆ ಕ್ಷಣಾಂಶದಲ್ಲಿ ಮಿಂಚಿಹೋಗಿತ್ತೊ! ಎರಡು ಜೀವಗಳು ಸೃಷ್ಟಿ ತಮಗೊಪ್ಪಿದ ಕರ್ತವ್ಯದ ಹೊಣೆಯನ್ನು, ಆಳವನ್ನು, ಅರಿವನ್ನು ಆ ಕ್ಷಣಾಂಶದಲ್ಲಿ ಅನುಭವಿಸಿದ್ದುವು. ಎರಡು ದೇಹಗಳು ಅಕಸ್ಮಾತ್ತಾಗಿ ಒಂದನ್ನೊಂದು ಹೊಂದಿ ಎರಡೂ ಇಲ್ಲ ದಂತಾಗಿದ್ದುವು.

ರಾಮಣ್ಣ ನಕ್ಕ, ಅತ್ಯಂತ ನಿರಾಶೆಯಿಂದ—ಅಂದಿನ ನೆನಪಿಗಾಗಿ, ಆ ಬಗ್ಗೆ ಇಂದಿನ ತನ್ನ ವಿಚಾರಗಳಿಗಾಗಿ. ಎರಡು ದೇಹಗಳು ಇಲ್ಲವಾಗಿದ್ದುವೆಂದು ತನ್ನ ಸಾಹಿತ್ಯಶಕ್ತಿಯು ಕಲ್ಪನೆಯಿಂದ ಹೇಳಲಿ, ನಿಜವಾಗಿ ನಡೆದದ್ದು ಒಂದೇ ದೇಹ ಇಲ್ಲದಂತಾಗಿತ್ತು. ತನಗೆ ಎಚ್ಚರವಾಯಿತೆನ್ನುವಷ್ಟರಲ್ಲಿ ಕುಮುದ ಅಲ್ಲಿ ನಿಂತಿರಲಿಲ್ಲ.

ಆದರೂ ರಾಮಣ್ಣನಿಗೆ ಆನಂದವೆ ಎನ್ನಿಸಿತು. ಆ ಒಂದು ಕ್ಷಣದ ಅನುಭವದಲ್ಲಿ ಹಿಂದಿನ ಅನೇಕ ತಿಂಗಳುಗಳ ಮಾನಸಿಕ ಯಾತನೆಯನ್ನು ಮರೆತುಬಿಟ್ಟಿದ್ದನು, ಅಲ್ಲ – ಕಳೆದುಕೊಂಡಿದ್ದನು. ಆಗ ಇನ್ನೊಂದು ವಿಚಾರವೂ ಹೊಳೆದಿತ್ತು. ಇಷ್ಟು ತಿಂಗಳುಗಳ ವರೆಗೆ ಕುಮುದ ಆ ರೀತಿ ಅಸಹಕಾರವನ್ನು ತೋರಿಸಿ, ಕೊನೆಗೆ ಸಹಕಾರವಿಲ್ಲದೆ ತನ್ನೊಟ್ಟಿಗೆ ಬಂದು ಇರಲು ಯಾಕೆ ಒಪ್ಪಿದ್ದಳು ಎಂಬ ವಿಚಾರವೂ ಆಗ ಅವನಿಗೆ ಹೊಳೆದಿತ್ತು.

ಮೊದಲಿನಂತೆ ಕುಮುದಳು ಅಂದಿಗೂ ತನ್ನನ್ನು ಪ್ರೀತಿಸುತ್ತಿದ್ದಳು!

ಆ ಬಗ್ಗೆ ರಾಮಣ್ಣನಿಗೆ ಸಂಶಯವೆ ಉಳಿದಿರಲಿಲ್ಲ. ಆಕೆಯ ಮೈಯನ್ನು ಸೋಂಕಿದ ಅವನ ಕೈ ಆ ಭರವಸೆಯನ್ನು ಕೊಟ್ಟಿತ್ತು. ಎಂತಹ ಚಮತ್ಕಾರ ಸೃಷ್ಟಿಯಲ್ಲಿ! ದೇಹ ಜಡ ಎಂದು ತಿಳಿಯುತ್ತೇವೆ! ಆದರೆ ಅದೇ ದೇಹ ಒಂದು ಅತ್ಯಂತ ಸೂಕ್ಷ್ಮವಾದ, ಅತ್ಯಂತ ಗಹನವಾದ ಅನುಭವವನ್ನು ಎಷ್ಟು ಸ್ವಲ್ಪದರಲ್ಲಿ ಮತ್ತು ಸುಲಭವಾಗಿ ತಿಳಿಹಿಸಿ

ಕೊಡುವುದೆಂಬುದನ್ನು ನೆನೆದರೆ ದೇಹದ ಬಗ್ಗೆ ನನಗಿದ್ದ ತಪ್ಪು ಕಲ್ಪನೆ ದೂರಾಗಬೇಕು. ದೇಹ ನಶ್ವರವೇನೊ ನಿಜ, ಆದರೆ ಜಡವಾದುದಲ್ಲ.

ಅಂದು ತನ್ನ ಕೈಸೋಂಕಿಗೆ ಕುಮುದಳ ದೇಹ ಹೇಗೆ ತಟ್ಟನೆ ಉತ್ತರವನ್ನು ಕೊಟ್ಟಿತ್ತು ? ಕ್ರಿಯೆ–ಪ್ರತಿಕ್ರಿಯೆ ನ್ಯಾಯದಂತೆ ತನ್ನ ಕೈ ತಟ್ಟಿದೊಡನೆ ಅವಳ ದೇಹ ಬಿರುಸಾಗಿ ನೆಟಿದು ನಿಲ್ಲದೆ ಎಷ್ಟು ಮಿದುವಾಯಿತೆಂದರೆ ಇಡೀ ದೇಹವೆ ತನ್ನ ಕೈಯ ಮುಷ್ಟಿಯಲ್ಲಿ ಬರುವುದೇನೊ ಎಂದೆನ್ನಿಸಿತ್ತು. ಚಳಿಯ ಸುಖವನ್ನು ಅನುಭವಿಸುವವನು ಮುದ್ದೆ ಮುದ್ದೆಯಾಗಿ ಹೊದಿಕೆಯಲ್ಲಿ ಮುದುಡಿಕೊಳ್ಳುವಂತೆ ಕುಮುದಳ ಇಡಿಯ ದೇಹ ತನ್ನ ಮುಷ್ಟಿಯಲ್ಲಿ ಮುದುಡಿಕೊಳ್ಳುವುದೇನೊ ಎಂದೆನ್ನಿಸಿತ್ತು.

ಅಂದಿನ ಭರವಸೆ ರಾಮಣ್ಣನಿಗೆ ಇಂದಿಗೂ ಉಳಿದಿದೆ. ಆಕೆ ತನ್ನೊಡನೆ ಎಷ್ಟು ದೂರದಲ್ಲಿದ್ದಳು ಅಷ್ಟು ಹತ್ತಿರದಲ್ಲಿದ್ದಳು ಎಂದು ಅವನ ಭರವಸೆ. ಒಂದೆರಡು ಸಲ ಪ್ರತಿಭಟಿಸಿ ಇನ್ನಿಷ್ಟು ದೂರ ಹೋಗಬಯಸಿದ್ದರೂ ರಬ್ಬರಿನ ದಾರಕ್ಕೆ ಕಟ್ಟಿದ ಚೆಂಡಿನಂತೆ ಮತ್ತೆ ಹತ್ತಿರಕ್ಕೇ ಬಂದಿದ್ದಳು.

ಕುಮುದ ತನ್ನನ್ನು ಪ್ರೀತಿಸುತ್ತಿದ್ದಾಳೆ !

ಇಂದು ಆಕೆ ಸತ್ಕಾರಸಭೆಗೆ ಬರಲೊಪ್ಪಿದ್ದೂ ಅದಕಾಗಿಯೆ.

ಯಾರು ಹೇಳಬಲ್ಲರು ? ಇಂದಿನ ಸತ್ಕಾರದ ವೈಭವವನ್ನು ನೋಡಿ ಆಕೆಯ ಹೃದಯ ಕರಗಿದರೂ ಕರಗಬಹುದು.

ಆ ಆಶೆಯಿಂದ ರಾಮಣ್ಣ ಕೈಗಡಿಯಾರವನ್ನು ನೋಡಿಕೊಂಡ. ಧೂ ! ಇನ್ನೂ ಏನಿಲ್ಲೆಂದರೂ ಅರ್ಧಗಂಟೆ ! ಬೇಗ ಬಂದು ಬಿಡಬಾರದೆ ? ಧೂ ! ನಮ್ಮ ಜನಕ್ಕೆ ವೇಳೆಯ ನಿಯಮಿತತನವೆ ಗೊತ್ತಿಲ್ಲ, ಎಂದು ಗೊಣಗುತ್ತ ಕಿಟಕಿಯ ಕಡೆ ನಡೆದ, ಏನಾದರೂ ಕಾಣಬಹುದೆಂಬ ಆಶೆಯಿಂದ.

## ೬

ಮೋಹನನ ದಾರಿಯನ್ನು ಪ್ರತೀಕ್ಷಿಸುವ ಕುಮುದಳಿಗೆ ಒಮ್ಮೆಲೆ ಹೆದರಿಕೆಯಾದಂತಾಯಿತು. ಬೀದಿಯಲ್ಲಿ ಹೆಚ್ಚಾದ ಸುಳಿವೇ ಇದ್ದಿರಲಿಲ್ಲ. ಸಾಯಂಕಾಲವಾಗಿದೆ, ಪ್ರತಿಯೊಂದು ಪ್ರಾಣಿಯೂ ಮನೆಯ ಆಶ್ರಯವನ್ನು

ಸೇರುವ ಸಮಯ. ಮನುಷ್ಯ ಮಾತ್ರ ಎಲ್ಲ ಪ್ರಾಣಿಗಳಿಗೂ ಹೊರತಾದ ಪ್ರಾಣಿ-ಎಂಬ ವಿಚಾರ ಹೊಳೆದು ಆಕೆಯ ಮುಖದಲ್ಲಿ ಮುಗುಳ್ನಗೆ ಮೂಡಿತು. ಮನುಷ್ಯನ ನಾಗರಕ ಜೀವನವೆಂದರೆ ಸೃಷ್ಟಿ ನಿಯಮದ ವಿರುದ್ಧ ಜೀವನ. ಪ್ರತಿಯೊಂದು ಪ್ರಾಣಿ ಮನೆಯ ಆಶ್ರಯವನ್ನು ಸೇರ ಬೇಕೆನ್ನುವ ಈ ಸಾಯಂಕಾಲದ ಸಮಯದಲ್ಲಿ ನಾಗರಕನು ಮನೆಯಿಂದ ಹೊರಬೀಳುವನು ! ವಿಕ್ಷಿಪ್ತ ಪ್ರಾಣಿ. ತನ್ನ ಮೋಹನ ಇನ್ನಿಷ್ಟು ವಿಕ್ಷಿಪ್ತ.

ತಂದೆಯಂತೆ ಮಗ ! ಮನಸ್ಸಿಗೆ ಬಂದಂತೆ ನಡೆಯುವವ. ನಾನು ಬಾ ಎಂದಾಗ ಬರುವನೆ ? ಬಂದಾನು, ಕೊನೆಗೆ ಹಸಿವೆಯಾದಾಗ – ಎನ್ನುತ್ತ ಮತ್ತೆ ಒಳಕ್ಕೆ ನಡೆದಳು ಕುಮುದ.

ಹಸಿವೆಯಾದಾಗ ಬಂದಾನು–ಎನ್ನುವಾಗ ಮತ್ತೊಂದು ವಿಚಾರ ಬಂದು ಕುಮುದ ತನ್ನಷ್ಟಕ್ಕೆಯೆ ಒಳಗಿಂದೊಳಗೆ ನಕ್ಕಳು. ತಂದೆಯಂತೆ ಮಗ. ಮನಸ್ಸಿನಲ್ಲಿ ವಿಚಾರ ಬಂದಿತೆಂದರೆ ಇನ್ನೊಬ್ಬರ ಪರಿವೆ ಇಲ್ಲದೆ ಅದನ್ನು ಪೂರಯಿಸಿಕೊಳ್ಳುವ ಹಟ. ರಾಮಣ್ಣ ಹಾಗೆಯೆ.

ಎಷ್ಟು ಸುಖದ ನೆನಪುಗಳಿವೆ ತನಗೆ ! ಇಂದಿಗೂ ತಾನು ರಾಮಣ್ಣನ ಸಾನ್ನಿಧ್ಯವನ್ನು ಬಯಸುತ್ತಿದ್ದುದು ಅದಕಾಗಿಯೆ. ಎಷ್ಟು ಸಲ ನಿರ್ಣಯಕ್ಕೆ ಬಂದಿರಲಿಲ್ಲ ? ರಾಮಣ್ಣನ ಪ್ರೇಮ ತನ್ನಲ್ಲಿರುವ ಭರವಸೆ ಇಲ್ಲ; ರಾಮಣ್ಣನಿಗೆ ತನ್ನ ಬಗ್ಗೆ ಆದರವಿದ್ದ ಭರವಸೆ ಇಲ್ಲ; ರಾಮಣ್ಣನ ಮನೆಯಲ್ಲಿ, ರಾಮಣ್ಣನ ಮನದಲ್ಲಿ ತನಗಾಗಿ ಮಾನವಿದ್ದಂತೆಯೂ ಇಲ್ಲ; ತಾನೆಂದರೆ ಪಶ್ಚಾತ್ತಾಪ-ಕ್ಕಾಗಿ ಮೂರ್ತಿವೆತ್ತ ಪ್ರಾಯಶ್ಚಿತ್ತ ರಾಮಣ್ಣನ ದೃಷ್ಟಿಯಲ್ಲಿ. ಇದನ್ನೆಲ್ಲ ಅರಿತೂ ತಾನು ಇಲ್ಲಿಯೆ ಉಳಿದುಕೊಂಡಿದ್ದಾಳೆ. ಅದೊಂದು ಕಠಿಣ ತಪಸ್ಸಿನಂತಾಗಿದೆ, ರಾಮಣ್ಣನೊಡನಿದ್ದೂ ರಾಮಣ್ಣನಿಂದ ದೂರವಾಗಿರು-ವುದು. ಆದರೂ ತಾನು ಉಳಿದುಕೊಂಡಿದ್ದಾಳೆ.

ರಾಮಣ್ಣನ ಅವತಾರವೆ ಮೋಹನ ! ಅಲ್ಲ—ರಾಮಣ್ಣನೊಡನೆ ತಾನು ಬಾಳಿದ ಸುಖದ ಅನುಭವದ ಪ್ರತೀಕ ಮೋಹನ. ಅದಕಾಗಿಯೆ ಮೋಹನನ ಬಗ್ಗೆ ತನಗೆ ಇಷ್ಟೊಂದು ಮಮತೆ ಇರಬಹುದೆ ? ತಾಯ್ತನದ ಮಮತೆಗೆ ನಿಸ್ವಾರ್ಥದೃಷ್ಟಿ ಇರುವುದೆಂದು ಹೇಳುತ್ತಾರೆ. ತನ್ನದಂತೂ ಹಾಗಿಲ್ಲ ಎಂಬ ವಿಚಾರ ಅನೇಕಸಲ ಕುಮುದಳಿಗೆ ಬರುತ್ತಿದ್ದಿತು.

ಮೋಹನನನ್ನು ತಾನು ಪ್ರೀತಿಸುತ್ತಿದ್ದುದು ಮೋಹನನಿಗಾಗಿ ಅಲ್ಲ, ಮೋಹನನಲ್ಲಿ ಕಂಡುಬರುವ ರಾಮಣ್ಣನ ಗುರುತಿಗಾಗಿ. ಅದಕ್ಕಾಗಿಯೆ ಮೊದಮೊದಲು ಮೋಹನನನ್ನು ಕಂಡರೆ ಒಮ್ಮೊಮ್ಮೆ ಇಲ್ಲದ ಸಿಟ್ಟು ಬರುತ್ತಿತ್ತು ತನಗೆ. ಪಾಪ ! ಇನ್ನೊಬ್ಬರ ಮೇಲಿನ ಸಿಟ್ಟಿಗಾಗಿ ಮೋಹನನನ್ನು ಎಷ್ಟು ಸಲ ಹೊಡೆದಿರಲಿಲ್ಲ ತಾನು !

ಒಮ್ಮೆಯಂತೂ—ಅದನ್ನೆಂದಿಗೂ ಮರೆಯುವಂತಿರಲಿಲ್ಲ ಕುಮುದ. ಈಗಲೂ ಆ ದೃಶ್ಯ ಕಣ್ಣು ಕಟ್ಟಿದಂತಿದೆ. ಮೋಹನನನ್ನು ಎತ್ತಿಕೊಂಡು ತಾನು ನಿಂತಿದ್ದಾಳೆ; ಇದಿರಿನಲ್ಲಿ ರಾಮಣ್ಣ ಏನೇನೊ ಮಾತನಾಡುತ್ತಿದ್ದಾನೆ. ಗಂಡನ ಸ್ವಭಾವದಂತೆ ತನ್ನನ್ನು ಒಲಿಸಿಕೊಳ್ಳಲು ಯತ್ನಿಸುತ್ತಿದ್ದಾನೆ; ಅವನ ಕಣ್ಣೊಳಗಿನ ಕಳೆಯನ್ನು ನೋಡಿದಾಕ್ಷಣ ತನಗೆ ತಿಳಿದಿತ್ತು ರಾಮಣ್ಣನ ಹೃದಯ ತನಗಾಗಿ ಹಸಿದಿದೆ ಎಂದು. ಎಚ್ಚರದಿಂದಿರಬೇಕು, ಇವನಿಗೆ ನಾನೆಂದರೆ ಬರೀ ವಿಲಾಸದ ವಸ್ತುವಾಗಿದ್ದೇನೆ, ಹಿಂದಿನ ಕಾಲದ ಹೆಂಡಂದಿರು ಉಪಯೋಗಿಸುತ್ತಿದ್ದ ಎಂಜಲೆಲೆಯಾಗಿದ್ದೇನೆ. ನನಗೂ ಹಕ್ಕಿದೆ ಎಂಬುದನ್ನು ಇವನು ಮರೆತಿದ್ದಾನೆ, ಎಚ್ಚರದಿಂದಿರಬೇಕು – ಎಂದು ತಾನು ಹೆಚ್ಚು ಮಾತನಾಡದೆ ಅವನ ಮಾತಿನ ಬಲೆಯನ್ನು ತಪ್ಪಿಸಿಕೊಳ್ಳುತ್ತಲಿದ್ದಾಳೆ. ಆಗ ನಡೆಯಿತು ಮೋಹನನ ಕಿಡಿಗೇಡಿತನ; ಅವನನ್ನು ಕರೆದುಕೊಳ್ಳುವ ನೆವದಿಂದ ನಡೆಯಿತು ರಾಮಣ್ಣನ ಕಿಡಿಗೇಡಿತನ.

ಅಂದು ಮೋಹನನನ್ನು ತಾನು ಎಷ್ಟುಪರಿಯಾಗಿ ಥಳಿಸಿದ್ದಳು! ಯಾಕೆ? ಮುಂದೆ ತಿಳಿದಿತ್ತು ತನಗೆ ಯಾಕೆ ಎಂಬುದು. ಮೋಹನನನ್ನು ಥಳಿಸಿದ್ದು ಯಾಕೆ? ತನ್ನ ಅಸ್ಥಿರಸ್ವಭಾವವನ್ನು ಅವನು ಬಯಲಿಗೆಳೆದನೆಂದು. ರಾಮಣ್ಣನ ಕೈ ತನ್ನ ಎದೆಗೆ ಸೋಂಕಿದೊಡನೆ, ಆ ಕ್ಷಣದಲ್ಲಿ ತನ್ನ ಬುದ್ಧಿ–ನಿರ್ಣಯಗಳೆಲ್ಲ ಮಣ್ಣುಪಾಲಾಗಿದ್ದುವು. ಸೋಂಕಿದ ಕೈಯನ್ನು ಗಟ್ಟಿಯಾಗಿ ಹಿಡಿದುಕೊಳ್ಳ-ಬೇಕು, ಎದೆ ಹುಣ್ಣಾಗುವಂತೆ ಬಿಗಿಯಾಗಿ ಅವನನ್ನು ತಬ್ಬಿಕೊಳ್ಳಬೇಕು ಎಂದೆನ್ನಿಸಿತ್ತು. ಮೋಹನ ಹೆಚ್ಚಾಗಿ ಅಳತೊಡಗಿದ್ದ, ಪಾಪ ! ಆ ಕೂಸು ತನ್ನ ಕಸುವಿನ ಹಿಡಿತವನ್ನು ತಡೆಯದಾಗಿರಬಹುದು. ರಾಮಣ್ಣನಿಗಾಗಿ ತಾನು ಇದುವರೆಗೆ ಬುದ್ಧಿಪೂರ್ವಕವಾಗಿ ಬೆಳೆಯಿಸಿಕೊಂಡ ದ್ವೇಷವೆಲ್ಲ ಒಂದು ಕ್ಷಣದಲ್ಲಿ ಮಾಯವಾಗಿತ್ತಲ್ಲ! ಹಸಿದ ದೇಹ ನಿತ್ರಾಣವಾದಂತೆ

ನಡುಗುತ್ತಿತ್ತು; ತುಟಿ ತೋಯ್ದಿದ್ದುವು; ಹೃದಯದೊಳಗೆ ಎಲ್ಲಿಯೊ ಜುಮ್ ಎನ್ನಿಸಿದಂತಾಗಿತ್ತು; ತನ್ನ ಎಚ್ಚರವೆ ತಪ್ಪುವುದೇನೊ ಎಂದೆನ್ನಿಸಿತ್ತು. ಅಷ್ಟರಲ್ಲಿ ಮೋಹನನ ಅಳು ಕೇಳಿ ಎಚ್ಚರಾದಂತಾಯ್ತು, ತಾನು ತಟ್ಟನೆ ಒಳಗೆ ಹೋಗಿದ್ದಳು.

ಪಾಪ! ಮೋಹನನ ತಪ್ಪೇನು ಇದೆಲ್ಲ ನಡೆದುದರಲ್ಲಿ? ಆದರೂ ಆ ಕ್ಷಣದಲ್ಲಿ ಅಳುವ ಮೋಹನನು ಲಕ್ಷ್ಯಕ್ಕೆ ಬಂದೊಡನೆ ಬಲವಾಗಿ ಒಂದೇಟನ್ನು ಬಿಗಿದಿದ್ದಳು. ಅವನ ಅಳುವು ಹೆಚ್ಚಿದಂತೆ ತನ್ನ ಆವೇಶವೂ ಹೆಚ್ಚಿತ್ತು. ಒಳಗೆ ಹುದುಗಿದ್ದ ಎಲ್ಲ ದ್ವೇಷವೂ ಹೊರಬಿದ್ದಿತೇನೊ! ನನ್ನ ಮೂರ್ಖತನದ ಹೊರ-ಗುರುತು, ನನ್ನ ವ್ಯಭಿಚಾರವೃತ್ತಿಯ ಮೂರ್ತಿ, ನನ್ನನ್ನು ಅವಮಾನಕಾರಕ ಜೀವನದಲ್ಲಿ ಉಳಿಸಿದ ಕಾರಣ—ಎಂದು ಏನೇನೊ ಮನಸ್ಸಿನಲ್ಲಿ ಹೊಳೆದಿದ್ದು ತಾನು ಆ ವಿಚಾರಗಳ ಆವೇಶದ ತಾಳಕ್ಕೆ ಸರಿಯಾಗಿ ಎನ್ನುವಂತೆ ಮೋಹನನನ್ನು ಹೊಡೆದಿದ್ದಳಲ್ಲ?

ಆ ನೆನಪಿಗಾಗಿ ಇಂದು ಕುಮುದ ಗದಗದ ನಡುಗಿದಳು ಒಂದು ಕ್ಷಣ.

ಅದೆಂಥಾ ಪರಿ ಹೊಡೆದದ್ದು! ಹೊಡೆಹೊಡೆದಂತೆ ಆವೇಶ ಹೆಚ್ಚಾಗಿ ಮೈಮೇಲಿನ ಎಚ್ಚರವೆ ತಪ್ಪಿತ್ತೊ ಏನೊ ತನಗೆ! ರಾಮಣ್ಣ ಅಲ್ಲಿ ಬಂದುದು ಗೊತ್ತಿರಲಿಲ್ಲ, ತನ್ನನ್ನು ತಡೆದುದು ಗೊತ್ತಿರಲಿಲ್ಲ, ಕೊನೆಗೆ ತನ್ನದೊಂದು ಏಟು ರಾಮಣ್ಣನ ಭುಜಕ್ಕೆ ತಗುಲಿದಾಗೆಯೆ ತನಗೆ ಎಚ್ಚರವಾಗಿತ್ತು. ಅಳುವ ಮಗುವನ್ನು ಒಂದು ಕೈಯಿಂದೆತ್ತಿಕೊಂಡು, ಇನ್ನೊಂದು ಕೈಯಿಂದ ಎತ್ತಿದ ತನ್ನ ಕೈಯನ್ನು, ಸಿಟ್ಟಿನಿಂದಲ್ಲದಿದ್ದರೂ, ಬಲವಾಗಿ ತಡೆದು ಹಿಡಿದಿದ್ದಾನೆ ರಾಮಣ್ಣ.

ಅಂದು ರಾಮಣ್ಣ ಸಿಟ್ಟಿಗೆದ್ದಿದ್ದರೆ? ತನ್ನೊಡನೆ ಜಗಳಾಡಿದ್ದರೆ? ಆದರೆ, ರಾಮಣ್ಣ ಏನನ್ನೂ ಮಾಡಿರಲಿಲ್ಲ. ಅವನು ಸಿಟ್ಟಿಗೆದ್ದಿದ್ದರೆ ತಾನೂ ಸಿಟ್ಟಿಗೇಳುತ್ತಿದ್ದಳು, ಜಗಳಾಡಿದ್ದರೆ ತಾನೂ ಆವೇಶದಿಂದ ಕೂಗಾಡಬಹುದಿತ್ತು, ಕೊನೆಗೆ ಅವನು ತನ್ನನ್ನೆ ಚನ್ನಾಗಿ ಹೊಡೆದಿದ್ದರೂ ಸರಿ ಎನ್ನಿಸಬಹುದಿತ್ತು. ಆದರೆ ಆತ ಏನನ್ನೂ ಮಾಡಿರಲಿಲ್ಲ. ಮಗುವನ್ನೆತ್ತಿಕೊಂಡು ತನ್ನನ್ನು ತಡೆದು, ತಾನೇ ಅಪರಾಧ ಮಾಡಿರುವನೊ ಎನ್ನುನಂತೆ ಕರುಣಾಜನಕ ಮುಖ ಮುದ್ರೆಯಿಂದ ತನ್ನನ್ನು ನೋಡುತ್ತ ನಿಂತುಬಿಟ್ಟಿದ್ದ. ಒಮ್ಮೆ

ಅನ್ನಿಸಿತ್ತು ಆ ಪರಿ ನಿಂತುದಕ್ಕಾಗಿ ಅವನಿಗೆಯೆ ಏಟನ್ನು ಕೊಡಬೇಕು ಎಂದು ಅವನು ಸುಮ್ಮನೆ ನಿಂತುದಕ್ಕೆ ತನಗೆ ಅಸಹನೀಯ ನಾಚಿಕೆಯಾಗಿತ್ತು.

"ಬ್ಯಾಡಿದ್ದರ ನಾನೇ ಹೊರಗೆ ಹೋಗ್ತೀನಿ" ಅಂದಿದ್ದ.

ತನಗೆ ಮೊದಲು ಆ ಮಾತಿನ ಸಂದರ್ಭವೆ ತಿಳಿದಿರಲಿಲ್ಲ.

"ನನ್ನಿಂದ ನಿನಗ ಇಷ್ಟೊಂದು ತ್ರಾಸ ಆಗಿದ್ದರ ನಾನು ಮನೆ ಬಿಟ್ಟು ಹೋಗ್ತೀನಿ" ಅಂದಿದ್ದ.

ಕೊನೆಗೂ ಮಾತನಾಡಿದ, ಮಾತಿಗೆ ಮಾತನ್ನು ಇದಿರಾಡಿ ಮನಸ್ಸನ್ನು ಹಗುರಮಾಡಿಕೊಳ್ಳಲು ಅವಕಾಶ ಸಿಕ್ಕಿತ್ತು.

"ನೀವು ಯಾಕ ಹೋಗ್ತೀರಿ, ಮನೇ ಯಜಮಾನರು ನೀವು!" ಎಂದಿದ್ದಳು—ತಾನು.

"ನನ್ಹಾಂಗ ನಿನ್ದೂ ಮನೆ ಇದು, ಕುಮುದಾ"

"ನನ್ನ ಮನೆ ಹ್ಯಾಂಗಾದೀತು? ಗತಿಗಿಲ್ದೆ ಆಶ್ರಯಕ್ಕ ಬಿದ್ದ ಹೆಣ್ಣು ನಾನು!"

"ಕುಮುದಾ, ಕುಮುದಾ, ಇಂಥಾ ಮಾತನ್ನಾಡಬಾರದು ನೀನು" ಎಂದು ಬೇಡಿಕೊಂಡಿದ್ದ.

"ಅಂದ್ರ ಎಂಥಾ ಮಾತನ್ನ ಆಡಬೇಕು? ನನ್ನ ಮಕ್ಕಳ ಮ್ಯಾಲ ಕೈ ಮಾಡ್ಲಿಕ್ಕೆ ನನಗಧಿಕಾರ ಇಲ್ಲ, ಈ ಮನೀವಳ್ಗ!" ಆ ಮಾತಿಗೆ ತನಗೆ ಅಳು ತಡೆಯುದಾಗಿತ್ತು.

"ನಿನ್ಗ ಯಾವ ಅಧಿಕಾರಕ್ಕೂ ಕೊರತೆ ಇಲ್ಲ, ಕುಮುದಾ, ಈ ಮನೀ-ವಳಗ"

"ನನಗ ನಿಂ ಮನೀನೂ ಬ್ಯಾಡ, ಅಧಿಕಾರಾನೂ ಬ್ಯಾಡ" ಎನ್ನುತ್ತ ಅವನು ಹಿಡಿದಿದ್ದ ತನ್ನ ಕೈಯನ್ನು ಕೊಸರಿಕೊಳ್ಳಲು ಯತ್ನಿಸಿದ್ದಳು.

"ಕುಮುದಾ—" ರಾಮಣ್ಣ ಕೈಯನ್ನು ಬಿಟ್ಟಿರಲಿಲ್ಲ –"ಕುಮುದಾ, ನನಗೆ ಗೊತ್ತಿದೆ ನಿನಗ ಯಾವುದೊ ಅಸಮಾಧಾನ ಇದೆ ಅಂತ. ಹೇಳು. ನನ್ನಿಂದ ಅದು ದೂರ ಆಗೋಹಾಗಿದ್ದರ ನಾನು ಬೇಕಾದ್ದನ್ನು ಮಾಡ್ಲಿಕ್ಕೆ ತಯ್ಯಾರಿದ್ದೀನಿ. ನನ್ದೆ ಏನಾದ್ರೂ ತಪ್ಪಾಗಿದ್ದರ ಹೇಳು—"

"ನಿಂ ತಪ್ಪು! ಅಯ್ಯಯ್ಯ! ನಿಮ್ಮಿಂದ ಎಂದಾದರೂ ತಪ್ಪಾದೀತ?

ಬುದ್ಧಿವಂತರು, ಹೆಸರಾದ ಸಾಹಿತಿ, ನೀವು ಮಾಡಿದ್ದನ್ನ ಮೆಚ್ಚುವವರು ಇಷ್ಟು ಜನ ಇರೋವಾಗ—"

"ಕುಮುದಾ, ಈ ರೀತಿ ನೀನು ಮಾತನಾಡಿದರ ನಾನು ಏನು ಹೇಳಲಿ ? ಮನೀವಳಗ, ಅದೂ ನಿನ್ನ ಕೂಡ ನಾನು ಒಣ ಪೊಡ್ಡಿಸ್ತನದ ಸೋಗಿನಿಂದ ನಡೆದುಕೊಂಡೀನೇ ಎಂದಾದರೂ ?"

"ನನ್ನ ಕೂಡ ನೀವು ಹ್ಯಾಂಗ ನಡೆದುಕೊಂಡರೂ ಅಷ್ಟೆ, ಹಾದಿ ಬಿಟ್ಟು ಗತಿಗೆಟ್ಟ ಹೆಂಗಸು—"

"ಕುಮುದಾ, ಕುಮುದಾ, ಈ ಪರಿ ಕಠೋರವಾಗಿ ಮಾತಾಡಬ್ಯಾಡ. ಹಾದಿಬಿಟ್ಟ ಮಾತು ನುಡೀಬ್ಯಾಡ. ಹಾದಿ ಬಿಟ್ಟವ ನಾನು. ನನ್ನನ್ನ ಸರಿಯಾದ ಹಾದಿಗೆ ಹಚ್ಚುವಾಕೆ ನೀ, ಕುಮುದಾ—"

"ನೀವೂ ಬ್ಯಾಡ, ನಿಮ್ಮ ಹಾದೀನೂ ಬ್ಯಾಡ" ಎಂದು ತಾನು ಕೊನೆಗೊಮ್ಮೆ ಕೈಕೊಸರಿಕೊಂಡು ದೂರ ಸರಿದಿದ್ದಳು.

ಕೈಕೊಸರಿದ್ದಕ್ಕೆ ಗಾಬರಿಯಾದ ಕೂಸು – ಮೋಹನ – ಮತ್ತೆ ಅಳ ತೊಡಗಿದ್ದ. ಕುಮುದಳ ಕಡೆ ಹೋಗಲು ಹವಣಿಸಿದ್ದ. ರಾಮಣ್ಣನಿಗೆ ಹೆದರಿಕೆಯಾಗಿತ್ತೇನೊ, ತಾನು ಮತ್ತೆ ಕೂಸನ್ನು ಹೊಡೆಯುವಳು–ಎಂದು. ರಾಮಣ್ಣ ಕೂಸನ್ನೆತ್ತಿಕೊಂಡು ಅನುಮಾನಿಸುತ್ತಿದ್ದ, ಕೂಸು ಕುಮುದಳ ಕಡೆ ಹೋಗಲು ಹಟಮಾಡುತ್ತಿತ್ತು, ಕೊನೆಗೆ ಅಳಲು ತೊಡಗಿತ್ತು.

ಕುಮುದಳಿಗೂ ತಡೆಯದಂತಾಗಿತ್ತು. ಆವೇಶದಿಂದ ಕೂಸನ್ನು ಕಸಿದುಕೊಂಡಿದ್ದಳು.

"ಕುಮುದಾ, ಕುಮುದಾ, ನನ್ನಾಣೆಯಾಗಿದೆ—" ಎಂದು ರಾಮಣ್ಣ ಕೂಸನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಯತ್ನಿಸಿದ್ದ.

ತಾನು ಬಿಟ್ಟಿರಲಿಲ್ಲ.

"ನಾನು ಹೊರಗ ತಿರುಗಾಡಿಸಿಕೊಂಡು ಬರ್ತೀನಿ, ಕುಮುದಾ" ಎಂದಿದ್ದ.

"ನೀವು ತಿರುಗಾಡಿಸಿಕೊಳ್ಳೋದೂ ಬ್ಯಾಡ, ಬರೋದೂ ಬ್ಯಾಡ. ನಾನೇ ಹೊರಗೆ ಕರೆದುಕೊಂಡು ಹೋಗ್ತೀನಿ, ತಿರುಗಿ ಬರೋದೇ ಇಲ್ಲ. ನೀವಾಯ್ತು ನಿಮ್ಮನೇ ಆಯ್ತು, ಇದ್ದುಬಿಡಿರಿ" ಎಂದು ಅಲ್ಲಿಂದ ಹೊರಟು,

ತನ್ನ ಕೋಣೆಗೆ ಬಂದಿದ್ದಳು, ಕೂಸನ್ನು ಕುಕ್ಕರಿಸಿ ತನ್ನ ಸಾಮಾನುಗಳನ್ನು ಆವರಿಸತೊಡಗಿದ್ದಳು.

ಹುಂ... ಎಂದು ಕುಮುದ ಸ್ಮೃತಿ–ಪ್ರವಾಹದಲ್ಲಿ ಮುಳುಗಿ ಮೇಲೆದ್ದವಳಂತೆ ಉಸುರ್ಗರೆದಳು.

ಇಂದು ಆ ಮಾತು ನಡೆದಿದ್ದರೆ ತಾನು ಹಾಗೆ ವರ್ತಿಸಬಹುದಿತ್ತೆ? ಕುಮುದಳಿಗೆ ಕುಳಿತಲ್ಲಿಯೆ ಈ ವಿಚಾರ ಬಂದಿತು. "ತಿರುಗಿ ಬರೋದಿಲ್ಲ" ಎಂದಿದ್ದಳು ಅಂದು, ಆಮೇಲೆ ಏನೇನು ನಡೆದುಹೋಯಿತೊ! ಆದರೆ ಇಂದಿನ ಕ್ಷಣದಲ್ಲಿ ಇಲ್ಲಿಯೆ ಇದ್ದಾಳೆ, ರಾಮಣ್ಣನ ಮನೆಯಲ್ಲಿ; ಅಲ್ಲ, ತನ್ನ ಮನೆಯಲ್ಲಿ ಉಹುಂ, ಅದೂ ಅಲ್ಲ, ಮೋಹನನ ಮನೆಯಲ್ಲಿ. ಹುಚ್ಚು ತಾನು! ತನ್ನ ದುರಭಿಮಾನಕ್ಕಾಗಿ ಆ ಮಾತನ್ನು ಹೇಳಿಕೊಳ್ಳುತ್ತಿದ್ದಾಳೆ. ಇದು ರಾಮಣ್ಣನ ಮನೆಯೂ ಅಹುದು, ತನ್ನ ಮನೆಯೂ ಅಹುದು; ಅದಕ್ಕಾಗಿ ಇದು ಮೋಹನನ ಮನೆ. ತಮ್ಮಿಬ್ಬರ ತಪಸ್ಸಿನ ಫಲ ಮೋಹನ, ಇಲ್ಲವಾದರೆ ಮೋಹನ ಯಾರು?

ಇಂದು ತಾನು ಹಾಗೆ ನಡೆಯುತ್ತಿರಲಿಲ್ಲ, ಅದಕ್ಕೆ ನಿಜವಾದ ಕಾರಣ ಬೇರೆ ಎಂಬುದನ್ನು ಅನಿವಾರ್ಯವಾಗಿ ಅವಳ ಮನಸ್ಸು ಒಪ್ಪುತ್ತಿದೆ. ಇಂದು ತಾನು ಯಾವ ಕಾರಣಕ್ಕಾಗಿ ತಾನು ಹಾಗೆ ವರ್ತಿಸಲಾರಳೊ, ಅದೇ ಕಾರಣಕ್ಕಾಗಿ ಅಂದು ತಾನು ಹಾಗೆ ವರ್ತಿಸಿದ್ದು—ಎಂಬುದನ್ನೂ ಅವಳು ಬಲ್ಲಳು.

ಆ ಕಾರಣ—ರಾಮಣ್ಣನಿಗಾಗಿ ತನ್ನಲ್ಲಿದ್ದ ಭಾವನೆ.

ಕುಮುದಳು ಯಾವಾಗಲೂ ಸೋಲುತ್ತಿರುವುದಕ್ಕೆ ಆ ಭಾವನೆಯೆ ಕಾರಣ. ಇಂದಿನವರೆಗೂ ಪ್ರತಿಯೊಂದು ಸಂದರ್ಭದಲ್ಲಿ ಕೊನೆಗೆ ಸೋತವಳು ತಾನೇ ಎಂದು ಅವಳ ಹಟ.

ಒಂಭತ್ತು ವರ್ಷಗಳ ಮುಂಚಿನ ಅಂದಿನ ಸಂದರ್ಭ ತನ್ನ ಮೊದಲ ಸೋಲು ಎಂದು ಆಕೆ ತಿಳಿದುಕೊಂಡಿದ್ದಳು. "ನಾನೇ ಹೊರಗೆ ಕರೆದು ಕೊಂಡು ಹೋಗ್ತೀನಿ, ತಿರುಗಿ ಬರೋದೇ ಇಲ್ಲ" ಎಂದು ತಾನು ಆರ್ಭಟಿಸಿದ್ದೇ ಸೋಲಿನ ಮೊದಲ ಘೋಷಣೆಯಾಗಿತ್ತು.

ಯಾಕೆ? ತಾನು ಯಾಕೆ ಆ ಮಾತನ್ನು ಹೇಳಿದ್ದಳು? ಪೂರ್ತಿ

ವಿಚಾರವನ್ನು ಮಾಡಿಕೊಂಡೇ ? ಅಲ್ಲ. ಒಂದು ನಿಶ್ಚಯಕ್ಕೆ ಬಂದೇ ? ಅದೂ ಅಲ್ಲ. ಮನಸ್ಸಿನೊಳಗಿದ್ದುದನ್ನು ಧೈರ್ಯವಾಗಿ ಆಡಿತೋರಿಸುವುದಕ್ಕೆಯೆ ? ಉಹುಂ – ಅಂತಹ ಯಾವ ಕಾರಣಗಳಿಗಾಗಿಯೂ ಅಲ್ಲ.

ಒಂದೇ ಒಂದು ಕಾರಣ, ಹೆದರಿಕೆ. ತನ್ನ ಬಗ್ಗೆ ಹೆದರಿಕೆ, ರಾಮಣ್ಣನಿಗಾಗಿ ಹೆದರಿಕೆ.

ರಾಮಣ್ಣನ ಕೈ ತನ್ನ ಮೈಗೆ ತಗುಲಿದಾಗಲೇ ಆಕೆಗೆ ಸ್ಪಷ್ಟವಾಗಿದ್ದಿತು, ಇದು ಜನ್ಮಜನ್ಮಾಂತರಗಳ ಸಂಬಂಧ, ಒಂದು ಮಾತಿನಿಂದ ಕಡಿದುಹಾಕಲು ಶಕ್ಯವಿಲ್ಲ ಎಂದು.

ಒಮ್ಮೆ ರಾಮಣ್ಣನೆ ಹೇಳಿದ್ದಿಲ್ಲವೆ – ದುಷ್ಯಂತ ಶಕುಂತಲೆಯರ ಕತೆಯನ್ನು ?

"ಶಕುಂತಲೆ ನಾನಾಗಿದ್ರೆ ದುಷ್ಯಂತನ್ನ ಸಮೀಪ ಬರಗೊಡತಿದ್ದಿಲ್ಲ" ಎಂದಿದ್ದಳು ತಾನು.

"ಯಾಕ ? ಅಂಥಾದ್ದೇನು ಮಾಡಿದ್ದ ಅವ ?" ಎಂದು ರಾಮಣ್ಣ ಕೇಳಿದ್ದಕ್ಕೆ ತನಗೆ ಆಶ್ಚರ್ಯವಾಗಿದ್ದಿತು.

"ಏನಂದ್ರಿ? ಅಂಥಾದ್ದೇನ್ಮಾಡಿದ್ದ ಅಂತೀರಾ ? ಇನ್ನೇನು ಮಾಡ್ಬೇಕು? ಏಕಾಂತದೊಳಗ ಮದುವೆ ಮಾಡಿಕೊಂಡು ಆಕೆ ಬಸಿರಿದ್ದಾಗ ನನಗೇನು ನೆನಪಿಲ್ಲ ನಿನ್ನನ್ನ ಮದಿವೆ ಆದದ್ದು – ಅಂದ್ರ ?"

"ಪಾಪ ! ಅವನ್ದೇನು ತಪ್ಪು ? ಶಾಪದ ಪ್ರಭಾವಕ್ಕ ಸಿಕ್ಕಿದ್ದ."

"ಅಯ್ಯಯ್ಯಯ್ಯಯ್ಯಯ್ಯ ! ಯಾರಿಗ್ಹೇಳ್ತೀರಿ ಈ ಕಾಗೆ – ಗುಬ್ಬಿ ಕತೆಯನ್ನ ? ಕಾಲಿದಾಸನೂ ಗಂಡಸು, ದುಷ್ಯಂತನೂ ಗಂಡಸು—"

"ಆದರೆ ಈ ಕತೆಯನ್ನು ಮೊದಲು ಬರೆದವ ಕಾಲಿದಾಸ ಅಲ್ಲ. ಮಹಾಭಾರತದೊಳಗ ಅದ ಈ ಕತೆ."

ಅಂದ್ರೆ ? ಈ ಹಾಳು ಕತೆಯನ್ನೆ ಯಾಕೆ ಆರಿಸಿಕೊಂಡನೊ ! ಯಾರಾದರೂ ನಗಲಿಕ್ಕಿಲ್ಲ ?"

"ಯಾಕಂತ ?"

"ಅಯ್ಯ! ಯಾಕಂದ್ರೇನು ? ಮದಿವೆ ಮಾಡಿಕೊಂಡದ್ದೆ ನೆನಪಿಲ್ಲ ಅನ್ನೋ ಪ್ರಾಣಿ ಎಂಥಾವ ಆತ !"

"ದೊಡ್ಡ ಮನುಷ್ಯ ಆತ."

"ಸಾಕು, ತಗೀರಿ !"

"ಅದ್ಯಾಕ, ಕುಮುದಾ ? ನಾಳೆ ನಾನು ಅಂದೆ ಅಂತ ತಿಳಿ, ನಿನ್ನ ಮದಿವಿ ಆದದ್ದು ನೆನಪಿಲ್ಲ ಅಂತ. ಆಗ ಜನ ನನಗ ಹುಚ್ಚ ಅಂತಾರೊ ಇಲ್ಲೊ ?"

"ಅದಕ್ಕಿಂತ ಕೆಟ್ಟದೇನೂ ಅನ್ನಲಿಲ್ಲ ಅಂದ್ರ ನಿಮ್ಮ ಸುದೈವ."

"ಅಹುದೊ ಇಲ್ಲೊ ? ನಾನು ಮಾಡಿದರ ಹುಚ್ಚ ಅಂತಾರ, ಕೋರ್ಟಿನೊಳಗ ಕೇಸ್ ಹಾಕ್ತಾರ; ಅದನ್ನ ದುಷ್ಯಂತ ಮಾಡಿದ, ಅವನಿಗೆ ದೊಡ್ಡ ಮನುಷ್ಯ ಅಂದರು, ನಾಟಕಾ ಬರೆದರು."

"ಸಾಕು, ನಿಮ್ದು ಒಂದು ಮಾತಿನ ರೀತೀನೆ."

"ಅಲ್ಲ, ನೀನು ಶಕುಂತಲಾ ಆಗಿದ್ದರ ಹೀಂಗ್ಮಾಡ್ತಿದ್ದಿ ಅಂದಿ—"

"ಅಹುದು, ಖಂಡಿತ ಅವನ್ನ ಅವನ ಹಾದೀಗೆ ತಿರುಗಿ ಕಳಿಸಿಬಿಡ್ತಿದ್ದೆ."

"ನೀನು ಹಾಂಗ ಮಾಡ್ತಿದ್ದಿಲ್ಲ ಅನ್ನೋದನ್ನ ತೋರಿಸೋದಕೇನೆ ಕಾಲಿದಾಸ ಆ ನಾಟಕಾ ಬರೆದಾನ."

"ನಾನು ಮಾಡ್ತಿದ್ದಿಲ್ಲ ಅನ್ನೋದನ್ನ ತೋರಿಸೋದಕ !"

"ಅಂದ್ರ, ನೀನೇ ಶಕುಂತಲಾ ಆಗಿದ್ದರ—ಅಂದೆ."

"ಏನಂತೀರೋ ಏನೊ !"

"ಹಾಗಲ್ಲ. ಇಲ್ಲಿ ನೋಡು, ದುಷ್ಯಂತ – ಶಕುಂತಲೇರ ಮದಿವೆ ಹ್ಯಾಂಗಾಯ್ತು ? ದುಷ್ಯಂತಗ ಅರಮನೇವಳ್ಗ ಬೇಕಾದಷ್ಟು ಸೌಂದರ್ಯವತಿಯರಿದ್ದರು; ಶಕುಂತಲಾಗಂತೂ ಪ್ರೇಮ–ಮದುವೆ ಇಂಥಾದ್ದರ ವಿಚಾರ ಕೂಡ ಗೊತ್ತಿರಲಿಲ್ಲ. ಇದಲ್ದೇ, ದುಷ್ಯಂತ ಅಲ್ಲಿಗೆ ಬಂದದ್ದು ಬ್ಯಾಟಿಗೆ ಅಂತ. ಏನೊ, ಕಣ್ವನ ಆಶ್ರಮ ಹತ್ತಿರ ಇದೆ ಅಂತ ಗೊತ್ತಾಯ್ತು, ಮಹರ್ಷಿಗೆ ಕೈ ಮುಗಿದು ಹೋಗೋಣ ಅಂತ—"

"ಆ ಕತೆ ಎಲ್ಲಾ ಗೊತ್ತದ ನನಗ—"

"ಅಲ್ಲ, ಆ ಕತೆಯ ಮೋಜು ತೋರಿಸಿಕೊಡ್ತೀನಿ ನಿನ್ಗ. ಅಂದ್ರೆ ಯಾರಿಗೂ ಯಾವ ಕಲ್ಪನೇನೂ ಇಲ್ದೆ ಅಕಸ್ಮಾತ್ ಭೆಟ್ಟಿಯಾಯ್ತು, ಭೆಟ್ಟಿ

ಪರಿಚಯು ಆಯ್ತು, ಪರಿಚಯು ಆಕರ್ಷಣೆಯಾಯ್ತು, ಆಕರ್ಷಣೆ ಸ್ನೇಹ ಆಯ್ತು, ಸ್ನೇಹ ಪ್ರೇಮು ಆಯ್ತು—"

"ಕಡೆಗೆ ಮದುವೆ ಆಯ್ತು."

"ಹಂ, ಇಷ್ಟೆಲ್ಲ ಸ್ವಲ್ಪೇ ದಿವಸಗಳೊಳಗ ಆಯ್ತು."

"ಅಹುದು. ಅದಕ್ಕೂ ನಾ ಹೇಳೋದಕ್ಕೂ—"

"ಸಂಬಂಧ ಅದ. ಕುಮುದಾ. ಗುರುತಿಲ್ಲದೆ, ಮುಂಚೆ ವಿಚಾರ ಇಲ್ದೆ, ಅಗತ್ಯ ಇಲ್ದೆ, ಹಿರಿಯರ ಸಹಾಯ ಇಲ್ದೆ ಮದುವೆ ಆಯ್ತು. ಯಾಕ?"

"ದುಷ್ಯಂತ ದೈವವಾನ್ ಅಂತ."

"ಹಹ! ಶಕುಂತಲಾ ಏನು ಕಡಿಮೆ? ಇಬ್ಬರದೂ ಜವಾಬ್ದಾರಿ. ಇಬ್ಬರದೂ ಪ್ರೇಮು ಅಷ್ಟು ಸ್ಫುರಿತ, ಅಷ್ಟು ಪರಸ್ಪರ ಇದ್ದಿತು, ಜಗತ್ತಿನೊಳಗ ಅವರು ಎಲ್ಲಿದ್ದರೂ ಒಂದಿಲ್ಲ ಒಂದಿನ ಕೂಡಿ ಬಂದೇ ಬರುತ್ತಿದ್ದರು ಅಂತ ತೋರಿಸಿಕೊಡೋದಕ ಕಾಲಿದಾಸ ಆ ನಾಟಕ ಬರೆದಾನ. ಅದಕ್ಕೇ ಮುಂದೆ ಮಾರೀಚನ ಆಶ್ರಮದೊಳಗ ದುಷ್ಯಂತನ್ನ ನೋಡಿದಾಕ್ಷಣ, ಮೊದಲಸಲ ಕಣ್ವನ ಆಶ್ರಮದೊಳಗ ಅವನನ್ನ ನೋಡಿದಾಗ ಹ್ಯಾಗ ಆಗಿತ್ತೋ ಹಾಗೇ ಆಯ್ತು ಅವಳ ಅವಸ್ಥೆ"

"ಕತೇವಳಗ ಬೇಕಾಧಾಂಗ ಬರೆದುಕೋಬಹುದು, ನನಗಂತೂ ವಿಶ್ವಾಸ ಇಲ್ಲ." ಎಂದಿದ್ದಳು, ಆಗ. ಆ ಮಾತಿನ ವಿಶ್ವಾಸವನ್ನು ಪಡೆಯುವ ಶಿಕ್ಷೆಯನ್ನೆ ತನಗೆ ಕೊಟ್ಟಿತೇನೊ ಎಂದೆನ್ನಿಸುತ್ತಿತ್ತು ಈಗ. ಶಕುಂತಲೆ ಹಾಗೆ ವರ್ತಿಸಿದ್ದು ಸಹಜ ಎಂದು ಈಗ ಯಾವಾಗಲೂ ಒಪ್ಪಿಕೊಳ್ಳಲು ತಾನು ಸಿದ್ಧಳಿದ್ದಳು.

ರಾಮಣ್ಣ ತನ್ನನ್ನು ಮದುವೆಯಾದ ರೀತಿಯನ್ನು ನೆನೆದುಕೊಂಡರೆ ತಾನು ಎಂದೆಂದಿಗೂ ಅವನೊಡನೆ ಸಂಸಾರ ಮಾಡಬಾರದಾಗಿತ್ತು. ತಾನಾಗಿಯೆ ಒಲಿದು ಬಂದವ, ಮೇಲೆ ಸರಳಕ್ಕ ಒಂದೇ ಸವನೆ ಆ ಮಾತನ್ನು ಹೇಳುತ್ತಿದ್ದಾಳೆ, ತನಗೂ ಕೂಡ ಮದುವೆ ಒಪ್ಪಿಗೆಯದಾಗಿತ್ತು; ಆದರೂ ಸರಳಕ್ಕ ಜೀವದಿಂದಿರುವ ವರೆಗೆ ರಾಮಣ್ಣ ಬಹಿರಂಗವಾಗಿ ಆ ಮಾತಿನ ಪ್ರಸ್ತಾವವನ್ನೆ ತೆಗೆದಿರಲಿಲ್ಲ; ಆದರೂ ತನ್ನ ಸಹವಾಸವನ್ನು ಬಯಸುತ್ತಿದ್ದ.

ಸರಳಕ್ಕ ತೀರಿದ ಮೇಲೆ ಕೂಡ ಅವನಾಗಿಯೆ ಆ ವಿಚಾರವನ್ನು ಎತ್ತಿರಲಿಲ್ಲ. ಕೊನೆಗೆ ತಾನು ಗರ್ಭಿಣಿ ಎಂದು ಹೇಳಿದಾಗ ಮದುವೆಗೆ ಒಪ್ಪಿದ್ದ. ಇದರರ್ಥ ವೇನು? ರಾಮಣ್ಣ ತನಗಾಗಿ ಒಲಿದಿರಲಿಲ್ಲ ಎಂದೇ ಅಲ್ಲವೆ? ಬುದ್ಧಿ ಪೂರ್ವಕವಾಗಿ ತನ್ನನ್ನು ಮೋಸಗೊಳಿಸಿದನು—ಎಂದೇ ಅಲ್ಲವೆ? ಇಂತಹ ನೊಡನೆ ಸಂಸಾರ ಮಾಡುವುದು ಯಾವ ಮನಸ್ಸಿನಿಂದ? ಅದರಲ್ಲೂ ಮದುವೆಯ ಉಪಕಾರವನ್ನು ಬೇರೆ ತನ್ನ ಮೇಲೆ ಹೊರಿಸಿದ್ದ! ಮದುವೆ ಯಾಗಿಲ್ಲವೆಂದರೆ ತಾನು ಸ್ವತಂತ್ರಳಾಗಿರಬಹುದಿತ್ತಲ್ಲ? ಮದುವೆಯಾಗಿದ್ದಿಲ್ಲ ವೆಂದರೆ ಅವನ ಮೇಲೆ ತನ್ನದೆ ಅಧಿಕಾರವಿರುತ್ತಿದ್ದಿತು, ಈಗಿನಂತಲ್ಲ. ಈಗ ತಾನು ಮದುವೆಯ ಹೆಂಡತಿ, ಅಧಿಕಾರದ ಭೋಗ್ಯವಸ್ತು. ಮದುವೆಯಾಗಿ ದ್ದಿಲ್ಲವೆಂದರೆ? ಭೋಗ್ಯ-ವಸ್ತುವಿನ ಪ್ರಾಪ್ತಿಗಾಗಿ ಭಿಕ್ಷುಕನಾಗಬೇಕಾಗು ತ್ತಿತ್ತು ಅವನು!

ಹುಂ....ಅದೆಲ್ಲ ಸರಿ. ತನಗೆ ಯಾರೂ ಬೇಡ ಎಂದಿರಲಿಲ್ಲವಲ್ಲ? ಮದುವೆಗೆ ತಾನು ಸಮ್ಮತಿಸಬೇಕಾಗಿರಲಿಲ್ಲವಲ್ಲ? ತಾನು ಸಮ್ಮತಿಸಿ ಈಗ ರಾಮಣ್ಣನನ್ನು ದೂಷಿಸಿದರೆ—?

ದೂಷಣೆ ಎಲ್ಲಿಂದ ಬಂತು, ಹೆಂಗಸಿನ ಹಣೇಬರಹ, ಶಕುಂತಲೆಯ ಕತೆ—ಎಂದು ಉಸುರ್ಗರೆದಳು. ಯಾವುದೊ ಶಕ್ತಿ ತನ್ನನ್ನು ರಾಮಣ್ಣನ ವಶಕ್ಕೆ ಒಪ್ಪಿಸಿಬಿಟ್ಟಿತ್ತು. ತಾನು ಮಾಡುವ ಪ್ರಯತ್ನಗಳೆಲ್ಲ ವ್ಯರ್ಥವಾಗು ತ್ತಿದ್ದವು. ಬುದ್ಧಿ ಒಂದೆಡೆ ಎಳೆದರೆ, ಹೃದಯ ಇನ್ನೊಂದೆಡೆ ಎಳೆಯುತ್ತಿತ್ತು. ತಾನು ಎಷ್ಟೆಷ್ಟು ದೂರವಿರಲು ಯತ್ನಿಸುತ್ತಿದ್ದಳೊ, ಅಷ್ಟಷ್ಟು ಹೆಚ್ಚು ವೇಗದಿಂದ ತನ್ನನ್ನು ಆ ಶಕ್ತಿ ಹತ್ತಿರ ಎಳೆಯುತ್ತಿತ್ತು.

ಅದಕ್ಕಾಗಿ ಯಾವಾಗಲೂ ತನಗೆ ಹೆದರಿಕೆ ಇದ್ದಿತು. ರಾಮಣ್ಣನ ಭೋಗ್ಯವಸ್ತುವಾಗುವುದರಲ್ಲಿ ತನಗೆ ಸಂತೋಷವೆ ಇದ್ದಿತಾದರೂ, ಅವನು ತನ್ನನ್ನು ಬರೀ ಭೋಗ್ಯವಸ್ತು ಎಂದು ತಿಳಿದಲ್ಲಿ ತನಗೆ ಅಸಹ್ಯವೆನ್ನಿಸುತ್ತಿತ್ತು.

ತಾನು ಅವನನ್ನು ಪ್ರೀತಿಸುತ್ತಿದ್ದಂತೆ ಅವನೂ ತನ್ನನ್ನು—

ಇಲ್ಲ, ಆ ಭರವಸೆ ಆಕೆಗಿದ್ದಿರಲಿಲ್ಲ. ಅದಕ್ಕಾಗಿಯೆ ಹೆದರಿಕೆ, ತಾನೆಲ್ಲಿ ಮತ್ತೆ ಅವನ ವಶದಲ್ಲಿ ಸಿಕ್ಕಿಕೊಳ್ಳುವಳೊ—ಎಂದು.

ರಾಮಣ್ಣನ ಸಾನ್ನಿಧ್ಯ ಆ ಹೆದರಿಕೆಯನ್ನು ಹೆಚ್ಚಿಸುತ್ತಿತ್ತು, ಅವನ

ಸ್ಪರ್ಶವಂತೂ—ಅದಕ್ಕಾಗಿ ಅಂದು ಹೇಳಿದ್ದಳು "ತಿರುಗಿ ಬರೋದೇ ಇಲ್ಲ" ಎಂದು.

ಹು. ಆದರೂ ಬಂದೆನಲ್ಲ ? ಬಂದಿರುವೆ, ಮನೆಯನ್ನು ನಡೆಸಿರುವೆ, ಮನೆಯ ಮಗನನ್ನು ಬಳಿಸಿರುವೆ—

ತಟ್ಟನೆ ತನ್ನ ಹಗಲ-ಗನಸನ್ನು ತಡೆದಳು ಕುಮುದ. ಕೈಗಡಿಯಾರ ವನ್ನು ನೋಡಿಕೊಂಡಳು. "ಇದೇನು ? ಎಷ್ಟು ಹೇಳಿದರೂ ಇನ್ನೂ ಬರಲಿಲ್ಲ ಈ ಮೋಹನ ? ಇಷ್ಟರಲ್ಲಿಯೆ ಸಭೆಗೆ ಕರೆಯಲು ಬಂದರೂ ಬಂದರೆ. ಛಿ! ಏನು ಹುಡುಗ ಈತ! ಎಲ್ಲಿ ಹೋದನೊ ಮೆರೆಯಲಿಕ್ಕೆ ?" ಎನ್ನುತ್ತ ಎದ್ದು ಮತ್ತೆ ಬಾಗಿಲಿಗೆ ಬಂದಳು.

## ೧೦

"ಇದೇನು ? ಏನೂ ಕಾಣುವುದಿಲ್ಲವಲ್ಲ ?" ಎಂದ ಕಿಟಕಿಯಾಚೆ ಹೊರಗೆ ನೋಡುತ್ತಿದ್ದ ರಾಮಣ್ಣ. ಮರುಗಳಿಗೆಯಲ್ಲಿ ಅವನಿಗೆಯೆ ಆಶ್ಚರ್ಯ ವಾಯಿತು.

ಬೀದಿಗುಂಟ ದನಕರುಗಳು ಸಾಗಿವೆ, ಹಿಂದೆ ದನಕಾಯುವ ಹುಡುಗರ ಅಬ್ಬರ ನಡೆದಿದೆ, ಅದೊ ಅಲ್ಲಿ ಯಾರೊ ಇಬ್ಬರು ಹೊರಟಿದ್ದಾರೆ – ಒಬ್ಬರು ನಿಂತು ನಗುತ್ತಿದ್ದಾರೆ, ಬೀದಿಯ ಈ ಬದಿಗೆ ಸೇರಿದ ಕಾಗೆಗಳು ಒಮ್ಮೆಲೆ ಗುಂಪುಗಟ್ಟಿ ರೆಕ್ಕೆ ಬಡೆಯುತ್ತ ಎದ್ದು ಬೀದಿಯ ಆ ಬದಿಗೆ ಹಾರುತ್ತಿವೆ, ಆ ನಾಯಿ ಅವುಗಳನ್ನು ಹಿಡಿಯಲು ಯತ್ನಿಸಿ ಬೊಗಳುತ್ತಿದೆ....ಇಷ್ಟೆಲ್ಲ ಕಾಣು-ತ್ತಿದ್ದರೂ ನಾನು "ಏನೂ ಕಾಣುವುದಿಲ್ಲ" ಎಂದೆನಲ್ಲ!

ಮನುಷ್ಯನ ಜಗತ್ತು ಅಂದರೆ ಹೀಗೇನೆ. ತನಗೆ ಬೇಕಿದ್ದರೆ ಕಾಣೋದು, ಇಲ್ಲದಿದ್ದರೆ ಜಗತ್ತೇ ಇಲ್ಲ ಅನ್ನೋದು . ಹುಂ....ಎಂದು ಏನನ್ನೊ ಗೊಣಗುತ್ತ ಹೆಜ್ಜೆ ಹಾಕತೊಡಗಿದನು. ಕೋಣೆಯ ಉದ್ದಕ್ಕೂ ನಡೆದು ಹಾಗೆಯೆ ಗೊಣಗುತ್ತ ಮತ್ತೆ ಕಿಟಕಿಯ ಹತ್ತಿರ ಬಂದು ಹೊರಗೆ ನೋಡಿದನು. ...."ಕಂಡೂಯಮಾನಾಂ...." ಗೊಣಗುವುದನ್ನು ತಡೆದು ತನ್ನಷ್ಟಕ್ಕೆಯೆ ನಕ್ಕ. ಅಂತೂ ನನ್ನ ಠಕ್ಕತನ ನನಗೆಯೆ ತಿಳಿದುಬಂತು—

ಎಂದು ನಕ್ಕ. ಅದೊಂದು ಅಭ್ಯಾಸ ಅವನಿಗೆ. ಮನಸ್ಸಿನೊಳಗಿನ ವಿಚಾರಗಳನ್ನು ಮರೆಯಬೇಕೆನ್ನಿಸಿದಾಗ ಒಂದು ಸಂಸ್ಕೃತ ಶ್ಲೋಕವನ್ನು ಗೊಣಗುಟ್ಟುವುದು. ಅದರಲ್ಲೂ ಒಳಗಿನ ವಿಚಾರಗಳನ್ನು ಹತ್ತಿಕ್ಕಿ ಹಿಮ್ಮೆಟ್ಟಿಸಬೇಕೆಂದಿದ್ದಾಗ ಕಾಲಿದಾಸನ ಒಂದು ಶ್ಲೋಕವನ್ನು–ಅದೊಂದನ್ನೆ – ಮೇಲಿಂದ ಮೇಲೆ ಗೊಣಗುಟ್ಟುವನು. ಈಗ ಅದೇ ಶ್ಲೋಕವನ್ನು ಗುಂಯ್ಗುಡಿಸುತ್ತಿದ್ದಾನೆ!

‘ ಕಾರ್ಯಾ ಸೈಕತ–ಲೀನ–ಹಂಸ–ಮಿಥುನಾ ಸ್ರೋತೋವಹಾ
ಮಾಲಿನೀ
ಪಾದಾಸ್ತಾಮಭಿತೋ ನಿಷಣ್ಣಹರಿಣಾ ಗೌರೀಗುರೋಃ
ಪಾವನಾಃ ।
ಶಾಖಾಲಂಬಿತ ವಲ್ಕಲಸ್ಯ ಚ ತರೋರ್ನಿರ್ಮಾತುಮಿಚ್ಛಾಮ್ಯಧಃ
ಶೃಂಗೇ ಕೃಷ್ಣಮೃಗಸ್ಯ ವಾಮನಯನಾಂ ಕಂಡೂಯ
ಮಾನಾಂ ಮೃಗೀಂ ॥ ’

ಆ ಶ್ಲೋಕದ ವಾತಾವರಣವೆ ಶಾಂತವಿದೆ ಎಂದು ಎಂದಿನಿಂದಲೂ ಅವನದೊಂದು ಭಾವನೆ. ಮಾಲಿನೀ ತೀರದ ಮಳಲು; ಹಂಸ–ಹಂಸೀ; ಈಶ್ವರನ ಹೆಜ್ಜೆಗಳು ಮೂಡಿವೆ, ಬದಿಗೆ ಒಂದು ಮರ, ಅದಕ್ಕೆ ವಲ್ಕಲ ಗಳನ್ನು ಒಣಹಾಕಿದೆ, ಆ ಮರದ ಬುಡದಲ್ಲಿ ಒಂದು ಕೃಷ್ಣಮೃಗ; ಅದನ್ನು ನಾಲಗೆಯಿಂದ ಸವರುತ್ತಿದ್ದ ಒಂದು ಮೃಗೀ – ಹೆಣ್ಣು.

ಭಲೆ! ಶಕುಂತಲೆಯ ನೆನಪಿನಿಂದ ನರಳುತ್ತಿದ್ದ ದುಷ್ಯಂತ ಸರಿಯಾದ ಚಿತ್ರವನ್ನು ಚಿತ್ರಿಸುತ್ತಿದ್ದ. ಆ ಶ್ಲೋಕದ ವಾತಾವರಣದಂತೆ, ಅದರ ಅರ್ಥ, ಅಲ್ಲಿಯ ಶಬ್ದ ಯೋಜನೆ ಎಲ್ಲವೂ ಸೌಮ್ಯವಾಗಿದೆ, ಶಾಂತಿಸೂಚಕವಾಗಿದೆ. ಯಾಕೆ? ಗೊತ್ತಿಲ್ಲ. ಅದೇ ಕವಿಯ ಪ್ರತಿಭೆ; ತಟ್ಟನೆ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡುವುದು.

ತನಗೆ ಈ ಶ್ಲೋಕದ ಪಾಠವನ್ನು ಗೊಣಗುವ ರೂಢಿಯಾದ ಸಂದ-ರ್ಭವೂ ಅಂತಹದೆ, ಅದನ್ನು ತಾನೆಂದಿಗೂ ಮರೆಯುವಂತಿರಲಿಲ್ಲ.

ಅಂದು – ಯಾವಾಗ? 7–8 ವರುಷಗಳ ಮುಂಚಿತವಿರಬಹುದು,

ಆಗ ಒಂದು ದಿನ—ತಾನು ಹೀಗೆಯೆ ಕಿಟಕಿಗೆ ನಿಂತುಕೊಂಡಿದ್ದ ನಿರೀಕ್ಷೆಯಲ್ಲಿ. ಮುಂಚಿನ ದಿನವೊ, ಅದರ ಮುಂಚಿನ ದಿನವೊ – ಈಗ ಸ್ಮರಣೆಯಲ್ಲಿಲ್ಲ, ಆಗ ಅದು ಒಂದು ವರ್ಷದಷ್ಟು ದೀರ್ಘವೆನ್ನಿಸಿತ್ತು – ಕುಮುದ ಮೋಹನನನ್ನು ಕರೆದುಕೊಂಡು ಮನೆಯಿಂದ ಹೊರಬಿದ್ದಿದ್ದಳು. ಆಕೆ ಹೊರಬಿದ್ದಾಗ ತಾನು ಅದೇ ಕಿಟಕಿಗೆ ನಿಂತಿದ್ದ. ಮುಂದೆ ಹಾಗೆಯೆ ಎಷ್ಟು ಗಂಟೆ – ಅಥವಾ ಎಷ್ಟು ದಿನ ನಿಂತಿದ್ದನೊ, ಆಕೆ ಬರಬಹುದೆಂಬ ನಿರೀಕ್ಷೆಯಿಂದ. ಆಕೆ ಬರಲಿಲ್ಲ. ಎಷ್ಟೊ ಸಲ ವಿಚಾರ ಬಂದಿತ್ತು, ತಾನೂ ಹೋಗಿ ನೋಡಿಕೊಂಡು ಬರಬೇಕು ಎಂದು. ಆದರೆ ತಾನು ಹೋದಾಗ ಆಕೆ ಬಂದರೆ – ಎಂಬ ಸಂಶಯದಿಂದ ನಿಂತಲ್ಲಿಯೆ ನಿಂತುಬಿಟ್ಟಿದ್ದ. ಆಕೆ ಬರಲಿಲ್ಲ. ಮತ್ತೆ ತನ್ನ ಸೋದರತ್ತೆಯ ಮನೆಗೆ ಹೋಗಿರಬಹುದು ಎಂದು ಸಮಾಧಾನವನ್ನು ತಂದುಕೊಂಡ. ಒಂದು ರಾತ್ರಿ ಮನೆಯಲ್ಲಿ ದೀಪವಿರಲಿಲ್ಲ, ಎರಡು ದಿನ ತನಗೆ ಊಟವಿದ್ದಿರಲಿಲ್ಲ. ಒಮ್ಮೆ ಎನ್ನಿಸುವುದು, ಹೋಗಿ ಆಕೆಯನ್ನು ಕ್ಷಮೆ ಬೇಡಿ ಕರೆದುಕೊಂಡು ಬರಬೇಕು – ಎಂದು ; ಇನ್ನೊಮ್ಮೆ ಎನ್ನಿಸುವುದು, ಈ ಸಲ ಆಕೆ ಏನು ಮಾಡಿದರೂ ಬರುವುದು ಶಕ್ಯವಿಲ್ಲ – ಎಂದು.

ತಪ್ಪು ತನ್ನದೆ ಎಂದು ಈಗ ಅವನಿಗೆ ತೋರಿತ್ತು. ಯಾವ ಕರಾರಿನ ಮೇಲೆ ಆಕೆ ಬರಲು ಒಪ್ಪಿದ್ದಳೊ ಆ ಕರಾರನ್ನು ಮುರಿಯಲು ತಾನು ಯತ್ನಿಸಿದ್ದು ತಪ್ಪು ಎನ್ನಿಸಿತ್ತು, ಆಕೆ ಹೊರಟುಹೋದ ಮೇಲೆ. ಆದರೆ ಅದಕ್ಕೆ ಮುಂಚಿತ ಎಷ್ಟು ಆತ್ಮವಿಶ್ವಾಸದಿಂದ ತಾನು ಆ ಕರಾರನ್ನು ಮುರಿಯಲು ಸನ್ನದ್ಧನಾಗಿ ಹೊರಟಿದ್ದ !

ಅಂದಿನ ನೆನಪಿಗಾಗಿ ಇಂದು ರಾಮಣ್ಣನಿಗೆ ಮತ್ತೆ ನಗೆ ಬಂದಿತು. ಇಂದು ತನ್ನ ವಯಸ್ಸು 45, ಎಂದರೆ ಆಗ ತಾನು 37–8 ; ಆದರೂ ಒಬ್ಬ ಅವಿವೇಕಿ ಯುವಕನಂತೆ ವರ್ತಿಸಿದ್ದನಲ್ಲ ತಾನು ಆ ದಿನ !

ಕಾಮೀ ಸ್ವತಾಂ ಪಶ್ಯತಿ ! ಇಂತಹ ಅವಿವೇಕಿ ಯುವಕರನ್ನು ನೋಡಿಯೆ ಕಾಲಿದಾಸ ಆ ಮಾತನ್ನು ಹೇಳಿರುವನೊ ಏನೊ ! ಆ ದಿನ, ಮೋಹನನನ್ನು ತಾನು ಎತ್ತಿಕೊಳ್ಳಲು ಹೋದಾಗ, ಕುಮುದಳಿಗೆ ತನ್ನ ಕೈ ತಾಕಿದಾಗ ಆಕೆಯ ಕಣ್ಣುಗಳಲ್ಲಿ ಮೂಡಿದ ಸಂತೃಪ್ತಿಯ ನಗೆಯನ್ನು ಕಂಡು

ತಾನು ಉತ್ಸಾಹಿತನಾಗಿದ್ದನು. ಕೂಡಲೆ ಆಕೆ ಪ್ರತಿಭಟಿಸಿದ್ದಳು, ಆರ್ಭಟಿಸಿದ್ದಳು, ಕೋಣೆಗೆ ಹೋಗಿ ತನ್ನ ಸಾಮಾನುಗಳನ್ನು ಸಾವರಿಸಿ ಇಟ್ಟಳು; ಇನ್ನೂ ಏನು ಮಾಡುವಳೊ ಎಂಬ ಹೆದರಿಕೆಯಿಂದ ತಾನು ಮೆಲ್ಲಗೆ ನಡೆದು ಹೋಗಿ ಅರೆತೆರೆದ ಬಾಗಿಲಿನ ಸಂದಿನಿಂದ ನೋಡಿದ್ದ, ಕುಮುದ ತನ್ನ ಭಾವಪಟದ ಎದುರು ನಿಂತಿದ್ದು ಕಂಡುಬಂದಿತ್ತು. ಯಾರಿಗೆ ಗೊತ್ತು ನೋಡೋಣ, ಅದನ್ನು ಕೆಳಗೆ ಬಿಸಾಡಿ ಕಾಲಿನಿಂದ ತುಳಿಯಲೂಬಹುದು ಎಂದು ಹೆದರಿಕೆಯಿಂದ ತಾನು ನಿರೀಕ್ಷಿಸುತ್ತಿರುವಾಗಲೆ ಆಕೆ ತಟ್ಟನೆ ಅದನ್ನೆತ್ತಿ ಹಣೆಗೆ ಹಚ್ಚಿಕೊಂಡಳು ತನ್ನನ್ನು ನಮಸ್ಕರಿಸುವಂತೆ, ಆಮೇಲೆ-ಆಮೇಲೆ-ಅದನ್ನು ಮುದ್ದಿಸಿದ್ದಳು! ತಾನು ಕಣ್ಣಾರೆ ಕಂಡ ದೃಶ್ಯವದು, ಕಲ್ಪಿಸಿದ್ದಲ್ಲ. ಆ ದೃಶ್ಯವನ್ನು ನೋಡಿದೊಡನೆ ತನಗೆ ಹೊಸ ಚೈತನ್ಯವೆ ಬಂದಂತಾಗಿತ್ತು. ಕುಮುದ ನಿಜವಾಗಿ ತನ್ನನ್ನು ಪ್ರೀತಿಸುತ್ತಿದ್ದಾಳೆ, ಯಾವುದೊ ತಪ್ಪು ಕಲ್ಪನೆಗಾಗಿ ತನ್ನ ಮೇಲೆ ಸಿಟ್ಟಾಗಿದ್ದಾಳೆ, ಆ ತಪ್ಪು ಕಲ್ಪನೆಯನ್ನು ಹೋಗಲಾಡಿಸಬೇಕು – ಎಂದುಕೊಂಡಿದ್ದ.

ಎಂತಹ ಹುಚ್ಚನಾಗಿದ್ದ ಆಗ ತಾನು! ತಪ್ಪು ಕಲ್ಪನೆ ಯಾವುದಿರಬಹುದು ಎಂಬ ಯೋಚನೆಯಲ್ಲಿ ತೊಡಗಿ ಕೊನೆಗೆ ಅದನ್ನು ಹುಡುಕಿ-ತೆಗೆದೆ – ಎಂದು ತಾನೊಬ್ಬ ಬೃಹಸ್ಪತಿಯ ಅಪರಾವತಾರ ಎಂಬಂತೆ ಹೆಮ್ಮೆಯಿಂದ ಬೀಗಿದ್ದ.

ಕಾಮೀ ಸ್ವತಾಂ ಪಶ್ಯತಿ!

ಸರಿ. ಆ ಮಾತಿಗೆ ಸರಿಯಾಗಿ ತಾನು ನಿರ್ಣಯಕ್ಕೆ ಬಂದಿದ್ದ, ಕುಮುದಳ ಸಿಟ್ಟು ತಾನು ಕರಾರನ್ನು ಅಕ್ಷರಶಃ ಪಾಲಿಸಿದ್ದಕ್ಕಾಗಿ ಎಂದು! ತನ್ನನ್ನು ಆಕೆ ಇಷ್ಟೊಂದು ಪ್ರೀತಿಸುತ್ತಿರುವಾಗಲೆ, ತಾನು ಮಾತ್ರ ಯಾವಾಗಲೊ ಒಮ್ಮೆ ಆಕೆ ಸಿಟ್ಟಿನಿಂದ ಹೇಳಿದ ಮಾತನ್ನು ನಂಬಿಕೊಂಡು ಕುಳಿತಿರುವನಲ್ಲ! "ದಾಂಪತ್ಯ" ಜೀವನ ವಯೋಧರ್ಮವಾಗಿದೆ, ಅದರ ಹಂಬಲ ಪಾಪವೂ ಅಲ್ಲ, ಅಹಿತವೂ ಅಲ್ಲ. ಗಂಡು, ಹೆಣ್ಣು ಎಂಬ ಭೇದ ಸೃಷ್ಟಿನಿಯಮದ ಒಂದು ಅನುಕೂಲ. ವಯೋಧರ್ಮಕ್ಕೆ ಈ ಭೇದವಿಲ್ಲ – ಎಂದು ಏನೇನೊ ಬಲ್ಲವನಂತೆ, ತಾನೊಬ್ಬ ಪ್ರತಿ-ವಾತ್ಸ್ಯಾಯನನಂತೆ ತರ್ಕ ಹೂಡಿ ಸಿದ್ಧಾಂತವನ್ನು ತಲುಪಿ ಸನ್ನದ್ಧನಾಗಿದ್ದ.

ಈಗ 7-8 ವರ್ಷಗಳ ತರುವಾಯ ಎನ್ನಿಸುತ್ತಿದೆ, ಅಂದಿನ ತನ್ನ ವಿಚಾರ, ವ್ಯವಹಾರ ಎರಡೂ ನಾಚಿಕೆಗೇಡಿತನದ ಪರಮಾವಧಿಯಾಗಿದ್ದವು ಎಂದು. ಅಂತಹ ನಾಚಿಕೆಗೇಡಿತನಕ್ಕೆ ತಕ್ಕ ಶಿಕ್ಷೆಯಾಗಿತ್ತು. ಬೆಳಗಿನ ವರೆಗೂ ಕುಮುದ ತನ್ನ ಕೋಣೆಯ ಬಾಗಿಲನ್ನೆ ತೆರೆದು ಮಲಗಿದ್ದರೂ ತನಗೆ ಆ ಕಡೆ ಕಣ್ಣೆತ್ತಿ ನೋಡಲು ಕೂಡ ಧೈರ್ಯವಾಗಿರಲಿಲ್ಲ. ಅಂತಹ ಶಿಕ್ಷೆ ಯಾಗಿದ್ದಿತು ಅಂದು ತನಗೆ.

ಆಕೆ ಆ ಮಾತನ್ನು ಹೇಳಬಹುದೆಂದು ತಾನು ಕನಸು – ಮನಸು ಗಳಲ್ಲಿಯೂ ತಿಳಿದಿರಲಿಲ್ಲ. ಆ ಕಲ್ಪನೆ ಇದ್ದಿದ್ದರೆ ತಾನು ಅವಳನ್ನು ಮಾತ ನಾಡಿಸುತ್ತಲೇ ಇರಲಿಲ್ಲ.

ಆದರೇನು? ಕಾಮೀ ಸ್ವತಾಂ ಪಶ್ಯತಿ! ಕಾಮಾಂಧನಾದ ತಾನು ಅನುಕೂಲಸಿಂಧುವನ್ನೆ ಈಜಿಕೊಂಡು ಹೋಗಿದ್ದ. ಅದೇ ಉನ್ಮಾದದಲ್ಲಿ ಆಕೆಯನ್ನು ಸಂಬೋಧಿಸಿದ್ದ.

"ಕುಮುದ"

ತನ್ನನ್ನು ಒಮ್ಮೆ ಚಕಿತಳಾಗಿ ನೋಡಿ ಆಕೆ ಒಮ್ಮೆಲೆ ಮುಗುಳ್ನಗೆ ನಕ್ಕಿದ್ದಳು. ಆಗಲೇ ತಿಳಿಯಬೇಕಾಗಿತ್ತು ತನಗೆ. ಆ ಮುಗುಳ್ನಗೆಯಿಂದ ಮುಖ ಸೌಮ್ಯವಾಗಿ ಕಂಡಿರಲಿಲ್ಲ.

"ಕುಮುದ"

"ಒಳಗೆ ಬನ್ನಿ"

"ಕುಮುದಾ, ಕುಮುದಾ, ಆದದ್ದನ್ನು ನೀನು ಮರೆಯುವೆ ಎಂದು ನನಗನಿಸಿತ್ತು. ಹಾಂಗ ಕೇಳಿದರ ನನ್ದೆ ತಪ್ಪು, ನಾನು ಒಪ್ಪಿಕೋತೀನಿ."

"ನಿಮ್ಮಂಥಾ ಪ್ರಗತಿಶೀಲರು ಇದನ್ನ ತಪ್ಪು ಅಂತ ತಿಳೀಬೇಕೆ?"

"ಅಂ? ಏನಂದೆ?"

"ಅಲ್ಲ – ಹಳೇ ವಿಚಾರದವರು ಹಾಂಗ ಅನ್ನಬಹುದು, ಆದರೆ ನೀವು – "

"ಯಾವುದು? ಏನು? ಯಾವ ವಿಷಯ ನೀನು ಮಾತಾಡ್ತಾ ಇರೋದು?"

"ಸೂಳೇರನ್ನ ಮದಿವೆ ಆಗೋದು."

"ಕುಮುದಾ !" ಚಾವಟಿಯ ಹೊಡೆತಕ್ಕೆ ಆಕ್ರೋಶಿಸುವವನಂತೆ ಕೂಗಿದ್ದ.

"ಪ್ರೀತಿಸದೇ ಇದ್ದ ಹೆಂಗಸಿನ ಸಹವಾಸ ಅಂದ್ರ ಸೂಳೆಯ ಸಹವಾಸ ಅಂತ ಸೀವೇ — "

"ಕುಮುದಾ, ಕುಮುದಾ, ಯಾಕ ದಂಡಿಸತೀ ನನ್ನ ಇಂಥಾ ಮಾತಿನಿಂದ ? ನಿನ್ನನ್ನ ಪ್ರೀತಿಸದೇ ಇದ್ದರೆ ನಿನ್ನ ಮದುವೆಯಾಗತಿದ್ದೆನೆ ನಾ ? ಯಾಕೆ ಇಲ್ಲದ ವಿಚಾರ ತಲೇವಳಗ ತುಂಬಿಕೊಂಡು—"

"ನನಗೇ ಮಗೂ ಬೇಕಾಗಿತ್ತು, ಅದಕ್ಕ ನಿಮ್ಮನ್ನ ನಾ ಜವಾಬ್ದಾರ ಅಂತ ಹಿಡಿಯೋದಿಲ್ಲ, ಈಗಾದರೂ ಸಮಾಧಾನ ಆಯ್ತೊ ?"

"ಕುಮುದಾ, ಕುಮುದಾ, ಯಾವುದೊ ತಪ್ಪು ಕಲ್ಪನೆಯಿಂದ ನೀನು ಏನೇನೊ ಕಲ್ಪಿಸಿಕೊಂಡೀದಿ—"

"ನನ್ನ ಕಲ್ಪನೆ ತಪ್ಪೋದಿಲ್ಲ. ಈಗ ನೀವು ಯಾಕೆ ಬಂದೀರಿ ಅನ್ನೋದರ ಕಲ್ಪನೆ ನನಗಿದೆ, ಅದನ್ನ ತಪ್ಪು ಅಂತೀರಾ ? ಆದರೆ ಒಂದು ಮಾತು. ನಿಮ್ಮ ತೃಪ್ತಿಗೆ ನಾನು ಅಡ್ಡ ಬರೋದಿಲ್ಲ, ಒಂದ್ಮಾತು ನನಗ ಮೊದಲು ತಿಳುಹಿಸಿಕೊಡಿರಿ. ಈಗ ನೀವು ಇಲ್ಲಿ ಬಂದದ್ದು, ನಾ ನಿಮ್ಮ ಮದಿವೇ ಹೆಂಡತಿ ಅನ್ನೋ ಅಧಿಕಾರದಿಂದಲೊ, ಇಲ್ಲಾ ನಾನು ಅಂದ್ರೆ ನಿಮಗೆ ಮೋಹಿತಳಾದ ಒಬ್ಬ ಸ್ವೇಚ್ಛಾಚಾರಿಣಿ ಅಂತಲೊ ? ಯಾವುದನ್ನ ನೀವು ಹೇಳ್ತೀರಿ ಆ ಪಾತ್ರ ಅಭಿನಯಿಸಲಿಕ್ಕೆ ನಾ ಸಿದ್ಧ."

ಆ ಮಾತನ್ನು ನುಡಿದವಳೆ ದೀಪವನ್ನು ಆರಿಸಿಬಿಟ್ಟಿದ್ದಳು. ಅಬ್ಬ ! ಕತ್ತಲೆ ಎನ್ನುವುದು ಎಂತಹ ಭಯಾನಕ ಎಂಬುದು ಆಗ ತಿಳಿದಿತ್ತು ತನಗೆ. ನಿಲ್ಲಲು ಹೆದರಿಕೆ, ಓಡಿಹೋಗಲು ಹೆದರಿಕೆ ; ತನ್ನಿಂದ ತಾನು ಓಡಿಹೋಗುವುದು ಶಕ್ಯವಿಲ್ಲ ಎಂಬ ಹತಾಶ ಹೆದರಿಕೆ.

ಮುಂದೆ ಕುಮುದಳು ಮನೆಯಿಂದ ಹೊರಬೀಳುವ ವರೆಗೂ ತಾನು ಅವಳಿಗೆ ಮುಖವನ್ನು ತೋರಿಸಿರಲಿಲ್ಲ.

ನಾನು ತನ್ನನ್ನು ಪ್ರೀತಿಸುವುದಿಲ್ಲ – ಎಂದಿದ್ದಳಲ್ಲ ! ಅದಕ್ಕೆ ತಾನು ಯಾವ ಸಮಾಧಾನವನ್ನು ಕೊಡಬೇಕು ? "ಇಲ್ಲ, ಕುಮುದಾ, ನಿನ್ನನ್ನು ನಾನು ಪ್ರೀತಿಸ್ತೇನೆ" ಎಂದು ಹೇಳಬೇಕೆ ? ಬರೀ ಶಬ್ದಗಳವು. ಆಗಿನ

ಆಕೆಯ ಮನಃಸ್ಥಿತಿಯಲ್ಲಿ ಆಕೆ ಆ ಶಬ್ದಗಳನ್ನು ನಂಬುತ್ತಿರಲೇ ಇಲ್ಲ. ಆಕೆ ನಂಬಲಿ, ಬಿಡಲಿ; ತನ್ನ ವಿಚಾರವೇನು ?

ಕುಮುದಳನ್ನು ತಾನು ಅಂದು ಪ್ರೀತಿಸುತ್ತಿದ್ದನೆ ?

ಇಂದು ಕುಮುದಳನ್ನು ಪ್ರೀತಿಸುತ್ತಿರುವನೆ ?

ರಾಮಣ್ಣ ಉಸಿರ್ಗರೆದ, ಮತ್ತೆ ಕಿಟಕಿಯ ಹೊರಗೆ ನೋಡಿದ, ಮುಖದಲ್ಲಿ ಇಲ್ಲದ ಬೆವರನ್ನೊರಸಿಕೊಂಡ. ಮೆಲ್ಲನೆ ಹೆಜ್ಜೆಗಳನ್ನಿಡುತ್ತ ಕುರ್ಚಿಯ ಮೇಲೆ ಕುಳಿತುಕೊಂಡು ಮುಖವನ್ನೆತ್ತಿ ಎದುರುಗೋಡೆಯನ್ನು ನೋಡಿದ. "ಇಬ್ಬರನ್ನ ಒಂದೇ ಕಾಲಕ್ಕೆ ಪ್ರೀತಿಸೋದು ಪ್ರಾಮಾಣಿಕ ಮತ್ತು ಶಕ್ಯ ಅಂತ ನೀ ಒಪ್ಪಿಕೊಂಡರೆ ನಾನು ಈ ಪ್ರಶ್ನಕ್ಕ ಉತ್ತರ ಕೊಡತೀನಿ, ಸರಲಾ" ಎಂದ ಗೋಡೆಗೆ ತೂಗಬಿದ್ದ ಸರಲೆಯ ಭಾವಪಟವನ್ನು ಸಂಬೋಧಿಸುತ್ತ.

ದಿಟ್ಟಿಸಿ ನೋಡಿದ ಭಾವಪಟವನ್ನು. ಸಿರಾಶೆಯಿಂದ ತಲೆಯನ್ನಲ್ಲಾಡಿಸಿದ.

"ನೀನೂ ಉತ್ತರ ಕೊಡಲೊಲ್ಲೆ."

ಹುಂ — ಎಂದು ಉಸಿರ್ಗರೆದು ವಿಚಾರದಲ್ಲಿ ತೊಡಗಿದವನಂತೆ ಸ್ತಬ್ಧನಾಗಿ ಕುಳಿತ.

"ಶಕ್ಯ ಅದನೊ ಇಲ್ಲೊ ನೀನು ಹೇಳು, ಪ್ರಾಮಾಣಿಕ ಅದನೊ ಇಲ್ಲೊ ನಾನು ಹೇಳ್ತೀನಿ" ಎಂದ ಮತ್ತೊಮ್ಮೆ ಭಾವಪಟವನ್ನು ನೋಡುತ್ತ.

ಪ್ರಾಮಾಣಿಕತೆಯ ಬಗ್ಗೆ ಅವನಿಗೆ ಈಗ ಧೈರ್ಯ ಬಂದಿತ್ತು. ೭–೮ ವರ್ಷಗಳ ಅನುಭವ, ಅನುಭವದ ಜೊತೆಗೆ ಧೈರ್ಯ ಬಂದಿತ್ತು. ಒಂದೇ ಕಾಲಕ್ಕೆ ಇಬ್ಬರನ್ನು "ಪ್ರಾಮಾಣಿಕ"ವಾಗಿ ಪ್ರೀತಿಸಬಹುದು ಎಂದು ಈ ಅನುಭವದಿಂದ ಪಾಠವನ್ನು ಕಲಿತುಕೊಂಡಿದ್ದ ರಾಮಣ್ಣ.

ಕುಮುದಳನ್ನೂ ತಾನು ಪ್ರೀತಿಸುತ್ತಾನೆ ಎಂಬುದರ ಬಗ್ಗೆ ಈಗ ಅವನಿಗೆ ಸಂಶಯ ಉಳಿದಿರಲಿಲ್ಲ. ಆದರೆ ಅದನ್ನು ಯಾರ ಮುಂದೆ ಹೇಳುವುದು ? "ಈಗ ನಿನ್ನಲ್ಲಿ ಪ್ರೀತಿ ಇದೆ" ಎಂದರೆ ಅವಳಿಗೆ ವಿಶ್ವಾಸ ಹುಟ್ಟೀತೆಂಬ ಭರವಸೆ ಇದ್ದಿರಲಿಲ್ಲ. ಇದಲ್ಲದೆ, "ನಿನ್ನನ್ನು ಪ್ರೀತಿಸುತ್ತಿದ್ದೇನೆ" ಎಂದರೆ ಅವಳಿಗೆ ಸಮಾಧಾನವಾಗುವ ಭರವಸೆಯೂ ಇದ್ದಿರಲಿಲ್ಲ. ತನ್ನನ್ನೊಬ್ಬಳನ್ನೆ ಪ್ರೀತಿಸ

ಬೇಕೆಂಬಾಸೆ ಹೆಂಗಸಿಗೆ ಸಹಜವಾಗಿಯೆ ಇರುವಾಗ ಆಕೆಗೆ ಆ ಮಾತಿನಿಂದ ಸಮಾಧಾನವಾಗುವುದು ಹೇಗೆ ?

ಆದರೂ ಕುಮುದಳಲ್ಲಿ ತನ್ನ ಪ್ರೀತಿ—ಇವೆ ಎಂದು ಆಕೆ ಎರಡನೆಯ ಸಲ ಮನೆ ಬಿಟ್ಟು ಹೋಗುವಾಗಲೆ ಅವನಿಗೆ ಹೊಳೆದಂತಾಗಿತ್ತು. ಅಂದು ಕೂಡ ಕಿಟಕಿಯಿಂದ ಹೊರಗೆ ನೋಡುವಾಗ ಹೀಗೆಯೆ " ಏನೂ ಕಾಣುವುದಿಲ್ಲ" ಎಂದೆನ್ನಿಸಿತ್ತು. ಈಗ ಮತ್ತೊಮ್ಮೆ ನೋಡಿದರೆ ಏನೇನೊ ಕಂಡಿತು. ಆಗ ಎಷ್ಟು ಸಲ ನೋಡಿದರೂ ಏನೂ ಕಾಣಿಸುತ್ತಿರಲಿಲ್ಲ; ನಿಜವಾದ ಶೂನ್ಯತೆ ಆವರಿಸಿತ್ತು ಒಳಗೂ ಹೊರಗೂ. ಇಷ್ಟೇ ಅಲ್ಲ, ದಿಟ್ಟಿಸಿ ನೋಡಿದಂತೆ ದೂರದಲ್ಲಿ ಕುಮುದಳೆ ಬರುತ್ತಿರುವಂತೆ ಕಾಣುತ್ತಿತ್ತು. ದೃಷ್ಟಿಯನ್ನು ಕುಮುದಳೆ ತುಂಬಿದಂತಾಗುತ್ತಿತ್ತು ; ದೃಷ್ಟಿಯನ್ನಲ್ಲ, ಮನಸ್ಸನ್ನು ಎನ್ನಬೇಕು, ಯಾಕೆಂದರೆ ಮನಸ್ಸಿನಲ್ಲಿದ್ದರೇನೆ ಕಣ್ಣಿಗೆ ಕಾಣಿಸುವುದು. ಅಂದು ಹಾಗಾದ ಅನುಭವದಿಂದ ತಾನು ಕುಮುದಳನ್ನು ಪ್ರೀತಿಸುತ್ತಿದ್ದಾನೆ ಎಂದು ಮನವರಿಕೆಯಾಗಿತ್ತು. ಸರಲೆಯನ್ನೂ ಪ್ರೀತಿಸುತ್ತಿದ್ದ ತಾನು ಕುಮುದಳನ್ನೂ ಪ್ರೀತಿಸುತ್ತಿರುವನಲ್ಲ! ಇದು ಆತ್ಮವಂಚನೆಯಾಗಿರಲಿಕ್ಕಿಲ್ಲವಷ್ಟೆ—ಎಂಬ ವಿಚಾರವೂ ನುಳಿದಿತ್ತು.

ಅದು ಆತ್ಮವಂಚನೆಯಾಗಿರಲಿಲ್ಲ. ಒಂದು ಅನುಭವದಿಂದಂತೂ ಅವನಿಗೆ ಪೂರ್ತಿ ಮನವರಿಕೆಯಾಗಿತ್ತು. ಕುಮುದಳ ವಿಯೋಗವನ್ನು ಸಹಿಸುವಾಗ, ಯಾವ ಕಾರಣಕ್ಕಾಗಿಯೊ ಏನೊ, ಹೊಸ ಕಾದಂಬರಿಯೊಂದನ್ನು ಬರೆಯಲು ಪ್ರಾರಂಭಿಸಿದ್ದನು. ಬರೆಯುವಾಗ ಸರಲೆ, ಕುಮುದ ಇಬ್ಬರೂ ತನ್ನ ಹತ್ತಿರದಲ್ಲಿಯೆ ಕುಳಿತಂತೆ ಭಾಸವಾಗುತ್ತಿತ್ತು. ಅವರ ಸಾಮೀಪ್ಯದ ಲಾಭವನ್ನು ಪಡೆಯಬೇಕೆನ್ನುವಂತೆ ಗಂಟೆ ಗಂಟೆ-ಗಟ್ಟಲೆ ಬರೆಯುತ್ತಿದ್ದನು. ಅಂತೂ ಒಂದು ದಿನ ಆ ಕಾದಂಬರಿ ಲೇಖನ ಮುಗಿಯಿತು. ಒಬ್ಬಿಬ್ಬರಿಗೆ ಓದಿ ತೋರಿಸಿದ್ದನು ; ಅವರ ಮೆಚ್ಚುಗೆಯ ಹಟದಿಂದ ಸ್ವಲ್ಪೇ ದಿನಗಳಲ್ಲಿ ಅದು ಮುದ್ರಿತವಾಯಿತು. ಅಬ್ಬ! ಎಷ್ಟೊಂದು ಹೊಗಳಿದ್ದರು ವಿಮರ್ಶಕರು! ಆ ದಿನ ಪತ್ರಿಕೆಗಳಲ್ಲಿ ಪ್ರಕಟವಾದ ವಿಮರ್ಶೆಗಳನ್ನು ಓದಿ (ಸಾರ್ವಜನಿಕ ವಾಚನಾಲಯದಲ್ಲಿ) ಮನೆಗೆ ಧಾವಿಸಿದ್ದ. ಬಂದವನೆ,

" ಕುಮುದಾ, ಕುಮುದಾ, ನನ್ನ ಕಾದಂಬರಿಯ ಬಗ್ಗೆ—"

ಎಂದು ಪ್ರಾರಂಭಿಸಿ ಒಮ್ಮೆಲೆ ದಂಗುಪಡೆದವನಂತೆ ನಿಂತುಬಿಟ್ಟಿದ್ದ.

ಕುಮುದ ಎಲ್ಲಿದ್ದಾಳೆ? ಆಕೆ ತನ್ನ ಮನೆ ಬಿಟ್ಟು ಹೋಗಿದ್ದಾಳೆಂಬುದು ಮರೆತಿತ್ತು. ಆದರೂ ತಾನು ತನ್ನ ಸಂತೋಷದಲ್ಲಿ ಭಾಗಿಯಾಗಲು ಕುಮುದಳನ್ನೆ ಯಾಕೆ ಕೂಗಿದ್ದ ?

ಆ ಪ್ರಶ್ನಕ್ಕ ಉತ್ತರ, ಕುಮುದಳನ್ನು ತಾನು ಪ್ರೀತಿಸುತ್ತಿದ್ದಾನೆ ಎಂದು.

ರಾಮಣ್ಣನಿಗೆ ಆ ಬಗ್ಗೆ ಮುಂದೆ ಆಶ್ಚರ್ಯವೂ ಎನ್ನಿಸಿರಲಿಲ್ಲ. ಹೆಂಡತಿಯನ್ನೂ ಮಕ್ಕಳನ್ನೂ ನಿಸ್ವಾರ್ಥ ಆತ್ಮೀಯತೆಯಿಂದ ಪ್ರೀತಿಸುತ್ತಿದ್ದರೆ ಇಬ್ಬರು ಹೆಂಡಂದಿರನ್ನು ಹಾಗೆಯೆ ಯಾಕೆ ಪ್ರೀತಿಸಬಾರದು—ಎಂದು ತನ್ನೊಳಗೆ ಚರ್ಚೆಯನ್ನು ನಡೆಸಿಕೊಂಡಿದ್ದ.

ಆ ಚರ್ಚೆಯ ನಿರ್ಣಯ ಎಷ್ಟೋ ಕಾಲದವರೆಗೆ ಆಗಿದ್ದಿರಲಿಲ್ಲ. ಹೆಂಡತಿಯೊಡನೆ ಇರುವ ಶರೀರಸಂಬಂಧದ ದೃಷ್ಟಿಯಿಂದ ಚರ್ಚೆಯಲ್ಲಿ ತೊಡಕು ಎದ್ದಿತ್ತು. ಆದರೆ ಅದು ತಪ್ಪು ಎಂದಿದ್ದ. ಗಂಡಹೆಂಡಿರ ಪ್ರೀತಿ ಹಾಸಿಗೆಯ ಮೇರೆಯಲ್ಲಿ ಎಂದು ತಿಳಿಯುವುದೆ ತಪ್ಪು ಎಂದು ಹಟದಿಂದ ಹೇಳಿಕೊಂಡಿದ್ದ. ಪ್ರೀತಿಯ ಲಕ್ಷಣಗಳೆ ಬೇರ. ಪ್ರೀತಿಗೂ ಶರೀರ ಸಂಭೋಗಕ್ಕೂ ಅಷ್ಟು ನಿಕಟಸಂಬಂಧವಿದ್ದಲ್ಲಿ ವೇಶ್ಯೆಯರಿಗಾಗಿ ಸಮಾಜದಲ್ಲಿ ತಿರಸ್ಕಾರ ಭಾವನೆಯೆ ಇರುತ್ತಿದ್ದಿಲ್ಲ ಎಂದುಕೊಂಡಿದ್ದ. ಗಂಡಹೆಂಡಿರ ಸಂಬಂಧದಲ್ಲಿ ಅದು ಮುಖ್ಯವಲ್ಲ ಎನ್ನಬಹುದೆ? ಅದು ಮುಖ್ಯವಲ್ಲದಿದ್ದರೆ ಅನೇಕ ಸಮಾಜಗಳಲ್ಲಿ " ಅದರ " ಅಭಾವ ಇಲ್ಲವೆ ಅಶಕ್ಯತ ವಿವಾಹ ವಿಚ್ಛೇದಕ್ಕೆ ಕಾರಣವಾಗುತ್ತಿರಲಿಲ್ಲ. ಹಾಗಾದರೆ—? ಒಂದು ದಿನ ಬಿಟ್ಟಿತ್ತು ರಾಮಣ್ಣನಿಗೆ ಈ ತೊಡಕು. ಶರೀರ ಸಂಭೋಗ ಗಂಡು-ಹೆಣ್ಣುಗಳಿಗೆ ನಿಸರ್ಗ ಒಪ್ಪಿಸಿದ ಒಂದು ಜವಾಬ್ದಾರಿ, ಒಂದು ಉದ್ದೇಶಕ್ಕಾಗಿ ಹೊರಿಸಿದ ಜವಾಬ್ದಾರಿ. ಆ ಉದ್ದೇಶದ ಅರಿವಿಲ್ಲದಲ್ಲಿ ಅದು ಕೀಳು, ಆ ಉದ್ದೇಶದ ಹೊಣೆ ಎನ್ನಿಸಿದಲ್ಲಿ ಅದು ಸಹಜಧರ್ಮ. ಆ ಉದ್ದೇಶ ಬೇರೆ ಯಾವುದೂ ಅಲ್ಲ, ನಿಸರ್ಗವನ್ನು ನಡೆಯಿಸುವುದು. ಚಿರಂತನ ಯುವತಿ-ಸೃಷ್ಟಿ ಎಂದರೆ; ಮುಪ್ಪು ಇಲ್ಲ, ಸಾವು ಇಲ್ಲ. ಮುಪ್ಪಿನ ಪರೆ

ಉದುರುವಂತೆ, ಸಾವಿನ ಸತ್ಯತೆಯನ್ನು ಅಲ್ಲಗಳೆವಂತೆ ಹಳೆದರಲ್ಲಿ ಹೊಸತನ್ನು ಚಿಗುರಿಸುವುದು. ಆ ಜವಾಬ್ದಾರಿ ಪ್ರಾಣಿಗಳಲ್ಲಿ ಹೆಣ್ಣು-ಗಂಡುಗಳಲ್ಲಿ ಹಂಚಲಾಗಿದೆ. ಅದಕ್ಕಾಗಿ ಕಾಮತೃಪ್ತಿಗೆ ಯಾವ ಹೆಂಗಸೂ ಸಾಕೆನ್ನಿಸಿದರೆ ನಿಸರ್ಗತೃಪ್ತಿಗೆ ಪ್ರೀತಿಯಿಂದ ಮದುವೆಯಾದ ಹೆಂಡತಿಯೆ ಬೇಕು. ಅಂತೂ ಪ್ರೀತಿಗೂ ಕಾಮತೃಪ್ತಿಗೂ ಸಹಜಸಂಬಂಧವಿಲ್ಲ—

ಆದರೆ? ತಾನು ಕುಮುದಳೊಡನೆ ಸಂಬಂಧವನ್ನು ಬೆಳೆಯಿಸಿ ಕೊಂಡುದನ್ನು ನೋಡಿದರೆ—?

ನಿಜ. ಕುಮುದಳು ತನ್ನನ್ನು ಆಕರ್ಷಿಸಿದ್ದು ಕಾಮವಾಸನೆಯ ದೃಷ್ಟಿಯಿಂದ. ಕುಮುದಳನ್ನು ತಾನು ಮದುವೆಯಾದದ್ದು ವ್ಯವಹಾರದ ಅನುಕೂಲದ ದೃಷ್ಟಿಯಿಂದ.

ಅದೆಲ್ಲ ನಿಜವಿದ್ದರೂ ಇಂದು ಎದುರಿಗಿಲ್ಲದೆಯೂ ಕುಮುದ ತನ್ನನ್ನು ಆಕರ್ಷಿಸುತ್ತಿದ್ದಾಳಲ್ಲ? ಆಕೆಯ ಸಹವಾಸವಿದ್ದರೆ ಸಾಕು ತನಗೆ ಸಮಾ-ಧಾನವಿತ್ತಲ್ಲ—ಇಡಿಯ ಒಂದು ವರ್ಷಕ್ಕಿಂತ ಹೆಚ್ಚು ಕಾಲ? ಆಕೆಯ ಸಹವಾಸ, ಆಕೆಯ ಸುಳಿದಾಟ, ಆಕೆಯೊಡನೆ ಮಾತು, ಜಗಳ ಕೂಡ ಆಕೆಯೊಡನೆಯೆ ಸೊಗಸು ಎನ್ನಿಸುವಾಗ ಹಿಂದಿನದನ್ನು ನೆನೆಯಿಸಿ ಪ್ರಯೋಜನವೇನು—ಎಂದುಕೊಂಡಿದ್ದ.

ಕೊನೆಗೆ ಚರ್ಚೆಯನ್ನು ಗೆದ್ದಿದ್ದ—ಎಷ್ಟೊ ತಿಂಗಳುಗಳ ಮೇಲೆ.

ಆಗ ಕುಮುದ ಮತ್ತೆ ಮನೆಗೆ ಬಂದಿದ್ದಳು. ಯಾಕೆ? ಯಾವ ವಿಚಾರದಿಂದ? ಆಕೆಯೊಡನೆ ಹೇಗೆ ನಡೆದುಕೊಳ್ಳುವುದು? ಮತ್ತೆ ತನ್ನ ಧೈರ್ಯ ಕುಸಿದಿತ್ತು. ಇಂದಿಗೂ ತನ್ನ ಅವಸ್ಥೆ ಹಾಗೆಯೆ ಇದೆ. ಒಮ್ಮೆ ಆಕೆಯೊಡನೆ ಮನಬಿಚ್ಚಿ ಮಾತನಾಡಿದರೆ, ಒಮ್ಮೆ ಆಕೆಗೆ ಮನವರಿಕೆ ಮಾಡಿ ಕೊಟ್ಟರೆ ತಾನು ಸಂಸಾರವನ್ನು ಗೆದ್ದಂತೆ ಎಂದು ತಿಳಿದುಕೊಂಡಿದ್ದ. ಮಾತನಾಡುವ ಧೈರ್ಯವೆ ಆಗಿರಲಿಲ್ಲ, ಮತ್ತೆ ಮನೆ ಬಿಟ್ಟು ಹೋದರೆ ಹೇಗೆ ಎಂಬ ಹೆದರಿಕೆಯಿಂದ—

ಛಿ! ಈಗ್ಯಾಕೆ ಅದೆಲ್ಲ ವಿಚಾರ? ಇಂದಿನ ಸತ್ಕಾರನಮಾರಂಭಕ್ಕೆ ಬರುವಳಲ್ಲ? ಅಲ್ಲಿ ನಡೆಯುವುದನ್ನೆಲ್ಲ ನೋಡಿ ಆಕೆಯ ಮನಸ್ಸೂ ಪ್ರಸನ್ನ ವಾಯಿತೆಂದರೆ—

ಕೈಗಡಿಯಾರವನ್ನು ನೋಡಿಕೊಂಡು ಕುರ್ಚಿಯಿಂದೆದ್ದ. ಈಗ ಸಮಾರಂಭಕ್ಕಾಗಿ ಅವಸರ. ಕುಮುದಳೊಡನೆ ಮೋಹನನೂ ಬಂದರೆ ಒಳಿತು, ಆದರೆ ಆ ಹುಡುಗ ಇನ್ನೂ ಮನೆಗೆಯೆ ಬಂದಂತಿಲ್ಲ ಎಂಬ ಸಂಶಯದಿಂದ ಮತ್ತೆ ಕಿಟಕಿಯತ್ತ ನಡೆದ.

## ೧೧

ಬಾಗಿಲಿಗೆ ನಿಂತ ಕುಮುದಳಿಗೆ ಮೋಹನನ ಸುಳಿವೇ ಕಾಣಲೊಲ್ಲದು. ಯಾಕೊ? ಬೆಳಗಿನಿಂದ ಒಂದೂ ಲಕ್ಷಣವೆ ಒಳ್ಳೆಯದಾಗಿಲ್ಲ; ಹಾಗೆ ಕೇಳಿದರೆ ಯಾವುದು ಕೆಟ್ಟದ್ದೂ ಆಗಿಲ್ಲ. ಆದರೂ ಮನಸ್ಸಿನಲ್ಲಿ ಒಂದು ತರದ ಹುರುಹುರು. ಎಲ್ಲಿಯೊ ಯಾವಾಗಲೊ ಎಂದೊ ಏನೊ ಕೆಟ್ಟ ದಾಗಿದೆ, ಇಲ್ಲವೆ ಕೆಟ್ಟದಾಗುವುದಿದೆ ಎಂಬ ಹೆದರಿಕೆ ಒಳಗೆ ಹುದುಗಿ ಕೊಂಡು ಕುಳಿತು, ಆಗಾಗ ಬರಲೊ ಬ್ಯಾಡೊ ಎನ್ನುವವರಂತೆ ಮೆಲ್ಲನೆ ತಲೆ ಎತ್ತುತ್ತಿದೆ. ಮೋಹನ ಬೇಗ ಬಂದರೆ ಸಾಕು.

ತಾನೊಂದು ಹುಚ್ಚಿ! ಮೋಹನ ಬಂದೇಬರುವ. ಸುಮ್ಮನೆ ಹೆದರಿ ಕೊಂಡಿದ್ದಾಳೆ. ಹುಡುಗರೊಡನೆ ಆಟದಲ್ಲಿ ಮಗ್ನನಾಗಿದ್ದಾನೊ ಏನೊ! ಆದರೂ ಬೇಗ ಬಂದರೆ ಒಳಿತು. ಮೈ ಕೈ ಬಟ್ಟೆ ಎಲ್ಲ ಹೊಲಸು ಮಾಡಿ-ಕೊಂಡು ತಡಮಾಡಿ ಬರುವುದು, ಆಮೇಲೆ "ನಾನೂ ನಿಮ್ಮೊಡನೆ ಬರುವೆ" ಎಂದು ಹಟ ಹಿಡಿಯುವುದು. ಹೋಗಲಿ, ಅಂತಹದೇನಿದೆ? ವೇಳೆಗೆ ಸರಿಯಾಗಿ ಹೋಗಲೇಬೇಕು ಎಂಬ ಹಟವಾದರೂ ಎಲ್ಲಿದೆ? ಸಭೆಯು ಏರ್ಪಾಟಾದದ್ದೆ ತಮ್ಮ ಸಲುವಾಗಿ, ತಮಗಾಗಿಯೆ ಎಲ್ಲ ಕಾರ್ಯಕ್ರಮ—

'ತಮ್ಮ'! 'ತಮಗಾಗಿ'!

ಕುಮುದಳಿಗೆ ಮೋಜೆನ್ನಿಸಿತು, ಅಂದಿನ ಸಮಾರಂಭದ ಸನ್ನಿವೇಶ ದಲ್ಲಿ ತನ್ನನ್ನೂ ಸೇರಿಸಿಕೊಂಡುದಕ್ಕೆ. ಹುಚ್ಚಿ! ತನ್ನದೇನು ಸಂಬಂಧ? ಸಭೆ ಸೇರುವುದು ರಾಮಣ್ಣನನ್ನು ಸತ್ಕರಿಸುವುದಕ್ಕೆ. ತಾನು ಹೋಗುವುದು ರಾಮಣ್ಣನ ಮದುವೆಯ ಹೆಂಡತಿ–ಎಂದು. ಗಂಡನ ಗೌರವ ನೋಡಿ ಅಸೂಯೆ ಆಗಲೆಂದೊ, ಆನಂದವಾಗಲೆಂದೊ, ಈರ್ಷ್ಯೆಯಾಗಲೆಂದೊ

ಹೆಂಡತಿಯನ್ನು ಆಮಂತ್ರಿಸುವ ರೂಢಿ ಇದ್ದಿರಬೇಕು. ಕುಮುದಳಿಗೆ ಇಂತಹ ಸಂದರ್ಭಗಳಲ್ಲಿ ಹಾಜರಿರಲು ಎಂದೂ ಮನಸ್ಸಾಗುತ್ತಿರಲಿಲ್ಲ. ಹೆಂಡಂದಿರಿಗೆ ಸ್ವಾಭಿಮಾನವಿದ್ದರೆ ಅವರು ಇಂತಹ ಆಮಂತ್ರಣಗಳನ್ನು ನಿರಾಕರಿಸಬೇಕು–ಎಂದು ಅವಳು ಹೇಳುತ್ತಿದ್ದಳು. ಗಂಡನ ಸತ್ಕಾರದ ಪ್ರತಿಯೊಂದು ಕ್ಷಣವೂ ಸಭಿಕರು ಅವನ ಹೆಂಡತಿಯನ್ನು ಆಗಾಗ ನೋಡುವರು; ಕೆಲವರು ಮುಗುಳ್ನಗೆ ನಗುವರು, ಕೆಲವರು ಬದಿಯಲ್ಲಿ ಕುಳಿತವರಿಗೆ ಏನನ್ನೋ ಹೇಳುವರು (ತನ್ನ ಸಲುವಾಗಿ), ಹೆಂಗಸರಂತೂ ಮನಃಪೂರ್ವಕ ಅಸಹ್ಯ ಪಡುವರು—ಅಂತೂ ಸಭೆಗೆ ಬರಬಾರದಿತ್ತು ಎನ್ನಿಸುವಂತಾಗುವುದು. ತನಗೆ ಗೊತ್ತಿದ್ದೂ ತಾನು ಇಂದಿನ ಸಭೆಗೆ ಹೋಗಲು ಒಪ್ಪಿದ್ದಾಳೆ! ಯಾಕೆ—ಎಂಬುದು ಗೊತ್ತು ಆಕೆಗೆ. ಸಂಚಾಲಕರು ಒಳ್ಳೇ ಯುಕ್ತಿಯಿಂದ ಒಲಿಸಿಕೊಂಡಿದ್ದರು. "ನಿಮಗೆ ನಮ್ದೊಂದು ಬಿನ್ನಹ.", "ನೀವು ನಮ್ಮ ಮಾತಿಗೆ ಇಲ್ಲ ಅನ್ನಬಾರದು," "ನಿಮ್ಮ ಸತ್ಕಾರ ಅನ್ನೋದು ನಮ್ಮ ಸಮಾಧಾನಕ್ಕ, ಹಾಂಗ ಕೇಳಿದರ ನಮ್ಮನ್ನೆ ಸತ್ಕರಿಸಿಕೊಂಢಾಂಗ" ಎಂದು ಮುಂತಾಗಿ "ನೀವು–ನಿಮ್ಮ" ಎಂದು ಇದು ಇಬ್ಬರದೂ ಸತ್ಕಾರ ಎಂಬಂತೆ ಮಾತನಾಡಿದರು. ಇಬ್ಬರದೂ ಅಲ್ಲ ಎಂಬುದು ತನಗೂ ಗೊತ್ತು, ಅವರಿಗೂ ಗೊತ್ತು; ತನ್ನ ಬಗ್ಗೆ ಹೆಚ್ಚೆಂದರೆ ಒಂದು ಮಾತನ್ನು ಅವರು ಹೇಳುವರು, ಅದೆಂದರೆ ತಾನು ರಾಮಣ್ಣನ ಹೆಂಡತಿ–ಎಂಬುದು. ಪಾಪ! ಅವರಿಗೇನು ಗೊತ್ತು?

ಕುಮುದಳಿಗೆ ಕೆಣಕಿದಂತಾಗಿತ್ತು. "ಅವರಿಗೇನು ಗೊತ್ತು, ಒಂದಾನೊಂದು ಕಾಲದಲ್ಲಿ ರಾಮಣ್ಣನ ಸಾಹಿತ್ಯಕ್ಕೆ ತಾನೇ ಪೂರ್ತಿಯಾಗಿ ಪ್ರೇರಕಳಾಗಿದ್ದಳು–ಎಂಬುದು ಅವರಿಗೇನು ಗೊತ್ತು?" ಎಂದುಕೊಂಡಳು. ತಾವು ಬಾಳುವ ಪಶುಜೀವನದ ಅನುಭವದಿಂದ ಮಿಕ್ಕವರ ಜೀವನವೂ ಹಾಗೆಯೆ ಎಂದು ತಿಳಿದುಕೊಂಡರೆ ತಪ್ಪು ಅವರದಲ್ಲ. ಕುಮುದಳು ಬಲ್ಲಳು, ಕಲಿತವರ, ಕಲಿಯದವರ, 'ಸುಸಂಸ್ಕೃತ'ರ, 'ಸುಧಾರಿಸಿದ'ವರ ಸಂಸಾರದ ಸ್ವರೂಪವನ್ನು ಬಲ್ಲಳು. ಇಡಿಯ ದಿನ ಗಂಡನಿಗೆ ಕಚೇರಿಯ ಅವಸರ, ನೌಕರಿಯ ವಿಚಾರ, ಬಡತಿಗಳ ಚರ್ಚೆ; ತಿನ್ನುವುದಕ್ಕೆ ಮನೆ, ತಿಂದು ಆನಂದಪಡುವುದಕ್ಕೆ ಹೊಟೆಲ್; ದಣಿದಾಗ ಮಲಗುವುದಕ್ಕೆ ಮನೆ,

ದಣಿದು ಮನರಂಜನೆ ಬೇಕೆಂದರೆ ಸಿನೆಮಾ; ಕಾಮತೃಪ್ತಿಗಾಗಿ ಮನೆ, ಪ್ರೇಮದ ಹಂಬಲವಿದ್ದಲ್ಲಿ ಪಾರ್ಕದೊಳಗಿನ ಪರಸ್ತ್ರೀ. ಇಂತಹ ಗಂಡ ಹೆಂಡಿರ ಸಂಭಾಷಣೆ ಎಂದರೆ ಜಗಳದ ಪೀಠಿಕೆ, ಸಹವಾಸ ಎಂದರೆ ಹಾಸಿಗೆಯಲ್ಲಿ; ಎಷ್ಟೋ ಸಲ ಮನೆಯಲ್ಲಿಯೆ ದುಡಿಯುವುದಕ್ಕಾಗಿ, ಗಂಡನ ಅಲಕ್ಷ್ಯಕ್ಕಾಗಿ ಮಕ್ಕಳನ್ನು ಹಡೆಯುವುದಕ್ಕಾಗಿ ಮದಿವೆಯಲ್ಲಿ ಗಂಡನೆದುರು ಚಿಕ್ಕ ಹುಡುಗೆಯಾಗಿದ್ದ ಹೆಂಡತಿ ಈಗ ಗಂಡನ ಬದಿಯಲ್ಲಿ ಅವನ ಅಕ್ಕನಂತೆಯೊ ತಾಯಿಯಂತೆಯೊ ಕಾಣುವುದು. ಕಲಿಯಲಿ ಕಲಿಯದಿರಲಿ, ಹೆಂಗಸರ ಹಣೆಬರೆಹ ಇದು. ಹಾಗೆ ಕೇಳಿದರೆ, ಅಶಿಕ್ಷಿತ ಹೆಂಗಸರೇ ಸುಖಿಗಳು; ದುಡಿಯುವರು, ಸ್ವಂತಕ್ಕಾಗಿ ಗಳಿಸುವರು, ತಮಗೆ ಇಷ್ಟವೆನ್ನಿಸಿದ ಗಂಡಸಿನೊಡನೆ ಬಾಳುವರು.

ಕುಮುದಳಿಗೆ ಒಮ್ಮೆಲೆ ನಗೆ ಬಂದಿತು, ರಾಮಣ್ಣನ ಒಂದು ಮಾತಿಗಾಗಿ. ಇದೇ ವಿಷಯ ಚರ್ಚೆ ನಡೆದಾಗ ರಾಮಣ್ಣ ಆವೇಶದಿಂದ ನುಡಿದಿದ್ದ, "ತಮ್ಮ ವ್ಯಕ್ತಿತ್ವವನ್ನು ತೋರಿಸುವಷ್ಟು ಗಂಡಸುತನ ಬೇಕು ಹೆಂಗ್ಸಿಗೆ" ಎಂದಿದ್ದ. ಆ ಮಾತಿಗೆ ತಾನು ಗಟ್ಟಿಯಾಗಿ ನಕ್ಕಿದ್ದಳು, ಒಂದು ನಿಮಿಷ ರಾಮಣ್ಣನಿಗೆ ತಿಳಿದಿರಲಿಲ್ಲ, ಆ ಮೇಲೆ ಅವನಿಗೂ ಹೊಳೆಯಿತು, ಇಬ್ಬರೂ ಹೊಟ್ಟೆ ಹುಣ್ಣಾಗುವಷ್ಟು ನಕ್ಕಿದ್ದರು.

ಕುಮುದ ಉಸುರ್ಗರೆದಳು. ರಾಮಣ್ಣನೊಡನೆ ಅಷ್ಟೊಂದು ಆತ್ಮೀಯತೆಯಿಂದ ತಾನು ನಡೆಯುತ್ತಿದ್ದ ಒಂದು ಕಾಲ ಇದ್ದಿತು – ಎಂಬ ವಿಚಾರದಿಂದ ಸಮಾಧಾನ ಹೊಂದಿದವಳಂತೆ ಉಸುರ್ಗರೆದಳು.

ಅದೆಂತಹ ಆತ್ಮೀಯತೆ! ದೇಹ ಎರಡು ಎಂಬುದರ ಅರಿವೂ ತಮಗಿರುತ್ತಿದ್ದಿಲ್ಲ. ಒಮ್ಮೊಮ್ಮೆ ಆ ವಿಚಾರದಿಂದ ಹೆದರಿಕೆಯಾಗುತ್ತಿತ್ತು. ಒಮ್ಮೆಯಂತೂ—ಕುಮುದಳು ಈಗಲೂ ನಡುಗಿದಳು ನೆನಪಿನಿಂದ.

ಮೋಹನನನ್ನು ಇನ್ನೂ ಹೊಟ್ಟೆಯಲ್ಲಿ ತಳೆದಾಗ. ತನಗಾದುದು ಹೊಸತೇನೂ ಅಲ್ಲ ಎಂಬುದು ತಿಳಿದಿದ್ದರೂ ಆಕೆಗೆ ಒಂದು ತರದ ಅಧೈರ್ಯವಿದ್ದಿತು. ಹೆಣ್ಣಿಗೆ ಅದು ಸಹಜವಾದುದು, ಹೆಣ್ಣಿನ ಸಫಲತೆಯೆ ಹೆರಿಗೆಯಿಂದ ಎಂದು ಮುಂತಾಗಿ ಹೇಳಿ ರಾಮಣ್ಣ ತನಗೆ ಧೈರ್ಯವನ್ನು ಕೊಡುತ್ತಿದ್ದ. ಆದರೂ ಹೆದರಿಕೆ. ಯಾಕಾಗಬಾರದು? ಹೊರಗಿನಿಂದ

ಒಂದು ಕಸದ ಕಣ, ಒಂದು ಮುಳ್ಳಿನ ತುದಿ ಶರೀರದಲ್ಲಿ ಸೇರಿಕೊಂಡಲ್ಲಿ ಶರೀರಕ್ಕೆ ಎಷ್ಟೊಂದು ಅಪಥ್ಯವಾಗುವುದು! ಇದಂತೂ—ಇದು ಏನೊ ಯಾವುದೊ! ಕುಮುದಳಿಗೆ ಮೊದಲು ಆ ಹೆದರಿಕೆ. ಹೆಣ್ಣೊ ಗಂಡೊ ಎಂಬ ಹೆದರಿಕೆಯಲ್ಲ, ಯಾವುದಾದರೊಂದು ನಿಶ್ಚಿತರೂಪವನ್ನಾದರೂ ತಾಳುವುದೆ-ಎಂಬ ಹೆದರಿಕೆ. ಅದಕ್ಕೂ ಮುಂಚಿತ ಇನ್ನೂ ಒಂದು ಹೆದರಿಕೆ. ತನ್ನದೆ ಕ್ಷೇಮ ಸುರಕ್ಷಿತವಾಗಿದೆ ಎಂದು ಹೇಗೆ ಹೇಳಬಹುದು ? ಏನಾದರೂ ಹೆಚ್ಚು ಕಡಿಮೆಯಾಗಿ ತನ್ನ ಆಯುಷ್ಯಕ್ಕೆ ಧಕ್ಕೆ ತಗುಲಿದರೆ ? ಈ ವಿಚಾರ ದಿಂದ ಮೊದಮೊದಲು ಆಕೆಗೆ ತನ್ನ ಬಸಿರಿಗಾಗಿ ಅಸಮಾಧಾನವಾಗಿದ್ದಿತು, ಯಾವುದೋ ಒಂದು ಅನಿಶ್ಚಿತ ಸಿಟ್ಟು ಇದ್ದಿತು, ಒಮ್ಮೊಮ್ಮೆ ಮನಸ್ಸಿನಲ್ಲಿ ರಾಮಣ್ಣನನ್ನು ದೂಷಿಸುವಳು ; ಯಾರ ಹೊಣೆ, ಯಾರು ಭೋಗಿಸಬೇಕು? ಹೆಣ್ಣಿಗೆ ಇದೊಂದು ಅನ್ಯಾಯ ಎಂದುಕೊಳ್ಳುವಳು. ತನಗೆ ಯಾವಾಗಲೂ ಆ ಚಿಂತೆಯೆ ಇದ್ದರೆ ರಾಮಣ್ಣನಿಗೆ ತಪ್ಪಿ ಕೂಡ ಅದರ ವಿಚಾರವಿದ್ದಿರಲಿಲ್ಲ-ವಲ್ಲ ? ಏನೂ ಆಗಿಯೆ ಇಲ್ಲ ಎನ್ನುವಂತೆ ಎಂದಿನಂತೆಯೆ ವ್ಯವಹರಿಸುತ್ತಿರು ವನಲ್ಲ—ಎಂದುಕೊಳ್ಳುವಳು. ಮಲಗಿದಾಗ, ಇಂತಹ ವಿಚಾರಗಳಿಂದ ನಿದ್ದೆ ಬಾರದಿದ್ದಾಗ ರಾಮಣ್ಣನ ಮೇಲೆ ಮನಸ್ಸಿನೊಳಗಿದ್ದ ಸಿಟ್ಟನ್ನು ವ್ಯಕ್ತ ಪಡಿಸಲು ಒಮ್ಮೆಲೆ ಅವನ ಕಡೆ ಬೆನ್ನುಮಾಡಿ ಮಲಗಿಕೊಳ್ಳುತ್ತಿದ್ದಳು ತಾನು ಎಷ್ಟೊತ್ತು ನಿದ್ದೆ ಬಾರದೆ ಉರುಳಾಡಿದರೂ ರಾಮಣ್ಣ ಗಾಢವಾಗಿ ಮಲಗಿರುತ್ತಿದ್ದ. ಆಗ ಇನ್ನೊಂದು ಹೆದರಿಕೆಯಾಗುವುದು. ರಾಮಣ್ಣನಿಗೆ ತನ್ನ ಬಗ್ಗೆ ಈಗ ಆಸಕ್ತಿ ಇರಲಿಕ್ಕಿಲ್ಲವೆ ? ಬದಲಾಯಿಸುತ್ತಿರುವ ತನ್ನ ಶರೀರ ವನ್ನು ನೋಡಿ ಅವನು ಅಸಹ್ಯ ಪಡುತ್ತಿರಬಹುದೆ ? ತನಗಾಗಿದ್ದ ರಾಮಣ್ಣನ ಪ್ರೇಮದ ಕತೆ ಇಲ್ಲಿಗೇ ಮುಗಿಯಿತೆ ? ಒಮ್ಮೊಮ್ಮೆ ಹೀಗೆ ವಿಚಾರಮಾಡು ತ್ತಿರುವಾಗ ನಿದ್ರೆಯಲ್ಲಿಯೆ ರಾಮಣ್ಣನ ಕೈ ತನ್ನ ಮಗ್ಗುಲ ಮೇಲೆ ಬರುತ್ತಿತ್ತು, ಅವನಿಗೆ ತಿಳಿದೊ ತಿಳಿಯದೆಯೊ ತನ್ನ ಹೊಟ್ಟೆಯ ಮೇಲೆ ತಾಕುತ್ತಿತ್ತು. ಅಂತಹ ಸಮಯಲ್ಲಿ ಚಳಿ ಸೇರಿದಂತೆ ಅವಳ ಮೈ ನಡುಗುತ್ತಿತ್ತು, ಎಲ್ಲ ವಿಚಾರ ತಡೆದಂತಾಗಿ ಮೆಲ್ಲಗೆ ಮಗ್ಗುಲ ಬದಲಾಯಿಸಿ ಮತ್ತೆ ರಾಮಣ್ಣನ ಕಡೆ ಮುಖ ಮಾಡಿ ಮಲಗುತ್ತಿದ್ದಳು, ಅವನ ಮುಖದ ಮೇಲೆ ಕಯ್ಯಾಡಿ ಸುತ್ತಿರುವಾಗಲೆ ತನಗೆ ನಿದ್ರೆ ಬಂದುಬಿಟ್ಟಿರುತ್ತಿತ್ತು.

ನೆನಪಿನಿಂದ ಈಗಲೂ ಕಂಠ ತುಂಬಿಬರುತ್ತಿದ್ದಿತು ಕುಮುದಳಿಗೆ. ಎಂತಹ ತಾದಾತ್ಮ್ಯ ತಮ್ಮಿಬ್ಬರಲ್ಲಿ ? ಯಾರು ತಿಳಿಯಬಲ್ಲರು ಒಂದಾನೊಂದು ಕಾಲದಲ್ಲಿ ತಮ್ಮಿಬ್ಬರಲ್ಲಿ ಅಂತಹ ತಾದಾತ್ಮ್ಯವಿತ್ತೆಂದು ? ಮೋಹನನು ಒಳಗೆ ಬೆಳೆಬೆಳೆದಂತೆ ತನಗೂ ಧೈರ್ಯ ಹೆಚ್ಚಿತ್ತು, ರಾಮಣ್ಣನ ಸಂತೋಷವೂ ಬೆಳೆದಿತ್ತು. ಒಮ್ಮೊಮ್ಮೆ ರಾಮಣ್ಣನ ಮಾತುಕತೆಗಳಿಗಾಗಿ ತನಗೆ ನಗೆ ಬರುತ್ತಿದ್ದಿತು. ತಾನು ಮಾಡಿದ ಕಿಡಿಗೇಡಿತನವನ್ನು ಹೆಮ್ಮೆಯಿಂದ ನೋಡುವ ಎಳೆ ಹುಡುಗನಂತಾಗಿದ್ದನು ಅವನು. "ಹಾಂ, ಏಳಬೇಡ !" "ಎಲೆಲೆ, ಅದನ್ನೆತ್ತಬ್ಯಾಡ !" "ಸುಮ್ಮ ಸುಮ್ಮನೆ ಪಾವಟಗೆ ಹತ್ತಬ್ಯಾಡ !" ಎಂಬ ಅವನ ಹೆದರಿಕೆಯ ಮಾತುಗಳಿಗಾಗಿ ನಗಲೇ ಬೇಕಾಗುತ್ತಿತ್ತು. ಭಾರ ಹೊಟ್ಟೆಯೊಳಗಿನದು, ಹೊರಗಿನಿಂದುದನ್ನು ಎತ್ತಿ ಇಟ್ಟುಕೊಂಡಿದ್ದಲ್ಲ, ಅದಕಾಗಿ ಅದೂ ತನ್ನ ಶರೀರದ ಒಂದು ಅವಯವದಷ್ಟೆ ಸಹಜವಾಗಿದ್ದಿತು ಎಂಬುದು ಅವನಿಗೆ ಹೇಗೆ ತಿಳಿಯಬೇಕು ? ಗಂಡಸು ಎಂದರೆ ಅನುಭವವಿಲ್ಲದ ಮಗುವಿನಂತೆ ಎಂಬುದು ಆಗ ಹೊಳೆದಿತ್ತು ಆಕೆಗೆ. ಒಂದು ರಾತ್ರಿ, ಯಾವುದೊ ಕಾರಣಕ್ಕಾಗಿ ತಾನು ಅಸ್ವಸ್ಥವೆನ್ನಿಸಿ ತನಗೆ ನಿದ್ರೆ ಬಂದಿರಲಿಲ್ಲ. ಆಗ ದೀಪವನ್ನು ಹಚ್ಚಿ ಹಾಸಿಗೆಯಲ್ಲಿಯೆ ಎದ್ದು ಕುಳಿತಿದ್ದಳು ಮಗ್ಗುಲಲ್ಲಿ ಮಲಗಿದ್ದ ರಾಮಣ್ಣ. ಮುಖದ ಮೇಲೆ ವಿಶ್ರಾಂತಿಯ ಮುಗ್ಧ ಕಳೆ. ಗಾಢ ನಿದ್ರೆಗಾಗಿ ದೇಹ ಗೊಂಬೆಯಂತೆ ನಿಶ್ಚಲವಾಗಿದ್ದಿತು. ಎಡ ಅಂಗೈ ತಲೆಯ ಕೆಳಗಿದ್ದಿತು, ಎಡಮಗ್ಗುಲು ಮಲಗಿದ ಅವನ ಬಲಗೈ ಇನ್ನೂ ತನ್ನ ಮೈ ಮೇಲೆಯ ಇದ್ದಿತು. ತಾನು ಎದ್ದು ಕುಳಿತು ಮೆಲ್ಲನೆ ಆ ಕೈಯನ್ನೆತ್ತಿ ತನ್ನ ತೊಡೆಯಮೇಲಿಟ್ಟುಕೊಂಡಳು, ಎರಡೂ ಕೈಗಳಿಂದ ಹಿಡಿದುಕೊಂಡಳು ; ಬೆಚ್ಚನ್ನ ಆ ಕೈಯಿಂದ ತನಗೂ ಬೆಚ್ಚಗೆನ್ನಿಸಿತ್ತು ; ಎರಡೂ ಕೈಗಳಿಂದ ಆ ಕೈಯನ್ನೆತ್ತಿ ತನ್ನ ಹೊಟ್ಟೆಯ ಮೇಲಿಟ್ಟುಕೊಂಡಿದ್ದಳು ; ಒಂದು ಕ್ಷಣದಲ್ಲಿ ಕಣ್ಣಿಗೆ ಕತ್ತಲೆ ಬಂದಂತಾಗಿತ್ತು; ರಾಮಣ್ಣನ ಕೈ ಹೊಟ್ಟೆಗೆ ತಾಕಿದೊಡನೆಯೆ ಏನೊ ಮಿಂಚಿದಂತಾಗಿತ್ತು , ಎದುರಿಗೆ ಮಲಗಿದ ರಾಮಣ್ಣ ತನ್ನ ಹೊಟ್ಟೆ ಯೊಳಗೆ ಲೀನನಾದಂತಾಯ್ತು , ಗಾಬರಿಗೊಂದಿದ್ದಳು ; ನಿಜ, ನಿಜ, ರಾಮಣ್ಣನೆ ತನ್ನ ಹೊಟ್ಟೆಯೊಳಗೆ ಮಾಯವಾಗಿದ್ದಾನೆ, ಅದೊ–ಅದೊ– ಹುದುಗಿಕೊಳ್ಳಲು ಯತ್ನಿಸುತ್ತಿದ್ದಾನೆ—ಎಂದು ಗಾಬರಿಗೊಂಡು ಕೈಯನ್ನು

ಗಟ್ಟಿಯಾಗಿ ಹಿಡಿದುಕೊಂಡಿದ್ದಳು ; ರಾಮಣ್ಣ ತಟ್ಟನೆ ಎದ್ದು, "ಏನು ? ಏನಾಯ್ತು, ಕುಮುದಾ " ಎಂದು ಕುಳಿತಿದ್ದ; ಅಷ್ಟರಲ್ಲಿ ತನಗೆ ತಿಳಿದಿತ್ತು ಏನಾಗಿತ್ತೆಂಬುದು ; ಆ ಜ್ಞಾನದಿಂದ ಆನಂದ ಉಕ್ಕೇರಿ ತನ್ನ ಮುಖದಲ್ಲಿ ನಗೆ ತುಂಬಿತ್ತು ; ಒಂದು ಕ್ಷಣ ತನ್ನನ್ನು ದಿಟ್ಟಿಸಿ ನೋಡಿ, ತನ್ನ ಹೊಟ್ಟೆಯ ಮೇಲೆ ಕೈಯನ್ನು ಮತ್ತೊಮ್ಮೆ ಇಟ್ಟು ರಾಮಣ್ಣನೂ ಮುಗುಳ್ನಗೆಯಿಂದ ಮುಖ ಅರಳಿಸಿ, "ಓಹೊ !" ಎಂದಿದ್ದ !

ಅಂದು ಮೊದಲ ಬಾರಿ ಹೊಟ್ಟೆಯೊಳಗಿನ ಹೊಸ ಜೀವ ಸರಿದಾಡಿತ್ತು!

ಅದೇ ನನ್ನ ಮೋಹನ! ಅಲ್ಲ, ನಮ್ಮಿಬ್ಬರ ಮೋಹನ—ಎಂದುಕೊಂಡಳು ಕುಮುದ. ಅಂದಿನಿಂದ ಮೋಹನ, ರಾಮಣ್ಣ ಎರಡೂ ಒಂದೇ ವ್ಯಕ್ತಿ ಎಂದೆನ್ನಿಸಿತ್ತು ಕುಮುದಳಿಗೆ.

ಆ ಮೋಹನನನ್ನು ಒಂದು ದಿನ ಹೊಡೆದಿದ್ದಳಲ್ಲವೆ ? ಮೋಹನ, ರಾಮಣ್ಣ ಇಬ್ಬರೂ ತನಗೆ ಒಂದಾಗಿದ್ದರೆ ತಾನು ರಾಮಣ್ಣನನ್ನು ಹೊಡೆದಂತೆಯೆ ಅಲ್ಲವೆ ? ಅದಕಾಗಿಯೆ ಮೋಹನನಿಗೆ ಬಿದ್ದ ಪೆಟ್ಟುಗಳಿಗಾಗಿ ರಾಮಣ್ಣನಿಗೆ ನೋವಾಗಿತ್ತೇನೊ !

ಕುಮುದ ಅತ್ಯಂತ ನಿರಾಸೆಯಿಂದ ಉಸುರ್ಗರೆದಳು. ವರ್ಷಾನು ವರ್ಷಗಳ ಮುಂಚಿನ ಎಲ್ಲ ಕಹಿ – ನೆನಪುಗಳನ್ನು ಒಂದೇ ಸಲ ಹೊರದೂಡ ಬೇಕೆನ್ನುವಂತೆ ದೀರ್ಘವಾಗಿ ಉಸುರ್ಗರೆದಳು.

"ತಿರುಗಿ ಬರೋದೇ ಇಲ್ಲ" ಎಂದು ಹೇಳಿದ್ದು ಆ ದಿನವೆ. ಆದರೂ ತಿರುಗಿ ಬಂದು ಇಂದಿಗೆ ಎಷ್ಟೊ ವರ್ಷಗಳು – ಏನು ಯುಗಗಳೊ ?— ಕಳೆದಿವೆ.

ಅದೂ ಒಂದು ಅನುಭವವೆ—ಎಂದುಕೊಳ್ಳುವಾಗ ಆಕೆಗೆ ಒಮ್ಮೆಲೆ ನಗೆ ಬಂದಿತು, ಎಂತಹ ಅನುಭವ ! ಈಗ ಮೋಜು ಎನ್ನಿಸುತ್ತಿದೆ. ತಾನು ಅಷ್ಟೊಂದು ಅಬ್ಬರದಿಂದ, ಅಷ್ಟೊಂದು ಸಿಟ್ಟಿನಿಂದ ಮೋಹನನನ್ನು ಕರೆದುಕೊಂಡು ಹೋಗಿದ್ದಳು. ಹೋಗುವುದೆಲ್ಲಿ ? ಮತ್ತೆ ಸೋದರತ್ತೆಯ ಮನೆಗೆಯೆ.

ಬೆಳಗಿನಲ್ಲಿ ಮುಟ್ಟಿದ್ದಳು ಸೋದರತ್ತೆಯ ಮನೆಯನ್ನು. ಒಂದು ಕೈಯಲ್ಲಿ ಮೋಹನ, ಇನ್ನೊಂದು ಕೈಯಲ್ಲಿ ಒಂದು ಚಿಕ್ಕ ಬ್ಯಾಗ್.

ಏನನ್ನೊ ಶ್ಲೋಕಗಳನ್ನು ಗೊಣಗುತ್ತ ಮುದುಕಿ ಅಂಗಳಕ್ಕೆ ನೀರನ್ನು ಸಿಂಪಡಿಸುತ್ತಿದ್ದಳು. ತಾನು ಬಂದದ್ದು ಆಕೆಗೆ ಇನ್ನೂ ಲಕ್ಷ್ಯಕ್ಕೆ ಬಂದಿರಲಿಲ್ಲ.

ಕೊನೆಗೆ "ಅತ್ತೀ" ಎಂದು ಅವಳ ಲಕ್ಷ್ಯವನ್ನು ಸೆಳೆಯಬೇಕಾಯ್ತು.

ಮುದುಕಿ ಒಮ್ಮೆಲೆ ತಿರುಗಿ, ತನ್ನನ್ನು ನೋಡಿ, ವಿಶ್ವಾಸವಾದದ್ದಕ್ಕೊ ಸರಿಯಾಗಿ ಕಾಣದ್ದಕ್ಕೊ ಪಟಪಟ ಕಣ್ಣೆವೆಗಳನ್ನು ಬಡೆದು ಮತ್ತೊಮ್ಮೆ ದಿಟ್ಟಿಸಿ ನೋಡಿ, "ಯಾರು ? ಕುಮುದಿ " ಎಂದಿದ್ದಳು.

"ಇದೇನೆ, ಕುಮುದೀ ? ಹೇಳ್ದೆ ಕೇಳ್ದೆ ಬಂದಿ ? ಒಬ್ಬಾಕೀನೇ ಬಂದೆಯೊ ಏನೊ ?"

ಮಾತನಾಡುತ್ತ ಇಬ್ಬರೂ ಮನೆಯೊಳಕ್ಕೆ ಹೋಗಿದ್ದರು. ಅದೇ ನಿದ್ರೆಯಿಂದೆಚ್ಚತ್ತ ಮೋಹನ ಎಲ್ಲಿ ಬಂದೆನೆಂಬುದು ತಿಳಿಯದೆ ತನ್ನನ್ನೊಮ್ಮೆ ಮುದುಕಿಯನ್ನೊಮ್ಮೆ ನೋಡುತ್ತಿದ್ದ ; ಮಾತನಾಡುತ್ತಿರುವಾಗಲೇ ಆತನನ್ನು ತಾನು ಕೆಳಗಿಳಿಸಬೇಕೆಂದಿದ್ದಳೇನೊ, ಹುಡುಗ ತನ್ನನ್ನು ಗಟ್ಟಿಯಾಗಿ ಹಿಡಿದು ಕೊಂಡ , ತಾನು ಹಟದಿಂದ ಕೆಳಗಿಳಿಸಬೇಕೆನ್ನಲು ಒಮ್ಮೆಲೆ ಅಳತೊಡಗಿದ.

"ಯಾಕ ? ಮತ್ತ ಬಸಿರಿ ಏನ್ನೀನು ?"

ಆ ಕ್ಷಣದಲ್ಲಿ ಕುಮುದಳಿಗೆ ಅತ್ತೆಯ ಮಾತು ತಿಳಿದಿರಲೇ ಇಲ್ಲ. ಯಾವ ಸಂದರ್ಭ ? ಯಾವ ಮಾತು ?

"ಏನಂದಿ, ಅತ್ತೀ ?" ಎಂದು ತಾನು ಬೆರಗಾಗಿ ಕೇಳಿದ್ದಳು.

"ಅಲ್ಲ, ಕೂಸು ಅಳ್ತದ, ಅದಕ್ಕ ಕೇಳಿದೆ" ಎಂದಳು ಅತ್ತೆ.

ಅಷ್ಟರಲ್ಲಿ ಮೋಹನನನ್ನು ಎತ್ತಿಕೊಂಡಲ್ಲಿಯೆ ತಾನು ಕುಳಿತುಕೊಂಡಿದ್ದಳು. ಮೋಹನನು ಶಾಂತನಾಗಿದ್ದ.

"ಕೂಸು ಅಳ್ತದ ಅಂದ್ರ ನೀ ಮತ್ತೇನೊ ಕೇಳಿದಾಂಗ ಆಯ್ತು" ಎಂದಿದ್ದಳು ತಾನು.

"ಮತ್ತೇನಿಲ್ಲ ; ಮತ್ತೆ ಬಸಿರಿದ್ದೀಯೇನು ಅಂದೆ."

"ಇಶ್ ! ನನ್ಗೇನು ಹುಚ್ಚು ಹಿಡಿದದ ಏನು, ಅತ್ತೀ ?"

"ವಯಸ್ಸಾದ ಮ್ಯಾಲೆ ಮದಿವೆ ಆಗೋದು. ಹುಚ್ಚೇ ಹಿಡಿಧಾಂಗ ಮತ್ತ."

"ಕೂಸು ಅಳೋದಕೂ ಅದಕೂ ಏನು ಸಂಬಂಧ ?"

"ಮೊದಲಿನ ಕೂಸು ಇನ್ನೂ ವ್ವೈಮ್ಯಾಲಿನ ಹಾಲು ಕುಡಿಯೋವಾಗ ಮತ್ತೊಂದು ಬಸಿರು ನಿಂತರ ಕೂಸು ಹೀಂಗೇ ಕಿರಿಕಿರಿಮಾಡ್ತಾವ."

ಇದೇನು ತತ್ತ್ವಜ್ಞಾನವೊ, ಅನುಭವಜ್ಞಾನವೊ, ಶಾಸ್ತ್ರೀಯ ಜ್ಞಾನವೊ ? ಕುಮುದಳಿಗೆ ತಿಳಿದಿರಲಿಲ್ಲ. ಆಕೆ ನಕ್ಕುಬಿಟ್ಟಿದ್ದಳು.

"ನಗ್ತೀ ಯಾಕ ?"

"ನಿನ್ಮಾತಿಗೆ ನಗು ಬಂತು, ಅತ್ತೀ."

"ನಗೆ ಬರುವಂಥಾದ್ದೇನದ ? ಮೊನ್ನೆಮೊನ್ನೆ ಗಂಡನ ಕಡೆ ಹೋದಾಕಿ ತಿರುಗಿ ಬಂದಿ, ಅದಕ್ಕ ಕೇಳಿದೆ."

"ಅಂದ್ರ ನನ್ಗೇನು ಎರಡನೇ ಕೆಲಸೇ ಇಲ್ಲೇನು ?" ತಾನು ನಗೆ ಯಿಂದ ಕೇಳಿದ್ದಳು.

"ಮದುವೆ ಆಗಿ ಹಡೆಯೋದು ಒಂದನೇ ಕೆಲಸ, ಮದಿವೆ ಆಗದೇನೆ ಹಡೆಯೋದು ಎರಡನೇ ಕೆಲಸ—ಈಗಿನ ಹುಡುಗೇರಿಗೆ !"

ಅಬ್ಬ ! ಮುದುಕಿ ಅದೆಷ್ಟು ದ್ವೇಷದಿಂದ ಆ ಮಾತನ್ನು ನುಡಿದಿದ್ದಳು !

"ಎಲ್ಲಾರೂ ಹಾಂಗೇ ಇರೋದಿಲ್ಲ, ಅತ್ತೀ. ಕೆಟ್ಟವರು ಈಗಿನ ಕಾಲದಾಗ ಇದ್ಧಾಂಗ ಆಗಿನ ಕಾಲದಾಗೂ ಇದ್ದೇ ಇದ್ದರು."

"ಆಗಿನ ಕಾಲದಾಗ ನಾಚಿಕೆ ಇರ್ತಿತ್ತು, ಭಾಂವೀ ಹಾರಿಕೊಂಡ ಜೀವಾ ಕೊಡ್ತಿದ್ದರು. ಈಗಿನ ಕಾಲದಾಗ ಧೈರ್ಯ ಇಲ್ಲ, ಗಾಬರಿಯಾಗಿ ಮದುವೆ ಮಾಡಿಕೋತಾವ."

"ಯಾಕ, ಅತ್ತೀ ? ನಾನು ಅಷ್ಟು ಕೆಟ್ಟಾಕೆ ಅಂತ—"

"ಅಯ್ಯ, ಹುಚ್ಚೀ ! ಮಾತಿಗೆ ಮಾತು ಬಂದು ಹೇಳಿದ. ನನ್ನ ಮಾತನ್ನ ಹಾಂಗ ಬಹಾಳ ಲಕ್ಷ್ಯಕ್ಕ ತಂದುಕೋಬ್ಯಾಡ."

ಅತ್ತೆ ಈ ಮಾತನ್ನು ಹೇಳುವಾಗಲೆ, ತನಗೆ ಏನಾಯಿತೊ ಏನೊ, ಒಮ್ಮೆಲೆ ಅಳು ತಡೆಯದಂತಾಗಿ ಬಿಕ್ಕಿದಳು.

ಈಗ ನೆನೆದುಕೊಂಡರೆ ನಗೆ ಬರುವಂತಿದೆ, ಆದರೆ ಆಗ ತಾನು ಬಿಕ್ಕು-ವುದನ್ನು ನೋಡಿ ಮುದುಕಿ ಕಕ್ಕಾವಿಕ್ಕಿಯಾದಳು

"ಅಯ್ಯ! ಕುಮುದಾ, ಕುಮುದೀ ! ಸುಡ್ಲಿ, ನನ್ನ ನಾಲಗೇನೇ

ಕೆಟ್ಟದು. ಮುದುಕೀ ಮಾತು ಏನು ಕೇಳ್ತೀ ? ಅದೇನೊ ಹೇಳ್ತಾರಲ್ಲ, ತನಗ ಇಲ್ಲದ ಕುಂಕುಮ ಇನ್ನೊಬ್ಬರ ಹಣೀ ಮ್ಯಾಲೆ ನೋಡಿ ಏನು ಬಡೀತು ಹಣೆಗೆ ಅಂತ ಕೇಳಿದಿರಂತ ? ಕುಮುದಾ, ನನ್ನಷ್ಟಕ್ಕೇ ನಾ ಕೂತು ಕೂತು ಇಂಥಾ ಪರೀ ಮಾತಾಡ್ಲಿಕ್ಕೆ ಕಲ್ತೀನಿ. ಅಯ್ಯ, ಹುಚ್ಚೀ ! ಉದಂಡ ಆಯುಷ್ಮಂತನಾಗಲಿ ನಿನ್ನ ಗಂಡ, ಇನ್ನೂ ನಾಲ್ಕು ಮಕ್ಕಳನ್ನ ಹಡೆ, ನಾ ಇರೋತನಕ ಇಲ್ಲಿಯೆ ಬಂದೀಯಂತ ಬಾಣಂತಿ-ತನಕ್ಕ—"

ಮುದುಕಿಯ ಮಾತಿಗೆ ಅಳು ಮಾಯವಾಗಿ ನಗೆ ತಡೆಯದಾಯಿತು. ಮುದುಕಿ ರೇಗಿದಳು.

"ಇದೇನ ? ಬೇಕಾದಾಗ ಅಳತೀ, ಬೇಕಾದಾಗ ನಗತೀ ! ನಿನ್ನ ಜೋಡಿ ಮಾತಾದ್ರೂ ಹ್ಯಾಂಗ ಆಡ್ಬೇಕು ?"

"ಇಲ್ಲ, ಅತ್ತೀ, ಅದಕ್ಕಲ್ಲ. ನಾ ಬಸಿರಿಲ್ಲ ಅಂತ ಹೇಳಿದರೂ—" ಕಣ್ಣುಗಳನ್ನೊರೆಸಿಕೊಳ್ಳುತ್ತ ನಗೆಯಿಂದ ಮಾತು ಬಾರದಾಗಿ ತಾನು ಹೇಳ ತೊಡಗಿದ್ದಳು.

"ಈಗಿಲ್ಲದಿದ್ದರ ಇಲ್ಲ. ಮುಂದಿಷ್ಟರೊಳಗೇ ಆದೀತು. ಇನ್ನೂ ನಣ್ಣಾಕೆ ನೀನು. ಅಂಥಾ ಕಾಳಜಿ ಯಾಕ ಮಾಡ್ತೀ ?"

"ಇಲ್ಲ, ಅತ್ತೀ, ನಾನು ಅಂಥಾ ಕಾಳಜೀನೂ ಮಾಡೋದಿಲ್ಲ, ಅಂಥಾದ್ದು ನನಗ ಆಗೋ ಹಾಂಗೂ ಇಲ್ಲ—"

"ಬರೀ ಬಾಯಿಯಿಂದ ಆಡೋ ಮಾತು—"

"ಅಲ್ಲ, ಅತ್ತೀ, ನಿಜ ಅದು. ಇನ್ನೆಂದಿಗೂ ಇಲ್ಲ."

"ಅಂದ್ರೇನ ?"

"ಅಂದರೇನು ?" ಎಂಬುವುದು ತನಗೂ ತಿಳಿದಿರಲಿಲ್ಲ, ತಾನು ಆ ಬಗ್ಗೆ ವಿಚಾರವನ್ನೂ ಮಾಡಿರಲಿಲ್ಲ. ಆದರೂ ಮನಸ್ಸಿನಲ್ಲಿದ್ದುದೆಲ್ಲವನ್ನು, ಇನ್ನೊಬ್ಬರ ಮುಂದೆ ಹೇಳುವ ಅದೇ ಮೊದಲ ಅವಕಾಶವಾದದ್ದರಿಂದ, ಒಂದೇ ಸವನೆ ಹೇಳಿದ್ದಳು. ಹೇಳುತ್ತ ಹೇಳುತ್ತ ತನಗೆಯೆ ಅದರಲ್ಲಿ ವಿಶ್ವಾಸವಿಲ್ಲವೆನ್ನಿಸಿತು, ಮುಂದೆ ಮಾತಿನಲ್ಲಿ ಗೊಂದಲವೆ ಎದ್ದಿತು, ಮುಂಚೆ ಹೇಳಿದ್ದನ್ನೆ ಮರೆತು ಮತ್ತೊಮ್ಮೆ ಹೇಳಿದಳು, ಮುಂಚೆ ಹೇಳಿದ್ದನ್ನು ನೆನಪಾ

ದೊಡನೆ ಮುಂದೆ ಹೇಳುವುದನ್ನು ಮರೆತಳು, ಕೊನೆಗೆ ತಾನು ಇದಾವುದನ್ನೂ ಹೇಳಲೇಬಾರದಾಗಿತ್ತೇನೊ ಎನ್ನಿಸಿತು, ನಾಲಗೆ ತಡವರಿಸುತ್ತಿತ್ತು—

"ಅಯ್ಯ! ಏನ್ಹೇಳ್ತಾಳೊ ಅಂತ ಮಾಡಿದ್ದೆ! ಗಂಡ – ಹೆಂಡತಿ ಜಗಳಾಡೀರಿ ಅನ್ನಿರಿ" ಎಂದು ದೀರ್ಘವಾಗಿ ಉಸಿರೆಳೆದು ಅತ್ತೆ ನುಡಿದಿದ್ದಳು.

ತಾನು ಹೇಳಿದ್ದು ಯಾವುದೂ ಮುದುಕಿಗೆ ಅರ್ಥವೇ ಆಗಿಲ್ಲ ಎಂದು ತನಗೆ ಸಂತೋಷವಾಗಿತ್ತು, ಅದುವರೆಗೆ ಒಳಗಿನ ವಿಚಾರಗಳನ್ನು ಹೊರಗೆಡು ಹಿದ್ದಕ್ಕೆ ಮನಸ್ಸೂ ಹಗುರಾಗಿತ್ತು.

ಅಥವಾ ಆಕೆಗೆ ಎಲ್ಲವೂ ತಿಳಿದಿತ್ತೊ !

ಅಥವಾ ತನಗೆ ತಿಳಿದಿದೆ ಎಂಬುದೆ ಮುದುಕಿಗೆ ತಿಳಿದಿರಲಿಲ್ಲವೊ ?

ಅಂತೂ ತನ್ನನ್ನು ಮತ್ತೆ ರಾಮಣ್ಣನ ಕಡೆ ಹೋಗುವಂತೆ ಒಲಿಸಲು ಕಾರಣಳಾದವಳು ಆ ಮುದುಕಿಯೆ !

....ಸ್ಮೃತಿ ತನ್ನನ್ನು ಎಲ್ಲೆಲ್ಲೊ ಒಯ್ಯುತ್ತಿದೆಯಲ್ಲ? ಇಂದು ಯಾಕೆ ಅಂದಿನ ನೆನಪು ?

ಯಾಕೊ ? ಅಂದು ಮುದುಕಿ ಹೇಳಿದ ಮಾತು ಮತ್ತೆ ಮತ್ತೆ ಸ್ಮರಣೆಗೆ ಬರುತ್ತಿದೆ ಇಂದು !

ಏನನ್ನೊ ಹೇಳಿದ್ದಳಲ್ಲ ? ಮೊದಲು ಅದೊಂದು ಮೋಜು ಎನ್ನಿಸಿ ತಾನು ನಕ್ಕಿದ್ದಳು. ಆಮೇಲೆ ಆ ಮಾತು ತನ್ನನ್ನು ಹಿಡಿದೆತ್ತಿ ನಿಲ್ಲಿಸಿದಂ-ತಾಗಿತ್ತು. ಯಾವ ಸಂದರ್ಭ ? ಹಾಂ. ನೆನಪಿಗೆ ಬಂದಿತು. ಆ ಮಾತು ಈ ಮಾತು ನಡೆದಾಗ ಮುದುಕಿ ಒಮ್ಮೆಲೆ ತನಗೆ,

"ನಿನ್ನ ಗಂಡ ಏನ್ಮಾಡ್ತಾನ ?" ಎಂದು ಕೇಳಿದ್ದಳು.

"ಪುಸ್ತಕ ಬರೀತಾರ."

"ಅದಲ್ಲ ನಾ ಕೇಳಿದ್ದು. ಹೊಟ್ಟೆ ತುಂಬಿಕೊಳ್ಳಲಿಕ್ಕೆ ಏನ್ಮಾಡ್ತಾನ ಅಂದೆ."

ಕುಮುದಳಿಗೆ ನಗೆ ಬಂದಿತ್ತು. "ಯಾಕ, ಅತ್ತೇ, ಪುಸ್ತಕ ಬರೆದರೆ ಹೊಟ್ಟೆ ತುಂಬೋದಿಲ್ಲೇನು ?" ಎಂದು ನಗೆಯಿಂದಲೆ ಕೇಳಿದ್ದಳು.

"ಏನೊ ತಾಯೀ ! ನನಗೇನು ತಿಳೀಬೇಕು ? ಹೊಲ–ಮನೆ ನೋಡಿ ಕೊಳ್ಳೋದು, ಬಡ್ಡೀ ವ್ಯವಹಾರ ಮಾಡೋದು, ಇಲ್ಲಾ ನೌಕರಿ

ಮಾಡೋದು – ನಂ ಕಾಲದೊಳಗ ಗಂಡಸರು ಮಾಡೋ ಕೆಲಸ ಇಷ್ಟು. ಈಗಿನ ಕಾಲದವರು ಏನೇನೊ ಮಾಡ್ತಾರ."

"ಪುಸ್ತಕ ಬರೆಯೋವವರಿಗೆ ನಾಲ್ಕು – ಮಂದೀವಳಗ ಮಾನ – ಮರ್ಯಾದೆ ಇರ್ತದ, ಅತ್ತೆ."

"ಅದಕ್ಕೇನು ? ಮನುಷ್ಯನ ನಡತೆ ಚಲೋದಿದ್ದರ ಏನ್ಮಾಡಿದರೂ ಮಾನಾ–ಮರ್ಯಾದೆ ಇರ್ತದ....ಹಂ....ಅಂದ್ರ – ಪುಸ್ತಕಾ ಬರೀತಾನ ? ಎಷ್ಟು ಕೊಡ್ತಾರ ತಿಂಗಳಾ ಅವನಿಗೆ ಪುಸ್ತಕಾ ಬರೀಲಿಕ್ಕೆ ?"

"ಅದೇನು ತಿಂಗಳಾ – ತಿಂಗಳಾ ಮಾಡೋ ಕೆಲಸ ಅಂತ ತಿಳಿದೀಯೇನು, ಅತ್ತೇ ? ಯಾವಾಗ ಬರೆಯಬೇಕು ಅಂತ ಅನಿಸ್ತದ ಆವಾಗ ಬರೆಯೋದು — "

"ಮತ್ತೆ ? ಉಳಿದ ವ್ಯಾಳ್ಯಾಕ್ಕ ಹೊಟ್ಟೆ ತುಂಬಿಕೊಳ್ಳೋದು ಹ್ಯಾಂಗ ?"

"ಹೊಲ–ಮನೀನೂ ಆದ, ಮನೆತನದಾಗ ನಡೆದು ಬಂದದ್ದು"

"ಅಯ್ಯ! ಹುಚ್ಚೀ ! ಅದನ್ನ ಹೇಳ್ಬಾರದ್ದ ಮೊದ್ಲು ? ಅಷ್ಟಿದ್ದರ ಆಯ್ತಲ್ಲ ?....ಮನೀವಳಗ ಮಂದಿ ಭಾಳ ಇದ್ದಾರೇನು ?"

"ಯಾರೂ ಇಲ್ಲ, ಇಷ್ಟು ದಿವಸ ನಾವಿಬ್ಬರೇ "

"ಅಂದ್ರ ? ಈಗ ಅವನನ್ನ ಒಬ್ಬನೇ ಬಿಟ್ಟು ಬಂದೆಯಾ ?"

ತಾನು ಆ ಬಗ್ಗೆ ವಿಚಾರವನ್ನೆ ಮಾಡಿರಲಿಲ್ಲ, ಈಗ ಉತ್ತರವನ್ನೂ ಕೊಡಲಿಲ್ಲ. ಮಾತನಾಡುತ್ತಾಡುತ್ತಾ ಮುದುಕಿ ಒಮ್ಮೆಲೆ ನಕ್ಕಿದ್ದಳು.

"ಯಾಕ, ಅತ್ತೇ ? ಏನ್—"

"ಏನೊ ನೆನಪಾಯ್ತು—"

"ಏನು ? "

"ಏನೇನು ? ಮುದುಕೀ ಕೆಲಸೇನು ? ಮೊದಲಿನದನ್ನ ನೆನಪುಮಾಡಿಕೊಂಡು ಮೆಲುಕು ಹಾಕತಾ ಕಾಲ ಕಳೆಯೋದು ?"

"ಆದರೂ ನಕ್ಕಿಯಲ್ಲ, ಅತ್ತೇ ?"

ಕೊನೆಗೆ ಒತ್ತಾಯ ಮಾಡಿ ಅತ್ತೆಯ ನೆನಪಿನ ಕತೆಯನ್ನು ಕೇಳಿ ಕೊಂಡಿದ್ದಳು.

"ಅಲ್ಲ – ನಾನೂ ಒಮ್ಮೆ ನಿನ್ಹಾಂಗೇ ಸಿಟ್ಟಿಗೆ ಬಂದಿದ್ದೆ, ಆಗಿನ ಮೋಜು ನೆನಪಾಯ್ತು—"

"ಅಂದ್ರ – ನನ್ಹಾಂಗ—?"

"ನೋಡು ಕುಮುದೀ, ಗಂಡಸಿನ ಸಿಟ್ಟು ಬ್ಯಾರೆ, ಹೆಂಗಸಿನ ಸಿಟ್ಟು ಬ್ಯಾರೆ."

"ಯಾಕೊ ? ಹೆಂಗಸೂ ಒಂದು ಮನುಷ್ಯ ಪ್ರಾಣೀನೇ ಅಲ್ಲೇನೊ?"

"ಹೌದು. ಆದರೂ ಹೆಂಗಸು ಮನುಷ್ಯ ಅಂತ ಮೀಸೆ ಬರೋದಿಲ್ಲ, ಗಂಡಸು ಮನುಷ್ಯ ಅಂತ ತಾಯಿ ಆಗೋದಿಲ್ಲ. ದೇವರಿಚ್ಛಾ ಏನದನೊ ? ಒಬ್ಬೊಬ್ಬರಿಗೆ ಒಂದೊಂದು ಸ್ವಭಾವ ಕೊಟ್ಟಾನ. ಹೊರಗ ನಾಲ್ಕ ಜನರೊಳಗ ಓಡಾಡೋ ಗಂಡಸು ಸಿಟ್ಟಿಗೆ ಬರ್ತಾನ, ಜಗಳಾಡ್ತಾನ, ಮತ್ತೆ ಮರುದಿವಸ ಅವರ ಜೋಡೀನೆ ವ್ಯವಹಾರ ಮಾಡ್ತಾನ. ಆದರೆ ನಮಗೆ ಅಂಥಾ ವ್ಯವಹಾರಾನೇ ಇಲ್ಲ. ನಾವು ಸಿಟ್ಟಿಗೆ ಬಂದಿವಿ ಅಂದ್ರ ದಿವಸಾನು ದಿವಸ ಅದನ್ನ ಮನಸ್ಸಿನಾಗ ಇಟ್ಗೊಂಡು ಕೂಡ್ತೀವಿ."

"ಅಂತೂ ನೀ ಭಾಳ ಹಟಮಾರಿ ಇದ್ದಿ ಅನ್ನು, ಅತ್ತೆ."

"ಗಂಡಸಿನ ಸಿಟ್ಟು ಮೂಗಿನ ತುದಿಗೆ, ಹೆಂಗ್ಸಿನ ಹಟ ಒಲೆಯ ತುದಿಗೆ."

"ಅಂದ್ರ ? ನೀನು ಅಡಿಗೀನೇ ಮಾಡಲಿಲ್ಲೇನು ?"

"ಅಯ್ಯ ! ನಾಯೇನು ನಿನ್ಹಾಂಗ ಒಬ್ಬಾಕೀನ ಮನೀ ವಳಗ ? ಮನೀ ತುಂಬ ಮಂದಿ. ನಾನು ಅಡಿಗೆ ಮಾಡದಿದ್ದರ ಯಾರದೂ ಹೊಟ್ಟೀ ತಡೀತಿದ್ದಿಲ್ಲ."

"ಅಂದ್ರ ಸಿಟ್ಟಿಗೆ ಬಂದ್ರ ಏನ್ಮಾಡ್ತಿದ್ದಿ ? "

"ಹೆಂಗ್ಸು ಮಾಡೋದೇನು ? ಬ್ಯಾರೆ ಹಾಸಿಗೆ ಹಾಕಿಕೊಂಡು ಮಲಗತಿದ್ದೆ. ಎಷ್ಟು ಮಾತಾಡಿಸಿದರೂ ಮಾತಾಡ್ತಿದ್ದಿಲ್ಲ—" ಒಮ್ಮೆಲೆ ನಕ್ಕಳು.

"ಏನ್ಮೋಜು ನೆನಪಾಯ್ತು, ಅತ್ತೆ ? "

"ಮೋಜಲ್ಲ ; ಅದೇ, ನಿನ್ಹಾಂಗ ಅಂದ್ನೆಲ್ಲ ? ನೋಡು, ಕುಮುದೀ, ಒಬ್ಬೊಬ್ಬ ಗಂಡಸನ ಸ್ವಭಾವ ಒಂದೊಂದು ತರಹ. ಆದರೆ ಹೆಂಗ್ಸಿನದು

ಹಾಂಗಲ್ಲ. ಮನೀವಳಗ ದುಡಿಯೋದು, ದುಡಿಯೋದು. ತನ್ನ ಮನೆ ಅಂತ ತಾನು ದುಡಿದರೂ 'ಕೆಲಸ ಭಾಳ ಆಗೇದೇನು ?' 'ತಲಿ ನೋವೇನು ?' 'ಸಾಕಿನ್ನು ವಿಶ್ರಾಂತಿ ತಗೋ' ಹೀಂಗ ಗಂಡಸು ಏನಾದರೂ ತನ್ನನ್ನು ಕೇಳ್ಬೇಕು ಅಂತ ಅನ್ನಿಸ್ತದ ನಮಗ. ಅವರು ವಿಶ್ರಾಂತಿ ತಗೋ ಅಂದ್ರ ನಾವೇನು ತಕ್ಕೋತಿದ್ವಿಲ್ಲ. ನಂ ಸಲುವಾಗಿ ಕಾಳಜಿ ಮಾಡುವವರು ಇದ್ದಾರಲ್ಲ ಅನ್ನೋದೇ ಸಮಾಧಾನ. ಒಮ್ಮೊಮ್ಮೆ ಗೌರೀ–ಗಂಗೆ ಅಂತ, ಹಬ್ಬ–ಹುಣ್ಣಿವೆ ಅಂತ ಸೀರೆ–ಸಿಂಗಾರ ಮಾಡಿ–ಕೋತಾಳ. ಆಗ ಗಂಡಸೂ ಅದನ್ನ ನೋಡಲಿ, ಸಂತೋಷಪಡಲಿ ಅಂತ ಆಶೆ. ಆದರೆ ಹೇಳಿದೆನಲ್ಲ ? ಒಬ್ಬೊಬ್ಬ ಗಂಡಸಿನದು ಒಂದೊಂದು ತರಹ ಅಂತ. ನಮ್ಮವರಿಗೆ ಇಂತಹದೊಂದೂ ಇರಲಿಲ್ಲ. ಹೆಂಡತಿ ಅನ್ನುವವಳು ಮನೀವಳಗ ಇದ್ದಾಳೊ ಇಲ್ಲೊ ಅನ್ನೋ ಹಾಂಗ ನಡೆದುಕೋತಿದ್ದರು. ಒಮ್ಮೆ ಯಾವುದೋ ಮಾತಿಗೆ ಮಾತು ಬೆಳೆದು ನಮ್ಮಿಬ್ಬರದೂ ಜಗಳ ಆಯ್ತು, ನನಗೂ ಭಾಳ ಸಿಟ್ಟು ಬಂದಿತ್ತು. ಕಡೆಗೆ ನಾ ಹೇಳಿದೆ 'ನಾಲ್ಕು ದಿವಸ ನಾ ತವರ್ಮನೀಗ ಹೋಗ್ತೀನಿ' ಅಂತ. 'ಹೋಗ್ಬೇಕನ್ನಿಸಿದ್ದರ ಹೋಗು' ಅಂದರು. ನಾನೇ ಅವರಿಗೆ ಇಷ್ಟು ಬ್ಯಾಡಾಗೀನಿ ಅಂತ ನನ್ಗೂ ಸಿಟ್ಟು ಬಂತು. ನನ್ನ ತಯ್ಯಾರಿ ಮಾಡಿಕೊಳ್ಳಲಿಕ್ಕೆ ಸುರೂ ಮಾಡಿದೆ, ರಾತ್ರಿ ಗಾಡಿಗೆ ಹೋಗೋದು ಅಂತ."

"ಯಾಕ, ತಡೆದೆ, ಅತ್ತೀ ? ಮುಂದೇನಾಯ್ತು ?"

ಮುದುಕಿ ಗಟ್ಟಿಯಾಗಿ ನಕ್ಕಳು. ನಗುತ್ತಲೆ ಹೇಳಿದಳು, "ನನ್ನ ಸಿಟ್ಟಿನ ಕತೆ ಅಲ್ಲಿಗೇ ಮುಗೀತು."

"ಅಂದ್ರ ?"

"ಅಂದ್ರೇನು ? ಅದಕ್ಕೇ ಹೇಳಲಿಲ್ಲೇನು ನಿನಗ ಹೆಂಗಸಿನ ಸಿಟ್ಟು ಬ್ಯಾರೆ ಅಂತ."

"ಅಲ್ಲ, ಅಂದ್ರ, ಏನಾಯ್ತು? ಜಗಳ ಮುಗೀತೇನು ? ಏನು ನಿನ್ನವರು ಕ್ಷಮಾ ಬೇಡಿದರೊ ?

"ಏನಂದಿ ? ಕ್ಷಮಾ ಬೇಡೋದು ? ಅಯ್ಯ! ಹುಚ್ಚೀ! ಅದಷ್ಟಕ್ಕೆ ಹೆಂಗ್ಸಿಗೆ ಸಮಾಧಾನ ಇದ್ದರ ಗಂಡಸು ಮಾತಿಗೊಮ್ಮೆ ತಪ್ಪಾಯ್ತು

ಅನ್ನಬಹುದು. ತಂತಮ್ಮೊಳಗಿನ ಜಗಳ ಮುಗಿಸಲಿಕ್ಕೆ ತಪ್ಪಾಯ್ತು ಅನ್ನೋ ಗಂಡಸಿಗೆ ಆ ಮಾತಿನ ಮಹತ್ವಾನೇ ಇಲ್ಲ."

"ಅಂದ್ರ ನೀ ಯಾಕ ಹೋಗಲಿಲ್ಲ—"

"ನಾ ಹ್ಯಾಂಗ ಹೋಗ್ತೀನಿ, ಕುಮುದೀ? ಅದೇ ನಾ ಹೇಳಿದ್ನಲ್ಲ ನನ್ನ ತಯ್ಯಾರೀ ನಡೆಸಿದೆ ಅಂತ. ಆಗ ಅವರೂ ಸಿಟ್ಟಿನಿಂದ ಹೊರಗ ಹೊರಟಿದ್ದರು. ಆ ಪೆಟ್ಟಿಗೆ ತಗೆದರು, ಈ ಪೆಟ್ಟಿಗೆ ತಗೆದರು, ಹಾಸಿಗೆ ಎತ್ತಿಹಾಕಿದರು; ನನಗೇನನ್ನಿಸ್ತು ತಾವೂ ಹೊಂಟುಹೋಗೋ ಹೆದರಿಕೆ ಹಾಕ್ತಾರೇಳೂ ಅಂತ. ಆದರೆ ಎಲ್ಲಾ ಕಿತ್ತಿಹಾಕಿ 'ಥೂ! ಎಲ್ಲಿ ಅದನೊ ಏನೊ ನನ್ನ ಶರ್ಟು?' ಎಂದು ಸುತ್ತಾಡತೊಡಗಿದರು. ನಾನು ಒಂದ್ಮಾತಿಲ್ಲದೆ ಗೂಟದ ಮ್ಯಾಲಿನ ಶರ್ಟು ತೆಗೆದುಕೊಟ್ಟು ನನ್ನ ತಯ್ಯಾರೀ ವಳಗೇ ತೊಡಗಿದೆ. ಸ್ವಾರೀ ಶರ್ಟು ಹಾಕಿಕೊಂಡು ಇದ್ದ ಕಿಸೇದೊಳಗೆಲ್ಲ ಕೈಹಾಕಿ, ಹುಬ್ಬು ಗಂಟಿಕ್ಕಿ ಆ ಕಡೆ ಈ ಕಡೆ ನೋಡಿ 'ಹಾಳು! ಒಂದು ಸಾಮಾನೂ ಜಾಗೇದಾಗ ಇರೋದಿಲ್ಲ. ನನ್ನ ರೊಕ್ಕ—' ನಾನು ತಟ್ಟನೆ ಹೋಗಿ ತಲೆದಿಂಬಿನ ಕೆಳಗಿನ ಅವರ ರೊಕ್ಕದ ಚೀಲ ತಗದಿಟ್ಟು ಬಂದೆ. ನನ್ನ ಕೆಲಸದೊಳಗ ತೊಡಗಿದೆ. ಸ್ವಲ್ಪ ಹೊತ್ತಿನಲ್ಲಿ ಹೊರಗಿನಿಂದ ಗದ್ದಲ ಕೇಳಿಸ್ತು. ಬಾಗಿಲಿನಿಂದ ನೋಡಿದೆ. ಇವರೂ ಓಡ್ಯಾಡ್ತಾರ! ಇನ್ನಿಬ್ಬರೂ ಓಡ್ಯಾಡ್ತಾರೆ! ಯಾಕೊ?-ಅಂತ ಮುಂದ್ಹೋಗಿ ನೋಡಿದರ ಮನೀಮಂದಿ ಎಲ್ಲಾರೂ ಓಡ್ಯಾಡ್ತಾರ ಇವರ ಕಾಲೊಳಗಿನ ಚಪ್ಪಲಿ ಹುಡುಕಲಿಕ್ಕೆ! ನನಗ ತಡೀಥಾಂಗಾಯ್ತು. ಬಿರಿಬಿರಿ ಹಿತ್ತಲಕ್ಕ ಹೋದೆ, ಅಲ್ಲಿ ಇದ್ದುವು ಅವರ ಚಪ್ಪಲಿ, ಅದನ್ನ ತಂದವಳೆ ಥೊಪ್ ಅಂತ ಒಗೆದು, ಕಾಲ ಅಪ್ಪಳಿಸತಾ ನನ್ನ ಕೋಣೆಗೆ ಹೋಗಿ, ಬಾಗಿಲು ಬಡಿದು ಮುಚ್ಚಿ, ಚಿಲಕಾ ಹಾಕಿ, ಕಟ್ಟಿದ್ದ ನನ್ನ ಹಾಸಿಗೆ ಬಿಚ್ಚಿ ಗೊಳೋ ಅಂತ ಅಳತಾ ಕೂತುಬಿಟ್ಟೆ. ಅತ್ತೆ-ಅತ್ತೆ-ಅತ್ತೆ-ಅಂತೀ, ಕುಮುದೀ—"

ಮುದುಕಿಗೆ ಹೇಳುವಾಗ ನಗೆ ತಡೆಯದಂತಾಗಿತ್ತು.

"ಹೋಗಲಿಕ್ಕೆ ಯಾರು ಬ್ಯಾಡ ಅಂದ್ರು ಅಂತ ಸಣ್ಣ ಹುಡುಗರ್ಹಾಂಗ ಅತ್ತಿ ಏನೊ!"

"ಅಯ್ಯ! ಹೋಗ್ಲಿಕ್ಕೆ ಬ್ಯಾಡ ಅಂತ!" ಮುದುಕಿಗೆ ನಗೆ

ತಡೆಯುತ್ತ, ಕಣ್ಣೊರಸಿಕೊಳ್ಳುತ್ತ ಹೇಳಿದಳು, "ನನಗ ಯಾರು ಬ್ಯಾಡ ಅನ್ನುವವರು? ನಾನು ಅತ್ತದ್ದು ನನ್ನ ಸಲುವಾಗಿ ಅಲ್ಲ, ಅವರ ಸಲುವಾಗಿ—"

[illegible]ವಾಗಿ! "

[illegible] ಇನ್ನೂ ಹೊರಡೋ ತಯಾರಿಯೊಳಗ ಇದ್ದೀನಿ, ಆಗಲೇ ಇಂಥಾ ಅನವ್ಹೋಲಿ (ಅವ್ಯವಸ್ಥೆಯು ತೊಂದರೆ) ಇವರಿಗೆ! ಇನ್ನು ನಾನು ಹೋದ್ಮೇಂದ್ರ ಇವರ್ನ ನೋಡುವವರು ಯಾರು? ಇವರ ಅಂಗಿ-ದೋತರ ಸಿಗೋದು ಹ್ಯಾಂಗ? ಸ್ವಚ್ಛ ಆದ್ರೂ ಇರ್ತಾವೊ ಇಲ್ಲೊ-ಅಂತ ವಿಚಾರ ಬಂದು ಅತ್ತುಬಿಟ್ಟೆ, ಕುಮುದೀ."

ಕುಮುದಳಿಗೆ ಎಲ್ಲಿಯೋ ಒಂದು ತರದ ನೋವಾದಂತಾಗಿತ್ತು. ಅತ್ತೆ ತನ್ನ ಕತೆಯನ್ನು ಹೇಳುವುದಿಲ್ಲ, ಆದರೆ ತನಗೆ-ಕುಮುದಳಿಗೆ-ಬುದ್ಧಿಯನ್ನು ಹೇಳುತ್ತಿದ್ದಾಳೆ ಎಂದೆನ್ನಿಸಿತು. ತಾನಿಲ್ಲದಾಗ ರಾಮಣ್ಣ ಊಟ ಇಲ್ಲದೆ ಸೊರಗಿದ ಚಿತ್ರ ಆಕೆಯ ಕಣ್ಣೆದುರು ನಿಂತಿತು; ಉತ್ಸಾಹದಿಂದ ಬರೆಯಲು ತೊಡಗುವ ರಾಮಣ್ಣ ತನ್ನ ಪೆನ್ನನ್ನು ಹುಡುಕುತ್ತಲಿದ್ದಾನೆ; ಅವನು ತೊಟ್ಟ ಬಟ್ಟೆ ಮಾಸಿವೆ—ಹೀಗೆ ಏನೇನೊ ಚಿತ್ರಗಳು ಕಣ್ಮುಂದೆ ಹಟದಿಂದ ಬಂದು ನಿಲ್ಲುತ್ತವೆ. ಅತ್ತೆ ಏನನ್ನೊ ಹೇಳುತ್ತಿದ್ದಾಳೆ, ಲಕ್ಷ್ಯವಿಲ್ಲ. ಅತ್ತೆಯ ಮಾತು ಮುಂದೆ ಸಾಗಿದೆ; 'ತಿಳೀತೇನು ಕುಮುದಾ? ಹೊರಗೆ ಏನೇ ಆದ್ರೂ ಮನೀ ವಳಗ ಕೂಸು ಇದ್ಹಾಂಗ ಗಂಡಸು! ಬೆಳೆದ ಹುಡುಗರಿಗೆ ಮನೀ ಬಿಟ್ಟು ಹೊರಗ ಆಡೋ ರೂಢಿ ಹೆಚ್ಚಾದರ ಹಡೆದಾಕೆಗೆ ಮೊದಮೊದಲು ಕೆಟ್ಟ ಅನ್ನಿಸೋದೆ. ನಮಗನ್ನಿಸ್ತದ ನಾವು ಹುಡುಗರನ್ನ ಪ್ರೀತಿಸ್ತೀವಿ, ಹುಡುಗರು ನಮ್ಮನ್ನ ಪ್ರೀತಿಸೋದಿಲ್ಲ ಅಂತ. ಬಾಯ್ಬಿಚ್ಚಿ ಹೇಳೋದಿಲ್ಲ ಹುಡುಗರು, ಆದರೆ ಕಾಲಿಗೆ ಒಂದು ಮುಳ್ಳು ನೆಟ್ಟರೆ ಓಡಿ ನಂಕಡೀನೇ ಬರ್ತಾವ....ಅದಕ್ಕೇ ಹೇಳ್ತೀನಲ್ಲ—ಗಂಡಸು ತನ್ನ ಪ್ರೀತಿ ತೋರಿಸೋ ರೀತೀನೇ ಬ್ಯಾರೇ ಅಂತ....ಯಾಕ? ನನ್ಮಾತಿನ ಕಡೆ ಲಕ್ಷ್ಯ ಇಲ್ಲೇನ? ಇದೇನೆ, ಕುಮುದೀ? ನನ್ನ ಕತೆ ಕೇಳಿ ನೀ ಯಾಕ ಅಳತೀ?"

ತಾನು ಅತ್ತಳು, ಅಳುವು ತಡೆಯದಾಗಿ ಆದರೂ ಜುಳುಜುಳು

ಹರಿಯುವ ಝರಿಯಂತೆ ನಿಧಾನವಾಗಿ ಬರುತ್ತಿದ್ದಿತು. ಮುಂದೆ ಒಂದು ವಾರದಲ್ಲಿ ತಾನು ಮರಳಿ ಮನೆಗೆ ಹೋಗಿದ್ದಳು.

ಮನೆಯಲ್ಲಿ ಕಾಲಿಟ್ಟಾಗ ರಾಮಣ್ಣನು ಮೋಹನನನ್ನೆತ್ತಿ ಮುದ್ದಿಟ್ಟು ದನ್ನು ನೋಡಿ ತನ್ನ ಮೈ ಜುಮ್ಮೆಂದಿತ್ತು.

ತಟ್ಟನೆ ಗಡಿಯಾರವನ್ನು ನೋಡಿಕೊಂಡಳು. ಅಯ್ಯೊ! ಕರೀಲಿಕ್ಕೆ ಬರೋ ಹೊತ್ತೇ ಆಯ್ತು. ಯಾರಿಗ್ಗೊತ್ತು? "ಮೋಹನಾ, ನೀನೂ ನಡೀ" ಅನ್ನಬಹುದು ರಾಮಣ್ಣ ಹೊರಡೋವಾಗ. ಈ ಹುಡುಗ ಇನ್ನೂ ಬರಲಿಲ್ಲ. ಅವನ ಬಟ್ಟೆಯಾದರೂ ತಯಾರ್ಮಾಡಿ ಇಡ್ತೀನಿ ಎನ್ನುತ್ತ ಕುಮುದ ಆ ಕೆಲಸಕ್ಕೆ ತೊಡಗಿದಳು.

## ೧೨

ರಾಮಣ್ಣ ಕಿಟಕಿಯಲ್ಲಿ ನೋಡುತ್ತಿರುವಂತೆಯೆ ಹಗಲು ಸರಿಯುತ್ತ-ಲಿದೆ, ಬರಲಿರುವ ರಾತ್ರಿಯು ನೆರಳಿನಂತೆ ಕ್ರಮೇಣ ಮುಸುಕು ಮೂಡುತ್ತ ಲಿದೆ. ಹಗಲು–ರಾತ್ರಿ, ಗಂಡ–ಹೆಂಡತಿ, ಇದೊಂದು ಕವಿಗಳ ಸಂಕೇತ. ಅಲ್ಲವೇನೊ–ಎಂದುಕೊಂಡ. ಹಗಲು–ರಾತ್ರಿಗಳ ಸಂಬಂಧ ತನ್ನ ಮತ್ತು ಕುಮುದಳ ಸಂಬಂಧದಂತಿದೆಯಲ್ಲವೆ? ನಡುವೆ ಮಬ್ಬು ಕವಿದಿದೆಯಲ್ಲವೆ? ರಾಮಣ್ಣ ಕಿಟಕಿಯಿಂದ ಹೊರಗೆ ನೋಡಿದ, ಮೋಹನ ಬರಬಹುದು ಎಂದು. ಬಂದರೆ ಒಳಿತು, ಎಂದುಕೊಂಡ; ಅವನನ್ನೂ ಸಭೆಗೆ ಕರೆದು ಕೊಂಡುಹೋದರಾಯಿತು, ಎಂದು ಮತ್ತೊಮ್ಮೆ ಹೇಳಿಕೊಂಡ.

ಕಿಟಕಿಯಿಂದ ನೋಡಿದಲ್ಲಿ ಮೋಹನನ ಸುಳಿವೆ ಇರಲಿಲ್ಲ. ಬರ-ಬಹುದು—ಎನ್ನುತ್ತ ಮತ್ತೆ ಕುರ್ಚಿಯ ಕಡೆ ನಡೆದ. ಮೋಹನ ಹೊರಗಿ ನಿಂದ ಬರುವ ಎನ್ನುವಾಗ ರಾಮಣ್ಣನ ಕಣ್ಮುಂದೆ ಯಾವಾಗಲೂ ಒಂದೇ ಒಂದು ಚಿತ್ರ ನಿಲ್ಲುವುದು. ಕುರ್ಚಿಯ ಮೇಲೆ ಕುಳಿತು ಕಿಟಕಿಯತ್ತ ನೋಡಿದೊಡನೆ ಮತ್ತೆ ಅದೇ ಚಿತ್ರ ಅವನ ಕಣ್ಣೆದುರು ಬಂದು ನಿಂತಿತು. ಮುಖದಲ್ಲಿ ಆನಂದದ ಕಳೆ ಮೂಡಿತು.

ಎಷ್ಟು ವರ್ಷಗಳ ಹಿಂದಿನ ಚಿತ್ರ! ಆಗಿನಿಂದ ಈಗ ಮೋಹನ ಎಷ್ಟೊಂದು ಬೆಳೆದಿದ್ದಾನೆ! ಆದರೆ ಆ ಚಿತ್ರ ಅಳಿಸುವುದೆ ಇಲ್ಲ. ಏಳೊ ಎಂಟೊ ವರ್ಷಗಳ ಮುಂಚಿನ ಮಾತು ಕುಮುದಳು ಎರಡನೆಯ ಸಲ ತನ್ನ ಮೇಲೆ ಸಿಟ್ಟಾಗಿ ತನ್ನನ್ನು ಬಿಟ್ಟುಹೋಗಿದ್ದಳು. ಆ ಸಮಯವನ್ನು ತಾನು ಹೇಗೆ ಕಳೆದಿದ್ದನೊ! ಆದರೆ ಒಂದು ದಿನ ಬೆಳಿಗ್ಗೆ ಅಕಸ್ಮಾತ್ತಾಗಿ ತಿರುಗಿ ಬಂದಳು; ಆಕೆಯನ್ನು ಯಾವ ರೀತಿ ಸ್ವಾಗತಿಸಬೇಕು ಎಂಬುದರ ಗೊಂದಲದಲ್ಲಿದ್ದಾಗ ಆಕೆ ಎತ್ತಿಕೊಂಡಿದ್ದ ಮೋಹನ ಒಮ್ಮೆಲೆ ತನ್ನನ್ನು ನೋಡಿ ಅತ್ಯಂತ ಹರ್ಷದಿಂದ ಕೂಗಿ ಎರಡೂ ಕೈಗಳನ್ನು ಮುಂದೆ ನೀಡಿದ್ದ. ತಾನೂ ಅವನನ್ನೆತ್ತಿಕೊಳ್ಳಲು ಹೆಜ್ಜೆಯನ್ನೆತ್ತಬೇಕೆಂದು ಒಮ್ಮೆಲೆ ತಟ್ಟನೆ ತಡೆದಿದ್ದ; ಅಷ್ಟರಲ್ಲಿ ಕುಮುದಳೆ ಒಂದೆರಡು ಹೆಜ್ಜೆ ಮುಂದೆ ಬಂದು ಬಾಗಿ ಮೋಹನನನ್ನು ಕೆಳಗಿಳಿಸಿದ್ದಳು, ತಟ್ಟನೆ ಅವನನ್ನು ಎತ್ತಿಕೊಂಡು ಹೊರ ಬೀಳುವ ತನ್ನ ಹೃದಯವನ್ನೆ ಹಿಡಿದುಕೊಳ್ಳುತ್ತಿದ್ದಾನೊ ಎನ್ನುವಷ್ಟು ಬಲವಾಗಿ ಮೋಹನನನ್ನು ಬಿಗಿದಪ್ಪಿ ಒಂದೇ ಸಮನೆ ಮುದ್ದಿಸಿದ್ದ; ಮೋಹನ ಎರಡೂ ಕೈಗಳಿಂದ ತನ್ನ – ರಾಮಣ್ಣನ – ಕಂಠವನ್ನು ಸುತ್ತಿದ್ದ; ಆಗ ಅತ್ಯಂತ ಉಲ್ಲಸಿತನಾಗಿ ಕುಮುದಳನ್ನು ನೋಡಿದ್ದ.

ಅಬ್ಬ! ಅದೆಂತಹ ಚಿತ್ರ! ಶಬ್ದಗಳಿಗೆ ನಿಲುಕದು. ಪ್ರತಿಭೆಯ ಚಿತ್ರ-ಕಾರನೆ ಬೇಕು ಅದನ್ನು ಬಣ್ಣಿಸಲಿಕ್ಕೆ. ಮೋಹನನ ಮುಖದಲ್ಲಿ ಅದೆಂತಹ ಆನಂದದ ಕಳೆ ಇದ್ದಿತು! ಅದಕ್ಕೆಯೆ ಆನಂದ–ರಸ ಎನ್ನುವರೊ ಏನೊ? ಯಾಕೆಂದರೆ ಆ ಆನಂದದ ಮುಖವನ್ನು ನೋಡಿದವರಿಗೆಲ್ಲ ಆನಂದವಾಗು ತ್ತಿತ್ತು; ಆ ಮಗುವಿನಿಂದ ಆನಂದದ ಕಿರಣಗಳೆ ಹೊರಸೂಸಿ ಇಡಿಯ ಮನೆಯನ್ನೆ ಆನಂದಮಯವಾಗಿ ಮಾಡಿವೆ ಏನೊ ಎನ್ನುವಂತಿತ್ತು.

ಇನ್ನು ಕುಮುದಳ ಮುಖ! ಅದೊಂದೆ ಸಲ ರಾಮಣ್ಣನಿಗೆ ಕುಮುದ ಳನ್ನು ನೋಡಿದೊಡನೆ ಬೇರೊಂದು ಭಾವನೆ ಮೂಡಿದ್ದು. ಎಷ್ಟು ಸಲ ಆಕೆಯನ್ನು ನೋಡಿದ್ದನೊ ಅಷ್ಟು ಸಲ ಆಕೆ ತನ್ನ ಹೃದಯವನ್ನು ಸೆಳೆಯುವ ಮೋಹಕ ಹೆಣ್ಣಾಗಿಯೆ ಕಂಡಿದ್ದಳು; ತನಗಾಗಿ ಆಕೆ; ತಾನು ಭೋಗಿ, ಆಕೆ ಭೋಗ್ಯ, ಎಂಬ ವಿಚಾರವೆ ಪ್ರಾಮುಖ್ಯವಾಗಿ ಸುಳಿಯುತ್ತಿತ್ತು. ಆದರೆ ಅದೊಂದು ದಿನದ ಸಂದರ್ಭದಲ್ಲಿ ಕುಮುದಳನ್ನು ನೋಡಿದಾಗ ತನಗೆ ಆಕೆ

ತನ್ನ ಭೋಗ್ಯ ಹೆಣ್ಣು ಎಂಬ ವಿಚಾರವೆ ಬಂದಿರಲಿಲ್ಲ. ಇಷ್ಟೇಕೆ ? ಆಕೆ ಹೆಣ್ಣು ಎಂಬ ವಿಚಾರವೆ ಬಂದಿರಲಿಲ್ಲ. ಇಷ್ಟೇಕೆ ? ಆಕೆ ಹೆಣ್ಣು ಎಂಬ ವಿಚಾರ ಕೂಡ ಹೊಳೆದಿರಲಿಲ್ಲ. ಅತ್ಯಂತ ಸಂತೃಪ್ತಿಯ ಕಳೆ ಆಕೆಯ ಮುಖದ ಮೇಲೆ ; ಮಿಕ್ಕವರ ಆನಂದವನ್ನು ನೋಡಿ ಆನಂದಿಸುವ ಸಾತ್ತ್ವಿಕ ಕಳೆ ಇದ್ದಿತು ಆಕೆಯ ಮುಖದ ಮೇಲೆ, ತನ್ನನ್ನು ತಾನು ಪೂರ್ತಿಯಾಗಿ ಬದಿಗಿಟ್ಟು, ಮರೆತು ಇನ್ನೊಬ್ಬರ ಸುಖಕ್ಕಾಗಿಯೆ ಬಾಳುವ ನಿಸ್ವಾರ್ಥ ಕಳೆ ಇದ್ದಿತು ಆಕೆಯ ಮುಖದ ಮೇಲೆ.

ತಾಯ್ತನದ ಮೂರ್ತಿಯಾಗಿ ಕಂಡಿದ್ದಳು ಅಂದು ಕುಮುದ. ಆ ಮಾತಿಗೆ ಅರ್ಥವಿದೆಯೆ ? ತಾನಂತೂ ಅವಳನ್ನು ನೋಡಿದಾಕ್ಷಣ ಅಜ್ಞಾನಿ ಬಾಲಕ ಎಂಬ ಭಾವನೆ ಬಂದಂತಾಗಿತ್ತು. ಆಶ್ಚರ್ಯದ ಮಾತೆಂದರೆ, ಹಿಂದೆ ತಮ್ಮಿಬ್ಬರಲ್ಲಿ ಯಾವ ವೈಮನಸ್ಯವೂ ಉಂಟಾಗಿಲ್ಲವೇನೊ ಎಂಬಂತೆ ನಗೆಮೊಗದಿಂದ ತನ್ನೊಡನೆ ಮಾತನಾಡಿದ್ದಳು !

"ಒಂದು ಸಣ್ಣ ಹುಡುಗ, ಒಂದು ದೊಡ್ಡ ಹುಡುಗ" ಎಂದಿದ್ದಳು ನಗುತ್ತಲೆ.

"ಆಂ ?"

"ಅಲ್ಲ, ನಿಮ್ಮಿಬ್ರನ್ನ ನೋಡಿದರ ಯಾರು ಹುಡುಗ ಅಂತ ಹೇಳೋದೆ ಕಠಿಣ ಅಂದೆ."

ಮೋಹನನು, ಆ ಮಾತಿನ ಅರ್ಥವನ್ನು ತಿಳಿದುಕೊಂಡವನಂತೆ, ಕಣ್ಗಳನ್ನರಳಿಸಿ ತನ್ನನ್ನು ನೋಡಿದ್ದ. ಮೋಹನನ ಆ ಅರಳಿದ ಕಣ್ಗಳನ್ನ ನೋಡಿದೊಡನೆಯೆ ಎದೆಯೊಳಗೆ ಎಲ್ಲಿಯೊ ಗುಂಡು ಬಡಿದಂತಾಗಿ, ಕಂಪನಿಯ ನಾಟಕದಲ್ಲಿಯಂತೆ, ದೃಶ್ಯ ತತ್ ಕ್ಷಣ ಬದಲಾಯಿಸಿತ್ತು.

ರಾಮಣ್ಣ ನಿರಾಶೆಯ ನಗೆಮೊಗದಿಂದ ಉಸಿರನ್ನೆಳೆದ. ಕಂಪನಿಯ ನಾಟಕವೇನೊ ನಿಜ ಎನ್ನಬೇಕು ; ಯಾವಾಗಲೂ ತನ್ನ ಮತ್ತು ಕುಮುದಳ ನಡುವೆ ಕೃತ್ರಿಮ ವಾತಾವರಣವನ್ನು ಹುಟ್ಟಿಸುತ್ತಿತ್ತು ಅಂತಹ ಸಂದರ್ಭ.

ಮೋಹನನ ಕಣ್ಗಳ ಬಗ್ಗೆ ರಾಮಣ್ಣನಿಗೆ ಈಗಲೂ ಆಶ್ಚರ್ಯವಾಗುತ್ತಿದ್ದಿತು, ಅವನ್ನು ನೋಡಿದೊಡನೆ ಅಧೈರ್ಯ ಉಂಟಾಗುತ್ತಿತ್ತು.

ಆ ಕಣ್ಗಳು ಮೋಹನನ ಕಣ್ಗಳಲ್ಲ, ಸರಳೆಯ ಕಣ್ಗಳು !

ರಾಮಣ್ಣನಿಗೆ ಸಂದೇಹವೇ ಇದ್ದಿರಲಿಲ್ಲ. ಮೋಹನ ನಗುವಾಗಲಂತೂ ಸರಲೆಯೆ ನಗುಮೊಗದಿಂದ ಮಾತನಾಡುತ್ತಿದ್ದಾಳೇನೊ ಎಂದು ಕ್ಷಣಕಾಲ ಭ್ರಮೆಯಾಗುತ್ತಿತ್ತು ಅವನಿಗೆ, ಎಷ್ಟೊ ಸಲ ಬೆಚ್ಚಿ ಬಿದ್ದಿದ್ದ.

ಮೋಹನನಲ್ಲಿ ಸರಲೆಯ ಕಣ್ಣುಗಳು ಹೇಗೆ? ಮೋಹನ ತನ್ನ ಮತ್ತು ಕುಮುದಳ ಮಗ.

ಅಥವಾ ಆ ಕಣ್ಣುಗಳು ಸರಲೆಯ ಕಣ್ಣುಗಳೆ ಎಂದು ತನಗೆ ಭ್ರಾಂತಿಯೆ?

ಇಲ್ಲವೆ ಸರಲೆಯೆ ಆ ಕಣ್ಣುಗಳ ರೂಪದಲ್ಲಿ ಉಳಿದುಕೊಂಡಿದ್ದಾಳೆಯೆ? ತಾನು ತಾಯಿಯಾಗಲಿಲ್ಲ ಎಂಬ ವಿಚಾರ ಅವಳನ್ನು ಯಾವಾಗಲೂ ಪೀಡಿಸುತ್ತಿತ್ತು; ಮನೆಯಲ್ಲಿ ಮಕ್ಕಳು ಬೇಕು ಎಂದು ಅವಳು ಯಾವಾಗಲೂ ಹಂಬಲಿಸುತ್ತಿದ್ದಳು ತಾನು ಎಷ್ಟೊ ಸಲ ನಗೆಯಾಡಿದ್ದ,

"ಪೇಟೆಯಿಂದ ಕೊಂಡ್ಕೊಂಡು ತರೋಣ, ಈಗಿನ ಕಾಲದಲ್ಲಿ ದುಡ್ಡು ಕೊಟ್ಟರೆ ಏನು ಸಿಕ್ಕಲಿಕ್ಕಿಲ್ಲ?" ಎನ್ನುತ್ತಿದ್ದ.

"ಪ್ಯಾಟೀವಳಗ ಕಾಯಿ–ಪಲ್ಲೆ ಸಿಕ್ಕೇ ಸಿಕ್ತದ ಅಂತ ಮನೀವಳಗ ಕಾಯಿ–ಪಲ್ಲೆ ಹಚ್ಕೋದನ್ನ ಬಿಡೋದಿಲ್ಲ ಯಾರೂ" ಎಂದಿದ್ದಳು ಒಮ್ಮೆ.

"ಸುಮ್ಮನೆ ತ್ರಾಸ ತಕ್ಕೊಳ್ಳೋದು ಹಾಂಗ ಮಾಡೋದಂದರೆ"

"ಅದಕ್ಕೇ ಅದರ ರುಚಿ–ಹೆಚ್ಚು."

"ಹೋಗಲಿ, ಬಿಡು. ಸರಲಾ, ನಾ ಅಂದದ್ದು, ಅಷ್ಟು ಅಗತ್ಯ ಅನ್ನಿಸಿದಾಗ ದತ್ತಕ ತಕ್ಕೊಂಡ್ರಾಯ್ತು ಅಂತ."

"ನಾ ಅನ್ನೋದು, ಮನೀವಳಗೇ ಹುಟ್ಟಿ ಬೆಳೆಯೋ ಮಗು—"

"ನಾನೂ ಬ್ಯಾಡ ಅಂದಿಲ್ಲ, ನೀನೂ ಬ್ಯಾಡ ಅಂದಿಲ್ಲ, ಆದರೂ—"

"ಸಾಕು. ನಾನೇನು ಸಣ್ಣ ಹುಡುಗಿ ಅಂತ ತಿಳಿದೀರೇನು? ನನ್ನಿಂದ ನಿಮಗ ಮಕ್ಕಳ ಸುಖ ಇಲ್ಲ ಅನ್ನೋದು ನನಗೂ ಗೊತ್ತಾಗೇದ."

"ನೀನಿದ್ದರ ನನಗ ಸುಖ. ಹೆಚ್ಚಿಗೆ ಯಾವುದೂ ಬೇಕು ಅಂತ ಅನ್ನಿಸೋದಿಲ್ಲ."

"ನೀವು ಸುಮ್ನೆ ನನ್ನ ಮಾತು ಕೇಳಿರಿ—"

"ಆಜ್ಞೆಯಾಗಲಿ"

"ಇನ್ನೊಂದು ಮದಿವೆ ಮಾಡಿಕೊಳ್ಳಿರಿ."

"ಏನಂದಿ ?"

"ನಾ ಇರೋದ್ರಾಗೇ ಮಾಡಿಕೊಂಡರೆ, ಈ ಮನೀವಳಗೇ ಮಕ್ಕಳು ಹುಟ್ಟಿ ಬೆಳೆಯೋದನ್ನ ಕಾಣ್ತೇನಿ."

"ಆದ್ರೆ ? ಇಂಥಾಕೀನ್ನ ಮದಿವೆ ಆದ್ರ ಮಕ್ಕಳು ಆಗೋದು ಖಂಡಿತ ಅನ್ನೋ ಭರವಸೆ ಒಂದು ಬೇಕಲ್ಲ ? ಏನು, ಇನ್ನೊಮ್ಮೆ ಮೋಸ ಹೋಗೋದು ಬ್ಯಾಡ ಅಂತ ಮಗು ಇದ್ದಾಕೀನ್ನೇ ಮದುವೆ ಆಗಲ್ಯಾ ? ಆಂ ? ಹಹ ;"

"ಸಾಕು, ತಗೀರಿ ! ಏನಾದ್ರೊಂದು ಮಾತಾಡಬ್ಯಾಡಿರಿ !"

ರಾಮಣ್ಣ ಈಗ ಅತ್ಯಂತ ನೊಂದ ಮನಸ್ಸಿನಿಂದ ಹೇಳಿಕೊಂಡ, ಅಂದು ತಾನು "ಏನಾದ್ರೊಂದು" ಮಾತನಾಡಿದ್ದಿಲ್ಲ ಎಂದು. ತನ್ನ ಮಾತೇ ತನಗೆ ಶಾಪವಾದಂತಾಗಿ ಮಗುವನ್ನು ತಳೆದ ಕುಮುದಳನ್ನು ತಾನು ಮದುವೆ ಯಾಗಿದ್ದನಲ್ಲವೆ ? ನಿಜ, ಆ ಮಗುವೇನೊ ತನ್ನದು ನಿಜ, ಆದರೂ—

ರಾಮಣ್ಣ ಈ ವಿಚಾರಕ್ಕಾಗಿಯೆ ಬೆಚ್ಚಿ ಬೀಳುತ್ತಿದ್ದ. ತಾನು ಕಣ್ಣಾರೆ ನೋಡುವೆ ಎಂಬ ಹಟದಿಂದ ಸರಲೆ ಮೋಹನನಲ್ಲಿ ಕಣ್ಣಾಗಿ ಉಳಿದಳೆ ? ನನ್ನ ಮೂರ್ಖತನಕ್ಕಾಗಿ ನಗುತ್ತಿರುವಳೆ ?

ಅಥವಾ—?

ರಾಮಣ್ಣನಿಗೆ ಇನ್ನೊಂದು ಸಂಶಯ ಬರುತ್ತಿದ್ದಿತು. ಕುಮುದಳನ್ನು ಮೆಚ್ಚಿದಾಗೂ ತಾನು ಸರಲೆಯನ್ನೆ ಪ್ರೀತಿಸುತ್ತಿದ್ದನೆ ?

ಮಹಾಭಾರತದಲ್ಲಿ ಕತೆ ಇದೆಯಲ್ಲವೆ ? ವ್ಯಾಸನ ತೇಜಸ್ಸಿಗೆ ಕಣ್ಣು ಮುಚ್ಚಿದ್ದಕ್ಕಾಗಿ ಧೃತರಾಷ್ಟ್ರನ ತಾಯಿ ಕುರುಡ ಮಗುವನ್ನು ಹೆತ್ತಳೆಂದು ? ಪ್ರೇಮಿಗಳ ಹೃದಯದೊಳಗೆ ಹುದುಗಿದ್ದ ವಿಚಾರದ ಪ್ರಭಾವ ಹೀಗೆ ಆ ಪ್ರೇಮ ದಾಟದ ಫಲದ ಮೇಲೆ ಪರಿಣಾಮವನ್ನುಂಟು ಮಾಡುವುದೆ ? ಕುಮುದಳನ್ನು ರತಿಯಲ್ಲಿ ಕೂಡಿದಾಗ ತಾನು ಸರಲೆಯ ರೂಪವನ್ನು ನೆನೆಸಿಕೊಂಡಿದ್ದನೆ ?

ಛಿ ! ಎಂತಹ ಹುಚ್ಚು ವಿಚಾರ ! ಪೂರ್ತಿಯಾಗಿ ಮೈ ಮರೆಯುವ, ಸರ್ವಾತ್ಮನಾ ತಾದಾತ್ಮ್ಯವಾಗಿದ್ದ ರತಿಸಂದರ್ಭದಲ್ಲಿ ಇನ್ನೊಂದು ವಿಚಾರ ಹೃದಯದಲ್ಲಿ ಇರುವುದಾದರೂ ಶಕ್ಯವಿದೆಯೆ ?

ಹಾಗಿದ್ದಲ್ಲಿ ರೈತನು ಹೊಲದಲ್ಲಿ ಬೀಜಗಳನ್ನು ಬಿತ್ತುವಾಗ "ಹೇರಳ-

ವಾಗಿ ಬೆಳೆಯಲಿ" ಎಂಬ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಅದನ್ನೆ ಸಾಧಿಸಬಹುದಲ್ಲ ?

ಉಹುಂ. ಹಾಗಾಗದು. ನಿಸರ್ಗಕ್ಕೆ ಅದು ವಿರುದ್ಧ. ಬೀಜದ ಗುಣ-ದೋಷಗಳೆ ಬೆಳೆಯಲ್ಲಿ ಕಾಣಬರುವುವಲ್ಲದೆ ಹೊರಗಿನವಲ್ಲ. ತನ್ನ ಮಗ ತನ್ನಂತೆ —ಆದರೆ-? ತನ್ನದೊಬ್ಬನದೆ ಮಗು ಇದಲ್ಲವಲ್ಲ ? ತನ್ನ ಮತ್ತು ಕುಮುದಳ —, ಅಲ್ಲಲ್ಲ, ಮಗು ತನ್ನದೆ. ಬೆಳೆ ಬೀಜದ್ದೆ. ಆದರೆ ಸುತ್ತಲಿನ ಗಾಳಿ-ಹವೆ, ಹೊರಗಿನ ನೆಲ-ನೀರು—ಇವುಗಳ ಪರಿಣಾಮವೂ ಆಗುವುದು, ಅದು ಗುಣ-ದೋಷಗಳನ್ನು ಕೊಡುವುದರಲ್ಲಿ ಅಲ್ಲ, ಗುಣ-ದೋಷ ಬರುವುದು ಬೀಜದಿಂದಲೆ. ಹಾಗೆ ಬಂದ ಗುಣ-ದೋಷಗಳ ಮೇಲೆ ಈ ಬಾಹ್ಯ ಕಾರಣಗಳ ಪ್ರಭಾವ. ಹೆಣ್ಣು ಗಾಳಿ ಹವೆ-ನೆಲ-ನೀರು ಇದ್ದಂತೆ, ಹುಟ್ಟು ಗುಣ, ಶರೀರರಚನೆ ಇದರ ನಿರ್ಣಯ ಗಂಡಿನಿಂದಲೆ—ಬೀಜದಿಂದಲೆ—

ರಾಮಣ್ಣ ತಟ್ಟನೆ ಕುರ್ಚಿಯಿಂದೆದ್ದ. ಇದೇನು ? ಹೀಗೇಕೆ ವಿಚಾರ ಗೊಂದಲದಲ್ಲಿ ಸಿಕ್ಕಿಕೊಂಡೆ ಬೇರೆ ಕೆಲಸಕ್ಕಾಗಿ ದಾರಿ ಕಾಯುತ್ತಿರುವಾಗ, ಎನ್ನುತ್ತ ಕೈಗಡಿಯಾರವನ್ನು ನೋಡಿಕೊಂಡ. ಇನ್ನೂ ಇಪ್ಪತ್ತುನಿಮಿಷ! ಕಿಟಕಿಗೆ ಬಂದ, ಮೋಹನನು ಇನ್ನೂ ಬಂದನೊ ಇಲ್ಲವೊ, ಎಂದುಕೊಳ್ಳುತ್ತ.

ಓ ! ಎಂದು ನಕ್ಕ. ಮೋಹನನ ಸಂದರ್ಭದಲ್ಲಿಯೆ ಅಲ್ಲವೆ ತಾನೇನೇ ನನ್ನೊ ವಿಚಾರ ಮಾಡುತ್ತ ತರುಣ ಸಾಹಿತಿಯಂತೆ ಎಲ್ಲವನ್ನೂ ಬಲ್ಲೆ ಎನ್ನುತ್ತ ಅಡ್ಡದಾರಿಯನ್ನು ಹಿಡಿದದ್ದು ? ಅಡ್ಡದಾರಿ ಅಲ್ಲ – ಎಂದೆನ್ನಿಸಿತು ಮರುಗಳಿಗೆಗೆ. ತನ್ನ ತರ್ಕವೇನೊ ಅಡ್ಡದಾರಿಯನ್ನು ಹಿಡಿದಿರಬಹುದು, ಆದರೆ ಅನುಭವ ಪ್ರತ್ಯಕ್ಷವಿದೆಯಲ್ಲ ! ನಿಂತಲ್ಲಿಯೆ ತಿರುಗಿ ನಿಂತು ಗೋಡೆಗೆ ತೂಗಹಾಕಿದ್ದ ಸರಲೆಯ ಭಾವಪಟವನ್ನು ನೋಡಿದ.

ಸಂಶಯವೆ ಇಲ್ಲ, ಎಂದ.

ಹತ್ತಿರ ನಡೆದು ಬಂದು ಭಾವಪಟವನ್ನು ಸೂಕ್ಷ್ಮವಾಗಿ ದಿಟ್ಟಿಸುತ್ತ, "ಅವೇ ಕಣ್ಣುಗಳು" ಎಂದ.

ಕುಮುದಳೂ ಒಮ್ಮೆ ಅದೇ ಮಾತನ್ನು ಹೇಳಿದ್ದಿಲ್ಲವೆ ?

ಒಮ್ಮೆ ? ಯಾವಾಗ ? ಓ – ಆ ಸಲ ಸೋದರತ್ತೆಯ ಮನೆಗೆ ಹೋಗಿ ಅಕಸ್ಮಾತ್ತಾಗಿ ಬಂದವಳು, ತಾನು ಮೋಹನನನ್ನೆತ್ತಿ ಮುದ್ದಿಸಿದ್ದ, ಆಗ ಆಕೆ

ಏನೊ ನಮ್ಮಿಬ್ಬರ ನಲುವಾಗಿ ಅಂದಿದ್ದಳು, ಆ ಮಾತಿಗೆ ಮೋಹನ ಅರಳಿದ. ಕಣ್ಣಳಿಂದ ತನ್ನನ್ನೊಮ್ಮೆ ಆಕೆಯನ್ನೊಮ್ಮೆ ನೋಡಿ-ದ್ದಿನಲ್ಲ? ಆಗ—

ರಾಮಣ್ಣ ವೈರಾಗ್ಯದ ಉಸಿರನ್ನೆಳೆದು ಕುರ್ಚಿಯ ಮೇಲೆ ಕುಳಿತು ಕೊಂಡ. ಅಂದು, ಅದೊಂದೆ ಕ್ಷಣ ತನ್ನ ಇಡಿಯ ಜನ್ಮವೆ ಸುಖಮಯ ಎನ್ನಿಸಿತ್ತು!

ಅಹುದು, ಆಗ ಅಂದಿದ್ದಳು ಕುಮುದ,

"ಈ ಹುಡುಗನ ಕಣ್ಣು ಯಾರ ಹಾಂಗ ಅವ ಹೇಳಿರಿ?" ಎಂದು.

ತಾನು ಒಮ್ಮೆಲೆ ಎಚ್ಚೆತ್ತವನಂತೆ "ಯಾರ ಹಾಂಗ" ಎನ್ನುತ್ತ ಮೋಹನನನ್ನು ಮತ್ತೊಮ್ಮೆ ನೋಡಿದ್ದ.

ಆಗ ಅವನಿಗೆ ಹೊಳೆದಿತ್ತು. ಯಾರ ಹಾಗೆ? ತನಗೆ ಗೊತ್ತು. ಆದರೆ ಆ ಮಾತನ್ನು ಹೇಳಿದರೆ? ಅಕಸ್ಮಾತ್ತಾಗಿ ಆನಂದದಿಂದ ಪ್ರಾರಂಭ ವಾದ ಅವಳ ಗೃಹಪ್ರವೇಶ ವಿರಸವಾಗಬಹುದಲ್ಲ?

"ಯಾರ ಹಾಂಗ?" ಎಂದು ಪ್ರಶ್ನೆ ತಿಳಿಯದವನಂತೆ ಕೇಳಿದ್ದ.

"ಮೋಹನನ ಕಣ್ಣು ಯಾರ ಹಾಂಗ ಅವ ಅಂತ ಕೇಳಿದೆ. ಇಷ್ಟ ರೊಳಗೇ ಮರೆತುಬಿಟ್ಟರೇನು?"

ಮರೆತುಬಿಡುವುದು? ಓಹೊ-ಇವಳಿಗೂ ತಿಳಿದಿದೆ ಮಗುವಿನ ಕಣ್ಣು ಯಾರ ಹಾಗೆ ಇವೆ ಎಂಬುದು. ತಾನು ಸರಲೆಯನ್ನು ಮರೆತಿದ್ದಾನೆ ಎಂದು ಸೂಚಿಸುತ್ತಿದ್ದಾಳಲ್ಲ? ಆ ಸೂಚನೆಯೆ ಆಧಾರವೆನ್ನಿಸಿತ್ತು ತನಗೆ.

"ಯಾರ ಹಾಂಗೇನು? ಕೇವಲ ನಿನ್ನ ಕಣ್ಣಳ ಹಾಂಗೇ" ಎಂದಿದ್ದ.

ಉಹುಂ ಎಂದು ಅಸಮ್ಮತಿಯನ್ನು ಸೂಚಿಸುವಂತೆ ನಗೆಮೊಗದಿಂದಲೆ ತಲೆಯನ್ನಲ್ಲಾಡಿಸಿದ್ದಳು ಕುಮುದ.

"ಹಾಂಗಿದ್ದರ? ನನ್ನ ಹಾಂಗ ಅವ ಅಂತೀಯೇನು? ಛೆ!" ಎಂದಿದ್ದ.

ಕುಮುದ ಒಮ್ಮೆಲೆ ಉಸುರ್ಗರೆದು ಸುಮ್ಮನಾಗಿದ್ದಳು.

ಆಕೆಯ ಬಾಯಿಯಿಂದಲೆ ಆ ಮಾತು ಬರಲಿ ಎಂದು ನಿರೀಕ್ಷಿಸುತ್ತಿದ್ದ ತನಗೆ ನಿರಾಶೆಯಾಗಿತ್ತು. ಆಕೆ ತುಸ ತಡೆದಾದರೂ ಹೇಳಬಹುದೇನೊ ಎಂದು ಆಶೆ ಇಟ್ಟುಕೊಂಡ. ಆದರೆ ಆಕೆಯ ದೃಷ್ಟಿ ಎಲ್ಲಿಯೊ ದೂರ

ಹೋದಂತಾಗಿತ್ತು, ಆಕೆಯ ಮುಖದಲ್ಲಿ ನಿರಾಶೆಯ ಕಳೆ ಮೂಡಿತ್ತು, ಬಂದದ್ದು ಬರಲಿ ಎನ್ನುವವರಂತೆ ಮತ್ತೊಮ್ಮೆ ಉಸುರ್ಗರೆದಳು, ತನ್ನನ್ನು ನೋಡಿದ್ದಳು, ಈಗಲಾದರೂ ಹೇಳುವಳೇನೊ ಎನ್ನುವಷ್ಟರಲ್ಲಿ ಮೋಹನ ಮತ್ತೆ ಆಕೆಯ ಕಡೆ ಓಡಿದ್ದ, ಅವನನ್ನೆತ್ತಿಕೊಂಡು ಒಳಗೆ ಹೋಗಿದ್ದಳು.

ಒಂದು ವೇಳೆ ಆಗ ತಾನು ಹೇಳಿದ್ದರೆ ? – ಎಂಬ ವಿಚಾರ ರಾಮಣ್ಣನಿಗೆ ಆ ತರುವಾಯ ಅನೇಕ ಸಲ ಬಂದಿತ್ತು. " ನೀನು ಹೇಳುವುದು ನಿಜ, ಹುಡುಗನ ಕಣ್ಣುಗಳು ಸರಲೆಯ ಕಣ್ಣುಗಳ ಹಾಗೇ ಇವೆ " ಎಂದು ತಾನು ಹೇಳಿದ್ದರೆ, ಆಕೆಗೆ ಸಮಾಧಾನವಾಗುತ್ತಿದ್ದಿತೆ ? ಆದರೆ–ಮನುಷ್ಯನ ಸ್ವಭಾವವೆ ವಿಚಿತ್ರವಾಗಿದೆ–! ಅಂದು ತಾನು, ಕುಮುದ, ಮೋಹನ ಅನಿರೀಕ್ಷಿತವಾಗಿ ಒಂದು ಅಲೌಕಿಕ ಸುಖದ ಕ್ಷಣವನ್ನು ಕಂಡಿದ್ದರು. ಆ ಕ್ಷಣವನ್ನು ಶಕ್ಯವಾದಷ್ಟು ತಟಸ್ಥವಾಗಿರಿಸಬೇಕು ಎಂದು ರಾಮಣ್ಣನ ಉದ್ದೇಶ. ಯಾವ ಉದ್ದೇಶಕ್ಕಾಗಿ ತಾನು ಹಾಗೆ ನಡೆದುಕೊಂಡನೊ ಆ ನಡತೆಯಿಂದ ಅದಕ್ಕೆ ವಿರುದ್ಧವಾದ ಪರಿಣಾಮವಾಯಿತು ! ಸರಲೆಯ ನೆನಪು, ತಾನು ಸರಲೆಯನ್ನು ನೆನೆಸುವುದು, ಅದರಲ್ಲೂ ಕುಮುದಳ ಹೊಟ್ಟೆಯಲ್ಲಿ ಹುಟ್ಟಿದ ಮಗು ಸರಲೆಯನ್ನು ಹೋಲುತ್ತಿದೆ ಎಂದು ತಾನು ಹೇಳುವುದು ಆಕೆಯನ್ನು ಕೆರಳಿಸಬಹುದು ಎಂದು ತನ್ನ ಹೆದರಿಕೆ. ಆಕೆಯನ್ನು ಕೆರಳಿಸಬಾರದು ಎಂಬ ಸದುದ್ದೇಶ ತನಗೆ. ಸದುದ್ದೇಶಕ್ಕೆ ದುಷ್ಪರಿಣಾಮ !

ಇದಕಾಗಿಯೆ ಜನ ದೈವವೆನ್ನುವುದೊಂದಿದೆ ಎಂದು ನಂಬುತ್ತಾರೂ ಏನೊ ! ನಿಜವಾಗಿಯೆ ಜನರು ನಂಬಿದಂತಹ ದೈವಶಕ್ತಿ ಎಂಬುದೊಂದಿದ್ದರೆ ಮಾನವನಷ್ಟು ಕ್ಷುಲ್ಲಕ ಮತ್ತು ಅನುಕಂಪನೀಯ ಪ್ರಾಣಿ ಇನ್ನೊಂದಿಲ್ಲ ಎನ್ನಬೇಕಾಗುವುದು. ಯಾರಿಗೆ ಗೊತ್ತು ? ತನ್ನ ದೈವಗತಿಯೂ ವಿಪರೀತವೆ ಆಗಿದೆಯೊ ಏನೊ ?

ಅಥವಾ – ? ರಾಮಣ್ಣನಿಗೆ ಒಂದು ವಿಚಾರ ಹೊಳೆದಿತ್ತು ಈ ಬಗ್ಗೆ. ದೈವ ಎಂಬುದಿಲ್ಲ ; ಆದರೆ ಯಾವಾಗ ಮನುಷ್ಯನಿಗೆ ತನ್ನ ಹೊಣೆ ತಿಳಿಯುವುದಿಲ್ಲವೊ, ಇಲ್ಲವೆ ಯಾವಾಗ ಮನುಷ್ಯನು ತನ್ನ ಹೊಣೆಯನ್ನು ಹಾರಿಸಿಕೊಳ್ಳಲು ಯತ್ನಿಸುವನೊ ಆಗ "ದೈವ" ಎನ್ನುವನು, ಎಂದರೆ, "ದೈವ" ಎಂದಾಗೊಮ್ಮೆ ತನ್ನ ತಪ್ಪನ್ನೆ ಒಪ್ಪಿಕೊಂಡಂತೆ.

ನಿಜ. ಈಗ ಸಿದ್ಧನಿದ್ದಾನೆ ರಾಮಣ್ಣ ತನ್ನ ತಪ್ಪನ್ನೊಪ್ಪಿಕೊಳ್ಳಲು. ಅಂದು ನಡೆದದ್ದು ವಿಪರೀತ ದೈವಗತಿ ಅಲ್ಲ, ತನ್ನ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ. "ಹುಡುಗನ ಕಣ್ಣುಗಳು ಯಾರ ಹಾಂಗ ಅವ ಹೇಳಿರಿ?" ಎಂದು ಕುಮುದ ಕೇಳಿದ ರೀತಿ, ಕೇಳುವಾಗಿನ ನಗೆಮೊಗ ಇವುಗಳಿಂದ ಆ ಪ್ರಶ್ನದ ಉತ್ತರ ಇಬ್ಬರಿಗೂ ಗೊತ್ತಿದ್ದಿತು ಎಂಬುದು ಸ್ಪಷ್ಟವಾಗುವಂತಿದ್ದಿತು. ಮೋಹನನ ಕಣ್ಣುಗಳನ್ನು ಹೋಲುವ ಕಣ್ಣುಗಳುಳ್ಳ ಮತ್ತು ತನಗು ಕುಮುದಳಿಗು ಇಬ್ಬರಿಗೂ ಪರಿಚಿತವಿದ್ದ ವ್ಯಕ್ತಿಗಳಾದರೂ ಎಷ್ಟಿರಬಹುದು? "ಯಾರ ಕಣ್ಣುಗಳು?" ಎಂದರೆ "ಸರಲೆಯ ಕಣ್ಣುಗಳು" ಎಂಬ ನೇರವಾದ ಉತ್ತರವನ್ನು ಕುಮುದ ಅಪೇಕ್ಷಿಸಿದ್ದಳೇನೊ?

ಆದರೆ ತಾನು ಮಾಡಿದ್ದು ಏನು? ನೇರವಾದ ಉತ್ತರವನ್ನು ಕೊಡಲಿಲ್ಲ. "ನಿನ್ನ ಹಾಂಗ" ಎಂದು ಒಂದು ಅಪ್ರಾಮಾಣಿಕ ಉತ್ತರವನ್ನು ಕೊಟ್ಟೆ; ಅದು ಅಲ್ಲ ಎಂದ ಮೇಲೆ "ನನ್ನ ಹಾಂಗ ಅಂತೀಯೇನು?" ಎಂದು ಬಾಯಿಗೆ ಬಂದ ಉತ್ತರವನ್ನು ಕೊಟ್ಟಿದ್ದ. ಆಕೆ ಎಷ್ಟು ಉತ್ಸಾಹದಿಂದ ಕೇಳಿದ್ದಳೆಂಬುದರ ಮಹತ್ತ್ವವೆ ತನಗಿಲ್ಲ ಎನ್ನುವಂತೆ ವ್ಯವಹರಿಸಿದ್ದ.

ಯಾಕೆ? ಕುಮುದಳು ತನ್ನನ್ನು ಮೆಚ್ಚಬೇಕೆಂದು!

ಅದಕ್ಕಾಗಿ ತನಗೆ ಶಿಕ್ಷೆಯಾಯಿತು. ಗಂಡನೊಡನೆ ತನ್ನ ಕೌಟುಂಬಿಕ ಜೀವನವನ್ನು ಕಲ್ಪಿಸುವುದರಲ್ಲಿ ದುರ್ವಾಸನನ್ನು ಮರೆತ ಶಕುಂತಲೆಗೂ ಶಿಕ್ಷೆಯಾಯಿತು, ಹಾಗೆ.

ನಿಜವಾಗಿ ಇದೊಂದು ಮಹತ್ತ್ವದ ವಿಚಾರ. ಕೇವಲ ತನ್ನ, ಸ್ವಾರ್ಥದ ದೃಷ್ಟಿಯಿಂದ ತನ್ನ ಹೊಣೆಯನ್ನು ತಪ್ಪಿಸಿಕೊಳ್ಳುವ, ತನ್ನ ಕರ್ತವ್ಯವನ್ನು ಕಡೆಗಣಿಸುವ ಮಾನವನಿಗೆ ಪ್ರಾಯಶ್ಚಿತ್ತ ತಪ್ಪಿದ್ದಲ್ಲ.

ರಾಮಣ್ಣನ ಮುಖದಲ್ಲಿ ನಗೆ ಮೂಡಿತು. "ನಿಜವಾಗಿ ಮಹತ್ತ್ವದ ವಿಚಾರ" ಎಂದು ತನ್ನನ್ನು ತಾನೇ ಅಣಕಿಸಿದ. ಮಹತ್ತ್ವದ ವಿಚಾರವಂತೆ! ಹಾಗಿದ್ದರೆ ಇಂತಹ ವಿಚಾರಗಳನ್ನು ಸಾರ್ವಜನಿಕ ಸಭೆಗಳಲ್ಲಿ ಹೇಳಲು ತಾನು ಸಿದ್ಧನಿರುವನೆ? ಜನರು ಕೇಳಲಿ, ಬಿಡಲಿ – ತನ್ನ ಮಟ್ಟಿಗೆ ತಾನು ಸಿದ್ಧನಿರುವನೆ?

ಉಂ – ಎನ್ನುತ್ತ ರಾಮಣ್ಣ ಗದ್ದವನ್ನು ತುರಿಸಿಕೊಂಡ. ಹೇಳ

ಬೇಕು, ಧೈರ್ಯವಾಗಿ ಸ್ಪಷ್ಟವಾಗಿ ಹೇಳಬೇಕು. ಜನರು ಕೇಳದಿದ್ದರೆ, ಅವರು ಕೇಳುವಂತೆ ರಂಜಕವಾಡಿ ಹೇಳಬೇಕು ? ತಾನು ಸಾಹಿತಿಯಲ್ಲವೆ? ಜನರಿಗೆ ಬೇಕೆಂದು ಬೀದಿಯ ಶ್ವಾನ – ಮೈಥುನದ ಕತೆಯನ್ನು ಹೇಳಲು ತಾನು ಸಿದ್ಧ ; ಆದರೆ ತನ್ನದೆ ಜೀವನದಲ್ಲಿ ಪರಸ್ಪರ ಪ್ರೀತಿಸುವ ಎರಡು ಹೃದಯಗಳ ವೈಮನಸ್ಯದಲ್ಲಿ ಒಣಗಿ ಸಾಯುತ್ತಿವೆ. ಆ ಕತೆಯನ್ನು ತಾನು ಯಾಕೆ ಹೇಳಬಾರದು ?

ಹೇಳೋಣ—ಎಂದುಕೊಂಡ. ಇಂದಿಗಂತೂ ನನ್ನ ಸಾಹಿತ್ಯಜೀವನದ ಒಂದು ಯುಗ ಮುಗಿದಂತಾಗುವುದು ; ಸಾರ್ವಜನಿಕ ಮನ್ನಣೆಯನ್ನು ಅಧಿಕೃತವಾಗಿ ಪಡೆದುಕೊಂಡಂತಾಗುವುದು ಇಂದಿನಿಂದ. ಆಮೇಲೆ ತನ್ನ ಪ್ರಾಮಾಣಿಕ ವಿಚಾರಗಳನ್ನೆ ರಂಜಕವಾಗಿ ಹೇಳೋಣ, ಹೇಳಬಹುದು, ಹೇಳಲು ಅಡ್ಡಿ ಇಲ್ಲ – ಎಂದು ಗದ್ದವನ್ನು ತುರಿಸುತ್ತಲೆ ಗುಂಯ್ಗುಡುತ್ತ ಎದ್ದು ಕಿಟಕಿಯ ಕಡೆ ನಡೆದ.

ಹೊರಗೆ ನೋಡಿದ. ಆಮೇಲೆ ಕೆಳಗಿಳಿಯುವ ಮೆಟ್ಟಿಲುಗಳ ಹತ್ತಿರ ಬಂದು ಲಕ್ಷ್ಯಪೂರ್ವಕವಾಗಿ ಕೆಳಗಿನ ಸದ್ದು–ಸುಳಿವನ್ನು ಕೇಳುತ್ತ ನಿಂತ. ಕೈ ಗಡಿಯಾರವನ್ನು ನೋಡಿಕೊಂಡ. "ಸಭೆ ಗೊತ್ತಾದ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗುವುದಿದ್ದರೆ ಇನ್ನೂ 18 ನಿಮಿಷ" ಎಂದುಕೊಂಡ. ಅಥವಾ, ತಡವಾಗಿಯೆ ಸುರುವಾಗುವುದು ಖಂಡಿತ; ಒಳಿತೇ ಆಯಿತು, ಮೋಹನನನ್ನೂ ಕರೆದುಕೊಂಡು ಹೋಗಲು ಅನುಕೂಲವಾಗುವುದು— ಎನ್ನುತ್ತ ದಣಿದವನಂತೆ ಉಸ್ ಎಂದು ಎರಡೂ ಅಂಗೈಗಳನ್ನು ತಲೆಯ ಹಿಂದಿಟ್ಟುಕೊಂಡು ಮುಖವನ್ನೆತ್ತಿ ಕುಳಿತುಕೊಂಡ.

## ೧೩

ಕುಮುದ ತಡೆದಳು. ಏನೊ ಸದ್ದಾದಂತಾಯಿತಲ್ಲ ? ಮೋಹನ ಬಂದನೆ ? ಒಳಿತೇ ಆಯಿತು, ನಾನೂ ಅವನಿಗಾಗಿ ಎಲ್ಲ ಸಿದ್ಧತೆಯನ್ನು ಮುಗಿಸಿ—ಅಲ್ಲ, ಬಾಗಿಲ ಸದ್ದಲ್ಲ ! ಕುಮುದ ಮುಖವನ್ನು ಮೇಲಕ್ಕೆತ್ತಿ ನೋಡಿದಳು. ಓ ! ಮಗನ ಬರವನ್ನು ತಂದೆ ಇದಿರು ನೋಡುವಂತಿದೆ !

ಒಂದು ನಿಮಿಷ ಮೆಟ್ಟಿಲುಗಳ ಮೇಲಿನ ಸದ್ದನ್ನು ಕೇಳಿದಳು. ಕ್ರಮೇಣ ಅವಳ ಮುಖ ಮುಗುಳ್ನಗೆಯಿಂದ ಅರಳಿತು. ಶೂನ್ಯದೃಷ್ಟಿಯಿಂದ ಇದಿರಿನಲ್ಲಿ, ದೂರದೂರ ಏನನ್ನೊ ಕಂಡವಳಂತೆ ನೋಡುತ್ತ ನಿಂತಳು. ನಮಾಧಾನದ ಉಸಿರನ್ನು ಬಿಟ್ಟು ಮತ್ತೆ ಕನ್ನಡಿಯೆದುರಿನ ಕುರ್ಚಿಯತ್ತ ನಡೆದಳು. ಕುಳಿತು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಒಂದೇ ಸಮನೆ ದಿಟ್ಟಿಸಿದಳು.

"ನಿನಗ ಬಹಾಳ ಸಂತೋಷ, ಅಲ್ಲೇನೆ?, ರಾಮಣ್ಣ ಮೋಹನನನ್ನು ಪ್ರೀತಿಸುವ ಅಂತ. ಆಂ?" ಎಂದು ತನ್ನ ಪ್ರತಿಬಿಂಬವನ್ನು ಕೇಳಿದಳು. ಪ್ರತಿಬಿಂಬ ನಕ್ಕಿತು.

ಬಹಾಳ ಸಂತೋಷ – ಎಂದು ಮತ್ತೊಮ್ಮೆ ತನ್ನಷ್ಟಕ್ಕೆಯೆ ಹೇಳಿಕೊಂಡಳು. ಯಾರೊ ಯಾರನ್ನೊ ಪ್ರೀತಿಸುವರೆಂದು ತನಗೆ ಯಾಕೆ ಸಂತೋಷವಾಗಬೇಕೊ ?

ಹುಚ್ಚಿ ತಾನು! ಮೊದಮೊದಲು ಏನನ್ನೊ ತಿಳಿದುಕೊಂಡಿದ್ದಳು. ಆ ಸಲ ತಾನು ಮರಳಿ ಮೋಹನನೊಡನೆ ಬಂದಾಗ ರಾಮಣ್ಣ ಮೋಹನನ್ನೆತ್ತಿ ಮುದ್ದಿಸಿದ್ದನಲ್ಲ! ಆಗ? ತನಗೆಷ್ಟು ಸಂತೋಷವಾಗಿತ್ತು? ಮೋಹನನ ಜಾಗದಲ್ಲಿ ತಾನೇ ಇರುವಳೇನೊ ಎಂಬ ಭ್ರಾಂತಿಯಿಂದ ಮೈ ಜುಮ್ಮೆಂದು ಬೆವರೊಡೆದಿತ್ತು. ರಾಮಣ್ಣನ ಮುಖವನ್ನೂ ಉಲ್ಲಾನವನ್ನೂ ನೋಡಿದಾಗ ರಾಮಣ್ಣ ತನಗಾಗಿ – ಕುಮುದಳಿಗಾಗಿ – ಇದ್ದ ಪ್ರೀತಿಯನ್ನೆ ಮೋಹನನ ಮೇಲೆ ಸುರಿಸುತ್ತಿದ್ದಾನೆ ಎಂದು ಸ್ಪಷ್ಟವಾದ ಭಾವನೆ ಮೂಡಿತ್ತು ತನ್ನ ಹೃದಯದಲ್ಲಿ. ಅಂದಿನ ಆ ದೃಶ್ಯವನ್ನು ಸರಲಕ್ಕ ನೋಡಿದ್ದರೆ—? ಎಂಬ ವಿಚಾರ ಎಲ್ಲಿಂದಲೊ ತನ್ನಲ್ಲಿ ಹಣಿಕಿಕ್ಕಿತ್ತು. ಮನೆಗೆ ಮಕ್ಕಳು ಬೇಕು ಎಂದು ಎಷ್ಟು ಸಲ ಹೇಳುತ್ತಿರಲಿಲ್ಲ? ರಾಮಣ್ಣನು ತನ್ನನ್ನು–ಕುಮುದಳನ್ನು – ಮದುವೆಯಾಗಬೇಕು, ಅವರಿಬ್ಬರಿಗೆ ಮಕ್ಕಳಾಗಬೇಕು, ಅದನ್ನು ತಾನು ಕಣ್ಣಾರೆ ನೋಡಿ ಸಾಯಬೇಕು ಎಂದು ಅಕ್ಕ ಮೇಲಿಂದ ಮೇಲೆ ಹೇಳುತ್ತಿದ್ದಳು. ಇಂದು ಆಕೆ ಜೀವದಿಂದಿದ್ದರೆ? ತನ್ನ ಮತ್ತು ರಾಮಣ್ಣನ ಮಗು, ರಾಮಣ್ಣ ಮುದ್ದಿನ ಮಗುವಿನ ಜೊತೆ ಮಗುವಿನಂತೆ ಆಟವಾಡುತ್ತಿದುದನ್ನು ನೋಡಿದ್ದರೆ? ಕುಮುದ ಅತ್ಯಂತ ವಾತ್ಸಲ್ಯಪೂರಿತ ದೃಷ್ಟಿ

ಯಿಂದ ಮಗನನ್ನು ನೋಡಿದಳು. ಎದೆ ಧಸ್ಸೆಂದಿತು. ಅಕ್ಕ! – ಅಲ್ಲ, ಅಕ್ಕನ ಕಣ್ಗಳು! ಅಲ್ಲ – ಮೋಹನನ ಕಣ್ಗಳು! ತದ್ರೂಪ ಅಕ್ಕನ ಕಣ್ಗಳಂತೆಯೆ ಇವೆಯಲ್ಲ! ಇದುವರೆಗೂ ಹೇಗೆ ತನ್ನ ಲಕ್ಷ್ಯಕ್ಕೆ ಬಂದಿರಲಿಲ್ಲ? ಮಗನ[illegible]ೋಡಿದಳು; ಏನೂ ಸಂಶಯವಿಲ್ಲ. ಅಕ್ಕನ ಕಣ್ಗಳೆ! ಇಂದಿನ ಈ [illegible]ನ್ನು ನೋಡುತ್ತಿದ್ದಾಳೆ! ಧನ್ಯಳಾದಳು ಸರಳಕ್ಕ—

ಅಷ್ಟರಲ್ಲಿ ರಾಮಣ್ಣನೂ ತನ್ನನ್ನು ನಗೆರೂಪದಿಂದ ನೋಡಿದ್ದ. ತನಗೆ ಏನೆನ್ನಿಸಿತೊ ಏನೊ? ಮೋಹನನ ಕಣ್ಣು ಯಾರ್‍ಹಾಂಗ ಅವ ಅಂತ ಕೇಳಿ ಬಿಟ್ಟಳು!

ಎಷ್ಟೊಂದು ಉತ್ಸುಕತೆಯಿಂದ ಆ ಪ್ರಶ್ನವನ್ನು ಕೇಳಿದ್ದಳು? ತಾನು ನೋಡಿದ್ದು ರಾಮಣ್ಣನ ಲಕ್ಷ್ಯಕ್ಕೂ ಬರಲಿ, ತನಗಾದ ಸಂತೋಷ ಅವನಿಗೂ ಆಗಲಿ, ತಾವಿಬ್ಬರೂ ಅಂದು ಸರಳಕ್ಕನನ್ನು ಸ್ಮರಿಸಿ ಕೃತಕೃತ್ಯರಾಗೋಣ – ಎಂದು ಹಟದಿಂದ ಮತ್ತೊಮ್ಮೆ ಆ ಪ್ರಶ್ನವನ್ನು ಕೇಳಿದ್ದಳು.

ರಾಮಣ್ಣನಿಗೆ ತನ್ನ ಪ್ರಶ್ನವೆ ತಿಳಿದಿರಲಿಲ್ಲವೇನೊ? ಎರಡನೆಯ ಸಲ ಕೇಳಿದಾಗೂ ಮೋಹನನನ್ನು ನೋಡಿದಂತೆ ಮಾಡಿ "ನಿನ್ನ ಹಾಂಗ ಅವ" ಎಂದಿದ್ದ. ಛಿ! ಎಂತಹ ಅಸಂಬದ್ಧ ಮಾತು! ಇಷ್ಟೊಂದು ಸ್ಪಷ್ಟವಾಗಿ ಕಾಣುವುದನ್ನು ಸರಿಯಾಗಿ ನೋಡಬಾರದೆ? ರಾಮಣ್ಣ ಅಂತಹ ಯಾವುದನ್ನೂ ಮಾಡಲಿಲ್ಲ. "ನನ್ಹಾಂಗ ಅವ ಅಂತೀ ಏನು?" ಎಂದಿದ್ದ.

ತನಗೆ ಅತ್ಯಂತ ನಿರಾಶೆಯಾಗಿತ್ತು. ಮುಂದೆ ಅಲ್ಲಿ ನಿಂತು ಮಾತನಾಡಬೇಕೆಂದೆನ್ನಿಸಿರಲಿಲ್ಲ. ತನ್ನ ಕಡೆ ಬಂದ ಮೋಹನನ್ನೆತ್ತಿಕೊಂಡು ತಾನು ಬಿರಿಬಿರಿ ಒಳಗೆ ಹೋಗಿದ್ದಳು.

ಗಂಡಸರ ಸ್ವಭಾವ ಇಷ್ಟೊಂದು ಕೃತಘ್ನವಾಗಿರುವುದೆ ಎಂಬ ಸಂಶಯದಿಂದ ಎಷ್ಟೊ ದಿನ ತೊಳಲಾಡಿದ್ದಳು. ಸರಳಕ್ಕನ ಕಣ್ಗಳು ಹೇಗಿವೆ ಎಂಬುದನ್ನು ಪೂರ್ತಿಯಾಗಿ ಮರೆತಿರಬಹುದೆ ರಾಮಣ್ಣ? ಹಾಗಿದ್ದರೆ ತಾನು ಯಾವ ಆಶೆಯನ್ನಿಟ್ಟುಕೊಂಡು ಬಾಳುವೆಯನ್ನು ಸಾಗಿಸಬೇಕು? ತನ್ನೊಡನೆ ಸಂಸಾರಗಿತ್ತಿಯಾಗಿರುವಾಗ ಮಾತ್ರ ಹೆಂಡತಿಯ ಇರುವಿಕೆಯ ಎಚ್ಚರ ಗಂಡಸಿನ ಸ್ವಭಾವವಾದರೆ ಹೆಣ್ಣಿನ ಗತಿ ಏನು?

ಅಹುದು. ಗಂಡಸಿನ ಸ್ವಭಾವವೆ ಹಾಗೆ. ತಾನು ಕೇಳಿದ್ದಳಲ್ಲ ತನ್ನ

ಸೋದರತ್ತೆಯ ಅನುಭವವನ್ನು? ಪಾಪ! ಹಳೆಯ ವಿಚಾರದ ಮುದುಕಿ! ಆದರೆ ಇನ್ನೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ—ಗಂಡನೊಡನೆ ತಾನು ನಡೆಸಿದ ಬಾಳುವೆಯ ಬಗ್ಗೆ. ಒಮ್ಮೆ ಅದೇನೊ ಹೇಳಿದ್ದಳಲ್ಲ? ಹಂ.... ಹೊರಗೆ ಇಷ್ಟೊಂದು ಸ್ವೈರವೃತ್ತಿಯಿಂದ ನಡೆದುಕೊಳ್ಳೋ ಗಂಡನ್ನ ಹತ್ತಿರ ಬರಗೊಡಬಾರದು ಎಂದು ತಾನು ಹೇಳಿದ್ದಕ್ಕೆ ಅತ್ತೆ ಉತ್ತರ ಕೊಟ್ಟಿದ್ದಳು.

"ಅಯ್ಯ! ಕುಮುದೀ! ಗಂಡಸು ಹೊರಗ ಏನೇನು ಮಾಡ್ತಾನ ಅನ್ನೋದನ್ನ ಲಕ್ಷ್ಯಕ್ಕ ತಂದರ ಹೆಂಗಸು ಬಾಳೋದೇ ಕಷ್ಟ ಆದೀತು."

"ಅಂದ್ರೇನು, ಅತ್ತೇ! ದಿವಸಾನುದಿವಸ ಇಡೀ ರಾತ್ರಿ ಇನ್ನೊಬ್ಬರ ಮಗ್ಗುಲೊಳಗ ಕಳೆದು ಬಂದರ ಮನಸ್ಸಿಗಾದ್ರೂ ಮೈಲಿಗೆ ಅನ್ನಿಸ್ತದೊ ಇಲ್ಲೊ?" ಎಂದು ತಾನು ಅಭಿಮಾನದಿಂದಲೆ ಕೇಳಿದ್ದಳು.

"ಅವ್ವವ್ವ! ಅಂತೂ ಮಡೀ-ಮೈಲಿಗೆಯ ವಿಚಾರ ಈಗಿನ ಹುಡುಗೇರಿಗೂ ಅದ ಅನ್ನು. ಆಂ?"

"ನಾನು ಕೇಳಿದ್ದಕ ಏನಂತೀ?" ಎಂದು ತಾನು ಹಟವನ್ನೆ ಹಿಡಿದಿದ್ದಳು.

"ನೋಡು ಕುಮುದೀ, ಚಪ್ಪಾಳೆಗೆ ಎರಡು ಕೈ ಬೇಕು. ಹೌದಂ-ತೀಯೊ ಇಲ್ಲೊ? ನನ್ದೂ ತಪ್ಪು ಇತ್ತು. ನಾನು ಹ್ಯಾಂಗ ಅವರ ಮ್ಯಾಲೆ ಸಿಟ್ಟಾಗಲಿ?"

"ನಿನ್ನ ತಪ್ಪು ಇತ್ತು?"

"ಇತ್ತು ಅಂದ್ರ, ಅದಕ್ಕ ನಿರ್ವಾಹನೇ ಇದ್ದಿರಲಿಲ್ಲ. ಅಲ್ಲ, ಕುಮುದೀ, ದೊಡ್ಡ ಸಂಸಾರ ಮನೀವಳಗ. ಹತ್ತರ ಜೋಡಿ ನಾವಿಬ್ರು ಹನ್ನೊಂದು. ಅವರು ಮನೆಗೆ ಬಂದರ ನಾವು ಮರೆಯೊಳಗೇ ಅಡ್ಡಾಡೋದು, ಅವರು ನನ್ನ ಮಾತಾಡಿಸಿದರ ನಮ್ಮ ಅತ್ತೆ ಉತ್ತರಾ ಕೊಡೋದು, ಸುಖ-ದುಃಖ-ನಗೆ-ನೋವು ಏನಾದ್ರೂ ಹೇಳಬೇಕಂದ್ರ ನಾನು ಎಲ್ಲ ಕೆಲಸ ಮುಗಿಸಿ ಹೋಗೋದಕ ಅವರಿಗೆ ನಿದ್ದೆ ಹತ್ತಿರೋದು, ಬೆಳಗು-ಮುಂಜಾನೆ ಅವರಿಗೆ ಎಚ್ಚರಾಗೋ ಮುಂಚೆ ನಾನು ಸದ್ದಿಲ್ಲದೆ ಎದ್ದು ಕೆಲಸಕ್ಕೆ ಹೋಗೋದು. ಅವರಿಗೆ ಯಾಕ ಬ್ಯಾಸರ ಆಗ್ಬಾರ್ದು ಹೇಳು? ಹೊರಗಿನ ಸಹವಾಸ ಸೇರತಿತ್ತು

ಅವರು ಹೊರಗ ಹೋಗಿದ್ದಿಲ್ಲ, ಮನೀವಳಗ ಸಹವಾಸೇ ಇದ್ದಿದ್ದಿಲ್ಲ ಅಂತ– ಅಯ್ಯ ! ಕೇಳ್ತೀಯೋ ಏನು ನನ್ನ ಬರೀ ದಿಟ್ಟಿಸಿ ನೋಡ್ತಿಯೋ ?"

"ಅತ್ತೀ, ನೀನು ಓದು–ಬರೆ ಕಲಿತಿದ್ದರ—"

"ನಂ ಕಾಲದಾಗ ನನ್ನ ಮದೀವೀನೇ ಆಗ್ತಿದ್ದಿಲ್ಲ." ಎಂದು ನಕ್ಕು ಬಿಟ್ಟಿದ್ದಳು ಮುದುಕಿ.

ಆದರೆ–ಆಕೆಯ ಮಾತು ನಿಜವೇ ? ಮನೆಯೊಳಗ ಸಹವಾಸ ಇಲ್ಲ ಎನ್ನೋದಕ್ಕೆ ಹೊರಗೆ ಹೋಗುವುದಾದರೆ ಗಂಡಸು ಒಬ್ಬನಿಗೇ ಯಾಕೆ ಆ ನೆವ ? ಇಡೀ ಹಗಲು ಆಫೀಸಿನಲ್ಲಿ ದುಡಿದು ರಾತ್ರಿ ದಣಿದು ಮನೆಗೆ ಬರುವ ಗಂಡನ ಸಹವಾಸ ಎಷ್ಟು ಸಿಕ್ಕುವುದು ಹೆಂಡತಿಗೆ ? ಆಕೆಯೂ ಹಾಗೇ ಮಾಡಿದರೆ ಸಮಾಜ ಸಹಿಸುವುದೇ ?

ಹೋಗಲಿ–ರಾಮಣ್ಣ ಸರಳಕ್ಕನನ್ನು ಮರೆಯಲು ಯಾವ ನೆವವೂ ಇದ್ದಿಲ್ಲವಲ್ಲ ?

ಅಥವಾ—?

ಕುಮುದಳಿಗೆ ಹಿಂದೊಮ್ಮೆ ಬಂದ ವಿಚಾರ ಇಂದು ಮತ್ತೆ ತಲೆ ಎತ್ತಿತು. ರಾಮಣ್ಣ ಸರಳಕ್ಕನನ್ನು ಮರೆತಿರಲಿಲ್ಲ. ಆದರೆ ತನಗಾಗಿ ಹಾಗೆ ಸುಳ್ಳನ್ನು ಹೇಳಿರಬೇಕು.

ಎಂತಹ ಅನ್ಯಾಯ ! ಸರಳಕ್ಕನನ್ನು ನೆನೆದರೆ ತಾನೂ ಅಸೂಯೆ ಪಡುವಳು ಎಂಬ ವಿಚಾರ ರಾಮಣ್ಣನಿಗೆ ಬಂದಿತಾದರೂ ಹೇಗೆ ?

ಕುಮುದ ಮತ್ತೆ ಕನ್ನಡಿಯಲ್ಲಿ ತನ್ನ ಮುಖಬಿಂಬವನ್ನು ದಿಟ್ಟಿಸಿ ನೋಡಿದಳು.

ಆ ಪ್ರತಿಬಿಂಬದ ಮುಖದ ಮೇಲಿನ ಕಳೆಯನ್ನು ನೋಡಿದಾಕ್ಷಣ ಆಕೆಗೆ ಮುಳ್ಳು ನೆಟ್ಟಂತಾಯಿತು.

"ರಾಮಣ್ಣನಿಗೆ ಆ ವಿಚಾರ ಬಂದಿತಾದರೂ ಹೇಗೆ ಅನ್ನುವೆಯಲ್ಲ ? ಎಂತಹ ಹೊಯ್ಕಾಲಿಯೆ ನೀನು ? ರಾಮಣ್ಣ ನಿನ್ನನ್ನು ಪ್ರೀತಿಸುವುದಿಲ್ಲ, ಇನ್ನೂ ಸರಳಕ್ಕನನ್ನೇ ಪ್ರೀತಿಯಿಂದ ನೆನಸುತ್ತಾನೆ ಎಂದು ಎಷ್ಟು ಸಲ ಸೆಟವಿಯಾಗಿ ನೀನು ಮುಖ ತಿರುಗಿಸಿಲ್ಲ ? ನೀನು – ನೀನು—"

ಎದುರಿಗಿದ್ದುದು ಪ್ರತಿಬಿಂಬ ಎಂದು ಹೊಳೆದು ಕುಮುದಳ ಆವೇಶ ಇಳಿಯಿತು.

ಇದುವರೆಗೆ ಕಣ್ಣೆದುರಿಗಿದ್ದ ಒಂದು ದಪ್ಪ, ಕಪ್ಪು ತೆರೆ ಸರ್‍ರನೆ ಸರಿದಂತಾಯಿತು.

ಕುಮುದ ದೀರ್ಘವಾದ ಯೋಚನೆಯಲ್ಲಿ ತೊಡಗಿದಳು. ಆಕೆಯ ಕಣ್ಗಳು ಎಂದಿನದನ್ನೋ ನೋಡಲು ಹಟ ತೊಟ್ಟಂತೆ ಒಳನೆಟ್ಟವು. ಒಂದೆ-ರಡು ನಿಮಿಷಗಳ ತರುವಾಯ ಬಾವಿಯಲ್ಲಿ ಇಳಿಬಿಟ್ಟ ಕೊಡ ತುಂಬಿ ಮೇಲೆ ಬರುವಂತೆ ಒಳನೆಟ್ಟ ಅವಳ ಎರಡೂ ಕಣ್ಗಳು ನೀರುದುಂಬಿ ಸದ್ಯದ ಪ್ರಪಂಚಕ್ಕೆ ಏರಿಬಂದುವು.

ಕುಮುದಳಿಗೆ ಈಗ ಹೊಳೆಯಿತು ತನ್ನ ವೈವಾಹಿಕ ಜೀವನ ತನಗೆ ಮತ್ತು ರಾಮಣ್ಣನಿಗೆ ಇಬ್ಬರಿಗೇ ಸಂಬಂಧಪಟ್ಟಿರಲಿಲ್ಲ ಎಂಬುದು. ತಾನು ಆ ಮಾತನ್ನೇ ತಿಳಿದಿರಲಿಲ್ಲ.

ಆ ದಿನ ತನ್ನ ಸೋದರತ್ತೆ ಹೇಳಿರಲಿಲ್ಲವೇ ? ಮನೆಯಲ್ಲಿ ಮಿಕ್ಕವರಿ-ಗಾಗಿ ಪರಸ್ಪರ ಸಹವಾಸ ತೃಪ್ತಿಕರವಾಗುತ್ತಿದ್ದಿಲ್ಲ ಎಂದು ? ಆ ಮಾತನ್ನು ಅತ್ತೆ ತಿಳಿದುಕೊಂಡಿದ್ದಳು, ಅದಕ್ಕಾಗಿ ಆಕೆ ಗಂಡನ ಮೇಲೆ ಸಿಟ್ಟು ಮಾಡುತ್ತಿರಲಿಲ್ಲ. ಇಷ್ಟೇ ಅಲ್ಲ, ದೊರೆಯುವ ಅಲ್ಪ ಅವಕಾಶಗಳಲ್ಲಿ ತನ್ನ ಹೃದಯವನ್ನೇ ಬಯಲಿಗಿಟ್ಟಂತೆ ಪ್ರೇಮವನ್ನು ಸೂಸುತ್ತಿದ್ದಳು. ಆ ಪ್ರೇಮದ ರುಚಿಕಂಡಲ್ಲಿ ಬೇರೆ ಎತ್ತಲೂ ಮನಸ್ಸು ಸುಲಭವಾಗಿ ಹರಿಯಕೂಡದು ಎಂದು. ನಿಜವಾಗಿ ಅಂದು ಸೋದರತ್ತೆ ತನಗೆ ಮಾರ್ಗದರ್ಶಿನಿಯಾಗಿದ್ದಳು, ತಾನು ಮಾತ್ರ ಕುರುಡಾಗಿದ್ದಳು.

ತನ್ನ ಪರಿಸ್ಥಿತಿ ಸೋದರತ್ತೆಯ ಪರಿಸ್ಥಿತಿಗಿಂತ ತೀರ ಭಿನ್ನ ಎಂಬುದನ್ನು ಕುಮುದ ಬಲ್ಲಳು. ಆದರೆ ಅದಕ್ಕಾಗಿಯೆ ಅದು ಹೆಚ್ಚು ದುಸ್ತರವೂ ಆಗಿತ್ತು.

ರಾಮಣ್ಣ ತನ್ನನ್ನು ಮದುವೆಯಾದ, ತಾನು ರಾಮಣ್ಣ ಇಬ್ಬರೆ ಮನೆಯಲ್ಲಿ ಎಂದುಕೊಂಡಿದ್ದವಳಲ್ಲವೆ ?

ತಾನೆಂತಹ ಬುದ್ಧಿಗೇಡಿ !

ಮನೆಯಲ್ಲಿ ಮೂರನೆಯವರಿರದಿದ್ದರೂ ಮನದಲ್ಲಿ ಮೂರನೆಯವರಿದ್ದ-ರಲ್ಲ ? ಸರಳಕ್ಕನ ನೆನಪು ಮನೆಯಲ್ಲಿ ಮೂರನೆಯ ವ್ಯಕ್ತಿಯೆ ಆಗಿತ್ತೆನ್ನ-

ಬಹುದು. ತಾವು ಮಾಡಿದ್ದೇನು ? ಆ ವ್ಯಕ್ತಿಯ ಕಣ್ಣು ತಪ್ಪಿಸಲು ಯತ್ನಿಸಿದ್ದು! ಎಂತಹ ದಡ್ಡತನ! ಯಾಕೆ? ಸರಳಕ್ಕನೆ ತಮ್ಮಿಬ್ಬರ ಮದುವೆಯನ್ನು ಬಯಸಿದ್ದಿಲ್ಲವೇ? ಅದನ್ನು ತಾವು ಬಹಿರಂಗವಾಗಿ ಒಪ್ಪಿಕೊಂಡಿದ್ದರೆ? ಇದಲ್ಲದೆ ರಾಮಣ್ಣ ಎಷ್ಟೋ ವರ್ಷ ಪ್ರೀತಿಯ ಸಂಸಾರವನ್ನು ಮಾಡಿದವ. ಅವನ ಹೃದಯದಲ್ಲಿ ಸರಳಕ್ಕ ನೆಲೆಸಿರುವುದು ಆಶ್ಚರ್ಯವಲ್ಲವಲ್ಲ ? ಸ್ಪಷ್ಟವಾದುದನ್ನು, ಸಹಜವಾದುದನ್ನು ಕಣ್ತಪ್ಪಿಸಿ ಮರೆಯಲು ಯತ್ನಿಸಿದ ತಮ್ಮ ಅವಸ್ಥೆ ಕಾಲಿಗೆ ಪೆಟ್ಟು ತಾಕಿದವ ಎಡವದಂತೆ ಎಚ್ಚರಿಕೆ ವಹಿಸಲು ಯತ್ನಿಸಿದಂತಾಗಿತ್ತು; ಪೆಟ್ಟು ತಾಕಿದ್ದಲ್ಲಿಯೆ ಎಡವಿದ್ದರು !

ರಾಮಣ್ಣ ಇನ್ನೂ ಸರಲೆಯನ್ನೆ ಪ್ರೀತಿಸುತ್ತಾನೆ ಎಂದು ತಾನು—

ಸರಳಕ್ಕನ ನೆನಪು ತನಗೆ – ಕುಮುದಳಿಗೆ – ಅಸಹ್ಯವಾಗುವುದೆಂದು ರಾಮಣ್ಣ—

ಇಬ್ಬರೂ ಇದುವರೆಗೆ ಎರಡುಬದಿ ಚೂಪಾಗಿದ್ದ ಸಲಾಕೆಯನ್ನು ನಡುವೆ ಇಟ್ಟುಕೊಂಡು ಒಬ್ಬರೊಬ್ಬರ ಹತ್ತಿರ ಬರಲು ಯತ್ನಿಸಿದ್ದಾರೆ !

ಕುಮುದಳು ಗಾಬರಿಗೊಂಡವಳಂತೆ ಒಮ್ಮೆಲೆ ತಡೆದಳು. ಇದೇನು? ತನ್ನ ವಿಚಾರಸರಣಿ ಸರಿಯಾಗಿದೆಯೆ ? ಇಲ್ಲವೆ ನೀರಡಿಸಿ ಕಂಗಾಲಾದವನು ಬಿಸಿಲುಗುದಿರೆ ನೀರಿನ ಪ್ರವಾಹ ಎಂದು ತರ್ಕದಿಂದ ಸಿದ್ಧಮಾಡುವಂತೆ ನಡೆಸಿದ್ದಾಳೆಯೆ ತಾನು ? ರಾಮಣ್ಣ ನಿಜವಾಗಿಯೆ ತನ್ನನ್ನು ಪ್ರೀತಿಸುತ್ತಿರಬಹುದೆ ? ತಾವಿಬ್ಬರು ಅಪರಾಧಿಗಳಂತೆ ಸರಳಕ್ಕನನ್ನು ತಪ್ಪಿಸಲು ಯತ್ನಿಸದೆ ಅವಳನ್ನು ತಮ್ಮ ಸಂಗಾತಿಯಾಗಿ ಮಾಡಿಕೊಂಡಿದ್ದರೆ ಒಳಿತಾಗುತ್ತಿದ್ದಿತೆ ?

ಕುಮುದಳ ಕಣ್ಮುಂದೆ ಹಿಂದಿನ ಒಂದು ನೆನಪು ಹೊಳೆಯುವ ಬಣ್ಣದ ಚಿತ್ರದಂತೆ ನಿಂತಿತು. ಮದುವೆಯಾದ ಪ್ರಾರಂಭದಲ್ಲಿ ರಾಮಣ್ಣ ಒಂದೇ ಸಮನೆ ಸರಳಕ್ಕನ ಬಗ್ಗೆ ಮಾತನಾಡುತ್ತಿದ್ದ. ಅದು ತನಗೆ ರುಚಿಸುತ್ತಿರಲಿಲ್ಲ, ಅದನ್ನು ಬಿಟ್ಟರೆ ರಾಮಣ್ಣನ ನಾಲಗೆ ತಡವರಿಸುತ್ತಿತ್ತು !

ಪಾಪ ! ರಾಮಣ್ಣನಾದರೂ ಏನುಮಾಡಬಲ್ಲವನಾಗಿದ್ದ ? ಅಷ್ಟು ವರ್ಷ ಪ್ರೀತಿಯ ಸಂಸಾರವನ್ನು ಒದಗಿಸಿದ ಸರಳಕ್ಕನನ್ನು ಹೇಗೆ ಮರೆಯಬಲ್ಲ ? ಅದೇ ಸ್ನೇಹಪರಿಚಯವಾದ ತನ್ನೊಡನೆ ಬೇರೆ ಯಾವುದನ್ನು ಮಾತನಾಡಬಲ್ಲ ? ಆದರೆ ತನಗೆ ಆಗ ತಿಳಿದಿರಲಿಲ್ಲವೇನೋ ? ಸರಳಕ್ಕನ

ಬಗ್ಗೆ ಮಾತನಾಡುವನೆಂದರೆ ಸರಳಕ್ಕನನ್ನೆ ಪ್ರೀತಿಸುವನೆಂದು ತಾನು ತಿಳಿದು-ಕೊಂಡಿದ್ದಳು. ಅದು ತಪ್ಪೆ? ಮೋಹನನನ್ನು ಪ್ರೀತಿಸಿಯೂ ತಾನು ರಾಮಣ್ಣನನ್ನು ಪ್ರೀತಿಸುವುದಿಲ್ಲವೆ? ಹಾಗೆ – ಸರಳಕ್ಕನ ಸ್ಮೃತಿಯನ್ನು ಪ್ರೀತಿಸುವಾಗಲೂ ತನ್ನನ್ನು ಪ್ರೀತಿಸಬಲ್ಲನಲ್ಲವೆ?

ಕುಮುದಳ ಮುಖದಲ್ಲಿ ನಗೆ ಮೂಡಿತು. ಆದರ್ಶಪ್ರೇಮವೆಂದರೆ ತನ್ನ ಸೋದರತ್ತೆಯದು. ಅಲ್ಲ, ಎಂತಹ ಹೆಣ್ಣುಹೃದಯ! ಗಂಡ ಹೊರಗೆ ಎಲ್ಲಿ ಹೋಗುತ್ತಾನೆ, ಏನು ಮಾಡುತ್ತಾನೆ ಎಂಬುದನ್ನು ಅರಿತೂ ಅವನ ಮಗ್ಗುಲಿನಲ್ಲಿ ಸುಖವನ್ನು ಕಾಣುತ್ತಿದ್ದಳಲ್ಲ! ಥೂ! ಆ ಕಲ್ಪನೆಯಿಂದ ಹೇಸಿಕೆ ಎನ್ನಿಸುತ್ತಿರಲಿಲ್ಲವೆ ಎಂದು ತಾನು ಕೇಳಿದರೆ ಮುದುಕಿ ಅತ್ಯಂತ ಅಭಿಮಾನದಿಂದ ಉತ್ತರಕೊಟ್ಟಿದ್ದಳು.

"ಅಲ್ಲ, ಕುಮುದೀ, ಹೊರಗೆ ಅಡ್ಡಾಡಿ ಬರೋ ಗಂಡಸಿನ ಅಂಗೀ ಮ್ಯಾಲೆ ಕಾಗೆ ಹೇತರೆ ಹೇಸಿ ಆ ಅಂಗಿಯನ್ನೇ ಒಗೆದುಬಿಡಬೇಕೋ ಇಲ್ಲ, ಸಬಕಾರ ಹಚ್ಚಿ ಅದನ್ನ ಸ್ವಚ್ಛ ಒಗೆಯಬೇಕೋ?"

"ಅಂದ್ರೇನು, ಅತ್ತೀ, ಸ್ನಾನ ಮಾಡಿಸದೆ ಗಂಡನ್ನ ಒಳಗೆ ಬಿಡತಿ-ದ್ದಿಲ್ಲೊ ಏನು?"

"ಅವರ ಮನಸ್ಸು ಸ್ವಚ್ಛ ಇದ್ದರ ಸ್ನಾನ ಆದಾಂಗ ಆಯ್ತು, ನನ್ನ ಮನಸ್ಸು ಸ್ವಚ್ಛ ಇದ್ದರ ಅದೇ ಸಬಕಾರ ಆಯ್ತು." ಮುದುಕಿ ತಿಳಿದು ಮಾತನಾಡಿದ್ದಳೊ, ಮಾತಿಗೆ ಮಾತು ಇರಲಿ ಎಂದು ಮಾತನಾಡಿದ್ದಳೊ– ಅಂತೂ ಒಂದು ತತ್ತ್ವಜ್ಞಾನದ ತಿರುಳಿನಂತಹ ಮಾತನ್ನು ಹೇಳಿದ್ದಳು.

ಕುಮುದ ಒಮ್ಮೆಲೆ ಕುರ್ಚಿಯಿಂದೆದ್ದಳು. ಒಳಗಿನ ವಿಚಾರಕ್ಕಾಗಿ ಒಂದೆಡೆ ಕುಳಿತುಕೊಳ್ಳಬೇಕೆಂದೆನ್ನಿಸಲೊಲ್ಲದು ಆಕೆಗೆ; ಒಳಗಿನ ವಿಚಾರಗಳ ಹಿಡಿತದಿಂದ ತಪ್ಪಿಸಿಕೊಳ್ಳುವವಳಂತೆ ಅಡ್ಡಾಡತೊಡಗಿದಳು.

ನಿಜವೇ? ನಿಜವೇ? ನಿಜವೇ?

ವಿಚಾರ ಆಕೆಯನ್ನು ಬೆನ್ನಟ್ಟಿದೆ, ಬಿಡಲೊಲ್ಲದು; ತಟ್ಟನೆ ಹಿಡಿಯು-ವುದು, ಕೂಡಲೆ ಜಾರಿಕೊಳ್ಳುವಳು.

ರಾಮಣ್ಣ ತನ್ನನ್ನು ಪ್ರೀತಿಸುತ್ತಿರುವುದು—ನಿಜವೆ? ನಿಜವೆ? ನಿಜವೆ?

ಬೇರೆ ಯಾರನ್ನಾದರೂ ನಂಬಬಹುದು. ಆದರೆ ತನ್ನನ್ನು ತಾನು ನಂಬುವುದು ಶಕ್ಯವಿಲ್ಲ ಎನ್ನುವ ಅವಸ್ಥೆಯಾಯಿತು ಕುಮುದಳದು. ಹತ್ತು ವರ್ಷಗಳಿಂದ ತಡೆದ ವಿಚಾರ, ತನಗೆ ಇಷ್ಟವೆನ್ನಿಸುವ ವಿಚಾರ, ಈಗ ತನ್ನ ಎದೆಯನ್ನೇ ಸೀಳಿ ಹೊರಬೀಳುವಂತೆ ವೇದನೆಯನ್ನುಂಟುಮಾಡುತ್ತಿದೆ ! ತನಗೆ ಇಷ್ಟವಿದ್ದ ವಿಚಾರ ಎಂಬುದಕ್ಕೆ ತನ್ನ ಬುದ್ಧಿ ಅದನ್ನು ಇಲ್ಲದ–ಸಲ್ಲದ ಕಾರಣಗಳನ್ನು ಹುಡುಕಿ ಸಮರ್ಥಿಸುತ್ತಿದೆ.

ತಾನು ಸೋದರತ್ತೆಯ ಮನೆಗೆ ಮೊದಲ ಸಲ ಹೋದಾಗ ರಾಮಣ್ಣ ತನ್ನನ್ನು ಹುಡುಕಿಕೊಂಡು ಬಂದುದು,

ತಾನು ಮನೆಗೆ ಮರಳಿದಮೇಲೆ ರಾಮಣ್ಣ ಮೋಹನನನ್ನು ಮುದ್ದಾಡಿಸಿದ್ದು,

ತನಗೊಮ್ಮೆ ಜ್ವರದ ಸಂಶಯವಿದ್ದಾಗ ರಾಮಣ್ಣ ಕೈಮುಟ್ಟಿ ನೋಡಲು ಹೆದರಿ ಓಡಿ ಡಾಕ್ಟರನ್ನು ಕರೆತಂದದ್ದು,

ತನ್ನೊಡನೆ "ಸಂಸಾರ" ಇಲ್ಲದಿದ್ದರೂ ಇನ್ನೊಂದೆಡೆ ಮನಸ್ಸನ್ನು ಮಾಡದೆ ಇದ್ದುದು,

ಅಂದು ತನಗಾಗಿ ಹೊಸ ಸೀರೆಯನ್ನು ತಂದದ್ದು—

ಒಂದೇ, ಎರಡೇ – ಸಂಶಯಪರ್ವತದ ಶಿಖರ ಉರುಳಿದ್ದಕ್ಕಾಗಿ ಬಂಡೆಗಲ್ಲಿನ ಮೇಲೆ ಬಂಡೆಗಲ್ಲು ಉರುಳಿದಂತೆ ಹಿಂದಿನ ಸ್ಮೃತಿಗಳು ಒಂದರ ಮೇಲೊಂದು ನುಗ್ಗಿ ತನ್ನನ್ನು ಉಸಿರಾಡದಂತೆ ಮಾಡಿವೆ !

ನಿಜ, ತಾನು ರಾಮಣ್ಣನಿಗೆ ಮೊದಲು ಕಾಮದ ಹೆಣ್ಣು, ತರುವಾಯ ಮದುವೆಯ ಹೆಂಡತಿಯಾದದ್ದು ನಿಜ; ಸಮಾಜದಲ್ಲಿ ಅಂತಹ ನಡತೆಗಾಗಿ ತಿರಸ್ಕಾರವಿದೆ, ಮದುವೆಯಾಗಿರದಿದ್ದರೆ ತಾನು ಸಮಾಜಬಾಹಿರೆಯಾಗುತ್ತಿದ್ದಳು. ಆದರೆ ರಾಮಣ್ಣ ತನ್ನನ್ನು ಮದುವೆಯಾದನಲ್ಲ ? ತನ್ನಿಂದ ಒತ್ತಾಯವಿರಲಿಲ್ಲವಲ್ಲ ? ತನ್ನನ್ನು ಪ್ರೀತಿಸುತ್ತಿರುವನೆಂದೇ ಯಾಕೆ ತನ್ನನ್ನು ಮದುವೆಯಾಗಿರಬಾರದು ? ತನ್ನಮೇಲೆ ಉಪಕಾರ ಮಾಡಬೇಕೆಂದು ಹಾಗೆ ಮಾಡಿದನು ಎಂಬ ಹಟ ಯಾಕೆ ? ಹಾಗಿದ್ದರೆ ತನಗಾಗಿಯೆ ಹಂಬಲಿಸುವ ಕಾರಣವಿದ್ದಿರಲಿಲ್ಲವಲ್ಲ ? ಅವನ ಜೀವನದಲ್ಲಿ ಇನ್ನೊಂದು ಹೆಣ್ಣಿನ ಸಹವಾಸ

ಇಲ್ಲವೇ ಇಲ್ಲ ಎಂಬುದನ್ನು ತಾನು ಖಚಿತವಾಗಿ ಬಲ್ಲಳು. ನಿಜ, ಮೊದಲು ತಾನು ಕಾಮದ ಹೆಣ್ಣು ಆದಳು.

—ಆದಳು. ಆದರೆ ಅದರಲ್ಲಿ ತಪ್ಪೇನು ?

ಇನ್ನೊಬ್ಬರ ಕೂಡ ವಾದ ಮಾಡಲು ಸಿದ್ಧಳಾದವಳಂತೆ ಮತ್ತೆ ಬಂದು ಕುರ್ಚಿಯಮೇಲೆ ಕುಳಿತಳು.

ಅದರಲ್ಲಿ ತಪ್ಪೇನು ? – ಎಂದು ಕೇಳಿಕೊಂಡಳು ಮತ್ತೊಮ್ಮೆ.

ಇಂದಿನ ಸಮಾಜನೀತಿ ಬದಲಾಗುತ್ತಿದೆ. ಇಂದು ಗಂಡು, ಹೆಣ್ಣು ಮದುವೆಗೆ ಮುಂಚಿತ ಸ್ವತಂತ್ರವಾಗಿ ಬೆಳೆಯುತ್ತಾರೆ, ಸಮಾಜದಲ್ಲಿ ಒಬ್ಬರನ್ನೊಬ್ಬರು ಸಂಧಿಸುತ್ತಾರೆ, ಸ್ನೇಹ ಬೆಳೆಸುತ್ತಾರೆ, ಪರಸ್ಪರ ಪರಿಚಯ ಹೆಚ್ಚಾದಲ್ಲಿ, ಒಮ್ಮೊಮ್ಮೆ ಪರಸ್ಪರ ಹೃದಯಗಳು ಸಮರಸವಾದಲ್ಲಿ ಒಬ್ಬರ-ನ್ನೊಬ್ಬರು ವರಿಸುತ್ತಾರೆ, ಮದುವೆಯ ವಿಧಿಗೆ ಮುಂಚಿತ ಒಮ್ಮೊಮ್ಮೆ ಕಾಮ ಜೀವನದಲ್ಲಿ ಕೂಡಿ ಬಂದರೆ — ತಪ್ಪೇನು ?

ಕುಮುದ ನಡುಗಿದಳು, ಎತ್ತಲಾರದ ಭಾರವನ್ನು ಹೇಗೋ ಎತ್ತಿ ಹಿಡಿದು ನಿಂತವಳಂತೆ, ಅವಳ ಸರ್ವಾಂಗ ನಡುಗಿತು. ತನ್ನ ವಿಚಾರ ಸರಿಯಾದುದೆ ? ಯಾವ ಸಂಬಂಧದಿಂದ ಸಮಾಜದಲ್ಲಿ ಸ್ಥಾನ ಮತ್ತು ಹೊಣೆಗಳ ನಿರ್ಣಯವಾಗುವುದೋ ಆ ಸಂಬಂಧವನ್ನು ಹೀಗೆ ತುಚ್ಛವಾಗಿ ಎಣಿಸುವುದು ಸರಿಯಾದುದೆ ?

ನಿಜವಾದ ಪ್ರೇಮವಿದ್ದಲ್ಲಿ ಕಾಮಜೀವನ ಅಪ್ರಸ್ತುತ ಎನ್ನಿಸಿತು ಕುಮುದಳಿಗೆ. ತನ್ನ ಮತ್ತು ರಾಮಣ್ಣನ ಅನುಭವಗಳನ್ನು ನೆನೆದುಕೊಂಡಳು. ತಾವು ಒಬ್ಬರನ್ನೊಬ್ಬರು ಕೂಡಿದ್ದು ಹೇಗೆ ? ಕಾಮಸಂಭೋಗಕ್ಕಾಗಿ ಅಲ್ಲ; ಒಬ್ಬರು ಇದಿರಿಲ್ಲದಿದ್ದರೆ ಇನ್ನೊಬ್ಬರಿಗೆ ಸಮಾಧಾನವಿರುತ್ತಿರಲಿಲ್ಲ, ಒಬ್ಬರನ್ನು ನೋಡಿದರೆ ಇನ್ನೊಬ್ಬರು ತನ್ನನ್ನು ಮರೆತೇಬಿಡುತ್ತಿದ್ದರು, ಒಬ್ಬರಿಗಾಗಿ ಬೇಕಾದ್ದನ್ನು ವಹಿಸಲು ಇನ್ನೊಬ್ಬರು ಸಿದ್ಧರಾಗಿರುತ್ತಿದ್ದರು, ಒಬ್ಬರ ಸುಖದಿಂದ ಸುಖ ದುಃಖದಿಂದ ದುಃಖ ಎನ್ನಿಸುತ್ತಿತ್ತು ಇನ್ನೊಬ್ಬರಿಗೆ ; ಪರಸ್ಪರ ಹೃದಯಗಳು ಒಂದಾದಾಗ ಪರಸ್ಪರ ದೇಹ ಒಂದಾದುದರ ಎಚ್ಚರ-ವಿಲ್ಲ, ಒಂದಾಗಲೇಬೇಕೆಂಬ ಇಚ್ಛೆ ಇಲ್ಲ, ಒಂದಾಗದೆ ಗತ್ಯಂತರವಿಲ್ಲ !

ಹೃದಯುಗಳು ಹೊಂದಿದವೇಲೆ ಮುಗಿಯಿತು. ಸಮಾಜವು ದೊಡ್ಡ ತಪ್ಪನ್ನು ಮಾಡುತ್ತಿದೆ.

ಹೃದಯ ಒಂದಾಗದೆ ದೇಹ ಒಂದಾಗುವುದು ನಿಜವಾದ ಸೂಳೆಗಾರಿಕೆ; ಮದುವೆಯಾದಲ್ಲೂ ಸೂಳೆಗಾರಿಕೆ ಕಂಡುಬರಬಹುದು.

ಕುಮುದ ಮತ್ತೆ ಎದ್ದಳು, ತನ್ನ ವಿಚಾರಕ್ಕೆ ಗಾಬರಿಗೊಂಡಳು. ಇದೇನು ? ಹತ್ತು ವರ್ಷ ಗಂಡಸಿನ ಸಾನ್ನಿಧ್ಯ ಇಲ್ಲದ್ದಕ್ಕೆ ಹೀಗೆ ವಿಚಾರ ಮಾಡುತ್ತಿರುವೆನೆ ಎಂಬ ಹೆದರಿಕೆಯಾಯಿತು ಅವಳಿಗೆ.

ಹೆದರಿಕೆಯ ಮಗ್ಗುಲಲ್ಲಿಯೇ ಎಲ್ಲಿಂದಲೊ ಆನಂದ ತಲೆ ಎತ್ತಿತು.

ಅಹುದು, ಮೋಹನನನ್ನೂ ಕರೆದುಕೊಂಡೇ ಸಭೆಗೆ ಹೋಗಬೇಕು. ಯಾಕೆ ಬರವೊಲ್ಲನೋ ಮೋಹನ ? ಆದರೂ ಬರುವ ಹೊತ್ತಾಗಿದೆ. ಹೋಗಲಿ, ಸಭೆಗೆ ಅಂತಹ ಅವಸರವಾದರೂ ಏನಿದೆ ? ಮೋಹನ ಬಂದ ಮೇಲೆ, ಅವನನ್ನೂ ಕರೆದುಕೊಂಡೇ ಹೋದರಾಯಿತು.

ಆದರೆ--

ಕುಮುದ ಒಮ್ಮೆಲೆ ಗಡಿಬಿಡಿಯಲ್ಲಿ ತೊಡಗಿದಳು. ಇಂತಹ ಸಭೆ, ಇಷ್ಟು ಜನ ಬರುವವರು, ಆದರೆ ರಾಮಣ್ಣ ಸರಿಯಾದ ಬಟ್ಟೆಗಳನ್ನು ತೊಟ್ಟಿರುವನೆ ? ತೊಟ್ಟಿರಲಿಕ್ಕಿಲ್ಲ ಎಂದು ದೃಢವಾಗಿ ನಂಬಿದಳು. ಹುಂ-ಗಂಡಸಿನ ಸ್ವಭಾವವೇ ಹೀಗೆ. ಇಲ್ಲ, ಇಂದಾದರೂ ಸರಿಯಾದ ಬಟ್ಟೆಗಳನ್ನು ತೊಡಲೇಬೇಕು ರಾಮಣ್ಣ – ಎಂದು ಬಟ್ಟೆಗಳನ್ನು ಶೋಧಿಸತೊಡಗಿದಳು– ಆಗ ಆಕೆಯ ಲಕ್ಷ್ಯಕ್ಕೆ ಬಂದಿತು, ತನ್ನ ಕಾಲ್ಗಳು, ಕೈಗಳು ನಡುಗುತ್ತಿವೆ, ಉಸಿರಿನ ಒತ್ತಡ ಹೆಚ್ಚಾಗಿದೆ ಎಂದು.

ಆದರೆ ಅದನ್ನು ಲಕ್ಷ್ಯಕ್ಕೆ ತಂದುಕೊಳ್ಳಬಾರದೆಂಬ ಹಟದಿಂದೆನ್ನುವಂತೆ ಡ್ರಾಯರುಗಳನ್ನು ಸದ್ದು ಮಾಡುತ್ತ ಎಳೆದಳು, ಮುಚ್ಚಿದಳು – ಬಟ್ಟೆಗಳನ್ನು ಶೋಧಿಸಬೇಕೆಂದು.

## ೧೪

ಏನಿದು ಸದ್ದು ? ರಾಮಣ್ಣ ಚಟ್ಟನೆ ಎದ್ದ. ಓ – ಕೆಳಗೆ ! ಆದರೆ ಈ ರೀತಿ ಬಡೆಯುವುದೇಕೆ ? ಮೆಟ್ಟಲುಗಳ ಕಡೆ ನಡೆದ ರಾಮಣ್ಣ ವಿಚಾರ

ಬದಲಾಯಿಸಿ ತಡೆದು ನಿಂತ. ಕೈಚಲ್ಲಿ ಉಸುರ್ಗರೆದ. ಯಾರಿಗೆ ಗೊತ್ತು? ಕುಮುದ ಸಿಟ್ಟಿಗೆದ್ದರೂ ಎದ್ದಿರಬಹುದು. ತನ್ನೊಡನೆ ಸಭೆಗೆ ಬರಬೇಕಾಯಿತಲ್ಲ – ಎಂದು –

ಯಾಕೆ ?—ರಾಮಣ್ಣ ತನ್ನಷ್ಟಕ್ಕೇ ಮುಗುಳ್ನಗೆ ನಕ್ಕ–ಸಿಟ್ಟಿಗೆದ್ದರೇನೆ ಕುರ್ಚಿ–ಮೇಜು–ಡ್ರಾಯರುಗಳನ್ನು ಬಡಿಯಬೇಕೆಂದು ನಿಯಮವಿದೆಯೇ? ಉತ್ಸಾಹದಿಂದಲೂ ಹಾಗೆ ಮಾಡಬಹುದು, ಅಸಹನೀಯ ಆತುರತೆಯಿಂದಲಿ ಹಾಗೆ ಮಾಡಬಹುದು, ಇನ್ನೂ ಬೇಕಾದ ಕಾರಣಕ್ಕಾಗಿ ಹಾಗೆ ಮಾಡಬಹುದಲ್ಲ ?

ಕುಮುದ ಸಿಟ್ಟಿಗೆದ್ದಿಲ್ಲ ಎಂದು ತಿಳಿದು ಸಮಾಧಾನದಿಂದ ಕುಳಿತುಕೊಂಡರಾಯಿತು–ಎಂದ. ಅದೊ ! ಸದ್ದೂ ಶಾಂತವಾಗುತ್ತಿದೆ. ರಾಮಣ್ಣ ಕುಳಿತುಕೊಳ್ಳಬೇಕೆನ್ನುವಾಗ ಮತ್ತೊಮ್ಮೆ ಕಿಟಕಿಯಿಂದ ಹೊರಗೆ ನೋಡಿ ಕುಳಿತುಕೊಂಡ....ಹುಂ....ಈ ಸ್ವಾಗತ ಸಮಿತಿ ಬೇಗ ಬಂದರೇನೇ ಒಳಿತು. ಯಾಕೊ ಒಂದು ತರದ ಹುರುಹುರು ಎನ್ನಿಸುತ್ತಿದೆ ಹೃದಯದೊಳಗೆ. ಏನೊ ಅನಿರೀಕ್ಷಿತ ಘಟನೆಯಾಗಬಹುದೇನೊ ಎಂಬ – ಒಮ್ಮೊಮ್ಮೆ ಹಿಗ್ಗು, ಒಮ್ಮೊಮ್ಮೆ ಹೆದರಿಕೆ.

ಮನುಷ್ಯನ ಮನಸ್ಸೇ ವಿಚಿತ್ರವಾಗಿದೆಯಲ್ಲ ? ಜಗತ್ತಿನ ನಾಶವನ್ನು ಒಂದೇಟಿನಲ್ಲಿ ಮಾಡಬಲ್ಲ ಅಣುಬಾಂಬನ್ನು ಹುಡುಕುವ ಮನುಷ್ಯನು ಮನಸ್ಸಿನ ಬಗ್ಗೆ ಶೋಧವನ್ನು ಮಾಡಬಾರದೆ ? ಅಥವಾ – ಅದನ್ನು ಮಾಡದೆ ಅಣುಬಾಂಬದ ಶೋಧವನ್ನೇ ಬಯಸುವುದು ಮನಸ್ಸು, ಎಂಬುದಕ್ಕಾಗಿ ಅದೊಂದು ಭವಭೂತಿ ಹೇಳುವ ಹಾಗೆ "ಕಿಮಪಿ ಕಿಮಪಿ" – ಏನೊ ಏನೊ ಒಂದು ರಹಸ್ಯ ಎನ್ನಬೇಕೆ ?

ಈಗ ತಾನು ಹೆದರಿದ್ದನಲ್ಲ ? ಅದೆಂತಹ ಮೋಜು ! ಕುಮುದ ಸಿಟ್ಟಾಗಿದ್ದಾಳೆ ಎಂದು ತಿಳಿದ. ಯಾಕೆ ? ತಾನು ಕುಮುದಳಿಗೆ ಹೆದರುತ್ತಾನೆಂದು. ತಾನು ಕುಮುದಳೊಡನೆ ಮೊದಲಿನಂತೆಯೆ ಇದ್ದರೆ ಆಕೆ ಮಾಡುವ ಅದೇ ಡ್ರಾಯರುಗಳ ಸದ್ದನ್ನು ಕೇಳಿ "ಕುಮುದ ಉಲ್ಲಾಸದಲ್ಲಿದ್ದಾಳೆ" ಎಂದು ತಿಳಿಯುತ್ತಿದ್ದ. ನಡೆಯುವ ಘಟನೆಗಳು ನಡೆದೇ ನಡೆಯುವುವು, ಅವುಗಳ ಅರ್ಥ ತನ್ನ ಮನಃಸ್ಥಿತಿಯನ್ನು ಅವಲಂಬಿಸಿದೆ !

ಎಂದರೆ ?

ರಾಮಣ್ಣ ಏಕಚಿತ್ತತೆಯಿಂದ ವಿಚಾರ ಮಾಡುವವನಂತೆ ಎಡಗೈ ಹೆಬ್ಬೆರಳು – ನಡುವಿನ ಬೆರಳುಗಳಿಂದ ಗಂಡಸ್ಥಲಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕಣ್ಣು ಮುಚ್ಚಿದ.

ಘಟನೆಯ ಅರ್ಥ ಮನಃಸ್ಥಿತಿಯನ್ನವಲಂಬಿಸಿದೆ.

ಎಂದರೆ—?

ಮನಃಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಂಡರೆ ಘಟನೆ ಅನುಕೂಲ ವೆನ್ನಿಸಬಹುದು ?

ಕುಮುದಳನ್ನು ಸರಿಯಾಗಿ ತಿಳಿದುಕೊಂಡರೆ ಅವಳೂ—?

ಉಹುಂ....ಇದೇನೋ ವಿಚಾರಗೊಂದಲವಾಯಿತು –ಎಂದುಕೊಂಡ.

ಆದರೂ ಇಂದಿನ ಸಂದರ್ಭದಲ್ಲಿ ಏನೋ ಅನಿರೀಕ್ಷಿತ ಘಟನೆ ನಡೆಯ-ಬಹುದಾಗಿದೆ – ಎಂದೆನ್ನಿಸಿತು. ಯಾಕೆ ? ಯಾಕೇನು ? ಎನ್ನಿಸಿದೆ, ಹೇಳಲು ಬರುವಂತಿಲ್ಲ; ಕಾರಣ ತಿಳಿಯಲೊಲ್ಲದು, ಕಾರ್ಯದ ಕಲ್ಪನೆ ಇದೆ.

ಹಾಗೆ ನಿಜವಾಗಿಯೆ ಆದರೆ ? ಕುಮುದ ತನ್ನನ್ನು ಸರಿಯಾಗಿ ತಿಳಿದುಕೊಂಡರೆ ! ಹುಂ – ಅಂತೂ ಹೊಣೆಯನ್ನು ಇನ್ನೊಬ್ಬರ ಮೇಲೆಯೆ ಹೊರಿಸುತ್ತಿರುವೆನಲ್ಲ ? ನಾನೇ ತಪ್ಪಿರಬಾರದೇಕೆ ? ಕುಮುದಳನ್ನು ನಾನು ನಿಜವಾಗಿ ಪ್ರೀತಿಸುತ್ತಿದ್ದರೆ ಈ ಅಧೈರ್ಯ ಯಾಕೆ ? ತನ್ನ ಪ್ರೇಮದ ಬಗ್ಗೆ ಆಕೆಯಲ್ಲಿ ಭರವಸೆಯನ್ನು ಹುಟ್ಟಿಸಬಹುದಲ್ಲ ?

ಕುಮುದಳಿಗೆ ತಾನು ಪ್ರಾಣ ಎಂಬುದರ ಬಗ್ಗೆ ರಾಮಣ್ಣನಿಗೆ ಸಂದೇಹವೆ ಇರಲಿಲ್ಲ. ಅಂದು, ಮದುವೆಯು ಮುಂಚಿತ, ಆಕೆ ತನ್ನವ-ಳಾದಂದಿನಿಂದ ತನಗೆ ಆ ಭರವಸೆ ಇದೆ. ಆದರೂ ಇಂದು ತನ್ನೊಡನೆ – ವರ್ಷಾನುವರ್ಷಗಳವರೆಗೆ – ಅಸಹಕಾರದ ಸಂಸಾರವನ್ನು ನಡೆಸಿದ್ದಾಳೆ.

ಎಂತಹ ತ್ಯಾಗ ಆಕೆಯದು ! ಆದರೆ ಸುಖವಿದೆಯೆ ಆಕೆಗೆ ಆ ತ್ಯಾಗದಲ್ಲಿ ? ತನಗೂ ಆಕೆಗೂ ವಯಸ್ಸಿನಲ್ಲಿ 14–15 ವರ್ಷಗಳ ಅಂತರ.... ಛೀ ! ಮತ್ತೆ ತನ್ನ ಮನಸ್ಸು ಅದೇ ದಾರಿಯನ್ನು ಹಿಡಿಯಿತು. ವೈವಾಹಿಕ ಜೀವನದಲ್ಲಿ ಸುಖ ಎಂದರೆ ಕಾಮಜೀವನದ ತೃಪ್ತಿ ಎಂದೇ ತನಗೆ ವಿಚಾರ....

ವಿಚಾರ ತನ್ನದಲ್ಲ, ಸಾವಿರಾರು ವರ್ಷಗಳಿಂದ ನಡೆದುಬಂದ ಸಂಪ್ರದಾಯದ ವಿಚಾರ ತನ್ನಲ್ಲಿ ಮೈಗೂಡಿಕೊಂಡು ಬಂದಿದೆ. ಅಥವಾ ನಿಸರ್ಗದಲ್ಲಿ ಪ್ರತಿಯೊಂದು ಗಂಡುಪ್ರಾಣಿಯ ವಿಚಾರವೊ ಇದು? ಇದ್ದರೂ ಇರಬಹುದು. ಕಾಮಜೀವನವು ಗಂಡಿಗೆ ಕೇವಲ ಒಂದು ತೃಪ್ತಿಯಾಗಿದೆ, ಅವರ ಜೊತೆ ಯಾವ ಹೊಣೆಯೂ ಇಲ್ಲ. ಹೆಣ್ಣಿನ ಮಾತು ಬೇರೆ; ಕಾಮಜೀವನ ಹೊಸದೊಂದು ಹೊಣೆಯನ್ನೇ ತಂದುಕೊಡುವುದು. ಗಂಡಿನ ಕಾಮಜೀವನ ಇರುಳುಗಳ್ಳನಂತೆ – ಮಾಡಿದ್ದನ್ನು ಮುಚ್ಚಿಡಬಹುದು; ಹೆಣ್ಣಿನ ಕಾಮ ಜೀವನ ಹಗಲು-ಗಳ್ಳನಂತೆ, ಮಾಡಿದ್ದನ್ನು ಮುಚ್ಚಿಡಲು ಶಕ್ಯವೇ ಇಲ್ಲ. ಕಾಮಜೀವನದ ಬಗ್ಗೆ ಗಂಡು-ಹೆಣ್ಣುಗಳ ವಿಚಾರವೆ ಬೇರೆಯಾಗಿದ್ದರೆ ? ಪರಸ್ಪರ ಭಿನ್ನವಾಗಿದ್ದರೆ ?

ಈ ವಿಚಾರ ಈಗ್ಯಾಕೆ – ಎಂದುಕೊಂಡ. ಹತ್ತು ವರ್ಷಗಳಾದುವು ತನ್ನ ಕಾಮಜೀವನ ತಡೆದುನಿಂತುದಕ್ಕೆ.

ಓ ! ರಾಮಣ್ಣನಿಗೆ ತಟ್ಟನೆ ಹೊಸತೊಂದು ವಿಚಾರ ಹೊಳೆಯಿತು. ತನ್ನ ಬೆನ್ನನ್ನು ತಾನೇ ತಟ್ಟಿಕೊಂಡ. ಕೂಡಲೆ ಸುತ್ತಲು ನೋಡಿದ, ನಾಚಿದವನಂತೆ. ಯಾರಾದರೂ ನೋಡಿದ್ದರೆ ನನ್ನನ್ನು ಹುಚ್ಚನೆನ್ನಬಹು ದಿತ್ತು – ಎಂದುಕೊಂಡ.

ಆದರೂ ಇದು ಬೆನ್ನನ್ನು ತಟ್ಟಿಕೊಳ್ಳುವಂತಹದೆ ಮಾತು – ಎಂದು ಮತ್ತೊಮ್ಮೆ ಹೇಳಿಕೊಂಡ.

ಹತ್ತು ವರ್ಷಗಳಾದುವು ತಾನು ಬ್ರಹ್ಮಚರ್ಯದ ಜೀವನವನ್ನು ನಡೆಯಿಸಿ.

ಆದರೆ ಈ ಇಡಿಯ ಅವಧಿಯಲ್ಲಿ ತನಗೆ ಕುಮುದಳನ್ನು ಬಿಟ್ಟು ಬೇರೆ ಬಯಕೆಯೆ ಇಲ್ಲವಲ್ಲ !

ತಾನು ಕುಮುದಳನ್ನು ಪ್ರೀತಿಸುತ್ತೇನೆ ಎಂಬುದಕ್ಕೆ ಬೇರೆ ಕಾರಣ ಅಗತ್ಯವಿದೆಯೆ ?

ರಾಮಣ್ಣನಿಗೆ ಒಂದು ಕ್ಷಣ ತಲೆಯಲ್ಲಿ ವಿಚಾರಗಳ ಗೊಂದಲವಾದಂ-ತಾಯಿತು. ನಿಜವೆ? ಇಷ್ಟು ಸುಲಭವಾಗಿ ತಾನು ಕುಮುದಳ ಪ್ರಶ್ನಕ್ಕೆ

ಉತ್ತರವನ್ನು ಕೊಡಬಲ್ಲನೆ ? ಇದೊಂದು ಮಾತಿಗೆ ಕುಮುದಳಿಗೆ ಸಮಾಧಾನ ವಾಗಬಹುದೆ ?

ರಾಮಣ್ಣನು ನಿರಾಶೆಯಿಂದ ಉಸುರ್ಗರೆದನು. ಹುಚ್ಚ, ಹುಚ್ಚ ತಾನು. ಅಥವಾ, ಅಷ್ಟೊಂದು ಮುಗ್ಧನೆ ? ಇಂತಹ ಮಾತಿಗೆ, ಕುಮುದ ಳಂತೂ ಇರಲಿ ಬೇರೆ ಯಾವ ಹೆಂಗಸು ಸಮಾಧಾನವನ್ನು ಪಡೆಯಬಹುದು? ಕೊನೆಗೆ, ತನ್ನನ್ನು ಹಟಮಾರಿ ಎನ್ನಬಹುದಲ್ಲ ? ನಿಜ, ಇಂತಹದೆ ತಿನಿಸು ಬೇಕು ಎಂದು ಹಟ ಹಿಡಿದ ಹಡುಗನಿಗೆ ಬೇರೆ ಯಾವುದರ ಮೇಲೂ ಆಸೆ ಇಲ್ಲವೆಂತಲ್ಲ; ತಾನು ಬಯಸಿದ್ದು ದೊರಕಲಿಲ್ಲವೆಂದರೆ ಅವನು ಇಡಿಯ ದಿವಸ ಬೇರೆ ಯಾವುದನ್ನೂ ತಿನ್ನದೆ ಉಪವಾಸದಿಂದಿರುವನು. ಆದರೆ ಅಷ್ಟಕ್ಕೆ ಆ ಹುಡುಗನಿಗೆ ಆ ತಿನಿಸಿನ ಮೇಲೆ ಅನನ್ಯಪ್ರೀತಿ ಇದೆ ಎಂದು ಯಾರಾದರೂ ಹೇಳಬಹುದೆ ?

ತಾನು ಹಟಮಾರಿ ಹುಡುಗ – ಅಲ್ಲಲ್ಲ, ಹಾಗೆನ್ನಬಹುದು ಕುಮುದ ತಾನು ಆಕೆಯೊಡನೆ ವಾದಿಸಹೊರಟರೆ. ಆದರೂ ಈಗ ತನ್ನ ಮಟ್ಟಿಗೆ ಭರವಸೆಯಾಗಿದೆಯಲ್ಲ ? ಕುಮುದಳನ್ನು ತಾನು ಹೃದಯಪೂರ್ಣವಾಗಿ ಪ್ರೀತಿಸುತ್ತಾನೆ ಎಂಬುದರಲ್ಲಿ ಸಂಶಯವಿಲ್ಲ. ಎಂದರೆ ? ಇದಕ್ಕೂ ಮುಂಚಿತ ತನಗೆ ಸಂಶಯವಿದ್ದಿತೆ ? ಛೆ ! ತನಗೆ ಸಂಶಯವೆ ಇದ್ದಿರಲಿಲ್ಲ. ಎಂದರೆ—?

ರಾಮಣ್ಣ ಸಿಟ್ಟಿನಿಂದ ತಲೆಯನ್ನು ಜಾಡಿಸಿದ, ಒಳಗೆ ಹರಡುತ್ತಿರುವ ಗೊಂದಲ ಹೊರಬೀಳಬಹುದು ಎಂದು ತಿಳಿದುಕೊಂಡವನಂತೆ. ಕುಮುದ ಳನ್ನು ತಾನು ಪ್ರೀತಿಸುತ್ತಿರುವ ಬಗ್ಗೆ ತನಗೆ ಎಂದೂ ಸಂಶಯವಿದ್ದಿಲ್ಲ, ಎಂದು ಹಟದಿಂದ ಹೇಳಿಕೊಂಡ. ಹಾಗಿದ್ದರೆ ಬೆನ್ನು ತಟ್ಟಿಕೊಂಡುದು ಯಾಕೆ ?

ಹಂ – ತಿಳಿಯಿತು ! ಕುಮುದಳಿಗೆ ಮನವರಿಕೆ ಮಾಡಿಕೊಡಬಲ್ಲ ಈಗ ತಾನು ಎಂಬುದಕ್ಕಾಗಿ ಬೆನ್ನನ್ನು ತಟ್ಟಿಕೊಂಡಿದ್ದು. ಅಹುದು, ಆ ವಿಚಾರದಿಂದ ನನಗೆ ಧೈರ್ಯ ಬಂದಿತು – ಎಂದುಕೊಂಡ. ಕುಮುದಳ ಹೊರತಾಗಿ ಅನ್ಯಳನ್ನು ತಾನು ಕನಸು – ಮನಸುಗಳಲ್ಲಿ ಬಯಸಿಲ್ಲ ಎಂದು ಹೇಳಿಬಿಟ್ಟರೆ........

—ಎಂದು ಹೇಳಿಬಿಟ್ಟರೆ ತಾನೇನೊ ತನ್ನ ಕರ್ತವ್ಯ ಮಾಡಿ ಕೃತಕೃತ್ಯ

ಎನ್ನಿಸಬಹುದು, ಆದರೆ ಕುಮುದಳಿಗೆ ವಿಶ್ವಾಸವಾಗುವುದೆಂದು ಹೇಳುವುದು ಹೇಗೆ ? ತಾನು ಯಾವ ಹೊಸಮಾತನ್ನು ಆಕೆಗೆ ಹೇಳುವನೆಂದು ಆಕೆ ವಿಶ್ವಾಸವನ್ನಿಡಬೇಕು ? ಕುಮುದಳಿಗೆ ಗೊತ್ತಿಲ್ಲವೆ ತನ್ನ ನಡತೆ ? ತಾನು ಬೇರೆ ಯಾವ ಹೆಣ್ಣನ್ನೂ ಬಯಸಿಲ್ಲ ಎಂಬುದನ್ನು ಕಂಡು, ಅರಿತು ಕೂಡ ಕುಮುದಳು ತನಗೆ ವಿಮುಖಳಾಗಿದ್ದಾಳೆ. ದುಷ್ಯಂತ – ಶಕುಂತಲೆಯರ ಕತೆ ಆಗುವುದು ಇದೂ. ವ್ಯತ್ಯಾಸವಿಷ್ಟೆ, ನಾಟಕದಲ್ಲಿ ಶಕುಂತಲೆಗೆ ಆದ ಅವಸ್ಥೆ ಇಲ್ಲಿ ದುಷ್ಯಂತನಿಗೆ – ತನಗೆ – ಆಗುವುದು. ಪಾಪ ! ಏನಾಯಿತು ಆಕೆಯ ಅವಸ್ಥೆ ? ಜೊತೆಯಲ್ಲಿ ಬಂದ ಹಿರಿಯರು, ಬಾಂಧವರು ಎಲ್ಲರೂ ಹೇಳಿದರು ದುಷ್ಯಂತನಿಗೆ, "ಈಕೆ ನಿನ್ನ ಮದುವೆಯ ಹೆಂಡತಿ; ನಿನ್ನ ಮಗುವನ್ನು ತಳೆದಿದ್ದಾಳೆ; ಈಕೆಯನ್ನು ನಿನಗೆ ಒಪ್ಪಿಸುತ್ತೇವೆ; ಎಷ್ಟು ಕಾಲ ತಾನೇ ಈಕೆ ತವರು ಮನೆಯಲ್ಲಿರಬಹುದು ; ಆದ್ದರಿಂದ ಈಕೆಯನ್ನು ಸ್ವೀಕರಿಸು" ಎಂದು. ಹೆಣ್ಣೇನೋ ಸ್ವೀಕರಿಸಲು ಯೋಗ್ಯ-ವಾಗಿದೆ ಎಂದ ದುಷ್ಯಂತ. ಆದರೆ ಆಕೆಯನ್ನು ತಾನು ಮದುವೆಯಾದದ್ದೆ ಅವನಿಗೆ ಸ್ಮೃತಿಯಿರಲಿಲ್ಲ. "ನಾನು ಆಕೆಯನ್ನು ವರಿಸಿದಂತೆ ನನ್ನ ಲಕ್ಷ್ಯದಲ್ಲಿಲ್ಲ. ಆದ್ದರಿಂದ ಸ್ವೀಕರಿಸಲಾರೆ" ಎಂದ. ಆಗ "ನೀನೇ ಅವನಿಗೆ ವಿಶ್ವಾಸವಾಗುವಂತೆ ಹೇಳು" ಎಂದರು ಬಾಂಧವರು ಶಕುಂತಲೆಗೆ. ಆಕೆ ಪ್ರಾರಂಭಿಸಿದಳು— "ಒಂದು ದಿನ ನವಮಾಲಿಕಾ ಮಂಟಪದಲ್ಲಿ ನೀನು ಕಮಲದ ಎಲೆಯಲ್ಲಿ ನೀರನ್ನಿಟ್ಟು ದೀರ್ಘಾಪಾಂಗ ಎಂಬ ಚಿಗುರೆ ಮರಿಗೆ ಕುಡಿಸಬೇಕು ಎಂದೆ. ನೀನು ಎಷ್ಟು ಪ್ರಯತ್ನಪಟ್ಟರೂ ಅದು ಕುಡಿಯಲಿಲ್ಲ. ಆಗ ನಾನು ನಿನ್ನ ಕೈಯೊಳಗಿನ ನೀರಿನ ದೊನ್ನೆಯನ್ನು ನನ್ನ ಕೈಯಲ್ಲಿ ಹಿಡಿದೆ, ಮರಿ ತಟ್ಟನೆ ಬಂದು ಕುಡಿಯಿತು. ಆಗ ನೀನೂ 'ಎಲ್ಲರೂ ತಂತಂ ಜನರಲ್ಲಿ ವಿಶ್ವಾಸ ಇಡ್ತಾರೆ' ಎಂದು ನಕ್ಕೆ." ಪಾಪ ! ಆ ಕತೆಯಿಂದ ದುಷ್ಯಂತನಿಗೆ ವಿಶ್ವಾಸವಾಗಬಹುದೆಂಬ ಆಸೆಯಿಂದ ಅದನ್ನು ಮುಗಿಸುವಾಗ ಶಕುಂತಲೆಯೂ ನಗೆಯನ್ನು ಬೀರಿದ್ದಳೇನೊ! "ಕಥೆ ಚೆನ್ನಾಗಿದೆ, ಹೆಂಗಸರು ಸುಳ್ಳನ್ನು ಸವಿ ಮಾಡಿ ಹೇಳಬಲ್ಲರು ಅನ್ನೋದನ್ನ ತೋರಿಸಿಕೊಡ್ತದೆ" ಎಂದ ದುಷ್ಯಂತ !

ಸರಿ – ನನ್ನ ಅವಸ್ಥೆಯೂ ಹಾಗೇ ಆಗಬಹುದಲ್ಲ ? "ಬೇರೆ ಹೆಣ್ಣನ್ನು

ಬಯಸಿಲ್ಲ ಅನ್ನೋದು ಬ್ರಹ್ಮಚರ್ಯಾನೊ ವಯಸ್ಸಾದ ಲಕ್ಷಣಾನೋ ?" ಎಂದುಬಿಟ್ಟರೆ? ಅತ್ಯಂತ ಕಳವಳವಾಯಿತು ರಾಮಣ್ಣನಿಗೆ. ಸತ್ಯದಲ್ಲಿ ವಿಶ್ವಾಸ ಹುಟ್ಟಿಸೋದು ಸುಲಭ ಅಲ್ಲ ಅಂದ್ರೆ – ಅದರ ಮುಂದೆ ಬೇರೆ tragedy ಯಾವುದು?—ಎಂದ. tragedy ಅನ್ನೋ ಶಬ್ದ ಇಲ್ಲ, ನಮ್ಮ ಸಂಪ್ರದಾಯದೊಳಗೆ, ಅದಕ್ಕೆ "ದುರ್ದೈವ" ಅಂದುಕೊಳ್ಳೋಣ–ಎಂದು ಉಸುರ್ಗರೆದ.

ಅಲ್ಲ – ಈಗ ಏನೋ ಒಂದು ವಿಚಾರ ಬಂದಿತ್ತಲ್ಲ ದೈವದ ಸಂದರ್ಭ-ದಲ್ಲಿ ? ಏನೊ – ಏನೊ – ವಿಚಾರ ಏನೇ ಇರಲಿ, "ದೈವ" ಅನ್ನೋದು ಹೊಣೆ ಹಾರಿಸಿಕೊಂಡ್ಹಾಂಗೆ. ನನ್ನ ಹೊಣೆ ಏನು ? ನಾನು ಕುಮುದಳನ್ನ ಪ್ರೀತಿಸ್ತೀನಿ, ಆದರೆ ಆಕೆಗೆ ಆ ವಿಶ್ವಾಸ ಇಲ್ಲ , ಇದರೊಳಗ ನನ್ನ ಹೊಣೆ ಏನು ? ಆಕೆಗೆ ವಿಶ್ವಾಸ ಹುಟ್ಟುವ ಹಾಗೆ ಏನು ಹೇಳಬೇಕು ? ಹ್ಯಾಗೆ ಹೇಳಬೇಕು ? ಉಹುಂ, ಅದು ನನ್ನ ಹೊಣೆ ಅಲ್ಲ. ಕುಮುದಳನ್ನು ನಾನು ಪ್ರೀತಿಸ್ತೀನಿ ಅನ್ನೋ ನನ್ನ ಹೃದಯದ ವಿಶ್ವಾಸವನ್ನು ನಂಬಿಕೊಂಡು ಅಚಲನಾಗಿರುವುದೆ ನನ್ನ ಹೊಣೆ.

ಭಲೆ ! ಕೈಕಟ್ಟಿಕೊಂಡು ಸುಮ್ಮನಿರೋದೇ ನನ್ನ ಹೊಣೆ ಅನ್ನೋ "ದೊಡ್ಡ ಸಿದ್ಧಾಂತಕ್ಕೆ ಬಂದುಬಿಟ್ಟೆನಲ್ಲ —" ಎಂದು ತನ್ನನ್ನು ತಾನೇ ಹಂಗಿಸಿಕೊಂಡ ರಾಮಣ್ಣ. ಕೈಕಟ್ಟಿಕೊಂಡು ಕೂಡದೆಯೆ ನಾನೇನು ಮಾಡಬಲ್ಲೆ – ಎಂದು ಕೇಳಿಕೊಂಡ.

ಈ ವಿಷಯುವೆ ಅಂತಹುದು. "ನಿನ್ನ ಮೇಲೆ ನನ್ನ ಪ್ರೀತಿ ಇದೆ" ಎಂದರೆ ಯಾರು ಆ ಮಾತನ್ನು ನಂಬುವರು ? "ಪ್ರೀತಿ ಇದೆ" ಎನ್ನೋ ವಿಶ್ವಾಸ ಸ್ವಂತ ಅನುಭವದಿಂದಲೆ ಬರಬೇಕಲ್ಲದೆ ಬಾಯ್ಮಾತಿನಿಂದ ಹೇಳಿದರೆ ನಂಬುವಂತಹುದಲ್ಲ. ಕತೆ – ಕಾದಂಬರಿ – ನಾಟಕಗಳಲ್ಲಿ ಬರೀತಾರೆ "ಪ್ರಿಯೇ, ನಿನ್ನನ್ನು ಪ್ರೀತಿಸುತ್ತೇನೆ" ಎಂದು ನಾಯಕ, "ಪ್ರಿಯಾ, ನಿನಗಾಗಿ ನನ್ನ ಹೃದಯ ಮೋಹಿತವಾಗಿದೆ"ಎಂದು ನಾಯಿಕೆ. ವ್ಯವಹಾರ-ದಲ್ಲೂ ಇಷ್ಟೆ ಸುಲಭವಿದ್ದರೆ ಕ್ಷಣಕ್ಕೊಂದು ಪ್ರೇಮವಿವಾಹ, ಬೇರೆ ಬೇರೆ ಕ್ಷಣಕ್ಕೆ ಬೇರೊಬ್ಬಳೊಡನೆ ಪ್ರೇಮ ವಿವಾಹ ನಡೆಯಬಹುದು. ತಾನೂ ಸಾಹಿತಿ, ತನಗೂ ಮನುಷ್ಯ ಸ್ವಭಾವ ಅಷ್ಟರಮಟ್ಟಿಗೆ ಗೊತ್ತಿದೆ, ಎಂದು-ಕೊಂಡ ರಾಮಣ್ಣ. ತಾನು ಬಯಸಿದ ಹೆಣ್ಣನ್ನು ತಾತ್ಪೂರ್ತಿಕವಾಗಿ

"ಪ್ರೀತಿ"ಸುವುದು ಗಂಡು ಪ್ರಾಣಿಯ ನೈಸರ್ಗಿಕ ಸ್ವಭಾವವಾಗಿದೆ; ತಾಯ್ತನ ಪ್ರಾಪ್ತವಾದೊಡನೆ "ಪ್ರೀತಿ"ಸಿದ ಗಂಡನ್ನು ಪೂರ್ತಿಯಾಗಿ ಮರೆತುಬಿಡು-ವುದು ಹೆಣ್ಣು ಪ್ರಾಣಿಯ ನೈಸರ್ಗಿಕ ಸ್ವಭಾವವಾಗಿದೆ. ಮಾನವ ಪ್ರಾಣಿಗಳಲ್ಲೂ ಈ ಸ್ವಭಾವ ಸಾಮಾನ್ಯವಾಗಿದೆ. ಆದರೆ ಕುಟುಂಬ ಜೀವಿಯಾದ ಮಾನವಪ್ರಾಣಿಗೆ ಯಾವಾಗಲೂ ತನಗೆ ಇಷ್ಟವಾದ ಜೊತೆ ಬೇಕು ಎಂಬ ವಿಚಾರವಿದೆ. ಆ ಸಂದರ್ಭದಲ್ಲಿ ಹುಟ್ಟಿದೆ ಇನ್ನೊಂದು ತರದ "ಪ್ರೀತಿ"ಯ ಕಲ್ಪನೆ. ಆ—

ರಾಮಣ್ಣ ತಟ್ಟನೆ ಕೈಗಡಿಯಾರವನ್ನು ನೋಡಿಕೊಳ್ಳುತ್ತ ಎದ್ದ. ಯಾಕೊ, ಇಂದು ವಿಚಾರಗಳ ಹಬ್ಬವಾಗಿದೆಯೇನೊ! ಹಬ್ಬವೇನು ಸುಟ್ಟೀತು, ಹೋಳೀ ಹುಣ್ಣಿಮೆ, ಮನಬಂದಂತೆ, ಕುಣಿಯುತ್ತಿವೆ —ಎಂದುಕೊಂಡ ಸಿಡುಕಿನ ಮುಖಮುದ್ರೆಯಿಂದ.

ಈ ಹಾಳು ಸಭೆ ಬೇಗ ಪ್ರಾರಂಭವಾಗಬಾರದೆ?

ಹಂ—ನೋಡಿದೆಯಾ? ಯಾವುದರ ಸಿಟ್ಟನ್ನು ಯಾವುದರ ಮೇಲೆ ಹಾಯಿಸುತ್ತಿರುವೆ!

ರಾಮಣ್ಣ ದಣಿದವನಂತೆ ಮೆಲ್ಲನೆ ನಕ್ಕುಬಿಟ್ಟ. ಇಷ್ಟಾದರೂ ಮನಸ್ಸಿನಲ್ಲಿ ಯಾವುದೋ ಒಂದು ಅನಿರೀಕ್ಷಿತ ಉಲ್ಲಾಸವಿದೆ, ಎಂಬ ವಿಚಾರ ಅವನನ್ನು ಬಿಡಲೊಲ್ಲದು. ಯಾವುದು ಅಂತಹ ಉಲ್ಲಾಸ? ಹತ್ತು ವರ್ಷಗಳ ತಪಶ್ಚರ್ಯೆಗಾಗಿ ಮೋಕ್ಷ—ಅಲ್ಲಲ್ಲ, ತಪಶ್ಚರ್ಯೆಯಿಂದ ಮೋಕ್ಷ ದೊರೆಯುವುದೆ? ಕುಮುದಳ ಹೊರತಾಗಿ ನನಗೆ ಬೇರೊಂದು ಪ್ರಿಯವಾದುದಿಲ್ಲ, ಅವಳು ಸುಖದಿಂದಿದ್ದರೆ ಸಾಕು, ಅವಳು "ನನ್ನವಳಾ"ಗಲಿ ಎಂಬ ಹಟ ಕೂಡ ನನಗಿಲ್ಲ—

ಹಂ–ಹಂ–ತಡೆ! ಇದೇನು ವೈರಾಗ್ಯದ ಸಿದ್ಧತೆಯೊ? ವಾರ್ಧಿಕ್ಯದ ಲಕ್ಷಣವೊ?

ಉಹುಂ – ಎರಡೂ ಅಲ್ಲ. ಹೃದಯದಾಣೆ ಇದು ನಿಜ. ಅವಳು ಸುಖಸಂತೋಷದಿಂದಿದ್ದು ನನ್ನಿದಿರು ಸುಳಿಯುತ್ತಿದ್ದರೆ ಸಾಕು, ಅದೇ ನನಗೆ ಪರಮಸುಖ. ಅವಳು, ಮೋಹನ – ಅಲ್ಲ ಇಬ್ಬರಲ್ಲ – ಮೋಹನನೆಂದರೆ ಅವಳ ಅಂಶ, ಅವಳನ್ನು ಪ್ರೀತಿಸುವಷ್ಟೆ, ಪ್ರೀತಿಸುವಂತೆಯೆ ಮೋಹನನನ್ನೂ

ಪ್ರೀತಿಸುತ್ತೇನೆ. ಒಬ್ಬರೊಬ್ಬರ ಅಂಶ ಅವರು, ಇಬ್ಬರಲ್ಲ. ಕುಮುದ ನನ್ನನ್ನು ಪ್ರೀತಿಸುತ್ತಾಳೆ, ಬಲ್ಲೆ ನಾನು; ನನ್ನ ಸುಖದಲ್ಲಿ ಅವಳು ಸುಖವನ್ನು ಕಾಣುತ್ತಾಳೆ, ಅದನ್ನೂ ಬಲ್ಲೆ; ಅದಕ್ಕಾಗಿಯೆ ಇಂದಿನ ಸಭೆಗೆ ಅವಳು ಬರಬೇಕು ಎಂದು ನಾನು ಬಯಸಿದ್ದು; ನನಗಾಗುವ ಸತ್ಕಾರವನ್ನು ಕಂಡು ಅವಳಿಗೆ ಆನಂದವಾಗುವುದು, ಅವಳ ಆನಂದವನ್ನು ಕಂಡು ನಾನು ಸುಖಿಯಾಗುವೆ, ನಾವಿಬ್ಬರೂ ಆನಂದಮಯ ಕಣ್ಣುಗಳಿಂದ ಒಬ್ಬರೊಬ್ಬರನ್ನು ನೋಡಿದ ಮೇಲೆ, ಇಬ್ಬರ ದೃಷ್ಟಿಗಳೂ ಒಂದೆಡೆ ಸೇರುವುವು ಮೋಹನನಲ್ಲಿ ನೆಟ್ಟು.

"ಮೋಹನನೂ ಬರಲಿ ಸಭೆಗೆ" ಎಂದು ಗಟ್ಟಿಯಾಗಿ ನುಡಿದ ರಾಮಣ್ಣ ತನ್ನ ಕಣ್ಣುಗಳಲ್ಲಿ ಇಣಿಕಿಕ್ಕುತ್ತಿರುವ ನೀರ ಹನಿಗಳನ್ನು ತಪ್ಪಿಸಲು. "ಮೋಹನನೂ ಬರಲಿ ಸಭೆಗೆ" ಎಂದ ಕಿಟಕಿಯ ಹತ್ತಿರ ಹೋಗಿ. "ಮೋಹನನೂ ಬರಲಿ ಸಭೆಗೆ" ಎಂದ ಮೆಟ್ಟಿಲುಗಳ ಹತ್ತಿರ ಹೋಗಿ.

## ೧೫

ಕೆಲಸದಲ್ಲಿ ತೊಡಗಿದ ಕುಮುದ ತಟ್ಟನೆ ತಡೆದಳು. ಏನೋ ಕೇಳಿಸಿತಲ್ಲ? ಯಾರೋ ಮಾತನಾಡಿದರಲ್ಲ? ಒಮ್ಮೆಲೆ ಗೊಂಬೆಯಂತೆ ನಿಶ್ಚಲಳಾಗಿ ನಿಂತಳು. ಅಲ್ಲ, ಗೊಂಬೆಯಲ್ಲ, ಗೊಂಬೆಗೆ ನಿಲ್ಲಲು ಗಟ್ಟಿಯಾದ ಕಾಲ್ಗಳಿರುವುವು. ತನಗೆ ಕಾಲ್ಗಳೇ ಇಲ್ಲ, ಅಲ್ಲಲ್ಲ – ತನ್ನ ಕಾಲ್ಗಳಲ್ಲಿ ತ್ರಾಣವೇ ಇಲ್ಲ.... ಕೈಗಳನ್ನು ತೊಡೆಗೆ ಹಚ್ಚಿ ಕುಮುದ ನಿಂತಲ್ಲಿಯೆ ಕುಳಿತಳು.

"ಮೋಹನನೂ ಸಭೆಗೆ ಬರಲಿ"

ರಾಮಣ್ಣನ ದನಿ. ಮೆಟ್ಟಿಲುಗಳಿಂದ ಕೆಳಗೆ ಇಳಿದು ಬಂದಿದೆ ದನಿ. ಆ ದನಿ ಆಕೆಗೆ ಹಗ್ಗವಾಯಿತೇನೊ! ಅದರ ಆಧಾರದಿಂದ ಮೆಲ್ಲನೆ ಎದ್ದಳು. ಕನ್ನಡಿಯ ಎದುರಿಗೆ ನಡೆದು ನಿಂತಳು, ಹಣೆಗೆ ತೂಗುತ್ತಿರುವ ಕೂದಲನ್ನು ಸರಿಪಡಿಸಿಕೊಂಡಳು. ಇದೇನು? ಕೈ ಒದ್ದೆಯಾಗಿದೆ! ಹಣೆಗೆ ಬೆವರು!

ಯಾಕೊ–ಯಾಕೊ–ಯಾಕೊ! ಎದೆ ಡಬಡಬನೆ ಬಡಿಯುತ್ತಿದೆ.

ದುಃಖ, ಆನಂದ – ಎರಡರ ಲಕ್ಷಣಗಳೂ ಒಂದೇ. ಹೆದರಿಕೆ, ಬೆವರು, ನಿತ್ರಾಣ....ಆದರೆ ಇದರ ಪರಿಣಾಮವೆಂದರೆ ತನ್ನ ಮೈಯಲ್ಲಿ ಬಲ ಬಂದಂತಾಗಿದೆ. ಅದೇ ಒಂದು ವ್ಯತ್ಯಾಸವೇನೊ ದುಃಖ–ಆನಂದಗಳಲ್ಲಿ ? ಈಗ ತನಗೆ ಆನಂದವಾಗಿದೆ. ಮೋಹನ ಸಭೆಗೆ ಬರಬೇಕೆಂದು ತಾನೂ ಬಯಸಿದ್ದಳು, ಈಗ ರಾಮಣ್ಣನೂ ಅದೇ ಮಾತನ್ನೇ ಹೇಳುತ್ತಾನೆ, ತನಗೆ ಆನಂದವಾಗಿದೆ. ಯಾವಾಗಲೂ ಹೀಗೆಯೇ ತನಗೆ. ತನ್ನ ವಿಚಾರ, ರಾಮಣ್ಣನ ವಿಚಾರ ಒಂದಾದಾಗ ರಾಮಣ್ಣನ ಸ್ಪರ್ಶವಾದಂತೆಯೆ ಎನ್ನಿಸುವುದು ತನಗೆ. ಸ್ಪರ್ಶವಾದಾಗೊಮ್ಮೆ ಮೈ ನಡುಗುವುದು, ಬೆವರಿಸುವುದು, ಕಾಲ್ಗಳ ಶಕ್ತಿ ಉಡುಗುವುದು. ಯಾಕೊ–ಯಾಕೊ–ಯಾಕೊ ?

ಸಂತಸದ ಉಬ್ಬಿನಿಂದ ಆ ಪ್ರಶ್ನವನ್ನು ಕೇಳಿಕೊಂಡಳು ತನ್ನನ್ನು ತಾನೇ.

ಎಷ್ಟು ಯುಗಗಳ ಅನುಭವ ! ಎಷ್ಟ ವರ್ಷಗಳ ಆನಂದ ! ಅಂದಿನ ಅನುಪಮ ಅನುಭವವನ್ನು, ಅಂದಿನ ಅಲೌಕಿಕ ಆನಂದವನ್ನು ಮತ್ತೆ ಮತ್ತೆ ಮೈ ನೆನೆದುಕೊಳ್ಳುವುದೇನೊ ಎಂದೆನ್ನಿಸುವುದು ಆಕೆಗೆ. ಒಮ್ಮೆ ಪ್ರತ್ಯಕ್ಷವಾದ ಆನುಭವ ಇಂದು ಪರೋಕ್ಷವಾಗಿ ಮರುಕಳಿಸುತ್ತಿದೆ. ತಾನು ಹೆಂಗಸಾಗಿ ಹುಟ್ಟಿದ್ದು ಸಾರ್ಥಕ ಎಂದೆನ್ನಿಸಿತ್ತು ಮೊದಲಸಲ ಆ ಅನುಭವ-ವನ್ನು ಪಡೆದಾಗ. ತಾನು, ತನ್ನದು, ತನ್ನವರು ಎಂಬ ಎಲ್ಲದರ ಅರಿವಿದ್ದೂ ಯಾವುದರ ಅರಿವೂ ಇಲ್ಲದಂತಹ, ದುಃಖವೆನ್ನಿಸಿದರೂ ಸುಖವನ್ನುಂಟು ಮಾಡುವಂತಹ, ಕ್ಷಣಿಕವಾದಾಗೂ ಚಿರಂತನವೆನಿಸುವ, ಇನ್ನೊಬ್ಬರ ಸ್ಪರ್ಶವಿದ್ದೂ ಎಲ್ಲ ಒಬ್ಬರೇ ಎನ್ನಿಸುವಂತಹ—

ಕುಮುದಳ ಮೈನಡುಗುವುದು ನೆನಸಿದಾಗೊಮ್ಮೆ, ಈಗ ನಡುಗಿತು. ಕಾಲ್ಗಳು ಸ್ಥಿರವಾಗಿ ನಿಲ್ಲಲೊಲ್ಲವೆಂದು ಮತ್ತೆ ಕುರ್ಚಿಯಲ್ಲಿ ಕುಳಿತು-ಕೊಂಡಳು ; ತನ್ನನ್ನೆ ತಾನು ಮರೆತಳೇನೊ ಎಂಬ ಹೆದರಿಕೆಯಿಂದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿದಳು. ಮೈ ಬಿಸಿಯಾಗಿಲ್ಲ. ಆದರೂ ಉಸಿರು ಬಿಸಿ ಎನ್ನಿಸುವುದಲ್ಲ ? ಕಣ್ಣು ಮುಚ್ಚಿ ಕುಳಿತಳು.

ಮನೆ, ಸಭೆ, ಸತ್ಕಾರ ಎಲ್ಲವೂ ಮರೆತುಹೋಯಿತು. ಈಗ ತಾನು ಮತ್ತೊಂದು ಜಗತ್ತಿನಲ್ಲಿಯೆ ವಿಹಾರ ಮಾಡುತ್ತಿದ್ದಾಳೆ.

ಆ ದಿನ – ಯಾವ ದಿನ ?–ಯಾವ ದಿವಸವೇನು ?–ತನ್ನ ಜೀವನದಲ್ಲಿ ಅದೊಂದೇ ದಿನ–ಚಿರಂತನ ಆನಂದವನ್ನು ಒದವಿಸಿಕೊಟ್ಟ ಆ ದಿನ ರಾಮಣ್ಣ ಏನನ್ನೋ ಬರೆಯುತ್ತಿದ್ದ. ಅವನ ಮೇಜಿನ ಎದುರು ಕನ್ನಡಿ ಇದ್ದಿತು. ತಾನು ಕೆಲಹೊತ್ತು ದೂರದಿಂದಲೆ ನೋಡುತ್ತ ನಿಂತಿದ್ದಳು, ಅಗಲವಾದ ಬೆನ್ನು, ಬಲಭುಜ ಬರೆಯುವುದಕ್ಕಾಗ ಸರಿದಾಡುತ್ತಿದೆ, ತಲೆಗೂದಲು ಕೆದರಿದೆ, ಎಡಗೈಯಿಂದ ಆಗಾಗ ಕಿವಿಯನ್ನು ತುರಿಸುತ್ತಿದ್ದಾನೆ; ಮೆಲ್ಲನೆ ನಡೆದು ತಾನು ಕುರ್ಚಿಯ ಹತ್ತಿರ ಹಿಂದೆ ನಿಂತುಕೊಂಡಳು; ಬದಿಗೆ ನಿಲ್ಲಬೇಕೆಂದರೆ ಕುರ್ಚಿಗೆ ಕೈಗಳಿದ್ದಿರಲಿಲ್ಲ; ಎಷ್ಟೊತ್ತು ನಿಂತಿದ್ದಳೊ ! ಕನ್ನಡಿಯಲ್ಲಿ ತಾನು ಕಾಣುತ್ತಿದ್ದರೂ ಅವನ ಲಕ್ಷ್ಯವಿದ್ದಿರಲಿಲ್ಲ; ಒಮ್ಮೆ ಮುಖವನ್ನು ಮೇಲೆತ್ತಿ ನೋಡಿದ, ತನ್ನ ಹಣೆಯನ್ನು ಎಡಗೈಯಿಂದ ಸವರಿಕೊಂಡ, ಆಗಲೂ ತನ್ನ ಕಡೆ ಲಕ್ಷ್ಯವಿದ್ದಿರಲಿಲ್ಲ; ಎಂತಹ ಏಕಚಿತ್ತತೆ! ತಲೆಗೂದಲನ್ನು ಮೆಲ್ಲನೆ ನವರುತ್ತ ನಿಂತಳು, ಹೆದರಿದಳು ಅವನ ಧ್ಯಾನ ಭಂಗವಾಗುವುದೇನೊ ಎಂದು. ಉಹುಂ, ಹೊರಜಗತ್ತಿನ ಎಚ್ಚರವೆ ಇದ್ದಂತಿರಲಿಲ್ಲ. ತನಗೂ ತುಸು ಕೆಣಕಿದಂತಾಯಿತು. ಇದೇನು ಏಕಚಿತ್ತತೆಯೊ ಅಲಕ್ಷ್ಯವೊ ? ಈ ಪರಿ ತನ್ನನ್ನು ಅಲಕ್ಷಿಸುವುದೆ ? ಸ್ವಲ್ಪ ಹಟದಿಂದಾದರೂ ಮೆಲ್ಲನೆ ಅವನ ಎಡಬದಿಗೆ ಸರಿದಳು. ಒಂದು ನಿಮಿಷ. ಬಲಗೈ ಬರೆಯುತ್ತಲಿದೆ, ಎಡಗೈ ಮೆಲ್ಲನೆ ಸರಿದು ತನ್ನನ್ನು ಸುತ್ತಿತು. ಧ್ಯಾನ ಭಂಗವಾಯಿತೆ ? ಇಲ್ಲ – ಇಲ್ಲ – ಬರೆಯುವುದು ನಡೆದೇ ಇದೆ ! ಎಡಗೈ ತನ್ನನ್ನು ಸುತ್ತಿದೆ. ಎಷ್ಟು ಮಮತೆ ಆ ಕೈಯಲ್ಲಿ ! ಎಷ್ಟು ಮಿದುವಾಗಿತ್ತು ಆ ಸ್ಪರ್ಶ ! ಸುತ್ತಿದ ಕೈ ತನ್ನನ್ನು ಕೆಳಗೆ ಸೆಳೆದಿದೆ. ತಾನೀಗ ರಾಮಣ್ಣನ ತೊಡೆಯಮೇಲೆ ಕುಳಿತಿದ್ದಾಳೆ. ಆದರೆ ರಾಮಣ್ಣನಿಗೆ ಅದರ ಎಚ್ಚರವಿದ್ದಂತಿಲ್ಲ. ಇಷ್ಟೇಕೆ ? ತನಗೂ ಎಚ್ಚರವಿರಲಿಲ್ಲವೇನೊ ? ಕೆಲವೇ ನಿಮಿಷಗಳಲ್ಲಿ ತಾನು ಕುಳಿತಿದ್ದೆಲ್ಲಿ—ಎಂಬುದರ ಅರಿವು ತನಗಿರಲಿಲ್ಲ. ಕುಳಿತದ್ದು ಎಷ್ಟೊತ್ತು ಎಂಬುದರ ಅರಿವೂ ಇಲ್ಲ; ಒಬ್ಬರೊಬ್ಬರೊಡನೆ ಮಾತು ಇಲ್ಲ; ಕುಳಿತ ಎರಡು ದೇಹಗಳಲ್ಲಿಯ ಎರಡು ಹೃದಯಗಳು

ಒಂದಾದುವೇನೊ ಎನ್ನುವಂತೆ ನಿಶ್ಶಬ್ದರಾಗಿದ್ದಾರೆ ತಾವಿಬ್ಬರು. ಬರೆಯು-ವುದನ್ನು ನೋಡುವುದರಲ್ಲಿ ತಾನು ನಿಮಗ್ನಳಾಗಿದ್ದಾಳೆ; ತನ್ನನ್ನು ಮೈದಡವಿ ಬರೆಯುವುದರಲ್ಲಿ ರಾಮಣ್ಣ ನಿಮಗ್ನನಾಗಿದ್ದಾನೆ. ಭುಜಕ್ಕೆ ಭುಜ, ಗಲ್ಲಕ್ಕೆ ಗಲ್ಲ, ಸೊಂಟಕ್ಕೆ ಕೈ; ಎರಡು ದೇಹಗಳನ್ನು ಸೀಳಿ ಒಳಗಿನ ಎರಡು ಹೃದಯಗಳು ಕೂಡುವುವೊ ಎನ್ನುವ ಹಾಗೆ. ಮಾತಿಲ್ಲದೆ, ಕಣ್ಮುಚ್ಚಿ ತಾನು ಎಷ್ಟೊತ್ತು ಕುಳಿತಿದ್ದಳೊ!

ಆ ನಿಶ್ಶಬ್ದ ತನ್ಮಯತೆಯಿಂದ ತನಗಾದ ಆನಂದವನ್ನು ತಾನೆಂದಿಗೂ ಮರೆಯುವಂತಿಲ್ಲ, ಎಂದುಕೊಂಡಳು ಕುಮುದ.

ಮತ್ತೆ ಕಣ್ಮುಚ್ಚಿದಳು ಆ ಆನಂದವನ್ನು ನೆನೆದು ಸವಿಯುವಂತೆ.

ಕುಮುದ ಈಗ ಉತ್ಸಾಹಗೊಂಡಿದ್ದಾಳೆ. ರಾಮಣ್ಣನಿಗಾಗಿ ಒಳ್ಳೆಯ ಬಟ್ಟೆಗಳನ್ನು ತೆಗೆದಿಟ್ಟಿದ್ದಾಳೆ, ಮೋಹನನಿಗಾಗಿಯೂ ಎಲ್ಲ ಸಿದ್ಧತೆಯನ್ನು ಮಾಡಿದ್ದಾಳೆ, ತಾನು – ಉಂ – ತನ್ನದು ಸರಿಯಾಗಿದೆಯೆ? ರಾಮಣ್ಣನ ಸತ್ಕಾರದ ಸಭೆಯಲ್ಲಿ ತನಗೆ ಯಾಕೆ ಸಡಗರ–ಸಿಂಗಾರ? ರಾಮಣ್ಣ ಲೇಖಕ. ಆದರೇನು? ತಾನು ಲೇಖಕನ ಅರ್ಧಾಂಗಿ. ಅಂದು ರಾಮಣ್ಣನ ತೊಡೆಯಮೇಲೆ ಕುಳಿತಾಗ ತಾನೇ ಬರೆಯುತ್ತಿದ್ದಳೇನೊ ಎಂದೆನ್ನಿಸಿತ್ತು.

"ನಿಮ್ಮ ಏಕಾಗ್ರತೆಗೆ ಭಂಗ ಬಂದು ಎಲ್ಲಿ ಸಿಟ್ಟಿಗೆ ಬರ್‍ತೀರೊ ಅಂತ ಮಾಡಿದ್ದೆ" ಎಂದಿದ್ದಳು ಆಮೇಲೆ.

"ಯಾವ ಏಕಾಗ್ರತೆ?"

"ಬರೆಯೋದರಲ್ಲಿ?"

"ಭಲೆ! ಒಳ್ಳೆ ಪ್ರಶ್ನವನ್ನೇ ಕೇಳ್ತೀಯಲ್ಲ, ಕುಮುದ? ಬರೆಯೋವಾಗ ಸ್ಫೂರ್ತೀನೇ ಬಂದು ಬಾಗಿಲ ಬಡೆದರ ಲೇಖಕನಿಗೆ ಏಕಾಗ್ರತಾ–ಭಂಗ ಆಗ್ತದೆಯೆ?"

"ಸ್ಫೂರ್ತಿ ಬರಲಿ ಅಂತ ಹಣೆ ಸವರುತ್ತಿದ್ದರೇನೊ?"

"ಇಲ್ಲ – ಬಂದ ಸ್ಫೂರ್ತಿಯನ್ನ ದಕ್ಕಿಸಿಕೊಳೋ ತ್ರಾಣ ಬರಲಿ ಅಂತ ತಲೆಯನ್ನ ತಿಕ್ಕಿಕೊಳ್ಳುತ್ತಿದ್ದ."

"ಅದೆಂತಾ ಸ್ಫೂರ್ತೀನೊ! ನಾವಿಬ್ಬರೇ ಇದ್ದಾಗ ಇನ್ನೊಮ್ಮೆ ಬಂದಿತು ಅಂದರ—"

"ಬರೋದು ಇಷ್ಟೇ ಅಲ್ಲ, ಬಂದು ತೊಡೆಯ ಮ್ಯಾಲೇ ಕುಕ್ಕರಿ-ಸೋದು" ಎಂದು ಗಟ್ಟಿಯಾಗಿ ನಕ್ಕಿದ್ದ.

ತಾನೇ ಸ್ಫೂರ್ತಿ! ತನ್ನಿಂದ ತೊಂದರೆ ಇಲ್ಲ, ವಿರುದ್ಧವಾಗಿ ಬರೆಯಲು ಉತ್ಸಾಹ! ಎಂತಹ ಹೆಮ್ಮೆ ಎನ್ನಿಸಿತ್ತು ತನಗೆ! ರಾಮಣ್ಣನ ಲೇಖನಕ್ಕೆ ತಾನು ಅಗತ್ಯ! ಹಾಗೆಂದರೆ ತಾನು ಹೆಚ್ಚು ದಕ್ಷಳಾಗಿರಬೇಕು, ತಾಯಿ ಮಗುವನ್ನು ಪಾಲಿಸಿ–ಪೋಷಿಸುವಂತೆ ತಾನು ರಾಮಣ್ಣನ ಲೇಖನವನ್ನು ಪೋಷಿಸಬೇಕು. ಈ ವಿಚಾರಕ್ಕಾಗಿ ರಾತ್ರಿ ನಿದ್ರೆ ಬಂದಿರಲಿಲ್ಲ. ಎದ್ದು ಸುಖವಾಗಿ ಮಲಗಿದ ರಾಮಣ್ಣನನ್ನು ನೋಡಿದ್ದಳು. ನಿಜವಾಗಿ ಕೂಸು! ಆಟವನ್ನಾಡಿ ದಣಿದಿದೆ. ಎಂತಹ ಹರವಾದ ಹಣೆ! ತಟ್ಟನೆ ಅದನ್ನು ಮುದ್ದಿಸಿದ್ದಳು. ರಾಮಣ್ಣ ಕಣ್ದೆರೆದ. ಅಯ್ಯೋ—ಮೋಸ! ಮಲಗಿರಲೇ ಇಲ್ಲ! ಮುದ್ದಿಸ ಹೋದ ತನ್ನ ಮುಖವನ್ನು ಮೇಲೆತ್ತಲೇ ಇಲ್ಲ! ತಾನು ಸ್ಫೂರ್ತಿ, ತಾನು ರಾಮಣ್ಣನ ಸರಸ್ವತಿ, ಕಾಲಿದಾಸನ ಮುಖದಲ್ಲಿ ಮುಖವನ್ನು ಇಟ್ಟು ವಿದ್ಯಾವರವನ್ನು ಕೊಟ್ಟಿದ್ದಳಲ್ಲವೆ ಸರಸ್ವತಿ! ತಾನು ಸ್ಫೂರ್ತಿ, ಲೇಖಕನಾದ ರಾಮಣ್ಣನಿಂದ ತಾನು ಬೇರೆ ವ್ಯಕ್ತಿಯಲ್ಲ; ಲೇಖಕ ಅವನ ಸ್ಫೂರ್ತಿ ಎರಡೂ ಒಂದೇ; ಒಂದನ್ನೊಂದು ವಿಂಗಡಿಸಲು ಬರುವುದಿಲ್ಲ; ಅವೆರಡರ ತಾದಾತ್ಮ್ಯದಿಂದಲೇ ಹುಟ್ಟಿ ಬರುವುದು ಕಲಾಕೃತಿ.

ಮೋಹನ ಕಲಾಕೃತಿ ರೂಪುಗೊಂಡುದು ಆ ದಿನವೆ. ಅದನ್ನು ತಾನು ಹೇಗೆ ಮರೆಯುವಳು? ರಾಮಣ್ಣ ಮೋಹನನನ್ನು ಕೂಗಿದಾಗೊಮ್ಮೆ ರಾಮಣ್ಣನ ಬಾಯಿಯಿಂದ "ಮೋಹನ" ಎಂಬ ಹೆಸರು ಬಂದಾಗೊಮ್ಮೆ ಅಂದಿನ ಅನುಭವದ ಚಿತ್ರ ಕಣ್ಮುಂದೆ ನಿಲ್ಲುವುದು.

ಮೆಲ್ಲನೆ ಎದ್ದಳು ಕುಮುದ; ತಾನಿನ್ನೂ ರಾಮಣ್ಣನ ತೊಡೆಯ ಮೇಲೆಯೆ ಕುಳಿತಿರುವೆನೆಂಬ ಭ್ರಾಂತಿ–ಅವಳಿಗೆ. ಕುರ್ಚಿಯ ಮೇಲಿದ್ದ ಮೆತ್ತನ್ನ ಪೀಠವನ್ನೆತ್ತಿ, ತನ್ನ ತೊಡೆಯಮೇಲಿಟ್ಟುಕೊಂಡು ಮತ್ತೆ ಕುಳಿತಳು.

ನಾನೆಂತಹ ಸುಖಿ! ನಾನಂತಹ ದುರ್ದೈವಿ—ಎಂದುಕೊಂಡಳು.

ದುರ್ದೈವಿ ಅಲ್ಲದೆ ಮತ್ತೇನು? ಎಷ್ಟು ಏಕಾಗ್ರಚಿತ್ತದಿಂದ ಬರೆಯುತ್ತಿದ್ದನೋ ಅಷ್ಟೇ ಏಕಾಗ್ರಚಿತ್ತದಿಂದ ತನ್ನನ್ನು ಪ್ರೀತಿಸುತ್ತಿರಬಹುದಲ್ಲ?

'ಬಹುದು'—ಯಾಕೆ ? ಆ ಬಗ್ಗೆ ಸಂಶಯವೇ ಇರಕೂಡದು. ಅವನು ಬರೆದ ಪುಸ್ತಕಗಳೊಳಗಿನ ಸ್ತ್ರೀಪಾತ್ರಗಳ ಹೊರತಾಗಿ ಅವನಿಗೆ ಬೇರೆ ಸ್ತ್ರೀಯರಿಗಾಗಿ ವಿಚಾರವೆ ಇದ್ದಿರಲಿಲ್ಲ. ಆದರೂ ತಾನು ದುರ್ದೈವಿ !

ಛಿ ! ಇದೆಂತಹ ವಿಚಾರ ! ಮನಸ್ಸಿನಲ್ಲಿ ಏನೋ ಒಂದು ತರದ ಉತ್ಸಾಹವಿರುವಾಗ, ಏನೋ ಒಂದು ಅನಿರೀಕ್ಷಿತ ಘಟನೆಯಾಗಬಹು ದೆಂದೆನಿಸುವಾಗ ಹಿಂದಿನ ತಪ್ಪುಗಳ ಎಂಜಲಿನಲ್ಲಿಯೆ ಕೈಗಳನ್ನು ಮುಸುರಿ ಮಾಡಿಕೊಳ್ಳುವುದೇಕೆ ? ರಾಮಣ್ಣನ ಪ್ರೀತಿಯನ್ನು ಇಂದು ಮೊದಲ ಬಾರಿ ಕಂಡುಹಿಡಿದಂತಾಗಿದೆ. ಇಂದು ಮತ್ತೆ ತಾನು ಮದುವೆಯ ಮದುವಣಗಿತ್ತಿ ಎನ್ನಿಸುತ್ತಿದೆ ! ರಾಮಣ್ಣನ ದನಿ ಕೇಳಿ ಉತ್ಸಾಹ, ನಾಚಿಕೆ, ರೋಮಾಂಚ. ತಾನು ಮದುವಣಗಿತ್ತಿ. ಉಹುಂ....ಈ ವೇಷ ಸರಿಯಲ್ಲ, ಸಂದರ್ಭಕ್ಕೆ ತಕ್ಕಂತೆ ವೇಷ ಮಾಡಿಕೊಳ್ಳಬೇಕು. ತಾನು ಸಿಂಗರಿಸಿ ಕೊಂಡು ಸಭೆಗೆ ಹೋದರೆ ರಾಮಣ್ಣನಿಗೆ ಆನಂದ, ರಾಮಣ್ಣನಿಗೆ ಆನಂದ ವಾದರೆ ತನಗೆ ಆನಂದ, ಇಬ್ಬರೂ ಆನಂದಭರಿತರಾಗಿ ಕಣ್ತುಂಬಿ ಮಗನನ್ನು ನೋಡಬೇಕು, ನಮ್ಮಿಬ್ಬರ ದೃಷ್ಟಿಗಳು ಮೋಹನನಲ್ಲಿ ಸೇರಿಕೊಂಡು ಒಂದನ್ನೊಂದು ಚುಂಬಿಸಬೇಕು—

ಕುಮುದ ತಟ್ಟನೆ ತಡೆದಳು. ವಿಚಾರಭರದಲ್ಲಿ ತನಗಾಗಿ ಹೊಸತಾದ ಬೇರೊಂದು ಸೀರೆಯನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು ನಿಂತಿದ್ದಾಳೆ. ಒಮ್ಮೆಲೆ ಗಾಬರಿಯಾದವಳಂತೆ ಮೆಟ್ಟಿಲುಗಳ ಕಡೆ ನೋಡಿದಳು. ಈ ಸೀರೆ ಯನ್ನು ತೊಡುವಾಗಲೇ ಅಲ್ಲವೇ ರಾಮಣ್ಣ ತನ್ನನ್ನು ಪೀಡಿಸಿದ್ದು. ಅಂದು ಕೊನೆಗೆ ತಾನು ಸಿಟ್ಟಾಗಿ, "ಇಂಥಾ ಸ್ವಭಾವ ಇಟ್ಕೊಂಡು ನೀವು ಪುಸ್ತಕಾ ಬರೆದರೆ ಸಂಭಾವಿತರು ಅವನ್ನ ಓದಲಿಕ್ಕಿಲ್ಲ, ಕೈಯಿಂದ ಮುಟ್ಟಲಿಕ್ಕಿಲ್ಲ" ಎಂದಿದ್ದಳು ; ಅಳುವಷ್ಟು ಸಿಟ್ಟು ಬಂದಿತ್ತು ತನಗೆ, ರಾಮಣ್ಣ ಗಟ್ಟಿಯಾಗಿ ಹಿಡಿದೆಳೆದವನು ತನ್ನನ್ನು ಮಾತ್ರ ಬಿಟ್ಟಿರಲಿಲ್ಲ ! ಅವನು ತನ್ನನ್ನೆಳೆದದ್ದಕ್ಕೆ ಸೀರೆಯೂ ತನ್ನ ಕೈಗೆ ನಿಲುಕುವಂತಿರಲಿಲ್ಲ.

ಕುಮುದ ಮುಗುಳ್ನಗೆ ನಗುತ್ತಲೆ ಉಸುರ್ಗರೆದಳು. ಮೋಹನ ಇನ್ನೂ ಬಂದಿರಲಿಲ್ಲ ಆಗ, ಅದೊಂದು ಸುದೈವ ಆಗಿತ್ತು ಅನ್ನಬಹುದು, ಎಂದುಕೊಂಡಳು. ಮೋಹನ ಬಂದ ಮೇಲೂ ಅಷ್ಟೆ. ರಾಮಣ್ಣನ ಹುಡು

ಗಾಟಿಕೆಯು ಸ್ವಭಾವ ಕಳೆದಿರಲಿಲ್ಲ. ಆ ಇನ್ನೊಂದು ದಿನ, ತಾನು ಸೋದ ರತ್ತೆಯ ಮನೆಗೆ ಮೊದಲಸಲ ಹೋಗಿಬಂದ ದಿನ, ಮೋಹನನನ್ನು ಎತ್ತಿ ಕೊಳ್ಳೋ ನೆಪದಿಂದ ಮುಂಗತನಕ್ಕೆ ಕೈಹಾಕಿದ್ದರಲ್ಲ ? ಆದರೆ–ತಾನು ಬುದ್ಧಿಗೇಡಿ, ತಾನು ದುರ್ದೈವಿ !

ಅಯ್ಯ ! ಯಾಕೆ ಮತ್ತೆ ದುರ್ದೈವದ ವಿಚಾರ ತರತೀನಿ ? ಈ ಹೊತ್ತು ಮೋಹನ ಬಂದಕೂಡಲೆ ಇಬ್ಬರೂ ಒಂದೊಂದು ಕೈಹಿಡಿದು ಮೋಹನನನ್ನ ಸಭಾಕ್ಕ ಕರೆದುಕೊಂಡು ಹೋದರೆ ? ಬ್ಯಾಡ, ಮೋಹನನ ಬದಲು ಇವರು ನನ್ನ ಕೈಯನ್ನೆ ಹಿಡಿದರೂ ಹಿಡಿಯಬಹುದು. ಇಲ್ಲಾ, ಮೋಹನನಿಗೇ ಹೇಳ್ತೀನಿ. ಆ ಹುಡುಗ ಒಂದಿಷ್ಟು ಲಗೂ ಬಂದರ ನೆಟ್ಟ ಗಾಗ್ತದ—

ಕನ್ನಡಿಯನ್ನು ನೋಡಿಕೊಂಡಳು, ಸೀರೆ ತನಗೆ ಒಪ್ಪುವುದಲ್ಲವೆ ? ಮೋಹನ ಲಗೂ ಬಂದರೆ ನೆಟ್ಟಗಾಗತದ, ಮೋಹನನೂ ಸಭಾಕ್ಕ ಬರಲಿ ಅಂದಾರ—ಅಯ್ಯಯ್ಯ ! "ಮೋಹನ ಸಭಾಕ್ಕ ಬರಲಿ" ಅಂದರಲ್ಲ ಇದೇ ಈಗ. ಅದನ್ನ ನನಗೇ ಹೇಳಿದರು ಕಾಣ್ತದ. ನಾನು ಹುಚ್ಚೀಹಾಂಗ ನನ್ನಷ್ಟಕ್ಕೇ ವಿಚಾರಮಾಡ್ತಾ ಕೂತೀನಿ. ನಾನು ಮಾತೇ ಆಡಲಿಲ್ಲ ಅಂತ ಏನಾದ್ರೂ ತಿಳಕೊಂಡಾರು.

ಕೆಳಮೆಟ್ಟಲಿನವರೆಗೆ ನಡೆದಳು. ಎಷ್ಟೊತ್ತಾಯ್ತು, ಅವನ ಹಾದಿ ನೋಡ್ತಾ ಇದ್ದೀನಿ, ಈ ಹುಡುಗನ ಸುಳಿವೇ ಇಲ್ಲ.

"ಮೋಹನನ ಹಾದೀನೇ ನೋಡ್ತಾ ಇದ್ದೀನಿ" ಎಂದಳು ಗಟ್ಟಿಯಾಗಿ. ಆಮೇಲೆ ತಪ್ಪುಮಾಡಿದ ಹುಡುಗನಂತೆ ನಾಲಗೆಯನ್ನು ಕಚ್ಚಿಕೊಂಡು ಕುಮುದ ಮೆಟ್ಟಲಿನಿಂದ ದೂರಜಾರಿದಳು.

## ೧೬

"ಮೋಹನನೂ ಸಭೆಗೆ ಬರಲಿ" ಎನ್ನುತ್ತ ಮೇಲ್ಮೆಟ್ಟಿನ ಹತ್ತಿರ ನಿಂತಿದ್ದ ರಾಮಣ್ಣ ಕಕ್ಕಾವಿಕ್ಕಿಯಾದವನಂತೆ ಸುತ್ತಲೂ ನೋಡಿದ.

"ಮೋಹನನ ಹಾದೀನೇ ನೋಡ್ತಾ ಇದ್ದೀನಿ."

ಕುಮುದಳ ದನಿ ! ಆ ದನಿಯನ್ನೇ ಕಣ್ಣಾರೆ ಕಾಣಬೇಕೆಂಬುವವ ನಂತೆ ಕಣ್ಣರಳಿಸಿ ನೋಡಬೇಕೆಂದರೆ ಕಣ್ಗಳನ್ನು ಅರಳಿಸಿದಂತೆ ಕತ್ತಲೆ ಪಸರಿಸಿದಂತಾಯಿತು. ಮೆಟ್ಟಿಲುಗಳ ಮಗ್ಗುಲಿಗಿದ್ದ ಬದಿಗಂಬವನ್ನು ಹಿಡಿದ ಸ್ಥಿರವಾಗಿ ನಿಲ್ಲಬೇಕೆಂದು. ಒಂದುಕ್ಷಣ ಮಾತ್ರ. ಆಮೇಲೆ ವರ್ಷಾನು ವರ್ಷಗಳಿಂದ ಮುತ್ತಿಕೊಂಡ ಕಾಡಿಗೆಯ ಗೂಡಿನಂತೆ ದಟ್ಟಾದ ಕತ್ತಲೆ ಒಮ್ಮೆಲೆ ಜಾರಿದಂತಾಯಿತು ; ದೃಷ್ಟಿ ಶುಭ್ರವಾಯಿತು. ಕಾಲ–ದೇಶಗಳ ಮರ್ಯಾದೆಯನ್ನು ಮೀರಿ ನೋಡುವಷ್ಟು ತೀಕ್ಷ್ಣವಾಯಿತು. ಮೈ ಜುಮ್ಮೆಂದಿತು.

ವಿಲಕ್ಷಣ ಸೃಷ್ಟಿ ಮನುಷ್ಯನ ಅಂತರಂಗವೆಂದರೆ ! –ಎಂದುಕೊಳ್ಳುತ್ತ ಕೋಣೆಯೊಳಕ್ಕೆ ಮೆಲ್ಲನೆ ಹೆಜ್ಜೆಗಳನ್ನಿಡುತ್ತ ಅಡ್ಡಾಡತೊಡಗಿದ. ಮನುಷ್ಯನ ಜ್ಞಾನವೂ ವಿಲಕ್ಷಣವಾದುದೆ–ಎನ್ನಬಹುದು. ಯಾವುದೂ ತನ್ನ ಮಟ್ಟಿಗೆ ತಾನು ಅರ್ಥವನ್ನು ಹೊಂದುವುದಿಲ್ಲ. ಮನುಷ್ಯನಿಗೆ ಅತ್ಯಂತ ಇಷ್ಟವಾಗಿದ್ದ ಸುಖ ಎಂದರೇನು ? ಇಂತಹದೆ ಎಂದು ಹೇಳಲು ಶಕ್ಯವಿದೆಯೆ ? ಎಂದೊ ಒಮ್ಮೆ ಮುಂಚಿತ ದುಃಖ ಎಂದು ತಿಳಿದುಕೊಂಡುದರ ವಿರುದ್ಧ ಹೋಲಿಕೆ ಯಲ್ಲಿ ಸುಖ ಎಂಬುದಕ್ಕೆ ಅರ್ಥ. ಹುಂ. ನಮ್ಮ ಪ್ರತಿಯೊಂದು ಜ್ಞಾನವೂ ಹೀಗೆಯೆ. ಅದಕಾಗಿಯೆ ಮನುಷ್ಯನಲ್ಲಿ ಸ್ಮೃತಿ–ಎಂಬುದು ಒಂದು ವಿಶಿಷ್ಟ ಶಕ್ತಿಯಾಗಿದೆ. ಒಂದು ಇಂದಿನದು—ಅದ್ಯತನ ; ಒಂದು ಹಿಂದಿನದು— ಅತೀತ ; ಹಿಂದಿನದರ ಹೋಲಿಕೆಯಲ್ಲಿ ಇಂದಿನದರ ಅನುಭವವನ್ನು ಜ್ಞಾನ ಎಂದು ತಿಳಿದುಕೊಳ್ಳುತ್ತೇವೆ ! ಕುಮುದಳ ದನಿ ಕೇಳಿ ತನ್ನ ಮೈ ಜುಮ್ಮೆಂದಿತು—ಆನಂದವಾಯಿತು ; ಅದೇ ದನಿಯನ್ನು ಈ ಮುಂಚಿತ ಕೇಳಿದಾಗ—ಉದ್ವಿಗ್ನನಾಗುತ್ತಿದ್ದೆ ; ಇದಲ್ಲವೆ ಜ್ಞಾನಾನುಭವದ ವಿಲಕ್ಷಣತೆ? ಆ ದನಿ ಕೇಳಿದಾಗೊಮ್ಮೆ ಹಿಂದಿನ ಸುಖದ ದಿನಗಳನ್ನು ನೆನೆಯುತ್ತಿದ್ದೆ ; ಅವುಗಳೊಡನೆ ತೂಗಿಸಿ ನೋಡಿ ಉದ್ವಿಗ್ನನಾಗುತ್ತಿದ್ದೆ. ಆದರೆ ಈಗ ? ಇಂದು ? ಅದೇ ದನಿಯನ್ನು ಕೇಳಿ ಹಿಂದಿನ ಉದ್ವಿಗ್ನತೆಯನ್ನು ನೆನೆದು ಕೊಂಡೆ, ಇಂದಿನ ಅನುಭವವನ್ನು ತೂಗಿಸಿದ, ಆನಂದಿತನಾದೆ. ಅಹುದೆ ?

ರಾಮಣ್ಣನಿಗೆ ದಿಗಿಲು. ಕುಮುದಳ ದನಿ ಕೇಳಿದೊಡನೆ ತನ್ನ ಮೈ

ಜುಮ್ಮೆಂದಿತೇನೊ ನಿಜ. ಆದರೆ ಅದು ಆನಂದವೆ ? ಕಣ್ಣಿಗೆ ಕತ್ತಲೆ ಗಟ್ಟಿದಂತಾಯಿತಲ್ಲ ಒಂದು ಕ್ಷಣ ? ಅದು ಆನಂದದ ಲಕ್ಷಣವೆ ?

ರಾಮಣ್ಣ ದೀರ್ಘವಾಗಿ ಉಸಿರೆಳೆದು ಕುರ್ಚಿಯಲ್ಲಿ ಬಂದು ಕುಳಿತು ಕೊಂಡ. ಈ ಅಂತರಂಗದ ನೆಲೆಯನ್ನರಿಯುವುದು ಕಠಿಣ–ಎಂದುಕೊಂಡ. ಸಾಕ್ಷಾತ್ ಪರಮಾತ್ಮನಿಗೂ ಅರಿಯದ ರಹಸ್ಯ ಮಾನವಮಾತ್ರರಾದ ನಮಗೆ ವಿಶದವಾಗುವುದು ಹೇಗೆ—ಎಂದು ನಗೆಮೊಗದಿಂದ ಹೇಳಿಕೊಂಡ. ಪಾಪ ! ಪರಮಾತ್ಮನ ಅವತಾರನಾದ ಸಾಕ್ಷಾತ್ ಶ್ರೀರಾಮಚಂದ್ರನ ಅವಸ್ಥೆ ಏನಾಯಿತು ಭವಭೂತಿಯ ಉತ್ತರ ರಾಮಚರಿತ ನಾಟಕದಲ್ಲಿ ? "ನಿನ್ನ ಬಾಹು ನನ್ನ ಕಂಠದ ಆಶ್ರಯವನ್ನು ಪಡೆಯಲಿ" ಎನ್ನುತ್ತಾನೆ ರಾಮಚಂದ್ರ ಸೀತಾ ದೇವಿಗೆ. ದೇವಿ ನಾಚಿಗೆಯಿಂದ ಸುಮ್ಮನಿರುತ್ತಾಳೆ. ಆಗ ತಾನೇ ತನ್ನ ಕೈಗಳಿಂದ ಹಾಗೆ ಮಾಡುತ್ತಾನೆ ರಾಮಚಂದ್ರ. ತತ್‌ಕ್ಷಣ ಬೆರಗಾದವನಂತೆ, "ಪ್ರಿಯೇ ಕಿಮೇತತ್—ಇದೇನು ? " ಎಂದು ದಿಙ್ಮೂಢನಂತೆ ಕೇಳು ತ್ತಾನೆ. ಆಕೆಯ ಬಾಹುಸ್ಪರ್ಶದಿಂದ ತನಗಾದುದು ಏನು ? ಏನೂ ತಿಳಿಯದು—ಎಂದು ಬಾಯ್ತುಂಬ ಹೇಳುತ್ತಾನೆ :

ವಿನಿಶ್ಚೇತುಂ ಶಕ್ಯೋ ನ ಸುಖಮಿತಿ–ವಾ ದುಃಖಮಿತಿ–ವಾ
ಪ್ರಮೋಹೋ ನಿದ್ರಾ ವಾ ಕಿಮು ವಿಷವಿಸರ್ಪಃ ಕಿಮು ಮದಃ।
ತವ ಸ್ಪರ್ಶೇ ಸ್ಪರ್ಶೇ ಮಮಹಿ ಪರಿಮೂಢೇಂದ್ರಿಯಗಣೋ
ವಿಕಾರಶ್ಚೈತನ್ಯಂ ಭ್ರಮಯತಿ–ಚ ಸಂಮೀಲಯತಿ–ಚ॥

ಎಂತಹ ವಿಚಾರ ! ಅದರ ಅರ್ಥವೇನು ? ಯಾವನೊ ಬುದ್ಧಿಗೇಡಿ ಟೀಕಾಕಾರ ಅದಕ್ಕೆ ಅರ್ಥವನ್ನು ಕೊಡುತ್ತಾನೆ ಹೀಗೆ: 'ಸರ್ವಮಿದಂ ಸೀತಾಯಾ ಭೋಗ್ಯತಾಪ್ರಕರ್ಷೇ ತಾತ್ಪರ್ಯಮಾವಿಷ್ಕರೋತಿ.' ಎಂದು ! ಎಂತಹ ಅನಾಗರಿಕ ತಾತ್ಪರ್ಯವನ್ನು ಕಂಡು ಹಿಡಿದಿದ್ದಾನೆ ಟೀಕಾಕಾರ ! ಹೆಣ್ಣಿನ ಸ್ಪರ್ಶ ಮೈಮರೆಯಿಸುವುದೆಂದರೆ ಆ ಹೆಣ್ಣು ಅತಿಶಯವಾಗಿ ಭೋಗ್ಯವಂತೆ ! ಯಾವನೋ ಆಹಾರ–ನಿದ್ರಾ–ಭಯ–ಮೈಥುನಗಳ ಜೀವನ ದಲ್ಲಿ ಕೊಬ್ಬಿದ ಮಾನವಪಶು ಹಾಗೆ ತಿಳಿದುಕೊಳ್ಳಲಿ. ಆದರೆ ಭವಭೂತಿ ಹೇಳುವುದು ಅದಲ್ಲ. ಸ್ಪರ್ಶದಿಂದ ಅದ್ವೈತಾನಂದವಾಗುವುದು ಎಂದು

ಹೇಳುತ್ತಾನೆ. ಸುಖ-ದುಃಖ, ಪ್ರಮೋಹ-ನಿದ್ರಾ, ವಿಷ-ಮದ-ಈ ಯಾವ ಪ್ರಕಾರವನ್ನೂ ವಿಂಗಡಿಸಲಾರದಂತಹ ವಿಕಾರ ಹುಟ್ಟಿತು ಆ ಸ್ಪರ್ಶದಿಂದ.

ಭವಭೂತಿಯ ಮಾತು ನಿಜ. ಒಂದು ಕ್ಷಣ ಕಣ್ಣಿಗೆ ಕತ್ತಲೆಗಟ್ಟಿ ದಂತಾದಾಗ ತಾನು ಅನುಭವಿಸಿದ್ದು ಅಂತಹ ಅದ್ವೈತ ಆನಂದ. ಅಂತಹ ಅದ್ವೈತ ಆನಂದದಲ್ಲಿ ಭೋಗೀ ಯಾರು, ಭೋಗ್ಯ ಯಾವುದು ?

ತನ್ನ ಮೈ ಬಲಗೊಂಡಿತೇನೊ ಎಂದೆನ್ನಿಸಿತು ರಾಮಣ್ಣನಿಗೆ. ಕುಮು ದಳ ದನಿ, ಕುಮುದಳ ಸ್ಪರ್ಶ, ಕುಮುದಳ ನೆನಪು-ಇದರಿಂದ ಯಾವಾಗಲೂ ತನ್ನಲ್ಲಿ ವಿದ್ಯುತ್ಸಂಚಾರವಾದಂತಾಗಿ ಮೈಯಲ್ಲಿ ಕಸುವು ಹೆಚ್ಚಿದಂತಾಗುವುದು. ನಿಜವಾಗಿಯೂ ತಾನು ಭಾಗ್ಯವಂತ ; ಇಂತಹ ಪ್ರೇಮದ ಜೀವನವನ್ನು ಅನುಭವಿಸಿದ ತಾನು—

ರಾಮಣ್ಣ ತನ್ನ ವಿಚಾರಪ್ರವಾಹವನ್ನು ತಡೆದ. ಹುಂ. ಒಳ್ಳೆಯಭಾಗ್ಯ —ಎಂದುಕೊಂಡ. ಹತ್ತುವರ್ಷಗಳಿಂದ ಭೋಗಿಸಿದ ಯಾತನೆಯನ್ನು ನೆನೆದರೆ—

ಅಲ್ಲ-ಅದು ಯಾತನೆ ಅಲ್ಲವೇನೊ ? ರಾಮಣ್ಣನಿಗೆ ಒಂದು ವಿಚಾರ ಬಂದಿತು. ಮನುಷ್ಯ ಸುಖಿಯಾಗಬೇಕಾದರೆ ಅವನ ಕಷ್ಟಗಳು ಮಾಯವಾಗ ಬೇಕು ಎಂದು ಹಟ ಹಿಡಿದರೆ ಮನುಷ್ಯನು ಎಂದಿಗೂ ಸುಖಿಯಾಗಲಾರ ಎಂದೆನ್ನಿಸಿತು ಅವನಿಗೆ. ಬಾಡಿಗೆಯ ಮನೆ ಸೋರಿದರೆ ಯಾರ ಹೊಣೆ ? ಅದನ್ನು ತಪ್ಪಿಸುವುದು ಬಾಡಿಗೆದಾರನ ಕೈಯಲ್ಲಿದೆಯೆ ? ಜೀವನದಲ್ಲಿ ನಮ್ಮನ್ನು ಮೀರಿದ ಅನೇಕ ಶಕ್ತಿಗಳಿವೆ, ಅನೇಕ ಸಂದರ್ಭಗಳಿವೆ ; ಅವು ಗಳಿಂದ ಒದವಿಸಬಹುದಾದ ಕಷ್ಟಗಳ ಇದಿರಿನಲ್ಲಿ ನಾವು ಎಷ್ಟು ನರಳಿದರೇನು? ಎಲ್ಲ ಶಕ್ತಿಗಳನ್ನು ಗೆದ್ದರೂ ಸಾವನ್ನು ಗೆಲ್ಲಲಾರ ಮಾನವ, ಒಂದು ವೇಳೆ ಸಾವನ್ನು ಗೆದ್ದರೆ ಜೀವನಕ್ಕೆ ಹೇಸಬಹುದು ಮಾನವ. ಕಷ್ಟಗಳು ಮಾಯ ವಾಗಲಿ ಎಂದು ಬಯಸುವುದು ತಪ್ಪು, ಅಜ್ಞಾನ. ಕಷ್ಟಗಳನ್ನು ಅನುಭವ ಎಂದು ತಿಳಿದರೆ, ಅದೊಂದು ಅಗತ್ಯವಾದ ಶಿಕ್ಷಣಕ್ರಮ ಎಂದು ತಿಳಿದರೆ— ತಿಳಿದರೆ—ಕಷ್ಟದ ಕಷ್ಟತ್ವ ಮಾಯವಾಯಿತೆನ್ನಬಹುದು. ರಾಮಣ್ಣನಿಗೆ ನಗೆ ತಡೆಯದಾಯಿತು. "ಕಷ್ಟದ ಕಷ್ಟತ್ವ." ಆ ವಿಚಾರವನ್ನು ಬೇರೆ ಹೇಗೆ ಹೇಳಬೇಕೊ ?.... ಹೋಗಲಿ, ನನ್ನ ಮನಸ್ಸಿನಲ್ಲಿದ್ದುದು ನನಗಾದರೂ

ತಿಳಿದಿದೆಯಲ್ಲ—ಎಂದು ಸಮಾಧಾನವನ್ನು ತಂದುಕೊಂಡ.....ಸಮಾಧಾನ ತಂದುಕೊಳ್ಳುವುದು ಬಲು ಸುಲಭ ಎಂದ ಮತ್ತೊಂದು ವಿಚಾರ ಹೊಳೆ ದದ್ದಕ್ಕೆ. ದುಷ್ಯಂತ–ಶಕುಂತಲೆ, ಯಕ್ಷ–ಯಕ್ಷನ ಹೆಂಡತಿ, ರಾಮ–ಸೀತಾ ಇಂತಹರ ಪರಸ್ಪರ ಪ್ರೇಮವನ್ನು ಅವರ ವಿರಹದಿಂದಲೆ ತೋರಿಸಿಕೊಟ್ಟಿ ದ್ದಾರೆ ಕವಿಗಳು.

ಯಕ್ಷ ತನ್ನ ಹೆಂಡತಿಯನ್ನು ಪ್ರೀತಿಸುತ್ತಿದ್ದ, ಒಂದು ವರ್ಷದ ವಿರಹ ವನ್ನು ಭೋಗಿಸಿದ.

ದುಷ್ಯಂತ ಶಕುಂತಲೆಯನ್ನು ಪ್ರೀತಿಸುತ್ತಿದ್ದ, 8–10 ವರ್ಷಗಳ ವರೆಗೆ ಆಕೆಯಿಂದ ದೂರವಾಗಿದ್ದ.

ರಾಮ–ಸೀತೆಯರ ಪ್ರೇಮ ಅನುಪಮ, ಮಕ್ಕಳಾಗುವ ಸಂದರ್ಭದಿಂದ ಕೊನೆಯವರೆಗೂ ವಿಯೋಗದಲ್ಲಿದ್ದರು.

ತಾನು ಹತ್ತುವರ್ಷ ಕುಮುದಳಿಂದ ದೂರವಾಗಿದ್ದಾನೆ.

ಆದ್ದರಿಂದ ತಾನೂ ಕುಮುದಳನ್ನು ಪ್ರೀತಿಸುತ್ತಾನೆ !

ಭಲೆ ! ಸಿದ್ಧಾಂತ ಸರಿಯಾಗಿದೆಯಲ್ಲವೆ ?

ಸಿದ್ಧಾಂತ ಸರಿಯಾಗಿದೆ, ತರ್ಕಬದ್ಧವಾಗಿದೆ ; ಕುಮುದಳು ಒಪ್ಪುವು ದೊಂದೇ ಬಾಕಿ !

ಇಲ್ಲ–ಆ ಬಾಕಿ ತೀರಿತು–ಕುಮುದಳು ಒಪ್ಪಿದಂತೆಯೆ–"ಮೋಹನನೂ ಸಭೆಗೆ ಬರಲಿ" ಎಂದು ನಾನು ಹೇಳಿದ ಕೂಡಲೆ "ಮೋಹನನ ಹಾದೀನೇ ನೋಡ್ತೀನಿ" ಎಂದಳಲ್ಲ ?

ಛೆ ! ಎಂತಹ ಹುಚ್ಚು! ಒಂದು ಸಾಮಾನ್ಯ ಮಾತಿಗೆ ತಾನು ಎಷ್ಟೊಂದು ಅರ್ಥವನ್ನು ಕಲ್ಪಿಸುತ್ತಿದ್ದಾನೆ ! ಎಂದರೆ ? ಅರ್ಥ ಶಬ್ದಗಳಿ ಗಿದೆಯೊ ? ತನ್ನ ಕಲ್ಪನೆಯಲ್ಲಿದೆಯೊ ?

"ಮೋಹನನ ಹಾದೀನೇ ನೋಡ್ತೀನಿ" ಎಂಬುದರ ಅರ್ಥ, "ನಾನೂ ತಯ್ಯಾರ ಇದ್ದೀನಿ" ಎಂದಲ್ಲವೆ ?....ತನಗೇ ಆಶ್ಚರ್ಯವಾಯಿತು ತಾನು ನುಡಿದದ್ದಕ್ಕಾಗಿ. ನಿಜ, ಯಾವ ಶಬ್ದಗಳಿಗೆ ಯಾವ ಅರ್ಥವನ್ನು ಕಲ್ಪಿಸು ತ್ತಿದ್ದೇನೆ ನಾನು–ಎಂದುಕೊಂಡ. ಮೋಹನನ ಹಾದೀನೇ ನೋಡ್ತೀನಿ

ಎನ್ನುವ ಶಬ್ದಗಳೆಲ್ಲಿ ? ನಾನು ತಯ್ಯಾರ ಇದ್ದೀನಿ–ಎನ್ನುವ ಅರ್ಥವೆಲ್ಲಿ ? ತನಗೆ ಆ ಕಲ್ಪನೆ ಆದರೂ ಹೇಗೆ ಬಂದಿತು ?

ಆದರೂ ತಾನು ಕಲ್ಪಿಸಿದ ಅರ್ಥವೇ ನಿಜ ಎಂದು ರಾಮಣ್ಣ ದೃಢ ವಾಗಿ ನಂಬಿದ. ಯಾಕೆ ? ಆಧಾರವೇನು ? ಕಾರಣಗಳೇನು ?

ಅದೊಂದೂ ನನಗೆ ಗೊತ್ತಿಲ್ಲ, ಆಧಾರವಿಲ್ಲ, ಕಾರಣ–ಕಾರಣವೇ ಬೇಕಿದ್ದರೆ ಹೃದಯದ ಭಾಷೆಯ ಅರ್ಥವನ್ನು ಹೃದಯವೆ ಬಲ್ಲದು, ಬುದ್ಧಿ ಯಲ್ಲ; ವ್ಯಾಕರಣ ನಿಯಮಗಳಲ್ಲ—ಎಂದು ಪ್ರತಿವಾದಿಯನ್ನು ಎದುರಿಸಿದವ ನಂತೆ ಹಟದಿಂದಲೆ ಹೇಳಿಕೊಂಡ.

ತಾನು ತಯ್ಯಾರಾಗಿದ್ದುದನ್ನು ಕುಮುದಳು ತನಗೆ ತಿಳಿಸಿದಳು ಎಂಬ ಆನಂದದ ಭರದಲ್ಲಿ ರಾಮಣ್ಣನಿಗೆ ಏನು ಮಾಡಬೇಕು, ಏನು ಮಾತನಾಡ ಬೇಕು ಎಂಬುದು ತಿಳಿಯದಂತಾಯ್ತು. ನಾನು ಯಾವಾಗಿನಿಂದಲೊ ತಯ್ಯಾರ ಇದ್ದೀನಿ ಅಂತ ಹೇಳಲಿಯಾ ? ಹೇಳು, ಹೇಳು, ಹುಚ್ಚಾ, ಏನನ್ನಾದರೂ ಹೇಳು ; ಇಷ್ಟು ಆತ್ಮೀಯತೆಯಿಂದ ನಿನ್ನೊಡನೆ ಮಾತ ನಾಡಲು ಇಷ್ಟು ವರ್ಷಗಳ ಮೇಲೆ ಮೊದಲ ಸಲ, ತಾನಾಗಿಯೆ ಸಿದ್ಧಳಾ ಗಿದ್ದಾಳೆ, ಏನಾದರೊಂದನ್ನು ಸಮರ್ಪಕವಾಗಿ ಬೊಗಳು—ಎಂದು ತನ್ನನ್ನು ತಾನೇ ರೇಗಿಸಿಕೊಂಡ. ಹಿಂಜರಿಯುವ ತನ್ನನ್ನು ತಾನೇ ಮುಂದೆ ನೂಕು ತ್ತಿರುವನೊ ಎಂಬಂತೆ ಮೆಟ್ಟಿಲುಗಳ ಹತ್ತಿರ ನಡೆದ.

"ಸ್ವಾಗತಸಮಿತಿಯವರೂ ಬರೋ ಹೊತ್ತಾಯ್ತು" ಎಂದ.

ತಟ್ಟನೆ ಕಿಟಕಿಯ ಕಡೆ ನಡೆದ. ಕಿಟಕಿಯ ಹತ್ತಿರ ನಿಂತುಕೊಂಡು. ಮೆಟ್ಟಿಲುಗಳನ್ನೆನೋಡುತ್ತ "ಸ್ವಾಗತಸಮಿತಿಯವರೂ ಬರೋಹೊತ್ತಾಯ್ತು" ಎಂದ ಎರಡನೆಯಸಲ.

## ೧೭

ಕುಮುದಳು ಕಕ್ಕಾವಿಕ್ಕಿಯಾದಳು. "ಸ್ವಾಗತಸಮಿತಿಯವರೂ ಬರೋ ಹೊತ್ತಾಯ್ತು" ಎಂದಿದ್ದನಲ್ಲ ರಾಮಣ್ಣ. ಆ ಮಾತಿನ ಅರ್ಥ ಅವಳಿ ಗಾಯಿತು. "ಸ್ವಾಗತಸಮಿತಿಯವರೂ ಬರೋ ಹೊತ್ತಾಯ್ತು" ಎಂದರೆ.

"ನಾ ತಯಾರಾಗಿದ್ದೇನೆ. ನೀ ತಯಾರಾಗಿದ್ದೀಯಾ ?" ಎಂದು ರಾಮಣ್ಣ ತನಗೆ ಕೇಳಿದ್ದ.

ಕುಮುದಳಿಗೆ ನಗೆ ಬಂದಿತು.

ರಾಮಣ್ಣ ತಯಾರಾಗಿದ್ದಾನೆ ! ತನಗೆ ಗೊತ್ತಿಲ್ಲವೆ ರಾಮಣ್ಣನ ತಯ್ಯಾರಿ ? ಕೋಟು ಹಾಕದ್ದನ್ನು ಮರೆತು ಟೊಪ್ಪಿಗೆಯನ್ನು ಹಾಕಿ ಕೊಳ್ಳುವ ಸ್ವಭಾವ ರಾಮಣ್ಣನದು. ಕುಮುದಳಿಗೆ ಹೆದರಿಕೆಯಾಯಿತು. ನಗೆ ತಡೆಯದೆ ಹೋದರೆ ರಾಮಣ್ಣನಿಗೆ ಕೇಳಿಸಬಹುದಲ್ಲ ? ಆದರೂ ನಗೆ ತಡೆಯದು ಆಕೆಗೆ. ಒಂದು ದಿನ ಯಾವುದೊ ಮಾತಿಗಾಗಿ ಕನಲಿ ಹೊರ ಹೊಂಟಾಗ ಬರಿಮೈಲೆ ಇದ್ದುದನ್ನೆ ಮರೆತು ತಲೆಗೆ ಕೋಟನ್ನು ಸುತ್ತಿ ಕೊಳ್ಳುತ್ತ ಹೊರ ಹೊರಟಿದ್ದಿತು ಸ್ವಾರಿ ! ಆಯಿತು, ರಾಮಣ್ಣ ತಯಾ ರಾಗಿದ್ದಾನೆ ಎಂದರೆ ಯಾರಾದರೊಬ್ಬರು ಸರಿಯಾಗಿ ಎಲ್ಲ ನೋಡಿಕೊಳ್ಳ ಬೇಕು. ಈ ದಿನವಂತೂ ಮಹತ್ವದ ಸಭೆ ! ಛೆ ! ರಾಮಣ್ಣನಿಗಾಗಿ ತಾನು ತೆಗೆದಿಟ್ಟ ಬಟ್ಟೆಗಳೆ ಯೋಗ್ಯ. ಈಗ ಯಾವನ್ನು ತೊಟ್ಟುಕೊಂಡಿರುವರೊ ಏನೊ ? ತನ್ನದು ಅಂತಹ ತಯ್ಯಾರಿ, ಮೇಲೆ ಮಿಕ್ಕವರಿಗೆ ಅವಸರ ! ತಾನು ತಯ್ಯಾರಾಗಿದ್ದಾಳೊ ಇಲ್ಲೊ ಎಂಬ ಅನುಮಾನ !

ಕುಮುದ ಕನ್ನಡಿಯ ಎದುರು ನಿಂತು ನೋಡಿದಳು. ತಾನು ತಯ್ಯಾ ರಾಗಿದ್ದಾಳೆ. ಸಾರ್ವಜನಿಕರ ಸತ್ಕಾರಕ್ಕೆ ಯೋಗ್ಯನಾದ ರಾಮಣ್ಣನ ಹೆಂಡತಿಗೆ ತಕ್ಕಂತೆ ತಾನು ತಯ್ಯಾರಾಗಿದ್ದಾಳೆ !

"ಸ್ವಾಗತಸಮಿತಿಯವರೂ ಬರೋ ಹೊತ್ತಾಯ್ತು"

ಎರಡನೆಯ ಸಲ ರಾಮಣ್ಣನ ಮಾತು ಕೇಳಿಸಿತು. ಅದೊ ! ನಾನು ಹೇಳಲಿಲ್ಲವೆ ಮಿಕ್ಕವರಿಗಾಗಿ ಅವಸರ ಎಂದು ? ಆದರೂ—ತಾನು ಸಿದ್ಧ ಳಾಗುವ ಬಗ್ಗೆ ಮರೆತಿಲ್ಲ ರಾಮಣ್ಣ ; ಅದೊಂದು ಸುದೈವ ಎನ್ನಬೇಕು ! ಎಲ್ಲ ಗಂಡಸರೂ ಒಂದೇ. ಹೊರಗೆ ಹೊರಡುವುದೆಂದರೆ ಹೊರಡುವುದು ! ತುಸು ಓರಣದಿಂದ ಹೊರಬೀಳಬೇಕು, ಎಲ್ಲಿ ಹೋಗಬೇಕಾಗಿದೆ ಎಂಬು ದನ್ನು ತಿಳಿದು ಅದಕ್ಕೆ ತಕ್ಕಂತೆ ವೇಷ-ಭೂಷಣ ಮಾಡಿ—ಹಗಲೆಲ್ಲ ಅಡುಗೆ —ಬಚ್ಚಲುಮನೆಗಳಲ್ಲಿ ದುಡಿಯುವ ಹೆಂಗಸಿಗೆ ಗೊತ್ತು ಹೊರಗೆ ಹೋಗು ವಾಗ ವೇಷವನ್ನು ಸಜ್ಜುಗೊಳಿಸುವ ಸೊಗಸು.

ಕುಮುದ ಮತ್ತೆ ಕನ್ನಡಿಯಲ್ಲಿ ನೋಡಿಕೊಂಡಳು. ಯಾಕೆ ಅವಸರವೋ ? ನಾನಂತೂ ತಯ್ಯಾರಾಗಿದ್ದೇನೆ. ಆದರೆ—? ಕುಮುದಳು ದಿಗಿಲುಗೊಂಡಳು. ರಾಮಣ್ಣನಿಗಾಗಿ ತಾನು ಸರಿಯಾದ ಬಟ್ಟೆಗಳನ್ನು ತೆಗೆದಿಟ್ಟಿದ್ದಾಳೆ. ಸಭೆಗೆ ಕರೆಬರುವುದರೊಳಗಾಗಿ ರಾಮಣ್ಣ ಬಟ್ಟೆಯನ್ನು ಬದಲಾಯಿಸಬೇಕು. ನಾನೇ ಹೋಗಿ ಕೊಟ್ಟರೆ ? ಕುಮುದಳು ನಡುಗಿದಳು. ತಾನು ಹೋಗುವುದೆ ? ಅದರಲ್ಲೂ 'ಆ' ಹೊಸ ಸೀರೆಯನ್ನುಟ್ಟು ? ಅವಳಿಗೆ ಹೆದರಿಕೆಯಾಯಿತು. ಆದರೆ-ರಾಮಣ್ಣ ಬಟ್ಟೆ ಬದಲಾಯಿಸಲೇಬೇಕು. ಇಲ್ಲವಾದರೆ ಜನ ತನಗೇನೆಂದಾರು ? ಮನೆಯಲ್ಲಿ ಇಬ್ಬರು ಗಂಡಸರೆಂದರೆ ಇಬ್ಬರು ಹುಡುಗರಿದ್ದಂತೆಯೆ-ಎಂದು ಕೊಂಡಳು ಕುಮುದ. ಇತ್ತ ಮೋಹನನು ತೊಡುವ ಬಟ್ಟೆಗಳ ಕಾಳಜಿಯೂ ತನಗೆಯೆ, ಇತ್ತ ರಾಮಣ್ಣನು ತೊಡುವ ಬಟ್ಟೆಗಳ ಕಾಳಜಿಯೂ ತನಗೆಯೆ. ಇಬ್ಬರದನ್ನೂ ತೆಗೆದಿಟ್ಟು ಸಜ್ಜುಮಾಡಿದ್ದಾಳೆ.

"ಆಯ್ತು, ಮೋಹನನ ಬಟ್ಟೆ ತಗದಿಟ್ಟೇನಿ" ಎಂದಳು ಕನ್ನಡಿಯಿಂದ ಮುಖ ತಿರುಗಿಸಿ. ನಾಚುತ್ತ ನಾಚುತ್ತ ಮೆಲ್ಲನೆ ಕೆಳಗಿನ ಮೆಟ್ಟಲಿನ ಹತ್ತಿರ ಬಂದು,

"ಆಯ್ತು, ಮೋಹನನ ಬಟ್ಟೆ ತಗದಿಟ್ಟೇನಿ" ಎಂದಳು ಮತ್ತೊಮ್ಮೆ.

## ೧೮

ಕಿಟಕಿಯ ಹತ್ತಿರ ನಿಂತ ರಾಮಣ್ಣ ಹಿಗ್ಗಿನಿಂದ ಮುಖವನ್ನರಳಿಸಿ ಕಿಟಕಿಯಿಂದ ಮುಖವನ್ನು ತಿರುಗಿಸಿದ.

"ಆಯ್ತು, ಮೋಹನನ ಬಟ್ಟೆ ತೆಗೆದಿಟ್ಟೇನಿ"—ಕುಮುದಳ ದನಿ.

ನಗೆಯಿಂದ ಮುಖ ಇನ್ನಿಷ್ಟು ಅಗಲವಾಯಿತು.

ಹೆಂಗಸರ ಸ್ವಭಾವ ! ಮನೆಗೆ ಬೆಂಕಿ ಹತ್ತಿದಾಗ ಮನೆಯಿಂದ ಹೊರಬೀಳಬೇಕಾದರೂ ಕನ್ನಡಿ ಎದುರು ನಿಂತು ಕೂದಲು ಸಾವರಿಸಿಕೊಳ್ಳುವ ಸ್ವಭಾವ !

ನನ್ನ ಬಟ್ಟೆ ಸರಿಯಾಗಿಲ್ಲ ಎನ್ನುತ್ತಾಳಲ್ಲ ! ರಾಮಣ್ಣನಿಗೆ ಹಿಗ್ಗಿನಿಂದ

ವ್ವೈ ಉಬ್ಬಿದಂತಾಯಿತು. ಇಂದು ತಾನು ಸರಿಯಾಗಿ ವೇಷವನ್ನು ಮಾಡಿ ಕೊಳ್ಳಲೇಬೇಕೆಂಬ ಹಟ ಅವಳಿಗೆ. ಪಾಪ ! ಅಂತಹ ಆಸೆ ಯಾಕಿರ ಬಾರದು ? ತನಗಾಗಿ ಇಷ್ಟೊಂದು ಅಭಿಮಾನವನ್ನು ವಹಿಸುವ ಬೇರೆ ಯಾರು ಇದ್ದಾರೆ ?

"ಮೋಹನನ ಬಟ್ಟೆ ತಗದಿಟ್ಟೇನಿ"

ಎರಡನೆಯ ಸಲ ಕುಮುದಳ ಮಾತನ್ನು ಕೇಳಿ ರಾಮಣ್ಣಾ ಮೆಟ್ಟಲಿಗೆ ಬಂದ ; ಅಲ್ಲ, ಆ ಮಾತು ಹಗ್ಗದಂತೆ ಅವನನ್ನು ಎಳೆದು ತಂದಿತು. ಅಷ್ಟು ವೇಗದಿಂದ ಮೆಟ್ಟಲಿಗೆ ಬಂದ. ಓಹೊ ! ನಾನು ಕೆಳಗೆ ಬರ ಬೇಕೆಂದು ಇವಳ ಅಪೇಕ್ಷೆ ! ನನಗಾಗಿ ಬಟ್ಟೆಗಳನ್ನು ತೆಗೆದೇ ಇಟ್ಟಿದ್ದಾಳೆ ! ತನಗೆ ಮೇಲೆ ಬರಲು ನಾಚಿಕೆ. ಯಾಕೆ? ಹುಂ....ಇಂದು ಆಕೆಯ ಸಿಂಗಾರ ಸೊಗಸಾಗಿರಬೇಕು. ಅದಕ್ಕಾಗಿಯೆ ಮೇಲೆ ಬರಲು ನಾಚಿಕೆ. ಅದನ್ನು ನೋಡಲು ತಾನೇ ಕೆಳಗೆ ಹೋಗಬೇಕು. ತಾನೂ ಅದಕ್ಕೆ ತಕ್ಕಂತೆ ಸಜ್ಜಾಗಬೇಕು. ರಾಮಣ್ಣಾ ಉಸಿರೆಳೆದ ನಾಟಕೀಯವಾಗಿ. "ಯತ್ರ ನಾರ್ಯಸ್ತು ಹೇಳಂತೇ ಸುಂ ಅಂತೇ ತತ್ರ ಮಾನುಷಾಃ" ಹೆಂಗಸರು ಹೇಳುವಾಗ ಗಂಡಸು ಸುಮ್ಮನಾಗಿರಬೇಕು.

ಎಂತಹ ಹುಚ್ಚ ತಾನು ! ತಾನು ಕೆಳಗೆ ಬರಬೇಕು ಎಂದು ಕುಮುದ ತನ್ನ ಬಾಯಿಯಿಂದಲೇ ಹೇಳುವಾಗ ತಾನು ಏನನ್ನೊ ಬಡಬಡಿಸುತ್ತ ನಿಂತಿರುವನಲ್ಲ !

ರಾಮಣ್ಣಾ ಕೈಗಡಿಯಾರವನ್ನು ನೋಡಿಕೊಂಡ. ಅಯ್ದೇ ನಿಮಿಷ ಗಳುಳಿದಿವೆ ಗೊತ್ತಾದ ಸಮಯಕ್ಕೆ.

" ಎಲ ! ಅಯ್ದೇ ನಿಮಿಷ ಉಳಿದುವಲ್ಲ ? " ಎಂದ ಗಟ್ಟಿಯಾಗಿ. ಕಿಟಿಕಿಯಿಂದ ಹೊರಗೆ ನೋಡಿದ.

## ೧೯

" ಅಯ್ದೇ ನಿಮಿಷ ಉಳಿದುವಲ್ಲ ? "

ರಾಮಣ್ಣನ ಮಾತನ್ನು ಕೇಳಿ ಕುಮುದ ತನ್ನ ಕೈಗಡಿಯಾರವನ್ನು ನೋಡಿಕೊಂಡಳು.

ಹೌದು. ಮೋಹನ ಬರಲೇ ಇಲ್ಲವಲ್ಲ ? ಅಯ್ದೇ ನಿಮಿಷ ಉಳಿದುವು ಇನ್ನೂ ಮೋಹನ ಬರಲಿಲ್ಲ, ಯಾಕೆ ? —ಎಂದು ರಾಮಣ್ಣ ತನಗೆಯೆ ಕೇಳಿದ ಎಂಬುದು ಕುಮುದಳಿಗೆ ಸ್ಪಷ್ಟವಾಯಿತು. ಅವಸರವಸರದಿಂದ ಸುತ್ತಲೊಮ್ಮೆ ನೋಡಿ ಬಾಗಿಲ ಕಡೆ ಹೊರಟಳು. ಬಾಗಿಲಿಗೆ ಸಮೀಪಿಸಿ ದಾಗ ಎಡಗಡೆ ಮೆಟ್ಟಿಲನ್ನು ನೋಡಿದಳು. ಮೆಟ್ಟಿಲಿನಿಂದ ತುಸು ಅಂತರ ದಲ್ಲಿ ಕಿಟಿಕಿಯಿಂದ ಹೊರನೋಡುತ್ತಿರುವ ರಾಮಣ್ಣನ ಬೆನ್ನು ಕಾಣಿಸಿತು. ಬರೆಯುವವರಿಗೆ ಬೆನ್ನಿಗೂ ಕಣ್ಣುಗಳಿರುವುದಿಲ್ಲ ಎಂಬುದು ಸುದೈವ ಎನ್ನುತ್ತ ಮೆಲ್ಲನೆ ಹೆಜ್ಜೆಯನ್ನು ಮುಂದಿಟ್ಟಳು, ರಾಮಣ್ಣನನ್ನು ನೋಡುತ್ತಲೆ. ಅಷ್ಟರಲ್ಲಿ ರಾಮಣ್ಣನೂ ಮುಖ ತಿರುಗಿಸಿ "ಮೋಹನ ಬಂದ" ಎಂದ. ಮೋಹನನನ್ನು ನೋಡಿದ ರಾಮಣ್ಣನ ಕಣ್ಣುಗಳಲ್ಲಿ ತಾನೂ ಮೋಹನನನ್ನು ನೋಡಬಯಸುವಳೇನೊ ಎನ್ನುವಂತೆ ದಿಟ್ಟಿಸಿ ರಾಮಣ್ಣನನ್ನು ನೋಡುತ್ತ ನಿಂತಳು. ಹಿಗ್ಗಿನಿಂದ ಅರಳಿದ ಅವನ ಮುಖವನ್ನು ನೋಡಿ ತಾನೂ ಮುಗುಳ್ನಗೆಯನ್ನು ಬೀರಿದಳು. ರಾಮಣ್ಣ ಸರಸರನೆ ಕೆಳಗಿಳಿಯುತ್ತಾನೆ, ಅವನನ್ನು ನೋಡುತ್ತಲೆ ತಾನೂ ಬಲಗೈಯಿಂದ ಬಾಗಿಲನ್ನು ತೆರೆಯಲು ಯತ್ನಿಸಿದಳು. ಚಿಲಕ ಸಿಕ್ಕಲೊಲ್ಲದು.

## ೨೦

ಹೊರಗೆ ಅವಸರದಿಂದ ಬರುವ ಮೋಟಾರ ಕಾರಿನ ಸದ್ದು.

"ಮೋಹನ ಬಂದ" ಎಂದ ರಾಮಣ್ಣ.

"ಕರೀಲಿಕ್ಕೊ ಬಂದರು ಕಾಣ್ತದ" ಎಂದಳು ಕುಮುದ.

ಮೋಟಾರದ ಸದ್ದು ಹತ್ತಿರ ಬಂದಿತು, ಹಾರ್ನ್ ಕೇಳಿಸಿತು, ಯಾರೊ ಕೂಗಿದರು, ಒಮ್ಮೆಲೆ ಬ್ರೇಕ್‌ಹಾಕಿದ ಸದ್ದಿಗಾಗಿ ಪ್ರ್ಯಗೂದಲು ಸೆಟೆ ದಂತಾಯಿತು, ಕಾರು ನಿಂತಿತು, ಕುಮುದ ಬಾಗಿಲನ್ನು ತೆರೆದಳು.

ಎದುರಿಗೆ ಜನ ನೆರೆದಿದ್ದಾರೆ. ಸದ್ದೆಲ್ಲ ಶಾಂತವಾಗಿದೆ. ಒಮ್ಮೆಲೆ ಜನ ಬದಿಗೆ ಸರಿಯಿತು. ಯಾರೊ ಒಬ್ಬನು ಎರಡೂ ಕೈಗಳಲ್ಲಿ ಏನನ್ನೊ ಕೊಂಡು ಬರುತ್ತಿದ್ದಾನೆ.